ಶ್ರೀಃ

ಶ್ರೀಸುಮಧ್ವವಿಜಯಮಹಾಕಾವ್ಯಂ

ಶ್ರೀನಾರಾಯಣಪಂಡಿತಾಚಾರ್ಯವಿರಚಿತಂ

ಭಾಗ—೪

೧೩ ರಿಂದ ೧೬ನೆಯ ಸರ್ಗದ ವರೆಗಿನ ೪ ಸರ್ಗಗಳು

(ಗ್ರಂಥಪೂರ್ತಿ)

ಅನುವಾದಕ ಮತ್ತು ಪ್ರಕಾಶಕ :

ಆಚಾರ್ಯ ಸಾಣೂರು ಭೀಮಭಟ್ಟರು

ನಿವೃತ್ತತರ್ಕಶಾಸ್ತ್ರಪ್ರಾಧ್ಯಾಪಕರು

ಸರ್ಕಾರದ ಸಂಸ್ಕೃತಮಹಾಪಾಠಶಾಲಾ

ಬೆಂಗಳೂರು—೫೬೦ ೦೧೮.

1991 ಬೆಲೆ : 38/-ರೂ.ಗಳು

ಅನುವಾದಕ-ಪ್ರಕಾಶಕ :

ಆಚಾರ್ಯ ಸಾಣೂರು ಭೀಮಭಟ್ಟ

ನಂ. ೨೨/೪, 'ಈಶಾವಾಸ್ಯಂ'

೬ನೇ ಅಡ್ಡರಸ್ತೆ, ಅಪ್ಪೂರಾವ್ ರಸ್ತೆ

ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮.

ಪ್ರಥಮ ಮುದ್ರಣ ೧೯೯೧

ಸರ್ವಾಧಿಕಾರಗಳೂ ಸುರಕ್ಷಿತ

೧೦೦೦ ಪ್ರತಿಗಳು

ಬೆಲೆ : ೩೮ ರೂಪಾಯಿಗಳು

ಮುದ್ರಕರು :

ವಿಜಯ ಮುದ್ರಣಾಲಯ

ಮಾರುತಿನಗರ, ಯಲಹಂಕ

ಬೆಂಗಳೂರು-೫೬೦ ೦೬೪.

Rarest Archiver

ಅನುವಾದಕನ ಮನವಿ

ಶ್ರೀಹರಿಯ ಆಜ್ಞೆಯಿಂದ ಮಧ್ವರೂಪದಿಂದ ಅವತರಿಸಿದ ಶ್ರೀಮುಖ್ಯ ಪ್ರಾಣದೇವರು ಎಲ್ಲ ಚೇತನಾಚೇತನಪ್ರಪಂಚಕ್ಕೆ ಶ್ವಾಸೋಚ್ಛ್ವಾಸಾದಿ ಪ್ರವೃತ್ತಿಯನ್ನು ನಡೆಸುವ ಮಹಾಮಹಿಮರು. ಇವರು ನಮ್ಮ ಕಣ್ಣಿಗೆ ಕಾಣುವ ಈ ಜಗತ್ತಿಗಷ್ಟೇ ಗುರುಗಳಲ್ಲ, ಮೂರುಲೋಕಕ್ಕೂ ಗುರುಗಳು. ಆದುದರಿಂದಲೇ ಅವರ ಅತ್ಯಂತಪ್ರೇಷ್ಠ ಶಿಷ್ಯರಾದ ಶ್ರೀಮತ್ತ್ರಿವಿಕ್ರಮ ಪಂಡಿತಾಚಾರ್ಯರು ಇವರನ್ನು **ತ್ರೈಲೋಕ್ಯಾಚಾರ್ಯ**ರೆಂದೇ ಹೇಳಿರುತ್ತಾರೆ. ಇವರ ಅವತಾರದಿಂದಾರಂಭಿಸಿ ಕಣ್ಮರೆಯಾಗುವವರೆಗಿನ ದಿವ್ಯಚರಿತ್ರೆಯನ್ನು ಯಥಾವತ್ತಾಗಿ ನಿರೂಪಿಸುವ ಈ **ಸುಮಧ್ವವಿಜಯಮಹಾಕಾವ್ಯ**ವು ಸಂಪೂರ್ಣವಾಗಿ ವಿಶ್ವಾಸಾರ್ಹವಾದ ಘಟನೆಗಳಿಂದ ತುಂಬಿದೆ. ಇಷ್ಟೇ ಅಲ್ಲ, ಈ ಕಾವ್ಯವು ಗುರುವಿಜಯಕಾವ್ಯಗಳಿಗೆಲ್ಲ ಮಾರ್ಗದರ್ಶಕವಾಗಿ ಹಿರಿಯಣ್ಣ ನಂತಿದೆ. ಇಲ್ಲಿ ಮಹಾಕಾವ್ಯದ ಎಲ್ಲ ಲಕ್ಷಣಗಳಿವೆ. ಆದರೆ 'ಕಾವ್ಯಲಾಪಾಂಶ್ಚ-ವರ್ಜಯೇತ್' ಎಂಬ ಉಕ್ತಿಯಂತೆ ಈ ಕಾವ್ಯವು ಸಾಮಾನ್ಯಕಾವ್ಯಗಳ ಸಾಲಿಗೆ ಸೇರುವುದಿಲ್ಲ. ಇಲ್ಲಿ ಮಹಾಕಾವ್ಯದ ಎಲ್ಲ ಅಂಗೋಪಾಂಗವರ್ಣನೆ ಯಿದ್ದರೂ ಅದೆಲ್ಲವೂ ಅಧ್ಯಾತ್ಮಪರ ಮತ್ತು ಭಗವತ್‌ಪರವಾಗಿರುವುದರಿಂದ ಇದು ಭಾಗವತಪುರಾಣದಂತೆ ಗುರುಭಕ್ತಿ, ಹರಿಭಕ್ತಿಪ್ರಚೋದಕವಾಗಿರು ತ್ತದೆ ಮತ್ತು ಈ ಕಾವ್ಯದ ಹದಿನೈದನೇ ಸರ್ಗದಲ್ಲಿ 9 ನೆಯ ಶ್ಲೋಕದಿಂದ 63 ನೆಯ ಶ್ಲೋಕದವರೆಗೆ ಸಂಕ್ಷಿಪ್ತವಾಗಿ ಸುಲಭಶೈಲಿಯಿಂದ ವೇದಾಂತದ ಸಾರವೆಲ್ಲವೂ ವರ್ಣಿತವಾಗಿದೆ. ಇದು ಅಣುಅನುವ್ಯಾಖ್ಯಾನದಂತಿದೆ. ಹೀಗೆ ಜಿಜ್ಞಾಸುಗಳಿಗೆ ಮತ್ತು ಮುಮುಕ್ಷುಗಳಿಗೂ ಈ ಗ್ರಂಥವು ಒಂದು ಕೈದೀವಿಗೆ ಯಂತೆ ಮಾರ್ಗಪ್ರದರ್ಶಕವಾಗಿದೆ. ಇದರ ಕೇವಲ ಪಾರಾಯಣವೂ ಪುರುಷಾ ರ್ಥಸಾಧಕವೆಂದು ಆರಣ್ಯಕಾಚಾರ್ಯರೇ ಮುಂತಾದವರು ತಮ್ಮ ಅನುಭವ ದಿಂದಲೇ ಘೋಷಿಸಿದ್ದಾರೆ. ಇಂತಹ ಶ್ರೇಷ್ಠಗ್ರಂಥದ ಅರ್ಥಜ್ಞಾನಪೂರ್ವಕ ವಾದ ಅಧ್ಯಯನವು ಇನ್ನೂ ಹೆಚ್ಚು ಫಲಕಾರಿ ಎಂದು ಭಾವಿಸಿ ಈ ಮಹಾ ಕಾವ್ಯದ ಅರ್ಥಜ್ಞಾನವನ್ನು ಕನ್ನಡಭಾಷೆಯ ಮೂಲಕ ಮಾಡಿಸಿಕೊಡಲು ನಾನು ಪ್ರಯತ್ನಿಸಿದ್ದೇನೆ.

Rarest Archiver

ಈ ಮಹಾಕಾವ್ಯದ ಹನ್ನೆರಡು ಸರ್ಗಗಳು ಮೂರು ಭಾಗಗಳಲ್ಲಿ ಈ ಹಿಂದೆಯೇ ಮುದ್ರಿತವಾಗಿವೆ. ಈಗ ಹದಿಮೂರರಿಂದ ಹದಿನಾರನೇ ಸರ್ಗದ ವರೆಗಿನ ಭಾಗವನ್ನು ಪ್ರಕಾಶಗೊಳಿಸಿ ಹರಿಗುರುಭಕ್ತರ ಕರಕಮಲಗಳಲ್ಲಿ ಇಡಲು ನಾನು ಬಹಳ ಸಂತೋಷಪಡುತ್ತಿದ್ದೇನೆ.

ಶ್ರೀಸುಮಧ್ವವಿಜಯಮಹಾಕಾವ್ಯದ ಅನೇಕ ಕನ್ನಡ ಅನುವಾದಗಳು ಪ್ರಕಟವಾಗಿದ್ದರೂ ನಮ್ಮ ಈ ಗ್ರಂಥದಲ್ಲಿ ಕೆಲವು ವೈಶಿಷ್ಟ್ಯಗಳಿವೆ. ಪ್ರತಿ ಶ್ಲೋಕಕ್ಕೂ ಅವತರಣಿಕೆ, ವಿಸ್ತಾರವಾದ ತಾತ್ಪರ್ಯ, ವಿಗ್ರಹ, ವ್ಯಾಕರಣ ವಿಶೇಷಗಳು, ಧಾತುರೂಪಗಳು ಇವಿಷ್ಟನ್ನೂ ಈ ಗ್ರಂಥವು ಒಳಗೊಂಡಿದೆ. ಈ ವಿಷಯವಿಸ್ತಾರದಿಂದ ಪುಸ್ತಕದ ಪುಟಗಳೂ ಬೆಳೆದಿವೆ. ಆದರೂ ಅರ್ಥ ಜ್ಞಾನವು ಸ್ಥಿರವಾಗಿ ಉಳಿಯಲು ಇವೆಲ್ಲದರ ಆವಶ್ಯಕತೆಯು ಇದೆ ಎಂದು ಭಾವಿಸಿ ಈ ವಿಸ್ತಾರವನ್ನು ಇಲ್ಲಿ ಅಳವಡಿಸಲಾಗಿದೆ.

ಕಾಗದದ ಬೆಲೆ ಮುದ್ರಣದ ವೆಚ್ಚಗಳು ದಿನದಿನಕ್ಕೂ ಹೆಚ್ಚುತ್ತಿರುವುದ ರಿಂದ ಇದರ ಬೆಲೆಯನ್ನು ಅನಿವಾರ್ಯವಾಗಿ ಹೆಚ್ಚಿಸಬೇಕಾಯಿತು. ಪುಟಗಳು ಹೆಚ್ಚಾಗುತ್ತವೆ ಎಂಬ ಭಯದಿಂದ ಅವಶ್ಯಕವಾದ ಹೆಚ್ಚಿನ ಮಾಹಿತಿಗಳನ್ನು ಸೇರಿಸಲೂ ಅನುಕೂಲವಾಗಲಿಲ್ಲ. ಆಚಾರ್ಯರ ಬದರಿಕಾಶ್ರಮಪ್ರವೇಶದ ಉತ್ಸವಸಮಯದಲ್ಲಿ ಈ ಪುಸ್ತಕವನ್ನು ಹೊರತರಲು ಅನುಗ್ರಹಮಾಡಿದ ಹರಿವಾಯುಗುರುಗಳಿಗೆ ವಿಶೇಷವಾದ ನಮನಗಳನ್ನು ಅರ್ಪಿಸುತ್ತಿದ್ದೇನೆ.

ಈ ಪುಸ್ತಕವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ವಿಜಯ ಮುದ್ರಣಾಲಯದವರಿಗೆ ಧನ್ಯವಾದಗಳು.

ಈ ಪುಸ್ತಕವನ್ನು ಕೊಂಡು ಓದುವ ಎಲ್ಲಾ ಭಕ್ತರಿಗೂ ನಮ್ಮ ಗುರು ಗಳಲ್ಲಿ ಸನ್ನಿಹಿತರಾದ ಮಧ್ವಗುರುಗಳಿಗೆ ಪ್ರೇಷ್ಠಪ್ರೇಷ್ಠತಮನಾದ ಶ್ರೀಹರಿಯು ಸಕಲಶ್ರೇಯಸ್ಸುಗಳನ್ನೂ ಅನುಗ್ರಹಿಸಲೆಂದು ಹಾರೈಸುತ್ತೇನೆ.

ಪ್ರಮೋದ ಕೃಷ್ಣದಶಮೀ
ಗುರುವಾರ 10-1-1991
ಬೆಂಗಳೂರು

ವಿದ್ವಜ್ಜನವಿಧೇಯ
ಆಚಾರ್ಯ ಸಾಣೂರು ಭೀಮಭಟ್ಟ

Rarest Archiver

ವಿಷಯಾನುಕ್ರಮಣಿಕೆ

ಹದಿಮೂರನೆಯ ಸರ್ಗದ ಕಥಾಸಾರಾಂಶ

೧) ಸಹ್ಯಪರ್ವತದಿಂದ ಆಚಾರ್ಯರು ಜಯಸಿಂಹರಾಜನ ರಾಜ್ಯದ ಕಡೆಗೆ ಪ್ರಯಾಣಬೆಳೆಸಿದರು ೧–೨೫

೨) ಜಯಸಿಂಹರಾಜನು ಆಚಾರ್ಯರನ್ನು ಎದುರುಗೊಂಡನು ೨೫

೩) ಶ್ರೀಮಧ್ವಾಚಾರ್ಯರ ವರ್ಣನೆ ೩೧

೪) ವಿಷ್ಣುಮಂಗಲದೇವಾಲಯದಲ್ಲಿ ಆಚಾರ್ಯರ ಭಾಗವತಪ್ರವಚನ ೪೮

೫) ತ್ರಿವಿಕ್ರಮಪಂಡಿತಾಚಾರ್ಯರ ಜನನ, ಬಾಲ್ಯ, ವಿದ್ಯಾಭ್ಯಾಸ ೫೨

೬) ತ್ರಿವಿಕ್ರಮರ ತತ್ತ್ವವಿಮರ್ಶೆ; ಮಧ್ವಶಿಷ್ಯರ ಪರಾಜಯ ೬೩

೭) ತ್ರಿವಿಕ್ರಮರು ಆಚಾರ್ಯರನ್ನು ಸಂದರ್ಶಿಸಿ, ವಂದಿಸಿದರು ೮೪

೮) **ಹದಿನಾಲ್ಕನೆಯ ಸರ್ಗದ ಕಥಾಸಾರಾಂಶ** ೮೭

೯) ಪದ್ಮತೀರ್ಥನಿಂದ ಅಪಹೃತವಾದ ಆಚಾರ್ಯರ ಪುಸ್ತಕಗಳನ್ನು ಶಂಕರಪಂಡಿತರು ಮರಳಿ ಸ್ವೀಕರಿಸಿದರು ತ್ರಿವಿಕ್ರಮರು ಮಾಡಿದ ರಾಜಾಶೀರ್ವಾದ ೯೦

೧೦) ಆಚಾರ್ಯರ ನಿತ್ಯಾನುಷ್ಠಾನವರ್ಣನೆ ೯೮

೧೧) ಆಚಾರ್ಯರ ಪ್ರವಚನಪ್ರಸಂಗದ ವರ್ಣನೆ ೧೧೪

೧೨) ಪೂರ್ಣಪ್ರಜ್ಞರು ಮಾಡಿದ ಪೂರ್ಣಬ್ರಹ್ಮನ ಪೂಜೆ ೧೨೭

೧೩) ಭಕ್ತರಿಗೆ ಸಂದರ್ಶನ, ಸಂಧ್ಯಾವರ್ಣನ ೧೫೦

Rarest Archiver

೧೪) **ಹದಿನೈದನೆಯ ಸರ್ಗದ ಕಥಾಸಾರಾಂಶ** ೧೭೪

೧೫) ಆನಂದತೀರ್ಥರ ಭಾಷ್ಯಪ್ರವಚನ ೧೭೮

೧೬) ಉಪನ್ಯಾಸಭಾರತೀ ೧೮೦

೧೭) ತ್ರಿವಿಕ್ರಮರು ಆಚಾರ್ಯರ ಶಿಷ್ಯರಾದರು ೨೬೬

೧೮) ಶ್ರೀಮಧ್ವರಚಿತಗ್ರಂಥವರ್ಣನ ೨೬೯

೧೯) ಆಚಾರ್ಯರ ತಮ್ಮಂದಿರು ಶ್ರೀವಿಷ್ಣುತೀರ್ಥರಾದರು ೨೮೭

೨೦) ಶ್ರೀವಿಷ್ಣುತೀರ್ಥರ ಮಹಿಮವರ್ಣನ ೨೯೭

೨೧) ಆಚಾರ್ಯರ ಶ್ರೀಪದ್ಮನಾಭತೀರ್ಥರೇ ಮೊದಲಾದ
ಯತಿ–ಗೃಹಸ್ಥಶಿಷ್ಯರು ೩೦೯

೨೨) **ಹದಿನಾರನೆಯ ಸರ್ಗದ ಕಥಾಸಾರಾಂಶ** ೩೦೯

ಮಧ್ವಮಹಿಮೆಗಳು

೨೩) ವೇದಮಂತ್ರದ ಪ್ರತ್ಯಕ್ಷಫಲದರ್ಶನ ೩೩೯

೨೪) ಉಗುರಿನ ಬೆಳಕಿನಲ್ಲಿ ಪ್ರವಚನ ೩೪೬

೨೫) ನದಿಯ ಹತ್ತಿರ ಬಂಡೆಕಲ್ಲನ್ನು ತಂದಿಟ್ಟರು ೩೪೭

೨೬) ಸಮುದ್ರವನ್ನು ಶಾಂತಗೊಳಿಸಿದರು ೩೫೧

೨೭) ಜಟ್ಟಿಗಳ ಪರಾಜಯ, ಪಾರಂತಿಯಲ್ಲಿ ಜೀರ್ಣೋದ್ಧಾರ ೩೬೮

೨೮) ಬೇಸಿಗೆಯಲ್ಲಿ ಮಳೆಬರಿಸಿದರು ೩೮೪

೨೯) ಕೃಷ್ಣಾಮೃತ ಮಹಾರ್ಣವ ೩೮೬

೩೦) ಕರ್ಮನಿರ್ಣಯಗ್ರಂಥರಚನೆಯ ಹಿನ್ನೆಲೆ ೩೯೧

೩೧) ಐತರೇಯ ಪ್ರವಚನ–ದೇವತೆಗಳು ಮಾಡಿದ ಸ್ತುತಿ–
ಪುಷ್ಪವೃಷ್ಟಿ ೪೦೬

Rarest Archiver

ಹದಿಮೂರನೆಯ ಸರ್ಗದ ಕಥಾಸಾರಾಂಶ

ಆಚಾರ್ಯರು ಚಾತುರ್ಮಾಸ್ಯವ್ರತವಾಗಿದೊಡನೆ ಕೊಡಿಪಾಡಿ ದೇವಾಲಯದಿಂದ ಹೊರಟು ಕೆಲವು ಭಕ್ತರ ಪ್ರಾರ್ಥನೆಯ ಮೇರೆಗೆ ಸಹ್ಯಾದ್ರಿಯ ಕಡೆಗೆ ಪ್ರಯಾಣಬೆಳೆಸಿದರು. ಅಲ್ಲಿಗೆ ಜಯಸಿಂಹರಾಜನು ಒಬ್ಬ ದೂತನನ್ನು ಕಳುಹಿಸಿದನು. ಅವನು —'ರಾಜಾಜಯಸಿಂಹನು ತನ್ನ ದೇಶಕ್ಕೆ ಬಂದು ತನ್ನ ಆತಿಥ್ಯವನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸಿದ್ದಾನೆ' ಎಂದು ರಾಜನ ಸಂದೇಶವನ್ನು ಆಚಾರ್ಯರಿಗೆ ತಲುಪಿಸಿದನು. ಅದರಂತೆ ಆಚಾರ್ಯರು ಪಶ್ಚಿಮಘಟ್ಟವನ್ನು ದಾಟಿ ಪಶ್ಚಿಮದ ಕಡೆಗೆ ಹೊರಟರು. ದಾರಿಯಲ್ಲಿ ಎದುರುಗೊಂಡ ಸಜ್ಜನರೂ ಸೇರಿ ಅವರ ಪ್ರಯಾಣದ ಜೊತೆಗಾರ ಭಕ್ತರ ಸಂಖ್ಯೆಯು ಗಂಗಾಪ್ರವಾಹದಂತೆ ಬೆಳೆಯಿತು. ಅವರು ಕಬಿನಾಡು ಎಂಬ ದೇಶಕ್ಕೆ ಹೋಗಿ ಮದನೇಶ್ವರದೇವಾಲಯದಲ್ಲಿ ಒಂದು ರಾತ್ರಿ ತಂಗಿದರು. ಅಲ್ಲಿಂದ ಬೆಳಗ್ಗೆ ಎದ್ದು ಆಹ್ನಿಕವನ್ನು ಪೂರೈಸಿ ಪ್ರಯಾಣಕ್ಕೆ ಸಿದ್ಧರಾದ ಆಚಾರ್ಯರನ್ನು ಅನೇಕಮಂದಿ ಶಿಷ್ಯರು ಪೂಜಾಸಾಮಗ್ರಿಗಳನ್ನು ಹೊತ್ತುಕೊಂಡು ಹಿಂಬಾಲಿಸಿದರು ಮದನೇಶ್ವರದೇವಾಲಯದ ಘಂಟೆಯನ್ನು ಯಾರೋ ಭಕ್ತರು ಬಾರಿಸಿದಾಗ 'ದೇವರು ಹೊರಡಲು ಶುಭ ಸೂಚನೆಯನ್ನು ನೀಡಿದ್ದಾರೆ'ಂದು ಜನರು ಭಾವಿಸಿದರು. ಆಚಾರ್ಯರು ಅನೇಕಮಂದಿ ಭಕ್ತರ ಸಹಿತವಾಗಿ ಪ್ರಯಾಣಮಾಡುತ್ತಿದ್ದಾಗ ಜಯಸಿಂಹರಾಜನು ಅವರನ್ನು ಎದುರುಗೊಂಡನು. ರಾಜನು ವಾಹನದಿಂದ ಇಳಿದು ಕೆಲವು ಮಂದಿ ಬ್ರಾಹ್ಮಣರೊಡನೆ ಆಚಾರ್ಯರನ್ನು ವಂದಿಸಿ, ಅವರನ್ನು ವಿಷ್ಣುಮಂಗಲದೇವಾಲಯಕ್ಕೆ ಕರೆದೊಯ್ದನು. ದಾರಿಯಲ್ಲಿ ಮಹಾಪುರುಷರ ೩೨ ಲಕ್ಷಣಗಳಿಂದ ರಾಜಿಸುವ ಆಚಾರ್ಯರನ್ನು ಕಂಡು ಜನರು ವಿಸ್ಮಿತರಾದರು. ಜನರ ಗದ್ದಲ ಇಕ್ಕಟ್ಟುಗಳಿಗೆ ಹೆದರಿ ದೂರದಲ್ಲಿ ನಿಂತಿದ್ದರೂ ಆಚಾರ್ಯರನ್ನು ನೋಡಲು ಹವಣಿಸುತ್ತಿದ್ದ ಜನರ ಮೇಲಿನ ದಯೆಯಿಂದ ಆಚಾರ್ಯರು ತಾವೇ ತಮ್ಮ ಯೋಗಶಕ್ತಿಯಿಂದ ಎದೆಯ ಮೇಲಿನಿಂದ

Rarest Archiver

ಪೂರ್ತಿಯಾಗಿ ತನ್ನದೇಹವು ಕಾಣಿಸುವಂತೆ ಮಾಡಿದರು. ವಿಷ್ಣುಮಂಗಲ ದೇವಾಲಯದಲ್ಲಿ ಕುಳಿತು ಆಚಾರ್ಯರು ಹೃಷೀಕೇಶತೀರ್ಥರಿಂದ ಸುಶ್ರಾವ್ಯವಾಗಿ ಭಾಗವತವನ್ನು ಹಾಡಿಸಿ ತಾವು ರಾಜ ಮತ್ತು ಭಕ್ತಮಹಾಜನರ ಎದುರಿನಲ್ಲಿ ಅರ್ಥವನ್ನು ವಿವರಿಸಿದರು. ಎಲ್ಲರಿಗೂ ಪರಮಾನಂದವಾಯಿತು.

ಇತ್ತ ಲಿಕುಚವಂಶದಲ್ಲಿ ಆಂಗೀರಸಗೋತ್ರದ ಸುಬ್ರಹ್ಮಣ್ಯಪಂಡಿತರೆಂಬ ಶ್ರೋತ್ರಿಯಬ್ರಾಹ್ಮಣರಿದ್ದರು. ಇವರು ಸಾಧ್ವಿಯಾದ ಗೃಹಿಣಿಯೊಂದಿಗೆ ಭಗವಂತನನ್ನು ಭಜಿಸುತ್ತಾ ಕಾಲಕಳೆಯುತ್ತಿದ್ದರು. ಇವರಿಗೆ ಹುಟ್ಟಿದ ಮಕ್ಕಳೆಲ್ಲಾ ಚಿಕ್ಕವಯಸ್ಸಿನಲ್ಲಿಯೇ ಸತ್ತುಹೋದಾಗ ಆ ಸಾಧ್ವಿಯು ಶಂಕರ–ನಾರಾಯಣರನ್ನು ಸೇವಿಸಿ, ಅದರ ಫಲವಾಗಿ ಒಂದು ಪುತ್ರರತ್ನವನ್ನು ಪಡೆದಳು. ಸುಬ್ರಹ್ಮಣ್ಯಪಂಡಿತರು ಮಗುವಿನ ಮುಖಲಕ್ಷಣವನ್ನು ಕಂಡು ಆನಂದಿಸಿ ಮುಂದೆ ಅವನು ವೇದ– ವೇದಾಂತ– ಕವಿತೆಗಳಲ್ಲಿ ಪಾರಂಗತನಾಗುವನೆಂದು ಅರಿತು ತ್ರಿವಿಕ್ರಮ ಎಂದು ಹೆಸರಿಟ್ಟರು. ಆ ಮಗುವು ತೊದಲುನುಡಿಯನ್ನಾಡುವಾಗಲೇ ನಿರ್ದೋಷವಾದ ಸಂಸ್ಕೃತ ಪದ್ಯಗಳನ್ನು ರಚಿಸಿ ಹೇಳುತ್ತಿತ್ತು. ಬಾಲ್ಯ–ಕೌಮಾರಗಳ ಸಂಧಿಯಲ್ಲಿಯೇ ತ್ರಿವಿಕ್ರಮನು ಉಷಾಹರಣವೆಂಬ ಕಾವ್ಯವನ್ನು ರಚಿಸಿದನು. ಗುರುಗಳಲ್ಲಿ ಅದ್ವೈತಶಾಸ್ತ್ರವನ್ನು ಕೇಳಿ ಅದರಲ್ಲಿರುವ ಅಸ್ವಾರಸ್ಯವನ್ನು ತಿಳಿದನು. ಆದರೂ ವಂಶಪರಂಪರೆಯಿಂದ ಬಂದ ಮಾಯಾವಾದವನ್ನು ಆಳವಾಗಿ ಅಭ್ಯಸಿಸಿ ಪ್ರಚಂಡಪಂಡಿತರನ್ನೂ ಖಂಡಿಸಿ ಕವಿತಾರ್ಕಿಕಕುಂಜರೇಂದ್ರರೆನಿಸಿದನು.

ಒಂದು ದಿನ ತಂದೆ ಸುಬ್ರಹ್ಮಣ್ಯಪಂಡಿತರು–ತ್ರಿವಿಕ್ರಮರನ್ನು ಕರಿತು 'ಮಾಯಾವಾದದಲ್ಲಿ ಹೇಳಿದ ನಿರ್ಗುಣೋಪಾಸನೆಯು ಮೋಕ್ಷಸಾಧಕವಲ್ಲ, ಆದುದರಿಂದ ಗುಣಪೂರ್ಣನಾದ ಶ್ರೀಕೃಷ್ಣನನ್ನು ಧ್ಯಾನಿಸು,' ಎಂದರು. ಅದನ್ನು ಕೇಳಿದ ತ್ರಿವಿಕ್ರಮರು ಅದ್ವೈತಶಾಸ್ತ್ರಗಳನ್ನು ಬಲ್ಲ ಉತ್ತಮ ವಿದ್ವಾಂಸರಿಂದ ಪುನಃ–ಅದ್ವೈತವನ್ನು ಕ್ರಮವಾಗಿ ಅಭ್ಯಾಸಮಾಡಿದರು. ಆಗಲೂ ಅವರಿಗೆ ಮೋಕ್ಷಸಾಧಕವಾದ ಉಪಾಸನೆಯ ಮಾರ್ಗವು ಆ ಶಾಸ್ತ್ರದಿಂದ ತಿಳಿದು ಬರಲಿಲ್ಲ. ಕೊನೆಗೆ ಅವರು 'ಸ್ವತಃ ವೇದಭಾರತಪುರಾಣ

Rarest Archiver

ಗಳನ್ನು ವಿಮರ್ಶಿಸಿ ಮೋಕ್ಷಸಾಧಕವಾದ ಉಪಾಸನಾಮಾರ್ಗವನ್ನು ನಿಶ್ಚಯಿಸಿಕೊಳ್ಳುತ್ತೇನೆ ಎಂದು ನಿರ್ಧರಿಸಿದರು. ಇಷ್ಟರಲ್ಲಿ ಅವರು ಆಚಾರ್ಯರ ಕೀರ್ತಿಯನ್ನು ಕೇಳಿದರು.

ಇತ್ತ ಮಾಯಾವಾದಿಗಳು ತ್ರಿವಿಕ್ರಮರ ಹತ್ತಿರ ಬಂದು-'ಇತ್ತೀಚೆಗೆ ಹುಟ್ಟಿಕೊಂಡಿರುವ ಒಬ್ಬ ವಿದ್ವಾಂಸನು ಅನಾದಿಪರಂಪರೆಯಿಂದ ಪ್ರಾಪ್ತವಾದ ನಮ್ಮ ಮಾಯಾವಾದಸಿದ್ಧಾಂತವನ್ನು ಖಂಡಿಸುತ್ತಿದ್ದಾನೆ. ಅವನನ್ನು ನಿರಾಕರಿಸಲು ನೀನೇ ಸಮರ್ಥನು.' ಎಂದು ಹೇಳಿ ತ್ರಿವಿಕ್ರಮರನ್ನು ಶ್ರೀಮಧ್ವಶಿಷ್ಯರೊಡನೆ ವಾದ ಮಾಡಲು ಹುರಿದುಂಬಿಸಿದರು. ಅದರಂತೆ ಉದ್ದಾಮಪಂಡಿತರಾದ ತ್ರಿವಿಕ್ರಮರು ಆಚಾರ್ಯರ ಶಿಷ್ಯರೊಡನೆ ವಾದ ಮಾಡಿ ಅವರ ಮಾತುಗಳಿಗೆ ಸರಿಯಾದ ಉತ್ತರಕೊಡಲಾರದೆ ಕೋಪದಿಂದ ಮನಬಂದಂತೆ ಉತ್ತರಿಸಿ ಅವರನ್ನು ನಿರುತ್ತರರನ್ನಾಗಿ ಮಾಡಿದರು. ಆದರೂ ಉತ್ತಮಪ್ರಜ್ಞರಾದ ಅವರು ತನ್ನ ತಮ್ಮನಾದ ಶಂಕರಪಂಡಿತನ ಮನೆಯ ಲ್ಲಿದ್ದ ಶ್ರೀಮಧ್ವಶಾಸ್ತ್ರದ ಗ್ರಂಥಗಳನ್ನು ಗುಟ್ಟಾಗಿ ಓದಿದರು. ಅವುಗಳ ಅಭಿಪ್ರಾಯಗಳನ್ನು ಮನನಮಾಡಿದರು. ತುಂಬಾ ಆಶ್ಚರ್ಯಪಟ್ಟರು. ಮುಂದೆ ಒಂದು ಶುಭಸಂದರ್ಭದಲ್ಲಿ ಆಚಾರ್ಯರನ್ನು ಸಂದರ್ಶಿಸಿ ತನಗೆ ಭಿನ್ನಾಭಿಪ್ರಾಯವಿರುವ ಪ್ರಮೇಯವನ್ನು ವಿಚಾರಮಾಡಿ ಶ್ರೀಮಧ್ವಾ ಚಾರ್ಯರ ತತ್ವವಾದಸಿದ್ಧಾಂತವೇ ಪರಮಶ್ರೇಷ್ಠವೆಂದು ನಿರ್ಧರಿಸಿದರು. ಆದರೂ ಕೂಡ ಬುದ್ಧಿಶಾಲಿಗಳಾದ ಅವರು ಕೂಡಲೇ ಅದ್ವೈತಮತವನ್ನು ತ್ಯಜಿಸಿ ದ್ವೈತಸಿದ್ಧಾಂತವನ್ನು ಅವಲಂಬಿಸಲಿಲ್ಲ. ಅನಂತರ ಒಂದಾನೊಂದು ದಿನ ವಿಷ್ಣುಮಂಗಲದೇವಾಲಯಕ್ಕೆ ಹೋಗಿ ಅಲ್ಲಿ ತಂಗಿರುವ ಆಚಾರ್ಯರನ್ನು ಕಂಡು ಅವರನ್ನು ವಂದಿಸಿದರು.

Rarest Archiver

ಶ್ರೀಃ

ಶ್ರೀಸುಮಧ್ವವಿಜಯಮಹಾಕಾವ್ಯಂ

ಹದಿಮೂರನೆಯ ಸರ್ಗ

ಅವತಾರಿಕಾ : ಆಚಾರ್ಯರ ದಿಗ್ವಿಜಯಪ್ರಯಾಣವನ್ನು ವಿಶದವಾಗಿ ತಿಳಿಸುವುದಕ್ಕಾಗಿ ಉಪೋದ್ಘಾತರೂಪದಿಂದ ರಾಜದೂತನು ಬಂದುದನ್ನು ತಿಳಿಸುತ್ತಾರೆ—

ಪೃಥುದರ್ಶನಮುತ್ಥಿತಂ ಕೃತಾರ್ಥಂ
ಪೃಥಿವೀಭೃತ್ಪ್ರಣತಿಂ ಗೃಹೀತವಂತಂ ।
ನಿಜಶಿಷ್ಯಮುದೇಽಥ ಸಹ್ಯಮಾಪ್ತಂ
ಪುರುಷಃ ಕಶ್ಚಿದುಪಾಯಯೌ ಕದಾಚಿತ್ ॥೧॥

ಅನ್ವಯ : ಉತ್ಥಿತಂ ಕೃತಾರ್ಥಂ ಪೃಥಿವೀಭೃತ್‌ಪ್ರಣತಿಂ ಗೃಹೀತವಂತಂ ಅಥ ನಿಜಶಿಷ್ಯಮುದೇ ಸಹ್ಯಂ ಆಪ್ತಂ ಪೃಥುದರ್ಶನಂ ಕದಾಚಿತ್ ಕಶ್ಚಿತ್ ಪುರುಷಃ ಉಪಾಯಯೌ.

ಅನ್ವಯಾರ್ಥ : ಉತ್ಥಿತಂ = ಚಾತುರ್ಮಾಸ್ಯಸಂಕಲ್ಪವನ್ನು ಮುಗಿಸಿ ಎದ್ದಿರುವ, ಕೃತಾರ್ಥಂ = ತಮ್ಮ ಪುಸ್ತಕಗಳು ಸಿಕ್ಕಿರುವುದರಿಂದ ಕೃತಕೃತ್ಯರಾದ, ಪೃಥಿವೀಭೃತ್ = ರಾಜನಾದ ಜಯಸಿಂಹನ, ಪ್ರಣತಿಂ = ನಮಸ್ಕಾರವನ್ನು, ಗೃಹೀತವಂತಂ = ಸ್ವೀಕರಿಸಿರುವ, ಅಥ = ಅನಂತರ, ನಿಜಶಿಷ್ಯಮುದೇ = ತಮ್ಮ ಶಿಷ್ಯರ ಸಂತೋಷಕ್ಕಾಗಿ, ಸಹ್ಯಂ = ಸಹ್ಯಪರ್ವತವನ್ನು ಕುರಿತು, ಆಪ್ತಂ = ಬಂದಿರುವ, ಪೃಥುದರ್ಶನಂ = ಶ್ರೀಪೂರ್ಣಪ್ರಜ್ಞರನ್ನು, ಕದಾಚಿತ್ = ಒಂದಾನೊಂದು ದಿನ, ಕಶ್ಚಿತ್ ಪುರುಷಃ = ಒಬ್ಬಾನೊಬ್ಬ ರಾಜದೂತನು, ಉಪಾಯಯೌ = ಸಮೀಪಿಸಿದನು.

ತಾತ್ಪರ್ಯ : ಶ್ರೀಮಧ್ವಾಚಾರ್ಯರು ಕೊಡಿಪಾಡಿಗ್ರಾಮದಲ್ಲಿ (ಪ್ರಾಗ್ರ್ಯವಾಟದಲ್ಲಿ) ಚಾತುರ್ಮಾಸ್ಯವನ್ನು ಮುಗಿಸಿ ಎದ್ದರು. ಪದ್ಮ

Rarest Archiver

ತೀರ್ಥನು ಅಪಹರಿಸಿದ್ದ ತನ್ನ ಗ್ರಂಥಗಳನ್ನು ಮರಳಿ ಪಡೆದುದರಿಂದ ಅವರು ತನ್ನ ಕರ್ತವ್ಯವನ್ನು ಸಾಧಿಸಿಕೊಂಡವರಾಗಿ, ಜಯಸಿಂಹಮಹಾರಾಜನ ನಮಸ್ಕಾರವನ್ನು ಸ್ವೀಕರಿಸಿ, ಅವನಿಂದ ಬೀಳ್ಕೊಂಡು ತಮ್ಮ ಶಿಷ್ಯಜನರ ಸಂತೋಷಕ್ಕಾಗಿ ಸಹ್ಯಪರ್ವತದಕಡೆಗೆ ಸಂಚಾರಕ್ಕೆ ಹೊರಟರು. ಆಗ ಒಂದು ದಿನ ಜಯಸಿಂಹರಾಜನ ಕಡೆಯ ಒಬ್ಬ ದೂತನು ಆಚಾರ್ಯರ ಬಳಿಗೆ ಬಂದನು.

ವಿಶೇಷಾಂಶ : ಹಿಂದಿನಸರ್ಗದಲ್ಲಿ ಹೇಳಿದಂತೆ ಆಚಾರ್ಯರು ಪ್ರಾಗ್ರ್ಯವಾಟ(ಕೊಡಿಪಾಡಿ)ದಲ್ಲಿ ಚಾತುರ್ಮಾಸ್ಯಕುಳಿತವರು ಹುಣ್ಣಿಮೆಯ ದಿನ ಚಾತುರ್ಮಾಸ್ಯದಿಂದ ಎದ್ದು ಅಲ್ಲಿಂದ ಸ್ವಾರಾಮ (ಕಾವು) ಎಂಬಲ್ಲಿಗೆ ಬಂದರು. ಹಿಂದಿನದಿನ ಅರ್ಧರಾತ್ರಿಯಲ್ಲಿಯೇ ಪದ್ಮತೀರ್ಥನು ಆಚಾರ್ಯರಿಂದ ಹೆದರಿ ಅವರ ಗ್ರಂಥಗಳನ್ನು ಬಿಟ್ಟು ಹೋಗಿದ್ದನು ಎಂದು ಆ ಊರಿನ ಜನರು ಹೇಳಿದರು. ತಾನು ಜಯಸಿಂಹರಾಜನ ಸಮಕ್ಷದಲ್ಲಿ ಆ ಪುಸ್ತಕಗಳನ್ನು ತೆಗೆದುಕೊಳ್ಳುವ ತನಕ ಅವುಗಳು ಮಧ್ಯಸ್ಥರಲ್ಲಿರಲೆಂದು ಆಚಾರ್ಯರು ಹೇಳಿದರು. ಅನಂತರ ಅವರು ಸಹ್ಯಪರ್ವತದ ಕಡೆಗೆ ಹೋಗಿದ್ದಾಗ ರಾಜನು ಆಚಾರ್ಯರನ್ನು ತನ್ನ ಬಳಿಗೆ ಬರಬೇಕೆಂದು ಪ್ರಾರ್ಥಿಸಲು ಒಬ್ಬ ದೂತನನ್ನು ಕೊಟ್ಟು ಕಳುಹಿಸಿದನು.

ಉತ್ಥಾಯ ಪೌರ್ಣಮಾಸ್ಯಾಂ ಸ್ವಾರಾಮಮಿತೋ ನಿಶೀಥ ಏವ ಗತಂ|
ಶ್ರುತ್ವಾ ಚೋಲಂ ತ್ರಾಸಾದ್ಗ್ರನ್ಥೈಃ ಸ ದತ್ತಮಗ್ರಹೀದ್ಗ್ರಂಥಂ||

—ಭಾ. ಪ್ರ.

ವಿಗ್ರಹಾದಿ : ಪೃಥು ದರ್ಶನಂ ಯಸ್ಯ ಸಃ ತಂ, ಕೃತಃ ಅರ್ಥಃ ಯೇನ ಸಃ ತಂ, ಪೃಥಿವೀಂ ಬಿಭರ್ತಿ ಇತಿ ಪೃಥಿವೀಭೃತ್, ಪೃಥಿವೀಭೃತಃ ಪ್ರಣತಿಃ, ತಾಂ, ನಿಜಾಶ್ಚ ತೇ ಶಿಷ್ಯಾಶ್ಚ ನಿಜಶಿಷ್ಯಾಣಾಂ ಮುತ್ ತಸ್ಯೈ;

ಕ್ರಿಯಾಪದ : ಉಪ+ಆ+ಯಯೌ ಯಯತುಃ ಯಯುಃ ಇತ್ಯಾದಿ. ಯಾ ಪ್ರಾಪಣೇ ಉಪ. ಆ. ಉಪಸರ್ಗದ್ವಯ ಲಿಟ್.

Rarest Archiver

ವೃತ್ತ : 'ವಿಷಮೇ ಸಸಜಾ ಗುರೂ ಯದಿ ಸ್ಯುಃ ಸಭರಾ ಯಶ್ಚ ಯುಜೀಹ ಚಂದ್ರಿಕಾ ಸಾ' ಎಂಬ ಲಕ್ಷಣದಂತೆ ಚಂದ್ರಿಕಾವೃತ್ತ.

ಆ ರಾಜಪುರುಷನು ಹೇಳಿದ ಸಂದೇಶವೇನು ?—

ಭಗವಾನಿಹ ನಃ ಸ್ವಕಿಂಕರಾಣಾ-
ಮಚಿರೇಣಾವ್ರಜತಾದನುಗ್ರಹಾರ್ಥಮ್ ।
ಇತಿ ಕಾರ್ಯಚಿಕೀರ್ಷಯಾರ್ಥಯತ್ತ್ವಾಂ
ನೃಪ ಇತ್ಯಭ್ಯಧಿತೈಷ ತಂ ಪ್ರಣಮ್ಯ ॥೨॥

ಏಷಃ ತಂ ಪ್ರಣಮ್ಯ ಭಗವಾನ್ ಸ್ವಕಿಂಕರಾಣಾಂ ನಃ ಅನುಗ್ರಹಾರ್ಥಂ ಅಚಿರೇಣ ಇಹ ಆವ್ರಜತಾತ್ ಇತಿ ನೃಪಃ ಕಾರ್ಯಚಿಕೀರ್ಷಯಾ ತ್ವಾಂ ಆರ್ಥಯತ್ ಇತಿ ಅಭ್ಯಧಿತ.

ಏಷಃ = ಈ ಪುರುಷನು, ತಂ = ಆ ಮಧ್ವಾಚಾರ್ಯರನ್ನು, ಪ್ರಣಮ್ಯ= ನಮಸ್ಕರಿಸಿ, ಭಗವಾನ್ = ಪೂಜ್ಯರಾದ ತಾವು, ಸ್ವಕಿಂಕರಾಣಾಂ = ತಮ್ಮ ಸೇವಕರಾದ, ನಃ = ನಮ್ಮ, ಅನುಗ್ರಹಾರ್ಥಂ = ಅನುಗ್ರಹಕ್ಕೋಸ್ಕರ, ಅಚಿರೇಣ = ಬೇಗನೆ, ಇಹ = ಈ ನಮ್ಮ ದೇಶಕ್ಕೆ, ಆವ್ರಜತಾತ್ = ಬರಬೇಕು', ಇತಿ = ಹೀಗೆಂದು, ನೃಪಃ = ಜಯಸಿಂಹರಾಜರು, ಕಾರ್ಯಚಿಕೀರ್ಷಯಾ=ಕಾರ್ಯವನ್ನು ಮಾಡುವ ಇಚ್ಛೆಯಿಂದ, ತ್ವಾಂ=ನಿಮ್ಮನ್ನು, ಆರ್ಥಯತ್=ಪ್ರಾರ್ಥಿಸಿದ್ದಾರೆ. ಇತಿ = ಹೀಗೆಂದು, ಅಭ್ಯಧಿತ=ಹೇಳಿದನು.

ಆ ರಾಜಪುರುಷನು ಶ್ರೀಮಧ್ವಾಚಾರ್ಯರಿಗೆ ನಮಸ್ಕಾರಮಾಡಿದನು. 'ಆಚಾರ್ಯರೇ! ಪರಮಪೂಜ್ಯರಾದ ತಾವು ತಮ್ಮ ಸೇವಕರಾದ ನಮ್ಮನ್ನು ಅನುಗ್ರಹಿಸಲು ನಮ್ಮ ದೇಶಕ್ಕೆ (ಊರಿಗೆ) ಬರಬೇಕು' ಎಂದು ಜಯಸಿಂಹ ರಾಜನು ಒಂದು ಮಹತ್ಕಾರ್ಯವನ್ನು ತಮ್ಮ ಸನ್ನಿಧಿಯಲ್ಲಿ ನೆರವೇರಿಸುವ ಸಲುವಾಗಿ ಪ್ರಾರ್ಥಿಸುತ್ತಾನೆ ಎಂದು ವಿಜ್ಞಾಪಿಸಿದನು. (ಪದ್ಮತೀರ್ಥನು ಗ್ರಂಥಾಪಹಾರಮಾಡಿದುದಕ್ಕೆ ಅವನನ್ನು ದಂಡಿಸುವುದು ಮತ್ತು ಆಚಾರ್ಯರ ಗ್ರಂಥಗಳನ್ನು ಕ್ಷಮಾಪ್ರಾರ್ಥನಾಪೂರ್ವಕವಾಗಿ ಹಿಂತಿರುಗಿಸಿ ಕೊಡುವುದು.

Rarest Archiver

ಇದೇ ಕಾರ್ಯವು. ಅದಕ್ಕಾಗಿ ಜಯಸಿಂಹರಾಜನು ಆಚಾರ್ಯರನ್ನು ಘಟ್ಟದ ಮೇಲಿನಿಂದ ಊರಿಗೆ ಕರೆಸುತ್ತಿದ್ದಾನೆ.)

ಸ್ವಸ್ಯ ಕಿಂಕರಾಃ, ತೇಷಾಂ, ಅನುಗ್ರಹಾಯ ಇತಿ ಅನುಗ್ರಹಾರ್ಥಂ, ಕರ್ತುಂ ಇಚ್ಛಾ ಚಿಕೀರ್ಷಾ, ಕಾರ್ಯಸ್ಯ ಚಿಕೀರ್ಷಾ ತಯಾ.

ಆರ್ಥಯತ್ ಆರ್ಥಯತಾಂ ಆರ್ಥಯನ್ ಇತ್ಯಾದಿ. ಅರ್ಥ ಉಪಯಾಚ್ಞಾಯಾಂ ಉಭ. (ಪರ.) ಲಙ್. ಅಭಿ + ಅಧಿತ ಅಧಿಷಾತಾಂ ಅಧಿಷತ ಅಧಿಥಾಃ ಅಧಿಷಾಥಾಂ ಅಧಿಧ್ವ(ಢ್ವ)ಂ, ಅಧಿಷಿ ಅಧಿಷ್ವಹಿ ಅಧಿಷ್ಮಹಿ. ಡು ಧಾ ಞ್ (ಧಾ) ಧಾರಣ ಪೋಷಣಯೋಃ ಆತ್ಮನೇ ಲುಙ್.

ಆ ದೂತನ ಮಾತಿನಂತೆ ಆಚಾರ್ಯರು ಹೊರಟರು.

ಅಥ ಮಾಘವತೀಮಪಾಸ್ಯ ಕಾಷ್ಠಾಂ
ವ್ರಜತಾ ಪ್ರೈಧಿತತೇಜಸಾ ಪ್ರತೀಚೀಂ ।
ಪರಿಶೋಧಯತಾ ಸ್ವಪಾದಸಂಗಾತ್
ಪೃಥಿವೀಂ ಪ್ರಾಜ್ಞದಿವಾಕರೇಣ ರೇಜೇ ॥೩॥

ಅಥ ಮಾಘವತೀಂ ಕಾಷ್ಠಾಂ ಅಪಾಸ್ಯ ಪ್ರತೀಚೀಂ ವ್ರಜತಾ ಸ್ವಪಾದಸಂಗಾತ್ ಪೃಥಿವೀಂ ಪರಿಶೋಧಯತಾ ಪ್ರೈಧಿತತೇಜಸಾ ಪ್ರಾಜ್ಞದಿವಾಕರೇಣ ರೇಜೇ.

ಅಥ = ಅನಂತರ, ಮಾಘವತೀಂ = ಇಂದ್ರಸಂಬಂಧಿಯಾದ, ಕಾಷ್ಠಾಂ = ದಿಕ್ಕನ್ನು (ಪೂರ್ವದಿಕ್ಕನ್ನು), ಅಪಾಸ್ಯ–ಬಿಟ್ಟು. ಪ್ರತೀಚೀಂ = ಪಶ್ಚಿಮ ದಿಕ್ಕನ್ನು ಕುರಿತು, ವ್ರಜತಾ = ಹೋಗುತ್ತಿರುವ, ಸ್ವಪಾದಸಂಗಾತ್ = ತನ್ನ ಕಾಲುಗಳ (ಕಿರಣಗಳ) ಸಂಬಂಧದಿಂದ, ಪೃಥಿವೀಂ ಪರಿಶೋಧಯತಾ = ಭೂಮಿಯನ್ನು ಪವಿತ್ರಗೊಳಿಸುತ್ತಿರುವ, ಪ್ರೈಧಿತತೇಜಸಾ = ಅತಿಶಯವಾಗಿ ಹೆಚ್ಚಿದ ಪ್ರಕಾಶವುಳ್ಳ, ಪ್ರಾಜ್ಞದಿವಾಕರೇಣ = ಪೂರ್ಣಪ್ರಜ್ಞರೆಂಬ ಸೂರ್ಯನಿಂದ, ರೇಜೇ = ಪ್ರಕಾಶಿಸೋಣವಾಯಿತು.

Rarest Archiver

ಸೂರ್ಯನು ಉದಯಿಸುವಾಗ ಪೂರ್ವದಿಕ್ಕಿನಲ್ಲಿದ್ದು ಅನಂತರ ಆ ದಿಕ್ಕನ್ನು ಬಿಟ್ಟು ಪಶ್ಚಿಮದ ಕಡೆಗೆ ಹೋಗುತ್ತಾ ತನ್ನ ಕಿರಣಗಳ ಸಂಬಂಧ ದಿಂದ ಭೂಮಿಯನ್ನು ಪವಿತ್ರೀಕರಿಸುತ್ತಾನೆ. ಉದಯಿಸಿ ಮೇಲಕ್ಕೆ ಬರುತ್ತಿದ್ದಂತೆ ಹೆಚ್ಚು ಹೆಚ್ಚಾದ ಪ್ರಭೆಯಿಂದ ಕೂಡಿರುತ್ತಾನೆ- ಅಂತಹ ಸೂರ್ಯನಂತೆ, ಆಚಾರ್ಯರು ರಾಜಸೇವಕನ ಮಾತನ್ನು ಕೇಳಿದ ಮೇಲೆ ಆ ಪೂರ್ವದಿಕ್ಕನ್ನು ಬಿಟ್ಟು ಪಶ್ಚಿಮದಿಕ್ಕಿಗೆ ಪ್ರಯಾಣ ಬೆಳೆಸಲಾರಂಭಿಸಿದರು. ತನ್ನ ಪಾದಗಳ ಸಂಬಂಧದಿಂದ ಭೂಮಿಯನ್ನು ಪವಿತ್ರೀಕರಿಸುತ್ತಾ ಅಧಿಕ ವಾದ ಕಾಂತಿಯುಳ್ಳವರಾಗಿ ಪ್ರಕಾಶಿಸಿದರು. ಹೀಗೆ ಸಹ್ಯಪರ್ವತದ ಕಡೆ ಯಿಂದ ಜಯಸಿಂಹರಾಜನಲ್ಲಿಗೆ ಹೊರಟ ಪ್ರಾಜ್ಞದಿವಾಕರರಾದ ಆಚಾರ್ಯರು ದಿವಾಕರನಂತೆ ವಿರಾಜಿಸಿದರು.

ಮಘವತಃ ಇಯಂ ಮಾಘವತೀ ತಾಂ, ಪ್ರಕರ್ಷೇಣ ಏಧಿತಂ ಪ್ರೈಧಿತಂ, ಪ್ರೈಧಿತಂ ತೇಜಃ ಯಸ್ಯ ಸಃ ಪ್ರೈಧಿತತೇಜಾಃ ತೇನ, ಸ್ವಸ್ಯ ಪಾದೌ (ಪಾದಾಃ) ಸ್ವಪಾದೌ (ಸ್ವಪಾದಾಃ) ಸ್ವಪಾದಯೋಃ (ಸ್ವಪಾದಾನಾಂ) ಸಂಗಃ ತಸ್ಮಾತ್, ಪ್ರಾಜ್ಞ ಏವ ದಿವಾಕರಃ ಪ್ರಾಜ್ಞದಿವಾಕರಃ ತೇನ.

ರೇಜೇ ರಾಜೃ ದೀಪ್ತೌ (to shine) ಅಕ. ಸೇಟ್, ಲಿಟ್. ಇದು ಭಾವೇಪ್ರಯೋಗ, ಆದುದರಿಂದ ರೇಜೇ ಎಂದು ಒಂದೇ ರೂಪ (ತೇನ ರೇಜೇ- ತಾಭ್ಯಾಂ ರೇಜೇ- ತೈಃ ರೇಜೇ) ಹೀಗೆ.

ದಾರಿಯಲ್ಲಿ ಬರುತ್ತಿರುವ ಆಚಾರ್ಯರನ್ನು ಗಂಗಾಪ್ರವಾಹಕ್ಕೆ ಹೋಲಿಸುತ್ತಿದ್ದಾರೆ—

ಅಶುಭಾನಪಹಾಯ ಮಾಯಿಜುಷ್ಟಾನ-
ಧಮಾದ್ರೀನಿವ ಗೋತ್ರನಿಮ್ನಗೌಘೈಃ ।
ಸುಜನೈಸ್ತರಸಾಭಿಗಮ್ಯಮಾನಃ
ಪರಮಸ್ನೇಹತಯಾ ಕ್ರಮಪ್ರಸನ್ನೈಃ ॥೪॥

ಅಯಂ ಪರಮಾನಂದಸುತೀರ್ಥಸೂರಿರಾಜಃ ಮಾಯಿಜುಷ್ಟಾನ್ ಅಶುಭಾನ್ ಅಧಮಾದ್ರೀನ್ ಇವ ಅಪಹಾಯ ಪರಮಸ್ನೇಹತಯಾ ಕ್ರಮ

Rarest Archiver

ಪ್ರಸನ್ನೈಃ ಗೋತ್ರನಿಮ್ನಗೌಘೈಃ ಇವ ಸುಜನೈಃ ತರಸಾ ಅಭಿಗಮ್ಯಮಾನಃ ಸುರಸಿಂಧೋಃ ಸಂತತಪ್ರವಾಹಃ ಇವ ವಿಬಭೌ.

ಅಯಂ ಪರಮಾನಂದಸುತೀರ್ಥಸೂರಿರಾಜಃ=ಇಂತಹ, ಪರಮಾನಂದ ಕರವಾದ ಶಾಸ್ತ್ರವನ್ನು ರಚಿಸಿದ ವಿದ್ವಾಂಸರಲ್ಲಿ ಶ್ರೇಷ್ಠರಾದ ಶ್ರೀಮಧ್ವಾ ಚಾರ್ಯರು, ಮಾಯಿಜುಷ್ಟಾನ್ = ಮಾಯಾವಾದಿಗಳಿಂದ ವಶೀಕೃತವಾದ (ಕಳ್ಳರು ಮುಂತಾದ ದುಷ್ಟರಿಂದ ಸೇವಿಸಲ್ಪಟ್ಟ), ಅಶುಭಾನ್= ದುರ್ಜನ ರನ್ನು, ಅಧಮಾದ್ರೀನ್ ಇವ = ಚಿಕ್ಕಬೆಟ್ಟಗಳನ್ನೆಂಬಂತೆ, ಅಪಹಾಯ = ಬಿಟ್ಟು, ಪರಮಸ್ನೇಹತಯಾ= ಅತಿಶಯವಾದಸ್ನೇಹದಿಂದ, (ಸ್ವಾಭಾವಿಕ ವಾದ ದ್ರವತ್ವದಿಂದ), ಕ್ರಮಪ್ರಸನ್ನೈಃ=ದರ್ಶನಸಂಭಾಷಣಾದಿಕ್ರಮದಿಂದ ಸಮಾಧಾನಗೊಂಡ (ಕ್ರಮವಾಗಿ ತಿಳಿಯಾದ), ಗೋತ್ರನಿಮ್ನಗೌಘೈಃ ಇವ = ಗಿರಿನದಿಗಳ ಪ್ರವಾಹಗಳಿಂದ ಎಂಬಂತೆ, ಸುಜನೈಃ=ಸಜ್ಜನರಿಂದ, ತರಸಾ = ವೇಗದಿಂದ, ಅಭಿಗಮ್ಯಮಾನಃ = ಎದುರುಗೊಳ್ಳಲ್ಪಡುವವರಾಗಿ, ಸುರಸಿಂಧೋಃ= ದೇವಗಂಗೆಯ, ಸಂತತಪ್ರವಾಹಃ ಇವ= ನಿರಂತರಪ್ರವಾಹ ದಂತೆ, ವಿಬಭೌ = ಪ್ರಕಾಶಿಸಿದರು.

ದೇವಗಂಗೆಯ ಪ್ರವಾಹವು ದುಷ್ಟರೂ ಕಳ್ಳರೂ ವಾಸಿಸುವ ಸಣ್ಣ ಪುಟ್ಟ ಬೆಟ್ಟಗಳನ್ನು ತ್ಯಜಿಸಿ, ತತ್ಕಾಲದಲ್ಲಿ ಕದಡಿ ಕೆಸರಾಗಿದ್ದರೂ ಉತ್ತಮ ವಾದ ದ್ರವರೂಪವುಳ್ಳದ್ದಾದುದರಿಂದ ಕಾಲಕ್ರಮದಲ್ಲಿ ತಿಳಿಯಾದ ಬೆಟ್ಟದ ಝುರಿಗಳಿಂದ ಬೇಗನೆ ಹಿಂಬಾಲಿಸಲ್ಪಡುತ್ತಾ, ಹೆಚ್ಚಾಗಿ ವಿರಾಜಿಸುತ್ತಾ ಹರಿಯುತ್ತದೆ. ಹಾಗೆಯೇ ಶ್ರೀಮಧ್ವಾಚಾರ್ಯರು ಮಾಯಾವಾದಿಗಳು ತಮ್ಮ ಸ್ವಾಧೀನರನ್ನಾಗಿ ಮಾಡಿಕೊಂಡ ದುರ್ಜನರನ್ನು ತ್ಯಜಿಸಿ ತಮ್ಮಲ್ಲಿ ಅತಿ ಪ್ರೀತಿಯಿಂದ ಕ್ರಮವಾಗಿ ಪ್ರಸನ್ನರಾದ ಸಜ್ಜನರಿಂದ ಹಿಂಬಾಲಿಸ ಲ್ಪಡುತ್ತಾ ಗಂಗೆಯ ಪ್ರವಾಹದಂತೆ ಶೋಭಿಸಿದರು.

ನ ಶುಭಾಃ ಅಶುಭಾಃ ತಾನ್, ಮಾಯಾ ಏಷಾಂ ಅಸ್ತೀತಿ ಮಾಯಿನಃ ಮಾಯಿಭಿಃ ಜುಷ್ಟಾಃ ತಾನ್, ಅಧಮಾಶ್ಚ ತೇ ಅದ್ರಯಶ್ಚ ಅಧಮಾದ್ರಯಃ ತಾನ್, ಗೋತ್ರಾಣಾಂ ನಿಮ್ನಗಾಃ ಗೋತ್ರನಿಮ್ನಗಾಃ, ಗೋತ್ರನಿಮ್ನ-

Rarest Archiver

ಗಾನಾಂ ಓಘಾಃ ಗೋತ್ರನಿಮ್ನಗೌಘಾಃ ತೈಃ; ಶೋಭನಾಶ್ಚ ತೇ ಜನಾಶ್ಚ ಸುಜನಾಃ ತೈಃ, ಪರಮಃ ಸ್ನೇಹಃ ಯೇಷಾಂ ತೇ ಪರಮಸ್ನೇಹಾಃ, ತೇಷಾಂ ಭಾವಃ ಪರಮಸ್ನೇಹತಾ ತಯಾ, ಕ್ರಮೇಣ ಪ್ರಸನ್ನಾಃ ತೈಃ.

ಸುಮನಃಫಲಶೋಭಿನೋಽತ್ರ ಪುಂಸೋ
ನಮಯನ್ ಗೋಭಿರನೋಕಹಾನಿವೋಚ್ಚಾನ್
ಅಪಿ ಭಂಗಮುಪಾನಯನ್ನಮ್ರಾನ್
ದೃಢಭಾವಾನ(ದ)ಪರಾನವಾರ್ಯವೀರ್ಯಃ ||೫||

ಅಯಂ ಅತ್ರ ಉಚ್ಚಾನ್ ಸುಮನಃ ಫಲಶೋಭಿನಃ ಪುಂಸಃ ಅನೋಕಹಾನ್ ಇವ ಗೋಭಿಃ ನಮಯನ್ ದೃಢಭಾವಾನ್ (ತ್) ಅನಮ್ರಾನ್ ಅಪರಾನ್ ಭಂಗಂ ಅಪಿ ಉಪಾನಯನ್ ಅವಾರ್ಯವೀರ್ಯಃ ಸನ್ ವಿಬಭೌ.

ಅಯಂ = ಈ ಮಧ್ವಾಚಾರ್ಯರು, ಅತ್ರ = ಈ ಲೋಕದಲ್ಲಿ, ಉಚ್ಚಾನ್=ಉತ್ತಮರಾದ (ಎತ್ತರವಾದ), ಸುಮನಃ=ಒಳ್ಳೆಯ ಮನಸ್ಸಿನ, ಫಲ = ಪ್ರಯೋಜನವಾದ ಜ್ಞಾನಭಕ್ತಿವೈರಾಗ್ಯಗಳಿಂದ, ಶೋಭಿನಃ = ಪ್ರಕಾಶಿಸುವ (ಹೂವುಹಣ್ಣುಗಳಿಂದ ವಿರಾಜಿಸುವ), ಪುಂಸಃ=ಸಜ್ಜನರನ್ನು, ಅನೋಕಹಾನ್ ಇವ = ಮರಗಳನ್ನು ಎಂಬಂತೆ, ಗೋಭಿಃ = ಮಾತುಗಳಿಂದ (ನೀರಿನಿಂದ), ನಮಯನ್ = ವಿಧೇಯರನ್ನಾಗಿ ಮಾಡುತ್ತಾ (ಬಗ್ಗಿಸುತ್ತಾ) ದೃಢಭಾವಾನ್ = ಸ್ಥಿರಸ್ವಭಾವವುಳ್ಳ (ಸ್ಥಿರಸ್ವಭಾವದಿಂದ), ಅನಮ್ರಾನ್ = ಅವಿಧೇಯರಾದ (ಬಾಗದಿರುವ), ಅಪರಾನ್ = ಇತರಜನರನ್ನು (ಬೇರೆವೃಕ್ಷಗಳನ್ನು), ಭಂಗಂ ಅಪಿ = ಸೋಲನ್ನೂ, ಮುರಿದುಹೋಗುವಿಕೆಯನ್ನೂ, ಉಪಾನಯನ್ = ಹೊಂದಿಸುತ್ತಾ, ಅವಾರ್ಯವೀರ್ಯಃ ಸನ್ = ತಡೆಯಲಾಗದ ಸಾಮರ್ಥ್ಯವುಳ್ಳವರಾಗಿ, ವಿಬಭೌ = ಪ್ರಕಾಶಿಸಿದರು.

ಗಂಗಾಪ್ರವಾಹವು ತನ್ನ ವೇಗದಿಂದ ಹೂವುಹಣ್ಣುಗಳಿಂದ ಕೂಡಿದ ಎತ್ತರವಾದ ಮರಗಳನ್ನೂ ಬಗ್ಗಿಸುತ್ತದೆ. ಬೆಳೆದುಗಟ್ಟಿಯಾಗಿರುವ ಬಾಗದೆ ಇರುವ ಮರಗಳನ್ನು ಬುಡದ ಮಣ್ಣನ್ನು ಕೊರೆದು ಉರುಳಿಸಿ ತುಂಡರಿಸುತ್ತದೆ. ಹಾಗೆಯೇ ಶ್ರೀಮಧ್ವಾಚಾರ್ಯರು ಜ್ಞಾನಭಕ್ತಿವೈರಾಗ್ಯಸಂಪನ್ನರಾದ

Rarest Archives

ಉತ್ತಮಜೀವರನ್ನು ಒಳ್ಳೆಯ ಉಪದೇಶದಿಂದ ತಮ್ಮಲ್ಲಿ ಭಕ್ತಿಯುಳ್ಳವರನ್ನಾಗಿ ಮಾಡಿದರು. ದುರಾಗ್ರಹಿಗಳಾಗಿ ತಮ್ಮ ದುಷ್ಟಸ್ವಭಾವವನ್ನು ಬದಲಿಸದೆ ಇರುವ ಅವಿಧೇಯರನ್ನು ಸೋಲಿಸಿ, ಅಪ್ರತಿಮಸಾಮರ್ಥ್ಯಶಾಲಿಗಳಾಗಿ ವಿರಾಜಿಸಿದರು.

ಸು ಶೋಭನಂ ಚ ತತ್ ಮನಶ್ಚ ಸುಮನಃ, ಸುಮನಸಃ ಫಲಾನಿ ಸುಮನಃಫಲಾನಿ, ಶೋಭಂತೇ ಇತಿ ಶೋಭಿನಃ, ಸುಮನಃಫಲೈಃ ಶೋಭಿನಃ ತಾನ್, ಸುಮನಾಂಸಿ ಚ ಫಲಾನಿ ಚ ಸುಮನಃಫಲಾನಿ, ಸುಮನಃಫಲೈಃ ಶೋಭಿನಃ ತಾನ್, ನ ನಮ್ರಾಃ ಅನಮ್ರಾಃ ತಾನ್, ದೃಢಃ ಭಾವಃ ಯೇಷಾಂ ತೇ ದೃಢಭಾವಾಃ ತಾನ್, ದೃಢಶ್ಚಾಸೌ ಭಾವಶ್ಚ ದೃಢಭಾವಃ ತಸ್ಮಾತ್, ವಾರಯಿತುಂ ಶಕ್ಯಂ ವಾರ್ಯಂ, ನ ವಾರ್ಯಂ ಅವಾರ್ಯಂ, ಅವಾರ್ಯಂ ವೀರ್ಯಂ ಯಸ್ಯ ಸಃ,

ಗಮನೋತ್ಸವವಿಸ್ಮಿತೈರ್ನಿಷೇವ್ಯೋ
ವಿವಿಧೈರ್ಜಾನಪದೈರ್ಜನೈರಜಸ್ರಂ ।
ಪರಿಸೃತ್ವರಕೀರ್ತಿರಾರ್ತಿಮುಕ್ತ್ಯೈ
ಪುರುಷೈರ್ದೂರಭುವಶ್ಚ (ಭವೈಶ್ಚ) ಗಮ್ಯಮಾನಃ ॥೬॥

ಅಯಂ ಗಮನೋತ್ಸವವಿಸ್ಮಿತೈಃ ವಿವಿಧೈಃ ಜಾನಪದೈಃ ಜನೈಃ ಅಜಸ್ರಂ ನಿಷೇವ್ಯಃ ಪರಿಸೃತ್ವರಕೀರ್ತಿಃ ಆರ್ತಿಮುಕ್ತ್ಯೈ ದೂರಭುವಶ್ಚ (ದೂರಭವೈಶ್ಚ) ಪುರುಷೈಃ ಗಮ್ಯಮಾನಃ ವಿಬಭೌ.

ಅಯಂ = ಈ ಮಧ್ವಾಚಾರ್ಯರು, ಗಮನೋತ್ಸವ = ಪ್ರಯಾಣವೆಂಬ ಉತ್ಸವದಿಂದ, ವಿಸ್ಮಿತೈಃ = ಆಶ್ಚರ್ಯಗೊಂಡ, ವಿವಿಧೈಃ = ನಾನಾ ಪ್ರಕಾರದ, ಜಾನಪದೈಃ = ಗ್ರಾಮಗಳಲ್ಲಿರುವ, ಜನೈಃ = ಜನರಿಂದ, ಅಜಸ್ರಂ = ನಿರಂತರವಾಗಿ, ನಿಷೇವ್ಯಃ = ಸೇವಿಸಲು ಯೋಗ್ಯರಾಗಿ, ಪರಿಸೃತ್ವರಕೀರ್ತಿಃ = ಹರಡುವ ಸ್ವಭಾವದ ಕೀರ್ತಿಉಳ್ಳವರಾಗಿ, ಆರ್ತಿ-ಮುಕ್ತ್ಯೈ = ಸಂಸಾರದುಃಖದ ಬಿಡುಗಡೆಗಾಗಿ, ದೂರಭುವಶ್ಚ = ದೂರದ ಪ್ರದೇಶದಿಂದಲೂ, (ದೂರಭವೈಶ್ಚ = ದೂರದೇಶವಾಸಿಗಳಾದ), ಪುರುಷೈಃ

Rarest Archiver

= ಮನುಷ್ಯರಿಂದ, ಗಮ್ಯಮಾನಃ = ಹೊಂದಲ್ಪಡುವವರಾಗಿ, ವಿಬಭೌ = ಪ್ರಕಾಶಿಸಿದರು.

ಗಂಗಾಪ್ರವಾಹವು ಭೋರ್ಗರೆಯುತ್ತಾ ಹರಿಯುವುದನ್ನು ನೋಡಿ ಆಶ್ಚರ್ಯಪಡುತ್ತಿರುವ ಅನೇಕ ಹಳ್ಳಿ ಮತ್ತು ಪಟ್ಟಣಗಳ ಜನರು ಅದನ್ನು ಸ್ನಾನಾದಿಗಳಿಂದ ಸೇವಿಸುತ್ತಾರೆ. ಪಾಪನಿವಾರಕವೆಂದು ಪ್ರಸಿದ್ಧವಾದ ಕೀರ್ತಿಯುಳ್ಳ ಆ ಗಂಗಾಜಲವನ್ನು ದೂರದೇಶದಿಂದ ಬಂದು ಸೇವಿಸುತ್ತಾರೆ. ಹಾಗೆಯೇ ಶ್ರೀಮಧ್ವಾಚಾರ್ಯರ ಉತ್ಸವದಂತಹ ಪ್ರಯಾಣವನ್ನು ನೋಡಿ ಆಶ್ಚರ್ಯಪಟ್ಟ ಬೇರೆ ಬೇರೆ ಹಳ್ಳಿಪಟ್ಟಣಗಳ ಜನರು ನಿರಂತರವಾಗಿ ಅವರನ್ನು ಸೇವಿಸಲು ಬರುತ್ತಿದ್ದರು. ಎಲ್ಲಾ ಕಡೆ ಹರಡಿದ ಅವರ ಕೀರ್ತಿಯನ್ನು ಕೇಳಿ ದೂರದೇಶದ ಜನರೂ ತಮ್ಮ ಸಂಸಾರದುಃಖನಿವೃತ್ತಿಗಾಗಿ ಅವರನ್ನು ಸಮೀಪಿಸಿ ಸೇವಿಸುತ್ತಿದ್ದರು. ಹೀಗೆ ಪ್ರಯಾಣಮಾಡುತ್ತಿರುವ ಆಚಾರ್ಯರು ಗಂಗಾಪ್ರವಾಹದಂತೆ ವಿರಾಜಿಸಿದರು.

ಗಮನಂ ಇತಿ ಉತ್ಸವಃ, ಗಮನೋತ್ಸವೇನ ವಿಸ್ಮಿತಾಃ ತೈಃ, ನಿಷೇವಿತುಂ ಯೋಗ್ಯಃ ನಿಷೇವ್ಯಃ, ಜನಪದೇ ಭವಾಃ ಜಾನಪದಾಃ ತೈಃ, ಪರಿಸೃತ್ವರೀ ಕೀರ್ತಿಃ ಯಸ್ಯ ಸಃ, ಆರ್ತೇಃ ಮುಕ್ತಿಃ ತಸ್ಯೈ, ದೂರಾ ಚ ಸಾ ಭೂಶ್ಚ ದೂರಭೂಃ ತಸ್ಯಾಃ ದೂರಭುವಃ, (ದೂರೇ ಭವಂತಿ ಇತಿ ದೂರಭವಾಃ ತೈಃ).

ಅಮರ್ತ್ಯೈರಮರಾನುಗೈರ್ಮುನೀಂದ್ರೈ-
ರಪರೇಕ್ಷಾವಿಷಯೈಶ್ಚ ಸೇವ್ಯಮಾನಃ ।
ಹರಿಪಾದಸರೋಜಸಂಗಸಾರೋ
ಭುವನೇ ಪಾವನಪಾವನೋ ನಿಕಾಮಂ ॥೭॥

(ಅಯಂ) ಅಪರೇಕ್ಷಾವಿಷಯೈಃ ಅಮರ್ತ್ಯೈಃ ಅಮರಾನುಗೈಃ ಮುನೀಂದ್ರೈಃ ಚ ಸೇವ್ಯಮಾನಃ (ಸನ್) ನಿಕಾಮಂ ಹರಿಪಾದಸರೋಜಸಂಗಸಾರಃ ಭುವನೇ ಪಾವನಪಾವನಃ (ಸನ್) ವಿಬಭೌ ।

ಅಯಂ = ಈ ಮಧ್ವಾಚಾರ್ಯರು, ಅಪರೇಕ್ಷಾ = ಮನುಷ್ಯಾದಿಗಳ ದೃಷ್ಟಿಗೆ, ಅವಿಷಯೈಃ = ಗೋಚರಿಸದಿರುವ, ಅಮರ್ತ್ಯೈಃ = ದೇವತೆಗಳಿಂದ,

Rarest Archive

ಅಮರಾನುಗೈಃ = ದೇವತೆಗಳ ಸೇವಕರಿಂದ (ಯಕ್ಷಗಂಧರ್ವಾದಿಗಳಿಂದ) ಮುನೀಂದ್ರೈಶ್ಚ = ಮುನಿಶ್ರೇಷ್ಠರಿಂದಲೂ, ಸೇವ್ಯಮಾನಃ (ಸನ್) = ಸೇವಿಸಲ್ಪಡುವವರಾಗಿ, ನಿಕಾಮಂ = ಅತಿಶಯವಾಗಿ, ಹರಿಪಾದಸರೋಜ = ವಿಷ್ಣುವಿನ ಪಾದಕಮಲಗಳ, ಸಂಗಸಾರಃ = ಸಂಬಂಧದಿಂದ ಶ್ರೇಷ್ಠರಾಗಿ, ಭುವನೇ = ಲೋಕದಲ್ಲಿ, ಪಾವನಪಾವನಃ ಸನ್ = ಪವಿತ್ರವಾದ ವಸ್ತುಗಳಿಗಿಂತಲೂ, ಪವಿತ್ರರಾಗಿ, ವಿಬಭೌ = ಪ್ರಕಾಶಿಸಿದರು.

ಮನುಷ್ಯರಿಗೆ ಕಾಣದ ದೇವತೆಗಳೂ, ಯಕ್ಷಗಂಧರ್ವಾದಿಗಳೂ ಮುನಿಶ್ರೇಷ್ಠರೂ ಗಂಗೆಯನ್ನು ಸೇವಿಸುತ್ತಾರೆ. ವಿಷ್ಣುವಿನ ಪಾದದಿಂದ ಹುಟ್ಟಿದ ಗಂಗಾಪ್ರವಾಹವು ಪವಿತ್ರವಸ್ತುಗಳಲ್ಲಿಯೂ ಪವಿತ್ರವಾದುದು. ಅದರಂತೆಯೇ ಶ್ರೀಮಧ್ವಾಚಾರ್ಯರು ಮಾನವರಿಗೆ ಗೋಚರಿಸದ ದೇವತೆಗಳೂ ಗಂಧರ್ವಾದಿಗಳು ಮತ್ತು ಮುನಿಶ್ರೇಷ್ಠರಿಂದ ಸೇವಿಸಲ್ಪಡುತ್ತಾ ಶ್ರೀಮನ್ನಾರಾಯಣನ ಪಾದಕಮಲದ ನಿರಂತರಧ್ಯಾನದಿಂದ ಜೀವೋತ್ತಮರಾಗಿ, ಲೋಕದ ಪವಿತ್ರವಸ್ತುಗಳನ್ನೂ ಪವಿತ್ರಗೊಳಿಸುತ್ತಾ ಗಂಗಾಪ್ರವಾಹದಂತೆ ವಿರಾಜಿಸಿದರು.

ನ ಪರೇ ಅಪರೇ, ಅಪರೇಷಾಂ ಈಕ್ಷಾ ಅಪರೇಕ್ಷಾ, ನ ವಿಷಯಾಃ ಅವಿಷಯಾಃ ಅಪರೇಕ್ಷಾಯಾಃ ಅವಿಷಯಾಃ ಅಪರೇಕ್ಷಾವಿಷಯಾಃ ತೈಃ, ಹರೇಃ ಪಾದಾವೇವ ಸರೋಜೇ ಹರಿಪಾದಸರೋಜೇ, ತಯೋಃ ಸಂಗಃ, ಹರಿಪಾದಸರೋಜಸಂಗೇನ ಸಾರಃ, ಪಾವಯತೀತಿ ಪಾವನಃ ಪಾವನಾತ್ ಪಾವನಃ, ಪಾವನೇಷು ಪಾವನಃ.

ಅಯಮಪ್ರತಿವಾರಣಃ ಪ್ರಯಾಣೇ
ಪರಮಾನಂದಸುತೀರ್ಥಸೂರಿರಾಜಃ ।
ವಿಬಭಾವತಿವೇಲಮಚ್ಛರೂಪಃ
ಸುರಸಿಂಧೋರಿವ ಸಂತತಪ್ರವಾಹಃ ॥೮॥

ಅಚ್ಛರೂಪಃ ಅಪ್ರತಿವಾರಣಃ ಅಯಂ ಪರಮಾನಂದಸುತೀರ್ಥಸೂರಿರಾಜಃ ಪ್ರಯಾಣೇ ಸುರಸಿಂಧೋಃ ಸಂತತಪ್ರವಾಹಃ ಇವ ಅತಿವೇಲಂ ವಿಬಭೌ.

Rarest Archiver

ಅಚ್ಛರೂಪಃ=ಸ್ವಚ್ಛವಾದ ಸ್ವರೂಪವುಳ್ಳ (ದೋಷವಿಲ್ಲದ ರೂಪವುಳ್ಳ) ಬೆಳ್ಳಗಿರುವ ರೂಪವುಳ್ಳ, ಅಪ್ರತಿವಾರಣಃ=ತಡೆಯುವವರಿಲ್ಲದ, ತಡೆಯಿಲ್ಲದ, ಅಯಂ ಪರಮಾನಂದಸುತೀರ್ಥಸೂರಿರಾಜಃ=ಈ ಜೀವೋತ್ತಮರಾದ ಆನಂದತೀರ್ಥರೆಂಬ ಪಂಡಿತಶ್ರೇಷ್ಠರು, ಪ್ರಯಾಣೇ=ಪ್ರಯಾಣ ಕಾಲದಲ್ಲಿ, ಸುರಸಿಂಧೋಃ=ಗಂಗೆಯ, ಸಂತತಪ್ರವಾಹಃ ಇವ=ಎಡೆಬಿಡದ ಪ್ರವಾಹದಂತೆ, ಅತಿವೇಲಂ=ಅತಿಶಯವಾಗಿ, ವಿಬಭೌ=ವಿರಾಜಿಸಿದರು.

ಎಲ್ಲೆಲ್ಲಿಯೂ ತಡೆಯಿಲ್ಲದ ನಿರ್ಮಲವಾದ ಗಂಗಾಪ್ರವಾಹವು ವಿಚ್ಛೇದವಿಲ್ಲದೆ ಹರಿಯುತ್ತಾ ವಿರಾಜಿಸುವಂತೆ ತನ್ನನ್ನು ತಡೆಯುವ ವಾದಿಗಳಿಲ್ಲದ ನಿರ್ಮಲಾಕೃತಿಯಿಂದ ಕೂಡಿದ ಶ್ರೀಮತ್‌ಆನಂದತೀರ್ಥರೆಂಬ ಜ್ಞಾನಿವರೇಣ್ಯರು ಪ್ರಯಾಣಮಾಡುತ್ತಾ ಚೆನ್ನಾಗಿ ವಿರಾಜಿಸಿದರು.

ನ ವಿದ್ಯತೇ ಪ್ರತಿವಾರಣಃ ಯಸ್ಯ ಸಃ, ಪರಮಃ (ಉತ್ತಮಃ) ಆನಂದಃ ಯಸ್ಮಾತ್ ತತ್ ಪರಮಾನಂದಂ, ಪರಮಾನಂದಂ ಸು ಶೋಭನಂ ತೀರ್ಥಂ ಯಸ್ಮಾತ್ ಸಃ ಪರಮಾನಂದಸುತೀರ್ಥಃ, ಸೂರೀಣಾಂ ರಾಜಾ ಸೂರಿರಾಜಃ ಪರಮಾನಂದಸುತೀರ್ಥಶ್ಚಾಸೌ ಸೂರಿರಾಜಶ್ಚ, ಸುರಾಣಾಂ ಸಿಂಧುಃ, ಸುರಸಿಂಧುಃ ತಸ್ಯ, ಸಂತತಶ್ಚಾಸೌ ಪ್ರವಾಹಶ್ಚ ॥

ಆಚಾರ್ಯರು ಜಯಸಿಂಹರಾಜನ ರಾಜ್ಯಕ್ಕೆ ಬಂದರು—

ಸಮಯೇನ ಗತೋಽಮಹೀಯಸಾಸೌ
ವಿಷಯಂ ಸ್ತಂಭಪದೋಪಸರ್ಜನಾಖ್ಯಂ ।
ಮದನಾಧಿಪತೇಃ ಸುಧಾಮ ಧಾಮ
ಪ್ರವಿವೇಶಾಖಿಲಲೋಕವಂದನೀಯಂ ॥೯॥

ಅಸೌ ಅಮಹೀಯಸಾ ಸಮಯೇನ ಸ್ತಂಭಪದೋಪಸರ್ಜನಾಖ್ಯಂ ವಿಷಯಂ ಗತಃ ಸುಧಾಮ ಮದನಾಧಿಪತೇಃ ಅಖಿಲಲೋಕವಂದನೀಯಂ ಧಾಮ ಪ್ರವಿವೇಶ.

ಅಸೌ=ಈ ಮಧ್ವಾಚಾರ್ಯರು, ಅಮಹೀಯಸಾ ಸಮಯೇನ=ಸ್ವಲ್ಪವೇ ಕಾಲದಿಂದ, ಸ್ತಂಭಪದ=ಕಬೆ(ನಾಡು) ಎಂಬ ಪದವು, ಉಪ-

ಸರ್ಜನಾಖ್ಯ = ವಿಶೇಷಣವಾಗಿಉಳ್ಳ, ಹೆಸರುಳ್ಳ, ವಿಷಯಂ = ದೇಶವನ್ನು ಕುರಿತು, ಗತಃ ಸನ್ = ಹೋದವರಾಗಿ, ಸುಧಾಮ = ಒಳ್ಳೆಯ ಕಾಂತಿ ಯುಳ್ಳ, ಮದನಾಧಿಪತೇಃ = ಮದನೇಶ್ವರ ಎಂಬ ಈಶ್ವರನ, ಅಖಿಲಲೋಕ = ಎಲ್ಲಾ ಜನರಿಂದ, ವಂದನೀಯಂ = ನಮಸ್ಕರಿಸಲು ಯೋಗ್ಯವಾದ, ಧಾಮ = ದೇವಾಲಯವನ್ನು, ಪ್ರವಿವೇಶ = ಪ್ರವೇಶಿಸಿದರು.

ಆಚಾರ್ಯರು ಸ್ವಲ್ಪವೇ ಸಮಯದಲ್ಲಿ 'ಕಬಿನಾಡು' ಎಂದು ಪ್ರಸಿದ್ಧ ವಾದ ಜಯಸಿಂಹನ ದೇಶಕ್ಕೆ ಬಂದರು. ಅಲ್ಲಿ ಮದನೇಶ್ವರನೆಂಬ ಈಶ್ವರನ ದೇವಾಲಯವು ವಿರಾಜಿಸುತ್ತಿತ್ತು. ಎಲ್ಲಾ ಜನರಿಂದ ನಮಸ್ಕಾರಾರ್ಹ ವಾದ ಆ ದೇವರ ಆಲಯವನ್ನು ಆಚಾರ್ಯರು ಪ್ರವೇಶಿಸಿದರು.

ಅತಿಶಯೇನ ಮಹಾನ್ ಮಹೀಯಾನ್ ನ ಮಹೀಯಾನ್ ಅಮಹೀ-ಯಾನ್ ತೇನ, ಸ್ತಂಭ ಇತಿ ಪದಂ ಉಪಸರ್ಜನಂ ಯಸ್ಯಾಃ ಸಾ ಸ್ತಂಭ-ಪದೋಪಸರ್ಜನಾ, ಸಾ ಆಖ್ಯಾ ಯಸ್ಯ ಸಃ ಸ್ತಂಭಪದೋಪಸರ್ಜನಾಖ್ಯಃ ತಂ, ಸು ಶೋಭನಂ ಧಾಮ ಯಸ್ಯ ತತ್, ತತ್ (ಅದನ್ನು) ಅಖಿಲಾಶ್ಚ ತೇ ಲೋಕಾಶ್ಚ, ಅಖಿಲಲೋಕೈಃ ವಂದನೀಯಂ, ತತ್, ಪ್ರ + ವಿವೇಶ ವಿವಿಶತುಃ ವಿವಿಶುಃ ಪ್ರ. ಉಪ. ವಿಶ ಪ್ರವೇಶನೇ ಲಿಟ್.

ಕ್ಷಣದಾಮಿಹತಾವದೂಷಿವಾಂಸಂ
ವಿಹಿತಾಮರ್ಹಮುಖಯೋಗ್ಯಯೋಗಮೇನಂ ।
ಗಮನೋದ್ಯಮಲಕ್ಷಣೈರ್ವ್ಯಜಾನನ್
ಗಮನಾಯೋದ್ಯತಮಾಶು ಶಿಷ್ಯಸಂಘಾಃ ॥೧೦॥

ಇಹ ಕ್ಷಣದಾಂ ತಾವತ್ ಊಷಿವಾಂಸಂ ವಿಹಿತಾಮರ್ಹಮುಖಯೋಗ್ಯ-ಯೋಗಂ ಏನಂ ಶಿಷ್ಯಸಂಘಾಃ ಗಮನೋದ್ಯಮಲಕ್ಷಣೈಃ ಆಶು ಗಮನಾಯ ಉದ್ಯತಂ ವ್ಯಜಾನನ್ ॥

ಇಹ = ಈ ದೇವಾಲಯದಲ್ಲಿ, ಕ್ಷಣದಾಂ ತಾವತ್ = ರಾತ್ರಿಯೆಲ್ಲಾ, ಊಷಿವಾಂಸಂ = ವಾಸಮಾಡಿದ, ವಿಹಿತ = ಮಾಡಲ್ಪಟ್ಟ, ಅಹರ್ಮುಖ-ಯೋಗ್ಯ = ಪ್ರಾತಃಕಾಲಕ್ಕೆ ಉಚಿತವಾದ, ಯೋಗಂ = ಆಹ್ನಿಕವುಳ್ಳ,

Rarest Archiver

ಏನಂ = ಈ ಶ್ರೀಮಧ್ವಾಚಾರ್ಯರನ್ನು, ಶಿಷ್ಯಸಂಘಾಃ = ಶಿಷ್ಯಸಮೂಹಗಳು, ಗಮನೋದ್ಯಮ = ಪ್ರಯಾಣದ ಸನ್ನಾಹದ, ಲಕ್ಷಣೈಃ = ಗುರುತುಗಳಿಂದ, ಆಶು ಗಮನಾಯ = ಬೇಗನೆ ಪ್ರಯಾಣಕ್ಕೆ, ಉದ್ಯತಂ = ಉದ್ಯುಕ್ತರನ್ನಾಗಿ, ವ್ಯಜಾನನ್ = ತಿಳಿದರು

ಆಚಾರ್ಯರು ಈ ಮದನೇಶ್ವರದೇವಾಲಯದಲ್ಲಿ ಒಂದು ರಾತ್ರಿ ವಾಸಿಸಿದರು. ಉಷಃಕಾಲದಲ್ಲಿ ಎದ್ದು ಪ್ರಾತಃಕಾಲದ ಆಹ್ನಿಕಗಳನ್ನು ಪೂರೈಸಿದರು. ಆನಂತರ ಮುಂದಿನ ಪ್ರಯಾಣಕ್ಕೆ ಸಿದ್ಧರಾದರು. ಅವರ ಪ್ರಯಾಣೋದ್ಯೋಗದ ಚಿಹ್ನೆಗಳಿಂದ ಆಚಾರ್ಯರು ಪ್ರಯಾಣಹೊರಡಲು ಸಿದ್ಧರಾಗುತ್ತಿದ್ದಾರೆಂದು ಶಿಷ್ಯರು ತಿಳಿದರು.

ಊಷಿವಾಂಸಂ ಊಷಿವಾಂಸೌ ಊಷುಷಃ ಊಷಿವಸ್ ಸಕಾರಾಂತ; ಅಹರ್ಮುಖಸ್ಯ ಯೋಗ್ಯಃ ಅಹರ್ಮುಖಯೋಗ್ಯಃ, ಅಹರ್ಮುಖಯೋಗ್ಯಶ್ಚಾಸೌ ಯೋಗಶ್ಚ, ವಿಹಿತಃ ಅಹರ್ಮುಖಯೋಗ್ಯಯೋಗಃ ಯೇನ ಸಃ ವಿಹಿತಾಹರ್ಮುಖಯೋಗ್ಯಯೋಗಃ ತಂ; ಗಮನಸ್ಯ ಉದ್ಯಮಃ, ಗಮನೋದ್ಯಮಸ್ಯ ಲಕ್ಷಣಾನಿ ತೈಃ, ಶಿಷ್ಯಾಣಾಂ ಸಂಘಾಃ ತೈಃ.

ವಿ + ಅಜಾನಾತ್ ಅಜಾನೀತಾಂ ಅಜಾನನ್, ಅಜಾನಾಃ ಅಜಾನೀತಂ ಅಜಾನೀತ, ಅಜಾನಾಂ ಅಜಾನೀವ ಅಜಾನೀಮ. ಜ್ಞಾ ಅವಬೋಧನೇ to know ವಿ ಉಪ. ಪರ. ಲಙ್.

ಆಚಾರ್ಯರ ಶಿಷ್ಯರ ಪ್ರಯಾಣಸನ್ನಾಹವು ಹೇಗಿತ್ತು?

ಪುರತೋ ವಿಸೃತಾಃ ಸಮಾಧಿಶುದ್ಧ್ಯೈ
ಯತಯಸ್ತತ್ರ ಪಟೀಃ ಕಷಾಯವೇಷಾಃ ।
ಸಹಸೋದಹರನ್ ಸ್ವಯೋಗ್ಯಮುದ್ರಾ
ಯುತದಂಡಾದಿಕಧಾರಣೋದ್ಯಮೇನ ॥ ೧೧ ॥

ಯತಯಃ ತತ್ರ ಸಮಾಧಿಶುದ್ಧ್ಯೈ ಪುರತಃ ವಿಸೃತಾಃ ಕಷಾಯವೇಷಾಃ ಪಟೀಃ ಸ್ವಯೋಗ್ಯಮುದ್ರಾಯುತದಂಡಾದಿಕಧಾರಣೋದ್ಯಮೇನ ಸಹಸಾ ಉದಹರನ್.

Rarest Archiver

ಯತಯಃ = ಶ್ರೀಮಧ್ವಾಚಾರ್ಯರ ಶಿಷ್ಯರಾದ ಸನ್ಯಾಸಿಗಳು, ತತ್ರ = ಆ ದೇವಾಲಯದಲ್ಲಿ, ಸಮಾಧಿಶುದ್ಧ್ಯೈ = ಭಗವಂತನ ಧ್ಯಾನಸಮಯದ ಪವಿತ್ರತೆಗಾಗಿ, ಪುರತಃ = ಮುಂದೆ, ವಿಸೃತಾಃ = ಪರದೆಯಂತೆ ಹರಡಿದ, ಕಷಾಯವೇಷಾಃ ಪಟೀಃ = ಕಾವಿಬಣ್ಣದ ಬಟ್ಟೆಗಳನ್ನು, ಸ್ವಯೋಗ್ಯ = ತಮಗೆ ಉಚಿತವಾದ, ಮುದ್ರಾಯುತ = ಸುರಭಿ ಪರಶು ಮೊದಲಾದ ಮುದ್ರೆಗಳಿಂದ ಸಹಿತವಾದ, ದಂಡಾದಿಕ = ದಂಡ ಮತ್ತು ಪುಸ್ತಕ ಮೊದಲಾದವುಗಳ, ಧಾರಣೋದ್ಯಮೇನ = ತೆಗೆದುಕೊಳ್ಳುವ ಪ್ರಯತ್ನದಿಂದ ಕೂಡಿ, ಸಹಸಾ ಉದಹರನ್ = ಕೂಡಲೇ ಎಳೆದುಕೊಂಡರು (ತೆಗೆದರು).

ಆ ದೇವಾಲಯದಲ್ಲಿ ಶ್ರೀಮಧ್ವಾಚಾರ್ಯರ ಶಿಷ್ಯರಾದ ಯತಿಗಳು ತಮ್ಮ ಧ್ಯಾನಕ್ಕೆ ತೊಂದರೆಯಾಗದಂತೆ ಕಾವಿಬಟ್ಟೆಗಳನ್ನು ಪರದೆಯಂತೆ ಕಟ್ಟಿಕೊಂಡಿದ್ದರು. ಆಚಾರ್ಯರು ಅಲ್ಲಿಂದ ಹೊರಡುತ್ತಾರೆಂದು ತಿಳಿದ ಕೂಡಲೇ ಅವರು ಆ ಕಾವಿಬಟ್ಟೆಗಳನ್ನು ಎಳೆದು ತೆಗೆದುಕೊಂಡರು. ಅವರು ತಮಗೆ ಉಚಿತವಾದ ಸುರಭಿ (ದನದಕೆಚ್ಚಲು) ಪರಶು (ಕೊಡಲಿ) ಮುಂತಾದ ಬೇರೆಬೇರೆಯಾದ ಗುರುತುಳ್ಳ ತಮ್ಮ ತಮ್ಮ ದಂಡಗಳನ್ನೂ ಪುಸ್ತಕ ಮೊದಲಾದವಸ್ತುಗಳನ್ನೂ ತೆಗೆದುಕೊಂಡು ಪ್ರಯಾಣಕ್ಕೆ ಸನ್ನದ್ಧರಾಗಿ ಎದ್ದರು.

ಸಮಾಧೇಃ ಶುದ್ಧಿಃ ತಸ್ಯೈ, ಕಷಾಯಃ ವೇಷಃ ಯಾಸಾಂ ತಾಃ, (ತಾಃ=ಅವುಗಳನ್ನು) ಸ್ವೇಷಾಂ ಯೋಗ್ಯಾಃ ಸ್ವಯೋಗ್ಯಾಃ, ಸ್ವಯೋಗ್ಯಾಶ್ಚ ತಾಃ ಮುದ್ರಾಶ್ಚ ಸ್ವಯೋಗ್ಯಮುದ್ರಾಃ, ತಾಭಿಃ ಯುತಾಃ ಸ್ವಯೋಗ್ಯ ಮುದ್ರಾಯುತಾಃ, ದಂಡಃ ಆದಿಃ ಯೇಷಾಂ ತೇ ದಂಡಾದಿಕಾಃ, ಸ್ವಯೋಗ್ಯಮುದ್ರಾಯುತಾಶ್ಚ ತೇ ದಂಡಾದಿಕಾಶ್ಚ, ಸ್ವಯೋಗ್ಯಮುದ್ರಾ-ಯುತದಂಡಾದಿಕಾನಾಂ ಧಾರಣಂ, ಸ್ವಯೋಗ್ಯಮುದ್ರಾಯುತದಂಡಾದಿಕ ಧಾರಣಸ್ಯ ಉದ್ಯಮಃ ಸ್ವಯೋಗ್ಯಮುದ್ರಾಯುತದಂಡಾದಿಕಧಾರಣೋ-ದ್ಯಮಃ ತೇನ.

ಉದ್-ಅಹರತ್ ಅಹರತಾಂ ಅಹರನ್, ಅಹರಃ ಅಹರತಂ ಅಹರತ,

Rarest Archiver

ಆಹರಂ ಅಹರಾವ ಅಹರಾಮ. ಉದ್ ಉಪ-ಹೃಞ್ ಹರಣೇ to take away ಪರ. ಲಙ್.

ಅವಧಾರ್ಯವಿಶೇಷಕಾರಿಶಂಖ-
ಪ್ರಕಟಾಂಕಾನ್ ಸುಧಿಯಾ ಗತಾರ್ದ್ರಭಾವಾನ್ ।
ಲಸಿತಾ ತುಲಸೀಸ್ರಗಸ್ಯಕಂಠೇ
ಹರಿನಿರ್ಮಾಲ್ಯತಯೋಚಿತಾ ನ್ಯಧಾಯಿ ॥ ೧೨ ॥

ಸುಧಿಯಾ ಅಸ್ಯ ವಿಶೇಷಕಾರಿಶಂಖಪ್ರಕಟಾಂಕಾನ್ ಗತಾರ್ದ್ರ-ಭಾವಾನ್ ಅವಧಾರ್ಯ ಲಸಿತಾ ಹರಿನಿರ್ಮಾಲ್ಯತಯಾ ಉಚಿತಾ ತುಲಸೀ-ಸ್ರಕ್ ಅಸ್ಯ ಕಂಠೇ ನ್ಯಧಾಯಿ.

ಸುಧಿಯಾ = ಬುದ್ಧಿವಂತನಾದ (ಒಬ್ಬ ಯತಿಯಿಂದ), ಅಸ್ಯ = ಈ ಶ್ರೀಮಧ್ವಾಚಾರ್ಯರ, ವಿಶೇಷಕ = ತಿಲಕಗಳು (ಗೋಪಿಚಂದನದ ನಾಮಗಳು) ಅರಿ = ಚಕ್ರವು, ಶಂಖ = ಶಂಖವು, ಇವುಗಳ, ಪ್ರಕಟಾಂಕಾನ್ = ಸ್ಪಷ್ಟವಾದ ಚಿಹ್ನೆಗಳನ್ನು, ಗತಾರ್ದ್ರಭಾವಾನ್ = ಹೊರಟುಹೋದ ಒದ್ದೆತನವುಳ್ಳವುಗಳನ್ನಾಗಿ (ಒಣಗಿದವುಗಳನ್ನಾಗಿ), ಅವಧಾರ್ಯ = ನಿಶ್ಚಯಿಸಿ, ಲಸಿತಾ = ಶೋಭಿಸುತ್ತಿರುವ, ಹರಿನಿರ್ಮಾಲ್ಯತಯಾ = ಶ್ರೀಹರಿಯ ಪ್ರಸಾದರೂಪವಾದ ನಿರ್ಮಾಲ್ಯವಾದುದರಿಂದ, ಉಚಿತಾ = ಯೋಗ್ಯವಾದ, ತುಲಸೀಸ್ರಕ್ = ಎಳೆತುಲಸೀಮಾಲೆಯು, ಕಂಠೇ ನ್ಯಧಾಯಿ = ಕತ್ತಿನಲ್ಲಿ ಅರ್ಪಿಸಲ್ಪಟ್ಟಿತು.

ಶ್ರೀಮಧ್ವಾಚಾರ್ಯರು ಗೋಪೀಚಂದನದಿಂದ ನಾಮಗಳನ್ನೂ ಶಂಖಚಕ್ರಾದಿಮುದ್ರೆಗಳನ್ನೂ ಧರಿಸಿದ್ದರು. ಒಬ್ಬ ಬುದ್ಧಿವಂತನಾದ ಸನ್ಯಾಸಿಶಿಷ್ಯನು ಆ ನಾಮಮುದ್ರೆಗಳಚಿಹ್ನೆಗಳ ತೇವಆರಿದ್ದನ್ನು ಕಂಡು ಇನ್ನು ಆ ಚಿಹ್ನೆಗಳು ಅಳಿಸಿಹೋಗಲಾರವು ಎಂದು ತಿಳಿದು ಶ್ರೀಹರಿಗೆ ಸಮರ್ಪಿಸಿದ ಹಸಿ ತುಳಸಿಮಾಲೆಯನ್ನು ಆಚಾರ್ಯರ ಕಂಠಕ್ಕೆ ಅರ್ಪಿಸಿದನು.

ವಿಶೇಷಕಾಶ್ಚ ಅರಿಶ್ಚ ಶಂಖಶ್ಚ ವಿಶೇಷಕಾರಿಶಂಖಾಃ, ಪ್ರಕಟಾಶ್ಚ ತೇ ಅಂಕಾಶ್ಚ ಪ್ರಕಟಾಂಕಾಃ, ವಿಶೇಷಕಾರಿಶಂಖಾನಾಂ ಪ್ರಕಟಾಂಕಾಃ ತಾನ್,

Rarest Archiver

ಶೋಭನಾ ಧೀಃ ಯಸ್ಯ ಸಃ ಸುಧೀಃ ತೇನ, ಆರ್ದ್ರಸ್ಯ ಭಾವಃ ಆರ್ದ್ರಭಾವಃ ಗತಃ ಆರ್ದ್ರಭಾವಃ ಯೇಷಾಂ ತೇ ಗತಾರ್ದ್ರಭಾವಾಃ ತಾನ್, ತುಲಸ್ಯಾಃ ಸ್ರಕ್, ಹರೇಃ ನಿರ್ಮಾಲ್ಯಂ ಹರಿನಿರ್ಮಾಲ್ಯಂ, ತಸ್ಯ ಭಾವಃ ಹರಿನಿರ್ಮಾಲ್ಯತಾ ತಯಾ,

ನಿ+ಅಧಾಯಿ, ಅಧಾಯಿ ಅಧಾಯಿಷಾತಾಂ ಅಧಾಯಿಷತ, ಅಧಾಯಿಷ್ಠಾಃ ಅಧಾಯಿಷಾಥಾಂ ಅಧಾಯಿಢ್ವಂ(ಧ್ವಂ), ಅಧಾಯಿಷಿ ಅಧಾಯಿಷ್ವಹಿ ಅಧಾಯಿಷ್ಮಹಿ ನಿ ಉಪ. ಡುಧಾಞ್ (ಧಾ) ಧಾರಣಪೋಷಣಯೋಃ ಕರ್ಮಣಿ ಲುಙ್.

ಯತಧೀರ್ಗುರುಚಕ್ರಿಮೂರ್ತಿಪೂರ್ಣಂ
ಯತನಿಶ್ವಾಸವಚಾ ವಿಶೋಧ್ಯ ಪಾಣೀ
ಗುಣಕುಂಡಲಮಂಡಿತಂ ವಿಮಾನಂ
ಗುಣಬದ್ಧಂ ಕವಚಾವೃತಂ ಬಭಾರ ॥ ೧೩ ॥

ಯತನಿಶ್ವಾಸವಚಾಃ ಯತಧೀಃ ಪಾಣೀ ವಿಶೋಧ್ಯ ಗುರುಚಕ್ರಿಮೂರ್ತಿಪೂರ್ಣಂ ಗುಣಕುಂಡಲಮಂಡಿತಂ ಗುಣಬದ್ಧಂ ಕವಚಾವೃತಂ ವಿಮಾನಂ ಬಭಾರ.

ಯತನಿಶ್ವಾಸವಚಾಃ=ನಿಯಮಿತವಾದ ಉಸಿರು ಮತ್ತು ಮಾತುಗಳುಳ್ಳ, ಯತಧೀಃ=ಬೇರೆಡೆಗೆ ಹರಿಯದ ಮನಸ್ಸುಳ್ಳ ಒಬ್ಬ ಸನ್ಯಾಸಿ ಶಿಷ್ಯನು, ಪಾಣೀ=ಎರಡು ಕೈಗಳನ್ನು, ವಿಶೋಧ್ಯ=ತೊಳೆದುಕೊಂಡು, ಗುರು=ಗುರುಗಳಾದ ಶ್ರೀಮಧ್ವಾಚಾರ್ಯರ, ಚಕ್ರಿಮೂರ್ತಿ=ಚಕ್ರ ಚಿಹ್ನೆಗಳಿಂದ ಕೂಡಿರುವ ಸಾಲಿಗ್ರಾಮಗಳು ಮತ್ತು ಪ್ರತಿಮೆಗಳಿಂದ, ಪೂರ್ಣಂ=ತುಂಬಿದ, ಗುಣಕುಂಡಲ=ದಾರದ ಸುತ್ತು(ಕುಣಿಕೆ)ಗಳಿಂದ, ಮಂಡಿತಂ=ಅಲಂಕೃತವಾದ, ಗುಣಬದ್ಧಂ=ಹಗ್ಗದಿಂದ ಕಟ್ಟಲ್ಪಟ್ಟ, ಕವಚಾವೃತಂ =(ಕವಚದಂತಿರುವ) ವಸ್ತ್ರದ ಚೀಲದಿಂದ ಸುತ್ತುವರಿಯಲ್ಪಟ್ಟ, ವಿಮಾನಂ=ದೇವರಪೆಟ್ಟಿಗೆಯನ್ನು, ಬಭಾರ=ಹೊತ್ತುಕೊಂಡನು.

Rarest Archive

ಒಬ್ಬ ಸನ್ಯಾಸಿಶಿಷ್ಯನು ಮೌನವ್ರತವನ್ನು ಧರಿಸಿ, ತನ್ನ ಶ್ವಾಸವು ಪೆಟ್ಟಿಗೆಗೆ ತಗಲದಂತೆ, ಮನಸ್ಸನ್ನೂ ಬೇರೆ ಕಡೆಗೆ ಚಲಿಸದಂತೆ ಬಿಗಿಹಿಡಿದು, ತನ್ನ ಕೈಗಳನ್ನು ತೊಳೆದುಕೊಂಡು, ಆಚಾರ್ಯರ ಪೂಜೆಯ ಶಾಲಿಗ್ರಾಮ ಮತ್ತು ಪ್ರತಿಮೆಗಳಿಂದ ತುಂಬಿದ, ಹಗ್ಗ ಮತ್ತು ಕುಣಿಕೆ, (ಸುತ್ತು)ಗಳಿಂದ ಕೂಡಿರುವ, ಹಗ್ಗದಿಂದ ಬಿಗಿಯಾಗಿ ಕಟ್ಟಿ ವಸ್ತ್ರದ ಚೀಲದಲ್ಲಿ ತುಂಬಿಸಿದ್ದ ದೇವರ ಪೆಟ್ಟಿಗೆಯನ್ನು ತಲೆಯಮೇಲೆ ಹೊತ್ತುಕೊಂಡನು. (ತನ್ನ ಉಸಿರು ದೇವರ ಪೆಟ್ಟಿಗೆಗೆ ತಗಲಬಾರದು. ಬಾಯಿಯ ಎಂಜಲು ಹನಿ ಬೀಳಬಾರದು, ಎಂದು ಶ್ವಾಸಬಿಗಿಹಿಡಿದು ಮೌನವಾಗಿ ಮಡಿಯಿಂದ ದೇವರಪೆಟ್ಟಿಗೆಯನ್ನು ಶಿಷ್ಯನು ಹೊತ್ತನು ಎಂದು ಭಾವ.)

ಯತಾ ಧೀಃ ಯಸ್ಯ ಸಃ, ಚಕ್ರಾಣಶ್ಚ ಮೂರ್ತಯಶ್ಚ ಚಕ್ರಮೂರ್ತಯಃ, ಗುರೂಣಾಂ ಚಕ್ರಮೂರ್ತಯಃ ಗುರುಚಕ್ರಮೂರ್ತಯಃ, ಗುರುಚಕ್ರಮೂರ್ತಿಭಿಃ ಪೂರ್ಣಃ ತಂ, ನಿಶ್ವಾಸಶ್ಚ ವಚಶ್ಚ ನಿಶ್ವಾಸವಚಸೀ, ಯತೇ ನಿಶ್ವಾಸವಚಸೀ ಯಸ್ಯ ಸಃ, ಗುಣಸ್ಯ (ಗುಣೇನ ಕೃತೇ) ಕುಂಡಲೇ ಗುಣಕುಂಡಲೇ, ತಾಭ್ಯಾಂ ಮಂಡಿತಃ ತಂ, ಗುಣೇನ ಬದ್ಧಃ ತಂ, ಕವಚೇನ ಆವೃತಃ ತಂ.

ಬಭಾರ ಬಭ್ರತುಃ ಬಭ್ರುಃ, ಬಭರ್ಥ ಬಭ್ರಥುಃ ಬಭ್ರ, ಬಭಾರ ಬಭರ ಬಭೃವ ಬಭೃಮ ಡುಭೃಞ್ (ಭೃ) ಧಾರಣ ಪೋಷಣಯೋಃ to support, to hold, ಲಿಟ್.

ಸಕಮಂಡಲುಮಂಡಲಾವಲಂಬಂ
ಸ್ವಯಮೇವಾಲಘುಪುಸ್ತಕಾದಿಭಾರಂ ।
ಯುವಶಿಷ್ಯಗಣೋ ದಧೇ ನ ಯತ್ನಾ-
ನ್ನಹಿ ದಾಕ್ಷ್ಯಸ್ಯ ಸಮೋಽಪರೋ ಗುಣೋಽಸ್ತಿ ॥ ೧೪ ॥

ಯುವಶಿಷ್ಯಗಣಃ ಸಕಮಂಡಲುಮಂಡಲಾವಲಂಬಂ ಅಲಘುಪುಸ್ತಕಾದಿಭಾರಂ ಸ್ವಯಂ ಏವ ನ ಯತ್ನಾತ್ ದಧೇ । ದಾಕ್ಷ್ಯಸ್ಯ ಸಮಃ ಅಪರಃ ಗುಣಃ ನ ಅಸ್ತಿ ಹಿ ॥

Rarest Archives

ಯುವಶಿಷ್ಯಗಣಃ = ತರುಣರಾದ ಶಿಷ್ಯರ ಸಮೂಹವು, ಸಕಮಂಡಲು-ಮಂಡಲಾವಲಂಬಂ = ಜಲಪಾತ್ರೆಗಳ ಸಮೂಹದ ಅವಲಂಬನದಿಂದ ಕೂಡಿದ, ಅಲಘು = ಭಾರವಾದ, ಪುಸ್ತಕಾದಿಭಾರಂ = ಪುಸ್ತಕ ಮೊದಲಾದವುಗಳ ಹೊರೆಯನ್ನು, ಸ್ವಯಂ ಏವ = ತಾನಾಗಿಯೇ, ನಯತ್ನಾತ್ = ಪ್ರಯತ್ನವಿಲ್ಲದೇ, ದಧೇ = ಧರಿಸಿತು. ದಾಕ್ಷ್ಯಸ್ಯ = ದೇಹಸಾಮರ್ಥ್ಯ(ಚುರುಕುತನ)ಕ್ಕೆ, ಸಮಃ = ಸಮಾನವಾದ, ಅಪರಃ ಗುಣಃ = ಮತ್ತೊಂದು ಗುಣವು, ನ ಅಸ್ತಿ ಹಿ = ಇಲ್ಲವಷ್ಟೆ!

ಆಗ ಒಳ್ಳೆಯ ದೇಹಸಾಮರ್ಥ್ಯವುಳ್ಳ ಗುಂಪಾಗಿರುವ ಶಿಷ್ಯರು ಕಮಂಡಲುಗಳ ಸಮೂಹದಿಂದ ಕೂಡಿದ ದೊಡ್ಡ ದೊಡ್ಡ ಭಾರವಾದ ಪುಸ್ತಕಗಳ ಸಮೂಹವೇ ಮೊದಲಾದ ವಸ್ತುಗಳ ಗಂಟನ್ನು ಮತ್ತೊಬ್ಬರ ಸಹಾಯವಿಲ್ಲದೆ ತಾವೇ ತಲೆಯ ಮೇಲೆ ಹೊತ್ತು ನಡೆದರು. ಅದು ಯುಕ್ತವು. ಏಕೆಂದರೆ, ಚುರುಕುತನ ಮತ್ತು ದೇಹಸಾಮರ್ಥ್ಯಕ್ಕೆ ಸಮಾನವಾದ ಗುಣವು ಮತ್ತೊಂದಿಲ್ಲ. ಪ್ರವಾಸಸಮಯದಲ್ಲಿ ಆ ಗುಣವು ಬಹಳವಾಗಿ ಉಪಯೋಗಕ್ಕೆ ಬರತಕ್ಕದ್ದಾಗಿದೆ. ಅರ್ಥಾಂತರನ್ಯಾಸ.

ಕಮಂಡಲೂನಾಂ ಮಂಡಲಂ ಕಮಂಡಲುಮಂಡಲಂ, ತಸ್ಯ ಅವಲಂಬಃ, ಕಮಂಡಲುಮಂಡಲಾವಲಂಬೇನ ಸಹ ವರ್ತತೇ ಇತಿ ಸಕಮಂಡಲುಮಂಡಲಾವಲಂಬಃ ತಂ, ಪುಸ್ತಕಂ ಆದಿ ಯಸ್ಯ ಸಃ ಪುಸ್ತಕಾದಿಃ, ತಸ್ಯ ಭಾರಃ ಪುಸ್ತಕಾದಿಭಾರಃ, ನ ಲಘುಃ ಅಲಘುಃ, ಅಲಘುಶ್ಚಾಸೌ ಪುಸ್ತಕಾದಿಭಾರಶ್ಚ ಅಲಘುಪುಸ್ತಕಾದಿಭಾರಃ ತಂ, ಯುವಾನಶ್ಚ ತೇ ಶಿಷ್ಯಾಶ್ಚ ಯುವಶಿಷ್ಯಾಃ, ಯುವಶಿಷ್ಯಾಣಾಂ ಗಣಃ, ದಕ್ಷಸ್ಯ ಭಾವಃ ದಾಕ್ಷ್ಯಂ ತಸ್ಯ. ಮಂಡಲ = ಸಮೂಹ, 'ಸ್ಯಾನ್ಮಂಡಲಂ ದ್ವಾದಶರಾಜಕೇ ಚ ದೇಶೇ ಚ ಬಿಲ್ವೇ ಚ ಕದಂಬಕೇ ಚ'— ವಿಶ್ವ.

ದಧೇ ದಧಾತೇ ದಧಿರೇ ಇತ್ಯಾದಿ ಡುಧಾಞ್ ಧಾರಣಪೋಷಣಯೋಃ ಆತ್ಮ ಲಿಟ್.

Rarest Archiver

ಅತಿಸಂಭ್ರಮತಃ ಪರಿಭ್ರಮಂತಂ
ಭರದಾಮಾನವಲೋಕಿನಂ ಚಿರಾಯ ।
ಅನುಯೋಗಪರಂ ಮುಹುಃ ಪ್ರಮತ್ತಂ
ಜಹಸುರ್ನೂತನಶಿಷ್ಯಮತ್ರ ಕೇಚಿತ್ ॥ ೧೫ ॥

ಅತ್ರ ಕೇಚಿತ್ ಚಿರಾಯ ಭರದಾಮಾನವಲೋಕಿನಂ ಅತಿಸಂಭ್ರಮತಃ ಪರಿಭ್ರಮಂತಂ ಮುಹುಃ ಅನುಯೋಗಪರಂ ಪ್ರಮತ್ತಂ ನೂತನ ಶಿಷ್ಯಂ ಜಹಸುಃ॥

ಅತ್ರ = ಈ ಪ್ರಯಾಣಸಮಯದಲ್ಲಿ, ಕೇಚಿತ್ = ಕೆಲವು ಮಂದಿ ಶಿಷ್ಯರು, ಚಿರಾಯ = ಬಹಳಹೊತ್ತಿನವರೆಗೆ, ಭರದಾಮ = ಮೂಟೆ ಕಟ್ಟುವ ಹಗ್ಗವನ್ನು, ಅನವಲೋಕಿನಂ = ನೋಡದಿರುವ, ಅತಿಸಂಭ್ರಮತಃ = ತುಂಬಾ ಗಾಬರಿಯಿಂದ (ಅವಸರದಿಂದ, ಉದ್ವೇಗದಿಂದ), ಪರಿಭ್ರಮಂತಂ = ಹುಡುಕುತ್ತಾ ತಿರುಗುತ್ತಿರುವ, ಮುಹುಃ = ಮತ್ತೂ ಮತ್ತೂ, ಅನುಯೋಗಪರಂ = ಕೇಳುವುದರಲ್ಲಿಯೇ ಆಸಕ್ತನಾದ, ಪ್ರಮತ್ತಂ = ಜಾಗರೂಕತೆಯಿಲ್ಲದ, ನೂತನಶಿಷ್ಯಂ = ಹೊಸಶಿಷ್ಯನನ್ನು, ಜಹಸುಃ = ಪರಿಹಾಸಮಾಡಿದರು.

ಈ ಪ್ರಯಾಣಸಮಯದಲ್ಲಿ ಹೊಸಶಿಷ್ಯನೊಬ್ಬನು ಹೊರೆಯನ್ನು ಕಟ್ಟುವ ಹಗ್ಗವನ್ನು ಇಟ್ಟಿರುವ ಸ್ಥಳವನ್ನು ಮರೆತುಬಿಟ್ಟಿದ್ದನು. ಅವನು ಗಾಬರಿಯಿಂದ ಬಹಳ ಅವಸರದಿಂದ ಆ ಹಗ್ಗವನ್ನು ಹುಡುಕುತ್ತಾ ಅಲ್ಲಿಂದ ಇಲ್ಲಿಗೆ ಸುತ್ತುತ್ತಾ 'ನೀವು ಹಗ್ಗವನ್ನು ನೋಡಿದಿರೋ, ನೀವಾದರೂ ಹಗ್ಗವನ್ನು ನೋಡಿದಿರಾ?' ಎಂದು ಎಲ್ಲರನ್ನೂ ಕೇಳುತ್ತಿದ್ದನು. ಅವನನ್ನು ಕುರಿತು ಕೆಲವು ಮಂದಿ ಹಿರಿಯ ಶಿಷ್ಯರು 'ಇವನು ದೇವರನ್ನೇ ಹುಡುಕುತ್ತಿದ್ದಾನೆ. ಅಹಾ ಏನು ಸಂತೋಷ' ಎಂದು ಪರಿಹಾಸಮಾಡಿದರು.

ಅತಿಸಂಭ್ರಮೇಣ ಇತಿ ಅತಿಸಂಭ್ರಮತಃ 'ಸಂಭ್ರಮಃ ಸಾಧ್ವಸೇಽಪಿ' ಸ್ಯಾತ್– ವಿಶ್ವ. ಭರಸ್ಯ ದಾಮ ಭರದಾಮ, ಅವಲೋಕತೇ ಇತಿ ಅವಲೋಕೀ, ನ ಅವಲೋಕೀ ಅನವಲೋಕೀ, ಭರದಾಮ್ನಃ ಅನವಲೋಕೀ

ಭರದ್ವಾಜಮಾನವಲೋಕೀ ತಂ, ಅನುಯೋಗೇ ಪರಃ ಅನುಯೋಗಪರಃ ತಂ, ನೂತನಶ್ಛಾಸೌ ಶಿಷ್ಯಶ್ಚ ತಂ,

ಜಹಾಸ ಜಹಸತುಃ ಜಹಸುಃ, ಹಸೇ ಹಸನೇ- ಪರ. ನಗುವುದು, ಪರಿಹಾಸಮಾಡುವುದು, to laugh, to joke ಲಿಟ್.

ಅಥ ತತ್ ಕ್ಷಣಘಟ್ಟಿತೋರುಘಂಟಾ-
ಘನನಾದವ್ಯಪದೇಶತಃ ಪರೇಣ ।
ಅಮಿತಪ್ರಮತಿಃ ಪ್ರಚೋದಿತೋऽಸಾ-
ವಿತಿ ನಿರ್ಯತ್ಸು ನಿಜೇಷು ನಿರ್ಜಗಾಮ ॥ ೧೬ ॥

ಅಥ ಅಸೌ ಅಮಿತಪ್ರಮತಿಃ ನಿಜೇಷು ಇತಿ ನಿರ್ಯತ್ಸು ತತ್ ಕ್ಷಣ-ಘಟ್ಟಿತೋರುಘಂಟಾಘನನಾದವ್ಯಪದೇಶತಃ ಪರೇಣ ಪ್ರಚೋದಿತಃ ನಿರ್ಜಗಾಮ.

ಅಥ=ಅನಂತರ, ಅಸೌ ಅಮಿತಪ್ರಮತಿಃ=ಈ ಪೂರ್ಣಪ್ರಜ್ಞರು, ನಿಜೇಷು=ತಮ್ಮ ಶಿಷ್ಯರು, ಇತಿ ನಿರ್ಯತ್ಸು ಸತ್ಸು=ಈ ರೀತಿ ಹೊರಡುತ್ತಿರಲು, ತತ್ ಕ್ಷಣ=ಆಸಮಯದಲ್ಲಿ, ಘಟ್ಟಿತ=ಹೊಡೆಯಲ್ಪಟ್ಟ, ಉರುಘಂಟಾ=ದೊಡ್ಡಗಂಟೆಯ, ಘನನಾದ=ಘಟ್ಟಿಯಾದ ಶಬ್ದದ, ವ್ಯಪದೇಶತಃ=ನೆಪದಿಂದ (ಸೂಚನೆಯಿಂದ), ಪರೇಣ=ಮದನೇಶ್ವರನ ಅಂತರ್ಯಾಮಿಯಾದ ಶ್ರೀಹರಿಯಿಂದ, ಪ್ರಚೋದಿತಃ ಸನ್=ಪ್ರೇರಿಸಲ್ಪಟ್ಟವರಾಗಿ, ನಿರ್ಜಗಾಮ=ಹೊರಟರು.

ಹೀಗೆ ಪ್ರಯಾಣಕ್ಕೆ ಎಲ್ಲರೂ ಸಿದ್ಧರಾದರು. ಆ ಸಮಯದಲ್ಲಿ ದೇವಾಲಯದ ದೊಡ್ಡ ಘಂಟೆಯು ತನ್ನಷ್ಟಕ್ಕೆ ಸದ್ದು ಮಾಡಿತು. (ಅಥವಾ ದೇವಸ್ಥಾನಕ್ಕೆ ಬಂದ ಭಕ್ತನೋರ್ವನು ಬಾರಿಸಿರಬಹುದು.) ಆ ಘಂಟೆಯ ಶಬ್ದವನ್ನು ನಿಮಿತ್ತಮಾಡಿಕೊಂಡು, ದೇವರು ಪ್ರಯಾಣಮಂಗಳವನ್ನು ಸೂಚಿಸಿದರೆಂದು ಭಾವಿಸಿ, ಶಿಷ್ಯರೆಲ್ಲರೂ ಹೊರಡುವಾಗ ಮಧ್ವರು ತಾವೂ ಹೊರಟರು. (ಪ್ರಯಾಣಸಮಯದಲ್ಲಿ ಘಂಟೆಯ ಶಬ್ದವು ಮಂಗಳಕರವು.)

Rarest Archive

ಸ ಚಾಸೌ ಕ್ಷಣಶ್ಚ ತತ್‍ಕ್ಷಣಃ, ತತ್‍ಕ್ಷಣಂ ಘಟ್ಟಿತಾ, ತತ್‍ಕ್ಷಣ-ಘಟ್ಟಿತಾ, ಉರುಶ್ಚ ಸಾ ಘಂಟಾ ಚ ಉರುಘಂಟಾ, ತತ್‍ಕ್ಷಣಘಟ್ಟಿತಾ ಚ ಸಾ ಉರುಘಂಟಾ ಚ ತತ್‍ಕ್ಷಣಘಟ್ಟಿತೋರುಘಂಟಾ, ಘನಶ್ಚಾಸೌ ನಾದಶ್ಚ ಘನನಾದಃ, ತತ್‍ಕ್ಷಣ....ಘಂಟಾಯಾಃ ಘನನಾದಃ, ಸ ಏವ ವ್ಯಪದೇಶಃ ತಸ್ಮಾತ್, ಅಮಿತಾ ಪ್ರಮತಿಃ ಯಸ್ಯ ಸಃ;

ನಿರ್ + ಜಗಾಮ ಜಗ್ಮತುಃ ಜಗ್ಮುಃ ನಿರ್ ಉಪ. ಗಮ್‍ಲೃ ಗತೌ ಲಿಟ್.

ಪ್ರಯಾಣಮಾಡುತ್ತಿರುವ ಆಚಾರ್ಯರು ಹೇಗೆ ಕಾಣಿಸುತ್ತಿದ್ದರು ?

ಧೃತಮಾತಪವಾರಣಂ ವರೇಣ್ಯಂ
ಪ್ರತಿರಾಜಂ ತಮುಪರ್ಯುಪರ್ಯುದಾರಂ ।
ಉದಯನ್ಮಿಹಿರೋಪರಿಷ್ಠಪೂರ್ಣ-
ದ್ವಿಜರಾಜಶ್ರಿಯಮಾಯಯಾವಭೂತಾಂ ॥ ೧೭ ॥

ವರೇಣ್ಯಂ ಪ್ರತಿರಾಜಂ ತಂ ಉಪರಿ ಉಪರಿ ಧೃತಂ ಉದಾರಂ ಆತಪವಾರಣಂ ಅಭೂತಾಂ ಉದಯನ್ಮಿಹಿರೋಪರಿಷ್ಠಪೂರ್ಣದ್ವಿಜರಾಜ-ಶ್ರಿಯಂ ಆಯಯೌ ॥

ವರೇಣ್ಯಂ = ಶ್ರೇಷ್ಠರಾದ, ಪ್ರತಿರಾಜಂ ತಂ = ಯತಿಶ್ರೇಷ್ಠರಾದ ಆ ಮಧ್ವಾಚಾರ್ಯರ, ಉಪರಿ ಉಪರಿ = ಮೇಲ್ಭಾಗದಲ್ಲಿ, ಧೃತಂ = ಹಿಡಿಯಲ್ಪಟ್ಟ, ಉದಾರಂ = ಉತ್ಕೃಷ್ಟವಾದ, ಆತಪವಾರಣಂ = ಛತ್ರಿಯು, ಅಭೂತಾಂ = ಹಿಂದೆಂದೂ ಆಗದಿರುವ, ಉದಯತ್ = ಉದಯಿಸುತ್ತಿರುವ, ಮಿಹಿರ = ಸೂರ್ಯನ, ಉಪರಿಷ್ಠ = ಮೇಲ್ಭಾಗದಲ್ಲಿರುವ, ಪೂರ್ಣ-ದ್ವಿಜರಾಜ = ಪೂರ್ಣಚಂದ್ರನ, ಶ್ರಿಯಂ = ಕಾಂತಿಯನ್ನು, ಆಯಯೌ = ಹೊಂದಿತು.

ಯತಿಶ್ರೇಷ್ಠರಾದ ಶ್ರೀಮಧ್ವಾಚಾರ್ಯರು ದಾರಿ ನಡೆಯುತ್ತಿರುವಾಗ ಶಿಷ್ಯರು ಅವರ ತಲೆಯ ಮೇಲೆ ಒಂದು ಶ್ವೇತಚ್ಛತ್ರಿಯನ್ನು ಹಿಡಿದಿದ್ದರು.

Rarest Archive

ಆಗ ಉದಯಿಸುತ್ತಿರುವ ಸೂರ್ಯನ ಮೇಲ್ಗಡೆ ಹುಣ್ಣಿಮೆಯ ಚಂದ್ರನಿದ್ದರೆ ಯಾವ ಕಾಂತಿಯು ಉಂಟಾದೀತೋ ಅಂತಹ ಕಾಂತಿಯು ಉಂಟಾಯಿತು. ಮೇಲ್ಗಡೆ ಪೂರ್ಣಚಂದ್ರನಂತೆ ಶ್ವೇತಚ್ಛತ್ರಿಯು ಕಂಗೊಳಿಸುತ್ತಿತ್ತು. ಕೆಳಗಡೆ ಉದಯಿಸುವ ಸೂರ್ಯನಂತೆ ಆಚಾರ್ಯರು ಶೋಭಿಸುತ್ತಿದ್ದರು. ಆಗ ಹೋಲಿಸಿ ವರ್ಣಿಸಲು ಲೋಕದಲ್ಲಿ ಯಾವವಸ್ತುವೂ ಇರಲಿಲ್ಲ. ಒಂದು ವೇಳೆ ಉದಯಿಸುವ ಸೂರ್ಯನ ಮೇಲೆ ಹುಣ್ಣಿಮೆಯ ಚಂದ್ರನು ಕಂಗೊಳಿಸುವಂತಿದ್ದರೆ ಆ ದೃಶ್ಯವನ್ನು ಹೋಲಿಸಬಹುದಾಗಿತ್ತು. ಆದರೆ ಅಂತಹ ದೃಶ್ಯವಿರುವುದಿಲ್ಲ. ಅಂತೂ ಆ ದೃಶ್ಯಕ್ಕೆ ಸಮಾನವಾದ ದೃಶ್ಯವೇ ಇಲ್ಲ. ಇದೊಂದು ಅಭೂತೋಪಮಾ—ಎಂದು ಕವಿಗಳು ವರ್ಣಿಸಿದ್ದಾರೆ.

ಆತಪಂ ವಾರಯತೀತಿ ಆತಪವಾರಣಂ, ತತ್, ವ್ರತಿನಾಂ ರಾಜಾ ತಂ, ಉದಯಂಶ್ಚಾಸೌ ಮಿಹಿರಶ್ಚ ಉದಯನ್ಮಿಹಿರಃ, ಉಪರಿ ತಿಷ್ಠತೀತಿ ಉಪರಿಷ್ಠಃ, ದ್ವಿಜಾನಾಂ ರಾಜಾ ದ್ವಿಜರಾಜಃ, ಪೂರ್ಣಶ್ಚಾಸೌ ದ್ವಿಜ-ರಾಜಶ್ಚ ಪೂರ್ಣದ್ವಿಜರಾಜಃ, ಉದಯನ್ಮಿಹಿರೋಪರಿಷ್ಠಶ್ಚಾಸೌ ಪೂರ್ಣ-ದ್ವಿಜರಾಜಶ್ಚ, ಉದಯನ್ಮಿಹಿರೋಪರಿಷ್ಠಪೂರ್ಣದ್ವಿಜರಾಜಸ್ಯ ಶ್ರೀಃ ತಾಂ, ವ್ರತಿರಾಜಂ ತಂ ಉಪರಿ ಉಪರಿ ಎಂಬಲ್ಲಿ ಉಪರ್ಯಧ್ಯಧಸಃ ಸಾಮೀಪ್ಯೇ ಎಂದು ದ್ವಿರುಕ್ತಿ, ಉಭಸರ್ವತಸೋಃ ಕಾರ್ಯಾ ಧಿಗುಪರ್ಯಾದಿಷು ತ್ರಿಷು | ದ್ವಿತೀಯಾಮ್ರೇಡಿತಾಂತೇಷು ತತೋಽನ್ಯತ್ರಾಪಿ ದೃಶ್ಯತೇ || ಎಂಬ ವಚನದಿಂದ ದ್ವಿತೀಯಾ | ನ ಭೂತಾ ಅಭೂತಾ ತಾಂ,

ಆ + ಯಯೌ ಯಯತುಃ ಯಯುಃ ಆಙ್ ಉಪ. ಯಾ ಪ್ರಾಪಣೇ ಲಿಟ್.

ಭುವನತ್ರಯಧಾ(ಭಾ)ರಿಣಂ ಮುಕುಂದಂ
ದಧದಂತಸ್ಸ ದಧೇ ಗುರುಃ ಸ್ವಯಂ ಚ |
ಅಪಿ ಕೇನಚಿದಿತ್ಯದೋ ನ ಚಿತ್ರಂ
ನನು ಸ ಪ್ರಾಣಪತಿರ್ಬಭಾರ ತಂ ಚ ||೧೮

Rarest Archiver

ಭುವನತ್ರಯಧಾರಿಣಂ ಮುಕುಂದಂ ಅಂತಃ ದಧತ್ ಸಃ ಗುರುಃ ಸ್ವಯಂ ಚ ಕೇನಚಿತ್ ಅಪಿ ದಧೇ ಇತಿ ಅದಃ ಚಿತ್ರಂ ನ; ಸಃ ಪ್ರಾಣಪತಿಃ ತಂ ಚ ಬಭಾರ ನನು.

ಭುವನತ್ರಯಧಾರಿಣಂ = ಮೂರುಲೋಕಗಳನ್ನೂ ಹೊತ್ತಿರುವ, ಮುಕುಂದಂ = ಶ್ರೀಮನ್ನಾರಾಯಣನನ್ನು, ಅಂತಃ = ತನ್ನ ಹೃದಯದಲ್ಲಿ, ದಧತ್ = ಧರಿಸಿರುವ, ಸಃ ಗುರುಃ = ಆ ಶ್ರೀಮಧ್ವಗುರುಗಳು, ಸ್ವಯಂ ಚ = ತಾವೂ, ಕೇನಚಿತ್ ಅಪಿ = ಯಾವನೋ ಒಬ್ಬ ಮನುಷ್ಯನಿಂದಲೂ, ದಧೇ = ಧರಿಸಲ್ಪಟ್ಟರು, ಇತಿ ಅದಃ = ಹೀಗೆಂಬ ಇದು, ಚಿತ್ರಂ ನ = ಆಶ್ಚರ್ಯವಲ್ಲ. ಸಃ ಪ್ರಾಣಪತಿಃ = ಆ ಪ್ರಾಣಗಣಾಧಿನಾಯಕರಾದ ಮುಖ್ಯಪ್ರಾಣರಾದ ಆಚಾರ್ಯರು, ತಂ ಚ = ಆ ಪುರುಷನನ್ನೂ ಬಭಾರ ನನು = ಧರಿಸಿರುವರಷ್ಟೆ.

ಮೂರುಲೋಕಗಳನ್ನೂ ಧರಿಸಿರುವ ಶ್ರೀಮನ್ನಾರಾಯಣನನ್ನು ತನ್ನ ಹೃದಯದಲ್ಲಿ ಧಾರಣೆಮಾಡಿರುವ ಗುರುಗಳಾದ ಶ್ರೀಮಧ್ವರನ್ನು ಒಬ್ಬ ಸಾಮಾನ್ಯಶಿಷ್ಯನು ಹೆಗಲ ಮೇಲೆ ಧರಿಸಿಕೊಂಡು ನಡೆಯುತ್ತಿದ್ದನು. ಇದು ಆಶ್ಚರ್ಯವಲ್ಲ. ಏಕೆಂದರೆ ಮುಖ್ಯಪ್ರಾಣಸ್ವರೂಪರಾದ ಶ್ರೀಮಧ್ವಾಚಾರ್ಯರು ತನ್ನನ್ನು ಧರಿಸಿರುವ ಆ ಶಿಷ್ಯನನ್ನೂ ಕೂಡ ಅಂತರ್ಯಾಮಿಯಾಗಿ ತಾವೇ ಧರಿಸಿರುತ್ತಾರೆ. ವಿಶ್ವಂಭರಮೂರ್ತಿಯಾದ ಹರಿಯು ಗುರುಗಳ ಹೃದಯದಲ್ಲಿರುವುದರಿಂದ ಬಹಳ ಗುರುವಾಗಿರುವ ಆಚಾರ್ಯರನ್ನು ಸಾಮಾನ್ಯಮಾನವನೊಬ್ಬನು ಹೆಗಲಲ್ಲಿ ಧರಿಸಿ ನಡೆಯುವುದು ಆಶ್ಚರ್ಯಕರವೇ ಸರಿ. ಆದರೆ ಆ ಗುರುಗಳೇ ಆತನನ್ನೂ ಹೊತ್ತಿರುವುದರಿಂದ ಈ ಕಾರ್ಯವು ಆಶ್ಚರ್ಯಕರವಲ್ಲ. ಆಚಾರ್ಯರು ನಿತ್ಯದಲ್ಲಿಯೂ ಹರಿಸ್ಮರಣನಿರತರಾಗಿ ಇಂತಹ ಅದ್ಭುತಕಾರ್ಯವನ್ನು ಮಾಡಿಸುತ್ತಾರೆ ಎಂದು ಭಾವ.

ತ್ರಯಃ ಅವಯವಾಃ ಅಸ್ಯೇತಿ ತ್ರಯಂ, ಭುವನಾನಾಂ ತ್ರಯಂ ಭುವನತ್ರಯಂ, ಧಾರಯತಿ (ಬಿಭರ್ತಿ) ತಾಚ್ಛೀಲ್ಯೇನೇತಿ ಭುವನತ್ರಯ-(ಭಾ)ಧಾರೀ ತಂ. ಪ್ರಾಣಾನಾಂ ಪತಿಃ ಪ್ರಾಣಪತಿಃ.

Rarest Archiver

ದಧೇ ದಧಾತೇ ದಧಿರೇ ಇತ್ಯಾದಿ. ಡುಧಾಞ್ ಧಾರಣ-ಪೋಷಣಯೋಃ ಲಿಟ್ ಆತ್ಮನೇ.

ಯತಯೋ ಗೃಹಿಣೋಽಥ ವರ್ಣಿಮುಖ್ಯಾಃ
ಶ್ರುತಿಗಾಸ್ತ್ಯಕ್ತನಿಷಿದ್ಧಕಾಮ್ಯಭಾವಾಃ ।
ಇಹ ಮೂರ್ತಿಧರಾ ಇವ ಸ್ವಧರ್ಮಾಃ
ಶತಸಂಖ್ಯಾಃ ಶತಸಂಖ್ಯಮನ್ವಗಚ್ಛನ್ ॥ ೧೯ ॥

ಶ್ರುತಿಗಾಃ ತ್ಯಕ್ತನಿಷಿದ್ಧಕಾಮ್ಯಭಾವಾಃ ಶತಸಂಖ್ಯಾಃ ಯತಯಃ ಗೃಹಿಣಃ ಅಥ ವರ್ಣಿಮುಖ್ಯಾಃ ಮೂರ್ತಿಧರಾಃ ಸ್ವಧರ್ಮಾಃ ಇವ ಇಹ ಶತಸಂಖ್ಯಂ ಅನ್ವಗಚ್ಛನ್।

ಶ್ರುತಿಗಾಃ=ವೇದಪಾರಾಯಣನಿರತರಾದ, (ವೇದಪ್ರತಿಪಾದ್ಯವಾದ) ತ್ಯಕ್ತ=ಬಿಡಲ್ಪಟ್ಟ, ನಿಷಿದ್ಧ=ನಿಷೇಧಿಸಲ್ಪಟ್ಟ, ಕಾಮ್ಯಭಾವಃ=ಕಾಮ್ಯ ಕರ್ಮವಿಷಯವಾದ ಮನಸ್ಸುಳ್ಳ, ಶತಸಂಖ್ಯಾಃ=ನೂರಾರುಮಂದಿ, ಯತಯಃ=ಸಂನ್ಯಾಸಿಗಳು, ಗೃಹಿಣಃ=ಗೃಹಸ್ಥರು, ಅಥ=ಅನಂತರ, ವರ್ಣಿಮುಖ್ಯಾಃ = ಶ್ರೇಷ್ಠಬ್ರಹ್ಮಚಾರಿಗಳು, ಮೂರ್ತಿಧರಾಃ = ದೇಹ ವನ್ನು ಧರಿಸಿದ, ಸ್ವಧರ್ಮಾಃ ಇವ=ತಮ್ಮ ತಮ್ಮ ವರ್ಣಾಶ್ರಮಧರ್ಮ ಗಳಂತೆ, ಇಹ = ಈ ಪ್ರಯಾಣಕಾಲದಲ್ಲಿ, ಶತಸಂಖ್ಯಂ = ಶ್ರೀಪೂರ್ಣ ಪ್ರಜ್ಞರನ್ನು, ಅನ್ವಗಚ್ಛನ್=ಹಿಂಬಾಲಿಸಿದರು.

ಆಚಾರ್ಯರ ಪ್ರಯಾಣಸಮಯದಲ್ಲಿ ನೂರಾರುಮಂದಿ ವೇದವನ್ನು ತಿಳಿದವರೂ ವೇದಪಾರಾಯಣಮಾಡುವವರೂ, ನಿಷಿದ್ಧಕಾಮ್ಯಕರ್ಮ ಗಳನ್ನು ಬಿಟ್ಟವರೂ ಆದ ಸನ್ಯಾಸಿಗಳು ಮತ್ತು ಗೃಹಸ್ಥಾಶ್ರಮಿಗಳು, ಹಾಗೆಯೇ ಶ್ರೇಷ್ಠರಾದ ಬ್ರಹ್ಮಚಾರಿಗಳೂ ಶರೀರವನ್ನೇ ಧರಿಸಿಕೊಂಡು ಬಂದಿರುವ ವೇದೋಕ್ತವಾದ ಕಾಮ್ಯಕರ್ಮದಲ್ಲಿ ಪರಮತಾತ್ಪರ್ಯವಿಲ್ಲ ದಿರುವ ಜಾತಿಧರ್ಮ ಮತ್ತು ಆಶ್ರಮಧರ್ಮಗಳಂತೆ ಶ್ರೀಮಧ್ವಾಚಾರ್ಯರನ್ನು ಹಿಂಬಾಲಿಸಿ ನಡೆದರು. ಸಾಕ್ಷಾತ್‌ಧರ್ಮಮೂರ್ತಿಗಳಂತಹ ಯತಿಗಳು, ಗೃಹಸ್ಥರು ಮತ್ತು ಬ್ರಹ್ಮಚಾರಿಗಳು ವೇದಶಾಸ್ತ್ರಪಾರಾಯಣಮಾಡುತ್ತಾ

Rarest Archiver

ಆಚಾರ್ಯರನ್ನು ಅನುಸರಿಸಿದರು ಎಂದು ಹೇಳಿದ್ದರಿಂದ ಆಚಾರ್ಯರ ಶಿಷ್ಯರೆಲ್ಲರೂ ಪರಮಧರ್ಮನಿಷ್ಠರು ಎಂದು ತಿಳಿದುಬರುತ್ತದೆ.

ವರ್ಣಿಷು ಮುಖ್ಯಾಃ, 'ವರ್ಣಿನಃ ಬ್ರಹ್ಮಚಾರಿಣಃ' – ಅಮರ 'ಬ್ರಹ್ಮಚಾರೀ ಭವೇದ್ವರ್ಣೀ' ಹಲ; ಶ್ರುತಿಂ ಗಚ್ಛಂತೀತಿ ಶ್ರುತಿಗಾಃ, ಕಾಮ್ಯೇ ಭಾವಃ ಕಾಮ್ಯಭಾವಃ, ನಿಷಿದ್ಧಶ್ಚಾಸೌ ಕಾಮ್ಯಭಾವಶ್ಚ ನಿಷಿದ್ಧ-ಕಾಮ್ಯಭಾವಃ, ತ್ಯಕ್ತಃ ನಿಷಿದ್ಧಕಾಮ್ಯಭಾವಃ ಯೈಃ ತೇ, ಧರಂತೀತಿ ಧರಾಃ ಮೂರ್ತೇಃ ಧರಾಃ, ಸ್ವೇಷಾಂ ಧರ್ಮಾಃ, ಶತಂ ಸಂಖ್ಯಾ ಯೇಷಾಂ ತೇ, ಶತಂ ಸಂಖ್ಯಾ ಯಸ್ಯಸಃ, ಸಂಖ್ಯಾ ಜ್ಞಾನಂ 'ಚರ್ಚಾ ಸಂಖ್ಯಾ ವಿಚಾರಣಾ' ಅಮರ. ಶತಸಂಖ್ಯಃ ತಂ, ಅನು + ಅಗಚ್ಛನ್, ಅಗಚ್ಛತ್ ಅಗಚ್ಛತಾಂ ಅಗಚ್ಛನ್ ಇತ್ಯಾದಿ ಗಮ್ಲೃ ಗತೌ ಪರ. ಲಙ್.

ಆಚಾರ್ಯರ ಮಹಿಮೆಯಿಂದ ಪರಿವಾರಜನರಿಗೆ ಆಯಾಸವೇ ಆಗಲಿಲ್ಲ-

ಪರಿವಾರಜನಾ ನ ಮಾರ್ಗದುಃಖಂ
ಪ್ರಯಯುಃ ಪೂರುಷರತ್ನಮೀಕ್ಷಮಾಣಾಃ ।
ಇತಿ ನಾದ್ಭುತಮಸ್ಯ ಹಿ ಪ್ರಯಾಂತಿ
ಸ್ಮೃತಿಮಾತ್ರಾದ್ ಭವಿನೋ ಭವಾಪವರ್ಗಂ ॥೨೦॥

ಪೂರುಷರತ್ನಂ ಈಕ್ಷಮಾಣಾಃ ಪರಿವಾರಜನಾಃ ಮಾರ್ಗದುಃಖಂ ನ ಪ್ರಯಯುಃ ಇತಿ ಅದ್ಭುತಂ ನ, ಭವಿನಃ ಅಸ್ಯ ಸ್ಮೃತಿಮಾತ್ರಾತ್ ಭವಾಪ-ವರ್ಗಂ ಪ್ರಯಾಂತಿ ಹಿ.

ಪೂರುಷರತ್ನಂ = ಪುರುಷಶ್ರೇಷ್ಠರಾದ ಶ್ರೀಮಧ್ವಾಚಾರ್ಯರನ್ನು, ಈಕ್ಷಮಾಣಾಃ = ನೋಡುತ್ತಿರುವ, ಪರಿವಾರಜನಾಃ = ಸೇವಕಶಿಷ್ಯಜನರು, ಮಾರ್ಗದುಃಖಂ = ದಾರಿಯ ಆಯಾಸವನ್ನು, ನ ಪ್ರಯಯುಃ = ಹೊಂದಲಿಲ್ಲ, ಇತಿ ಅದ್ಭುತಂ ನ = ಹೀಗೆಂಬುದು ಆಶ್ಚರ್ಯವಲ್ಲ. ಭವಿನಃ = ಸಂಸಾರಿಗಳು, ಅಸ್ಯ = ಈ ಮಧ್ವಮುನಿಗಳ, ಸ್ಮೃತಿಮಾತ್ರಾತ್ = ಸ್ಮರಣೆಯಿಂದಲೇ, ಭವಾಪವರ್ಗಂ = ಸಂಸಾರದಿಂದ ಬಿಡುಗಡೆಯನ್ನು (ಮೋಕ್ಷವನ್ನು), ಪ್ರಯಾಂತಿ ಹಿ = ಹೊಂದುತ್ತಾರಷ್ಟೆ.

Rarest Archiver

ಆಚಾರ್ಯರ ಶಿಷ್ಯರು ಮತ್ತು ಜೊತೆಯಲ್ಲಿ ಬಂದ ಇತರ ಜನರು-ಇವರೆಲ್ಲರೂ ಪುರುಷಶ್ರೇಷ್ಠರಾದ ಮಧ್ವಮುನೀಂದ್ರಚಂದ್ರರನ್ನು ನೋಡುತ್ತಾ ಮಾರ್ಗಾಯಾಸದ ಯಾವ ದುಃಖವನ್ನೂ ಮನಗಾಣಲಿಲ್ಲ. ಇದು ಆಶ್ಚರ್ಯವಲ್ಲ. ಏಕೆಂದರೆ ಸಂಸಾರದಲ್ಲಿರುವ ಸಾತ್ತ್ವಿಕಚೇತನರು ಈ ಮಧ್ವಮೌನಿಚಂದ್ರರನ್ನು ಸ್ಮರಿಸಿದ ಮಾತ್ರದಿಂದಲೇ ಸಂಸಾರತಾಪದಿಂದ ದೂರವಾಗುತ್ತಾರೆ. ಮೋಕ್ಷಪದವಿಯನ್ನು ಹೊಂದುತ್ತಾರೆ. ಆಚಾರ್ಯರನ್ನು ಸ್ಮರಿಸಿದವರಿಗೆ ಸಂಸಾರದುಃಖಪರಿಹಾರವಾಗಿ ಮೋಕ್ಷವೇ ಲಭಿಸುವಾಗ ಕಣ್ಣಾರೆ ನೋಡುತ್ತಾ ಜತೆಯಲ್ಲಿ ನಡೆಯುವವರಿಗೆ ಮಾರ್ಗಾಯಾಸದ ದುಃಖಪರಿಹಾರವಾಗುತ್ತದೆಯೆಂಬುದು ಏನಾಶ್ಚರ್ಯ !

ಪರಿವಾರಾಶ್ಚ ತೇ ಜನಾಶ್ಚ; (ಪರಿವಾರಸ್ಯ ಜನಾಃ) ಮಾರ್ಗಸ್ಯದುಃಖಂ ತತ್, ಪೂರುಷೇಷು ರತ್ನಂ ತತ್, ರತ್ನ=ಆಯಾ ಜಾತಿಯಲ್ಲಿ ಶ್ರೇಷ್ಠವಸ್ತು, ರತ್ನಂ ಸ್ವಜಾತಿಶ್ರೇಷ್ಠೇಽಪಿ-ಅಮರ. ಸ್ಮೃತಿರೇವ ಸ್ಮೃತಿಮಾತ್ರಂ ತಸ್ಮಾತ್, ಭವಃ (ಸಂಸಾರಃ) ಏಷಾಮಸ್ತೀತಿ ಭವಿನಃ, ಭವಾತ್ ಅಪವರ್ಗಃ ಭವಾಪವರ್ಗಃ ತಂ;

ಪ್ರ+ಯಯುಃ, ಯಯೌ ಯಯತುಃ ಯಯುಃ ಇತ್ಯಾದಿ; ಪ್ರ. ಉಪ. ಯಾ ಪ್ರಾಪಣೇ ಲಿಟ್. ಪ್ರ+ಯಾಂತಿ, ಯಾತಿ ಯಾತಃ ಯಾಂತಿ ಇತ್ಯಾದಿ (ಹಿಂದಿನಂತೆಯೇ ಧಾತ್ವರ್ಥ).

ಮದನೇಶ್ವರ ದೇವಾಲಯದ ಬಳಿ ಜಯಸಿಂಹರಾಜನು ಸ್ವತಃ ಆಚಾರ್ಯರನ್ನು ಎದುರುಗೊಂಡನು —

ಮದನೇಶ್ವರವಲ್ಲಭಪ್ರದೇಶೇ-
ಪ್ರಭುಮಾಯಾಂತಮಥಾಭ್ಯಪದ್ಯತದ್ರಾಕ್ ।
ಜಯಸಿಂಹ ಇಮಂ ನೃಸಿಂಹವರ್ಯಃ
ಶುಭಧೀಃ ಸ್ತಂಭವಿಶಿಷ್ಟಸಿಂಹನಾಮಾ ॥೨೧॥

ಅಥ ಶುಭಧೀಃ ಸ್ತಂಭವಿಶಿಷ್ಟಸಿಂಹನಾಮಾ ನೃಸಿಂಹವರ್ಯಃ ಜಯಸಿಂಹಃ ಮದನೇಶ್ವರವಲ್ಲಭಪ್ರದೇಶೇ ಆಯಾಂತಂ ಪ್ರಭುಂ ಇಮಂ ದ್ರಾಕ್ ಅಭ್ಯಪದ್ಯತ.

Rarest Archive

ಅಥ = ಅನಂತರ, ಶುಭಧೀಃ = ಮಂಗಳಾತ್ಮಕವಾದ ಮನಸ್ಸುಳ್ಳ, ಸ್ತಂಭವಿಶಿಷ್ಟಸಿಂಹನಾಮಾ = ಕಬೆಸಿಂಹನೆಂಬ ಹೆಸರುಳ್ಳ, ನೃಸಿಂಹವರ್ಯಃ = ರಾಜಶ್ರೇಷ್ಠನಾದ, ಜಯಸಿಂಹಃ = ಜಯಸಿಂಹರಾಜನು, ಮದನೇಶ್ವರ-ವಲ್ಲಭಪ್ರದೇಶೇ = ಮದನೇಶ್ವರನಿಗೆ ಪ್ರಿಯವಾದ ಸ್ಥಳದಲ್ಲಿ, ಆಯಾಂತಂ = ಬರುತ್ತಿರುವ, ಪ್ರಭುಂ ಇಮಂ = ತ್ರಿಲೋಕರಾಜರಾದ ಈ ಮಧ್ವಗುರುಗಳನ್ನು, ದ್ರಾಕ್ ಅಭ್ಯಪದ್ಯತ = ಜಾಗ್ರತೆಯಾಗಿ ಎದುರುಗೊಂಡನು.

ಹೀಗೆ ಆಚಾರ್ಯರು ಪ್ರಯಾಣಮಾಡುತ್ತಾ ಬರುತ್ತಿದ್ದರು. ಆಗ ಮಂಗಳಮಾನಸನಾದ ಮಾನವಶ್ರೇಷ್ಠನಾದ ಕಬೆಸಿಂಹ ಎಂಬ ಹೆಸರುಳ್ಳ ಜಯಸಿಂಹಮಹಾರಾಜನು ಮದನೇಶ್ವರದೇವಾಲಯಪ್ರದೇಶದಲ್ಲಿ ಬರುತ್ತಿರುವ ಈ ತ್ರೈಲೋಕ್ಯಾಚಾರ್ಯರನ್ನು ಬೇಗನೆ ಸ್ವಾಗತಿಸಲು ಎದುರಾಗಿ ಬಂದನು. ಜಯಸಿಂಹರಾಜನ ದೇಶಕ್ಕೆ ಕಬೆನಾಡು ಎಂದು ಹೆಸರು. ಆ ದೇಶದ ಅರಸನಿಗೆ ಕಬೆಸಿಂಹ ಎಂದು ಹೆಸರು. ಸ್ತಂಭಸಿಂಹ ಎಂದು ಸಂಸ್ಕೃತದಲ್ಲಿ ಅದರ ಭಾಷಾಂತರ.

ಮದನಸ್ಯ ಈಶ್ವರಃ ಮದನೇಶ್ವರಃ, ಮದನೇಶ್ವರಸ್ಯ ವಲ್ಲಭಃ ಮದನೇಶ್ವರವಲ್ಲಭಃ ಮದನೇಶ್ವರವಲ್ಲಭಶ್ಚಾಸೌ ಪ್ರದೇಶಶ್ಚ ಮದನೇಶ್ವರ ವಲ್ಲಭಪ್ರದೇಶಃ ತಸ್ಮಿನ್, ನರಃ ಸಿಂಹಾಃ ಇವ ನೃಸಿಂಹಾಃ ನೃಸಿಂಹೇಷು ವರ್ಯಃ, ಶುಭಾ ಧೀಃ ಯಸ್ಯ ಸಃ, ಸ್ತಂಭೇನ ವಿಶಿಷ್ಟಂ ಸ್ತಂಭವಿಶಿಷ್ಟಂ, ಸ್ತಂಭವಿಶಿಷ್ಟಂ ಸಿಂಹ ಇತಿ ನಾಮ ಯಸ್ಯ ಸಃ.

ಅಭಿ+ಅಪದ್ಯತ ಅಪದ್ಯೇತಾಂ ಅಪದ್ಯಂತ, ಪದ ಗತೌ ಆತ್ಮನೇ. ಲಙ್.

ಜಯಸಿಂಹರಾಜನು ಆಚಾರ್ಯರ ಬಳಿಗೆ ಬಂದ ಕ್ರಮವು ಹೀಗಿದೆ—

ಅವತೀರ್ಯ ಪುರೈವ ವಾಹನಾತ್ ಸ್ವಾ-
ದಪಿ ಮಾರ್ಗಾದಪಸಾರ್ಯ ಸೈನಿಕಾನ್ ಸಃ ।
ಸಹ ಕೈಶ್ಚನ ಭೂಸುರೈರವಾಪ್ತ
ಸ್ತ್ರಿಜಗತ್ಪೂಜ್ಯಪದಾಂತಿಕೇ ನನಾಮ ॥೨೨॥

ಪುರಾ ಏವ ಸ್ವಾತ್ ವಾಹನಾತ್ ಅವತೀರ್ಯ ಸೈನಿಕಾನ್ ಅಪಿ ಮಾರ್ಗಾತ್ ಅಪಸಾರ್ಯ ಕೈಶ್ಚನ ಭೂಸುರೈಃ ಸಹ ಅವಾಪ್ತಃ ಸಃ ತ್ರಿಜಗತ್ಪೂಜ್ಯಪದಾಂತಿಕೇ ನನಾಮ.

ಪುರಾ ಏವ=(ಆಚಾರ್ಯರ ಹತ್ತಿರಕ್ಕೆ ಬರುವುದಕ್ಕಿಂತ) ಮೊದಲೇ, ಸ್ವಾತ್ ವಾಹನಾತ್ = ತನ್ನ ವಾಹನದಿಂದ, ಅವತೀರ್ಯ = ಇಳಿದು, ಸೈನಿಕಾನ್ ಅಪಿ=ಸೈನಿಕರನ್ನೂ, ಮಾರ್ಗಾತ್ ಅಪಸಾರ್ಯ=ದಾರಿಯಿಂದ ದೂರಸರಿಸಿ, ಕೈಶ್ಚನ=ಕೆಲವು ಮಂದಿ, ಭೂಸುರೈಃ ಸಹ=ಬ್ರಾಹ್ಮಣ ರೊಡನೆ, ಅವಾಪ್ತಃ = (ಆಚಾರ್ಯರ ಹತ್ತಿರಕ್ಕೆ) ಬಂದವನಾಗಿ, ಸಃ=ಜಯಸಿಂಹನು, ತ್ರಿಜಗತ್‌ಪೂಜ್ಯಪದಾಂತಿಕೇ=ಮೂರುಲೋಕಗಳಲ್ಲಿ ಪೂಜ್ಯರಾದ ಶ್ರೀಮಧ್ವಾಚಾರ್ಯರಪಾದಗಳ ಹತ್ತಿರ, ನನಾಮ=ವಂದಿಸಿದನು.

ಆ ಜಯಸಿಂಹ ಮಹಾರಾಜನು ಆಚಾರ್ಯರು ತನ್ನ ಹತ್ತಿರಕ್ಕೆ ಬರುವ ಮೊದಲೇ ತನ್ನ ವಾಹನದಿಂದ ಇಳಿದನು. ದಾರಿಯಲ್ಲಿ ಉದ್ದಕ್ಕೂ ತನ್ನ ರಕ್ಷಣೆಗಾಗಿ ನಿಂತಿದ್ದ ಸೈನಿಕರನ್ನು ದೂರಸರಿಸಿದನು. ಕೆಲವು ಮಂದಿ ಬ್ರಾಹ್ಮಣರನ್ನು ಮುಂದಿಟ್ಟುಕೊಂಡು ಮೂರುಲೋಕಗಳಲ್ಲಿಯೂ ಪೂಜ್ಯರಾದ ಆಚಾರ್ಯರ ಬಳಿಗೆ ಬಂದು, ಅವರ ಪಾದಗಳ ಬಳಿಯಲ್ಲಿ ನಮಸ್ಕರಿಸಿದನು. ಮಹಾತ್ಮರ ದರ್ಶನಕ್ಕೆ ಹೋಗುವಾಗ ವೈಭವಾಡಂಬರ ಗಳನ್ನು ತ್ಯಜಿಸಿ ಭಕ್ತಿಯಿಂದ ಬ್ರಾಹ್ಮಣರನ್ನು ಮುಂದಿಟ್ಟುಕೊಂಡು ಅವರನ್ನು ಸ್ವಾಗತಿಸುವುದು ಧಾರ್ಮಿಕನಾದ ಕ್ಷತ್ರಿಯರಾಜನ ಕ್ರಮವು. ಅದರಂತೆ ರಾಜನು ಬಂದನು.

ಭುವಃ ಸುರಾಃ ತೈಃ ಭೂಸುರೈಃ, ತ್ರಯಾಣಾಂ ಜಗತಾಂ ಸಮಾಹಾರಃ ತ್ರಿಜಗತ್, ತ್ರಿಜಗತಿ ಪೂಜ್ಯಃ ತ್ರಿಜಗತ್ಪೂಜ್ಯಃ, ತ್ರಿಜಗತ್ ಪೂಜ್ಯಸ್ಯ ಪದೇ ತ್ರಿಜಗತ್‌ಪೂಜ್ಯಪದಯೋಃ ಅಂತಿಕಂ ತಸ್ಮಿನ್,

ನನಾಮ ನೇಮತುಃ ನೇಮುಃ ಇತ್ಯಾದಿ ಣಮ (ನಮ್) ಪ್ರಹ್ವತ್ವೇ ಶಬ್ದೇ ಚ, ಲಿಟ್.

Rarest Archiver

ಆಚಾರ್ಯರು ರಾಜನೊಡನೆ ವಿಷ್ಣುಮಂಗಲಕ್ಕೆ ಬಂದರು—

ಪೃಥಿವೀಪತಿನಾನುಗಮ್ಯಮಾನೋ
ವಿನಯಾದ್ಭಕ್ತಿರಸಾರ್ದ್ರಮಾನಸೇನ ।
ಅಚಿರೇಣ ಸ ವಿಷ್ಣುಮಂಗಲಸ್ಯ
ಪ್ರಯಯಾವಾಯತನೋತ್ತಮಸ್ಯ ಪಾರ್ಶ್ವಂ ॥೨೩॥

ಭಕ್ತಿರಸಾರ್ದ್ರಮಾನಸೇನ ಪೃಥಿವೀಪತಿನಾ ವಿನಯಾತ್ ಅನುಗಮ್ಯ-ಮಾನಃ ಸಃ ಅಚಿರೇಣ ವಿಷ್ಣುಮಂಗಲಸ್ಯ ಆಯತನೋತ್ತಮಸ್ಯ ಪಾರ್ಶ್ವಂ ಪ್ರಯಯೌ ।

ಭಕ್ತಿರಸಃ = ಭಕ್ತಿಯೆಂಬ ರಸದಿಂದ, ಆರ್ದ್ರ = ಒದ್ದೆಯಾದ, ಮಾನಸೇನ = ಅಂತಃಕರಣವುಳ್ಳ, ಪೃಥಿವೀಪತಿನಾ = ಜಯಸಿಂಹರಾಜನಿಂದ, ವಿನಯಾತ್ = ನಮ್ರತೆಯಿಂದ, ಅನುಗಮ್ಯಮಾನಃ = ಹಿಂಬಾಲಿಸಲ್ಪಡುತ್ತಿರುವ, ಸಃ = ಆ ಶ್ರೀಮಧ್ವಾಚಾರ್ಯರು, ಅಚಿರೇಣ = ಬೇಗನೆ, ವಿಷ್ಣುಮಂಗಲಸ್ಯ = ವಿಷ್ಣುಮಂಗಲವೆಂಬ, ಆಯತನೋತ್ತಮಸ್ಯ = ಶ್ರೇಷ್ಠದೇವಾಲಯದ, ಪಾರ್ಶ್ವಂ = ಬಳಿಗೆ, ಪ್ರಯಯೌ = ಹೋದರು.

ಶ್ರೀಮಧ್ವಾಚಾರ್ಯರು ಭಕ್ತಿಯಿಂದ ಪೂರ್ಣವಾದ ಅಂತಃಕರಣವುಳ್ಳ ಜಯಸಿಂಹರಾಜನು ವಿನಯದಿಂದ ತನ್ನನ್ನು ಅನುಸರಿಸಿಕೊಂಡು ಬರುತ್ತಿರುವಾಗ, ಅವನೊಡನೆ ಬೇಗನೆ ವಿಷ್ಣುಮಂಗಲವೆಂಬ ಉತ್ತಮ ದೇವಾಲಯದ ಬಳಿಗೆ ಬಂದರು.

ಪೃಥಿವ್ಯಾಃ ಪತಿಃ ತೇನ, ಭಕ್ತಿರೇವ ರಸಃ, ಭಕ್ತಿರಸೇನ ಆರ್ದ್ರಂ ಮಾನಸಂ ಯಸ್ಯ ಸಃ ತೇನ, ನ ಚಿರೇಣ ಅಚಿರೇಣ, ಆಯತನೇಷು ಉತ್ತಮಂ ತಸ್ಯ.

ಪ್ರ + ಯಯೌ, ಯಾ ಧಾತು ಲಿಟ್.

೨೪ನೆಯ ಶ್ಲೋಕದಿಂದ ಮುಂದೆ ೧೨ಶ್ಲೋಕಗಳಲ್ಲಿ ಆಚಾರ್ಯರ ವರ್ಣನೆ —

Rarest Archiver

ನರದೇವದಿದೃಕ್ಷಯಾ ಸಮೇತಾ
ಉಭಯಗ್ರಾಮಜನಾಃ ಜನಾಃ ಪರೇ ಚ ।
ಉಪಯಾಂತಮನಂತಮಾನಸಂ ತಂ
ಮುಹುರೈಕ್ಷಂತ ಕುತೂಹಲಾಬ್ಧಿಮಗ್ನಾಃ ॥ ೨೪ ॥

ನರದೇವದಿದೃಕ್ಷಯಾ ಸಮೇತಾಃ ಉಭಯಗ್ರಾಮಜನಾಃ, ಪರೇ ಚ ಜನಾಃ ಉಪಯಾಂತಂ ತಂ ಅನಂತಮಾನಸಂ ಕುತೂಹಲಾಬ್ಧಿಮಗ್ನಾಃ ಮುಹುಃ ಐಕ್ಷಂತ ।

ನರದೇವದಿದೃಕ್ಷಯಾ = ತಮ್ಮರಾಜನಾದ ಜಯಸಿಂಹರಾಜನನ್ನು ನೋಡುವ ಇಚ್ಛೆಯಿಂದ, ಸಮೇತಾಃ = ಒಟ್ಟಿಗೆ ಸೇರಿದ, ಉಭಯಗ್ರಾಮ-ಜನಾಃ = ಪಾಡಿ ಕೂಡು ಎಂಬ ಎರಡು ಹಳ್ಳಿಯ ಜನರು, ಪರೇ ಚ ಜನಾಃ = ಮತ್ತು ಇತರಜನರೂ, ಉಪಯಾಂತಂ = ಸಮೀಪಕ್ಕೆ ಬರುತ್ತಿರುವ, ತಂ = ಆ, ಅನಂತಮಾನಸಂ = ಶ್ರೀಪೂರ್ಣಪ್ರಜ್ಞರನ್ನು, ಕುತೂಹಲಾಬ್ಧಿ = ಆಶ್ಚರ್ಯಸಮುದ್ರದಲ್ಲಿ, ಮಗ್ನಾಃ = ಮುಳುಗಿದವರಾಗಿ, ಮುಹುಃ ಐಕ್ಷಂತ = ಪುನಃ ಪುನಃ ನೋಡಿದರು.

ಜಯಸಿಂಹರಾಜನನ್ನು ನೋಡುವ ಅಪೇಕ್ಷೆಯಿಂದ ಪಾಡಿ-ಕುಡಲು (ಕೂಡು) ಎಂಬ ಎರಡುಗ್ರಾಮದ ಜನರೂ ಹಾಗೆಯೇ ಬೇರೆ ಜನರೂ ಕೂಡ, ಅಲ್ಲಿಗೆ ಬಂದು ಸೇರಿದ್ದರು. ಅವರು ಆ ಆಚಾರ್ಯರನ್ನು ನೋಡಿ ಆಶ್ಚರ್ಯಸಮುದ್ರದಲ್ಲಿ ಮುಳುಗಿದವರಾಗಿ ಮತ್ತೂ ಮತ್ತೂ ಆದರದಿಂದ ನೋಡಿದರು. ಮಾನವನ ದರ್ಶನಕ್ಕೆ ಬಂದ ಜನರಿಗೆ ಅತಿಮಾನವನ ದರ್ಶನವಾಯಿತು. ತೌಳವಭಾಷೆಯಲ್ಲಿ ಪಾಡಿ, ಕೂಡಲು (ಕೂಡು) ಎಂಬ ಹೆಸರಿನ ಗ್ರಾಮಗಳನ್ನು ಸಂಸ್ಕೃತದಲ್ಲಿ ವಾಟಸಮವಾಯ ಎಂದು ಹೇಳುತ್ತಾರೆ. (ವಾಟಃ ಸಮವಾಯಃ ಇತಿ ಗ್ರಾಮದ್ವಯಂ— ಭಾ.ಪ್ರ.)

ದ್ರಷ್ಟುಂ ಇಚ್ಛಾ ದಿದೃಕ್ಷಾ, ನರದೇವಸ್ಯ ದಿದೃಕ್ಷಾ ನರದೇವದಿದೃಕ್ಷಾ, ತಯಾ, ಉಭೌ ಚ ತೌ ಗ್ರಾಮೌ ಚ ಉಭಯಗ್ರಾಮೌ, ತಯೋಃ

Rarest Archiver

ಜನಾಃ, ಅನಂತೇ (ಅನಂತಂ) ಮಾನಸಂ ಯಸ್ಯ ತಂ, ಕುತೂಹಲಮೇವ ಅಬ್ಧಿಃ ಕುತೂಹಲಾಬ್ಧೌ ಮಗ್ನಾಃ;

ಐಕ್ಷತ ಐಕ್ಷೇತಾಂ ಐಕ್ಷಂತ, ಐಕ್ಷಥಾಃ ಐಕ್ಷೇಥಾಂ ಐಕ್ಷಧ್ವಂ, ಐಕ್ಷೇ ಐಕ್ಷಾವಹಿ ಐಕ್ಷಾಮಹಿ. ಈಕ್ಷ ದರ್ಶನೇ ಸಕ. ಸೇಟ್ ಆತ್ಮ. to see ಲಙ್.

ಪುರತೋ ಮಧುರಸ್ವರೈರ್ವದದ್ಭಿಃ
ಸ್ವಕೃತಾಃ ಕರ್ಣಸುಖಾ ಮುಕುಂದಗಾಥಾಃ ।
ಧೃತಪಂಕಜಬೀಜಚಕ್ರಚಿಹ್ನೈಃ
ಕೃತನೃತ್ಯೈಶ್ಚತುರೈರ್ನಿಷೇವ್ಯಮಾಣಂ ॥ ೨೫ ॥

ಪುರತಃ ಸ್ವಕೃತಾಃ ಕರ್ಣಸುಖಾಃ ಮುಕುಂದಗಾಥಾಃ ಮಧುರಸ್ವರೈಃ ವದದ್ಭಿಃ ಧೃತಪಂಕಜಬೀಜಚಕ್ರಚಿಹ್ನೈಃ ಕೃತನೃತ್ಯೈಃ ಚತುರೈಃ ನಿಷೇವ್ಯಮಾಣಂ (ಅನಂತಮಾನಸಂ ಐಕ್ಷಂತ)

(ಉಭಯಗ್ರಾಮಜನಾಃ ಪರೇ ಚ ಜನಾಃ = ಆ ಜನರು) ಪುರತಃ = ಮುಂಭಾಗದಲ್ಲಿ, ಸ್ವಕೃತಾಃ = ತಮ್ಮಿಂದ ರಚಿತವಾದ, ಕರ್ಣಸುಖಾಃ = ಕಿವಿಗಳಿಗೆ ಇಂಪಾದ, ಮುಕುಂದಗಾಥಾಃ = ಶ್ರೀವಿಷ್ಣುವಿನ ಗುಣವರ್ಣನ ಪ್ರಬಂಧಗಳನ್ನು, ಮಧುರಸ್ವರೈಃ = ಇಂಪಾದಧ್ವನಿಗಳಿಂದ, (ಇಂಪಾದ ಧ್ವನಿಯುಳ್ಳ) ವದದ್ಭಿಃ = ಹಾಡುತ್ತಿರುವ, ಧೃತ = ಧರಿಸಿದ, ಪಂಕಜ-ಬೀಜ = ಕಮಲಾಕ್ಷಸರ (ತಾವರೆಬೀಜದ ಸರ) ಚಕ್ರಚಿಹ್ನೈಃ = ಚಕ್ರಗಳ ಚಿಹ್ನೆಗಳುಳ್ಳ, ಕೃತನೃತ್ಯೈಃ = ನರ್ತನಮಾಡುತ್ತಿರುವ, ಚತುರೈಃ = ಕುಶಲರಾದ ಜನರಿಂದ, ನಿಷೇವ್ಯಮಾಣಂ = ಸೇವಿಸಲ್ಪಡುತ್ತಿರುವ, ಆ ಮಧ್ವಾಚಾರ್ಯರನ್ನು ಕಂಡರು.

ಆಚಾರ್ಯರು ಬರುತ್ತಿರುವಾಗ ಅವರ ಮುಂಭಾಗದಲ್ಲಿ ಅವರೇ ರಚಿಸಿರುವ ದ್ವಾದಶಸ್ತೋತ್ರ ಮುಂತಾದ ಪ್ರಬಂಧಗಳನ್ನು ಶಿಷ್ಯರು ಮಧುರ ಕಂಠದಿಂದ ಗಾನಮಾಡುತ್ತಿದ್ದರು- ಚಕ್ರಾದಿಮುದ್ರೆಗಳನ್ನೂ ಕಮಲಾಕ್ಷ ಮಣಿಮಾಲೆಯನ್ನೂ ಧರಿಸಿ ಕುಶಲರಾದ ಆ ಶಿಷ್ಯರು ಆಚಾರ್ಯರ ಎದುರು ಕುಣಿಯುತ್ತಾ ಹಾಡುತ್ತಾ ಬರುತ್ತಿದ್ದರು.

Rarest Archiver

ಮಧುರಾಶ್ಚ ತೇ ಸ್ವರಾಶ್ಚ ತೈಃ, (ಮಧುರಃ ಸ್ವರಃ ಯೇಷಾಂ ತೇ ತೈಃ) ಸ್ವೇನ ಕೃತಾಃ ಸ್ವಕೃತಾಃ ತಾಃ, ಕರ್ಣಾನಾಂ ಸುಖಾಃ ತಾಃ, ಮುಕುಂದಸ್ಯ ಗಾಥಾಃ, ತಾಃ, ಪಂಕಜಾನಾಂ ಬೀಜಾನಿ ಪಂಕಜಬೀಜಾನಿ, ಚಕ್ರಸ್ಯ ಚಿಹ್ನಾನಿ ಚಕ್ರಚಿಹ್ನಾನಿ, ಪಂಕಜಬೀಜಾನಿ ಚ ಚಕ್ರಚಿಹ್ನಾನಿ ಚ, ಧೃತಾನಿ ಪಂಕಜಬೀಜಚಕ್ರಚಿಹ್ನಾನಿ ಯೈಃ ತೇ, ತೈಃ, ಕೃತಂ ನೃತ್ಯಂ ಯೈಃ ತೇ ಕೃತನೃತ್ಯಾಃ ತೈಃ,

ಕಲಿತಾಂಜಲಿನಾ ಸ್ಫುಟಾನುಯಾತಂ
ಜನಸಂಬಾಧಸಹೇನ ಭೂಮಿಭರ್ತ್ರಾ ।
ಕರುಣಾವಿಷಯಂ ಚಿಕೀರ್ಷುಣಾ ಸ್ವಂ
ವ್ರಜತಾ ಕಿಂಕರತಾಮಕೈತವೇನ ॥ ೨೬ ॥

ಕಲಿತಾಂಜಲಿನಾ ಜನಸಂಬಾಧಸಹೇನ ಸ್ವಂ ಕರುಣಾವಿಷಯಂ ಚಿಕೀರ್ಷುಣಾ ಅಕೈತವೇನ ಕಿಂಕರತಾಂ ವ್ರಜತಾ ಭೂಮಿಭರ್ತ್ರಾ ಸ್ಫುಟಾನುಯಾತಂ- (ತಂ ಅನಂತಮಾನಸಂ ಜನಾಃ ಮುಹುಃ ಐಕ್ಷಂತ)

ಕಲಿತಾಂಜಲಿನಾ = ಕೈಮುಗಿದುಕೊಂಡಿರುವ, ಜನಸಂಬಾಧಸಹೇನ = ಜನರ ನೂಕುನುಗ್ಗಲನ್ನು ಸಹಿಸುವ, ಸ್ವಂ = ತನ್ನನ್ನು, ಕರುಣಾವಿಷಯಂ = ಶ್ರೀಮಧ್ವರ ದಯೆಗೆ ಪಾತ್ರನನ್ನಾಗಿ, ಚಿಕೀರ್ಷುಣಾ = ಮಾಡಿಕೊಳ್ಳಲು ಇಚ್ಛಿಸುತ್ತಿರುವ, ಅಕೈತವೇನ = ಕಪಟವಿಲ್ಲ(ದ)ದೆ, ಕಿಂಕರತಾಂ ವ್ರಜತಾ = ಸೇವಕತನವನ್ನು ಹೊಂದಿರುವ. ಭೂಮಿಭರ್ತ್ರಾ = ಜಯಸಿಂಹರಾಜನಿಂದ, ಸ್ಫುಟಾನುಯಾತಂ = ಎಲ್ಲರಿಗೂ ಕಾಣಿಸುವಂತೆ ಹಿಂಬಾಲಿಸಲ್ಪಟ್ಟ, (ಆ ಮಧ್ವರನ್ನು ಆ ಜನರು ಕಂಡರು)

ಜಯಸಿಂಹರಾಜನು ಜನರ ಗುಂಪಿನಿಂದಾದ ಇಕ್ಕಟ್ಟನ್ನು ಸಹಿಸಿಕೊಂಡು, ಆಚಾರ್ಯರ ಕೃಪೆಗೆ ತಾನು ಪಾತ್ರನಾಗಬೇಕೆಂದು ನಿಷ್ಕಪಟತನದಿಂದ, ಆಚಾರ್ಯರ ಬಳಿಯಲ್ಲಿ ಕೈಮುಗಿದುಕೊಂಡು ಎಲ್ಲಾ ಜನರೂ ಕಾಣುವಂತೆ, ಆಚಾರ್ಯರ ಜತೆಗೆ ನಡೆದು ಬರುತ್ತಿದ್ದನು. ಇಂತಹ ಅರಸನು ಅನುಸರಿಸುತ್ತಾ ಬರುತ್ತಿರುವಾಗ ಆಚಾರ್ಯರು ಪ್ರಯಾಣ ಮಾಡುತ್ತಾ ಬರುತ್ತಿದ್ದರು. ಇಂತಹ ಶ್ರೀಮಧ್ವರನ್ನು ಜನರು ಕಂಡರು.

Rarest Archiver

ಕಲಿತಃ ಅಂಜಲಿಃ ಯೇನ ಸಃ ಕಲಿತಾಂಜಲಿಃ ತೇನ, ಸ್ಫುಟಂ (ಕ್ರಿ.ವಿ.) ಅನುಯಾತಃ ಸ್ಫುಟಾನುಯಾತಃ ತಂ, ಜನಾನಾಂ ಸಂಬಾಧಃ ಜನಸಂಬಾಧಃ, ಸಹತೇ ಇತಿ ಸಹಃ, ಜನಸಂಬಾಧಸ್ಯ ಸಹಃ ತೇನ, ಭೂಮೇಃ ಭರ್ತಾ ತೇನ, ಕರುಣಾಯಾಃ ವಿಷಯಃ ತಂ, ಕರ್ತುಂ, ಇಚ್ಛುಃ ಚಿಕೀರ್ಷುಃ ತೇನ, ಕಿಂಕರಸ್ಯ ಭಾವಃ ಕಿಂಕರತಾ ತಾಂ, ಕೈತವಸ್ಯ ಅಭಾವಃ ಅಕೈತವಂ (ನ ವಿದ್ಯತೇ ಕೈತವಂ ಯಸ್ಯ ತೇನ) ತೇನ.

ಇದಮಿತ್ಥಮಿತೀಕ್ಷಣೈರ್ನರಾಣಾ-
ಮಪರಿಚ್ಛೇದ್ಯಮಹಿಷ್ಠಧಾಮರೂಪಂ ।
ಅಧಿಕಂ ಧರಣೀಮಲಂಚಿಕೀರ್ಷುಂ
ಸ್ಫುಟಮುದ್ಯಂತಮಿವ ದ್ಯುನಾಥಮನ್ಯಂ ॥ ೨೭ ॥

ನರಾಣಾಂ ಈಕ್ಷಣೈಃ ಇದಂ ಇತ್ಥಂ ಇತಿ ಅಪರಿಚ್ಛೇದ್ಯಮಹಿಷ್ಠ-ಧಾಮರೂಪಂ ಧರಣೀಂ ಅಧಿಕಂ ಅಲಂ ಚಿಕೀರ್ಷುಂ ಸ್ಫುಟಂ ಉದ್ಯಂತಂ ಅನ್ಯಂ ದ್ಯುನಾಥಂ ಇವ—

ಆ ಜನರು, ನರಾಣಾಂ ಈಕ್ಷಣೈಃ = ಮನುಷ್ಯರ ಕಣ್ಣುಗಳಿಂದ, ಇದಂ ಇತ್ಥಂ ಇತಿ = ಇದು ಈ ರೀತಿಯಾದುದೆಂದು, ಅಪರಿಚ್ಛೇದ್ಯ = ನಿಶ್ಚಯಿಸಲು ಸಾಧ್ಯವಿಲ್ಲದ, ಮಹಿಷ್ಠಧಾಮ = ಬಹಳ ಕಾಂತಿಯುಳ್ಳ, ರೂಪಂ = ಆಕೃತಿಯುಳ್ಳ, ಧರಣೀಂ = ಭೂಮಿಯನ್ನು, ಅಧಿಕಂ ಅಲಂ ಚಿಕೀರ್ಷುಂ = ಹೆಚ್ಚಾಗಿ ಅಲಂಕರಿಸುವ ಇಚ್ಛೆಯುಳ್ಳ, ಸ್ಫುಟಂ = ಸ್ಪಷ್ಟವಾಗಿ, ಉದ್ಯಂತಂ = ಉದಯಿಸುತ್ತಿರುವ, ಅನ್ಯಂ ದ್ಯುನಾಥಂ ಇವ = ಮತ್ತೊಬ್ಬ ಸೂರ್ಯನಂತಿರುವ, ಆ ಮಧ್ವಾಚಾರ್ಯರನ್ನು ನೋಡಿದರು.

ಆಚಾರ್ಯರ ಆಕೃತಿಯು ಹೀಗೆಯೇ ಇದೆ ಎಂದು ಜನರು ಕಣ್ಣಿನಿಂದ ನೋಡಿ ನಿರ್ಧರಿಸಲು ಆಗದಷ್ಟು ಅಧಿಕವಾದ ತೇಜಃಪುಂಜದಿಂದ ಆಚಾರ್ಯರು ವಿರಾಜಿಸುತ್ತಿದ್ದರು. ಭೂಮಿಗೆ ಅವರಿಂದ ಬಹಳ ಹೆಚ್ಚಾದ ಅಲಂಕಾರ ಉಂಟಾಗಿತ್ತು. ಇಂತಹ ಆಚಾರ್ಯರು ಭೂಮಿಗೆ ರತ್ನದಂತೆ ಅಲಂಕಾರ ಸ್ವರೂಪನೂ, ಇಂತಹ ಆಕೃತಿಯುಳ್ಳವನೆಂದು ನಿರ್ಧರಿಸಲಾಗದ ಪರಮ

Rarest Archiver

ತೇಜಸ್ಸ್ವರೂಪನೂ ಆದ ಉದಯಿಸುವ ಮತ್ತೊಬ್ಬಸೂರ್ಯನಂತೆ ತೋರುತ್ತಿದ್ದರು. ಇಂತಹ ಆಚಾರ್ಯರನ್ನು ಜನರು ನೋಡಿದರು.

ಪರಿಚ್ಛೇತ್ತುಂ ಅಯೋಗ್ಯಂ ಅಪರಿಚ್ಛೇದ್ಯಂ, ಅತಿಶಯೇನ ಮಹತ್ ಮಹಿಷ್ಠಂ, ಅಪರಿಚ್ಛೇದ್ಯಂ ಮಹಿಷ್ಠಂ ಧಾಮ ಯಸ್ಯ ತತ್, ಅಪರಿಚ್ಛೇದ್ಯ-ಮಹಿಷ್ಠಧಾಮ ರೂಪಂ ಯಸ್ಯ ಸಃ, ಅಲಂಕರ್ತುಂ ಇಚ್ಛುಃ ಅಲಂಚಿಕೀರ್ಷುಃ ತಂ, ದಿವಃ ನಾಥಃ ದ್ಯುನಾಥಃ ತಂ,

ಆಚಾರ್ಯರು ಪಾದಾದಿಕೇಶಪರ್ಯಂತವಾಗಿ ಹೇಗಿದ್ದರು?—

ಅಶನೈಃ ಶನಕೈರಿವಾವ್ರಜಂತಂ
ಯುವಸಿಂಹಪ್ರವರಪ್ರಗಲ್ಭಯಾನಂ ।
ಅತಿಪಾಟಲಪಾದಪಲ್ಲವಾಭ್ಯಾ-
ಮವನೀಂ (ನಿಂ)ಪಾವನತಾಮಲಂ ನಯಂತಂ ॥ ೨೮ ॥

ಅಶನೈಃ ಶನಕೈರಿವ ಆವ್ರಜಂತಂ ಯುವಸಿಂಹಪ್ರವರಪ್ರಗಲ್ಭಯಾನಂ ಅತಿಪಾಟಲಪಾದಪಲ್ಲವಾಭ್ಯಾಂ ಅವನೀಂ ಅಲಂ ಪಾವನತಾಂ ನಯಂತಂ—

ಅಶನೈಃ = ಬೇಗನೆ, ಶನಕೈಃ ಇವ = ಮೆಲ್ಲಗೆ ಎಂಬಂತೆ, ಆವ್ರಜಂತಂ = ಬರುತ್ತಿರುವ, ಯುವಸಿಂಹಪ್ರವರ = ಯೌವನದಲ್ಲಿರುವ ಶ್ರೇಷ್ಠ ಸಿಂಹದಂತೆ, ಪ್ರಗಲ್ಭಯಾನಂ = ಗಂಭೀರವಾದ ನಡಿಗೆಯುಳ್ಳ, ಅತಿಪಾಟಲ = ಅತ್ಯಂತಕೆಂಪಾದ, ಪಾದಪಲ್ಲವಾಭ್ಯಾಂ = ಚಿಗುರಿನಂತಿರುವ ಕಾಲುಗಳಿಂದ, ಅವನೀಂ = ಭೂಮಿಯನ್ನು. ಅಲಂ ಪಾವನತಾಂ = ಅತಿಶಯವಾಗಿ ಪವಿತ್ರತೆಯನ್ನು, ನಯಂತಂ = ಹೊಂದಿಸುತ್ತಿರುವ, ಶ್ರೀಮಧ್ವರನ್ನು ಜನರು ಕಂಡರು.

ಶ್ರೀಮಧ್ವಗುರುಗಳು ಮೆಲ್ಲಗೋ ಎಂಬಂತೆ ಬೇಗನೆ ನಡೆದು ಬರುತ್ತಿದ್ದರು. ಅವರ ನಡಿಗೆಯು ಶ್ರೇಷ್ಠವಾದ ತರುಣಸಿಂಹದ ನಡಿಗೆಯಂತೆ ಧೀರಗಂಭೀರವಾಗಿತ್ತು. ಅವರು ಒಂದೊಂದು ಹೆಜ್ಜೆ ಇಡುವಾಗಲೂ ಕೆಂಪಾದ ಚಿಗುರಿನಂತಹ ಕಾಲುಗಳಿಂದ ಭೂಮಿಯನ್ನು ಪವಿತ್ರವನ್ನಾಗಿ ಮಾಡುತ್ತಿದ್ದರು. ಸಲ್ಲಕ್ಷಣಯುಕ್ತವಾದ ಆಚಾರ್ಯರ ಮಾರ್ಗಕ್ರಮಣವು ವೇಗ

Rarest Archive

ವಾಗಿ ಆಗುತ್ತಿದ್ದರೂ ಅದು ಮೆಲ್ಲಗೆಯೆಂದೇ ತೋರುತ್ತಿದ್ದಿತು. (ಇದರಿಂದಾಗಿ ಆಚಾರ್ಯರ ಜತೆಗೆ ಬರುತ್ತಿರುವ ಜನರಿಗೆ ಅವರ ಪ್ರಭಾವದಿಂದ ಮಾರ್ಗಾಯಾಸವು ತೋರುತ್ತಿರಲಿಲ್ಲ ಎಂದು ಸೂಚಿತವಾಗುತ್ತದೆ.)

ಈ ಶ್ಲೋಕದಿಂದ ಆಚಾರ್ಯರ ಪಾದಗಳ ತಳವನ್ನು ವರ್ಣಿಸಿದ್ದಾರೆ.

ಸಿಂಹಾನಾಂ ಪ್ರವರಃ ಸಿಂಹಪ್ರವರಃ, ಯುವಾ ಚಾಸೌ ಸಿಂಹಪ್ರವರಶ್ಚ ಯುವಸಿಂಹಪ್ರವರಃ, ಯುವಸಿಂಹವತ್ ಪ್ರಗಲ್ಭಂ ಯಾನಂ ಯಸ್ಯ ಸಃ ತಂ, ಪಾದೌ ಪಲ್ಲವೌ ಇವ ಪಾದಪಲ್ಲವೌ, ಅತಿಪಾಟಲೌ ಚ ತೌ ಪಾದಪಲ್ಲವೌ ಚ ಅತಿಪಾಟಲಪಾದಪಲ್ಲವೌ ತಾಭ್ಯಾಂ, ಪಾವನಾಯಾಃ ಭಾವಃ ಪಾವನತಾ, ತಾಂ

ನಖನಿರ್ಜಿತಪದ್ಮರಾಗರಾಗಂ
ವರಕೂರ್ಮಪ್ರಪದಂ ನಿಗೂಢಗುಲ್ಫಂ ।
ಸುರವರ್ಯಕರಾಗ್ರಸೇವ್ಯಜಂಘಂ
ದ್ವಿರದೋದಾರಕರೋಪಮೋರುಯುಗ್ಮಂ ॥೨೯॥

ನಖನಿರ್ಜಿತಪದ್ಮರಾಗರಾಗಂ ವರಕೂರ್ಮಪ್ರಪದಂ ನಿಗೂಢಗುಲ್ಫಂ ಸುರವರ್ಯಕರಾಗ್ರಸೇವ್ಯಜಂಘಂ ದ್ವಿರದೋದಾರಕರೋಪಮೋರುಯುಗ್ಮಂ (ತಂ ಅನಂತಮಾನಸಂ ಜನಾಃ ಐಕ್ಷಂತ)

ನಖ = ಉಗುರುಗಳಿಂದ, ನಿರ್ಜಿತ = ಸೋಲಿಸಲ್ಪಟ್ಟ, ಪದ್ಮರಾಗರಾಗಂ = ಪದ್ಮರಾಗಮಣಿಯ ಕೆಂಪುಳ್ಳ, ವರ = ಉತ್ತಮವಾದ, ಕೂರ್ಮಪ್ರಪದಂ = ಆಮೆಯಂತಹ ಪಾದದ ಕೊನೆಯುಳ್ಳ, ಸುರವರ್ಯ = ದೇವಶ್ರೇಷ್ಠರಾದ ರುದ್ರಾದಿಗಳ, ಕರಾಗ್ರ = ಕೈಯ ತುದಿಗಳಿಂದ, ಸೇವ್ಯಜಂಘಂ = ಸೇವಿಸಲು ಯೋಗ್ಯವಾದ ಮೊಣಕಾಲುಳ್ಳ, ದ್ವಿರದ = ಆನೆಯ, ಉದಾರ = ದೊಡ್ಡದಾದ, ಕರೋಪಮ = ಸೊಂಡಿಲಿನಂತಿರುವ, ಊರುಯುಗ್ಮಂ = ಎರಡು ತೊಡೆಗಳುಳ್ಳ, (ಆ ಮಧ್ವಾಚಾರ್ಯರನ್ನು ಜನರು ನೋಡಿದರು.)

Rarest Archiver

ಆಚಾರ್ಯರ ಉಗುರುಗಳು ಪದ್ಮರಾಗಮಣಿಯ ಕಾಂತಿಯನ್ನೂ ಜಯಿಸಿದ್ದುವು. ಅವರು ಉತ್ತಮವಾದ ಆಮೆಯ ಬೆನ್ನಿನಂತಹ ಪಾದದ ತುದಿಯಿಂದ ವಿರಾಜಿಸುತ್ತಿದ್ದರು. ಅವರ ಪಾದದ ಗಂಟುಗಳು ಒಳಗೆ ಅಡಗಿದ್ದುವು. ಅವರ ಮೊಣಕಾಲುಗಳನ್ನು ದೇವಶ್ರೇಷ್ಠರಾದ ರುದ್ರಾದಿಗಳು ಸೇವಿಸುತ್ತಿದ್ದರು. ಆನೆಯ ಸೊಂಡಿಲಿನಂತೆ ಅವರ ಎರಡೂ ತೊಡೆಗಳು ದುಂಡಗೆ ಪುಷ್ಟವಾಗಿ ಸುಂದರವಾಗಿದ್ದುವು. ಇದರಿಂದ ಆಚಾರ್ಯರ ಕಾಲುಗುರು, ಕಾಲಿನತುದಿ, ಪಾದದ ಗಂಟು, ಮೊಣಕಾಲು, ತೊಡೆಗಳನ್ನೂ ವರ್ಣಿಸಿದಂತಾಯಿತು.

ನಖೈಃ ನಿರ್ಜಿತಃ ಪದ್ಮರಾಗಸ್ಯ ರಾಗಃ ಯೇನ ಸಃ ತಂ, ಪದ್ಮರಾಗ=ಕೆಂಪುರತ್ನ, ಶೋಣರತ್ನಂ ಲೋಹಿತಕಃ ಪದ್ಮರಾಗಃ-ಅಮರ. ವರಶ್ಚಾಸೌ ಕೂರ್ಮಶ್ಚ ವರಕೂರ್ಮಃ ವರಕೂರ್ಮವತ್ ಪ್ರಪದೇ ಯಸ್ಯ ಸಃ ತಂ, ನಿಗೂಢೌ ಗುಲ್ಫೌ ಯಸ್ಯ ಸಃ ತಂ, ಸುರವರ್ಯಾಣಾಂ ಕರಾಗ್ರೈಃ ಸೇವ್ಯೇ ಜಂಘೇ ಯಸ್ಯ ಸಃ ತಂ, ಉದಾರಶ್ಚಾಸೌ ಕರಶ್ಚ ಉದಾರಕರಃ, ದ್ವಿರದಸ್ಯ ಉದಾರಕರಃ ದ್ವಿರದೋದಾರಕರಃ, ದ್ವಿರದೋದಾರಕರಃ ಏವ ಉಪಮಾ ಯಯೋಸ್ತೌ, ದ್ವಿರದೋದಾರಕರೋಪಮೌ ಚತೌ ಊರೂಚ - ಊರ್ವೋಃ ಯುಗ್ಮಂ, ಯಸ್ಯ ಸಃ ತಂ;

ಶುಭಶುದ್ಧನಿತಂಬಬಿಂಬರಾಜ-
ನ್ನವಕೌಶೇಯವಿಶೇಷಬಾಹ್ಯವಸ್ತ್ರಂ ।
ತನುಕುಕ್ಷಿಗಲಾಲಿಕೇಷು ರೇಖಾ-
ತ್ರಿತಯೇನ ಪ್ರಕಟೇನ ಶೋಭಮಾನಂ ॥೩೦॥

ಶುಭಶುದ್ಧನಿತಂಬಬಿಂಬರಾಜನ್ನವಕೌಶೇಯವಿಶೇಷಬಾಹ್ಯವಸ್ತ್ರಂ ತನುಕುಕ್ಷಿಗಲಾಲಿಕೇಷು ಪ್ರಕಟೇನ ರೇಖಾತ್ರಿತಯೇನಶೋಭಮಾನಂ ।

ಶುಭಶುದ್ಧ=ಮಂಗಳಕರವಾದ ಮತ್ತು ಬೆಳ್ಳಗಿರುವ (ನಿರ್ಮಲವಾದ) ನಿತಂಬಬಿಂಬ=ನಿತಂಬ (ಸೊಂಟದಹಿಂಭಾಗ) ಪ್ರದೇಶದಲ್ಲಿ, ರಾಜತ್ ನವ =ಪ್ರಕಾಶಿಸುವ ಮತ್ತು ಹೊಸದಾದ, ಕೌಶೇಯವಿಶೇಷ=ಶ್ರೇಷ್ಠವಾದ

Rarest Archiver

ರೇಶ್ಮೆಯ, ಬಾಹ್ಯವಸ್ತ್ರಂ=ಹೊರಗಿನ (ಉಡುವ) ಬಟ್ಟೆಯುಳ್ಳ, ತನು-ಕುಕ್ಷಿ=ಸಣ್ಣದಾದ ಹೊಟ್ಟೆ, ಗಲ=ಕುತ್ತಿಗೆ, ಅಲಿಕ=ಹಣೆ, ಇವುಗಳಲ್ಲಿ ಪ್ರಕಟೇನ = ಸ್ಪಷ್ಟವಾಗಿ ಕಾಣುವ, ರೇಖಾತ್ರಿತಯೇನ = ಮೂರುನೆರಿಗೆಗಳಿಂದ, ಶೋಭಮಾನಂ=ಪ್ರಕಾಶಮಾನರಾದ, (ಶ್ರೀಪೂರ್ಣಪ್ರಜ್ಞರನ್ನು ಜನರು ಕಂಡರು).

ಆಚಾರ್ಯರು ಮಂಗಳಕರವೂ, ಬಿಳಿಯಾಗಿಯೂ, ಪವಿತ್ರವಾಗಿಯೂ ಇರುವ ರೇಶ್ಮೆಯ ವಸ್ತ್ರವನ್ನು ಉಟ್ಟಿದ್ದರು. ಅವರ ಕೃಶವಾದ ಹೊಟ್ಟೆ, ಕತ್ತು, ಹಣೆಗಳಲ್ಲಿ ಮೂರುರೇಖೆಗಳು (ತ್ರಿವಳಿ) ಶೋಭಿಸುತ್ತಿದ್ದವು. (ಯತಿಗಳು ಕೌಪೀನವನ್ನು ಧರಿಸಿ, ಹೊರಗೆ ವಸ್ತ್ರವನ್ನು ಸುತ್ತುಹಾಕಿ ಉಡುವುದು ಶಾಸ್ತ್ರಸಂಪ್ರದಾಯ.) (ಇಂತಹ ಆಚಾರ್ಯರನ್ನು ಜನರು ಕಂಡರು).

ನಿತಂಬಸ್ಯ ಬಿಂಬಂ ನಿತಂಬಬಿಂಬಂ, ಬಿಂಬೋಽಸ್ತ್ರೀ ಮಂಡಲಂ ತ್ರಿಷು–ಅಮರ. ಶುಭಂ ಚ ಶುದ್ಧಂ ಚ ತತ್ ನಿತಂಬಬಿಂಬಂ ಚ ಶುಭ-ಶುದ್ಧನಿತಂಬಬಿಂಬಂ, ಕೌಶೇಯಸ್ಯ ವಿಶೇಷಃ ಕೌಶೇಯವಿಶೇಷಃ, ನವ-ಶ್ಚಾಸೌ ಕೌಶೇಯವಿಶೇಷಶ್ಚ ನವಕೌಶೇಯವಿಶೇಷಃ, ಶುಭಶುದ್ಧನಿತಂಬ-ಬಿಂಬೇ ರಾಜನ್ ಚಾಸೌ ನವಕೌಶೇಯವಿಶೇಷಶ್ಚ, ಶುಭ....ವಿಶೇಷಃ ಇತಿ ಬಾಹ್ಯಂ ವಸ್ತ್ರಂ ಯಸ್ಯ ಸಃ ತಂ; ತನುಶ್ಚಾಸೌ ಕುಕ್ಷಿಶ್ಚ ತನುಕುಕ್ಷಿಃ, ತನುಕುಕ್ಷಿಶ್ಚ ಗಲಶ್ಚ ಅಲಿಕಂ ಚ ತನುಕುಕ್ಷಿಗಲಾಲಿಕಾನಿ ತೇಷು, ತ್ರಯಃ ಅವಯವಾಃ ಅಸ್ಯೇತಿ ತ್ರಿತಯಂ, ರೇಖಾಣಾಂ ತ್ರಿತಯಂ ರೇಖಾತ್ರಿತಯಂ ತೇನ.

ಮೃದುಸೂಕ್ಷ್ಮಘನಾರುಣಾವಿಕಾಚ್ಛ-
ಪ್ರಕಟ(ಪ್ರವರ)ಪ್ರಾವರಣೇನ ಭಾಸಮಾನಂ ।
ಅತಿನೂತನತಿಗ್ಮಭಾನುಭಾಸಾಂ
ನಿಕರೇಣೇವ ಸುವರ್ಣಸಾನುಮಂತಂ ॥ ೩೧ ॥

Rarest Archiver

ಮೃದುಸೂಕ್ಷ್ಮಘನಾರುಣಾವಿಕಾಚ್ಛಪ್ರಕಟ (ಪ್ರವರ) ಪ್ರಾವರಣೇನ ಅತಿನೂತನತಿಗ್ಮಭಾನುಭಾಸಾಂ ನಿಕರೇಣ ಸುವರ್ಣಸಾನುಮಂತಂ ಇವ ಭಾಸಮಾನಂ–

ಮೃದು=ಕೋಮಲವಾದ, ಸೂಕ್ಷ್ಮ=ಸಣ್ಣದಾರದಿಂದ ಹೆಣೆದ, ಘನ=ಒತ್ತಾದ, ಅರುಣ=ನಸುಗೆಂಪಾದ, ಆವಿಕ=ಕುರಿಯರೋಮದಿಂದ ನಿರ್ಮಿತವಾದ, ಅಚ್ಛ = ನಿರ್ಮಲವಾದ, ಪ್ರಕಟ = ಎದ್ದು ಕಾಣಿಸುವ, (ಪ್ರವರ=ಶ್ರೇಷ್ಠವಾದ) ಪ್ರಾವರಣೇನ=ಹೊದ್ದಿಕೆಯಿಂದ, ಅತಿನೂತನ=ಅತ್ಯಂತಹೊಸಬನಾದ, (ಆಗ ತಾನೆ ಉದಯಿಸುತ್ತಿರುವ) ತಿಗ್ಮಭಾನು=ಸೂರ್ಯನ, ಭಾಸಾಂ=ಕಾಂತಿಗಳ, ನಿಕರೇಣ=ಸಮೂಹದಿಂದ, ಸುವರ್ಣಸಾನುಮಂತಂ ಇವ=ಚಿನ್ನದ ಮೇರುಪರ್ವತವನ್ನೋಪಾದಿಯಲ್ಲಿ, ಭಾಸಮಾನಂ = ಪ್ರಕಾಶಿಸುವ (ಶ್ರೀಮಧ್ವಾಚಾರ್ಯರನ್ನು ಜನರು ನೋಡಿದರು.)

ಆಚಾರ್ಯರು ಕುರಿಯರೋಮದಿಂದ ಮಾಡಿದ ಒಂದು ಕೆಂಪಾದ ಉತ್ತಮವಾದ ಶಾಲನ್ನು ಹೊದ್ದಿದ್ದರು. ಕೋಮಲವೂ, ಸಣ್ಣದಾರಗಳಿಂದ ನಿರ್ಮಿತವೂ ಆದ ಆ ಶಾಲು ಒತ್ತೊತ್ತಾಗಿರುವ ದಾರಗಳಿಂದ ನೇಯಲ್ಪಟ್ಟಿತ್ತು. ಚಿನ್ನದ ಮೇರುಪರ್ವತದ ತಪ್ಪಲುಪ್ರದೇಶದಲ್ಲಿ ಸೂರ್ಯನು ಆಗ ತಾನೇ ಉದಯಿಸುತ್ತಿದ್ದರೆ ಅವನ ಕಿರಣಗಳಿಂದ ಆ ಪರ್ವತಕ್ಕೆ ಯಾವ ಕಾಂತಿಯು ಬರುತ್ತದೆಯೋ ಅಂತಹ ಕಾಂತಿಯನ್ನು ಆ ಶಾಲನ್ನು ಹೊದೆದಿರುವ ಸ್ವರ್ಣವರ್ಣದ ಆಚಾರ್ಯರು ಹೊಂದಿದ್ದರು.

ಮೃದು ಚ ತತ್ ಸೂಕ್ಷ್ಮಂ ಚ ತತ್ ಘನಂ ಚ ತತ್ ಅರುಣಂ ಚ ತತ್ ಆವಿಕಂ ಚ ತತ್, ಅಚ್ಛಂ ಚ ತತ್, ಪ್ರಕಟಂ ಚ ತತ್ ಪ್ರಾವರಣಂ ಚ ಮೃದು ... ಪ್ರಾವರಣಂ ತೇನ, ಅತಿನೂತನಶ್ಚಾಸೌ ತಿಗ್ಮಭಾನುಶ್ಚ ಅತಿನೂತನತಿಗ್ಮಭಾನುಃ ತಸ್ಯ ಭಾಸಃ ತಾಸಾಂ, (ತಿಗ್ಮಾಃ ಭಾನವ ಕಿರಣಾಃ ಯಸ್ಯ ಸಃ ತಂ) ಭಾನುಃ ಕಿರಣಸೂರ್ಯಯೋಃ–ವಿಶ್ವ. ಸುವರ್ಣಮಯಾನಿ ಚ ತಾನಿ ಸಾನೂನಿ ಚ, ಸುವರ್ಣಸಾನೂನಿ, ತಾನಿ ಅಸ್ಯ ಸಂತೀತಿ ಸುವರ್ಣಸಾನುಮಾನ್ ತಂ ।

Rarest Archive

ಪೃಥುವಕ್ಷಸಮುನ್ನತಾಂಸಭಿತ್ತಿಂ
ಗುರುವೃತ್ತಾಯತಹೃದ್ಯಬಾಹುದಂಡಂ ।
ಪರಮಾರುಣಪಾಣಿಪಲ್ಲವಾಂತಃ
ಸ್ಫುರಿತೋರ್ಧ್ವಧ್ವಜಲಾಂಛನಾದಿಮಂತಂ ॥ ೩೨ ॥

ಪೃಥುವಕ್ಷಸಂ ಉನ್ನತಾಂಸಭಿತ್ತಿಂ ಗುರುವೃತ್ತಾಯತಹೃದ್ಯಬಾಹು-ದಂಡಂ ಪರಮಾರುಣಪಾಣಿಪಲ್ಲವಾಂತಃಸ್ಫುರಿತೋರ್ಧ್ವಧ್ವಜಲಾಂಛನಾದಿ-ಮಂತಂ ।

ಪೃಥುವಕ್ಷಸಂ = ವಿಶಾಲವಾದ ಎದೆಯುಳ್ಳ, ಉನ್ನತಾಂಸಭಿತ್ತಿಂ = ಎತ್ತರವಾದ ಗೋಡೆಯಂತಿರುವ ಹೆಗಲುಳ್ಳ, ಗುರು = ದಪ್ಪವಾದ, ವೃತ್ತ = ಗುಂಡಗಾದ, ಆಯುತ = ಉದ್ದವಾದ, ಹೃದ್ಯ = ಮನೋಹರವಾದ, ಬಾಹುದಂಡಂ = ದೊಣ್ಣೆಯಂತಿರುವ ತೋಳುಗಳುಳ್ಳ, ಪರಮಾರುಣ = ಬಹಳ ಕೆಂಪಾದ, ಪಾಣಿಪಲ್ಲವ = ಚಿಗುರೆಲೆಯಂತೆ ಇರುವ ಕೈಯ, ಅಂತಃ = ಒಳಗೆ, ಸ್ಫುರಿತ = ಶೋಭಿಸುತ್ತಿರುವ, ಊರ್ಧ್ವಧ್ವಜ = ಮೇಲ್ಮುಖವಾದ ಪತಾಕೆಯು, ಲಾಂಛನ = ಚಿಹ್ನೆಯೇ, ಆದಿಮಂತಂ = ಮೊದಲಾದುದು ಉಳ್ಳ, ಶ್ರೀಮಧ್ವಗುರುಗಳನ್ನು ಜನರು ಕಂಡರು.

ಶ್ರೀಮಧ್ವರು ಅಗಲವಾದ ಎದೆಯುಳ್ಳವರು. ಉಬ್ಬಿದ ಎತ್ತರವಾದ ಹೆಗಲುಳ್ಳವರು. ದೊಡ್ಡದಾಗಿ ದುಂಡಾಗಿಯೂ ಉದ್ದವಾಗಿಯೂ ಅಂದವಾಗಿಯೂ ಇರುವ ತೋಳುಗಳುಳ್ಳವರು, ಚಿಗುರಿನಂತೆ ಕೆಂಪಾದ ಅವರ ಅಂಗೈಯಲ್ಲಿ ಮೇಲ್ಮುಖವಾದ ಧ್ವಜರೇಖೆಯೇ ಮೊದಲಾದ ಚಿಹ್ನೆಗಳು ಶೋಭಿಸುತ್ತಿದ್ದುವು. ಇಂತಹ ಆಚಾರ್ಯರನ್ನು ಜನರು ಕಂಡರು.

ಪೃಥು ವಕ್ಷಃ ಯಸ್ಯ ಸಃ ಪೃಥುವಕ್ಷಾಃ ತಂ, ಅಂಸೌ ಏವ ಭಿತ್ತೀ ಅಂಸಭಿತ್ತೀ, ಉನ್ನತೇ ಅಂಸಭಿತ್ತೀ ಯಸ್ಯ ಸಃ ತಂ, (ಬಾಹೂ ದಂಡೌ ಇವ ಬಾಹುದಂಡೌ) ಗುರೂ ವೃತ್ತೌ ಆಯತೌ ಹೃದ್ಯೌ ಬಾಹೂ ಏವ ದಂಡೌ (ಬಾಹುದಂಡೌ) ಯಸ್ಯ ತಂ, ಪರಮಂ ಅರುಣೌ ಪರಮಾರುಣೌ, ಪಾಣೀ ಪಲ್ಲವೌ ಇವ ಪಾಣಿಪಲ್ಲವೌ, ಪರಮಾರುಣೌ ಚ ತೌ ಪಾಣಿಪಲ್ಲವೌ ಚ

Rarest Archiver

ಪರಮಾರುಣಪಾಣಿಪಲ್ಲವೌ, ಪರಮಾರುಣಪಾಣಿಪಲ್ಲವಯೋಃ ಅಂತಃ ಸ್ಫುರಿತಾನಿ, ಪರಮಾರುಣಪಾಣಿಪಲ್ಲವಾಂತಃಸ್ಫುರಿತಾನಿ, ಧ್ವಜಮಿತಿ ಲಾಂಛನಂ ಧ್ವಜಲಾಂಛನಂ, ಊರ್ಧ್ವಂ ಚ ತತ್ ಧ್ವಜಲಾಂಛನಂ ಚ ಊರ್ಧ್ವಧ್ವಜಲಾಂಛನಂ, ಊರ್ಧ್ವಧ್ವಜಲಾಂಛನಂ ಆದಿ ಯೇಷಾಂ ತಾನಿ ಊರ್ಧ್ವಧ್ವಜಲಾಂಛನಾದೀನಿ, ಪರಮಾ....ಸ್ಫುರಿತಾನಿ ಚ ತಾನಿ ಊರ್ಧ್ವ-ಧ್ವಜಲಾಂಛನಾದೀನಿ ಚ ಪರಮಾ..ಲಾಂಛನಾದೀನಿ, ತಾನಿ ಅಸ್ಯ ಸಂತೀತಿ ಲಾಂಛನಾದಿಮಾನ್ ತಂ;

ಪರಿಪೂರ್ಣಶಶಾಂಕಬಿಂಬಶಂಕಾ-
ವಿಷಯಂ ಪ್ರಾಕ್ ಸಹಸಾವಲೋಕನೇನ ।
ಅಕಲಂಕತಯಾ ಪರಂ ವಿವಿಕ್ತಂ
ವದನಂ ಬಿಭ್ರತಮಚ್ಛವಿಭ್ರಮಾಬ್ಧಿಂ ॥ ೩೩ ॥

ಪ್ರಾಕ್ ಸಹಸಾ ಅವಲೋಕನೇನ ಪರಿಪೂರ್ಣಶಶಾಂಕಬಿಂಬಶಂಕಾ-ವಿಷಯಂ ಪರಂ ಅಕಲಂಕತಯಾ ವಿವಿಕ್ತಂ ಅಚ್ಛವಿಭ್ರಮಾಬ್ಧಿಂ ವದನಂ ಬಿಭ್ರತಂ–

ಪ್ರಾಕ್ = ಮೊದಲು, ಸಹಸಾ = ಕೂಡಲೇ, ಅವಲೋಕನೇನ = ನೋಡುವುದರಿಂದ, ಪರಿಪೂರ್ಣಶಶಾಂಕ = ಹುಣ್ಣಿಮೆಯ ಚಂದ್ರನ, ಬಿಂಬ = ಮಂಡಲವೆಂಬ, ಶಂಕಾವಿಷಯಂ = ಸಂದೇಹಕ್ಕೆ (ಭ್ರಾಂತಿಗೆ) ಆಸ್ಪದವಾದ, ಪರಂ = ಅನಂತರ, ಅಕಲಂಕತಯಾ = ಕಲಂಕವಿಲ್ಲದಿರುವುದರಿಂದ, ವಿವಿಕ್ತಂ = ಚಂದ್ರನಿಗಿಂತ ಬೇರೆಯಾದುದು ಎಂದು ತಿಳಿಯಲ್ಪಡುವ, ಅಚ್ಛವಿಭ್ರಮಾಬ್ಧಿಂ = ನಿರ್ಮಲವಾದ ಕಾಂತಿ (ವಿಲಾಸ) ಗಳಿಗೆ ಸಮುದ್ರದಂತಿರುವ, ವದನಂ ಬಿಭ್ರತಂ = ಮುಖವನ್ನು ಧರಿಸಿರುವ, (ಶ್ರೀಮಧ್ವಮುನಿಗಳನ್ನು ಜನರು ಕಂಡರು.)

ಆಚಾರ್ಯರ ಮುಖವನ್ನು ಕಂಡಕೂಡಲೇ ಮೊದಲು ಇದು ಹುಣ್ಣಿಮೆಯ ಚಂದ್ರನ ಪೂರ್ಣಬಿಂಬವೆಂಬ ಸಂಶಯ ಮತ್ತು ಭ್ರಾಂತಿಗಳು ಹುಟ್ಟುತ್ತಿದ್ದುವು. ಆದರೆ ಕಳಂಕವಿಲ್ಲದಿರುವುದರಿಂದ ವಿವೇಚನೆ

Rarest Archiver

ಮಾಡಿದಾಗ ಕೊನೆಯಲ್ಲಿ ಇದು ಚಂದ್ರಮಂಡಲವಲ್ಲ. ನಿರ್ಮಲವಾದ ವಿಲಾಸ ಮತ್ತು ಕಾಂತಿಗಳಿಂದ ಚಂದ್ರನಿಗಿಂತಲೂ ಅಧಿಕವಾಗಿ ರಾಜಿಸುವ ಶ್ರೀಮಧ್ವರ ಅದ್ವಿತೀಯವಾದ ಮುಖವು ಎಂಬ ನಿಶ್ಚಯವುಂಟಾಗುತ್ತಿತ್ತು. ಇಂತಹ ಮುಖವುಳ್ಳ ಶ್ರೀಮಧ್ವಗುರುವರ್ಯರನ್ನು ಜನರು ನೋಡಿದರು.

ಶಶಾಂಕಸ್ಯ ಬಿಂಬಂ, ಪರಿಪೂರ್ಣಂ ಚ ತತ್ ಶಶಾಂಕಬಿಂಬಂ ಚ, ಪರಿಪೂರ್ಣಶಶಾಂಕಬಿಂಬಂ ಇತಿ ಶಂಕಾ, ಪರಿಪೂರ್ಣಶಶಾಂಕಬಿಂಬ-ಶಂಕಾಯಾಃ ವಿಷಯಃ ಪರಿಪೂರ್ಣಶಶಾಂಕಬಿಂಬಶಂಕಾವಿಷಯಃ ತಂ; ನ ವಿದ್ಯತೇ ಕಲಂಕಃ ಯಸ್ಯ ತತ್ ಅಕಲಂಕಂ, ತಸ್ಯ ಭಾವಃ ಅಕಲಂಕತಾ ತಯಾ, ಅಚ್ಛಶ್ಚಾಸೌ ವಿಭ್ರಮಶ್ಚ ಅಚ್ಛವಿಭ್ರಮಃ ಅಚ್ಛವಿಭ್ರಮಸ್ಯ ಅಬ್ಧಿಃ ತಂ (ವಿಭ್ರಮಃ ಸಂಶಯೇ ಭ್ರಾಂತೌ ಶೋಭಾಯಾಂ ಚ — ವೈಜಯಂತೀ)

ಅತಿಸುಂದರಮಂದಹಾಸರಾಜ
ನ್ನವಕುಂದಾಭರದಂ ಶುಭಾರುಣೋಷ್ಠಂ ।
ಕಮಲಾಯತಲೋಚನಾವಲೋಕೈ-
ರಪಿ ಲೋಕಾನ್ ಸಕಲಾನ್ ಪ್ರಹರ್ಷಯಂತಂ ॥ ೩೪ ॥

ಅತಿಸುಂದರಮಂದಹಾಸರಾಜನ್ನವಕುಂದಾಭರದಂ ಶುಭಾರು-ಣೋಷ್ಠಂ ಕಮಲಾಯತಲೋಚನಾವಲೋಕೈಃ ಸಕಲಾನ್ ಲೋಕಾನಪಿ ಪ್ರಹರ್ಷಯಂತಂ.

ಅತಿಸುಂದರ = ಅತ್ಯಂತಮನೋಹರವಾದ, ಮಂದಹಾಸ = ಮುಗುಳುನಗೆಯಿಂದ, ರಾಜತ್ = ಪ್ರಕಾಶಿಸುವ, ನವ = ಹೊಸದಾದ, ಕುಂದಾಭರದಂ = ಮಲ್ಲಿಗೆ ಮೊಗ್ಗಿನ ಕಾಂತಿಯಂತೆ ಕಾಂತಿಯು ಹಲ್ಲುಗಳುಳ್ಳ, ಶುಭ, ಅರುಣ = ಮಂಗಳಕರವಾದ ಮತ್ತು ಕೆಂಪಾದ, ಓಷ್ಠಂ = ತುಟಿಯುಳ್ಳ, ಕಮಲಾಯತ = ತಾವರೆ ಹೂವಿನದಳದಂತೆ ವಿಶಾಲವಾದ, ಲೋಚನ = ಕಣ್ಣುಗಳ, ಅವಲೋಕೈಃ = ನೋಟಗಳಿಂದ, ಸಕಲಾನ್ ಅಪಿ = ಎಲ್ಲ ಜನರನ್ನೂ, ಪ್ರಹರ್ಷಯಂತಂ = ಸಂತೋಷಗೊಳಿಸುತ್ತಿರುವ (ಶ್ರೀಮಧ್ವಾಚಾರ್ಯರನ್ನು ಜನರು ನೋಡಿದರು.)

Rarest Archiver

ಆಚಾರ್ಯರು ಸುಂದರಮಂದಹಾಸ ಮಾಡುತ್ತಿರುವಾಗ ಮಲ್ಲಿಗೆಯ ಮೊಗ್ಗಿನಂತಹ ಅವರ ಹಲ್ಲುಗಳು ಪ್ರಕಾಶಿಸುತ್ತಿದ್ದವು. ಅವರ ತುಟಿಯು ಕೆಂಪಾಗಿ ಸುಂದರವಾಗಿತ್ತು. ಕಮಲದಳದಂತೆ ವಿಶಾಲದೀರ್ಘವಾದ ಕಣ್ಣುಗಳ ನೋಟಗಳಿಂದ ಅವರು ಎಲ್ಲಾ ಜನರನ್ನೂ ಸಂತೋಷಪಡಿಸುತ್ತಿದ್ದರು. ಇಂತಹ ಆಚಾರ್ಯರನ್ನು ಜನರು ನೋಡಿದರು.

ಅತಿಶಯೇನ ಸುಂದರಃ ಅತಿಸುಂದರಃ, ಅತಿಸುಂದರಶ್ಚಾಸೌ ಮಂದ-ಹಾಸಶ್ಚ ಅತಿಸುಂದರಮಂದಹಾಸಃ, ನವಾನಿ ಚ ತಾನಿ ಕುಂದಾನಿ ಚ ನವಕುಂದಾನಿ, ನವಕುಂದಾನಾಂ ಆಭಾ ಇವ ಆಭಾ ಯೇಷಾಂ ತೇ ನವ-ಕುಂದಾಭಾಃ, ಅತಿಸುಂದರಮಂದಹಾಸೇನ ರಾಜಂತಃ ನವಕುಂದಾಭಾಃ ರದಾಃ ಯಸ್ಯ ಸಃ ಅತಿಸುಂದರ ರದಃ ತಂ, ಶುಭೌ ಅರುಣೌ ಓಷ್ಠೌ ಯಸ್ಯ ಸಃ ತಂ, ಕಮಲವತ್ ಆಯತೇ, ಕಮಲಾಯತೇ, ಕಮಲಾಯತೇ ಚ ತೇ ಲೋಚನೇ ಚ ಕಮಲಾಯತಲೋಚನೇ, ಕಮಲಾಯತ-ಲೋಚನಯೋಃ ಅವಲೋಕಃ ತೈಃ,

ಅತಿಭಾಸುರಕರ್ಣಭಾಸಿತಶ್ರೀ-
ತುಲಸೀಗುಚ್ಛಮತುಚ್ಛಕಾಂತಿಗಂಡಂ ।
ಭುವನತ್ರಯಭೂತ್ಯಭೂತಿದಾನೇ
ಚತುರಭ್ರೂವರವಿಭ್ರಮಂ ಸುಮೌಲಿಂ ॥ ೩೫ ॥

ಅತಿಭಾಸುರಕರ್ಣಭಾಸಿತಶ್ರೀತುಲಸೀಗುಚ್ಛಂ ಅತುಚ್ಛಕಾಂತಿಗಂಡಂ ಭುವನತ್ರಯಭೂತ್ಯಭೂತಿದಾನೇ ಚತುರಭ್ರೂವರವಿಭ್ರಮಂ ಸುಮೌಲಿಂ.

ಅತಿಭಾಸುರ = ಅತ್ಯಂತಪ್ರಕಾಶಮಾನವಾದ, ಕರ್ಣ = ಕಿವಿಗಳಲ್ಲಿ, ಭಾಸಿತ = ಪ್ರಕಾಶಿತವಾದ, ಶ್ರೀತುಲಸೀ = ಕಾಂತಿಪೂರ್ಣವಾದ ತುಲಸಿಯ, ಗುಚ್ಛಂ = ಮಂಜರಿಯು (ಗೊಂಚಲು) ಳ್ಳ, ಅತುಚ್ಛ = ಪೂರ್ಣವಾದ, ಕಾಂತಿ = ಶೋಭೆಯುಳ್ಳ, ಗಂಡಂ = ಕೆನ್ನೆಯುಳ್ಳ, ಭುವನತ್ರಯ = ಮೂರುಲೋಕಗಳಿಗೆ, ಭೂತಿ = ಉತ್ಪತ್ತಿಯು, ಅಭೂತಿ = ಸಂಹಾರವು. ಇವುಗಳ, ದಾನೇ = ಕೊಡುವುದರಲ್ಲಿ- ಚತುರ = ಸಮರ್ಥವಾದ, ಭ್ರೂವರ

Rarest Archiver

= ಶ್ರೇಷ್ಠವಾದ ಹುಬ್ಬುಗಳ, ವಿಭ್ರಮಂ = ವಿಲಾಸವುಳ್ಳ, ಸುಮೌಲಿಂ = ಸಲ್ಲಕ್ಷಣಪೂರ್ಣವಾದ ಶಿರಸ್ಸುಳ್ಳ (ಶ್ರೀಮಧ್ವಾಚಾರ್ಯರನ್ನು ಜನರು ಕಂಡರು.)

ಆಚಾರ್ಯರ ಪ್ರಕಾಶಮಾನವಾದ ಕಿವಿಗಳಲ್ಲಿ ತುಳಸೀಮಂಜರಿಯು ಶೋಭಿಸುತ್ತಿತ್ತು. ಅವರ ಕಪೋಲಗಳು ಕಾಂತಿಪೂರ್ಣವಾಗಿದ್ದುವು. ಅವರ ಹುಬ್ಬುಗಳ ವಿಲಾಸವು ಮೂರು ಲೋಕಗಳಿಗೆ ಸುಖ-ದುಃಖ, ಉತ್ಪತ್ತಿ-ಸಂಹಾರಾದಿಗಳನ್ನು ಉಂಟುಮಾಡುವುದಕ್ಕೂ ಸಮರ್ಥವಾಗಿತ್ತು. ಅವರ ಶಿರಸ್ಸು ಸಲ್ಲಕ್ಷಣಸಂಪನ್ನವಾಗಿತ್ತು. ಭೂತಿ=ಸಂಪತ್ತು, ಸುಖ, ಸೃಷ್ಟಿ, ಅಭೂತಿ=ದುಃಖ, ವಿಪತ್ತು, ಬಡತನ, ಸಂಹಾರ, ಇವನ್ನೆಲ್ಲಾ ತನ್ನ ಹುಬ್ಬಿನ ವಿಲಾಸಮಾತ್ರದಿಂದಲೇ ಉಂಟುಮಾಡುವ ಮಹಾಮಹಿಮ ಸಂಪನ್ನರು ಶ್ರೀಮಧ್ವಗುರುರಾಜರು ಎಂದು ಭಾವ. ಇಲ್ಲಿಗೆ ಪಾದಾದಿ ಶಿರಸ್ಸಿನವರೆಗೆ ಎಲ್ಲಾ ಅವಯವಗಳನ್ನೂ ವರ್ಣಿಸಿದಂತಾಯಿತು.

ಅತಿಭಾಸುರೌ ಚ ತೌ ಕರ್ಣೌ ಚ, ಅತಿ ಭಾಸುರಕರ್ಣಯೋಃ ಭಾಸಿತಃ ಶ್ರೀತುಲಸ್ಯಾಃ ಗುಚ್ಛಃ ಯಸ್ಯ ಸಃ ತಂ, ನ ತುಚ್ಛಾ (ಬಹುಲಾ), ಅತುಚ್ಛಾ ಕಾಂತಿಃ ಯಯೋಃ ತೌ ಅತುಚ್ಛಕಾಂತೀ, ಅತುಚ್ಛಕಾಂತೀ ಗಂಡೌ ಯಸ್ಯ ಸಃ ತಂ, ಭುವನಾನಾಂ ತ್ರಯಂ ಭುವನತ್ರಯಂ, ಭೂತಿಶ್ಚ ಅಭೂತಿಶ್ಚ ಭೂತ್ಯಭೂತೀ, ಭೂತ್ಯಭೂತ್ಯೋಃ ದಾನಂ ಭೂತ್ಯಭೂತಿದಾನಂ, ಭುವನತ್ರಯಸ್ಯ ಭೂತ್ಯಭೂತಿದಾನಂ, ಭುವನತ್ರಯಭೂತ್ಯ ಭೂತಿದಾನಂ ತಸ್ಮಿನ್, ಭ್ರೂಷು ವರೇ ಭ್ರೂವರೇ, ಭ್ರೂವರಯೋಃ ವಿಭ್ರಮಃ ಭ್ರೂವರವಿಭ್ರಮಃ, ಚತುರಃ ಭ್ರೂವರವಿಭ್ರಮಃ ಯಸ್ಯ ಸಃ ತಂ; ಸು ಶೋಭನಃ ಮೌಲಿಃ ಯಸ್ಯ ಸಃ ಸುಮೌಲಿಃ ತಂ;

ಶಿಲ್ಪಿಗಳು ಆಚಾರ್ಯರ ದೇಹಲಕ್ಷಣವನ್ನು ಪ್ರತ್ಯಕ್ಷ ಕಂಡು ಆ ಅಳತೆಯಿಂದ ಸುಲಕ್ಷಣಪ್ರತಿಮೆಯನ್ನು ಮಾಡಿದರು—

ಸಕಲಾವಯವಾನ್ ಸ್ಫುಟಂ ಮಿಮಾನಾಃ
ಪ್ರತಿಮಾಲಕ್ಷಣದರ್ಶನಾಯ ಲಕ್ಷ್ಯಂ ।

Rarest Archiver

ಚತುರಾ ವಿದಧುರ್ಯದೀಯಗಾತ್ರಂ
ಸ ಸುಲಕ್ಷ್ಮೇತ್ಯಧುನಾ ನಿಗದ್ಯತೇ ನೋ ॥೩೬॥

ಚತುರಾಃ ಸಕಲಾವಯವಾನ್ ಸ್ಫುಟಂ ಮಿಮಾನಾಃ ಯದೀಯಗಾತ್ರಂ ಪ್ರತಿಮಾಲಕ್ಷಣದರ್ಶನಾಯ ಲಕ್ಷ್ಯಂ ವಿದಧುಃ, ಸಃ ಅಧುನಾ ಸುಲಕ್ಷ್ಮಾ ಇತಿ ನೋ ನಿಗದ್ಯತೇ ॥

ಚತುರಾಃ=ಮಹಾಪುರುಷರ ಲಕ್ಷಣಗಳನ್ನು ಬಲ್ಲವರು, ಸಕಲಾವಯವಾನ್=ಎಲ್ಲಾ ಅಂಗಗಳನ್ನು, ಸ್ಫುಟಂ=ಸ್ಪಷ್ಟವಾಗಿ, ಮಿಮಾನಾಃ =ಅಳೆಯುವವರಾಗಿ, ಯದೀಯ=ಯಾವ ಮಧ್ವರ, ಗಾತ್ರಂ=ಶರೀರವನ್ನು, ಪ್ರತಿಮಾಲಕ್ಷಣದರ್ಶನಾಯ = ಪ್ರತಿಮೆಗಳ ಲಕ್ಷಣಗಳನ್ನು ತೋರಿಸುವುದಕ್ಕೆ, ಲಕ್ಷ್ಯಂ ವಿದಧುಃ=ಉದಾಹರಣೆಯನ್ನಾಗಿ ಮಾಡಿದರೋ, ಸಃ=ಅಂತಹ ಆಚಾರ್ಯರು, ಅಧುನಾ=ಈ ಜನ್ಮದಲ್ಲಿಯೇ, ಸುಲಕ್ಷ್ಮಾ ಇತಿ = ಒಳ್ಳೆಯ ಲಕ್ಷಣವುಳ್ಳವರೆಂದು, ನೋ ನಿಗದ್ಯತೇ= ಹೇಳಲ್ಪಡುವುದಿಲ್ಲ.

ಸಾಮುದ್ರಿಕಲಕ್ಷಣಗಳನ್ನು ಅರಿತ ಕುಶಲರಾದ ಪಂಡಿತರು ಆ ಮಧ್ವಾಚಾರ್ಯರ ಎಲ್ಲಾ ಅವಯವಗಳನ್ನು ಅಳೆದು ತಿಳಿದರು. ಅವುಗಳು ಲಕ್ಷಣಶಾಸ್ತ್ರಕ್ಕೆ ಅನುಸಾರವಾಗಿಯೇ ಇದ್ದುವು. ಇನ್ನು ಮುಂದೆ ಪ್ರತಿಮೆಗಳನ್ನು ತಯಾರಿಸುವಾಗ ಅವುಗಳ ಅಂಗಪ್ರತ್ಯಂಗಗಳು ಶ್ರೀಮಧ್ವರ ಅವಯವಗಳಂತೆಯೇ ಇರಬೇಕೆಂದು ಶಿಲ್ಪಪಂಡಿತರು ನಿಶ್ಚಯಿಸಿದರು. ಶ್ರೀಮಧ್ವಾಚಾರ್ಯರ ದೇಹವು ಲಕ್ಷಣಶಾಸ್ತ್ರಕ್ಕೆ ಅನುಗುಣವಾಗಿದೆ. ನಾರಾಯಣಪಂಡಿತಾಚಾರ್ಯನಾದ ನಾನು 'ಮಧ್ವಾಚಾರ್ಯರು ಈ ಅವತಾರದಲ್ಲಿ ಮಾತ್ರವೇ ಸಲ್ಲಕ್ಷಣಸಂಪನ್ನಗಾತ್ರ'ರೆಂದು ಹೇಳುವುದಿಲ್ಲ, ಅವರು ಎಲ್ಲಾ ಅವತಾರಗಳಲ್ಲಿಯೂ ಮೂಲರೂಪದಲ್ಲಿಯೂ 32 ಶುಭ ಲಕ್ಷಣಸಂಪನ್ನರಾದ ಮಹಾಪುರುಷರು ಎಂದು ಹೇಳುತ್ತೇನೆ.

ಸಕಲಾಶ್ಚ ತೇ ಅವಯವಾಶ್ಚ ತಾನ್, ಪ್ರತಿಮಾನಾಂ ಲಕ್ಷಣಾನಿ ಪ್ರತಿಮಾಲಕ್ಷಣಾನಿ ಪ್ರತಿಮಾಲಕ್ಷಣಾನಾಂ ದರ್ಶನಂ ತಸ್ಮೈ, ಯಸ್ಯ

Rarest Archiver

ಇದಂ, ಯದೀಯಂ ಚ ತತ್ ಗಾತ್ರಂ ಚ, ತತ್; ಸು ಶೋಭನಾನಿ ಲಕ್ಷ್ಮಾಣಿ ಯಸ್ಯ ಸಃ ಸುಲಕ್ಷ್ಮಾ.

ವಿ+ದಧುಃ, ದಧೌ ದಧತುಃ ದಧುಃ, ದಧಿಥೆ ದಧಾಥ ದಧಥುಃ ದಧ, ದಧೌ ದಧಿವ ದಧಿಮ ಡುಧಾಞ್ ಧಾರಣಪೋಷಣಯೋಃ ಪರ ಲಿಟ್. ನಿ+ಗದ್ಯತೇ ಗದ್ಯೇತೇ ಇತ್ಯಾದಿ. ಗದ ವ್ಯಕ್ತಾಯಾಂ ವಾಚಿ-ಕರ್ಮಣಿ ಲಟ್. 'ಅಹಂ ತಂ ಅಧುನಾ ಸುಲಕ್ಷ್ಮಾ ಇತಿ ನ ನಿಗದಾಮಿ. ಕರ್ತರಿ'.

ಅತಿಲೋಲದೃಶಾಂ ಸಮೀಕ್ಷಿತುಂ ಸ್ವಂ
ಜನಸಂಬಾಧಭಯೇನ ದೂರಭಾಜಾಂ ।
ಸಮದರ್ಶಯದೂರ್ಧ್ವಮೋರಸೋಽಸೌ
ದಯಯೈವೋರುಜನೌಘಮಧ್ಯಗೋಽಪಿ ॥೩೭॥

ಅಸೌ ಉರುಜನೌಘಮಧ್ಯಗಃ ಅಪಿ ಸ್ವಂ ಸಮೀಕ್ಷಿತುಂ ಅತಿಲೋಲ-ದೃಶಾಂ ಜನಸಂಬಾಧಭಯೇನ ದೂರಭಾಜಾಂ ದಯಯಾ ಏವ ಆ ಉರಸಃ ಊರ್ಧ್ವಂ ಸಮದರ್ಶಯತ್.

ಅಸೌ = ಈ ಮಧ್ವಾಚಾರ್ಯರು, ಉರುಜನ = ಬಹಳ ಜನರ, ಮಧ್ಯಗಃ ಅಪಿ = ನಡುವೆ ಇದ್ದಾಗ್ಯೂ, ಸ್ವಂ ಸಮೀಕ್ಷಿತುಂ = ತನ್ನನ್ನು ನೋಡುವುದಕ್ಕೆ, ಅತಿಲೋಲದೃಶಾಂ = ತುಂಬಾ ಕುತೂಹಲ ಆಸಕ್ತಿಗಳಿಂದ ಕೂಡಿದ ಕಣ್ಣುಗಳುಳ್ಳ, (ಆದರೆ) ಜನಸಂಬಾಧಭಯೇನ = ಜನರ ನುಗ್ಗಾಟ–ನೂಕಾಟದ ಹೆದರಿಕೆಯಿಂದ, ದೂರಭಾಜಾಂ = ದೂರದಲ್ಲಿರುವ ಜನರಿಗೆ, ದಯಯಾ ಏವ = ಕರುಣೆಯಿಂದಲೇ, ಆ ಉರಸಃ = ಎದೆಯಿಂದ ಆರಂಭಿಸಿ, ಊರ್ಧ್ವಂ = ಮೇಲ್ಭಾಗವನ್ನು, ಸಮದರ್ಶಯತ್ = ತೋರಿಸಿದರು.

ಶ್ರೀಮಧ್ವಾಚಾರ್ಯರು ಬಹುಜನರ ಗುಂಪಿನ ಮಧ್ಯದಲ್ಲಿದ್ದರು. ಅನೇಕಜನರು ಅವರನ್ನು ನೋಡಬೇಕೆಂಬ ತವಕದಿಂದ ಅತ್ತಿತ್ತ ಕಣ್ಣು ಹಾಯಿಸುತ್ತಾ ಜನರ ನೂಕುನುಗ್ಗಲಿಗೆ ಹೆದರಿ ದೂರದಲ್ಲಿಯೇ ನಿಂತಿದ್ದರು. ಆಚಾರ್ಯರಿಗೆ ಈ ವಿಷಯ ತಿಳಿಯಿತು. ಅವರು ಜನರ ಮೇಲೆ ಕರುಣೆ

Rarest Archiver

ಯಿಂದ ತನ್ನ ಎದೆಯಿಂದ ಶಿರಸ್ಸಿನ ತನಕ ದೇಹದ ಮೇಲ್ಭಾಗವನ್ನು ಎಲ್ಲರಿಗೂ ಚೆನ್ನಾಗಿ ತೋರಿಸಿದರು. ಅಂತಹ ಜನರ ಗುಂಪಿನಲ್ಲಿಯೂ ಆಚಾರ್ಯರು ತನ್ನ ದೇಹವನ್ನು ಎತ್ತರವಾಗಿ ಎದ್ದುಕಾಣುವಂತೆ ತೋರಿಸಿದರು ಎಂಬುದರಿಂದ ತನ್ನಿಷ್ಟದಂತೆ ಚಿಕ್ಕದಾಗುವುದು (ಅಣಿಮಾ) ದೊಡ್ಡದಾಗುವುದು (ಮಹಿಮಾ) ಭಾರವಾಗುವುದು (ಗರಿಮಾ) ಹಗುರವಾಗುವುದು (ಲಘಿಮಾ) ಮೊದಲಾದ ಅಷ್ಟೈಶ್ವರ್ಯಗಳ ಸಿದ್ಧಿಯೂ ಆಚಾರ್ಯರಿಗೆ ಇದ್ದಿತು ಎಂದು ಇದರಿಂದ ತಿಳಿದುಬರುತ್ತದೆ.

ಅತಿಲೋಲಾಃ ದೃಶಃ ಯೇಷಾಂ ತೇ ಅತಿಲೋಲದೃಶಃ, ತೇಷಾಂ ಜನಾನಾಂ ಸಂಬಾಧಃ ಜನಸಂಬಾಧಾತ್ ಭಯಂ ತೇನ, ದೂರಂ ಭಜಂತೀತಿ ದೂರಭಾಜಃ ತೇಷಾಂ, ಉರವಶ್ಚ ತೇ ಜನಾಶ್ಚ, ಉರುಜನಾನಾಂ ಓಘಃ, ಉರುಜನೌಘಸ್ಯ ಮಧ್ಯಂ, ಉರುಜನೌಘಮಧ್ಯಂ ಗಚ್ಛತೀತಿ ಉರುಜನೌಘಮಧ್ಯಗಃ ||

ಸಂ + ಅದರ್ಶಯತ್, ಅದರ್ಶಯತಾಂ ಅದರ್ಶಯನ್ ಇತ್ಯಾದಿ. ದೃಶಿರ್ ಪ್ರೇಕ್ಷಣೇ ಣಿಜಂತ ಲಙ್,

ಸವಿಕಾಸದೃಶಾಂ ಕೃತಾಂಜಲೀನಾಂ
ಜನತಾನಾಂ ಪರಮಾದರಾನ್ನತಾನಾಂ |
ವಲಯೇನ ವೃತಃ ಪ್ರಿಯಂ ಮುರಾರೇಃ
ಪ್ರವಿವೇಶಾಯತನಂ ಪ್ರಬರ್ಹಬೋಧಃ || ೩೮ ||

ಸವಿಕಾಸದೃಶಾಂ ಕೃತಾಂಜಲೀನಾಂ ಪರಮಾದರಾತ್ ನತಾನಾಂ ಜನತಾನಾಂ ವಲಯೇನ ವೃತಃ ಪ್ರಬರ್ಹಬೋಧಃ ಮುರಾರೇಃ ಪ್ರಿಯಂ ಆಯತನಂ ಪ್ರವಿವೇಶ.

ಸವಿಕಾಸದೃಶಾಂ = ಅರಳಿದ ಕಣ್ಣುಗಳಿಂದ ಕೂಡಿದ, ಕೃತಾಂಜಲೀನಾಂ = ಕೈಮುಗಿದುಕೊಂಡಿರುವ, ಪರಮಾದರಾತ್ = ಅತಿಶಯ ಭಕ್ತಿಯಿಂದ, ನತಾನಾಂ = ಬಾಗಿದ (ನಮ್ರರಾದ), ಜನತಾನಾಂ = ಜನರ ಸಮೂಹಗಳ, ವಲಯೇನ=ಬಳೆಯಂತಹ ಗುಂಪಿನಿಂದ, ವೃತಃ=ಸಹಿತರಾದ,

Rarest Archiver

ಪ್ರಬರ್ಹಬೋಧಃ=ಶ್ರೀಪೂರ್ಣಪ್ರಜ್ಞರು, ಮುರಾರೇಃ=ಶ್ರೀಮನ್ನಾರಾಯಣ ನಿಗೆ, ಪ್ರಿಯಂ=ಪ್ರೀತಿಕರವಾದ, ಆಯತನಂ=ದೇವಾಲಯವನ್ನು, ಪ್ರವಿವೇಶ=ಹೊಕ್ಕರು.

ಅಲ್ಲಿಯ ಜನರು ಸಂತೋಷಾಶ್ಚರ್ಯಗಳಿಂದ ಕಣ್ಣುಗಳನ್ನು ಅರಳಿಸಿ, ಕೈಮುಗಿದುಕೊಂಡು, ಅತ್ಯಂತಭಕ್ತಿಯಿಂದ ನಮಿಸಿ ವಿಧೇಯರಾಗಿ ಆಚಾರ್ಯರನ್ನು ಗುಂಪು ಗುಂಪಾಗಿ ಅನುಸರಿಸಿ ಬರುತ್ತಿದ್ದರು. ಅಂತಹ ಜನರ ಸಮೂಹಗಳಿಂದ ಕೂಡಿಕೊಂಡು ಶ್ರೀಮಧ್ವಾಚಾರ್ಯರು ವಿಷ್ಣುಮಂಗಲವೆಂಬ ಶ್ರೀಹರಿಯ ಆಲಯವನ್ನು ಪ್ರವೇಶಿಸಿದರು.

ವಿಕಾಸೇನ ಸಹಿತಾಃ, ಸವಿಕಾಸಾಃ ದೃಶಃ ಯಾಸಾಂ ತಾಃ ತಾಸಾಂ, ಕೃತಃ ಅಂಜಲಿಃ ಯಾಭಿಃ ತಾಃ ಕೃತಾಂಜಲಯಃ ತಾಸಾಂ, ಜನಾನಾಂ ಸಮೂಹಾಃ ಜನತಾಃ ತಾಸಾಂ, ಪರಮಃ ಚ ಅಸೌ ಆದರಶ್ಚ ಪರಮಾದರಃ ತಸ್ಮಾತ್, ಮುರಸ್ಯ ಅರಿಃ ಮುರಾರಿಃ ತಸ್ಯ, ಪ್ರಬರ್ಹಃ (ಶ್ರೇಷ್ಠಃ ಮುಖ್ಯವರ್ಯವರೇಣ್ಯಾಶ್ಚ ಪ್ರಬರ್ಹಃ- ಅಮರ) ಬೋಧಃ ಯಸ್ಯ ಸಃ,

ಪ್ರ+ವಿವೇಶ ವಿವಿಶತುಃ ವಿವಿಶುಃ ಇತ್ಯಾದಿ ವಿಶ ಪ್ರವೇಶನೇ, ಪ್ರ. ಉಪ. ಲಿಟ್.

ಆಗ ಜಯಸಿಂಹರಾಜನು ಮಾತ್ರವಲ್ಲದೆ ಬೇರೆ ಅನೇಕ ಅರಸರೂ ಕೂಡ ಆಚಾರ್ಯರ ಸೇವೆಗೆ ಅಲ್ಲಿ ನೆರೆದಿದ್ದರು—

ವಿವಿಧಪ್ರಭುಮಧ್ಯಸನ್ನಿಷಣ್ಣೋ
ನರದೇವೇನ ಸಮಂ ಸ ಗೂಢದೇವಃ ।
ವಿಬಭಾವುಡುರಾಡಿವೋಡುಮಧ್ಯೇ
ಸಮಹ್ಯಾಸ್ತನಯೇನ ಪೂರ್ಣಬಿಂಬಃ ॥ ೩೯ ॥

ನರದೇವೇನ ಸಮಂ ವಿವಿಧಪ್ರಭುಮಧ್ಯಸನ್ನಿಷಣ್ಣಃ ಗೂಢದೇವಃ ಸಃ ಉಡುಮಧ್ಯೇ ಮಹ್ಯಾಃ ತನಯೇನ ಸಹ ಪೂರ್ಣಬಿಂಬಃ ಉಡುರಾಟ್ ಇವ ವಿಬಭೌ.

Rarest Archiver

ನರದೇವೇನ ಸಮಂ=ಜಯಸಿಂಹರಾಜನೊಡನೆ, ವಿವಿಧಪ್ರಭು=ನಾನಾದೇಶದ ರಾಜರ, ಮಧ್ಯಸನ್ನಿಷಣ್ಣಃ=ಮಧ್ಯದಲ್ಲಿ ಕುಳಿತಿರುವ, ಗೂಢದೇವಃ ಸಃ=ರಹಸ್ಯವಾದ ದೇವರಾಗಿರುವ (ಮುಖ್ಯಪ್ರಾಣರಾಗಿ ಇರುವ) ಆ ಶ್ರೀಮಧ್ವಾಚಾರ್ಯರು, ಉಡುಮಧ್ಯೇ=ನಕ್ಷತ್ರಗಳ ಮಧ್ಯದಲ್ಲಿ, ಮಹ್ಯಾಃ ತನಯೇನ ಸಹ=ಭೂಮಿಯ ಪುತ್ರನಾದ ಅಂಗಾರಕನೊಡನೆ, ಪೂರ್ಣಬಿಂಬಃ=ಎಲ್ಲಾ ಕಲೆಗಳಿಂದ ತುಂಬಿದ ಮಂಡಲವುಳ್ಳ, ಉಡುರಾಟ್ ಇವ=ಚಂದ್ರನಂತೆ, ವಿಬಭೌ=ವಿರಾಜಿಸಿದರು.

ನಕ್ಷತ್ರಗಳ ಮಧ್ಯದಲ್ಲಿ ಅಂಗಾರಕನಿಂದ ಸಹಿತನಾದ ಹುಣ್ಣಿಮೆಯ ಚಂದ್ರನು ಪ್ರಕಾಶಿಸುವಂತೆ ಶ್ರೀಮಧ್ವಾಚಾರ್ಯರು ಜಯಸಿಂಹಮಹಾರಾಜ, ಮತ್ತು ಬೇರೆ ಅರಸರ ಮಧ್ಯದಲ್ಲಿ ಮನುಷ್ಯರೂಪದಿಂದ ತನ್ನ ಮುಖ್ಯಪ್ರಾಣರೂಪವನ್ನು ಅಡಗಿಸಿಕೊಂಡು ಕುಳಿತು ಪ್ರಕಾಶಿಸಿದರು.

ವಿವಿಧಾಶ್ಚ ತೇ ಪ್ರಭವಶ್ಚ ವಿವಿಧಪ್ರಭವಃ ವಿವಿಧಪ್ರಭೂಣಾಂ ಮಧ್ಯಂ ವಿವಿಧಪ್ರಭುಮಧ್ಯಂ, ತಸ್ಮಿನ್ ಸನ್ನಿಷಣ್ಣಃ, ನರಾಣಾಂ ದೇವಃ ನರದೇವಃ ತೇನ, ಗೂಢಶ್ಚಾಸೌ ದೇವಶ್ಚ ಗೂಢದೇವಃ; ಉಡೂನಾಂ ರಾಟ್, ಉಡೂನಾಂ ಮಧ್ಯಂ ತಸ್ಮಿನ್, ಪೂರ್ಣಂ ಬಿಂಬಂ ಯಸ್ಯ ಸಃ,

ವಿ+ಬಭೌ ಬಭತುಃ ಬಭುಃ, ಬಭಿಥ ಬಭಾಥ ಬಭಥುಃ ಬಭ, ಬಭೌ ಬಭಿವ ಬಭಿಮ. ಭಾ ದೀಪ್ತೌ ಅಕ. ಪರ. ಲಿಟ್.

ಆಚಾರ್ಯರು ಭಾಗವತಪುರಾಣಪ್ರವಚನ ಮಾಡಿದರು–

ಅವದತ್ಸ ಕಥಾಂ ರಥಾಂಗಪಾಣೇ-
ರ್ಭಗವಾನ್ ಭಾಗವತೇ ಭವಾಪಹಂತ್ರೀಂ ।
ಅನುರೂಪಗುಣಸ್ವರಾದಿಭಾಜಾ
ನಿಜಶಿಷ್ಯಪ್ರವರೇಣ ವಾಚ್ಯಮಾನೇ ॥ ೪೦ ॥

ಭಗವಾನ್ ಸಃ ಅನುರೂಪಗುಣಸ್ವರಾದಿಭಾಜಾ ನಿಜಶಿಷ್ಯಪ್ರವರೇಣ ಭಾಗವತೇ ವಾಚ್ಯಮಾನೇ, ರಥಾಂಗಪಾಣೇಃ ಭವಾಪಹಂತ್ರೀಂ ಕಥಾಂ ಅವದತ್.

Rarest Archive

ಭಗವಾನ್ ಸಃ = ಷಡ್ಗುಣೈಶ್ವರ್ಯಸಂಪನ್ನರಾದ ಆ ಮಧ್ವರು, ಅನುರೂಪಗುಣಸ್ವರಾದಿಭಾಜಾ = ತನಗೆ ಅನುಕೂಲವಾದ ಶ್ರಾವ್ಯತ್ವ-ಮೊದಲಾದ ಗುಣ, ಮತ್ತು ಕಂಠಧ್ವನಿಗಳನ್ನು ಹೊಂದಿರುವ, ನಿಜಶಿಷ್ಯ-ಪ್ರವರೇಣ = ತನ್ನ ಶಿಷ್ಯರಲ್ಲಿ ಶ್ರೇಷ್ಠರಾದ ಹೃಷೀಕೇಶತೀರ್ಥರಿಂದ, ಭಾಗವತೇ ವಾಚ್ಯಮಾನೇ ಸತಿ = ಭಾಗವತವು ಓದಲ್ಪಡುತ್ತಿರುವಾಗ, ರಥಾಂಗಪಾಣೇಃ = ಸುದರ್ಶನಚಕ್ರಧಾರಿಯಾದ ಶ್ರೀಹರಿಯ, ಭವಾಪ-ಹಂತ್ರೀಂ = ಸಂಸಾರಪರಿಹಾರಕವಾದ, ಕಥಾಂ = ಕಥೆಯನ್ನು, ಅವದತ್ = ಹೇಳಿದರು.

ಸಮಗ್ರಐಶ್ವರ್ಯಾದಿಷಡ್ಗುಣಗಳಿಂದಲೂ, ಜ್ಞಾನವೈರಾಗ್ಯಾದಿಗಳಿಂದಲೂ ಪೂರ್ಣರಾದ ಶ್ರೀಮಧ್ವಾಚಾರ್ಯರು ಕಿವಿಗಿಂಪಾದ ಮಧುರ ಸ್ವರ ಮತ್ತು ವಾಚನನೈಪುಣ್ಯ ಮೊದಲಾದ ಗುಣಗಳುಳ್ಳ ತನ್ನ ಶಿಷ್ಯಶ್ರೇಷ್ಠರಾದ ಹೃಷೀಕೇಶತೀರ್ಥರು ಭಾಗವತಪುರಾಣವನ್ನು ಪಠಿಸುತ್ತಿರುವಾಗ ಸಂಸಾರಪರಿಹಾರಕವಾದ ಭಾಗವತದ ಶ್ರೀಕೃಷ್ಣಚರಿತ್ರೆಯನ್ನು ಉಪನ್ಯಾಸ ರೂಪದಿಂದ ಉಪದೇಶಿಸಿದರು. ಹೃಷೀಕೇಶತೀರ್ಥರು ಭಾಗವತದ ಶ್ಲೋಕಗಳನ್ನು ಸಂಗೀತದ ಸ್ವರದಿಂದ ಕಿವಿಗಿಂಪಾಗಿ ಓದಿದರು. ಆಚಾರ್ಯರು ಆ ಶ್ಲೋಕಗಳ ಅರ್ಥವನ್ನು ವಿವರಿಸಿದರು.

ರಥಾಂಗಂ ಪಾಣೌ ಯಸ್ಯ ಸಃ ರಥಾಂಗಪಾಣಿಃತಸ್ಯ, ಭಗಃ ಅಸ್ಯ ಅಸ್ತೀತಿ ಭಗವಾನ್, ಭವಂ ಅಪಹಂತೀತಿಭ ವಾಪಹಂತ್ರೀ ತಾಂ, ಅನುರೂಪಃ ಗುಣಃ ಯಸ್ಯ ಸಃ, ಅನುರೂಪಗುಣಶ್ಚಾಸೌ ಸ್ವರಶ್ಚ, ಅನುರೂಪಗುಣಸ್ವರಃ ಆದಿಃ ಯಸ್ಯ ಸಃ ಅನುರೂಪಗುಣಸ್ವರಾದಿಃ, ತಂ ಭಜತೀತಿ ಅನುರೂಪ-ಗುಣಸ್ವರಾದಿಭಾಕ್ ತೇನ, ನಿಜಾಶ್ಚ ತೇ ಶಿಷ್ಯಾಶ್ಚ, ನಿಜಶಿಷ್ಯೇಷು ಪ್ರವರಃ ತೇನ, (ನಿಜಶಿಷ್ಯಪ್ರವರಃ ಹೃಷೀಕೇಶತೀರ್ಥಃ ತೇನ—ಭಾ. ಪ್ರ.)

ಅವದತ್ ಅವದತಾಂ ಅವದನ್ ಇತ್ಯಾದಿ, ವದ ವ್ಯಕ್ತಾಯಾಂ ವಾಚಿ ಸಕ. ಪರ. ಲಙ್.

ಆಚಾರ್ಯರ ಭಾಗವತಪ್ರವಚನದ ಅದ್ಭುತಶೈಲಿ—

Rarest Archives

ಕಥನಂ ತದುದಾರಧೈರ್ಯಸಾರಂ
ಮಧುರಂ ಪುಷ್ಕಲಭಾವವತ್ ಪ್ರಸನ್ನಂ ।
ವಿದುಷೋಽವಿದುಷೋಽಪಿ(ತ್ರ)ಶೃಣ್ವತೋಽಲಂ
ವ್ಯಧಿತಾನಂದರಸಾಂಬುಧೌ ನಿಮಗ್ನಾನ್ ॥ ೪೧ ॥

ಉದಾರಧೈರ್ಯಸಾರಂ ಮಧುರಂ ಪುಷ್ಕಲಭಾವವತ್ ಪ್ರಸನ್ನಂ ತತ್ ಕಥನಂ (ಅತ್ರ) ಅಲಂ ಶೃಣ್ವತಃ ವಿದುಷಃ ಅವಿದುಷಃ ಅಪಿ ಆನಂದ-ರಸಾಂಬುಧೌ ನಿಮಗ್ನಾನ್ ವ್ಯಧಿತ.

ಉದಾರಧೈರ್ಯ = ಉತ್ಕೃಷ್ಟವಾದ ಧೈರ್ಯದಿಂದ, ಸಾರಂ = ಶ್ರೇಷ್ಠವಾದ, ಮಧುರಂ = ಇಂಪಾದ, ಪುಷ್ಕಲಭಾವವತ್ = ವಿಪುಲವಾದ ಅಭಿಪ್ರಾಯದಿಂದ ಗರ್ಭಿತವಾದ, ಪ್ರಸನ್ನಂ = ಅರ್ಥಶಬ್ದಗಳೆರಡರ ದೃಷ್ಟಿಯಿಂದಲೂ ಮೃದುವಾದ, ತತ್ ಕಥನಂ = ಆ ಪುರಾಣಪ್ರವಚನವು, (ಅತ್ರ = ಈ ಸಭೆಯಲ್ಲಿ) ಅಲಂಶೃಣ್ವತಃ = ಚೆನ್ನಾಗಿ ಕೇಳುತ್ತಿರುವ, ವಿದುಷಃ = ವಿದ್ವಾಂಸರನ್ನೂ, ಅವಿದುಷಃ ಅಪಿ = ಸಾಧಾರಣಜನರನ್ನೂ, ಆನಂದರಸ = ಸುಖವೆಂಬ ಜಲದ, ಅಂಬುಧೌ = ಸಮುದ್ರದಲ್ಲಿ, ನಿಮಗ್ನಾನ್ = ಮುಳುಗಿದವರನ್ನಾಗಿ, ವ್ಯಧಿತ = ಮಾಡಿತು.

ಆಚಾರ್ಯರ ಪುರಾಣೋಪನ್ಯಾಸವು ಎಂತಹ ಮಹಾಸಭೆಯಲ್ಲಿಯೂ ಸಭಾಕಂಪಾದಿದೋಷಗಳಿಲ್ಲದೆ, ಉತ್ತಮಧೈರ್ಯದ ವಚನವೈಖರಿಯಿಂದ ಕೂಡಿ ಶ್ರೇಷ್ಠವಾಗಿತ್ತು. ಕೇಳತಕ್ಕವರಿಗೆ ಕಿವಿಗೆ ಇಂಪಾಗಿತ್ತು. ಪುಷ್ಕಳ ಅಭಿಪ್ರಾಯಗರ್ಭಿತವಾಗಿತ್ತು. ಶಬ್ದಾರ್ಥಗಳೆರಡರಲ್ಲಿಯೂ ಕಾಠಿಣ್ಯವಿಲ್ಲದೆ ಸರಳವಾಗಿತ್ತು. ಇಂತಹ ಆಚಾರ್ಯರ ಇಂತಹ ಭಾಗವತಪುರಾಣೋಪ-ನ್ಯಾಸವು ಆ ಸಭೆಯಲ್ಲಿ ಕೇಳುತ್ತಿರುವ ಪಂಡಿತರನ್ನೂ ಪಾಮರರನ್ನೂ ಆನಂದ ಸಮುದ್ರದಲ್ಲಿ ಮಗ್ನರನ್ನಾಗಿ ಮಾಡಿತು. ಲೋಕದಲ್ಲಿ ಕೆಲವರ ಪುರಾಣ ಪ್ರವಚನವು ಪಂಡಿತರಿಗೆ ಮಾತ್ರವೇ ತಿಳಿಯುತ್ತದೆ. ಮತ್ತೆ ಕೆಲವರ ಪುರಾಣೋಪನ್ಯಾಸವು ಸಾಧಾರಣಜನರಿಗೆ ಮಾತ್ರವೇ ಮನೋರಂಜಕವಾಗಿರುತ್ತದೆ. ಆಚಾರ್ಯರ ಪುರಾಣಕಥನವಾದರೋ ಸರ್ವಜನರಿಗೂ ಆನಂದವನ್ನುಂಟುಮಾಡಿತು.

Rarest Archiver

ಉದಾರಂ ಚ ತತ್ ಧೈರ್ಯಂ ಚ ಉದಾರಧೈರ್ಯಂ, ತಸ್ಯ ಸಾರಂ, ಅಥವಾ ಉದಾರಧೈರ್ಯಸ್ಯ ಸಾರಃ ಯಸ್ಮಿನ್ ತತ್, ಪುಷ್ಕಲಶ್ಚಾಸೌ ಭಾವಶ್ಚ, ಪುಷ್ಕಲಭಾವಃ ಅಸ್ಯ ಅಸ್ತೀತಿ ಪುಷ್ಕಲಭಾವವತ್, ನ ವಿದ್ವಾಂಸಃ ಅವಿದ್ವಾಂಸಃ ತಾನ್, ಆನಂದ ಏವ ರಸಃ ಯಸ್ಮಿನ್ ಸಃ, ಆನಂದರಸಶ್ಚಾಸೌ ಅಂಬುಧಿಶ್ಚ ಆನಂದರಸಾಂಬುಧಿಃ ತಸ್ಮಿನ್,

ವಿ+ಅಧಿತ ಅಧಿಷಾತಾಂ ಅಧಿಷತ ಇತ್ಯಾದಿ ಡು(ಧಾ) ಞ್ಧಾರಣಪೋಷಣಯೋಃ ಆತ್ಮನೇ. ಲುಙ್.

ಆಚಾರ್ಯರ ಚರಿತ್ರೆಗಳು ಬಹಳ ಇವೆ ಆದರೆ ನನಗೆ ವರ್ಣಿಸಲು ಸಾಧ್ಯವಿಲ್ಲ. ಪ್ರಕೃತ ಬೇರೊಂದು ಕಥೆಯನ್ನು ಪ್ರಸ್ತಾವಿಸಲಿದ್ದೇನೆ. ಅದಕ್ಕೋಸ್ಕರ ಈ ಕಥೆಯನ್ನು ಸದ್ಯ ಇಲ್ಲಿ ನಿಲ್ಲಿಸಿದ್ದೇನೆ—

ಗಮನಾಸನಸಂಕಥಾದಿಲೀಲಾಃ
ಸ್ಮೃತಿಮಾತ್ರೇಣ ಭವಾಪವರ್ಗದಾತ್ರೀಃ ।
ಕಥಮಪ್ಯಮರಾಃ ಪ್ರಪಂಚಯೇಯು
ರ್ನನು ಮಧ್ವಸ್ಯ ನ ಮಾದೃಶೋಽಲ್ಪಬೋಧಾಃ ॥ ೬೨ ॥

ಸ್ಮೃತಿಮಾತ್ರೇಣ ಭವಾಪವರ್ಗದಾತ್ರೀಃ ಮಧ್ವಸ್ಯ ಗಮನಾಸನಸಂಕಥಾದಿಲೀಲಾಃ ಅಮರಾಃ ಕಥಮಪಿ ಪ್ರಪಂಚಯೇಯುಃ; ಮಾದೃಶಃ ಅಲ್ಪಬೋಧಾಃ ನ (ಪ್ರಪಂಚಯೇಯುಃ) ನನು.

ಸ್ಮೃತಿಮಾತ್ರೇಣ = ಸ್ಮರಣೆಮಾಡುವುದರಿಂದಲೇ, ಭವಾಪವರ್ಗದಾತ್ರೀಃ = ಸಂಸಾರದಿಂದ ಬಿಡುಗಡೆಯನ್ನು (ಮೋಕ್ಷವನ್ನು) ಕೊಡುವ, ಮಧ್ವಸ್ಯ = ಶ್ರೀಮಧ್ವಾಚಾರ್ಯರ, ಗಮನ = ನಡಿಗೆ, ಆಸನ = ಕುಳಿತುಕೊಳ್ಳುವುದು, ಸಂಕಥಾ = ಪ್ರವಚನ ಇವೇ, ಆದಿ = ಮೊದಲಾಗಿ ಉಳ್ಳ, ಲೀಲಾಃ = ಆಟದಂತಿರುವ ಕಾರ್ಯಗಳನ್ನು, ಅಮರಾಃ = ದೇವತೆಗಳು, ಕಥಮಪಿ = ಹೇಗಾದರೂ, (ಕಷ್ಟದಿಂದ) ಪ್ರಪಂಚಯೇಯುಃ = ವಿಸ್ತರಿಸಿ ವರ್ಣಿಸಿಯಾರು. ಮಾದೃಶಃ = ನನ್ನಂತಹ, ಅಲ್ಪಬೋಧಾಃ = ಅಲ್ಪಜ್ಞರು, ನ (ಪ್ರಪಂಚಯೇಯುಃ) ನನು = ವಿಸ್ತರಿಸಿ ವರ್ಣಿಸಲಾರರಷ್ಟೆ.

Rarest Archiver

ಆಚಾರ್ಯರ ಲೀಲೆಗಳ ಸ್ಮರಣಮಾತ್ರದಿಂದಲೇ, ಯೋಗ್ಯಜೀವರಿಗೆ ಸಂಸಾರದಿಂದ ಬಿಡುಗಡೆಯಾಗುತ್ತದೆ. ಆಚಾರ್ಯರ ಹೋಗುವಿಕೆ ಕುಳಿತು ಕೊಳ್ಳುವಿಕೆ, ಮಾತಾಡುವಿಕೆ ಮೊದಲಾದ ಲೀಲೆಗಳನ್ನು ಭಾರತೀದೇವಿ, ರುದ್ರದೇವರು ಮೊದಲಾದವರ ಅನುಗ್ರಹದಿಂದ ದೇವತೆಗಳು ವಿಸ್ತರಿಸಿ ವರ್ಣಿಸಿ ಹೇಳಬಲ್ಲರು. ನನ್ನಂತಹ ಅಲ್ಪಮತಿಗಳಾದ ಮಾನವರು ವರ್ಣಿಸಿ ಹೇಳಲು ಸಮರ್ಥರಲ್ಲವೆಂಬುದು ನಿಶ್ಚಿತವಾದ ವಿಷಯವು.

ಗಮನಂ ಚ ಆಸನಂ ಚ ಸಂಕಥಾ ಚ, ಗಮನಾಸನಸಂಕಥಾಃ ಆದಯಃ ಯಾಸಾಂ ತಾಃ, ಗಮನಾಸನಸಂಕಥಾದಯಶ್ಚ ತಾಃ ಲೀಲಾಶ್ಚ ಗಮನಾಸನಸಂಕಥಾದಿಲೀಲಾಃ, ತಾಃ, ಕೇವಲಾ ಸ್ಮೃತಿಃ ಸ್ಮೃತಿಮಾತ್ರಂ ತೇನ, ಭವಾತ್ ಅಪವರ್ಗಃ, ಭವಾಪವರ್ಗಸ್ಯ ದಾತ್ರ್ಯಃ ತಾಃ, ಅಹಮಿವ ದೃಶ್ಯಂತೇ ಇತಿ ಮಾದೃಶಃ, ಅಲ್ಪಃ ಬೋಧಃ ಯೇಷಾಂ ತೇ;

ಪ್ರ + ಪಂಚಯೇತ್ ಪಂಚಯೇತಾಂ ಪಂಚಯೇಯುಃ ಇತ್ಯಾದಿ. ಪಚಿ ವಿಸ್ತಾರವಚನೇ ಣಿಜಂತ (1652) ವಿಧಿಲಿಜ್ ಪ್ರ. ಪು. ಬಹು.

ತ್ರಿವಿಕ್ರಮಪಂಡಿತರ ಸಮಾಗಮವನ್ನು ವರ್ಣಿಸುವುದಕ್ಕಾಗಿ ಅವರ ಜನ್ಮಕಥೆಯನ್ನು ವರ್ಣಿಸುತ್ತಾರೆ—

ಸುತಪಃಕವಿತಾದಿಸದ್ಗುಣಾನಾಂ
ಲಿಕುಚಾನಾಂ ಕುಲಜೋಽಂಗಿರೋಽನ್ವಯಾನಾಂ ।
ಅಭವದ್ಗುಹನಾಮಕೋ ವಿಪಶ್ಚಿತ್
ಕವಿವರ್ಯೋಽಖಿಲವಾದಿವಂದನೀಯಃ ॥ ೪೩ ॥

ಸುತಪಃಕವಿತಾದಿಸದ್ಗುಣಾನಾಂ ಅಂಗಿರೋಽನ್ವಯಾನಾಂ ಲಿಕುಚಾನಾಂ ಕುಲಜಃ ಕವಿವರ್ಯಃ ಅಖಿಲವಾದಿವಂದನೀಯಃ ಗುಹನಾಮಕಃ ವಿಪಶ್ಚಿತ್ ಅಭವತ್ ।

ಸುತಪಃ = ಒಳ್ಳೆಯತಪಸ್ಸು, ಕವಿತಾ = ಪದ್ಯರಚನೆ, ಇವುಗಳೇ ಆದಿ = ಮೊದಲಾಗಿ ಉಳ್ಳ, ಸದ್ಗುಣಾನಾಂ = ಒಳ್ಳೆಯ ಗುಣಗಳುಳ್ಳ, ಅಂಗಿರೋಽನ್ವಯಾನಾಂ = ಅಂಗಿರಸಗೋತ್ರದವರಾದ, ಲಿಕುಚಾನಾಂ =

Rarest Archive

ಲಿಕುಚ (ಪೆಜತಾಯ) ಎಂಬ ವಂಶದ ಬ್ರಾಹ್ಮಣರ, ಕುಲಜಃ=ವಂಶದಲ್ಲಿ ಹುಟ್ಟಿದ, ಕವಿವರ್ಯಃ=ಕವಿಶ್ರೇಷ್ಠರಾದ, ಅಖಿಲವಾದಿವಂದನೀಯಃ= ಎಲ್ಲಾ ವಾದಿಗಳಿಂದಲೂ ನಮಸ್ಕರಿಸಲು ಯೋಗ್ಯರಾದ, ಗುಹನಾಮಕಃ= ಸುಬ್ರಹ್ಮಣ್ಯನೆಂದು ಹೆಸರುಳ್ಳ, ವಿಪಶ್ಚಿತ್=ವಿದ್ವಾಂಸರು, ಅಭವತ್= ಇದ್ದರು.

ಕವಿಶ್ರೇಷ್ಠರೂ ಸಮಸ್ತವಾದಿಗಳಿಂದ ನಮಸ್ಕರಿಸಲು ಯೋಗ್ಯರೂ ಆದ ಸುಬ್ರಹ್ಮಣ್ಯಪಂಡಿತರೆಂಬವರಿದ್ದರು. ಅವರು ಉತ್ತಮತಪಸ್ಸು, ಕವಿತ್ವ ಮೊದಲಾದ ಸದ್ಗುಣಗಳುಳ್ಳ ಆಂಗಿರಸಗೋತ್ರದ ಲಿಕುಚ (ಪೆಜತಾಯ) ವಂಶದ ಶ್ರೋತ್ರಿಯ ಬ್ರಾಹ್ಮಣರ ವಂಶದಲ್ಲಿ ಹುಟ್ಟಿದ್ದರು. (ಇದರಿಂದ ನಾರಾಯಣಪಂಡಿತಾಚಾರ್ಯರ ವಂಶವು ಮೊದಲಿನಿಂದಲೂ ಪಂಡಿತ ಮತ್ತು ಕವಿಕುಲತಿಲಕ ಎಂಬ ಬಿರುದುಗಳಿಗೆ ಪಾತ್ರವಾಗಿದ್ದಿತು— ಎಂದು ಸೂಚಿತವಾಗುತ್ತದೆ.)

ಸು ಶೋಭನಂ ಚ ತತ್ ತಪಶ್ಚ ಸುತಪಃ, ಸುತಪಶ್ಚ ಕವಿತಾ ಚ ಸುತಪಃಕವಿತೇ, ತೇ ಆದೀ ಯೇಷಾಂ ತೇ, ಸಂತಶ್ಚ ತೇ ಗುಣಾಶ್ಚ ಸದ್ಗುಣಾಃ, ಸುತಪಃಕವಿತಾದಯಃ ಸದ್ಗುಣಾಃ ಯೇಷಾಂ ತೇ ಸುತಪಃ-ಕವಿತಾದಿಸದ್ಗುಣಾಃ ತೇಷಾಂ, ಅಂಗಿರಾಃ ಅನ್ವಯಃ ಯೇಷಾಂ ತೇ ಅಂಗಿರೋಽನ್ವಯಾಃ ತೇಷಾಂ, ಕವೀನಾಂ ವರ್ಯಃ, ಅಖಿಲಾಶ್ಚ ತೇ ವಾದಿನಶ್ಚ, ಅಖಿಲವಾದಿಭಿಃ ವಂದನೀಯಃ,

ಸುಬ್ರಹ್ಮಣ್ಯಪಂಡಿತರ ಪತ್ನಿಯು ಎಂತಹವಳು—

ದಯಿತಾಸ್ಯ ಸತೀ ಗುಣಾನುರೂಪಾ
ವಿಧಿವೀರ್ಯೇಣ ಮುಹುರ್ಮೃತಪ್ರಜಾಪಿ ।
ಅಭಜದ್ ಭುವನಪ್ರಭೂ ಹರೀಶೌ
ಸುತಕಾಮಾ ವಸುದೇವಸೂನುಭಕ್ತಾ || ೪೪ ||

ಸತೀ ಗುಣಾನುರೂಪಾ ವಸುದೇವಸೂನುಭಕ್ತಾ ಅಸ್ಯ ದಯಿತಾ ವಿಧಿವೀರ್ಯೇಣ ಮುಹುಃ ಮೃತಪ್ರಜಾ ಅಪಿ ಸುತಕಾಮಾ ಭುವನಪ್ರಭೂ ಹರೀಶೌ ಅಭಜತ್ ।

Rarest Archiver

ಸತೀ = ಪತಿವ್ರತೆಯಾದ, ಗುಣಾನುರೂಪಾ = ಗಂಡನ ಗುಣಗಳಿಗೆ ಅನುಕೂಲಳಾದ, ವಸುದೇವಸೂನುಭಕ್ತಾ = ಶ್ರೀಕೃಷ್ಣನ ಭಕ್ತಳಾದ, ಅಸ್ಯ ದಯಿತಾ = ಈ ಸುಬ್ರಹ್ಮಣ್ಯಪಂಡಿತರ ಹೆಂಡತಿಯು, ವಿಧಿವೀರ್ಯೇಣ = ದುರದೃಷ್ಟದ ಬಲದಿಂದ, ಮುಹುಃ = ಅನೇಕಬಾರಿ, ಮೃತಪ್ರಜಾ ಅಪಿ = ಮಕ್ಕಳು ಸತ್ತರೂ, ಸುತಕಾಮಾ = ಮಕ್ಕಳ ಬಯಕೆಯುಳ್ಳವಳಾಗಿ, ಭುವನಪ್ರಭೂ = ಸಮಸ್ತಲೋಕಗಳಿಗೂ ಒಡೆಯರಾದ, ಹರೀಶೌ = ಹರಿಹರರನ್ನು, ಅಭಜತ್ = ಸೇವಿಸಿದಳು.

ಈ ಸುಬ್ರಹ್ಮಣ್ಯಪಂಡಿತರಿಗೆ ಅವರ ಗುಣಗಳಿಗೆ ಅನುರೂಪಳಾದ ಪತಿವ್ರತೆಯಾದ ಪತ್ನಿಯಿದ್ದಳು. ದುರದೃಷ್ಟದಿಂದ ಅವಳಲ್ಲಿ ಹುಟ್ಟಿದ ಮಕ್ಕಳು ಅನೇಕಬಾರಿ ಚಿಕ್ಕನಯಸ್ಸಿನಲ್ಲಿಯೇ ಸತ್ತು ಹೋಗಿದ್ದರು. ಇದರಿಂದ ವ್ಯಥೆಗೊಂಡ ಶ್ರೀಕೃಷ್ಣನಲ್ಲಿ ದೃಢಭಕ್ತಿಯುಳ್ಳ ಆ ಪತಿವ್ರತೆಯು ಲೋಕಾಧೀಶರಾದ ಹರಿಹರರನ್ನು ತನಗೆ ಆಯುಷ್ಮಂತನಾದ ಧೀಮಂತನಾದ ಪುತ್ರನನ್ನು ಕರುಣಿಸಬೇಕೆಂದು ಬಹುಕಾಲ ಸೇವಿಸಿದಳು.

ಗುಣಾನಾಂ ಅನುರೂಪಾ, ವಿಧೇಃ ವೀರ್ಯಂ ವಿಧಿವೀರ್ಯಂ ತೇನ, ಮೃತಾ ಪ್ರಜಾ ಯಸ್ಯಾಃ ಸಾಃ, ಭುವನಾನಾಂ ಪ್ರಭೂ, ಹರಿಶ್ಚ ಈಶಶ್ಚ ಹರೀಶೌ, ಸುತೇ ಕಾಮಃ ಯಸ್ಯಾಃ ಸಾ, ವಸುದೇವಸ್ಯ ಸೂನುಃ, ವಸುದೇವಸೂನೋಃ ಭಕ್ತಾ;

ಅಭಜತ್ ಅಭಜತಾಂ ಅಭಜನ್ ಇತ್ಯಾದಿ; ಭಜ ಸೇವಾಯಾಂ ಪರ. ಲಙ್.

ದೇವತಾನುಗ್ರಹದಿಂದ ಅವಳು ಯೋಗ್ಯನಾದ ಪುತ್ರನನ್ನು ಪಡೆದಳು.

ಪರಮೇಶ್ವರಯೋಃ ಪ್ರಸಾದಯೋಗಾತ್
ಸುತರತ್ನಂ ತದಸೂತ ಸೂರಿಪತ್ನೀ ।
ಪರಿಷತ್ಪದಪತ್ತನೇಷು ನಾರ್ಘೋ
ವಿವಿದೇ ಯಸ್ಯ ಸಮಃ ಪರೀಕ್ಷಕಾಗ್ರ್ಯೈಃ ॥ ೪೫ ॥

ಸೂರಿಪತ್ನೀ ಪರಮೇಶ್ವರಯೋಃ ಪ್ರಸಾದಯೋಗಾತ್ ಯಸ್ಯ ಸಮಃ

Rarest Archiver

ಅರ್ಘಃ ಪರಿಷತ್‌ಪದಪತ್ತನೇಷು ಪರೀಕ್ಷಕಾಗ್ರ್ಯೈಃ ನ ವಿವಿದೇ ತತ್ ಸುತರತ್ನಂ ಅಸೂತ |

ಸೂರಿಪತ್ನೀ = ಸುಬ್ರಹ್ಮಣ್ಯಪಂಡಿತರ ಪತ್ನಿಯು, ಪರಮೇಶ್ವರಯೋಃ = ಹರಿಹರರ, (ಪರಮ=ಸರ್ವೋತ್ತಮನಾದ ಹರಿ ಮತ್ತು, ಈಶ್ವರಯೋಃ = ಶಂಕರನ) ಪ್ರಸಾದಯೋಗಾತ್ = ಅನುಗ್ರಹದ ಬಲದಿಂದ, ಯಸ್ಯ = ಯಾವ ಪುತ್ರರತ್ನದ, ಸಮಃ ಅರ್ಘಃ = ಸಮಾನವಾದ ಬೆಲೆಯು, ಪರಿಷತ್-ಪದ = ವಿದ್ವಾಂಸರ ಸಭೆಯೆಂಬ ಹೆಸರುಳ್ಳ, ಪತ್ತನೇಷು = ಪಟ್ಟಣಗಳಲ್ಲಿ, ಪರೀಕ್ಷಕಾಗ್ರ್ಯೈಃ = ರತ್ನಪರೀಕ್ಷೆಯಲ್ಲಿ ಶ್ರೇಷ್ಠರಾದವರಿಂದಲೂ, ನ ವಿವಿದೇ = ತಿಳಿಯಲ್ಪಡಲಿಲ್ಲವೋ, ತತ್ = ಅಂತಹ, ಸುತರತ್ನಂ = ಪುತ್ರರತ್ನ-ವನ್ನು, (ಶ್ರೇಷ್ಠನಾದ ಮಗನನ್ನು) ಅಸೂತ = ಪ್ರಸವಿಸಿದಳು.

ಪಟ್ಟಣಗಳಲ್ಲಿ ರತ್ನಪರೀಕ್ಷೆಮಾಡುವುದರಲ್ಲಿ ಪರಿಣತರಾದವರು, ದೈವ ಯೋಗದಿಂದ ಬೆಲೆಕಟ್ಟುವುದಕ್ಕಾಗಿ ಬಂದ ಅಪೂರ್ವರತ್ನದ ಬೆಲೆಯನ್ನು ಅರಿಯದೆ ಇದ್ದಾಗ ಇದೊಂದು ಅಮೂಲ್ಯರತ್ನ ಎಂದಷ್ಟೇ ಹೇಳುತ್ತಾರೆ. ಅದರಂತೆ ಪಂಡಿತರ ಸಭೆಗಳೆಂಬ ಪಟ್ಟಣಗಳಲ್ಲಿ ಪಂಡಿತಶ್ರೇಷ್ಠರು ಯಾವ ಪುತ್ರರತ್ನದ ಯೋಗ್ಯತೆಯನ್ನು ತಿಳಿಯಲಾರದೆ, ಇವನು ಅಮೂಲ್ಯಗುಣ ಶಾಲಿ, ಜ್ಞಾನಿಶ್ರೇಷ್ಠ ಎಂದಿಷ್ಟೇ ನಿರ್ಧರಿಸಿದರೋ ಅಂತಹ ಪುತ್ರರತ್ನವನ್ನು ಸುಬ್ರಹ್ಮಣ್ಯಪಂಡಿತರ ಪತ್ನಿಯು ಪಡೆದಳು.

ಪರಮೇಶ್ವರಶ್ಚ ಪರಮೇಶ್ವರಶ್ಚ ಪರಮೇಶ್ವರೌ ತಯೋಃ (ಪರಮಶ್ಚ ಈಶ್ವರಶ್ಚ ಪರಮೇಶ್ವರೌ) ಪ್ರಸಾದಸ್ಯ ಯೋಗಃ ತಸ್ಮಾತ್, ಸುತ ಇತಿ ರತ್ನಂ ತತ್, ಪರಿಷದಾಂ ಪದಾನಿ (ಸ್ಥಾನಾನಿ) ಪರಿಷತ್‌ಪದಾನಿ (ಅಥವಾ ಪರಿಷದಃ ಏವ ಪದಾನಿ ಪರಿಷತ್‌ಪದಾನಿ) ಪರಿಷತ್ ಪದಾನ್ಯೇವ ಪತ್ತನಾನಿ ತೇಷು, ಪರೀಕ್ಷಕೇಷು ಅಗ್ರ್ಯಾಃ ತೇಷು.

ಅಸೂತ ಅಸುವಾತಾಂ ಅಸುವತ, ಅಸೂಥಾಃ ಅಸುವಾಥಾಂ ಅಸೂಢ್ವಂ, ಅಸುವಿ ಅಸೂವಹಿ ಅಸೂಮಹಿ. ಷೂಙ್ (ಸೂ) ಪ್ರಾಣಿಗರ್ಭ ವಿಮೋಚನೇ to bring forth a child. ಆತ್ಮ. ಸಕ. ಲಙ್.

Rarest Archiver

ಆ ಬಾಲಕನ ಹೆಸರನ್ನು ವಿವರಿಸುತ್ತಾರೆ—

ವದನೇಂದುಮವೇಕ್ಷ್ಯನಂದನಸ್ಯ
ಸ್ವಕುಲೋತ್ತಾರಣದಕ್ಷಲಕ್ಷಣಸ್ಯ ।
ಕೃತಕೃತ್ಯತಯಾ ಕ್ರಿಯಾಃ ಪ್ರಕುರ್ವನ್
ಕವಿರಾಖ್ಯದುಚಿತಾಂ ತ್ರಿವಿಕ್ರಮಾಖ್ಯಾಂ ॥ ೪೬ ॥

ಸ್ವಕುಲೋತ್ತಾರಣದಕ್ಷಲಕ್ಷಣಸ್ಯ ನಂದನಸ್ಯ ವದನೇಂದುಂ ಅವೇಕ್ಷ್ಯ ಕೃತಕೃತ್ಯತಯಾ ಕ್ರಿಯಾಃ ಪ್ರಕುರ್ವನ್ ಕವಿಃ ಉಚಿತಾಂ ತ್ರಿವಿಕ್ರಮಾಖ್ಯಾಂ ಆಖ್ಯಾತ್ ।

ಸ್ವಕುಲ=ತನ್ನ ವಂಶದ, ಉತ್ತಾರಣ=ಉದ್ಧಾರಮಾಡುವ ವಿಷಯದಲ್ಲಿ, ದಕ್ಷ=ಸಮರ್ಥವಾದ, ಲಕ್ಷಣಸ್ಯ=ಲಕ್ಷಣಗಳುಳ್ಳ, ನಂದನಸ್ಯ=ಮಗನ, ವದನೇಂದುಂ=ಚಂದ್ರನಂತಿರುವ ಮುಖವನ್ನು, ಅವೇಕ್ಷ್ಯ=ನೋಡಿ, ಕೃತಕೃತ್ಯಯಾ=ತಾನು ಧನ್ಯನಾದೆನೆಂಬ ಭಾವದಿಂದ, ಕ್ರಿಯಾಃ=ಜಾತಕರ್ಮಾದಿ ಸಂಸ್ಕಾರಗಳನ್ನು, ಪ್ರಕುರ್ವನ್=ಮಾಡುತ್ತಿರುವ, ಕವಿಃ=ಸುಬ್ರಹ್ಮಣ್ಯಪಂಡಿತರು, ಉಚಿತಾಂ=ಯೋಗ್ಯವಾದ, ತ್ರಿವಿಕ್ರಮಾಖ್ಯಾಂ=ತ್ರಿವಿಕ್ರಮ ಎಂಬ ಹೆಸರನ್ನು. ಆಖ್ಯಾತ್=ಹೇಳಿದರು. (ಇಟ್ಟರು.)

ಸುಬ್ರಹ್ಮಣ್ಯಪಂಡಿತರು ಸಲ್ಲಕ್ಷಣಗಳಿಂದ ಕೂಡಿದ ಮಗನ ಮುಖಚಂದ್ರನನ್ನು ನೋಡಿ ಇವನು ನಮ್ಮ ವಂಶವನ್ನು ಉದ್ಧರಿಸುವನೆಂದೂ ನಾನು ಪಿತೃಋಣದಿಂದ ಮುಕ್ತನಾಗಿ ಧನ್ಯನಾದೆನು ಎಂದೂ ಸಂತೋಷಪಟ್ಟು ಆನಂದದಿಂದ ಮಗನಿಗೆ ಜಾತಕರ್ಮಾದಿಸಂಸ್ಕಾರಗಳನ್ನು ಮಾಡುತ್ತಾ, ಯೋಗ್ಯವಾದ ತ್ರಿವಿಕ್ರಮ ಎಂಬ ಹೆಸರನ್ನಿಟ್ಟರು. ವೇದವೇದಾಂಗ, ವೇದಾಂತ, ಕವಿತೆ ಈ ಮೂರುವಿದ್ಯೆಗಳಲ್ಲಿ ಇವನು ಪಂಡಿತನಾಗುವನೆಂದು ಅರಿತು ಈ ಹೆಸರನ್ನು ಸುಬ್ರಹ್ಮಣ್ಯಸೂರಿಗಳು ಇಟ್ಟರು—ಎಂದು ಭಾವ. (ವೇದೇ ಕವಿತಾಯಾಂ ವೇದಾಂತೇ ಇತಿ ತ್ರಿಷು ವಿಕ್ರಮೋಽಸ್ಯೇತಿ ಉಚಿತಾಂ ತ್ರಿವಿಕ್ರಮಾಖ್ಯಾಂ—ಭಾ. ಪ್ರ.)

Rarest Archiver

ವದನಂ ಇಂದುರಿವ ವದನೇಂದುಃ ತಂ, ಸ್ವಸ್ಯ ಕುಲಂ, ಸ್ವಕುಲಸ್ಯ ಉತ್ತಾರಣಂ, ಸ್ವಕುಲೋತ್ತಾರಣೇ ದಕ್ಷಾಣಿ ಲಕ್ಷಣಾನಿ ಯಸ್ಯ ತಸ್ಯ, ಕೃತಂ ಕೃತ್ಯಂ ಯೇನ ಸಃ, ತಸ್ಯ ಭಾವಃ ಕೃತಕೃತ್ಯತಾ ತಯಾ, ತ್ರಿವಿಕ್ರಮ ಇತಿ ಆಖ್ಯಾ ತಾಂ,

ಆ+ಅಖ್ಯಾತ್ ಅಖ್ಯಾತಾಂ ಅಖ್ಯುಃ, ಅಖ್ಯಾಃ ಅಖ್ಯಾತಂ ಅಖ್ಯಾತ, ಅಖ್ಯಾಂ ಅಖ್ಯಾವ ಅಖ್ಯಾಮ. ಖ್ಯಾ ಪ್ರಕಥನೇ to relate, to tell ಅದಾದಿ ಸಕ. ಅನಿ. ಪರ. ಆ ಉಪ. ಲಙ್.

ಕಲಭಾಷಣ ಏವ ಸೂರಿಪೋತಃ
ಕವಿರಾಸೀದನವದ್ಯಪದ್ಯವಾದೀ ।
ಅವಭಾತಿ ನನು ಪ್ರಭಾಪ್ರಭಾವೀ
ಭಗವಾನ್ ಬಾಲತರೋಽಪಿ ತಿಗ್ಮಭಾನುಃ ॥ ೪೭ ॥

ಸೂರಿಪೋತಃ ಕಲಭಾಷಣಃ ಏವ ಅನವದ್ಯಪದ್ಯವಾದೀ ಕವಿಃ ಆಸೀತ್. ಭಗವಾನ್ ತಿಗ್ಮಭಾನುಃ ಬಾಲತರೋಽಪಿ ಪ್ರಭಾಪ್ರಭಾವೀ ಅವಭಾತಿ ನನು.

ಸೂರಿಪೋತಃ = ಸುಬ್ರಹ್ಮಣ್ಯಪಂಡಿತರ ಮಗನಾದ ಈ ತ್ರಿವಿಕ್ರಮನು, ಕಲಭಾಷಣಏವ = ತೊದಲು ಮಾತುಳ್ಳವನಾಗಿರುವಾಗಲೇ, ಅನವದ್ಯ = ದೋಷವಿಲ್ಲದ, ಪದ್ಯವಾದೀ = ಶ್ಲೋಕಗಳನ್ನು ಹೇಳುವ, ಕವಿಃ ಆಸೀತ್ = ಕವಿಯಾದನು. ಭಗವಾನ್ ತಿಗ್ಮಭಾನುಃ = ಪೂಜ್ಯನಾದ ಸೂರ್ಯನು, ಬಾಲತರಃ ಅಪಿ = ಎಳೆಯವನಾದರೂ, (ಆಗತಾನೇ ಉದಯಿಸಿದ್ದರೂ) ಪ್ರಭಾಪ್ರಭಾವೀ = ಕಾಂತಿಯ ಸಾಮರ್ಥ್ಯವುಳ್ಳವನಾಗಿ, ಅವಭಾತಿ ನನು = ತಿಳಿದುಬರುತ್ತಾನಷ್ಟೆ!

ಸೂರ್ಯನು ಉದಯಿಸುತ್ತಿರುವಾಗಲೇ ಎಷ್ಟು ಎಳೆಯವನಾದರೂ ಮುಂದೆ ಹೆಚ್ಚುವ ಪ್ರಭೆಯ ಸಾಮರ್ಥ್ಯವುಳ್ಳವನಾಗಿಯೇ ಕಂಡು ಬರುತ್ತಾನೆ. ಹಾಗೆಯೇ ಸುಬ್ರಹ್ಮಣ್ಯಪಂಡಿತರ ಮಗನಾದ ತ್ರಿವಿಕ್ರಮನು ತೊದಲು ನುಡಿಗಳನ್ನಾಡುವ ಮಗುವಾಗಿರುವಾಗಲೇ ಶಬ್ದಾರ್ಥದೋಷ

Rarest Archiver

ಗಳಿಲ್ಲದ ಶ್ಲೋಕಗಳನ್ನು ರಚಿಸುತ್ತಾ ಕವಿಪ್ರತಿಭೆಯನ್ನು ತೋರುತ್ತಿದ್ದನು. ಸೂರ್ಯನು ಉದಯಿಸುವಾಗಲೇ ಪ್ರಭಾಶಕ್ತಿಸಹಿತನಾಗಿರುವಂತೆ ಈ ಬಾಲಕನು ಕವಿತಾದಿರಚನೆಯಲ್ಲಿ ಪ್ರತಿಭೆಯುಳ್ಳವನಾಗಿದ್ದನು.

'ಏಕಃ ಕ್ಷಪಣಕ ಶಾಕಾಹರ್ತಾ ಬಹವಃ ಕ್ಷಪಣಕ ಶಾಕಾದಾನಾಃ ।
ಯತ್ರ ಕ್ಷಪಣಕಬಹುಶಾಕಾದಾಃ ತತ್ರ ಕ್ಷಪಣಕ ಶಾಕಾಶಾ ಕಾ ॥'

ಎಂಬುದು ಬಾಲತ್ರಿವಿಕ್ರಮನು ರಚಿಸಿದ ಅನವದ್ಯಪದ್ಯಗಳಲ್ಲೊಂದು.

ಕಲಂ ಭಾಷಣಂ ಯಸ್ಯ ಸಃ, ಸೂರೇಃ ಪೋತಃ, ನ ವಿದ್ಯತೇ ಅವದ್ಯಂ ಯೇಷು ತಾನಿ, ಅನವದ್ಯಾನಿ ಚ ತಾನಿ ಪದ್ಯಾನಿ ಚ, ಅನವದ್ಯ-ಪದ್ಯಾನಿ ವದಿತುಂ ಶೀಲಂ ಅಸ್ಯೇತಿ ಅನವದ್ಯಪದ್ಯವಾದೀ, ಪ್ರಭಾಯಾಃ ಪ್ರಭಾವಃ, ಪ್ರಭಾಪ್ರಭಾವಃ ಅಸ್ಯ ಅಸ್ತೀತಿ, ಅತಿಶಯೇನ ಬಾಲಃ ಬಾಲತರಃ, ತಿಗ್ಮಾಃ ಭಾನವಃ ಯಸ್ಯ ಸಃ;

ಅವ+ಭಾತಿ ಭಾತಃ ಭಾಂತಿ, ಅವ ಉಪ. ಭಾ ದೀಪ್ತೌ ಲಟ್. ಆಸೀತ್ ಆಸ್ತಾಂ ಆಸನ್, ಇತ್ಯಾದಿ ಅಸ ಭುವಿ ಲಙ್.

ವೇದವೇದಾಂಗಾದಿಗಳನ್ನು ಕಲಿತು ತ್ರಿವಿಕ್ರಮಪಂಡಿತರು ಉಷಾಹರಣ ಕಾವ್ಯವನ್ನು ಮಾಡಿದರು—

ಸಕಲಾಂಗಯುತಾವಭಾತಶಾಖಃ
ಸಮಯೇ ಪ್ರಾಪ್ತ ಉದಾರಪಕ್ಷಿಸೇವ್ಯಃ ।
ಸ ಸಸರ್ಜ ಸದಧ್ವಗೋಪಕೃತ್ಯೈ
ಲಿಕುಚಃ ಕಾವ್ಯಫಲಂ ರಸಾಭಿರಾಮಮ್ ॥ ೪೮ ॥

ಸಕಲಾಂಗಯುತಾವಭಾತಶಾಖಃ ಸಮಯೇ ಪ್ರಾಪ್ತೇ ಉದಾರ ಪಕ್ಷಿ-ಸೇವ್ಯಃ ಲಿಕುಚಃ ಸಃ ಸದಧ್ವಗೋಪಕೃತ್ಯೈ ರಸಾಭಿರಾಮಂ ಕಾವ್ಯಫಲಂ ಸಸರ್ಜ.

ಸಕಲ = ಎಲ್ಲಾ, ಅಂಗ = ವೇದಾಂಗಗಳಿಂದ, (ಚಿಗುರು ಚಿಕ್ಕ ಕೊಂಬೆಮೊದಲಾದ ಎಲ್ಲಾ ಅಂಗಗಳಿಂದ) ಯುತ = ಕೂಡಿದ, ಅವಭಾತ

Rarest Archiver

= ತಿಳಿಯಲ್ಪಟ್ಟ, ಪ್ರಕಾಶಗೊಂಡ, ಶಾಖಃ = ಋಗಾದಿಶಾಖೆಗಳುಳ್ಳ, ಕೊಂಬೆಗಳುಳ್ಳ, ಸಮಯೇ = ಶಾಸ್ತ್ರವು, ಕಾಲವು, ಪ್ರಾಪ್ತೇ = ತಿಳಿಯಲ್ಪಟ್ಟಾಗ, ಒದಗಿದಾಗ, ಉದಾರ = ಉತ್ತಮವಾದ, ಶ್ರೇಷ್ಠವಾದ, ಪಕ್ಷಿ = ಆಯಾಪಕ್ಷವನ್ನು ಅನುಸರಿಸಿರುವ ಅನೇಕಬಗೆಯ ಶಾಸ್ತ್ರಜ್ಞಾನಿಗಳಿಂದ, ಹಕ್ಕಿಗಳಿಂದ, ಸೇವ್ಯಃ = ಸೇವಿಸಲು ಯೋಗ್ಯರಾದ, ಲಿಕುಚಃ ಸಃ = (ಪೆಜತಾಯ) ಲಿಕುಚ ವಂಶದಲ್ಲಿ ಜನಿಸಿದ, ಸಃ = ಆ ತ್ರಿವಿಕ್ರಮ ಪಂಡಿತರು, ಹೆಬ್ಬಲಸಿನ ಮರವು, ಸತ್ = ಸಜ್ಜನರೆಂಬ, ಅಧ್ವಗ = ದಾರಿಗರ, ಉಪಕೃತ್ಯೈ = ಉಪಕಾರಕ್ಕಾಗಿ, ರಸ=ಶೃಂಗಾರಾದಿರಸಗಳಿಂದ, ಸಿಹಿ, ಹುಳಿ ಮುಂತಾದ ರಸಗಳಿಂದ, ಅಭಿರಾಮಂ = ಮನೋಹರವಾದ, ಕಾವ್ಯಫಲಂ = ಉಷಾಹರಣಕಾವ್ಯವೆಂಬ ಹಣ್ಣನ್ನು, ಸಸರ್ಜ = ರಚಿಸಿದರು, ಉಂಟುಮಾಡಿಕೊಟ್ಟಿತು.

ಒಂದು ಹೆಬ್ಬಲಸಿನ ಮರವು (ತುಳುಭಾಷೆಯಲ್ಲಿ ಪೆಜಕಾಯಿದ ಮರ) ಚಿಗುರು, ಎಲೆ, ಶಾಖೋಪಶಾಖೆಗಳಿಂದ ಬೆಳೆದು ಹೂಬಿಟ್ಟು ಸಕಾಲದಲ್ಲಿ ಹೀಚು, ಕಾಯಿಗಳಿಂದ ಕೂಡಿ, ಕೊನೆಗೆ ಸಿಹಿ ಹುಳಿ ಒಗರು ರಸಗಳಿಂದ ಕೂಡಿದ ಹಣ್ಣನ್ನು ಕೊಡುತ್ತದೆ. ಅದು ಹಣ್ಣುಬಿಡುವ ಕಾಲದಲ್ಲಿ ನಾನಾ ಬಗೆಯ ಹಕ್ಕಿಗಳು ಬಂದು ಆ ಮರವನ್ನು ಆಶ್ರಯಿಸುತ್ತವೆ. ದಾರಿಯಲ್ಲಿ ಹೋಗುವವರು, ಒಳ್ಳೆಯ ಮಾರ್ಗದಲ್ಲಿ ನಡೆಯುವ ಗೃಹಸ್ಥರು ಆ ಹಣ್ಣನ್ನು (ಅದರ ಬಲಿತಕಾಯಿಯೆಂಬ ಫಲವನ್ನು) ಉಪಯೋಗಿಸುತ್ತಾರೆ. ಹೀಗೆ ಆ ಮರವು ಸಜ್ಜನರಿಗೆ ಉಪಕಾರಮಾಡುತ್ತದೆ. ಅದರಂತೆ ಲಿಕುಚ (ಪೆಜತಾಯ) ವಂಶದಲ್ಲಿ ಹುಟ್ಟಿದ ತ್ರಿವಿಕ್ರಮಪಂಡಿತರು ಶಿಕ್ಷಾ, ವ್ಯಾಕರಣ ಮುಂತಾದ ಷಡಂಗಗಳಿಂದ ಸಹಿತವಾದ ಋಕ್‌ಶಾಖೆಯೇ ಮೊದಲಾದ ವೇದಶಾಖೆಗಳನ್ನು ಅಧ್ಯಯನಮಾಡಿ, ಶಾಸ್ತ್ರಗಳನ್ನು ಕಲಿತು, ಶ್ರೇಷ್ಠರಾದ ಶಾಸ್ತ್ರಜ್ಞರಿಂದ ಕೂಡಿಕೊಂಡು ಶಾಸ್ತ್ರವಿಮರ್ಶೆ ಮಾಡುತ್ತಾ, ತನ್ನ ಬಾಲ್ಯವಯಸ್ಸಿನಲ್ಲಿ ಶೃಂಗಾರಾದಿರಸಭರಿತವಾದ ಉಷಾಹರಣವೆಂಬ ಮಹಾಕಾವ್ಯವನ್ನು ರಚಿಸಿದರು.

ಸಕಲಾನಿ ಚ ತಾನಿ ಅಂಗಾನಿ ಚ, ಸಕಲಾಂಗೈರ್ಯುತಾಃ, ಸಕಲಾಂಗೈರ್ಯುತಾಃ ಅವಭಾತಾಃ (ಅಧೀತಾಃ) ಶಾಖಾಃ ಯೇನ ಸಃ, ಸಕಲಾಂಗೈಃ

Rarest Archiver

ಯುತಾಃ ಅವಭಾತಾಃ (ವಿರಾಜಮಾನಾಃ) ಶಾಖಾಃ ಯಸ್ಯ ಸಃ, ಪಕ್ಷಃ (ಪಕ್ಷೌ) ಏಷಾಂ ಅಸ್ತೀತಿ (ಸ್ತಃ ಇತಿ) ಪಕ್ಷಿಣಃ, ಉದಾರಾಶ್ಚ ತೇ ಪಕ್ಷಿಣಶ್ಚ ಉದಾರಪಕ್ಷಿಭಿಃ ಸೇವ್ಯಃ, ಅಧ್ವಾನಂ ಗಚ್ಛಂತೀತಿ ಅಧ್ವಗಾಃ, ಸಂತಶ್ಚ ತೇ ಅಧ್ವಗಾಶ್ಚ, ಸದಧ್ವಗಾನಾಂ ಉಪಕೃತಿಃ ತಸ್ಯೈ, ಕಾವ್ಯಮೇವ ಫಲಂ, ತತ್, ರಸೈಃ ಅಭಿರಾಮಂ ತತ್.

ಸಸರ್ಜ ಸಸೃಜತುಃ ಸಸೃಜುಃ ಇತ್ಯಾದಿ ಸೃಜ ವಿಸರ್ಗೇ ಸಕ. ಅನಿಟ್ ಲಿಟ್.

ತ್ರಿವಿಕ್ರಮಪಂಡಿತರು ಅದ್ವೈತವೇದಾಂತಾಭ್ಯಾಸವನ್ನು ಮಾಡಿದರು.

ಪ್ರತಿಭಾವಿ (ಪಾದಿ)ತಮಾತ್ಮನಾ ಯಥಾರ್ಥಂ
ಪೃಥುಮಾಯಾಸಮಯಸ್ಯ ದುರ್ಘಟತ್ವಂ ।
ಸ್ವಗುರೌ ಪರಿಹರ್ತುಮಕ್ಷಮೇಽಪಿ ಶ್ರುತವಾಂ-
ಸ್ತತ್ (ಸ್ತಂ ಸ) ಸ್ವವಯಸ್ಯಬೋಧಿತೋಽಲಂ ॥ ೪೯ ॥

ಆತ್ಮನಾ ಪ್ರತಿಭಾವಿತಂ (ಪಾದಿತಂ) ಯಥಾರ್ಥಂ ಪೃಥುಮಾಯಾಸಮಯಸ್ಯ ದುರ್ಘಟತ್ವಂ ಪರಿಹರ್ತುಂ ಸ್ವಗುರೌ ಅಕ್ಷಮೇಽಪಿ ಸಃ ಅಲಂ, ಸ್ವವಯಸ್ಯಬೋಧಿತಃ ತಂ ಶ್ರುತವಾನ್ ।

ಆತ್ಮನಾ = ತನ್ನಿಂದ, ಪ್ರತಿಭಾವಿತಂ (ಪಾದಿತಂ) = ಪ್ರಕಟಗೊಳಿಸಲ್ಪಟ್ಟ, (ನಿರೂಪಣಮಾಡಲ್ಪಟ್ಟ) ಯಥಾರ್ಥಂ = ನಿಜವಾಗಿಯೂ ಇರತಕ್ಕ, ಪೃಥು = ವಿಸ್ತಾರವಾದ, ಮಾಯಾಸಮಯಸ್ಯ = ಮಾಯಾವಾದಿಮತದ, ದುರ್ಘಟತ್ವಂ = ಅಸಾಂಗತ್ಯವನ್ನು, ಪರಿಹರ್ತುಂ = ನಿವಾರಿಸುವುದಕ್ಕೆ, ಸ್ವಗುರೌ = ತನ್ನ ಗುರುಗಳು, ಅಕ್ಷಮೇ ಅಪಿ = ಅಸಮರ್ಥರಾದರೂ, ಸಃ = ಆ ತ್ರಿವಿಕ್ರಮಪಂಡಿತರು, ಅಲಂ = ಚೆನ್ನಾಗಿ, ಸ್ವವಯಸ್ಯಬೋಧಿತಃ = ತನ್ನ ಸ್ನೇಹಿತರಿಂದ ಉಪದೇಶಿಸಲ್ಪಟ್ಟವರಾಗಿ, ತಂ (ತತ್) = ಆ ಮಾಯಾವಾದವನ್ನು, (ಆ ಶಾಸ್ತ್ರವನ್ನು) ಶ್ರುತವಾನ್ = ಕೇಳಿದರು.

Rarest Archive

'ವಿಸ್ತಾರವಾದ ಮಾಯಾವಾದಶಾಸ್ತ್ರದಲ್ಲಿ ಪರಸ್ಪರವಿರೋಧಗಳೇ ತೋರುತ್ತವೆ. ಹಿಂದು ಮುಂದಿನ ಪ್ರಮೇಯಗಳಿಗೆ ಹೊಂದಾಣಿಕೆಯೇ ಆಗುತ್ತಿಲ್ಲ' ಎಂದು ಆ ತ್ರಿವಿಕ್ರಮಪಂಡಿತರು ತಾನು ವಿದ್ಯಾಭ್ಯಾಸಮಾಡುವಾಗ ಗುರುಗಳ ಬಳಿಯಲ್ಲಿ ಆಕ್ಷೇಪಿಸಿದರು. ಆದರೆ ಗುರುಗಳು ಈ ಆಕ್ಷೇಪವನ್ನು ನಿರಾಕರಿಸಲು ಅಸಮರ್ಥರಾದರು. ಆದರೂ ತ್ರಿವಿಕ್ರಮಪಂಡಿತರ ಸ್ನೇಹಿತರು ಬಲವಂತವಾಗಿ ಬಹಳವಾಗಿ ಬೋಧಿಸಿದ್ದರಿಂದ ಅವರು ಅದ್ವೈತ ಶಾಸ್ತ್ರವನ್ನು ಅಭ್ಯಾಸಮಾಡಿದರು. ತನ್ನ ಕುಲಕ್ರಮಾಗತವಾದ ಅದ್ವೈತ ಶಾಸ್ತ್ರವನ್ನು ತ್ರಿವಿಕ್ರಮರು ಕಲಿಯುವಾಗ ಆ ಶಾಸ್ತ್ರದಲ್ಲಿ ಪ್ರಬಲವಾದ, ಪರಿಹರಿಸಲು ಅಸಾಧ್ಯವಾದ ದೋಷಗಳಿವೆಯೆಂದು ಹೇಳಿದರು. ಆದರೆ ಗುರುಗಳು ಆ ಆಕ್ಷೇಪವನ್ನು ಪರಿಹರಿಸಲಾಗದೆ ಸುಮ್ಮನಿದ್ದಾಗ ತ್ರಿವಿಕ್ರಮರಿಗೆ ಮಾಯಾವಾದಶಾಸ್ತ್ರದಲ್ಲಿ ವೈರಸ್ಯವುಂಟಾಯಿತು. ಆದರೂ ಸಹಪಾಠಿಗಳ ನಿರ್ಬಂಧದಿಂದ ಆ ಶಾಸ್ತ್ರವನ್ನು ತ್ರಿವಿಕ್ರಮರು ಚೆನ್ನಾಗಿ ಶ್ರವಣ ಮಾಡಿದರು.

ಮಾಯಾಕಲ್ಪಿತಂ ಇತಿ ಸಮಯಃ ಮಾಯಾಸಮಯಃ ಪೃಥುಶ್ಚಾಸೌ ಮಾಯಾಸಮಯಶ್ಚ ಪೃಥುಮಾಯಾಸಮಯಃ ತಸ್ಯ, ಸ್ವಸ್ಯ ಗುರುಃ ತಸ್ಮಿನ್, ಸ್ವಸ್ಯ ವಯಸ್ಯಾಃ, ಸ್ವವಯಸ್ಯೈಃ ಬೋಧಿತಃ;

ತಕಾರಾಂತ ಶ್ರುತವತ್ ಶಬ್ದ, ಶ್ರುತವಾನ್ ಶ್ರುತವಂತೌ ಶ್ರುತವಂತಃ.

ತ್ರಿವಿಕ್ರಮಪಂಡಿತರ ಮುಂದೆ ಭಾನುಪಂಡಿತ ಮುಂತಾದವರು ಸೋತರು—

ಭಗವತ್ಯುದಿತೇ ಸಗೋವಿಲಾಸೇ
ವಟುಭಾವಂ ತ್ಯಜತಿ ತ್ರಿವಿಕ್ರಮಾರ್ಯೇ(ಖ್ಯೇ)
ಅಪಿ ಭಾನುಪುರಸ್ಸರಾಃ ಸಮಸ್ತಾಃ
ಪ್ರಯಯುಃ ಕೀಟಮಣಿಪ್ರಭತ್ವಮಾಶು || ೫೦ ||

ಸಗೋವಿಲಾಸೇ ತ್ರಿವಿಕ್ರಮಾರ್ಯೇ (ಖ್ಯೇ) ಭಗವತಿ ಉದಿತೇ ವಟು -

ಭಾವಂ ತ್ಯಜತಿ ಸತಿ ಭಾನುಪುರಸ್ಸರಾಃ ಸಮಸ್ತಾಃ ಅಪಿ ಆಶು ಕೀಟಮಣಿ-ಪ್ರಭತ್ವಂ ಪ್ರಯಯುಃ

ಸಗೋವಿಲಾಸೇ = ಮಾತಿನ ಚಮತ್ಕಾರದಿಂದ ಕೂಡಿದ, ಕಿರಣ ಸಮೂಹದಿಂದ ಕೂಡಿದ, ತ್ರಿವಿಕ್ರಮಾರ್ಯೇ = (ಖ್ಯೇ) ತ್ರಿವಿಕ್ರಮಪಂಡಿತರೆಂಬ, ಭಗವತಿ = ನಾರಾಯಣನು, ಉದಿತೇ = ವೇದಶಾಸ್ತ್ರನಿಪುಣತೆಯೆಂಬ ಉದಯವನ್ನು ಹೊಂದಿದಾಗ, ತ್ರಿವಿಕ್ರಮರೂಪವನ್ನು ಹೊಂದಿದಾಗ, ವಟುಭಾವಂ ತ್ಯಜತಿ = ಬ್ರಹ್ಮಚಾರಿಯ ಅವಸ್ಥೆಯನ್ನು (ವಾಮನರೂಪವನ್ನು) ಬಿಡುತ್ತಿರುವಾಗ, ಭಾನುಪುರಸ್ಸರಾಃ = ಭಾನುಪಂಡಿತನೇ ಮೊದಲಾದ, ಸೂರ್ಯನೇ ಮೊದಲಾದ, ಸಮಸ್ತಾಃ ಅಪಿ = ಎಲ್ಲರೂ, ಆಶು = ಬೇಗನೇ, ಕೀಟಮಣಿಪ್ರಭತ್ವಂ = ಮಿಣುಕು ಹುಳದ ಕಾಂತಿಯನ್ನು, ಪ್ರಯಯುಃ = ಹೊಂದಿದರು.

ವಚನವಿಲಾಸದಿಂದ ಕೂಡಿದ ಪೂಜ್ಯರಾದ ತ್ರಿವಿಕ್ರಮಪಂಡಿತಾಚಾರ್ಯರು ಶಾಸ್ತ್ರಪಾಂಡಿತ್ಯವನ್ನು ಹೊಂದಿ ಬಾಲ್ಯಾವಸ್ಥೆಯನ್ನೂ ಬ್ರಹ್ಮಚರ್ಯವನ್ನೂ ದಾಟಿದರು. ಆಗ ಪ್ರಭಾಕರಮತದ ಭಾನುಪಂಡಿತ ಮೊದಲಾದವರು ಮಿಂಚುಹುಳದಂತೆ ಪ್ರಕಾಶಹೀನರಾದರು. ತೇಜಸ್ವಿಯಾದ ಭಗವಂತನು ವಾಮನನಾಗಿ ಅವತರಿಸಿ ತನ್ನ ಕುಳ್ಳಾದ ಬ್ರಹ್ಮಚಾರಿಯ ರೂಪವನ್ನು ಬಿಟ್ಟು ವೃದ್ಧಿ ಹೊಂದಿ ತ್ರಿವಿಕ್ರಮನಾಗಿ ಪ್ರಪಂಚವನ್ನೆಲ್ಲಾ ವ್ಯಾಪಿಸಿದಾಗ ಅವನ ತೇಜಸ್ಸಿನಿಂದ ಸೂರ್ಯಾದಿದೇವತೆಗಳು ಕಳೆಗುಂದಿ ಮಿಂಚುಹುಳದಂತೆ ಆದರು. ಅದರಂತೆ ವಾಗ್ಮಿಗಳಾದ ತ್ರಿವಿಕ್ರಮಪಂಡಿತರು ಯುವಕರಾಗಿ ವೇದಶಾಸ್ತ್ರಪಾಂಡಿತ್ಯದಿಂದ ಶ್ರೀಮನ್ನಾರಾಯಣನ ಸ್ವರೂಪವನ್ನು ತಿಳಿಸಿದಾಗ, ಭಾನುಪಂಡಿತನೇ ಮುಂತಾದವರು ಕಳೆಗುಂದಿದರು.

ಗವಾಂ ವಿಲಾಸಃ ಗೋವಿಲಾಸೇನ ಸಹಿತಃ ಸಗೋವಿಲಾಸಃ ತಸ್ಮಿನ್, ವಟೋಃ ಭಾವಃ ತಂ, (ತ್ರಿವಿಕ್ರಮ ಇತಿ ಆರ್ಯಃ ತಸ್ಮಿನ್) ತ್ರಿವಿಕ್ರಮ ಇತಿ ಆಖ್ಯಾ ಯಸ್ಯ ತಸ್ಮಿನ್, ಭಾನುಃ ಪುರಸ್ಸರಃ ಯೇಷಾಂ ತೇ, ಕೀಟಮಣೇಃ ಪ್ರಭಾ ಇವ ಪ್ರಭಾ ಯೇಷಾಂ ತೇ ಕೀಟಮಣಿಪ್ರಭಾಃ ತೇಷಾಂ ಭಾವಃ ಕೀಟಮಣಿಪ್ರಭತ್ವಂ,

Rarest Archiver

ಪ್ರ+ಯಯುಃ ಯಾ ಪ್ರಾಪಣೇ ಲಿಟ್.

ತ್ರಿವಿಕ್ರಮಪಂಡಿತರಿಗೆ ತಂದೆಯಾದ ಸುಬ್ರಹ್ಮಣ್ಯಪಂಡಿತರು ಉಪದೇಶ ಮಾಡಿದರು—

ಅತಿದಕ್ಷಮತಿಂ ಸಪಾದಲಕ್ಷೇ
ಸಮಯೇ ಮಾಯಿಜನಸ್ಯ ಯುಕ್ತಿಶೂರಂ |
ಮಹಿತಂ ಹಿ ಮಹೀತಲೇ ಮಹಿಮ್ನಾ
ಜನಕೋ ನಂದನಮಬ್ರವೀದುಪಾಂಶು || ೫೧ ||

ಸಪಾದಲಕ್ಷೇ ಮಾಯಿಜನಸ್ಯ ಸಮಯೇ ಅತಿದಕ್ಷಮತಿಂ ಯುಕ್ತಿಶೂರಂ ಮಹಿಮ್ನಾ ಮಹೀತಲೇ ಮಹಿತಂ ನಂದನಂ ಜನಕಃ ಉಪಾಂಶು ಅಬ್ರವೀತ್ ಹಿ.

ಸಪಾದಲಕ್ಷೇ = ಒಂದುಲಕ್ಷದ ೨೫ಸಾವಿರಗ್ರಂಥವುಳ್ಳ, ಮಾಯಿ-ಜನಸ್ಯ = ಮಾಯಾವಾದಿಗಳ, ಸಮಯೇ = ಶಾಸ್ತ್ರದಲ್ಲಿ, ಅತಿದಕ್ಷಮತಿಂ = ಅತ್ಯಂತಕುಶಲಬುದ್ಧಿಯುಳ್ಳ, ಯುಕ್ತಿಶೂರಂ = ಯುಕ್ತಿಪ್ರಯೋಗದಲ್ಲಿ ನಿಪುಣನಾದ, ಮಹಿಮ್ನಾ = ಪ್ರಭಾವದಿಂದ, ಮಹೀತಲೇ ಮಹಿತಂ = ಭೂಮಿಯಲ್ಲಿ ಸಂಮಾನಿತನಾದ, ನಂದನಂ = ಮಗನಾದ ತ್ರಿವಿಕ್ರಮನನ್ನು ಕುರಿತು, ಜನಕಃ = ತಂದೆಯು, ಉಪಾಂಶು ಅಬ್ರವೀತ್ = ಗುಟ್ಟಾಗಿ ಹೇಳಿದರು.

ಒಂದುಲಕ್ಷದ ಇಪ್ಪತ್ತೈದು ಸಾವಿರ ಗ್ರಂಥವಿಸ್ತಾರವುಳ್ಳ ಅದ್ವೈತ ಶಾಸ್ತ್ರದಲ್ಲಿ ಅತ್ಯಂತಸಮರ್ಥನಾದ, ತನ್ನ ಪಕ್ಷವನ್ನು ಸಾಧಿಸಿ, ಪರಪಕ್ಷ ವನ್ನು ನಿರಾಕರಿಸುವಯುಕ್ತಿಗಳಲ್ಲಿ ಅತ್ಯಂತಶೂರನಾದ, ಹಾಗೂ ತನ್ನ ಮಹಿಮೆಯಿಂದ ದೇಶದಲ್ಲೆಲ್ಲಾ ಪೂಜಿತನಾದ ತನ್ನ ಮಗನಾದ ತ್ರಿವಿಕ್ರಮ ನನ್ನು ಕುರಿತು ಅವನ ತಂದೆಯಾದ ಸುಬ್ರಹ್ಮಣ್ಯಪಂಡಿತರು ಏಕಾಂತದಲ್ಲಿ ಹೇಳಿದರು.

ಅತ್ಯಂತಂ ದಕ್ಷಾ ಮತಿಃ ಯಸ್ಯ ಸಃ ತಂ, ಪಾದೇನ ಸಹಿತಂ, ಸಪಾದಂ ಲಕ್ಷಂ ಯಸ್ಯ ಸಃ ತಸ್ಮಿನ್, ಮಾಯೀ ಇತಿ ಜನಃ ತಸ್ಯ, ಯುಕ್ತಿಷು ಶೂರಃ ತಂ,

Rarest Archiver

ಅಬ್ರವೀತ್ ಅಬ್ರೂತಾಂ ಅಬ್ರುವನ್ ಇತ್ಯಾದಿ ಬ್ರೂಞ್ ವ್ಯಕ್ತಾಯಾಂ ವಾಚಿ ಲಜ್.

ಶೃಣು ವಾಚಮಿಮಾಂ ವಿಚಾರಿತಾರ್ಥಾಂ
ನ ಕಲೌ ನಿರ್ಗುಣಭಾವನಾ ಸುಖಾಯ ।
ಇತಿ ಗೌಣವಿಮುಕ್ತಯೇ ಗುಣಾಢ್ಯಂ
ಸ್ಮರ ದೇವಂ ಸುತವಾಸುದೇವಮೇವ ॥ ೫೨ ॥

ವಿಚಾರಿತಾರ್ಥಾಂ ಇಮಾಂ ವಾಚಂ ಶೃಣು. ಕಲೌ ನಿರ್ಗುಣಭಾವನಾ ಸುಖಾಯ ನ; ಇತಿ ಗೌಣವಿಮುಕ್ತಯೇ ಗುಣಾಢ್ಯಂ ವಸುದೇವಸೂನುಂ ಏವ ಸ್ಮರ.

ವಿಚಾರಿತಾರ್ಥಾಂ = ವಿಚಾರಿಸಿ ನಿಶ್ಚಯಿಸಲ್ಪಟ್ಟ, ಇಮಾಂ ವಾಚಂ ಶೃಣು = ಈ ಮಾತನ್ನು ಕೇಳು, ಕಲೌ (ಅಪಿ) = ಕಲಿಯುಗದಲ್ಲಿಯೂ ಕೂಡ, ನಿರ್ಗುಣಭಾವನಾ = ಪರಬ್ರಹ್ಮನು ನಿರ್ಗುಣನೆಂಬ ಉಪಾಸನೆಯು, ಸುಖಾಯ ನ = ಸುಖಕ್ಕೋಸ್ಕರ ಆಗುವುದಿಲ್ಲ. ಇತಿ = ಆದುದರಿಂದ, ಗೌಣವಿಮುಕ್ತಯೇ = ಜ್ಞಾನಾನಂದಾದಿಗುಣಸಹಿತವಾಗಿರುವ ಮೋಕ್ಷಕ್ಕಾಗಿ, ಗುಣಾಢ್ಯಂ = ಗುಣಪೂರ್ಣನಾದ, ವಸುದೇವಸೂನುಂ ಏವ = ವಾಸುದೇವ ಶ್ರೀಕೃಷ್ಣನನ್ನೇ, ಸ್ಮರ = ಸ್ಮರಿಸು.

'ಮಗು ! ನಾನು ನಿಶ್ಚಯಮಾಡಿಕೊಂಡಿರುವ ಈ ಮಾತನ್ನು ಕೇಳು- ಕಲಿಯುಗದಲ್ಲಿಯೂ ಪರಬ್ರಹ್ಮನು ನಿರ್ಗುಣನು ಎಂಬ ಉಪಾಸನೆಯು ಮೋಕ್ಷಸುಖಕ್ಕೆ ಕಾರಣವಾಗುವುದಿಲ್ಲ. ಪಾಪವನ್ನುಂಟುಮಾಡಿ ದುಃಖಕ್ಕೆ ಕಾರಣವಾಗುತ್ತದೆ. ಆದುದರಿಂದ ಸ್ವರೂಪಜ್ಞಾನಾನಂದಾನುಭವರೂಪ ವಾದ ಮೋಕ್ಷಕ್ಕಾಗಿ ಜ್ಞಾನಾನಂದಾದಿಗುಣಪರಿಪೂರ್ಣನಾದ ಮೋಕ್ಷಪ್ರದ ನಾದ ವಾಸುದೇವನನ್ನೇ ಸ್ಮರಿಸು, ಧ್ಯಾನಿಸು' ಎಂದು— ಬಹಿರಂಗದಲ್ಲಿ ಅದ್ವೈತಿಗಳಂತೆ ಇದ್ದರೂ, ಅಂತರಂಗದಲ್ಲಿ ಶ್ರೀಹರಿಯ ಸರ್ವೋತ್ತಮತ್ವ ಜ್ಞಾನವುಳ್ಳ ಸುಬ್ರಹ್ಮಣ್ಯಪಂಡಿತರು ಮಗನನ್ನು ಉಪದೇಶಿಸಿದರು. (ಎಲ್ಲಾ ಯುಗಗಳಲ್ಲಿಯೂ ನಿರ್ಗುಣಭಾವನೆಯು ಸುಖಕರವಲ್ಲ. ಆದರೆ ಇತರಪಾಪ

Rarest Archiver

ಗಳಿಗೆ ಕಲಿಯುಗದಲ್ಲಿ ಅಲ್ಪವೇ ದುಃಖಫಲವಿರುವಂತೆ ನಿರ್ಗುಣೋಪಾಸನೆಯೂ ಕೂಡ ಕಲಿಯುಗದಲ್ಲಿ ಸ್ವಲ್ಪದುಃಖಕ್ಕೆ ಕಾರಣ ಎಂದು ತಿಳಿಯಬಾರದು. ಪರಮಾತ್ಮನು ನಿರ್ಗುಣನೆಂಬ ಉಪಾಸನೆಯು ಇತರಯುಗಗಳಂತೆ (ಕೃತಾದಿಯುಗಗಳಂತೆ) ಕಲಿಯುಗದಲ್ಲಿಯೂ ಸ್ವಲ್ಪವೂ ಸುಖಕಾರಣವಲ್ಲ, ಮಹಾದುಃಖಕ್ಕೆ ಕಾರಣವಾಗುತ್ತದೆ-ಎಂದು ಕಲೌ ಶಬ್ದ ಪ್ರಯೋಗದ ತಾತ್ಪರ್ಯ).

ವಿಚಾರಿತಃ ಅರ್ಥಃ ಯಸ್ಯಾಃ ಸಾ ತಾಂ, ನಿರ್ಗತಾಃ ಗುಣಾಃ ಯಸ್ಮಾತ್ ಸಃ, ನಿರ್ಗುಣಃ ಇತಿ ಭಾವನಾ, ಗುಣಾನಾಂ ಇಯಂ, ಗೌಣೀ ಚ ಸಾ ಮುಕ್ತಿಶ್ಚ ಗೌಣಮುಕ್ತಿಃ ತಸ್ಯೈ, ಗುಣೈಃ ಆಢ್ಯಃ ತಂ, ವಸುದೇವಸ್ಯ ಸೂನುಃ ತಂ,

ಶೃಣೋತು ಶೃಣುತಾತ್ ಶೃಣುತಾಂ ಶೃಣ್ವಂತು, ಶೃಣು ಶೃಣುತಾತ್ ಶೃಣುತಂ ಶೃಣುತ, ಶೃಣವಾನಿ ಶೃಣವಾವ ಶೃಣವಾಮ, ಶ್ರು ಶ್ರವಣೇ (to hear) ಲೋಟ್. ಈ ಧಾತುವಿಗೆ ಸಾರ್ವಧಾತುಕಗಳಲ್ಲಿ (ಲಟ್ ಲೋಟ್ ಲಙ್ ವಿಧಿಲಿಙ್ ಗಳಲ್ಲಿ) 'ಶ್ರುವಃ ಶೃಚ' ಎಂಬ ಸೂತ್ರದಿಂದ 'ಶೃ' ಎಂಬ ರೂಪವಾಗುತ್ತದೆ. ಸ್ಮರತು ಸ್ಮರತಾತ್ ಸ್ಮರತಾಂ ಸ್ಮರಂತು, ಸ್ಮರ ಸ್ಮರ-ತಾತ್ ಸ್ಮರತಂ ಸ್ಮರತ-ಸ್ಮೃ ಚಿಂತಾಯಾಂ to remember ಲೋಟ್.

ತಂದೆಯ ಉಪದೇಶದ ಅನಂತರವೂ ತಾನೂ ಚೆನ್ನಾಗಿ ವಿಚಾರ ಮಾಡಬೇಕೆಂದು ತ್ರಿವಿಕ್ರಮರು ಮತ್ತೂ ಅದ್ವೈತವನ್ನೇ ಕೇಳಿದರು—

ಇತಿ ತಾತವಚೋ ನಿಶಮ್ಯ ಕಿಂಚಿತ್
ತರಲಾತ್ಮಾಪಿ ವಿಚಾರ್ಯ ಶಾಸ್ತ್ರಸಾರಂ ।
ಪರಮೇವ ಸ ಪಾರಮಾರುರುಕ್ಷು
ರ್ವಿಗುಣೋಪಾಸ್ತಿಮುಪಾಶೃಣೋತ್ ಪರೇಭ್ಯಃ ॥ ೫೩ ॥

ಇತಿ ತಾತವಚಃ ನಿಶಮ್ಯ ಅಪಿ ಕಿಂಚಿತ್ ತರಲಾತ್ಮಾ ಸಃ ಶಾಸ್ತ್ರ-ಸಾರಂ ಏವ ವಿಚಾರ್ಯ ಪರಂ ಪಾರಂ ಆರುರುಕ್ಷುಃ ಪರೇಭ್ಯಃ ವಿಗುಣೋ-ಪಾಸ್ತಿಂ ಉಪಾಶೃಣೋತ್ ।

Rarest Archiver

ಇತಿ = ಈ ರೀತಿಯಾಗಿ, ತಾತವಚಃ = ತಂದೆಯ ಮಾತನ್ನು, ನಿಶಮ್ಯಾಪಿ = ಕೇಳಿಯೂ ಕೂಡ, ಕಿಂಚಿತ್ ತರಲಾತ್ಮಾ = ಸ್ವಲ್ಪ ಚಂಚಲ ವಾದ ಮನಸ್ಸುಳ್ಳ, ಸಃ=ಆ ತ್ರಿವಿಕ್ರಮರು, ಶಾಸ್ತ್ರಸಾರಂ ಏವ=ವೇದಾಂತ ಶಾಸ್ತ್ರದ ಒಳತಿರುಳನ್ನೇ, ವಿಚಾರ್ಯ = ವಿಮರ್ಶೆಮಾಡಿ, ಪರಂ ಪಾರಂ = ಸಂಸಾರಸಮುದ್ರದ ಆಚೆಯ ದಡವನ್ನು, ಆರುರುಕ್ಷುಃ ಸನ್ = ಏರುವ ಇಚ್ಛೆಯುಳ್ಳವನಾಗಿ, ಪರೇಭ್ಯಃ = ಅದ್ವೈತಪಂಡಿತರಿಂದ, ವಿಗುಣೋ- ಪಾಸ್ತಿಂ = ನಿರ್ಗುಣೋಪಾಸನೆಯನ್ನು, ಉಪಾಶೃಣೋತ್ = ಕೇಳಿದರು.

ನಿರ್ಗುಣಬ್ರಹ್ಮೋಪಾಸನೆಯು ಮೋಕ್ಷಸಾಧನವಲ್ಲ, ಸಗುಣನಾದ ಜೀವಭಿನ್ನನಾದ ಬ್ರಹ್ಮನ ಉಪಾಸನೆಯೇ ಮೋಕ್ಷಸಾಧನವೆಂದು ತಂದೆಯು ಹೇಳಿದ ಮಾತನ್ನು ತ್ರಿವಿಕ್ರಮರು ಕೇಳಿದರು. ಆದರೂ ಈ ಎರಡು ಉಪಾಸನೆಗಳಲ್ಲಿ ಯಾವ ಉಪಾಸನೆಯು ಸತ್ಯವೆಂದು ನಿಶ್ಚಯಿಸಲಾರದೆ, ತಾನೇ ವಿಚಾರಮಾಡಿ ತಿಳಿದು ಸಂಸಾರವನ್ನು ದಾಟಬೇಕೆಂದು ನಿಶ್ಚಯಿಸಿ, ನಿರ್ಗುಣಬ್ರಹ್ಮೋಪಾಸನೆಯನ್ನೇ ಅದ್ವೈತಿಗಳಿಂದ ಕೇಳಿ ತಿಳಿದರು.

ತಾತಸ್ಯ ವಚಃ ತತ್, ತರಲಃ ಆತ್ಮಾ ಯಸ್ಯ ಸಃ, ಶಾಸ್ತ್ರಸ್ಯ ಸಾರಃ ತಂ, ಆರೋಢುಂ ಇಚ್ಛುಃ ಆರುರುಕ್ಷುಃ, ವಿಗತಾಃ ಗುಣಾಃ ಯಸ್ಮಾತ್ ತತ್, ವಿಗುಣಸ್ಯ ಉಪಾಸ್ತಿಃ ತಾಂ

ಉಪ + ಅಶೃಣೋತ್ ಅಶೃಣುತಾಂ ಅಶೃಣ್ವನ್, ಅಶೃಣೋಃ ಅಶೃಣುತಂ ಅಶೃಣುತ, ಅಶೃಣವಂ ಅಶೃಣುವ ಅಶೃಣ್ವ, ಅಶೃಣುಮ ಅಶೃಣ್ಮ, ಉಪ + ಉಪಸರ್ಗ ಶ್ರು ಶ್ರವಣೇ ಲಜ್.

ಅದ್ವೈತಶಾಸ್ತ್ರವನ್ನು ಕರತಲಾಮಲಕವಾಗಿ ಅಭ್ಯಾಸಮಾಡಿದ ತ್ರಿವಿಕ್ರಮಪಂಡಿತರು ವಿಚಾರಮಾಡಿದರು.

ನಿಜಧರ್ಮರತೋ ಗೃಹಿಪ್ರಬರ್ಹಃ
ಕಲಿಕಾಲಾಕುಲಿತಾಂತರೋಽಪಿ ಹಂತ।
ನಿತರಾಂ ನಿಶಿತಾತ್ಮನಾ ನಿಸರ್ಗಾತ್
ಸ್ಫುಟಮಾಲೋಚಯದಿತ್ಯಸೌ ಕದಾಚಿತ್ ॥ ೫೪ ॥

ನಿಜಧರ್ಮರತಃ ಗೃಹಿಪ್ರಬರ್ಹಃ ಅಸೌ ಕಲಿಕಾಲಾಕುಲಿತಾಂತರಃ ಅಪಿ ನಿಸರ್ಗಾತ್ ನಿತರಾಂ ನಿಶಿತಾತ್ಮನಾ ಕದಾಚಿತ್ ಸ್ಫುಟಂ ಇತಿ ಆಲೋ-ಚಯತ್‌ಹಂತಃ !

ನಿಜಧರ್ಮರತಃ = ತನ್ನ ವರ್ಣಾಶ್ರಮಧರ್ಮದಲ್ಲಿ ಆಸಕ್ತರಾದ, ಗೃಹಿಪ್ರಬರ್ಹಃ = ಗೃಹಸ್ಥಶ್ರೇಷ್ಠರಾದ, ಅಸೌ = ಈ ತ್ರಿವಿಕ್ರಮರು, ಕಲಿ ಕಾಲ = ಕಲಿಕಾಲದಿಂದ, ಆಕುಲಿತಾಂತರೋಽಪಿ = ಚಾಂಚಲ್ಯಹೊಂದಿದ ಮನಸ್ಸುಳ್ಳವರಾದರೂ, ನಿಸರ್ಗಾತ್=ಸ್ವಭಾವದಿಂದ, ನಿತರಾಂ=ಅತಿಶಯ ವಾಗಿ, ನಿಶಿತಾತ್ಮನಾ = ಚುರುಕಾದ ಬುದ್ಧಿಯಿಂದ, ಕದಾಚಿತ್ = ಒಂದಾ ನೊಂದು ಸಮಯದಲ್ಲಿ, ಸ್ಫುಟಂ = ಸ್ಪಷ್ಟವಾಗಿ, ಇತಿ ಆಲೋಚಯತ್ = ಈ ರೀತಿ ಆಲೋಚಿಸಿದರು, ಹಂತ = ಸಂತೋಷವು.

ತನ್ನ ವರ್ಣಾಶ್ರಮಕ್ಕೆ ಉಚಿತವಾದ ಧರ್ಮಗಳಲ್ಲಿ ಆಸಕ್ತರಾದ, ಶ್ರೇಷ್ಠಗೃಹಸ್ಥರಾದ ಆ ತ್ರಿವಿಕ್ರಮಪಂಡಿತರು ಕಲಿಕಾಲಬಲದಿಂದ ಮನಸ್ಸು ಚಂಚಲವಾಗಿದ್ದರೂ, ಸ್ವಭಾವದಿಂದಲೇ ಸೂಕ್ಷ್ಮವಾದ ತನ್ನ ಬುದ್ಧಿಯಿಂದ ಒಂದಾನೊಂದು ಸಮಯದಲ್ಲಿ ಮೇಲೆ ಹೇಳುವ ರೀತಿಯಿಂದ ಆಲೋಚಿಸಿದರು. ಆಹಾ ! ಈ ಆಲೋಚನೆಯು ಆನಂದಕರವಾದುದು.

ನಿಜಶ್ಚಾಸೌ ಧರ್ಮಶ್ಚ; ನಿಜಧರ್ಮೇ ರತಃ, ಗೃಹಿಷು ಪ್ರಬರ್ಹಃ, ಕಲೇಃ ಕಾಲಃ, ಕಲಿಕಾಲೇನ ಆಕುಲಿತಂ ಅಂತರಂ ಯಸ್ಯ ಸಃ, ನಿಶಿತಶ್ಚಾಸೌ ಆತ್ಮಾ ಚ ತೇನ.

ಆ + ಆಲೋಚಯತ್ ಆಲೋಚಯತಾಂ ಆಲೋಚಯನ್ ಇತ್ಯಾದಿ. ಆಉಪ. ಲೋಚೃ ಭಾಷಾಯಾಂ (ಆಲೋಚನೇ) ಲಙ್.

ತ್ರಿವಿಕ್ರಮಪಂಡಿತರ ಆಲೋಚನೆ ಹೀಗಿತ್ತು—

ರಚಿತಂ ನನು ಸೂತ್ರಮತ್ರ ಮಾನಂ
ವಿದುಷಾ ಸತ್ಯವತೀಸುತೇನ ಸಾಕ್ಷಾತ್ ।
ಅಪರಸ್ಪರಸಂಗತಾನಿ ಭಾಷ್ಯಾ-
ಣ್ಯಪಿ (ಥ) ಸರ್ವಾಣಿ ನ ಮಾನತಾಂ ವ್ರಜೇಯುಃ ॥ ೫೫ ॥

Rarest Archiver

ಅತ್ರ ವಿದುಷಾ ಸತ್ಯವತೀಸುತೇನ ರಚಿತಂ ಸೂತ್ರಂ ಸಾಕ್ಷಾತ್ ಮಾನಂ ನನು. ಅಪರಸ್ಪರಸಂಗತಾನಿ ಸರ್ವಾಣಿ ಭಾಷ್ಯಾಣಿ ಅಪಿ (ಅಥ) ಮಾನತಾಂ ನ ವ್ರಜೇಯುಃ |

ಅತ್ರ=ಈ ಬ್ರಹ್ಮತತ್ತ್ವನಿರ್ಣಯವಿಷಯದಲ್ಲಿ, ವಿದುಷಾ=ಸರ್ವಜ್ಞತಮರಾದ, ಸತ್ಯವತೀಸುತೇನ=ಸತ್ಯವತೀದೇವಿಯ ಮಗನಾದ ಭಗವಾನ್ ವೇದವ್ಯಾಸರಿಂದ, ರಚಿತಂ ಸೂತ್ರಂ=ವಿರಚಿತವಾದ ಬ್ರಹ್ಮಸೂತ್ರಸಮುದಾಯವು, ಸಾಕ್ಷಾತ್=ನೇರವಾದ, ಮಾನಂ ನನು=ಪ್ರಮಾಣವಷ್ಟೆ. ಅಪರಸ್ಪರಸಂಗತಾನಿ = ಒಂದಕ್ಕೊಂದು ಸಂಬಂಧವಿಲ್ಲದ, ಸರ್ವಾಣಿ ಭಾಷ್ಯಾಣ್ಯಪಿ = ಎಲ್ಲಾ ಭಾಷ್ಯಗಳೂ, ಮಾನತಾಂ ನ ವ್ರಜೇಯುಃ ಪ್ರಮಾಣತ್ವವನ್ನು ಹೊಂದಲಾರವು.

ಬ್ರಹ್ಮತತ್ತ್ವವನ್ನು ನಿರ್ಧರಿಸುವವಿಷಯದಲ್ಲಿ ಸರ್ವಜ್ಞತಮರಾದ ಪರಮಾಪ್ತರಾದ ಸತ್ಯವತೀದೇವಿಯಲ್ಲಿ ಅವತಾರಮಾಡಿದ ಭಗವಾನ್ ವೇದವ್ಯಾಸರು ರಚಿಸಿರುವ ಬ್ರಹ್ಮಸೂತ್ರಸಮುದಾಯವು ನೇರವಾದ ಮುಖ್ಯ ಪ್ರಮಾಣವು. ಆದುದರಿಂದ ಪರಸ್ಪರವಿರುದ್ಧಾರ್ಥವನ್ನು ಹೇಳುವ ಸಮಸ್ತ ಭಾಷ್ಯಗಳೂ ಪ್ರಮಾಣವಾಗಲಾರವು. ವ್ಯಾಸರ ಬ್ರಹ್ಮಮೀಮಾಂಸಾಶಾಸ್ತ್ರಕ್ಕೆ ಇಪ್ಪತ್ತೊಂದು ಭಾಷ್ಯಗಳಿವೆ. ಆದರೆ ಅವುಗಳು ಪರಸ್ಪರ ಹೊಂದಾಣಿಕೆಯಿಲ್ಲದ ಅರ್ಥಗಳನ್ನು ಹೇಳುವುದರಿಂದ ನಂಬಲು ಯೋಗ್ಯವಲ್ಲ. ವ್ಯಾಸರ ಸೂತ್ರಗಳೇ ಪರಮಮುಖ್ಯಪ್ರಮಾಣಗಳು — ಎಂದು ತ್ರಿವಿಕ್ರಮಾರ್ಯರ ಆಲೋಚನೆಯು ಮುಂದುವರಿಯಿತು.

ಸತ್ಯವತ್ಯಾಃ ಸುತಃ ತೇನ, ಪರಸ್ಪರಂ ಸಂಗತಾನಿ ಪರಸ್ಪರಸಂಗತಾನಿ, ನ ಪರಸ್ಪರಸಂಗತಾನಿ ;

ವ್ರಜೇತ್ ವ್ರಜೇತಾಂ ವ್ರಜೇಯುಃ, ವ್ರಜೇಃ ವ್ರಜೇತಂ ವ್ರಜೇತ, ವ್ರಜೇಯಂ ವ್ರಜೇವ ವ್ರಜೇಮ. ವ್ರಜ ಗತೌ to go ಪರ ವಿಧಿಲಿಙ್.

ಮತ್ತೂ ವಿಚಾರ ಮುಂದುವರಿಯಿತು—

ಯದಿ ತೇಷು ನಿರಾಗ್ರಹಾಂತರಾಃ ಸ್ಮಃ
ಸುಘಟಂ ನೋಪಲಭಾಮಹೇ ಹಿ ಕಿಂಚಿತ್ ।

Rarest Archive

ನ ತಥಾಪಿ ಪರಂಪರೋಪಯಾತಂ
ನ ಪಠಾಮಃ ಪ್ರಣಯೇನ ಶಾಂ (ಸಾಂ)ಕರೀಯಂ || ೫೬ ||

ತೇಷು ನಿರಾಗ್ರಹಾಂತರಾಃ ಸ್ಮಃ ಯದಿ ಸುಘಟಂ ಕಿಂಚಿತ್ ನೋ-ಪಲಭಾಮಹೇ ಹಿ. ತಥಾಪಿ ಪರಂಪರೋಪಯಾತಂ ಶಾಂ(ಸಾಂ) ಕರೀಯಂ ಪ್ರಣಯೇನ ನ ಪಠಾಮಃ (ಇತಿ) ನ.

ತೇಷು = ಆ ಭಾಷ್ಯಗಳಲ್ಲಿ, ನಿರಾಗ್ರಹಾಂತರಾಃ = ಹಠವಿಲ್ಲದ ಮನಸ್ಸುಳ್ಳವರು, ಸ್ಮಃ ಯದಿ = (ತರ್ಹಿ) ಆಗಿದ್ದೇ ಆದರೆ, ಸುಘಟಂ ಕಿಂಚಿತ್ = ಸರಿಯಾಗಿ ಹೊಂದಾಣಿಕೆಯಾಗುವ ಅರ್ಥವುಳ್ಳ ಏನನ್ನೂ, ನೋಪಲ-ಭಾಮಹೇ ಹಿ = ನೋಡಲಾರೆವಷ್ಟೆ. ತಥಾಪಿ = ಹಾಗಿದ್ದರೂ ಕೂಡ, ಪರಂಪರೋಪಯಾತಂ = ವಂಶಕ್ರಮದಿಂದ ಬಂದಿರುವ, ಸಾಂಕರೀಯಂ = ಶಂಕರಭಾಷ್ಯವನ್ನು, ಪ್ರಣಯೇನ = ಪ್ರೀತಿಯಿಂದ, ನ ಪಠಾಮಃ ಇತಿ ನ = ಓದುವುದಿಲ್ಲವೆಂದಿಲ್ಲ.

ನಾವು ಪಕ್ಷಪಾತಹಠಗಳನ್ನು ಬಿಟ್ಟು, ಹಿಂದಿನ ಭಾಷ್ಯಗಳನ್ನು ವಿಚಾರ ಮಾಡಿದರೆ, ಅವುಗಳಲ್ಲಿ ಒಂದಾದರೂ ಸೂತ್ರಾನುಸಾರಿಯಾದ ಅರ್ಥವನ್ನು ಹೇಳುವುದಿಲ್ಲ ಎಂದು ತಿಳಿದು ಬರುತ್ತದೆ. ಇದು ಅನುಭವಸಿದ್ಧ. ಹೀಗಿದ್ದರೂ ಕುಲಪರಂಪರೆಯಿಂದ ಬಂದ ಶಂಕರಭಾಷ್ಯವನ್ನು ಪ್ರೀತಿಯಿಂದ ಓದಿಯೇ ಓದುತ್ತೇವೆ.

ನಿರ್ಗತಃ ಆಗ್ರಹಃ ಯಸ್ಮಾತ್ ತತ್, ನಿರಾಗ್ರಹಂ ಅಂತರಂ ಯೇಷಾಂ ತೇ, ಸುಖೇನ ಘಟಯಿತುಂ ಶಕ್ಯಂ ಸುಘಟಂ. ಪರಂಪರಯಾ ಉಪಯಾತಂ;

ಉಪ + ಲಬಾಮಹೇ, ಲಭತೇ ಲಭೇತೇ ಲಭಂತೇ, ಲಭಸೇ ಲಭೇಥೇ ಲಭಧ್ವೇ, ಲಭೇ ಲಭಾವಹೇ ಲಭಾಮಹೇ, ಡುಲಭಷ್ ಪ್ರಾಪ್ತೌ, ಆತ್ಮ. ಲಟ್. ಪಠತಿ ಪಠತಃ ಪಠಂತಿ, ಪಠಸಿ ಪಠಥಃ ಪಠಥ, ಪಠಾಮಿ ಪಠಾವಃ ಪಠಾಮಃ— ಪಠ ವ್ಯಕ್ತಾಯಾಂ ವಾಚಿ ಲಿಖಿತಾಕ್ಷರವಾಚನೇ ಚ to read, to study ಪರ ಲಟ್.

Rarest Archiver

ವಿರುದ್ಧಗಳಾದ ಭಾಷ್ಯಗಳನ್ನೆಲ್ಲಾ ಬಿಟ್ಟು ಸ್ವತಂತ್ರವಾಗಿ ಉಪನಿಷದರ್ಥವನ್ನು ವಿಚಾರಮಾಡಬಹುದಷ್ಟೆ—

ಘಟನೋಽಪನಿಷತ್ಸು ನಾಲ್ಪಬುದ್ಧೇಃ
ಸುಘಟೇತ್ಯಭ್ಯುಪಗಮ್ಯ ಚಿಂತಯಾಮಃ ।
ನ ವಿಮುಕ್ತಿಮುಪೈತಿ ಕೋಽಪಿ ಮುಕ್ತ್ವಾ
ಸಮಯೋಕ್ತಾಮಿಹ ಯಾಮಿಮಾಮುಪಾಸ್ತಿಂ ॥ ೫೭ ॥

ಅಲ್ಪಬುದ್ಧೇಃ ಉಪನಿಷತ್ಸು ಘಟನಾ ಸುಘಟಾ ನ ಇತ್ಯಭ್ಯುಪಗಮ್ಯ ಇಹ ಯಾಂ ಉಪಾಸ್ತಿಂ ಮುಕ್ತ್ವಾ ಕಃ ಅಪಿ ವಿಮುಕ್ತಿಂ ನ ಉಪೈತಿ ಸಮಯೋಕ್ತಾಂ (ತಾಂ) ಇಮಾಂ ಚಿಂತಯಾಮಃ ।

ಅಲ್ಪಬುದ್ಧೇಃ = ಸ್ವಲ್ಪಬುದ್ಧಿಯುಳ್ಳ ನವನಿಗೆ, (ಅಲ್ಪ ವಿಷಯಕವಾದ ಬುದ್ಧಿಗೆ), ಉಪನಿಷತ್ಸು = ಉಪನಿಷತ್ತುಗಳಲ್ಲಿ, ಘಟನಾ = ಸಂಬಧಂವು, (ವಿಚಾರಸಾಮರ್ಥ್ಯವು) ಸುಘಟಾ ನ = ಸುಲಭಸಾಧ್ಯವಾದುದು ಅಲ್ಲ, ಇತಿ ಅಭ್ಯುಪಗಮ್ಯ = ಎಂದು ಒಪ್ಪಿಕೊಂಡು, ಇಹ—ಈ ಉಪನಿಷತ್ತುಗಳಲ್ಲಿ ಹೇಳಿರುವ, ಯಾಂ ಉಪಾಸ್ತಿಂ = ಯಾವ ಉಪಾಸನೆಯುನ್ನು, ಮುಕ್ತ್ವಾ = ಬಿಟ್ಟು, ಕೋಽಪಿ = ಯಾವನೂ ಕೂಡ, ವಿಮುಕ್ತಿಂ ನ ಉಪೈತಿ = ಮೋಕ್ಷವನ್ನು ಹೊಂದುವುದಿಲ್ಲವೊ, ಸಮಯೋಕ್ತಾಂ = ವೇದಾದಿಸಮಸ್ತಸಚ್ಛಾಸ್ತ್ರಗಳಲ್ಲಿ ಹೇಳಲ್ಪಟ್ಟ, ತಾಂ ಇಮಾಂ = ಅಂತಹ ಈ ಮುಂದೆ ಹೇಳುವ ಉಪಾಸನೆಯುನ್ನು, ಚಿಂತಯಾಮಃ = ನಾವು ವಿಚಾರಮಾಡುತ್ತೇವೆ.

ಅಲ್ಪವಿಷಯಕವಾದ ಬುದ್ಧಿಯುಳ್ಳ ಪುರುಷನು ತನ್ನ ಬುದ್ಧಿಯಿಂದ ಉಪನಿಷತ್ತುಗಳ ಸರಿಯಾದ ಅರ್ಥವನ್ನು ವಿಚಾರಮಾಡಿ ನಿರ್ಧರಿಸುವುದು ಸಾಧ್ಯವಿಲ್ಲ. ಆದರೂ ಯಾವ ಉಪಾಸನೆಯುನ್ನು ಮಾಡದಿದ್ದರೆ ಯಾರಿಗೂ ಮುಕ್ತಿಯು ಲಭಿಸಲಾರದೋ ಅಂತಹ ವೇದೋಪನಿಷತ್ತು ಮುಂತಾದ ಸಕಲಶಾಸ್ತ್ರಗಳಲ್ಲಿ ಪ್ರತಿಪಾದಿತವಾದ ಉಪಾಸನೆಯ ರೀತಿಯನ್ನು ನಾನು ಈಗ ವಿಚಾರಿಸಿ ನಿರ್ಧರಿಸಿಕೊಳ್ಳಬೇಕಾಗಿದೆ.

ಅಲ್ಪಾ ಬುದ್ಧಿಃ ಯಸ್ಯ ಸಃ ಅಲ್ಪಬುದ್ಧಿಃ ತಸ್ಯ ಅಲ್ಪಾ ಚ ಸಾ ಬುದ್ಧಿಶ್ಚ

Rarest Archive

ಅಲ್ಪಬುದ್ಧಿಃ ತಸ್ಯಾಃ; ಸುಖೇನ ಘಟಯಿತುಂ ಶಕ್ಯಾ ಸುಘಟಾ, ಸಮಯೇಷು ಉಕ್ತಾ ಸಮಯೋಕ್ತಾ ತಾಂ;

ಚಿಂತಯತಿ ಚಿಂತಯತಃ ಚಿಂತಯಂತಿ, ಚಿಂತಯಸಿ ಚಿಂತಯಥಃ ಚಿಂತಯಥ. ಚಿಂತಯಾಮಿ ಚಿಂತಯಾವಃ ಚಿಂತಯಾಮಃ ಚಿತಿ (ಚಿಂತ್) ಸ್ಮೃತ್ಯಾಂ ಸಕ. ಸೇಟ್ ಉಭ. to think, to consider ಲಟ್.

ಮುಂದಿನ ೩ ಶ್ಲೋಕಗಳಿಂದ ತ್ರಿವಿಕ್ರಮಪಂಡಿತರ ಆತ್ಮವಿಮರ್ಶೆ—

ವಿತತಃ ಸುಖಸಚ್ಚಿದದ್ವಯಾತ್ಮಾ
ಸಮುಪಾಸ್ಯೋ ವಿಹಿತೋ ಹಿ ತತ್ತ್ವವಿದ್ಭಿಃ ।
ಸ ಚ ನಾವಯವೀ ನಿರೂಪ್ಯತೇ ಚೇದ್-
ದ್ಯುತಿಮಾತ್ರಂ ಚ ನಹೀತ್ಯದೋ ರಹಸ್ಯಂ || ೫೮ ||

ತತ್ತ್ವವಿದ್ಭಿಃ ವಿತತಃ ಸುಖಸಚ್ಚಿತ್ ಅದ್ವಯಾತ್ಮಾ ಸಮುಪಾಸ್ಯಃ ವಿಹಿತಃ ಹಿ. ಸ ಚ (ಅದ್ವೈತಿನಾ) ಅವಯವೀ ನ ನಿರೂಪ್ಯತೇ ಚೇತ್ ದ್ಯುತಿಮಾತ್ರಂ ನ ಹಿ-ಇತಿ ಚ ಅದಃ ರಹಸ್ಯಂ ||

ತತ್ತ್ವವಿದ್ಭಿಃ=ಭಗವಂತನ ತತ್ತ್ವವನ್ನು ನಿಶ್ಚಯವಾಗಿ ತಿಳಿದವರಿಂದ, (ಭಗವಂತನು) ವಿತತಃ = ಎಲ್ಲಾಕಡೆಯಲ್ಲಿಯೂ ವ್ಯಾಪ್ತನಾದವನು, ಸುಖಸಚ್ಚಿತ್ = ಸುಖ ಮತ್ತು ನಿರ್ದೋಷಜ್ಞಾನರೂಪನು, ಅದ್ವಯಾತ್ಮಾ = ತನಗೆ ಸಮ ಮತ್ತು ಅಧಿಕರು ಇಲ್ಲದವನು, ಎಂದು ಸಮುಪಾಸ್ಯಃ ವಿಹಿತಃ ಹಿ = ಉಪಾಸನೆ ಮಾಡಲು ಯೋಗ್ಯನಾಗಿ ವೇದಾದಿಶಾಸ್ತ್ರಗಳಿಂದ ಉಪದೇಶಿಸಲ್ಪಟ್ಟಿದ್ದಾನಷ್ಟೆ: (ಅದ್ವೈತಿಯಿಂದ) ಸಃ ಚ = ಆ ಪರಮಾತ್ಮನಾದರೋ, ಅವಯವೀ = ತನ್ನ ಸ್ವರೂಪಾಭಿನ್ನವಾದ ಜ್ಞಾನಾನಂದಾತ್ಮಕವಾದ ಸಕಲಾವಯವಗಳುಳ್ಳವನೆಂದು, ನ ನಿರೂಪ್ಯತೇ ಚೇತ್ = ನಿರ್ಧರಿಸಲ್ಪಡದಿದ್ದರೆ, ದ್ಯುತಿಮಾತ್ರಂ ನಹಿ = ಕೇವಲ ತೇಜೋರೂಪನೆಂಬುದು ಸಿದ್ಧಿಸುವುದಿಲ್ಲ, ಇತಿ ಚ ಅದಃ = ಹೀಗೆಂಬ ಇದು, ರಹಸ್ಯಂ = ಮಾಯಾವಾದಿಶಾಸ್ತ್ರದ ಗುಟ್ಟು.

ಭಗವಂತನೆಂಬ ಒಂದು ಪರಮಾರ್ಥತತ್ತ್ವವಿದೆ. ಅದು ಸರ್ವತ್ರ ವ್ಯಾಪ್ತವಾಗಿದೆ. ನಿರ್ದೋಷವಾದ ಜ್ಞಾನಾನಂದಸ್ವರೂಪವಾಗಿದೆ. ಅದಕ್ಕೆ

Rarest Archiver

ಸಮಾನವಾದ ಅಥವಾ ಅಧಿಕವಾದ ತತ್ತ್ವವಿಲ್ಲ. ಇಂತಹ ಪರಮಾತ್ಮ ಸ್ವರೂಪವನ್ನು ಉಪಾಸನೆ ಮಾಡಬೇಕೆಂದು ಉಪನಿಷದಾದಿಶಾಸ್ತ್ರಗಳು ಹೇಳಿವೆ. ಅಂತಹ ಪರಮಾತ್ಮನಿಗೆ ಜ್ಞಾನಾನಂದಮಯವಾದ ಸುಂದರ ಅವಯವಗಳು ಇಲ್ಲ, ಅದು ನಿರಾಕಾರ, ಕೇವಲ ಪ್ರಕಾಶಸ್ವರೂಪ ಎಂದಿಷ್ಟೇ ಹೇಳಿದರೆ ಆ ಪರಬ್ರಹ್ಮನು ಪ್ರಕಾಶಸ್ವರೂಪನೂ ಆಗಲಾರ. ಭಗವಂತನಿಗೆ ಸುಖಜ್ಞಾನಾತ್ಮಕವೂ ಅಪ್ರಾಕೃತವೂ ತನ್ನಿಂದ ಭೇದವಿಲ್ಲದ್ದೂ ಆದ ಸರ್ವತ್ರವ್ಯಾಪ್ತವಾದ ದೇಹವಿದೆ–ಎಂದು ಶಾಸ್ತ್ರದಲ್ಲಿದೆ. ಆದರೆ ಅದ್ವೈತಿಗಳು ಪರಮಾತ್ಮನು ನಿರಾಕಾರ – ನಿರವಯವ ಎಂದು ಹೇಳುತ್ತಾರೆ. ಇದು ಪರಬ್ರಹ್ಮನು ಪ್ರಕಾಶಾಕಾರ ಎಂಬ ಮಾತಿಗೆ ವಿರುದ್ಧವು. ಆಕಾರವೇ ಇಲ್ಲದಿರುವಾಗ ಪ್ರಕಾಶವೆಲ್ಲಿರುತ್ತದೆ? ಹೀಗೆ ವಿಚಾರಮಾಡಿದಾಗ ಅದ್ವೈತ ಶಾಸ್ತ್ರರೀತಿಯಿಂದ ಪರಬ್ರಹ್ಮನ ಸ್ವರೂಪವೇ ಸಿದ್ಧಿಸುವುದಿಲ್ಲ.

ಸತೀ ಚ ಸಾ ಚಿಚ್ಚ ಸಚ್ಚಿತ್, ಸುಖಂ ಚ ಸಚ್ಚಿಚ್ಚ ಸುಖಸಚ್ಚಿತ್, (ಸುಖರೂಪ, ನಿರ್ದೋಷಜ್ಞಾನರೂಪ) ನ ವಿದ್ಯತೇ ದ್ವಯಂ, (ಸಮಾನಂ ಅಧಿಕಂ ವಾ ವಸ್ತು) ಯಸ್ಯ ಸಃ ಅದ್ವಯಃ, ಅದ್ವಯಃ ಆತ್ಮಾ (ಸ್ವರೂಪಂ) ಯಸ್ಯ ಸಃ, ಸಮ್ಯಕ್ ಉಪಾಸಿತುಂ ಯೋಗ್ಯಃ ಸಮುಪಾಸ್ಯಃ, ತತ್ತ್ವಂ ವಿದಂತಿ ಇತಿ ತತ್ತ್ವವಿದಃ ತೈಃ, ಅವಯವಾಃ ಅಸ್ಯ ಸಂತೀತಿ ಅವಯವೀ, ಕೇವಲಾ ದ್ಯುತಿಃ ದ್ಯುತಿಮಾತ್ರಂ;

ನಿ + ರೂಪ್ಯತೇ ರೂಪ್ಯೇತೇ ರೂಪ್ಯಂತೇ ಇತ್ಯಾದಿ ರೂಪ ರೂಪ-ಕ್ರಿಯಾಯಾಂ ರೂಪಸ್ಯ ದರ್ಶನಂ ಕರಣಂ ವಾ ರೂಪಕ್ರಿಯಾ, ಕರ್ಮಣಿ ಲಟ್. ಅದ್ವೈತಿನಾ ಸಃ ಅವಯವೀ ನ ನಿರೂಪ್ಯತೇ-(ಕರ್ಮಣಿ) ಅದ್ವೈತೀ ತಂ ಅವಯವಿನಂ ನ ನಿರೂಪಯತಿ–ಕರ್ತರಿ.

ಪ್ರಕಾಶಾಕಾರವಿಲ್ಲದುದು ಎಂದೇ ಪರಮಾತ್ಮನನ್ನು ಉಪಾಸನೆ ಮಾಡೋಣವೇ?—

ಯದಿ ಚೇದ್ಯ್ರಗುಪಾಸ್ಯತೇಽಸ್ಯ ರೂಪಂ
ತಿಮಿರತ್ವೇನ ವಿಭಾತಿ ಪಾರಿಶೇಷ್ಯಾತ್ ।

Rarest Archiver

ಫಲಮಪ್ಯಥಮುಕ್ತಿರೀದೃಶೀ ಸ್ಯಾ-
ದಿತಿ ನೋ ನೈವ ಧಿನೋತ್ಯುಪಾಸ್ತಿರೇಷಾ ॥ ೫೯ ॥

ಅಸ್ಯ ರೂಪಂ ಈದೃಕ್ ಯದಿ ಉಪಾಸ್ಯತೇ ಚೇತ್ ಪಾರಿಶೇಷ್ಯಾತ್ ತಿಮಿರತ್ವೇನ ವಿಭಾತಿ ಅಥ ಫಲಂ ಮುಕ್ತಿಃ ಅಪಿ ಈದೃಶೀ ಸ್ಯಾತ್ ಇತಿ ಏಷಾ ಉಪಾಸ್ತಿಃ ನಃ ನೈವ ಧಿನೋತಿ |

ಅಸ್ಯ = ಈ ಪರಮಾತ್ಮನ, ರೂಪಂ = ಸ್ವರೂಪವು, ಈದೃಕ್ = ಈ ರೀತಿ ತೇಜೋರೂಪವಲ್ಲವೆಂದು, ಯದಿ ಉಪಾಸ್ಯತೇ ಚೇತ್ = ಉಪಾಸಿಸಲ್ಪಡುವುದೇ ಆದರೆ, ಪಾರಿಶೇಷ್ಯಾತ್ = ಪರಿಶೇಷನ್ಯಾಯದಿಂದ, ತಿಮಿರತ್ವೇನ = ಕತ್ತಲೆಯ ರೂಪದಿಂದ, ವಿಭಾತಿ = ತೋರುತ್ತದೆ. ಅಥ = ಅನಂತರ, ಫಲಂ ಮುಕ್ತಿಃ ಅಪಿ = ಉಪಾಸನೆಯ ಫಲವಾದ ಮುಕ್ತಿಯೂ ಕೂಡ, ಈದೃಶೀ ಸ್ಯಾತ್ = ಕತ್ತಲೆಯ ರೂಪವಾದುದೇ ಆದೀತು, ಇತಿ = ಈ ಕಾರಣದಿಂದ, ಏಷಾ ಉಪಾಸ್ತಿಃ = ಈ ಉಪಾಸನೆಯು, ನಃ ನೈವ ಧಿನೋತಿ = ನಮ್ಮನ್ನು ಸಂತೋಷಪಡಿಸುವುದಿಲ್ಲ.

ಈ ಪರಮಾತ್ಮನು ಅಪ್ರಕಾಶಸ್ವರೂಪನು ಎಂದೇ ಉಪಾಸನೆ ಮಾಡಿದರೆ ಪರಿಶೇಷದಿಂದ (ಪ್ರಕಾಶ–ತಮಸ್ಸು ಎಂಬ ಎರಡರಲ್ಲಿ ಪ್ರಕಾಶ ರೂಪವಲ್ಲವೆಂದರೆ ಉಳಿಯುವ) ತಿಮಿರತ್ವೇನ = ಕತ್ತಲೆಯ ಸ್ವರೂಪನೆಂದು, ತೋರಬೇಕಾದೀತು. ಅಂತಹ ಉಪಾಸನೆಯ ಫಲವಾದ ಮೋಕ್ಷವೂ ಕೂಡ ಕತ್ತಲೆಯಾದ ಅಂಧತಮಸವೇ ಆಗಬೇಕಾದೀತು. ಆದುದರಿಂದ ಭಗವಂತನಲ್ಲಿ ಪ್ರಕಾಶ ಮುಂತಾದ ಯಾವ ಆಕಾರವೂ ಇಲ್ಲ. ಅವನು ನಿರ್ಗುಣನು ಎಂಬ ಉಪಾಸನೆಯು ನಮ್ಮನ್ನು ಸಂತೋಷಪಡಿಸುವುದಿಲ್ಲ. ದೇವರು ನಿರಾಕಾರನಾದರೆ ಪ್ರಕಾಶಾಕಾರನೂ ಅಲ್ಲವೆಂದಾಯಿತು. ಆಗ ಅವನು ತಮಸ್ಸಿನಂತೆ ಆದನು. ಹಾಗೆ ಉಪಾಸನೆ ಮಾಡಿದರೆ ಅದರಿಂದ ಉಂಟಾಗುವ ಮೋಕ್ಷಫಲವೂ 'ಅಂಧತಮಸ' ಅಂದರೆ ಕೇವಲ ದುಃಖರೂಪವಾದುದೇ ಆಗಬೇಕಾಯಿತು. ಆದುದರಿಂದ ಇದು ಸರಿಯಲ್ಲ ಎಂದು ಭಾವ.

ತಿಮಿರಸ್ಯ ಭಾವಃ ತಿಮಿರತ್ವಂ ತೇನ, ಪರಿಶಿಷ್ಯತೇ ಇತಿ ಪರಿಶೇಷಃ, ಪರಿಶೇಷಸ್ಯ ಭಾವಃ ಪಾರಿಶೇಷ್ಯಂ ತಸ್ಮಾತ್.

Rarest Archiver

ಉಪ+ಆಸ್ಯತೇ ಆಸ್ಯೇತೇ ಆಸ್ಯಂತೇ ಆಸ ಉಪವೇಶನೇ ಕರ್ಮಣಿ ಲಟ್. ಧಿನೋತಿ ಧಿನುತಃ ಧಿನ್ವಂತಿ, ಧಿನೋಷಿ ಧಿನುಥಃ ಧಿನುಥ, ಧಿನೋಮಿ ಧಿನುವಃ ಧಿನ್ವಃ, ಧಿನುಮಃ ಧಿನ್ಮಃ. ಧಿವಿ ಪ್ರೀಣನೇ (592) ಲಟ್.

ಹಾಗಾದ್ದರೆ ಹೇಗೆ ಉಪಾಸನಾ ಮಾಡಬೇಕು?

ಅಥ ವೇದಪುರಾಣಭಾರತಾನಿ(ಧಿ)
ಸ್ವಯಮಾಲೋಚ್ಯ ಯಥಾವಬೋಧಮತ್ರ।
ಗುಣವಂತಮುಪಾಸ್ಮಹೇ ಮುಕುಂದಂ
ಸ್ಮೃತಿಧರ್ಮಾನ್ ಭೃಶಮಾಚರಂತ ಏವ ॥ ೩೦ ॥

ಅಥ ಸ್ವಯಂ ಸ್ಮೃತಿಧರ್ಮಾನ್ ಭೃಶಂ ಆಚರಂತಃ ಏವ ವೇದ-ಪುರಾಣಭಾರತಾನಿ (ಧಿ) ಆಲೋಚ್ಯ ಅತ್ರ ಯಥಾವಬೋಧಂ ಮುಕುಂದಂ ಗುಣವಂತಂ ಉಪಾಸ್ಮಹೇ ॥

ಅಥ = ಶಂಕರಭಾಷ್ಯವನ್ನು ತ್ಯಜಿಸಿದ ತರುವಾಯ, ಸ್ವಯಂ= ತಾನೊಬ್ಬನೇ, ಸ್ಮೃತಿಧರ್ಮಾನ್ = ಮನ್ವಾದಿಸ್ಮೃತಿಗಳಲ್ಲಿ ಹೇಳಿದ ಧರ್ಮಗಳನ್ನು, ಭೃಶಂ ಆಚರಂತಃ ಏವ = ಚೆನ್ನಾಗಿ ಆಚರಿಸುತ್ತಲೇ, ವೇದಪುರಾಣಭಾರತಾನಿ(ಧಿ)= ವೇದಪುರಾಣಭಾರತಮೊದಲಾದವುಗಳನ್ನು, ಆಲೋಚ್ಯ = ಪರಿಶೀಲಿಸಿ, ಅತ್ರ = ಈ ಗ್ರಂಥಗಳಲ್ಲಿ, ಯಥಾವಬೋಧಂ= ನಮ್ಮ ತಿಳುವಳಿಕೆಗನುಸಾರವಾಗಿ, ಮುಕುಂದಂ = ಶ್ರೀಮನ್ನಾರಾಯಣ ನನ್ನು, ಗುಣವಂತಂ ಉಪಾಸ್ಮಹೇ = ಗುಣವುಳ್ಳವನನ್ನಾಗಿ, ಉಪಾಸಿಸು ತ್ತೇವೆ.

ಅದ್ವೈತದಲ್ಲಿ ಹೇಳಿದ ನಿರ್ಗುಣನಿರಾಕಾರನೆಂಬ ಉಪಾಸನೆಯು ನಮಗೆ ಇಷ್ಟವಿಲ್ಲವಾದುದರಿಂದ, ವೇದಪುರಾಣಭಾರತಾದಿಗ್ರಂಥಗಳನ್ನು ಸ್ವಂತವಾಗಿ ವಿಚಾರಮಾಡಿ ಸ್ಮೃತಿಯಲ್ಲಿ ಹೇಳಿರುವ ಧರ್ಮಗಳನ್ನು ಚೆನ್ನಾಗಿ ಆಚರಿಸುತ್ತಾ ವೇದಾದಿಗಳನ್ನು ನಮ್ಮ ಬುದ್ಧಿಗನುಸಾರವಾಗಿ ಪರ್ಯಾಲೋಚಿಸುತ್ತಾ, ಮೋಕ್ಷಪ್ರದನಾದ ಶ್ರೀಹರಿಯು ಜ್ಞಾನಾನಂದಾದಿ ಗುಣಪೂರ್ಣನೆಂದೇ ಉಪಾಸನೆ ಮಾಡುತ್ತೇವೆ. ನಿರಂತರಸೇವಿಸುತ್ತೇವೆ.

Rarest Archiver

೨ ವೇದಾಶ್ಚ ಪುರಾಣಾನಿ ಚ ಭಾರತಂ ಚ ತಾನಿ, (ವೇದಪುರಾಣ-ಭಾರತಾನಿ ಆದೀನಿ ಯಸ್ಯ ತತ್ ವೇದಪುರಾಣಭಾರತಾದಿ, ಶಾಸ್ತ್ರಂ) ಅವಬೋಧಂ ಅನತಿಕ್ರಮ್ಯ ಯಥಾವಬೋಧಂ, ಗುಣಾಃ ಅಸ್ಯ ಸಂತೀತಿ ಗುಣವಾನ್ ತಂ, ಸ್ಮೃತೀನಾಂ ಧರ್ಮಾಃ ಸ್ಮೃತಿಧರ್ಮಾಃ ತಾನ್,

ಉಪ+ಆಸ್ಮಹೇ, ಆಸ್ತೇ ಆಸಾತೇ ಆಸತೇ ಆಸ್ಸೇ, ಆಸಾಥೇ ಆಧ್ವೇ, ಆಸೇ ಆಸ್ವಹೇ ಆಸ್ಮಹೇ, ಉಪ ಉಪಸರ್ಗಃ ಆಸ ಉಪವೇಶನೇ ಲಟ್.

ತ್ರಿವಿಕ್ರಮರಿಗೆ ಅದ್ವೈತದಲ್ಲಿ ಅಶ್ರದ್ಧೆ ಹುಟ್ಟಿತು, ಆನಂದತೀರ್ಥರ ಕೀರ್ತಿಯೂ ಕಿವಿಗೆ ಬಿದ್ದಿತು—

**ಅವಧಾರ್ಯ ಯದೇತಿ ಕಾರ್ಯಮಾರ್ಯಃ
ಸ ವಿವೇಕಾದುಪಚಕ್ರಮೇ ವಿಧಾತುಂ ।
ಪರಿಪೂರ್ಣಮತೇರ್ಜಗತ್ಸು ಕೀರ್ತಿಂ
ಪರಿಪೂರ್ಣಾಮಶೃಣೋತ್ತದಾ ವಿಶುದ್ಧಾಂ** ॥ ೬೧ ॥

ಸಃ ಆರ್ಯಃ ಕಾರ್ಯಂ ವಿವೇಕಾತ್ ಇತಿ ಅವಧಾರ್ಯ, ವಿಧಾತುಂ ಯದಾ ಉಪಚಕ್ರಮೇ, ತದಾ ಜಗತ್ಸು ಪರಿಪೂರ್ಣಾಂ ವಿಶುದ್ಧಾಂ ಪರಿ-ಪೂರ್ಣಮತೇಃ ಕೀರ್ತಿಂ ಅಶೃಣೋತ್.

ಸಃ ಆರ್ಯಃ = ಪೂಜ್ಯರಾದ ಆ ತ್ರಿವಿಕ್ರಮಪಂಡಿತರು, ಕಾರ್ಯಂ= ತನ್ನ ಕರ್ತವ್ಯವನ್ನು, ವಿವೇಕಾತ್ = ಹಿಂದು ಮುಂದಿನ ವಿವೇಚನೆಯಿಂದ, ಇತಿ ಅವಧಾರ್ಯ = ಈ ರೀತಿ ನಿಶ್ಚಯಿಸಿ, ವಿಧಾತುಂ = ವೇದಾದಿವಿಚಾರವನ್ನು ಮಾಡುವುದಕ್ಕೆ, ಯದಾ ಉಪಚಕ್ರಮೇ = ಯಾವಾಗ ಪ್ರಾರಂಭಿಸಿದರೋ, ತದಾ = ಆಗ, ಜಗತ್ಸು = ಲೋಕಗಳಲ್ಲಿ, ಪರಿಪೂರ್ಣಾಂ = ತುಂಬಿರುವ, ವಿಶುದ್ಧಾಂ = ನಿರ್ದೋಷವಾದ, ಪರಿಪೂರ್ಣಮತೇಃ = ಶ್ರೀಪೂರ್ಣಪ್ರಜ್ಞಾಚಾರ್ಯರ, ಕೀರ್ತಿಂ = ಹೆಗ್ಗಳಿಕೆಯನ್ನು, ಅಶೃಣೋತ್ = ಕೇಳಿದರು.

ಪೂಜ್ಯರಾದ ತ್ರಿವಿಕ್ರಮಪಂಡಿತರು ತಾನು ಮಾಡತಕ್ಕ ಕರ್ತವ್ಯವನ್ನು ಈ ರೀತಿ ವಿಚಾರಪೂರ್ವಕವಾಗಿ ನಿಶ್ಚಯಿಸಿ ಅದರಂತೆ ವೇದಾದಿವಿಚಾರವನ್ನು

Rarest Archiver

ಮಾಡಲಾರಂಭಿಸಿದರು. ಆಗ ಲೋಕದಲ್ಲೆಲ್ಲಾ ವ್ಯಾಪಿಸಿರುವ ನಿರ್ಮಲ ವಾದ ಶ್ರೀಮಧ್ವಾಚಾರ್ಯರ ಮೇಲ್ಮೆಯನ್ನೂ, ಹಿರಿಯತನವನ್ನೂ ಅವರು ಕೇಳಿದರು. ಆಚಾರ್ಯರು ಅದ್ವೈತವನ್ನು ಖಂಡಿಸುತ್ತಾ ಮೆರೆಯುತ್ತಿದ್ದಾರೆಂಬ ಸುದ್ದಿಯನ್ನು ಕೇಳಿದರು.

ಪರಿಪೂರ್ಣಾ ಮತಿಃ ಯಸ್ಯ ಸಃ ಪರಿಪೂರ್ಣಮತಿಃ ತಸ್ಯ, (ಅಶ್ವ-ಹೋತ್ ಸರ್ಗ ೧೩, ಶ್ಲೋ ೫೩, ನೋಡಿರಿ.)

ಅಷ್ಟರಲ್ಲಿ ಮಾಯಾವಾದಿಗಳು ತ್ರಿವಿಕ್ರಮಾರ್ಯರನ್ನು ಶ್ರೀಮಧ್ವಾ-ಚಾರ್ಯರಲ್ಲಿ ವಾದಿಸುವುದಕ್ಕಾಗಿ ಪ್ರೋತ್ಸಾಹಿಸಿದರು—

ವಿಹಿನಸ್ತಿ ಹಿ ನೋ ಜನೋಽತಿವಾಗ್ಮೀ
ಸಮಯಂ ಕೋಽಪಿ ಪರಂಪರೋಪಯಾತಂ ।
ಕ್ಷಿಪ ತಂ ತ್ವಮುದಾರಯುಕ್ತಿಶೂರೋ
ನ ಪರೇ ತತ್ರ ಸಮರ್ಥತಾಂ ವ್ರಜೇಯುಃ ॥ ೬೨ ॥

ಅತಿವಾಗ್ಮೀ ಕೋಽಪಿ ಜನಃ ಪರಂಪರೋಪಯಾತಂ ನಃ ಸಮಯಂ ಹಿ ವಿಹಿನಸ್ತಿ, (ತತ್) ಉದಾರಯುಕ್ತಿಶೂರಃ ತ್ವಂ ತಂ ಕ್ಷಿಪ. ಪರೇ ತತ್ರ ಸಮರ್ಥತಾಂ ನ ವ್ರಜೇಯುಃ । (ಇತಿ ಪರೈಃ ಅರ್ಥ್ಯಮಾನಃ ಸಃ ಸಂಶಯ-ಮಾಪ)

ಇಲ್ಲಿಂದ ಮುಂದೆ ೬೫ನೇ ಶ್ಲೋಕದವರೆಗೆ ನಾಲ್ಕು ಶ್ಲೋಕಗಳಿಗೆ ಏಕಾನ್ವಯ.

ಅತಿವಾಗ್ಮೀ = ಒಳ್ಳೆಯ ಮಾತುಗಾರನಾದ, ಕೋಽಪಿ ಜನಃ = ಯಾವನೋ ಒಬ್ಬ ಮನುಷ್ಯನು, ಪರಂಪರೋಪಯಾತಂ = ವಂಶಕ್ರಮದಿಂದ ಬಂದಿರುವ, ನಃ ಸಮಯಂ = ಮಾಯಾವಾದಿಗಳಾದ ನಮ್ಮ ಸಿದ್ಧಾಂತವನ್ನು, ಹಿ = ಯಾವ ಕಾರಣದಿಂದ, ವಿಹಿನಸ್ತಿ = ಖಂಡಿಸುತ್ತಾನೋ, (ತತ್ = ಆ ಕಾರಣದಿಂದ) ಉದಾರಯುಕ್ತಿಶೂರಃ = ಉತ್ತಮಯುಕ್ತಿಗಳಲ್ಲಿ ಚತುರನಾದ, ತ್ವಂ ತಂ ಕ್ಷಿಪ = ನೀನು ಅವನನ್ನು ಖಂಡಿಸು, ಪರೇ = ನಿನ್ನ ಹೊರತು ಇತರರು, ತತ್ರ = ಖಂಡಿಸುವುದರಲ್ಲಿ, ಸಮರ್ಥತಾಂ ನ ವ್ರಜೇಯುಃ

Rarest Archiver

= ಸಾಮರ್ಥ್ಯವನ್ನು ಹೊಂದಲಾರರು. (ಎಂದು ಮಾಯಾವಾದಿಗಳು ಕೇಳಿಕೊಂಡಾಗ ಶ್ರೀತ್ರಿವಿಕ್ರಮರು ಮನಸ್ಸಿನಲ್ಲಿ ಸಂದೇಹಪಟ್ಟರು.)

ಮಾಯಾವಾದಿಗಳು ತ್ರಿವಿಕ್ರಮಪಂಡಿತಾಚಾರ್ಯರನ್ನು ಕುರಿತು 'ಈ ನಮ್ಮ ದೇಶದಲ್ಲಿ ಹೊಸಬನಾದ ಒಬ್ಬ ಮಹಾವಿದ್ವಾಂಸನು ಕಾಣಿಸಿಕೊಂಡಿದ್ದಾನೆ. ಅವನು ಒಳ್ಳೆಯ ಮಾತುಗಾರ. ಅನಾದಿಕಾಲದಿಂದ ಬಂದಿರುವ ನಮ್ಮ ಮಾಯಾವಾದಸಿದ್ಧಾಂತವನ್ನು ಖಂಡಿಸುತ್ತಿದ್ದಾನೆ. ತ್ರಿವಿಕ್ರಮರೇ! ನೀವು ಒಳ್ಳೆಯ ಯುಕ್ತಿಶೂರರು. ಆದ್ದರಿಂದ ಅವನನ್ನು ಖಂಡಿಸಿರಿ. ನಿಮ್ಮಂತೆ ಅವನನ್ನು ಖಂಡಿಸಲು ಯಾರೂ ಸಮರ್ಥರಾಗಲಾರರು' ಎಂದು ಕೇಳಿಕೊಂಡರು. ತ್ರಿವಿಕ್ರಮಪಂಡಿತರು ಆ ಮಾತನ್ನು ಕೇಳಿ ಸಂಶಯಗೊಂಡರು.

ಪ್ರಶಸ್ತಾ ವಾಕ್ ಅಸ್ಯ ಅಸ್ತೀತಿ ವಾಗ್ಮೀ (ಗ್ಮಿನ್) ಅತ್ಯಂತಂ ವಾಗ್ಮೀ ಅತಿವಾಗ್ಮೀ, 'ವಾಚೋ ಗ್ಮಿನಿಃ' (5-2-124) ಪರಂಪರಯಾ ಉಪಯಾತಃ ತಂ, ಉದಾರಾಶ್ಚ ತಾಃ ಯುಕ್ತಯಶ್ಚ; ಉದಾರಯುಕ್ತಿಷು ಶೂರಃ, ಸಮರ್ಥಾನಾಂ ಭಾವಃ ಸಮರ್ಥತಾ ತಾಂ,

ವಿ + ಹಿನಸ್ತಿ ಹಿಂಸ್ತಃ ಹಿಂಸಂತಿ, ಹಿನಸ್ಸಿ ಹಿಂಸ್ಥಃ ಹಿಂಸ್ಥ, ಹಿನಸ್ಮಿ ಹಿಂಸ್ವಃ ಹಿಂಸ್ಮಃ, ಹಿಸಿ (ಹಿಂಸ) ಹಿಂಸಾಯಾಂ to kill. ಲಟ್. ಕ್ಷಿಪತು ಕ್ಷಿಪತಾತ್ ಕ್ಷಿಪತಾಂ ಕ್ಷಿಪಂತು, ಕ್ಷಿಪ ಕ್ಷಿಪತಾತ್ ಕ್ಷಿಪತಂ ಕ್ಷಿಪತ, ಕ್ಷಿಪಾಣಿ ಕ್ಷಿಪಾವ ಕ್ಷಿಪಾಮ. ಕ್ಷಿಪ ಪ್ರೇರಣೇ (ತುದಾದಿ) ತಳ್ಳು, ಎಸೆ to throw.

ತವ ವೇದನದೀರ್ವಿಗಾಹ್ಯ ಭೂಯಃ
ಸಮಯಾಂಭೋಧಿಷು ಕುರ್ವತೋ ವಿಹಾರಂ ।
ನವಕಾವ್ಯರಸಪ್ರಿಯಸ್ಯ ವಾದಿ-
ದ್ವಿರದೇಂದ್ರ! ಪ್ರತಿವಾರಣೋ ನ ಜಜ್ಞೇ ॥ ೭೩ ॥

ಹೇ ವಾದಿದ್ವಿರದೇಂದ್ರ! ವೇದನದೀಃ ವಿಗಾಹ್ಯ ಭೂಯಃ ಸಮಯಾಂಭೋಧಿಷು ವಿಹಾರಂ ಕುರ್ವತಃ ನವಕಾವ್ಯರಸಪ್ರಿಯಸ್ಯ ತವ ಪ್ರತಿವಾರಣಃ ನ ಜಜ್ಞೇ.

Rarest Archiver

ಹೇ ವಾದಿದ್ವಿರದೇಂದ್ರ=ಎಲೈ ವಾದಿಗಳೆಂಬ ಆನೆಗಳಲ್ಲಿ ಶ್ರೇಷ್ಠರಾದ ತ್ರಿವಿಕ್ರಮರೇ! ವೇದನದೀಃ=ವೇದಗಳೆಂಬ ನದಿಗಳನ್ನು, ವಿಗಾಹ್ಯ=ಮುಳುಗುಹಾಕಿ ಪ್ರವೇಶಿಸಿ, ಭೂಯಃ=ಮತ್ತೂ, ಸಮಯಾಂಭೋಧಿಷು =ಶಾಸ್ತ್ರಗಳೆಂಬ ಸಮುದ್ರಗಳಲ್ಲಿ, ವಿಹಾರಂ ಕುರ್ವತಃ=ಆಟವಾಡುತ್ತಿರುವ, ನವಕಾವ್ಯರಸಪ್ರಿಯಸ್ಯ = ಹೊಸದಾದ ಕಾವ್ಯಗಳ ಶೃಂಗಾರಾದಿರಸಗಳಲ್ಲಿ ಪ್ರೀತಿಯುಳ್ಳ, ತವ=ನಿನಗೆ, ಪ್ರತಿವಾರಣಃ=ಪ್ರತಿವಾದಿಯೆಂಬ ಆನೆಯು, ನ ಜಜ್ಞೇ=ಹುಟ್ಟಲಿಲ್ಲ.

ವಾದಿಗಜಶ್ರೇಷ್ಠರಾದ ತ್ರಿವಿಕ್ರಮಪಂಡಿತರೇ! ಮದ್ದಾನೆಯೊಂದು ನದಿಗಳಲ್ಲಿ ಮುಳುಗಿ ಈಜಾಡಿ, ಸಮುದ್ರದಲ್ಲಿಯೂ ಆಟವಾಡಿ ಮೆರೆಯುತ್ತಿರುವಾಗ ಅದನ್ನು ಎದುರಿಸಲು ಯಾವ ಆನೆಗಳಿಗೂ ಧೈರ್ಯವಿರುವುದಿಲ್ಲ. ಅದರಂತೆ ನೀವು ವೇದಗಳನ್ನು ಆಳವಾಗಿ ಪರ್ಯಾಲೋಚಿಸಿದ್ದೀರಿ. ಶಾಸ್ತ್ರ ಸಮುದ್ರದ ಒಳಹೊಕ್ಕು ಅನೇಕ ಸಿದ್ಧಾಂತಗಳನ್ನು ಮಥನಮಾಡಿ ತಿಳಿದುಕೊಂಡಿದ್ದೀರಿ. ಶೃಂಗಾರಾದಿರಸಭರಿತವಾದ ಕಾವ್ಯಗಳನ್ನು ರಚಿಸಿ ಅದರ ರಸಾಸ್ವಾದನ ಮಾಡಿದ ಸರಸಹೃದಯಿಗಳಾಗಿದ್ದೀರಿ. ಇಂತಹ ನಿಮ್ಮನ್ನು ಸೋಲಿಸುವ ಪ್ರತಿವಾದಿಯು ಪ್ರಪಂಚದಲ್ಲಿ ಹುಟ್ಟಲಿಲ್ಲ.

ವೇದಾ ಏವ ನದ್ಯಃ ತಾಃ, ಸಮಯಾಃ ಏವ ಅಂಭೋಧಯಃ ತೇಷು, ಕಾವ್ಯಸ್ಯ ರಸಾಃ ಕಾವ್ಯರಸಾಃ ನವ ಚ ತೇ ಕಾವ್ಯರಸಾಶ್ಚ, ನವಕಾವ್ಯರಸೇಷು ಪ್ರಿಯಃ ತಸ್ಯ, ಶೃಂಗಾರಹಾಸ್ಯಕರುಣವೀರರೌದ್ರಭಯಾನಕಾಃ। ಬೀಭತ್ಸಾದ್ಭುತಶಾಂತಾಖ್ಯಾಃ ನವ ಕಾವ್ಯೇ ರಸಾಃ ಸ್ಮೃತಾಃ ॥ (ಕಾ.ಪ್ರ.) ವಾದಿನಃ ಏವ ದ್ವಿರದಾಃ ವಾದಿದ್ವಿರದಾನಾಂ ಇಂದ್ರಃ ವಾದಿದ್ವಿರದೇಂದ್ರಃ ತಸ್ಯ ಸಂಬುದ್ಧಿಃ ಹೇ ವಾದಿದ್ವಿರದೇಂದ್ರ!

ಜಜ್ಞೇ ಜಜ್ಞಾತೇ ಜಜ್ಞಿರೇ ಇತ್ಯಾದಿ. ಜನೀ ಪ್ರಾದುರ್ಭಾವೇ ಅಕ. ಲಿಟ್.

ಉಪಯೊಹಿ ಯಶಃ ಶಶಾಂಕಗೌರಂ
ನಿಜಯೂಥಸ್ಯ ಭಯಂ ನಿರಾಕುರು ತ್ವಂ।

Rarest Archiver

ಅಧುನಾ ವಿಧಿನೋಪಪಾದಿತಂ ತ್ವಂ
ಪ್ರತಿವಾದಿಪ್ರತಿವಾರಣಂ ನಿವಾರ್ಯ ॥ ೭೪ ॥

ಅಧುನಾ ತ್ವಂ ವಿಧಿನಾ ಉಪಪಾದಿತಂ ತಂ ಪ್ರತಿವಾದಿಪ್ರತಿವಾರಣಂ ನಿವಾರ್ಯ ಶಶಾಂಕಗೌರಂ ಯಶಃ ಉಪಯಾಹಿ; ನಿಜಯೂಥಸ್ಯ ಭಯಂ ನಿರಾಕುರು.

ಅಧುನಾ = ಈಗ, ತ್ವಂ = ನೀನು, ವಿಧಿನಾ ಉಪಪಾದಿತಂ = ದೈವದಿಂದ ಒದಗಿದ, ತಂ ಪ್ರತಿವಾದಿಪ್ರತಿವಾರಣಂ = ಆ ಮಧ್ವಾಚಾರ್ಯರೆಂಬ ಪ್ರತಿವಾದಿಯಾದ ಎದುರಾಳಿ ಆನೆಯನ್ನು, ನಿವಾರ್ಯ = ಖಂಡಿಸಿ, ಶಶಾಂಕಗೌರಂ = ಚಂದ್ರನಂತೆ ಬೆಳ್ಳಗಿರುವ, ಯಶಃ = ಕೀರ್ತಿಯನ್ನು, ಉಪಯಾಹಿ = ಹೊಂದಿರಿ. ನಿಜಯೂಥಸ್ಯ ಭಯಂ = ತನ್ನವರ ಸಮೂಹದ ಭಯವನ್ನು, ನಿರಾಕುರು = ಹೋಗಲಾಡಿಸು.

'ಎಲೈ ತ್ರಿವಿಕ್ರಮಪಂಡಿತರೇ! ಈಗ ದೈವಯೋಗದಿಂದ ನಿಮಗೆ ಒದಗಿದ ಪ್ರತಿವಾದಿಯಾದ ಮಧ್ವಾಚಾರ್ಯರೆಂಬ ಎದುರಾಳಿ ಆನೆಯನ್ನು, ನೀವು ನಿರಾಕರಿಸಿರಿ. ಚಂದ್ರನಂತೆ ಶುಭ್ರವಾದ ಕೀರ್ತಿಯನ್ನು ಹೊಂದಿರಿ. ನಮ್ಮವರಾದ ಈ ಅದ್ವೈತಿಜನಸಮುದಾಯದ ಭಯವನ್ನು ಪರಿಹರಿಸಿರಿ' ಎಂದು ಮಾಯಾವಾದಿಗಳು ತ್ರಿವಿಕ್ರಮಾರ್ಯರನ್ನು ಪ್ರೋತ್ಸಾಹಿಸಿದರು.

ಶಶಾಂಕವತ್ ಗೌರಂ ತತ್, ನಿಜಾನಾಂ ಯೂಥಂ ನಿಜಯೂಥಂ ತಸ್ಯ, ಪ್ರತಿವಾದೀ ಏವ ಪ್ರತಿವಾರಣಃ ತಂ.

ಉಪ+ಯಾತು ಯಾತಾತ್ ಯಾತಾಂ ಯಾಂತು, ಯಾಹಿ ಯಾತಾತ್ ಯಾತಂ ಯಾತ, ಯಾನಿ ಯಾವ ಯಾಮ. ಯಾ ಪ್ರಾಪಣೇ ಲೋಟ್. ನಿರ್+ಆಙ್+ಕರೋತು ಕುರುತಾತ್ ಕುರುತಾಂಕುರ್ವಂತು, ಕುರು ಕುರುತಾತ್ ಕುರುತಂ ಕುರುತ, ಕರವಾಣಿ ಕರವಾವ ಕರವಾಮ. ಡು(ಕೃ)ಞ್ ಕರಣೇ ಲೋಟ್.

ಆಗ ತ್ರಿವಿಕ್ರಮಪಂಡಿತರು ಏನು ಮಾಡಿದರು?

ಇತಿ ಮಾಯಿಜನೇನ ತತ್ರ ತತ್ರ
ಸ್ವಜನತ್ವೇನ ಸ ತಾವದರ್ಥ್ಯಮಾನಃ ।

Rarest Archiver

ಅನುಕೂಲವಚಾ ಮಹಿಷ್ಠಮಾನೋ
ಮನಸಾ ಸಂಶಯಮಾಪ ಸಂಶಯಚ್ಛಿತ್ || ೬೫ ||

ಮಾಯಿಜನೇನ ತತ್ರ ತತ್ರ ಸ್ವಜನತ್ವೇನ ಇತಿ ಅರ್ಥ್ಯಮಾನಃ ಅನುಕೂಲವಚಾಃ ಮಹಿಷ್ಠಮಾನಃ ಸಂಶಯಚ್ಛಿತ್ ಸಃ ತಾವತ್ ಮನಸಾ ಸಂಶಯಂ ಆಪ.

ಮಾಯಿಜನೇನ = ಮಾಯಾವಾದಿಗಳಿಂದ, ತತ್ರ ತತ್ರ = ಅಲ್ಲಲ್ಲಿ, ಸ್ವಜನತ್ವೇನ = ತಮ್ಮವರೆಂಬಭಾವದಿಂದ, ಇತಿ ಅರ್ಥ್ಯಮಾನಃ = ಈ ರೀತಿ ಬೇಡಲ್ಪಡುತ್ತಿರುವ, ಅನುಕೂಲವಚಾಃ = ಅನುಕೂಲವಾದ ಮಾತುಳ್ಳ, ಮಹಿಷ್ಠಮಾನಃ = ಅತಿಶ್ರೇಷ್ಠಪ್ರಮಾಣಗಳುಳ್ಳ, ಸಂಶಯಚ್ಛಿತ್ = ಸಂಶಯವನ್ನು ಪರಿಹರಿಸುವ, ಸಃ ತಾವತ್ = ಆ ತ್ರಿವಿಕ್ರಮಪಂಡಿತಾಚಾರ್ಯರಾದರೋ, ಮನಸಾ = ಮನಸ್ಸಿನಿಂದ, ಸಂಶಯಂ = ಸಂದೇಹವನ್ನು, ಆಪ = ಹೊಂದಿದರು.

ಈ ರೀತಿಯಲ್ಲಿ ಮಾಯಾವಾದಿಗಳು ಅಲ್ಲಲ್ಲಿ ತಮ್ಮ ಮತದವರೆಂಬ ಅಭಿಮಾನದಿಂದ ಪಂಡಿತಾಚಾರ್ಯರನ್ನು ಪ್ರಾರ್ಥಿಸುತ್ತಿದ್ದರು. ಬಹಳ ಅಭಿಮಾನಶಾಲಿಗಳಾದ ಅನೇಕ ಪ್ರಮಾಣಗಳನ್ನರಿತ ತ್ರಿವಿಕ್ರಮಪಂಡಿತರು ಅವರ ಮನಸ್ಸಿಗೆ ಸಂತೋಷವಾಗುವ ಮಾತುಗಳನ್ನಾಡಿದರು. ಆದರೆ ಎಲ್ಲಾ ಜನರ ಸಂಶಯವನ್ನು ಪರಿಹರಿಸತಕ್ಕವರಾದರೂ, ತಾನು ಮಧ್ವಾಚಾರ್ಯರನ್ನು ಜಯಿಸಬಲ್ಲೆನೇ? ಎಂದು ಸಂಶಯಪಟ್ಟರು.

ಮಾಯೀ ಚಾಸೌ ಜನಶ್ಚ ಮಾಯಿಜನಃ ತೇನ, ಸ್ವಶ್ಚಾಸೌ ಜನಶ್ಚ ಸ್ವಜನಃ, ತಸ್ಯ ಭಾವಃ ಸ್ವಜನತ್ವಂ ತೇನ, ಅನುಕೂಲಂ ವಚಃ ಯಸ್ಯ ಸಃ, ಅತಿಶಯೇನ ಮಹಾನ್ ಮಹಿಷ್ಠಃ, ಮಹಿಷ್ಠಃ ಮಾನಃ ಯಸ್ಯ ಸಃ,(ಮಹಿಷ್ಠಂ ಮಾನಂ ಯಸ್ಯ ಸಃ) ಸಂಶಯಂ ಛಿನತ್ತೀತಿ ಸಂಶಯಚ್ಛಿತ್.

ಆಪ ಆಪತುಃ ಆಪುಃ ಇತ್ಯಾದಿ ಆಪ್ಲೃ ವ್ಯಾಪ್ತೌ ಲಿಟ್ ಪರಸ್ಮೈಪದಂ.

ಅನಂತರ ಅಲ್ಲಲ್ಲಿ ಸಿಕ್ಕಿದ ಮಧ್ವಾನುಯಾಯಿಗಳನ್ನು ತ್ರಿವಿಕ್ರಮಪಂಡಿತರು ಕೆಣಕಿ ಜಯಿಸಲಾರಂಭಿಸಿದರು—

Rarest Archiver

ಶಿತಮಧ್ವವಚಃಸೃಣಿಪ್ರಯೋಕ್ತ್ರೂನ್
ಪುರುಷಾನೇಷ ವಿಷಾದಯನ್ ಕವೀಭಃ ।
ವಿವಿಧೋತ್ತರಧೂಲಿಪಾತನೇನ
ಪ್ರತಿಘೇನಾಧಿಕಮಂಧಯಾಂಚಕಾರ ॥ ೬೬ ॥

ಶಿತಮಧ್ವವಚಸ್ಸೃಣಿಪ್ರಯೋಕ್ತ್ರೂನ್ ಪುರುಷಾನ್ ವಿಷಾದಯನ್ ಏಷಃ ಕವೀಭಃ ಪ್ರತಿಘೇನ ವಿವಿಧೋತ್ತರಧೂಲಿಪಾತನೇನ ಅಧಿಕಂ ಅಂಧಯಾಂಚಕಾರ.

ಶಿತಮಧ್ವವಚಃ = ಹರಿತವಾದ ಶ್ರೀಮಧ್ವಾಚಾರ್ಯರ ಮಾತುಗಳೆಂಬ ಸೃಣಿ-ಅಂಕುಶಗಳನ್ನು, ಪ್ರಯೋಕ್ತ್ರೂನ್-ಪ್ರಯೋಗಿಸುವ, ಪುರುಷಾನ್ = ಮನುಷ್ಯರನ್ನು, ವಿಷಾದಯನ್ = ವ್ಯಥೆಗೊಳಿಸುತ್ತಿರುವ, ಏಷಃ = ಕವೀಭಃ = ಈ ತ್ರಿವಿಕ್ರಮಪಂಡಿತಾಚಾರ್ಯರೆಂಬ ಆನೆಯು, ಪ್ರತಿಘೇನ = ಸಿಟ್ಟಿನಿಂದ, ವಿವಿಧೋತ್ತರ = ನಾನಾರೀತಿಯ ಉತ್ತರವೆಂಬ, ಧೂಲಿಪಾತನೇನ = ಧೂಳನ್ನು ಎಸೆಯುವುದರಿಂದ, ಅಧಿಕಂ = ಹೆಚ್ಚಾಗಿ, ಅಂಧಯಾಂಚಕಾರ = ಕುರುಡಾಗಿಸಿದರು.

ಕವಿಶ್ರೇಷ್ಠರಾದ ತ್ರಿವಿಕ್ರಮಪಂಡಿತಾಚಾರ್ಯರೆಂಬ ಆನೆಯು ಶ್ರೀಮಧ್ವಾಚಾರ್ಯರ ವಚನವೆಂಬ ಹರಿತವಾದ ಅಂಕುಶವನ್ನು ಪ್ರಯೋಗಿಸುವ ಶ್ರೀಮಧ್ವಶಿಷ್ಯರನ್ನು ಸೋಲಿಸಲು, ಕೋಪದಿಂದ ಅನೇಕಪ್ರತ್ಯುತ್ತರಗಳೆಂಬ ಧೂಳನ್ನೆರಚಿ ಅವರಿಗೆ ಸ್ವಲ್ಪವೂ ಕಣ್ಣುಕಾಣದಂತೆ, ಮುಂದಕ್ಕೆ ಉತ್ತರಹೊಳೆಯದಂತೆ ಮಾಡಿತು. ಮದಭರಿತವಾದ ಆನೆಯು ಅಂಕುಶದಿಂದ ಕಿವಿಯನ್ನು ಚುಚ್ಚಿ ಪೀಡಿಸುವ ಮಾವುತನನ್ನು ವ್ಯಥೆಪಡಿಸುತ್ತದೆ. ಕಣ್ಣಿಗೆ ಧೂಳನ್ನೆರಚಿ ಅವನನ್ನು ಕುರುಡನನ್ನಾಗಿಸುತ್ತದೆ. ಅದರಂತೆ ತ್ರಿವಿಕ್ರಮಾರ್ಯರು ದ್ವೈತಶಾಸ್ತ್ರದ ಯುಕ್ತಿಗಳನ್ನು ಪ್ರಯೋಗಿಸುವ ಮಧ್ವಶಿಷ್ಯರಿಗೆ ಕಣ್ಣಿಗೆ ಧೂಳೆರಚುವಂತೆ ಪ್ರತ್ಯುತ್ತರಕೊಟ್ಟು ಕಿಂಕರ್ತವ್ಯಮೂಢರನ್ನಾಗಿ ಮಾಡಿದರು.

ಶಿತಾನಿ ಚ ತಾನಿ ಮಧ್ವಸ್ಯ ವಚಾಂಸಿ ಚ ಶಿತಮಧ್ವವಚಾಂಸಿ, ತಾನ್ಯೇವ ಸೃಣಯಃ, ಪ್ರಯುಂಜತೇ ಇತಿ ಪ್ರಯೋಕ್ತಾರಃ, ಶಿತಮಧ್ವವಚಃ

Rarest Archiver

ಸೃಣೀನಾಂ ಪ್ರಯೋಕ್ತಾರಃ ಶಿತಮಧ್ವವಚಃಸೃಣಿಪ್ರಯೋಕ್ತಾರಃ ತಾನ್, ಕವಿರೇವ ಇಭಃ, ವಿವಿಧಾನಿ ಚ ತಾನಿ ಉತ್ತರಾಣಿ ಚ ವಿವಿಧೋತ್ತರಾಣಿ, ವಿವಿಧೋತ್ತರಾಣ್ಯೇವ ಧೂಲಯಃ ವಿವಿಧೋತ್ತರಧೂಲಯಃ, ವಿವಿಧೋತ್ತರ-ಧೂಲೀನಾಂ ಪಾತನಂ ವಿವಿಧೋತ್ತರಧೂಲಿಪಾತನಂ ತೇನ, ಪ್ರತಿಘ= ಕೋಪ, 'ಕೋಪಕ್ರೋಧಾಮರ್ಷರೋಷಪ್ರತಿಘಾ ರುಟ್‌ಕ್ರುಧೌ ಸ್ತ್ರಿಯಾ' —ಅಮರ.

ಅಂಧಾನ್‌ಕರೋತಿ ಅಂಧಯತಿ, ತತ್ಕರೋತಿ ತದಾಚಷ್ಟೇ (ವಾ) ಣಿಚ್. ಅಂಧಾನ್ ಚಕಾರ ಅಂಧಯಾಂಚಕಾರ (ಲಿಟ್) ನಾಮಧಾತು.

ಹೀಗೆ ತ್ರಿವಿಕ್ರಮಪಂಡಿತರು ಮಧ್ವಶಿಷ್ಯರನ್ನು ಗೆದ್ದರು, ಆದರೆ ರಹಸ್ಯದಲ್ಲಿ ಮಾಧ್ವಗ್ರಂಥಸಾರವನ್ನು ಪರ್ಯಾಲೋಚಿಸಿ ವಿಸ್ಮಯಸಮುದ್ರ ದಲ್ಲಿ ಬಿದ್ದರು—

ಕ್ಷಣದಾಸು ವಿಚಕ್ಷಣಃ ಸ ವೀಕ್ಷ್ಯ
ಪ್ರಚುರಪ್ರಜ್ಞಮನೋಜ್ಞಶಾಸ್ತ್ರಸಾರಂ ।
ಅಪರಾವಿದಿತಃ ಪ್ರಸಾದಗರ್ಭಂ
ವಿದಧೇ ವಿಸ್ಮಯಮಾಂತರಂ ಮಹಾಂತಂ ॥ ೬೭ ॥

ವಿಚಕ್ಷಣಃ ಸಃ ಕ್ಷಣದಾಸು ಅಪರಾವಿದಿತಃ ಪ್ರಸಾದಗರ್ಭಂ ಪ್ರಚುರ-ಪ್ರಜ್ಞಮನೋಜ್ಞಶಾಸ್ತ್ರಸಾರಂ ವೀಕ್ಷ್ಯ ಆಂತರಂ ಮಹಾಂತಂ ವಿಸ್ಮಯಂ ವಿದಧೇ.

ವಿಚಕ್ಷಣಃ ಸಃ = ಸೂಕ್ಷ್ಮವಿಮರ್ಶಕುಶಲರಾದ ಆ ತ್ರಿವಿಕ್ರಮ ಪಂಡಿತಾಚಾರ್ಯರು, ಕ್ಷಣದಾಸು = ರಾತ್ರಿಗಳಲ್ಲಿ, ಅಪರಾವಿದಿತಃ = ಬೇರೆಯವರಿಂದ ತಿಳಿಯಲ್ಪಡದವರಾಗಿ, ಪ್ರಸಾದಗರ್ಭಂ = ನಿರ್ಮಲಅಭಿ ಪ್ರಾಯದಿಂದ ತುಂಬಿದ, ಪ್ರಚುರಪ್ರಜ್ಞಮನೋಜ್ಞಶಾಸ್ತ್ರಸಾರಂ = ಶ್ರೀ ಪೂರ್ಣಪ್ರಜ್ಞರ ಮನೋಹರವಾದ ಶಾಸ್ತ್ರದ ಮುಖ್ಯಾರ್ಥವನ್ನು, ವೀಕ್ಷ್ಯ = ನೋಡಿ (ತಿಳಿದು), ಆಂತರಂ = ಮಾನಸವಾದ, ಮಹಾಂತಂ ವಿಸ್ಮಯಂ ವಿದಧೇ = ಅತಿಶಯವಾದ ಆಶ್ಚರ್ಯವನ್ನು ಮಾಡಿದರು (ಅನುಭವಿಸಿದರು).

Rarest Archiver

ಪ್ರಚುರಾ ಪ್ರಜ್ಞಾ ಯಸ್ಯ ಸಃ ಪ್ರಚುರಪ್ರಜ್ಞಃ ಶಾಸ್ತ್ರಸ್ಯ ಸಾರಃ ಶಾಸ್ತ್ರಸಾರಃ, ಮನೋಜ್ಞಶ್ಚಾಸೌ ಶಾಸ್ತ್ರಸಾರಶ್ಚ ಮನೋಜ್ಞಶಾಸ್ತ್ರಸಾರಃ ಪ್ರಚುರಪ್ರಜ್ಞಸ್ಯ ಮನೋಜ್ಞಶಾಸ್ತ್ರಸಾರಃ ತಂ, ನ ವಿದಿತಃ ಅವಿದಿತಃ, ಅಪರೈಃ ಅವಿದಿತಃ, ಪ್ರಸಾದಃ ಗರ್ಭೇ ಯಸ್ಯ ಸಃ ತಂ, ಅಂತರೇ ಭವಃ ಆಂತರಃ ತಂ,

ವಿ+ದಧೇ ದಧಾತೇ ದಧಿರೇ ಡುಧಾಞ್ ಧಾರಣಪೋಷಣಯೋಃ ಲಿಟ್.

ಇಂತಹ ಶ್ರೇಷ್ಠವಿಮರ್ಶಕರಾದರೂ ತ್ರಿವಿಕ್ರಮಪಂಡಿತರು ಆಗಲೇ ಮಧ್ವಾಚಾರ್ಯರ ಸಿದ್ಧಾಂತವನ್ನು ಏಕೆ ಅನುಸರಿಸಲಿಲ್ಲ?—

ವಿದಿತವಾನ್ ವ್ಯವಹೃತ್ಯ ಸುದರ್ಶನಂ
ಬಹುಲಬೋಧಮವೇಕ್ಷ್ಯ ಸ ನಿಶ್ಚಯಾತ್ ।
ಅಪಿ ನ ತಸ್ಯ ಮತಂ ಸಹಸಾದದೇ
ನನು ವಿಮೃಶ್ಯ ಕೃತೀ ಕುರುತೇಽಖಿಲಂ ॥ ೩೮ ॥

ಸಃ ಬಹುಲಬೋಧಂ ಅವೇಕ್ಷ್ಯ ವ್ಯವಹೃತ್ಯ ಸುದರ್ಶನಂ ನಿಶ್ಚಯಾತ್ ವಿದಿತವಾನ್ ಅಪಿ ತಸ್ಯ ಮತಂ ಸಹಸಾ ನ ಆದದೇ; ಕೃತೀ ಅಖಿಲಂ ವಿಮೃಶ್ಯ ಕುರುತೇ ನನು.

ಸಃ = ಆ ತ್ರಿವಿಕ್ರಮಪಂಡಿತಾಚಾರ್ಯರು, ಬಹುಲಬೋಧಂ ಅವೇಕ್ಷ್ಯ = ಶ್ರೀಪೂರ್ಣಪ್ರಜ್ಞಾಚಾರ್ಯರನ್ನು ನೋಡಿ, ವ್ಯವಹೃತ್ಯ = ಪರಸ್ಪರ ವಿರುದ್ಧಪ್ರಮೇಯಗಳ ವಿಷಯದಲ್ಲಿ ವಿಚಾರಮಾಡಿ, ಸುದರ್ಶನಂ = ನಿರ್ದೋಷನಾದ ಆಚಾರ್ಯರ ಸಿದ್ಧಾಂತವನ್ನು, ವಿದಿತವಾನ್ ಅಪಿ= ತಿಳಿದವರಾದರೂ ಕೂಡ, ತಸ್ಯ ಮತಂ = ಶ್ರೀಪೂರ್ಣಪ್ರಜ್ಞರ ಸಿದ್ಧಾಂತವನ್ನು, ಸಹಸಾ ನ ಆದದೇ= ಕೂಡಲೇ ಸ್ವೀಕರಿಸಲಿಲ್ಲ. ಕೃತೀ = ನಿಪುಣನಾದ ಮಾನವನು, ಅಖಿಲಂ ವಿಮೃಶ್ಯ ಕುರುತೇ ನನು = ಎಲ್ಲವನ್ನೂ ವಿಚಾರಮಾಡಿಯೇ ಕಾರ್ಯವನ್ನು ಮಾಡುತ್ತಾನಷ್ಟೆ !

ಅತಿದಕ್ಷವಿಮರ್ಶಕರಾದ ಆ ತ್ರಿವಿಕ್ರಮಪಂಡಿತಾಚಾರ್ಯರು ಅನೇಕ ರಾತ್ರಿಗಳಲ್ಲಿ ಮತ್ತೊಬ್ಬರಿಗೆ ತಿಳಿಯದಂತೆ ಶ್ರೀಮಧ್ವಾಚಾರ್ಯರ ಗ್ರಂಥ

Rarest Archiver

ಗಳನ್ನು ವಿಮರ್ಶಿಸಿದರು. ಮಧ್ವಸಿದ್ಧಾಂತವು ತಾತ್ಪರ್ಯಪೂರ್ಣವಾಗಿಯೂ ಸಾರವತ್ತಾಗಿಯೂ, ಅತ್ಯಂತ ಮನೋಹರವಾಗಿಯೂ ತ್ರಿವಿಕ್ರಮಾರ್ಯರಿಗೆ ಕಂಡಿತು. ಅವರು ಮನಸ್ಸಿನಲ್ಲಿ ಅಪಾರವಾದ ಆಶ್ಚರ್ಯವನ್ನೂ ಸಂತೋಷ ವನ್ನೂ ಹೊಂದಿದರು. ತ್ರಿವಿಕ್ರಮಪಂಡಿತರ ತಮ್ಮನಾದ ಶಂಕರಾರ್ಯರಲ್ಲಿ ಆಚಾರ್ಯರು ತಮ್ಮ ಗ್ರಂಥಗಳನ್ನು ಇಟ್ಟಿದ್ದರು. ರಾತ್ರಿಯಲ್ಲಿ ರಹಸ್ಯವಾಗಿ ಅವುಗಳನ್ನು ನೋಡಿ ಮಧ್ವಸಿದ್ಧಾಂತದ ದಾರ್ಢ್ಯವನ್ನು ತಿಳಿದು ತ್ರಿವಿಕ್ರಮ ಪಂಡಿತರು ಆಶ್ಚರ್ಯಪಟ್ಟರು ಎಂದು ತಾತ್ಪರ್ಯ.

ಶೋಭನಂ ಚ ತತ್ ದರ್ಶನಂ ಚ ತತ್, ಬಹುಲಃ ಬೋಧಃ ಯಸ್ಯ ಸಃ ಬಹುಲಬೋಧಃ ತಂ.

ಆ+ದದೇ ದದಾತೇ ದದಿರೇ, ಡುದಾಞ್ ದಾನೇ ಲಿಟ್, ಕುರುತೇ ಕುರ್ವಾತೇ ಕುರ್ವತೇ ಡುಕೃಞ್ ಕರಣೇ ಲಟ್.

ಇಲ್ಲಿ ದ್ರುತವಿಲಂಬಿತವೃತ್ತ. 'ದ್ರುತವಿಲಂಬಿತಮಾಹ ನಭೌ ಭರೌ' ಎಂದು ಲಕ್ಷಣ.

ಅನಂತರ ಒಂದಾನೊಂದು ದಿನ ತ್ರಿವಿಕ್ರಮಪಂಡಿತರು ತತ್ತ್ವವನ್ನು ತಿಳಿಯಲು ಆಚಾರ್ಯರ ಬಳಿಗೆ ಬಂದರು—

ತಂ ವಿಷ್ಣುಮಂಗಲಗತಂ ಬಹುಲಪ್ರಬೋಧಂ
ಪ್ರಾಪ್ಯಾಭ್ಯವಂದತ ತದಾಯುಗವಿಕ್ರಮಾರ್ಯಃ ।
ಆನಂದದಂ ಸ ಚತುರಾನನಹಾಸಲಕ್ಷ್ಮ್ಯಾ-
ತತ್ತ್ವಂ ಪ್ರವೇತ್ತುಮಮರೇಂದ್ರ ಇವಾಬ್ಜಯೋನಿಂ ॥ ೬೯ ॥

ಸಃ ಅಯುಗವಿಕ್ರಮಾರ್ಯಃ ತದಾ ವಿಷ್ಣುಮಂಗಲಗತಂ ಚತುರಾನನ-ಹಾಸಲಕ್ಷ್ಮ್ಯಾ ಆನಂದದಂ ತಂ ಬಹುಲಪ್ರಬೋಧಂ ಪ್ರಾಪ್ಯ ಅಮರೇಂದ್ರಃ ತತ್ತ್ವಂ ಪ್ರವೇತ್ತುಂ (ಚತುರಾನನಹಾಸಲಕ್ಷ್ಮ್ಯಾ ಆನಂದದಂ) ಅಬ್ಜ-ಯೋನಿಂ ಇವ ಅಭ್ಯವಂದತ.

Rarest Archiver

ಸಃ ಅಯುಗವಿಕ್ರಮಾರ್ಯಃ = ಆ ತ್ರಿವಿಕ್ರಮಪಂಡಿತಾಚಾರ್ಯರು, ತದಾ ವಿಷ್ಣುಮಂಗಲಗತಂ = ಆಗ ವಿಷ್ಣುಮಂಗಲದೇವಾಲಯದಲ್ಲಿರುವ, ಚತುರ–ಆನನ = ಸುಂದರವಾದ ಮುಖದ, ಹಾಸಲಕ್ಷ್ಮ್ಯಾ = ಮಂದ ಹಾಸದಕಾಂತಿಯಿಂದ, ಆನಂದದಂ = ಸಂತೋಷವನ್ನುಂಟುಮಾಡುವ, ತಂ ಬಹುಲಪ್ರಬೋಧಂ = ಆ ಪೂರ್ಣಪ್ರಜ್ಞಾಚಾರ್ಯರನ್ನು, ಪ್ರಾಪ್ಯ = ಹೊಂದಿ, ಅಮರೇಂದ್ರಃ = ದೇವೇಂದ್ರನು, ತತ್ತ್ವಂ ಪ್ರವೇತ್ತುಂ = ಪರಮಾತ್ಮಸ್ವರೂಪವನ್ನು ಸರಿಯಾಗಿ ತಿಳಿಯಲು, ಅಬ್ಜಯೋನಿಂ ಇವ = ಬ್ರಹ್ಮದೇವರನ್ನೆಂಬಂತೆ, (ಪ್ರಾಪ್ಯ = ಹೊಂದಿ) ಅಭ್ಯವಂದತ = ವಿಶೇಷ ವಾಗಿ ವಂದಿಸಿದರು. (ಅಭಿವಾದನ ಮಾಡಿದರು.)

ದೇವೇಂದ್ರನು ಪರಮತತ್ತ್ವಸ್ವರೂಪನಾದ ಶ್ರೀಹರಿಯನ್ನು ಚೆನ್ನಾಗಿ ತಿಳಿಯಲು ನಾಲ್ಕುಮುಖಗಳ ಮಂದಹಾಸದಿಂದ ಎಲ್ಲರನ್ನೂ ಸಂತೋಷಪಡಿಸುವ ಚತುರ್ಮುಖಬ್ರಹ್ಮದೇವರ ಬಳಿಗೆ ಹೋಗಿ ಅಭಿವಾದನ ಮಾಡುತ್ತಾನೆ, ತತ್ತ್ವವನ್ನು ಕೇಳಿ ತಿಳಿಯುತ್ತಾನೆ. ಅದರಂತೆಯೇ ಆ ಸಮಯದಲ್ಲಿ ವಿಷ್ಣು ಮಂಗಲದೇವಾಲಯದಲ್ಲಿ ಇರುವ ಸುಂದರವದನದ ಮಂದಹಾಸದ ಕಾಂತಿ ಯಿಂದ ಎಲ್ಲರನ್ನೂ ಸಂತೋಷಪಡಿಸುವ ಶ್ರೀಮಧ್ವಾಚಾರ್ಯರನ್ನು ಸಮೀಪಿಸಿ, ಅವರಿಂದ ಪರಾಪರತತ್ತ್ವಗಳನ್ನು ಸರಿಯಾಗಿ ತಿಳಿಯಲು, ಶ್ರೀತ್ರಿವಿಕ್ರಮ ಪಂಡಿತಾಚಾರ್ಯರು ಅವರ ಬಳಿಗೆ ಹೋಗಿ ಸರಿಯಾಗಿ ಅಭಿವಾದನ ಮಾಡಿದರು. ಹೀಗೆ ಅವರಿಂದ ತತ್ತ್ವವನ್ನು ತಿಳಿಯುವ ತನ್ನ ಕುತೂಹಲವನ್ನು ವ್ಯಕ್ತಪಡಿಸಿದರು.

ವಿಷ್ಣುಮಂಗಲಂ ಗತಃ ವಿಷ್ಣುಮಂಗಲಗತಃ ತಂ, ಬಹುಲಃ ಪ್ರಬೋಧಃ ಯಸ್ಯ ಸಃ ತಂ, ಅಯುಗಂ ವಿಕ್ರಮಃ ಯಸ್ಯ ಸಃ, ಅಯುಗ-ವಿಕ್ರಮಶ್ಚಾಸೌ ಆರ್ಯಶ್ಚ, ಆನಂದಂ ದದಾತೀತಿ ಆನಂದದಃ ತಂ, ಚತುರಂ ಚ ತತ್ ಆನನಂ ಚ, ಹಾಸಸ್ಯ ಲಕ್ಷ್ಮೀಃ, ಚತುರಾನನಸ್ಯ ಹಾಸಲಕ್ಷ್ಮೀಃ ತಯಾ ಚತುರಾನನಸ್ಯಹಾಸಲಕ್ಷ್ಮ್ಯಾ, (ಚತ್ವಾರಿ ಚ ತಾನಿ ಆನನಾನಿ ಚ, ಚತುರಾನನಾನಾಂ ಹಾಸಲಕ್ಷ್ಮೀಃ ತಯಾ) ಅಮರಾಣಾಂ ಇಂದ್ರಃ, ಅಬ್ಜಂ ಯೋನಿಃ ಯಸ್ಯ ಸಃ ತಂ;

Rarest Archiver

ಅಭಿ + ಅವಂದತ ಅವಂದೇತಾಂ ಅವಂದಂತ ಇತ್ಯಾದಿ ವದಿ (ವಂದ್) ಅಭಿವಾದನಸ್ತುತ್ಯೋಃ ಆತ್ಮನೇ. ಲಙ್.

'ಉಕ್ತಂ ವಸಂತತಿಲಕಂ ತಭಜಾ ಜಗೌ ಗಃ' ಎಂಬ ಲಕ್ಷಣದಂತೆ ವಸಂತತಿಲಕವೃತ್ತ.

ಇಲ್ಲಿಗೆ ಕವಿಕುಲತಿಲಕ ಶ್ರೀಮನ್ನಾರಾಯಣಪಂಡಿತವಿರಚಿತವಾದ
ಶ್ರೀಸುಮಧ್ವವಿಜಯಮಹಾಕಾವ್ಯದ ಹದಿಮೂರನೆಯಸರ್ಗದ
ಕರ್ನಾಟಕಭಾಷಾವ್ಯಾಖ್ಯಾನವು ಸಮಾಪ್ತವಾಯಿತು.

Rarest Archiver

ಶ್ರೀಃ

ಶ್ರೀಸುಮಧ್ವವಿಜಯಮಹಾಕಾವ್ಯಂ

ಹದಿನಾಲ್ಕನೆಯ ಸರ್ಗದ ಕಥಾಸಾರ

ಹಿಂದಿನ ಸರ್ಗದ ಕೊನೆಯಲ್ಲಿ ಹೇಳಿದಂತೆ ಶ್ರೀಮಧ್ವಾಚಾರ್ಯರು ವಿಷ್ಣುಮಂಗಲದೇವಾಲಯದಲ್ಲಿ ವಿರಾಜಮಾನರಾಗಿದ್ದರು. ಜಯಸಿಂಹ ರಾಜನು ಆಚಾರ್ಯರ ಪರಮಭಕ್ತನಾಗಿರುವುದನ್ನು ಕಂಡು ಅಲ್ಲಿಯ ಗ್ರಾಮಮುಖಂಡರು ಆಚಾರ್ಯರಲ್ಲಿ ದ್ವೇಷಭಾವವನ್ನು ತ್ಯಜಿಸಿ, ಪದ್ಮತೀರ್ಥರು ಕದ್ದು ಒಯ್ದಿದ್ದ ಪುಸ್ತಕಗಳನ್ನು ಜಯಸಿಂಹರಾಜನ ಮೂಲಕ ಶಂಕರಪಂಡಿತರಿಗೆ ಒಪ್ಪಿಸಿದರು. ಶಂಕರಪಂಡಿತರು ಆಚಾರ್ಯರ ಅಪ್ಪಣೆಯಂತೆ ಆ ಪುಸ್ತಕಗಳನ್ನು ಸ್ವೀಕರಿಸಿದರು. ಶಂಕರಪಂಡಿತರ ಅಣ್ಣಂದಿರಾದ ತ್ರಿವಿಕ್ರಮಪಂಡಿತರು ತಮ್ಮನ ವಿಜಯವಿದು ಎಂದು ತಿಳಿದು ಇದಕ್ಕೆ ಸಹಾಯಕನಾದ ಜಯಸಿಂಹರಾಜನಿಗೆ ಆಶೀರ್ವಾದ ಮಾಡಿದರು. ಆಚಾರ್ಯರು ಅಲ್ಲಿಯೇ ದೇವಾಲಯದಲ್ಲಿ ವಾಸಿಸುತ್ತಿದ್ದು ಸಜ್ಜನರಿಗೆ ಅವರ ಯೋಗ್ಯತಾನುಸಾರವಾಗಿ ಜ್ಞಾನಭಕ್ತಿವೈರಾಗ್ಯಾದಿಗಳನ್ನು ಅನುಗ್ರಹಿಸುತ್ತಿದ್ದರು.

ಅವರು ಅರುಣೋದಯಕಾಲದಲ್ಲಿ ಎದ್ದು ಸ್ನಾನ ಆಹ್ನಿಕಗಳನ್ನು ಮಾಡಿ ಪರದೆಯ ಒಳಗೆ ಕುಳಿತು ಪರಬ್ರಹ್ಮನ ಧ್ಯಾನಮಾಡುತ್ತಿದ್ದರು. ಅವರ ಶಿಷ್ಯಯತಿಗಳೂ ಹೀಗೆಯೇ ಮಾಡುತ್ತಿದ್ದರು. ಅವರೆಲ್ಲರೂ ಗುರುಸೇವೆಯಲ್ಲಿ ಆಸಕ್ತರಾಗಿದ್ದರು. ಆಚಾರ್ಯರು ಅರುಣೋದಯ ಸಮಯದಲ್ಲಿ ಸ್ನಾನಕ್ಕೆ ಹೊರಡುತ್ತಿದ್ದರು. ಒಂದುದಿನ ರಾತ್ರಿಯ ಹೊತ್ತು ಗ್ರಂಥವ್ಯಾಸಂಗದಲ್ಲಿ ಬಹಳಹೊತ್ತು ನಿದ್ದೆಗೆಟ್ಟಿದ್ದ ಶಿಷ್ಯನು ಬೆಳಿಗ್ಗೆ ಬೇಗನೆ ಏಳದಿದ್ದನು. ಆಚಾರ್ಯರು ತನ್ನ ಅಂಗವಸ್ತ್ರಾದಿಗಳನ್ನು

Rarest Archiver

ಒದಗಿಸುವ ಶಿಷ್ಯನು ಬಾರದಿರುವುದನ್ನು ಕಂಡು ತಾನೇ ಬಟ್ಟೆಗಳನ್ನು ತೆಗೆದುಕೊಂಡು ಹೋದರು. ಆಗ ಕೂಡಲೇ ಎಚ್ಚರಗೊಂಡ ಶಿಷ್ಯನು ಅದನ್ನು ನೋಡಿ ವ್ಯಥೆಪಟ್ಟನು. ಪ್ರತಿದಿನವೂ ಜನರಿಗೆ ಕಾಣದಂತೆ ಅಮೃತಭೋಜನರಾದ ದೇವತೆಗಳು ಆಚಾರ್ಯರನ್ನು ಸೇವಿಸುತ್ತಿದ್ದರು. ಆಚಾರ್ಯರು ಪೂಜಿಸಿದ ನಿರ್ಮಾಲ್ಯದ ಹೂವಿನಲ್ಲಿ ಅಮೃತವು ಸುರಿಯುತ್ತಿತ್ತು. ಶಿಷ್ಯರು ಅದನ್ನು ತುಪ್ಪವೆಂದು ಭ್ರಮಿಸಿದರು. ಅಲ್ಲಿದ್ದ ಪ್ರಾಜ್ಞರು ಇದು ತುಪ್ಪವಲ್ಲ ಅಮೃತವೆಂದು ಹೇಳಿ ಅವರ ಭ್ರಾಂತಿಯನ್ನು ನಿವಾರಿಸಿದರು.

ಅಷ್ಟರಲ್ಲಿ ಸೂರ್ಯನು ಉದಯಿಸಿ ಕತ್ತಲೆಯನ್ನು ದೂರ ಸರಿಸಿದನು. ಆಚಾರ್ಯರು ತನಗಾಗಿ ಸಿದ್ಧಪಡಿಸಿದ್ದ ಯೋಗಾಸನದಲ್ಲಿ ಕುಳಿತು ವ್ಯಾಸ ಪೀಠದಲ್ಲಿಟ್ಟಿರುವ ಶಾಸ್ತ್ರಗ್ರಂಥವನ್ನು ತೆರೆದು 'ಓಂ' ಎಂದು ಉಚ್ಚರಿಸಿ ಪ್ರವಚನವನ್ನು ಪ್ರಾರಂಭಿಸಿದರು. ಶ್ರೋತೃಗಳ ಪ್ರಶ್ನೆಗಳಿಗೆ ಧೀರಗಂಭೀರ ಸ್ವರದಿಂದ ಉತ್ತರಕೊಟ್ಟರು.

ಆಗ ಸೂರ್ಯನು ಆಕಾಶಮಧ್ಯದಿಂದ ಇಳಿದು ಪಶ್ಚಿಮದ ಕಡೆಗೆ ಹೋಗಲಾರಂಭಿಸಿದನು. ಆಚಾರ್ಯರು ತನ್ನ ಸನ್ನಿಧಾನಕ್ಕಾಗಿ ಕಾದಿದ್ದ ಗಂಗಾದಿತೀರ್ಥಾಭಿಮಾನಿದೇವತೆಗಳಿಂದ ಕೂಡಿದ ಸರೋವರದಲ್ಲಿ ಮಿಂದು ಸಾಲಿಗ್ರಾಮದ ತೀರ್ಥವನ್ನು ಸ್ವೀಕರಿಸಿದರು. ಗೋಪೀಚಂದನದಿಂದ ದ್ವಾದಶಪುಂಡ್ರಗಳನ್ನು ಧರಿಸಿ ಚಕ್ರಶಂಖಾದಿಮುದ್ರೆಗಳಿಂದ ಅಲಂಕರಿಸಿ ಕೊಂಡರು. ಆಚಾರ್ಯರು ಅಲ್ಲಿಂದ ಪೂಜೆಗೆ ಹೊರಟು ದೇವರ ಸನ್ನಿಧಿಗೆ ಬರುವಾಗ ಶಿಷ್ಯನೊಬ್ಬನು ಆಚಾರ್ಯರ ಕಾಲುಗಳನ್ನು ತೊಳೆದನು. ಅಲ್ಲಿ ಸೇರಿದ ಭಕ್ತರು ಆ ಪಾದೋದಕವನ್ನು ಪೂರ್ತಿಯಾಗಿ ತಲೆಯ ಮೇಲೆ ಪ್ರೋಕ್ಷಿಸಿಕೊಂಡು ಧನ್ಯರಾದರು. ತರುವಾಯ ಆಚಾರ್ಯರು ನಿಯಮ ದಿಂದ ಶಿಷ್ಯರು ತಂದುಕೊಟ್ಟಿರುವ ನೀರನ್ನು ಶಂಖದಲ್ಲಿ ತುಂಬಿ ಶಂಖಪೂಜೆ ಮಾಡಿ ಕಲಶಪೂಜೆಯನ್ನೂ ಮಾಡಿ ದೇವರಿಗೆ ಅಭಿಷೇಕಮಾಡಿದರು. ಗಂಧ ಪುಷ್ಪಾದಿಗಳಿಂದರ್ಚಿಸಿದರು. ದೇವರಿಗೆ ಉತ್ತಮವಾದ ಪಾಯಸಾದಿಗಳನ್ನು ನಿವೇದಿಸಿ ಪೂಜೆಯನ್ನು ಮುಗಿಸಿದರು. ಅನಂತರ ಗಂಧ-ಅಂಗಾರ-ಅಕ್ಷತಾದಿ

Rarest Archiver

ಗಳನ್ನುಧರಿಸಿ ಪರಮಾತ್ಮನ ಪ್ರಸಾದರೂಪವಾದ ಪಾಯಸಾದಿನೈವೇದ್ಯ ಗಳನ್ನು ಭುಂಜಿಸಿದರು.

ಅನಂತರ ಹೊರಗಿನ ಮಂಟಪಕ್ಕೆ ಬಂದು ಅಲ್ಲಿ ಸುತ್ತಲೂ ಕುಳಿತಿರುವ ವಿದ್ವಾಂಸರ ಮಧ್ಯದಲ್ಲಿ ತಾನೂ ಉನ್ನತಿಯ ಆಸನದಲ್ಲಿ ಕುಳಿತು ನಾನಾ ಪ್ರಕಾರವಾದ ಶಾಸ್ತ್ರಾರ್ಥವಿನೋದದಿಂದ ಎಲ್ಲಾ ಪಂಡಿತರನ್ನೂ ಆನಂದ ಗೊಳಿಸಿದರು.

ಒಬ್ಬ ಶಿಷ್ಯನು ಏನೋ ಹೇಳಬೇಕೆಂದು ದೂರದಲ್ಲಿ ನಿಂತು ಸೂಚಿಸು ತ್ತಿದ್ದನು. ಆಚಾರ್ಯರು ತನ್ನ ಹುಬ್ಬಿನ ಸಂಕೇತದಿಂದ ಅವನನ್ನು ಹತ್ತಿರ ಕರೆದರು. ಅವನು ಬಾಯಿಗೆ ಕೈಯಿಟ್ಟು ತುಂಬಾ ವಿನಯದಿಂದ ಆಚಾರ್ಯರ ಕಿವಿಯಲ್ಲಿ 'ಹೊರಗೆ ಜನರು ತಮ್ಮ ದರ್ಶನಕ್ಕಾಗಿ ಕಾದಿದ್ದಾ ರೆ'ಂದು ವಿಜ್ಞಾಪಿಸಿದನು. ಆಚಾರ್ಯರು ಅವರು ಬರಬಹುದೆಂದು ಸೂಚಿಸಿ ದಾಗ ಅವರೆಲ್ಲರೂ ಬಂದು ಒಬ್ಬೊಬ್ಬರಾಗಿ ಸಾಷ್ಟಾಂಗಪ್ರಣಾಮ ಮಾಡಿ ಆಚಾರ್ಯರ ಮಂದಹಾಸದ ಅನುಗ್ರಹವನ್ನು ಪಡೆದರು. ಅನಂತರ ಆಚಾರ್ಯರ ಪ್ರವಚನವು ಪ್ರಾರಂಭವಾಯಿತು. ಅಲ್ಲಿ ಕುಳಿತ ಜನರಿಗೆ ಸಮಯ ಕಳೆದುದು ತಿಳಿಯಲೇ ಇಲ್ಲ. ಅಷ್ಟರಲ್ಲಿ ಸೂರ್ಯನು ಅಸ್ತಂಗತ ನಾದನು. ಆಚಾರ್ಯರು ಶ್ರೀಹರಿಯ ಧ್ಯಾನಮಗ್ನರಾದರು. ಅಲ್ಲಿದ್ದ ಬ್ರಾಹ್ಮಣರೂ ಸಂಧ್ಯಾದಿಗಳನ್ನು ಪೂರೈಸಿ ಅಗ್ನಿಹೋತ್ರಹೋಮವನ್ನು ಮಾಡಿದರು. ಆಗ ಚಂದ್ರೋದಯವೂ ಆಯಿತು. ಚಂದ್ರನ ಬೆಳದಿಂಗಳಿ ನಿಂದ ಅಂಧಕಾರವು ನಾಶವಾಯಿತು. ಆಚಾರ್ಯರ ಪ್ರವಚನದಿಂದ ಸಜ್ಜನರ ಅಜ್ಞಾನಾಂಧಕಾರವು ನಾಶವಾಯಿತು. ಅವರೆಲ್ಲರೂ ಶ್ರೀಹರಿಯಲ್ಲಿ ನಿರ್ವ್ಯಾಜ ವಾದ ಭಕ್ತಿಯುಳ್ಳವರಾದರು.

Rarest Archiver

ಹದಿನಾಲ್ಕನೆಯ ಸರ್ಗ

ಶ್ರೀಮಧ್ವಾಚಾರ್ಯರ ಆಹ್ನಿಕ

ಜಯಸಿಂಹರಾಜನು ಆಚಾರ್ಯರ ಪರಮಭಕ್ತನಾದ ಅನಂತರ ಉಳಿದ ಸಜ್ಜನರೆಲ್ಲರೂ ಆಚಾರ್ಯರಲ್ಲಿ ಪರಮಗೌರವಸ್ನೇಹಗಳನ್ನು ಮಾಡಿದರು—

ಪರಿವೃಢಘನಸಂಘೇ ರಾಜಸಿಂಹೋರ್ಜಶಕ್ತ್ಯಾ
ತ್ಯಜತಿ ಮಲಿನಭಾವಂ ನೀರಸತ್ವಾನ್ನಿಕಾಮಂ ।
ಸ್ಫುಟಮುದಯತಿ ತೇಜಸ್ವ್ಯುಜ್ಜ್ವಲೇ ಮಧ್ವಭಾನೌ
ಸುಜನಜಲಜಕಾಂತ್ಯೈ ವಿಶ್ವಮಾಸೀನ್ಮನೋಜ್ಞಂ ॥ ೧ ॥

ಪರಿವೃಢಘನಸಂಘೇ ರಾಜಸಿಂಹೋರ್ಜಶಕ್ತ್ಯಾ ನೀರಸತ್ವಾತ್ ಮಲಿನಭಾವಂ ನಿಕಾಮಂ ತ್ಯಜತಿ (ಸತಿ) ತೇಜಸ್ವಿನಿ ಉಜ್ಜ್ವಲೇ ಮಧ್ವಭಾನೌ ಸುಜನಜಲಜಕಾಂತ್ಯೈ ಸ್ಫುಟಂ ಉದಯತಿ ಸತಿ ವಿಶ್ವಂ ಮನೋಜ್ಞಂ ಆಸೀತ್ ।

ಪರಿವೃಢ=ಕಬೆಗ್ರಾಮದ ಮುಖ್ಯಸ್ಥರೆಂಬ, ಘನಸಂಘೇ=ಮೋಡಗಳ ಸಮೂಹವು, ರಾಜಸಿಂಹ = ರಾಜಶ್ರೇಷ್ಠನಾದ ಜಯಸಿಂಹರಾಜನೆಂಬ, ಊರ್ಜಶಕ್ತ್ಯಾ=ಕಾರ್ತಿಕಮಾಸದ ಸಾಮರ್ಥ್ಯದಿಂದ, ನೀರಸತ್ವಾತ್ = ಬಲವಿಲ್ಲದಿರುವುದರಿಂದ, ನೀರಿಲ್ಲದಿರುವುದರಿಂದ, ಮಲಿನಭಾವಂ = ದ್ವೇಷವನ್ನು, ಕಪ್ಪಾಗಿರುವಿಕೆಯನ್ನು, ನಿಕಾಮಂ= ಅತ್ಯಂತವಾಗಿ, ತ್ಯಜತಿ ಸತಿ = ಬಿಡುತ್ತಿರಲು, ತೇಜಸ್ವಿ= ಕಾಂತಿಯುಳ್ಳವರಲ್ಲಿ, ಉಜ್ಜ್ವಲೇ = ಹೆಚ್ಚು ಪ್ರಕಾಶಮಾನರಾದ, ಮಧ್ವಭಾನೌ= ಶ್ರೀಮಧ್ವಾಚಾರ್ಯರೆಂಬ ಸೂರ್ಯನು, ಸುಜನಜಲಜಕಾಂತ್ಯೈ = ಸಜ್ಜನರೆಂಬ ತಾವರೆಹೂವುಗಳ ಶೋಭೆಗಾಗಿ, ಸ್ಫುಟಂ ಉದಯತಿ ಸತಿ= ಸ್ಪಷ್ಟವಾಗಿ ಅಭ್ಯುದಯವನ್ನು, ಉದಯವನ್ನು ಹೊಂದುತ್ತಿರಲು, ವಿಶ್ವಂ= ಎಲ್ಲವೂ, ಪ್ರಪಂಚವು, ಮನೋಜ್ಞಂ ಆಸೀತ್ = ಮನೋಹರವಾಗಿ ಆಯಿತು.

Rarest Archiver

ಪಾಡಿಕೂಡಲು ಎಂಬ ಎರಡುಗ್ರಾಮಗಳ ಅಧಿಪತಿಗಳೆಂಬ ಮೇಘಗಳ ಸಮೂಹವು ರಾಜಶ್ರೇಷ್ಠನಾದ ಜಯಸಿಂಹರಾಜನೆಂಬ ಕಾರ್ತಿಕಮಾಸದ ಬಲದಿಂದ ಶಕ್ತಿಗುಂದಿತು. ಪದ್ಮತೀರ್ಥಾದಿಗಳಲ್ಲಿ ಪ್ರೀತಿ, ಶ್ರೀಮಧ್ವರಲ್ಲಿ ದ್ವೇಷವೆಂಬ ಕಲ್ಮಷದ ಕಪ್ಪನ್ನು ಪೂರ್ತಿಯಾಗಿ ಬಿಟ್ಟಿತು. ಶುಭ್ರವಾಯಿತು. ತೇಜಸ್ವಿಗಳಲ್ಲಿ ಅತಿತೇಜಸ್ವಿಗಳಾದ ಶ್ರೀಮಧ್ವರೆಂಬ ಸೂರ್ಯನು ಸಜ್ಜನರೆಂಬ ಕಮಲಗಳನ್ನು ಅರಳಿಸಲು ಸ್ಪಷ್ಟವಾಗಿ ಉದಯಿಸಿದಾಗ ಎಲ್ಲಾ ಕಾರ್ಯವೂ ಮನೋಹರವಾಯಿತು. ಕಾರ್ತಿಕಮಾಸದಲ್ಲಿ ಮೋಡಗಳು ನೀರನ್ನು ಸುರಿಸಿ ಬರಿದಾಗಿ ಬಿಳಿಯಾಗುತ್ತವೆ. ಆಗ ರಾತ್ರಿಯೊಂದು ಕಳೆದು ತಾವರೆಯನ್ನರಳಿಸಲು ಸೂರ್ಯನು ಉದಯಕ್ಕೆ ಬಂದಾಗ ಪ್ರಪಂಚವೆಲ್ಲಾ ಮನೋಹರವಾಗಿ ತೋರುವಂತೆ, ಜಯಸಿಂಹರಾಜನು ಆಚಾರ್ಯರ ಭಕ್ತನಾದಾಗ ಎಲ್ಲಾ ಗ್ರಾಮಮುಖ್ಯರೂ ಆಚಾರ್ಯರಲ್ಲಿ ಭಕ್ತಿಪ್ರೀತಿಗಳನ್ನು ತಾಳಿದರು. ಆಚಾರ್ಯರೇ ಪ್ರತ್ಯಕ್ಷವಾಗಿ ಅಲ್ಲಿಗೆ ಬಂದುದರಿಂದ ಪದ್ಮತೀರ್ಥಾದಿಗಳ ಪೀಡೆಯೆಲ್ಲಾ ಪರಿಹಾರವಾಗಿ ಎಲ್ಲಾ ಕಾರ್ಯವೂ ಅನುಕೂಲವಾಯಿತು.

ಪರಿವೃಢಾಃ ಏವ ಘನಾಃ, ತೇಷಾಂ ಸಂಘಃ ತಸ್ಮಿನ್, ಪರಿವೃಢ= ಪ್ರಭು. 'ಪ್ರಭುಃ ಪರಿವೃಢೋಽಧಿಪಃ' ಅಮರ. ರಾಜಸಿಂಹ ಏವ ಊರ್ಜಃ ರಾಜಸಿಂಹೋರ್ಜಸ್ಯ ಶಕ್ತಿಃ ತಯಾ, ಊರ್ಜ = ಕಾರ್ತಿಕಮಾಸ, ಬಾಹುಲೋರ್ಜೌ ಕಾರ್ತಿಕಿಕಃ—ಅಮರ. ಮಲಿನಸ್ಯ ಭಾವಃ ಮಲಿನಭಾವಃ ತಂ, ನಿರ್ಗತಃ ರಸಃ ಯೇಭ್ಯಃ ತೇ ನೀರಸಾಃ ತೇಷಾಂ ಭಾವಃ ನೀರಸತ್ವಂ, ತಸ್ಮಾತ್ ; ತೇಜಃ ಏಷಾಂ ಅಸ್ತೀತಿ ತೇಜಸ್ವಿನಃ, ತೇಜಸ್ವಿಷು ಉಜ್ಜ್ವಲಃ ತೇಜಸ್ವ್ಯುಜ್ಜ್ವಲಃ ತಸ್ಮಿನ್, ಮಧ್ವ ಏವ ಭಾನುಃ ತಸ್ಮಿನ್, ಸುಜನಾ ಏವ ಜಲಜಾನಿ, ಸುಜನಜಲಜಾನಾಂ ಕಾಂತಿಃ ಸುಜನಜಲಜಕಾಂತಿಃ ತಸ್ಯೈ.

ಆಸೀತ್ ಆಸ್ತಾಂ ಆಸನ್, ಅಸ ಭುವಿ. ಅಕ. ಪರ. ಲಙ್.

ಮಾಲಿನೀವೃತ್ತ, 'ನನಮಯಯಯುತೇಯಂ ಮಾಲಿನೀ ಭೋಗಿಲೋಕೈಃ' ಎಂದು ಲಕ್ಷಣ.

ಆಗ ಸಿದ್ಧಿಸಿದ ವಿಶೇಷವಾದ ಕಾರ್ಯವಿದು—

Rarest Archiver

ಕೃತಮಪಕೃತಮಾರ್ಯೈಃ ಕ್ಷಮ್ಯತಾಂ ಕ್ಷಾಂತಿಭೂಷ್ಯೈ
ರಿತಿಮೃದು ವದತಾಂ ಸಂಪ್ರಾರ್ಥನಾಭಿಃ ಪ್ರಭೂಣಾಂ।
ಅಪಹೃತಮಪರೇಷಾಂ ಮಂತ್ರತೋ ಗ್ರಂಥಜಾತಂ
ದಶಹೃದಯನಿಯೋಗಾದಗ್ರಹೀಚ್ಛಂಕರಾರ್ಯೈಃ ॥ ೨ ॥

'ಕ್ಷಾಂತಿಭೂಷ್ಯೈಃ ಆರ್ಯೈಃ ಕೃತಂ ಅಪಕೃತಂ ಕ್ಷಮ್ಯತಾಂ' ಇತಿ ಮೃದು ವದತಾಂ ಪ್ರಭೂಣಾಂ ಸಂಪ್ರಾರ್ಥನಾಭಿಃ ಶಂಕರಾರ್ಯಃ ಅಪರೇಷಾಂ ಮಂತ್ರತಃ ಅಪಹೃತಂ ಗ್ರಂಥಜಾತಂ ದಶಹೃದಯನಿಯೋಗಾತ್ ಅಗ್ರಹೀತ್.

ಕ್ಷಾಂತಿಭೂಷ್ಯೈಃ = ಕ್ಷಮೆಯೇ ಅಲಂಕಾರವಾಗಿ ಉಳ್ಳ, ಆರ್ಯೈಃ = ಪೂಜ್ಯರಾದ ತಮ್ಮಿಂದ, ಕೃತಂ ಅಪಕೃತಂ = ಪದ್ಮತೀರ್ಥನಿಂದ ಮಾಡಲ್ಪಟ್ಟ ಅಪಕಾರವು, ಕ್ಷಮ್ಯತಾಂ = ಕ್ಷಮಿಸಲ್ಪಡಲಿ, ಇತಿ = ಹೀಗೆಂದು, ಮೃದು ವದತಾಂ = ವಿನಯಪೂರ್ವಕವಾಗಿ ಹೇಳುತ್ತಿರುವ, ಪ್ರಭೂಣಾಂ = ಎರಡು ಗ್ರಾಮಮುಖ್ಯಸ್ಥರ ಮತ್ತು ಜಯಸಿಂಹರಾಜನ, ಸಂಪ್ರಾರ್ಥನಾಭಿಃ = ಬೇಡಿಕೆಗಳಿಂದ, ಶಂಕರಾರ್ಯಃ - ಶಂಕರಪಂಡಿತರು, ಅಪರೇಷಾಂ ಮಂತ್ರತಃ = ಮಾಯಾವಾದಿಗಳ ಮಂತ್ರಾಲೋಚನೆಯಿಂದ, ಅಪಹೃತಂ ಗ್ರಂಥಜಾತಂ = ಪದ್ಮತೀರ್ಥನಿಂದ ಅಪಹರಿಸಲ್ಪಟ್ಟ ಗ್ರಂಥಸಮೂಹವನ್ನು, ದಶಹೃದಯನಿಯೋಗಾತ್ = ಶ್ರೀಪೂರ್ಣಪ್ರಜ್ಞರ ಅಪ್ಪಣೆಯಿಂದ, ಅಗ್ರಹೀತ್ = ತೆಗೆದುಕೊಂಡರು.

ಹಿಂದೆ ತ್ರಿವಿಕ್ರಮಪಂಡಿತರ ತಮ್ಮನಾದ ಶಂಕರಪಂಡಿತರೆಂಬ ವಿದ್ವಾಂಸರಲ್ಲಿದ್ದ ಶ್ರೀಮಧ್ವಾಚಾರ್ಯರ ಪುಸ್ತಕಗಳನ್ನು ಪದ್ಮತೀರ್ಥನೆಂಬ ಮಾಯಾವಾದಿಯು ಕದ್ದಿದ್ದನು. ಅನಂತರ ಶ್ರೀಮಧ್ವಾಚಾರ್ಯರ ಭಯದಿಂದ ತಾನು ಕದ್ದ ಪುಸ್ತಕಗಳನ್ನು ತನ್ನ ವಾಸಸ್ಥಳದಲ್ಲಿಯೇ ಬಿಟ್ಟು ಚಾತುರ್ಮಾಸ್ಯಸಮಾಪ್ತಿಯ ಹುಣ್ಣಿಮೆರಾತ್ರಿಯಲ್ಲಿಯೇ ಹೊರಟು ಹೋಗಿದ್ದನು. ಇದನ್ನರಿತ ಗ್ರಾಮಸ್ಥರು ಆ ಪುಸ್ತಕಗಳನ್ನು ಆಚಾರ್ಯರಿಗೆ ಒಪ್ಪಿಸಿದರು. ಆದರೆ ಆಚಾರ್ಯರು ಪದ್ಮತೀರ್ಥನು ಮಾಡಿದ ಅನ್ಯಾಯವನ್ನು ಜಯಸಿಂಹರಾಜನಿಗೆ ತಿಳಿಸಿ, ತಾವು ಆ ಪುಸ್ತಕಗಳನ್ನು ತೆಗೆದುಕೊಳ್ಳದೆ

Rarest Archive

ಒಬ್ಬ ಗ್ರಾಮಮಧ್ಯಸ್ಥನಲ್ಲಿಟ್ಟಿದ್ದರು. ಈಗ ಆ ಪುಸ್ತಕಗಳನ್ನು ಗ್ರಾಮದ ಮುಖ್ಯಸ್ಥರೂ ಜಯಸಿಂಹರಾಜನೂ ಶಂಕರಪಂಡಿತರಿಗೆ ಒಪ್ಪಿಸಿ 'ಪದ್ಮತೀರ್ಥನು ಮಾಡಿದ ಅಪಕಾರವನ್ನು ಕ್ಷಮಾಶೀಲರಾದ ತಾವು ಕ್ಷಮಿಸಿರಿ' ಎಂದು ಬೇಡಿಕೊಂಡರು. ಶಂಕರ ಪಂಡಿತರು ಅವರ ಪ್ರಾರ್ಥನೆಯಿಂದಲೂ, ಶ್ರೀಮಧ್ವರ ಆಜ್ಞೆಯಿಂದಲೂ, ಆ ಪುಸ್ತಕಗಳನ್ನು ತಿರುಗಿ ತೆಗೆದುಕೊಂಡರು.

ಕ್ಷಾಂತಿಃ ಭೂಷಾ ಯೇಷಾಂ ತೇ ಕ್ಷಾಂತಿಭೂಷಾಃ ತೈಃ, ಗ್ರಂಥಾನಾಂ ಜಾತಂ ತತ್, ದಶ (ಪೂರ್ಣಂ) ಹೃದಯಂ ಯಸ್ಯ ಸಃ, ದಶಹೃದಯಸ್ಯ ನಿಯೋಗಃ ತಸ್ಮಾತ್;

ಕ್ಷಮ್ಯತಾಂ ಕ್ಷಮ್ಯೇತಾಂ ಕ್ಷಮ್ಯಂತಾಂ. ಕ್ಷಮೂಷ್ ಪ್ರಸಹನೇ ಕರ್ಮಣಿ ಲಟ್. ಕ್ಷಾಂತಿಭೂಷಾಃ ಆರ್ಯಾಃ ಕೃತಂ ಅಪಕೃತಂ ಕ್ಷಮಂತಾಂ (ಕರ್ತರಿ) ಅಗ್ರಹೀತ್ ಅಗ್ರಹೀಷ್ಟಾಂ ಅಗ್ರಹೀಷುಃ, ಅಗ್ರಹೀಃ ಅಗ್ರಹೀಷ್ಟಂ ಅಗ್ರಹೀಷ್ಟ, ಅಗ್ರಹೀಷಂ ಅಗ್ರಹೀಷ್ವ ಅಗ್ರಹೀಷ್ಮ. ಗ್ರಹ ಉಪಾದಾನೇ ಭೂತೇ ಲುಙ್.

ತ್ರಿವಿಕ್ರಮಪಂಡಿತರು ತಮ್ಮನಿಗೆ ಜಯುವನ್ನುಂಟುಮಾಡಿದ ಜಯಸಿಂಹರಾಜನನ್ನು ಆಶೀರ್ವದಿಸಲು ಉಪಕ್ರಮಿಸಿದರು—

ಪರಿವೃತಮವನಮ್ರೈರ್ಗ್ರಾಮಣೀಗ್ರಾಮ್ಯಪೂರ್ವೈ-
ರವನತಮುರುಚೇತಃಪಾದಪಾರ್ಶ್ವೇ ನೃಸಿಂಹಮ್ ।
ಸಹಜವಿಜಯತೋಽಯುಗ್ವಿಕ್ರಮಾರ್ಯಃ ಪ್ರಸನ್ನಃ
ಕವಿಕುಲತಿಲಕೋಽಸಾವಾಶಿಷಾತೋಷಯತ್ತಮ್ ॥ ೩ ॥

ಕವಿಕುಲತಿಲಕಃ ಸಹಜವಿಜಯತಃ ಪ್ರಸನ್ನಃ ಅಸೌ ಅಯುಗ್ವಿಕ್ರಮಾರ್ಯಃ ಅವನಮ್ರೈಃ ಗ್ರಾಮಣೀಗ್ರಾಮ್ಯಪೂರ್ವೈಃ ಪರಿವೃತಂ ಉರುಚೇತಃಪಾದಪಾರ್ಶ್ವೇ ಅವನತಂ ತಂ ನೃಸಿಂಹಂ ಆಶಿಷಾ ಅತೋಷಯತ್;

ಕವಿಕುಲತಿಲಕಃ = ಕವಿಸಮೂಹಕ್ಕೆ ಅಲಂಕಾರದ ಹಣೆಯಬೊಟ್ಟಿನಂತಿರುವ, ಸಹಜವಿಜಯತಃ = ತಮ್ಮನ ಜಯದಿಂದ, ಪ್ರಸನ್ನಃ =

Rarest Archiver

ಸಂತೋಷಪಟ್ಟ, ಅಸೌ ಅಯುಗ್ವಿಕ್ರಮಾರ್ಯಃ = ಈ ತ್ರಿವಿಕ್ರಮಪಂಡಿತಾ ಚಾರ್ಯರು, ಅವನಮ್ರೈಃ = ವಿಧೇಯರಾದ, ಗ್ರಾಮಣೀಗ್ರಾಮ್ಯ-ಪೂರ್ವೈಃ = ಗ್ರಾಮದ ಮುಖ್ಯಸ್ಥರು, ಗ್ರಾಮದ ಬ್ರಾಹ್ಮಣರು ಇವರೇ ಮೊದಲಾಗುಳ್ಳವರಿಂದ, ಪರಿವೃತಂ = ಸುತ್ತುವರಿಯಲ್ಪಟ್ಟ, ಉರುಚೇತಃ ಪಾದಪಾರ್ಶ್ವೇ = ಶ್ರೀಪೂರ್ಣಪ್ರಜ್ಞರ ಚರಣಸಮೀಪದಲ್ಲಿ; ಅವನತಂ = ಬಾಗಿರುವ, ತಂ ನೃಸಿಂಹಂ = ಆ ಜಯಸಿಂಹರಾಜನನ್ನು, ಆಶಿಷಾ ಅತೋ-ಷಯತ್ = ಆಶೀರ್ವಾದದಿಂದ ಸಂತೋಷಗೊಳಿಸಿದರು.

ಕವಿಸಮೂಹಕ್ಕೆ ಅಲಂಕಾರರೂಪರಾದ ತ್ರಿವಿಕ್ರಮಪಂಡಿತರು ತನ್ನ ತಮ್ಮನಾದ ಶಂಕರಾರ್ಯರಿಗೆ ಆದ ವಿಜಯದಿಂದ ಸಂತೋಷಪಟ್ಟರು. ಸುತ್ತಲೂ ಗ್ರಾಮಾಧಿಪತಿಗಳು ವಿನಯದಿಂದ ಬಗ್ಗಿರುವಾಗ, ಶ್ರೀಮಧ್ವರ ಪಾದದ ಬಳಿಯಲ್ಲಿ ಜಯಸಿಂಹರಾಜನು ನಮಸ್ಕರಿಸುವಾಗ, ಅವರು ರಾಜನಿಗೆ ಆಶೀರ್ವಾದಮಾಡಿ ಆನಂದಪಡಿಸಿದರು.

ಗ್ರಾಮೇ ಭವಾಃ ಗ್ರಾಮ್ಯಾಃ, ಗ್ರಾಮ್ಯಾಃ ಪೂರ್ವೇ ಯೇಷಾಂ ತೇ ತೈಃ ; ಉರು ಚೇತಃ ಯಸ್ಯ ಸಃ ಉರುಚೇತಾಃ, ಉರುಚೇತಸಃ ಪಾದೌ, ಉರು-ಚೇತಃಪಾದಯೋಃ ಪಾರ್ಶ್ವಂ ತಸ್ಮಿನ್, ನಾ ಸಿಂಹ ಇವ ನೃಸಿಂಹಃ ತಂ, ಸಹ ಜಾಯತೇ ಇತಿ ಸಹಜಃ, ಸಹಜಸ್ಯ ವಿಜಯಃ ತಸ್ಮಾತ್, ನ ಯುಜಃ ಅಯುಜಃ, ಅಯುಜಃ ವಿಕ್ರಮಾಃ ಯಸ್ಯ ಸಃ ಅಯುಗ್ವಿಕ್ರಮಃ, ಸ ಚಾಸೌ ಆರ್ಯಶ್ಚ ಅಯುಗ್ವಿಕ್ರಮಾರ್ಯಃ, ಕವೀನಾಂ ಕುಲಂ ಕವಿಕುಲಂ, ಕವಿ-ಕುಲಸ್ಯ ತಿಲಕಃ.

ಅತೋಷಯತ್ ಅತೋಷಯತಾಂ ಅತೋಷಯನ್. ತುಷ ತುಷ್ಟೌ ಣಿಜಂತ–ಲಜ್.

ತ್ರಿವಿಕ್ರಮಪಂಡಿತರ ಸಂಸ್ಕೃತ ಆಶೀರ್ವಾದದ ಸಂಸ್ಕೃತ ಅನುವಾದ—

ಉಪಚರತಿ ನಿತಾಂತಂ ಹಂತ ಪೌರಂದರೀ ಧೂಃ
ದ್ಯುಸದಸಿ ಭಜತೋ ಯಂ ದುರ್ಲಭಾ ದಭ್ರಭಾಗ್ಯೈಃ ।

Rarest Archiver

ದಿಶತು ಸ ಪರಮಾಗ್ರ್ಯಾನಂದ
(ಪರಮಾನಂದಾಗ್ರ್ಯ) ತೀರ್ಥಾಂಘ್ರಿರೇಣು
ರ್ಧರಣಿಧರ ಸುಖಂ ತೇ ಸಂತತಂ ಸ್ವಾಂತರೇತಿ ॥ ೪ ॥

ಸ್ವಾಂತರ (ಹೇ)ಧರಣಿಧರ ! ಯಂ ಭಜತಃ ದಭ್ರಭಾಗ್ಯೈಃ ದುರ್ಲಭಾ ಪೌರಂದರೀ ಧೂಃ ದ್ಯುಸದಸಿ ನಿತಾಂತಂ ಉಪಚರತಿ ಹಂತ ಪರಮಾ-ನಂದಾಗ್ರ್ಯತೀರ್ಥಾಂಘ್ರಿರೇಣುಃ ತೇ ಸಂತತಂ ಸುಖಂ ದಿಶತು ಇತಿ.

ಸ್ವಾಂತರ = ಒಳ್ಳೆಯಮನಸ್ಸುಳ್ಳ, ಹೇ ಧರಣಿಧರ ! = ಎಲೈ ಜಯಸಿಂಹರಾಜನೇ ! ಯಂ = ಯಾವ ಶ್ರೀಮಧ್ವಾಚಾರ್ಯರ ಪಾದದ ಧೂಳನ್ನು, ಭಜತಃ = ಸೇವಿಸುವ ಜನರನ್ನು, ದಭ್ರಭಾಗ್ಯೈಃ = ಅಲ್ಪ ಭಾಗ್ಯವುಳ್ಳವರಿಂದ, ದುರ್ಲಭಾ = ಹೊಂದಲು ಅಶಕ್ಯವಾದ, ಪೌರಂದರೀ = ಇಂದ್ರನಿಗೆ ಸಂಬಂಧಿಸಿರುವ, ಧೂಃ = ರಾಜ್ಯನಿರ್ವಹಣವ್ಯಾಪಾರವು, ದ್ಯುಸದಸಿ = ದೇವಸಭೆಯಲ್ಲಿ, ನಿತಾಂತಂ = ಬಹಳವಾಗಿ, ಉಪಚರತಿ = ಸೇರಿಗೌರವಿಸುವುದೋ, ಹಂತ = ಸಂತೋಷ, ಸಃ = ಅಂತಹ, ಪರಮಾ-ನಂದಾಗ್ರ್ಯತೀರ್ಥ = ಉತ್ತಮವಾದ ಆನಂದವನ್ನು ಕೊಡುವ ಶ್ರೇಷ್ಠವಾದ ಶಾಸ್ತ್ರವುಳ್ಳ ಶ್ರೀಮಧ್ವಾಚಾರ್ಯರ, ಅಂಘ್ರಿರೇಣುಃ = ಪಾದಕಮಲಗಳ ಧೂಳು, ತೇ = ನಿನಗೆ, ಸಂತತಂ = ಯಾವಾಗಲೂ, ಸುಖಂ = ಆನಂದವನ್ನು, ದಿಶತು = ಕೊಡಲಿ. ಇತಿ = ಎಂದು, (ಆಶಿಷಾ ಅತೋಷಯತ್ = ಆಶೀರ್ವಾದದಿಂದ ಸಂತೋಷಪಡಿಸಿದರು.)

ಒಳ್ಳೆಯ ಮನಸ್ಸುಳ್ಳ ಜಯಸಿಂಹರಾಜನೇ ! ಯಾವ ಶ್ರೀಮಧ್ವಾ-ಚಾರ್ಯರ ಪಾದಧೂಳಿಯನ್ನು ಸೇವಿಸುವವರನ್ನು, ಅಲ್ಪಭಾಗ್ಯರಾದ ಜನರಿಗೆ ಸಿಗಲಾರದ ದೇವೇಂದ್ರನ ಅಮರಾವತಿಯ ದೇವಸಭೆಯಲ್ಲಿ ಇಂದ್ರ ಸಿಂಹಾಸನದ ಪಟ್ಟಾಧಿಕಾರವು ಸೇರಿ ಒಲೈಸುತ್ತದೆಯೋ ಉತ್ತಮವಾದ ಆನಂದವನ್ನು ಕೊಡುವ ಶಾಸ್ತ್ರವನ್ನು ರಚಿಸಿದ ಶ್ರೀಮಧ್ವಾಚಾರ್ಯರ ಅಂತಹ ಪಾದಧೂಳಿಯು ನಿನಗೆ ಯಾವಾಗಲೂ ಆನಂದವನ್ನು ಕೊಡಲಿ– ಎಂದು ತ್ರಿವಿಕ್ರಮಪಂಡಿತರು ಜಯಸಿಂಹರಾಜನನ್ನು ಆಶೀರ್ವದಿಸಿದರು ಶ್ರೀಮಧ್ವರ ಪಾದಧೂಳಿಯನ್ನು ಸೇವಿಸುವ ಯೋಗ್ಯರಾದ ಜೀವರಿಗೆ ಇಂದ್ರ

Rarest Archiver

ಪದವಿಯೇ ಲಭ್ಯವಾಗುತ್ತದೆ. ಅಂತಹ ಪಾದಧೂಳಿಯು ನಿನಗೆ ಸುಖವ ನ್ನೀಯಲಿ ಎಂದು ತಾತ್ಪರ್ಯ. ಇದರಿಂದ ಜಯಸಿಂಹರಾಜನೂ ಇಂದ್ರ ಪದವಿಗೆ ಅರ್ಹನಾದ ಉತ್ತಮಜೀವನು ಎಂದೂ ಧ್ವನಿತವಾಗುತ್ತದೆ.

ಸ್ವಸ್ಸುಂದರೀಭುಜಲತಾಪರಿರಂಭಣೀಧೂಃ
ಪೌರಂದರೀ ಭವತಿ ಯಂ ಭಜತಾಂ ಭುಜಿಷ್ಯಾ।
ಆನಂದತೀರ್ಥಭಗವತ್ಪದಪದ್ಮರೇಣುಃ
ಸ್ವಾನಂದದೋ ಭವತು ತೇ ಜಯಸಿಂಹಭೂಪ ॥

ಯಾವ ಶ್ರೀಮಧ್ವರ ಪಾದಧೂಳಿಯನ್ನು ಸೇವಿಸುವವರಿಗೆ ಸ್ವರ್ಗದ ಸುಂದರಿ ಯರ ಬಳ್ಳಿಯಂತೆ ಬಳುಕುವ ತೋಳುಗಳಿಂದ ಆಲಿಂಗನಸುಖವು ಸಿಗುವ ದೇವೇಂದ್ರನ ದೇವಸಿಂಹಾಸನದ ಪಟ್ಟಾಧಿಕಾರವು ವಶವಾಗುತ್ತದೆಯೋ, ಅಂತಹ ಶ್ರೀಮಧ್ವಗುರುವರ್ಯರ ಪಾದಕಮಲಪರಾಗವು, ಎಲೈ ಜಯಸಿಂಹ ರಾಜನೇ! ನಿನಗೆ ಶ್ರೇಷ್ಠವಾದ ಆನಂದವನ್ನು ಕೊಡಲಿ ಎಂದು ತ್ರಿವಿಕ್ರಮ ಪಂಡಿತರು ರಚಿಸಿದ ಮೂಲಶ್ಲೋಕದ ತಾತ್ಪರ್ಯ. ಶ್ರೀನಾರಾಯಣಪಂಡಿತರು ಈ ಶ್ಲೋಕವನ್ನೇ ತಮ್ಮ ಭಾವಪ್ರಕಾಶಿಕೆಯಲ್ಲಿ ಕೊಟ್ಟಿರುತ್ತಾರೆ. ವಸಂತ ತಿಲಕ ವೃತ್ತದ ಆ ಶ್ಲೋಕದ ತಾತ್ಪರ್ಯವನ್ನು ಮಾಲಿನೀವೃತ್ತದಿಂದ ಚಮ ತ್ಕಾರವಾಗಿ ಕವಿವರ್ಯರು ನಿರೂಪಿಸಿದ್ದಾರೆ.

ಪುರಂದರಸ್ಯ ಇಯಂ ಪೌರಂದರೀ, ದಿವಃ ಸದಃ ದ್ಯುಸದಃ ತಸ್ಮಿನ್, ದಭ್ರಂ ಭಾಗ್ಯಂ ಯೇಷಾಂ ತೇ ತೈಃ, ಪರಮಃ ಅಗ್ರ್ಯಃ ಆನಂದಃ ಯಸ್ಮಾತ್ ತತ್, ಪರಮಾಗ್ರ್ಯಾನಂದಂ ತೀರ್ಥಂ ಯಸ್ಮಾತ್ ಸಃ, ಪರಮಾಗ್ರ್ಯಾನಂದತೀರ್ಥಸ್ಯ ಅಂಘ್ರ್ಯೋಃ ರೇಣುಃ, ಧರತೀತಿ ಧರಃ, ಧರಣ್ಯಾಃ ಧರಃ ತಸ್ಯ ಸಂಬುದ್ಧಿಃ = ಹೇ ಧರಣಿಧರ!

ಉಪ+ಚರತಿ ಚರತಃ ಚರಂತಿ, ಚರ ಗತಿಭಕ್ಷಣಯೋಃ ಲಿಟ್, ದಿಶತು ದಿಶತಾತ್ ದಿಶತಾಂ ದಿಶಂತು—ದಿಶ ಅತಿಸರ್ಜನೇ ಲೋಟ್.

ಹೆಚ್ಚು ಪರಿಚಯವಿಲ್ಲದಿದ್ದರೂ ತ್ರಿವಿಕ್ರಮರು ಆಚಾರ್ಯರ ಇಂತಹ ಇಂದ್ರಪದವೀದಾನಸಾಮರ್ಥ್ಯವನ್ನು ಹೇಗೆ ಅರಿತರು? —

Rarest Archiver

ಅನತಿಪರಿಚಿತಸ್ಯಾಪ್ಯಸ್ಯ ಸೋಽಯಂ ಕವೀಂದ್ರೋ
ಗುಣರಸಮತಿಗೂಢಂ ಜ್ಞಾತವಾನಿತ್ಯಚಿತ್ರಂ ।
ಮಧು ಮಧುಕರರಾಜೋ ನಿಷ್ಪತನ್ ಪೌಷ್ಪಮಾಪ್ತುಂ
ನನು ಪರಿಚಯಹೀನಃ ಕಾನನೇಽಪಿ ಪ್ರಭುಃ ಸ್ಯಾತ್ ॥ ೫ ॥

ಕವೀಂದ್ರಃ ಸಃ ಅಯಂ ಅನತಿಪರಿಚಿತಸ್ಯಾಪಿ ಅಸ್ಯ ಅತಿಗೂಢಂ ಗುಣರಸಂ ಜ್ಞಾತವಾನಿತಿ ಅಚಿತ್ರಂ; ಕಾನನೇ ನಿಷ್ಪತನ್ ಮಧುಕರರಾಜಃ ಪರಿಚಯಹೀನಃ ಅಪಿ ಪೌಷ್ಪಂ ಮಧು ಆಪ್ತುಂ ಪ್ರಭುಃ ಸ್ಯಾತ್ ನನು.

ಕವೀಂದ್ರಃ ಸೋಽಯಂ = ಜ್ಞಾನಿಶ್ರೇಷ್ಠರಾದ ಪ್ರಸಿದ್ಧರಾದ ಈ ತ್ರಿವಿಕ್ರಮಪಂಡಿತರು, ಅನತಿಪರಿಚಿತಸ್ಯಾಪಿ = ಶ್ರೀಮಧ್ವರ ಹೆಚ್ಚಿನ ಪರಿಚಯವಿಲ್ಲದವರಾಗಿದ್ದರೂ, ಅಸ್ಯ = ಈ ಆನಂದತೀರ್ಥರ, ಅತಿಗೂಢಂ ಗುಣರಸಂ = ಅತ್ಯಂತರಹಸ್ಯವಾದ ಗುಣೋತ್ಕರ್ಷವನ್ನು, ಜ್ಞಾತವಾನ್ ಇತಿ = ತಿಳಿದರೆಂಬುದು, ಅಚಿತ್ರಂ = ಆಶ್ಚರ್ಯವಲ್ಲ. ಕಾನನೇ ನಿಷ್ಪತನ್ = ಕಾಡಿನಲ್ಲಿ ಸಂಚರಿಸುವ, ಮಧುಕರರಾಜಃ = ಶ್ರೇಷ್ಠವಾದ ದುಂಬಿಯು, ಪರಿಚಯಹೀನಃ ಅಪಿ = ಪರಿಚಯವಿಲ್ಲದಿದ್ದರೂ, ಪೌಷ್ಪಂ ಮಧು ಆಪ್ತುಂ = ಹೂವಿನ ಮಕರಂದವನ್ನು ಹೊಂದಲು, ಪ್ರಭುಃ ಸ್ಯಾತ್ ನನು = ಸಮರ್ಥವಾಗಿ ಆಗಿಯೇ ಇರುತ್ತದೆಯಷ್ಟೆ!

ಜ್ಞಾನಿಶ್ರೇಷ್ಠರಾದ ಈ ತ್ರಿವಿಕ್ರಮಪಂಡಿತರು ಮೊದಲು ವಿಶೇಷ ಪರಿಚಯವಿಲ್ಲದಿದ್ದರೂ, ಆಚಾರ್ಯರಲ್ಲಿರುವ ಪರಮರಹಸ್ಯವಾದ ಇಂದ್ರಪದವೀದಾನಸಾಮರ್ಥ್ಯಮೊದಲಾದ ಗುಣೋತ್ಕರ್ಷವನ್ನು ತಿಳಿದರೆಂಬುದು ಆಶ್ಚರ್ಯವಲ್ಲ. ಏಕೆಂದರೆ ಕಾಡಿನಲ್ಲಿ ತಿರುಗಾಡುವ ಬುದ್ಧಿವಂತನಾದ ಭ್ರಮರವು ಅಲ್ಲಿನ ವಿಶೇಷ ಪರಿಚಯವಿಲ್ಲದಿದ್ದರೂ ಹೂವಿನ ಉತ್ಕೃಷ್ಟವಾದ ಮಕರಂದವನ್ನು ಸುವಾಸನೆಯಿಂದ ಕಂಡು ಹಿಡಿದು ಹೀರಲು ಸಮರ್ಥವಾಗುತ್ತದೆಯಷ್ಟೆ! ದುಂಬಿಯು ತಾನರಿಯದ ಸ್ಥಳದಲ್ಲಿರುವ ಹೂವನ್ನು ಪರಿಮಳದಿಂದಲೇ ಅರಿತು ಅದರ ಸಾರವನ್ನು ಹೀರುವಂತೆ ಕವಿಶ್ರೇಷ್ಠರಾದ ತ್ರಿವಿಕ್ರಮರು ಆಚಾರ್ಯರ ಉತ್ಕೃಷ್ಟಗುಣಗಳನ್ನರಿತರು ಎಂದು ತಾತ್ಪರ್ಯ.

Rarest Archiver

ಅತ್ಯಂತಂ ಪರಿಚಿತಃ ಅತಿಪರಿಚಿತಃ, ನ ಅತಿಪರಿಚಿತಃ, ಅನತಿಪರಿಚಿತಃ ತಸ್ಯ, ಕವಿಷು ಇಂದ್ರಃ, ಗುಣಾನಾಂ ರಸಃ ತಂ, ಚಿತ್ರಸ್ಯ ಅಭಾವಃ ಅಚಿತ್ರಂ, ಕುರ್ವಂತೀತಿ ಕರಾಃ. ಮಧುನಃ ಕರಾಃ ಮಧುಕರಾಃ, ಮಧುಕರಾಣಾಂ ರಾಜಾ ಮಧುಕರರಾಜಃ, ಪುಷ್ಪಸ್ಯ ಇದಂ ಪೌಷ್ಪಂ ತತ್, ಪರಿಚಯೇನ ಹೀನಃ.

ಸ್ಯಾತ್ ಸ್ಯಾತಾಂ ಸ್ಯುಃ, ಅಸ ಭುವಿ ವಿಧಿಲಿಙ್.

ಕೆಲವು ಕಾಲ ಆಚಾರ್ಯರು ಆ ದೇವಾಲಯದಲ್ಲಿಯೇ ವಾಸಿಸಿದರು—

ಅಖಿಲಖಲಕುಲಾನಾಂ ವರ್ಧಯನ್ ದ್ವೇಷದೋಷಂ
ವಿದಧದಪಿ ನರಾಣಾಂ ಕೌತುಕಂ ಮಧ್ಯಮಾನಾಂ ।
ಸ್ವಗತಿಸಮುಚಿತಾನಾಂ ಭೂತಿದಾಯೀ ಶುಭಾನಾಂ
ಬಹುಲಹೃದಿಹ ನಿನ್ಯೇ ಶರ್ವರೀಃ ಕಾಶ್ಚಿದೇವಂ ॥ ೬ ॥

ಬಹುಲಹೃತ್ ಅಖಿಲಖಲಕುಲಾನಾಂ ದ್ವೇಷದೋಷಂ ವರ್ಧಯನ್, ಅಪಿ ಮಧ್ಯಮಾನಾಂ ನರಾಣಾಂ ಕೌತುಕಂ ವಿದಧತ್, ಸ್ವಗತಿಸಮುಚಿತಾನಾಂ ಶುಭಾನಾಂ ಭೂತಿದಾಯೀ ಸನ್ ಇಹ ಏವಂ ಕಾಶ್ಚಿತ್ ಶರ್ವರೀಃ ನಿನ್ಯೇ.

ಬಹುಲಹೃತ್ = ಶ್ರೀಪೂರ್ಣಪ್ರಜ್ಞರು, ಅಖಿಲಖಲಕುಲಾನಾಂ = ಎಲ್ಲಾ ದುಷ್ಟರ ಸಮೂಹಗಳಿಗೆ, ದ್ವೇಷದೋಷಂ ವರ್ಧಯನ್ = ಪರಮಾತ್ಮ ವಿಷಯಕವಾದ ದ್ವೇಷವೆಂಬ ಪಾಪವನ್ನು, ವರ್ಧಯನ್ = ಹೆಚ್ಚಿಸುತ್ತಾ, ಅಪಿ = ಮತ್ತು, ಮಧ್ಯಮಾನಾಂ ನರಾಣಾಂ = (ದ್ವೇಷ ಅಥವಾ ಭಕ್ತಿ ಎರಡೂ ವಿಶೇಷವಾಗಿಲ್ಲದೆ) ನಡುವಣಸ್ಥಿತಿಯಲ್ಲಿರುವ ಮಾನವರಿಗೆ, ಕೌತುಕಂ ವಿದಧತ್ = ಆಶ್ಚರ್ಯವನ್ನುಂಟುಮಾಡುತ್ತಾ, ಸ್ವಗತಿಸಮುಚಿತಾನಾಂ = ತನ್ನ ಮೂಲಕ ಪರಮಾತ್ಮನ ಪ್ರಾಪ್ತಿಗೆ ಯೋಗ್ಯರಾದ, ಶುಭಾನಾಂ = ಸಾತ್ತ್ವಿಕಜನರಿಗೆ, ಭೂತಿದಾಯೀ = ಜ್ಞಾನಭಕ್ತ್ಯಾದಿ ಸಂಪತ್ತುಗಳನ್ನು ಕೊಡುವವರಾಗಿ, ಕಾಶ್ಚಿತ್ ಶರ್ವರೀಃ ನಿನ್ಯೇ = ಕೆಲವು ರಾತ್ರಿಗಳನ್ನು ಕಳೆದರು.

Rarest Archive

ಜೀವರು ತಾಮಸರು (ಅಧಮರು) ರಾಜಸರು (ಮಧ್ಯಮರು,) ಸಾತ್ತ್ವಿಕರು (ಮುಕ್ತಿಯೋಗ್ಯರು ಉತ್ತಮರು) ಎಂದು ಮೂರುವಿಧ. ಶ್ರೀಪೂರ್ಣಪ್ರಜ್ಞಾಚಾರ್ಯರು ಎಲ್ಲಾ ಅಧಮಜೀವರ ಸಮುದಾಯಕ್ಕೆ ತನ್ನಲ್ಲಿ ದ್ವೇಷದೋಷವನ್ನು ಹೆಚ್ಚಿಸುತ್ತಿದ್ದರು. ಉದಾಸೀನರಾದ ಮಧ್ಯಮ ಜೀವಸಮುದಾಯಕ್ಕೆ ಕುತೂಹಲವನ್ನುಂಟುಮಾಡುತ್ತಿದ್ದರು, ಮುಕ್ತಿ ಯೋಗ್ಯರಾದ ಸಾತ್ತ್ವಿಕಜೀವಸಮುದಾಯಕ್ಕೆ ಭಕ್ತಿಜ್ಞಾನಾದಿಸಂಪತ್ತನ್ನು ಕೊಡುತ್ತಿದ್ದರು. ಹೀಗೆ ತ್ರಿವಿಧಜೀವರಿಗೆ ಅವರವರಿಗೆ ಯೋಗ್ಯವಾದ ಸ್ವರೂಪದ ಪ್ರಾಪ್ತಿಗೆ ಕಾರಣವಾದ ಬಾಹ್ಯವೃತ್ತಿಗಳ ಅಭಿವೃದ್ಧಿಯನ್ನು ಮಾಡುತ್ತಾ ಆ ವಿಷ್ಣುಮಂಗಲದೇವಾಲಯದಲ್ಲಿ ಕೆಲವು ರಾತ್ರಿಗಳನ್ನು ಕಳೆದರು.

ಅಖಿಲಾಶ್ಚತೇ ಖಲಾಶ್ಚ, ಅಖಿಲಖಲಾನಾಂ ಕುಲಾನಿ ತೇಷಾಂ, ದ್ವೇಷ ಇತಿ ದೋಷಃ ದ್ವೇಷದೋಷಃ ತಂ, ಸ್ವೇನ ಸ್ವಸ್ಯ ಗತಿಃ ಸ್ವಗತಿಃ. ತಸ್ಯಾಃ ಸಮುಚಿತಾಃ ತೇಷಾಂ, ಭೂತಿಂ ದದಾತೀತಿ ಭೂತಿದಾಯೀ (ಯಿನ್) ಬಹುಲಂ ಹೃತ್ ಯಸ್ಯ ಸಃ.

ನಿನ್ಯೇ ನಿನ್ಯಾತೇ ನಿನ್ಯಿರೇ, ನಿನ್ಯಿಷೇ ನಿನ್ಯಾಥೇ ನಿನ್ಯಿಢ್ವೇ, ನಿನ್ಯೇ ನಿನ್ಯಿವಹೇ ನಿನ್ಯಿಮಹೇ, ಣೀಞ್ ಪ್ರಾಪಣೇ ಉಭಯಪದಿ, (ಆತ್ಮನೇ) ಲಿಟ್.

ಆಚಾರ್ಯರ ನಿತ್ಯಾಹ್ನಿಕವು ಹೀಗಿತ್ತು—

ಉದಯತಿ ವಿನತಾಯಾಃ ನಂದನೇ ಶ್ಲಾಘ್ಯಕಾಲೇ
ಸ ಕೃತಸಕಲಕೃತ್ಯಃ ಕೃತ್ಯವೇದಿಪ್ರವೇಕಃ ।
ಅರುಣಯುವನಿಕಾಂತಬ್ರಹ್ಮ ನಾರಾಯಣಾಖ್ಯಂ
ಗುರುಗುಣಮಭಿದಧ್ಯೌ ಯೋಗ್ಯಯೋಗಾಸನಸ್ಥಃ ॥ ೭ ॥

ಕೃತ್ಯವೇದಿಪ್ರವೇಕಃ ಸಃ ವಿನತಾಯಾಃ ನಂದನೇ ಉದಯತಿ ಸತಿ ಶ್ಲಾಘ್ಯಕಾಲೇ ಕೃತಸಕಲಕೃತ್ಯಃ ಅರುಣಯುವನಿಕಾಂತಃ ಯೋಗ್ಯಯೋಗಾಸನಸ್ಥಃ ಗುರುಗುಣಂ ನಾರಾಯಣಾಖ್ಯಂ ಬ್ರಹ್ಮ ಅಭಿದಧ್ಯೌ.

Rarest Archiver

ಕೃತ್ಯವೇದಿ=ಮಾಡಬೇಕಾದ ಕರ್ತವ್ಯಗಳನ್ನು ತಿಳಿದವರಲ್ಲಿ, ಪ್ರವೇಕಃ =ಶ್ರೇಷ್ಠರಾದ, ಸಃ=ಆ ಶ್ರೀಮಧ್ವರು, ವಿನತಾಯಾಃ ನಂದನೇ ಉದಯತಿ ಸತಿ=ವಿನತೆಯು ಮಗನಾದ ಅರುಣನು ಉದಯಿಸುತ್ತಿರುವಾಗ, (ಅರುಣೋದಯಕಾಲದಲ್ಲಿ) ಶ್ಲಾಘ್ಯಕಾಲೇ=ಆಹ್ನಿಕಕ್ಕೆ ಪ್ರಶಸ್ತವಾದ ಸಮಯದಲ್ಲಿ, ಕೃತಸಕಲಕೃತ್ಯಃ ಸನ್=ಮಾಡಲ್ಪಟ್ಟ ಎಲ್ಲಾ ಸ್ನಾನಾದಿ ಕಾರ್ಯವುಳ್ಳವರಾಗಿ, ಅರುಣಯವನಿಕಾಂತಃ=ಕಾವಿಬಣ್ಣದ ಪರದೆಯ ಒಳಗೆ, ಯೋಗ್ಯಯೋಗಾಸನಸ್ಥಃ=ಉಚಿತವಾದ ಧ್ಯಾನದ ಆಸನದಲ್ಲಿ ಇದ್ದವರಾಗಿ, ಗುರುಗುಣಂ=ಉತ್ಕೃಷ್ಟವಾದ ಸಮಸ್ತಗುಣಗಳುಳ್ಳ, ನಾರಾಯಣಾಖ್ಯಂ ಬ್ರಹ್ಮ=ನಾರಾಯಣನೆಂಬ ಬ್ರಹ್ಮನನ್ನು, ಅಭಿದಧ್ಯೌ =ಧ್ಯಾನಮಾಡಿದರು

ಶ್ರೀಮಧ್ವರು ಶಾಸ್ತ್ರವಿಹಿತವಾದ ಸಮಸ್ತಕರ್ಮಗಳನ್ನು ಅರಿತವರಲ್ಲಿ ಶ್ರೇಷ್ಠರು. ಅವರು ಸ್ನಾನಸಂಧ್ಯಾದಿಗಳಿಗೆ ಯೋಗ್ಯವಾದ ಅರುಣೋದಯ ಕಾಲದಲ್ಲಿ ಎದ್ದು ಎಲ್ಲಾ ಪ್ರಾತರಾಹ್ನಿಕಗಳನ್ನು ಪೂರೈಸಿ, ನಸುಗೆಂಪು ಬಣ್ಣದ ಕಾವಿಶಾಟಿಯ ಪರದೆಯೊಳಗೆ ಧ್ಯಾನಕ್ಕೆ ಯೋಗ್ಯವಾದ ಸ್ವಸ್ತಿಕ, ವೀರ, ಪದ್ಮ ಮುಂತಾದ ಆಸನಗಳಲ್ಲಿ ಯಾವುದಾದರೊಂದು ಆಸನದಲ್ಲಿ ಕುಳಿತು ಪರಬ್ರಹ್ಮ ನಾರಾಯಣನನ್ನು ಧ್ಯಾನಿಸಿದರು.

ಶ್ಲಾಘ್ಯಶ್ಚಾಸೌ ಕಾಲಶ್ಚ ತಸ್ಮಿನ್; ಕೃತಾನಿ ಸಕಲಾನಿ ಕೃತ್ಯಾನಿ ಯೇನ ಸಃ, ಕೃತ್ಯಾನಿ ವಿದಂತಿ ಇತಿ ಕೃತ್ಯವೇದಿನಃ, ಕೃತ್ಯವೇದಿಷು ಪ್ರವೇಕಃ (ಪ್ರವೇಕ=ಉತ್ತಮ, ಕ್ಲೀಬೇ ಪ್ರಧಾನಂ ಪ್ರಮುಖಂ ಪ್ರವೇಕಾನುತ್ತಮೋತ್ತಮಾಃ— ಅಮರ) ಅರುಣಾ ಚ ಸಾ ಯವನಿಕಾ ಚ ಅರುಣಯವನಿಕಾಯಾಃ ಅಂತಃ, ನಾರಾಯಣ ಇತಿ ಆಖ್ಯಾ ಯಸ್ಯ ತತ್, ಗುರವಃ ಗುಣಾಃ ಯಸ್ಯ ತತ್, ಯೋಗಸ್ಯ ಆಸನಂ, ಯೋಗ್ಯಂ ಚ ತತ್ ಯೋಗಾಸನಂ ಚ, ಯೋಗ್ಯಯೋಗಾಸನೇ ತಿಷ್ಠತೀತಿ ಯೋಗ್ಯಯೋಗಾಸನಸ್ಥಃ.

ಅಭಿ+ದಧ್ಯೌ, ದಧ್ಯತುಃ ದಧ್ಯುಃ, ದಧ್ಯಿಥ ದಧ್ಯಾಥ ದಧ್ಯಥುಃ ದಧ್ಯ, ದಧ್ಯೌ ದಧ್ಯಿವ ದಧ್ಯಿಮ. ಧ್ಯೈ ಚಿಂತಾಯಾಂ ಪರ. ಲಿಟ್.

Rarest Archive

ಆಚಾರ್ಯರ ಶಿಷ್ಯರ ಆಚರಣೆಯು ಹೀಗಿತ್ತು—

ಅತಿಧವಲಿತದಂತಾಃ ದಂತಕಾಷ್ಠೈಃ ಪ್ರಶಸ್ತೈ-
ರಪಿ ಯುಗಪದನೇಕೇ ಸಸ್ನುರತ್ರ ಯತೀಂದ್ರಾಃ ।
ಗುರುಭಿರಭಿಹಿತೇಷ್ವಾಚಾರಭೇದೇಷು ನಿಷ್ಠಾಂ
ಸ್ಫುಟಮುಪಗಮಯಂತಃ ಸೌಷ್ಠವಾತ್ ಕರ್ಮಣಾಂ ಚ ॥ ೮ ॥

ಪ್ರಶಸ್ತೈಃ ದಂತಕಾಷ್ಠೈಃ ಅತಿಧವಲಿತದಂತಾಃ ಕರ್ಮಣಾಂ ಸೌಷ್ಠವಾತ್ ಗುರುಭಿಃ ಅಭಿಹಿತೇಷು ಆಚಾರಭೇದೇಷು ನಿಷ್ಠಾಂ ಸ್ಫುಟಂ ಅವಗಮಯಂತಃ ಅನೇಕೇ ಯತೀಂದ್ರಾಃ ಚ ಅತ್ರ ಯುಗಪತ್ ಸಸ್ನುಃ

ಪ್ರಶಸ್ತೈಃ = ಶಾಸ್ತ್ರವಿಹಿತವಾದ, ದಂತಕಾಷ್ಠೈಃ = ಹಲ್ಲುಜ್ಜುವ ಕಡ್ಡಿಗಳಿಂದ, ಅತಿಧವಲಿತದಂತಾಃ = ಉಜ್ಜಿ ಚೆನ್ನಾಗಿ ಬಿಳಿಯಾಗಿ ಮಾಡಲ್ಪಟ್ಟ ಹಲ್ಲುಗಳುಳ್ಳ, ಕರ್ಮಣಾಂ = ಪ್ರಾಣಾಯಾಮಾದಿಕರ್ತವ್ಯಗಳ, ಸೌಷ್ಠವಾತ್ = ಉತ್ತಮರೀತಿಯಿಂದ, ಗುರುಭಿಃ ಅಭಿಹಿತೇಷು = ತಮ್ಮ ತಮ್ಮ ಗುರುಗಳಿಂದ ಉಪದೇಶಿಸಲ್ಪಟ್ಟ, ಆಚಾರಭೇದೇಷು = ಬೇರೆ ಬೇರೆ ಆಚಾರಗಳಲ್ಲಿ, ನಿಷ್ಠಾಂ = ಆಸಕ್ತಿಯನ್ನು, ಸ್ಫುಟಂ = ಸ್ಪಷ್ಟವಾಗಿ, ಅವಗಮಯಂತಃ = ತೋರಿಸುತ್ತಿರುವ, ಅನೇಕೇ ಯತೀಂದ್ರಾಶ್ಚ = ಅನೇಕ ಯತಿಶ್ರೇಷ್ಠರೂ ಕೂಡ, ಅತ್ರ = ಈ ಸರೋವರದಲ್ಲಿ, ಯುಗಪತ್ = ಒಂದೇ ಬಾರಿ, ಸಸ್ನುಃ = ಸ್ನಾನಮಾಡಿದರು.

ಆಚಾರ್ಯರ ಶಿಷ್ಯರಾದ ಅನೇಕಯತಿವರ್ಯರು ಶಾಸ್ತ್ರವಿಹಿತವಾದ ದಂತಕಾಷ್ಠಗಳಿಂದ ಹಲ್ಲುಗಳನ್ನು ಸ್ವಚ್ಛಪಡಿಸಿಕೊಂಡರು. ಅನಂತರ ವಿಹಿತರೀತಿಯಿಂದ ಅನೇಕರು ಒಟ್ಟಾಗಿ ಅವಗಾಹನಸ್ನಾನವನ್ನು ಮಾಡಿದರು. ಅವರು ತಮತಮಗೆ ವಿಹಿತವಾದ ಕೆಲವು ಸೂಕ್ಷ್ಮವಾದ ವ್ಯತ್ಯಾಸವುಳ್ಳ ಆಚಾರಗಳನ್ನು ಸ್ವಲ್ಪವೂ ವ್ಯತ್ಯಾಸವಿಲ್ಲದೆ ಸರಿಯಾಗಿ ನಡೆಸಿ, ತಮಗೆ ಆಚಾರಗಳಲ್ಲಿರುವ ಶ್ರದ್ಧೆಯನ್ನು ಸರಿಯಾಗಿ ಪ್ರಕಟಗೊಳಿಸುತ್ತಿದ್ದರು.

ಅತಿಧವಲಿತಾಃ ದಂತಾಃ ಯೇಷಾಂ ತೇ ತೈಃ, ದಂತಾನಾಂ ಕಾಷ್ಠಾನಿ

Rarest Archiver

ದಂತಕಾಷ್ಠಾನಿ ತೈಃ, ವ್ರತಿನಾಂ ಇಂದ್ರಾಃ ವ್ರತೀಂದ್ರಾಃ ತೈಃ, ಆಚಾರಾಣಾಂ ಭೇದಾಃ ತೇಷು ; ಸುಷ್ಠು ಭಾವಃ ಸೌಷ್ಠವಂ ತಸ್ಮಾತ್.

ಸಸ್ನೌ ಸಸ್ನತುಃ ಸಸ್ನುಃ ಇತ್ಯಾದಿ ಷ್ಣಾ ಶೌಚೇ ಲಿಟ್ to bathe, to perform an ablution.

ಚರಮಸಮಯಸುಪ್ತಾಃ ಪೂರ್ವಮುತ್ಥಾಯ ಶಿಷ್ಯಾಃ
ಗುರುಜನಪರಿಚರ್ಯಾಂ ಚಕ್ರಿರೇ ದುಷ್ಕರಾಂ ಚ ।
ಸಬಹುಮತಿ ತದಾದ್ಯಪ್ಯಾರ್ಧರಾತ್ರಾತ್ ಪ್ರಸನ್ನಾಃ
ಸುಗತಿರಪರಥೈಷಾಂ ಸ್ಯಾತ್ ಕಥಂಕಾರಮಿಷ್ಟಾ ॥೯॥

ಚರಮಸಮಯಸುಪ್ತಾಃ ಶಿಷ್ಯಾಃ ಪೂರ್ವಂ ಉತ್ಥಾಯ ತದಾದಿ ಅರ್ಧರಾತ್ರಾತ್ ಅಪಿ ಪ್ರಸನ್ನಾಃ ದುಷ್ಕರಾಂ ಗುರುಜನಪರಿಚರ್ಯಾಂ ಚ ಸಬಹುಮತಿ ಚಕ್ರಿರೇ. ಅಪರಥಾ ಏಷಾಂ ಇಷ್ಟಾ ಸುಗತಿಃಕಥಂಕಾರಂ ಸ್ಯಾತ್ ||

ಚರಮಸಮಯಸುಪ್ತಾಃ = ಗುರುಗಳು ನಿದ್ರಿಸಿದ ಅನಂತರದ ಸಮಯದಲ್ಲಿ ನಿದ್ರಿಸಿದ, ಶಿಷ್ಯಾಃ = ಶಿಷ್ಯರು, ಪೂರ್ವಂ ಉತ್ಥಾಯ = ಗುರುಗಳು ಏಳುವುದಕ್ಕಿಂತ ಮೊದಲು ಎದ್ದು, ತದಾದಿ = ಅದೇ ಮೊದಲಾಗಿ ಉಳ್ಳಹಾಗೆ, ಅರ್ಧರಾತ್ರಾತ್ ಅಪಿ = ಮಧ್ಯರಾತ್ರಿಯ ಕಾಲದವರೆಗೂ, ಪ್ರಸನ್ನಾಃ = ಸಂತುಷ್ಟರಾಗಿ, ದುಷ್ಕರಾಂ = ಕಷ್ಟಸಾಧ್ಯವಾದ, ಗುರುಜನ ಪರಿಚರ್ಯಾಂ ಚ = ಗುರುಗಳ ಸೇವೆಯನ್ನೂ, ಸಬಹುಮತಿ = ಭಕ್ತಿ ಗೌರವಸಹಿತವಾಗಿ, ಚಕ್ರಿರೇ = ಮಾಡಿದರು. ಅಪರಥಾ = ಹೀಗಿಲ್ಲದಿದ್ದರೆ, ಏಷಾಂ = ಈ ಶಿಷ್ಯರಿಗೆ, ಇಷ್ಟಾ ಸುಗತಿಃ = ಪ್ರೀತಿವಿಷಯವಾದ ಸದ್ಗತಿಯು, ಕಥಂಕಾರಂ ಸ್ಯಾತ್ = ಹೇಗೆ ಆದೀತು ?

ಶ್ರೀಪೂರ್ಣಪ್ರಜ್ಞರ ಶಿಷ್ಯರು ಗುರುಗಳು ಮಲಗಿದ ಮೇಲೆ ಮಲಗಿದರು. ಗುರುಗಳು ನಿದ್ರೆಯಿಂದ ಏಳುವ ಮೊದಲೇ ಎದ್ದರು. ಅನಂತರ ಮಧ್ಯರಾತ್ರಿಯ ವರೆಗೂ ಇತರರಿಂದ ಮಾಡಲಸಾಧ್ಯವಾದ ತಮ್ಮ ಗುರುಗಳ ಸೇವೆಯನ್ನು ಭಕ್ತಿಗೌರವಗಳಿಂದ ಚೆನ್ನಾಗಿ ಮಾಡಿದರು. ಹೀಗೆ

Rarest Archiver

ಗುರುಸೇವೆಮಾಡದಿದ್ದರೆ ಆ ಶಿಷ್ಯರಿಗೆ ಇಷ್ಟವಾದ ಸದ್ಗತಿಯು ಹೇಗೆ ಆದೀತು ? ಸದ್ಗತಿಗೆ ಗುರುಸೇವೆಯೇ ಮುಖ್ಯಸಾಧನವಾಗಿದೆಯಷ್ಟೆ !

ಚರಮಶ್ಚಾಸೌ ಸಮಯಶ್ಚ, ಚರಮಸಮಯೇ ಸುಪ್ತಾಃ, ಗುರವ ಇತಿ ಜನಾಃ ಗುರುಜನಾನಾಂ ಪರಿಚರ್ಯಾ ತಾಂ, ದುಃಖೇನ ಕರ್ತುಂ ಶಕ್ಯಾ ತಾಂ, ಬಹುಮತ್ಯಾ ಸಹಿತಂ ಯಥಾ ಭವತಿ ತಥಾ ಸಬಹುಮತಿ ; ಸಃ ಆದಿಃ ಯಥಾ ಭವತಿ ತಥಾ ತದಾದಿ, ರಾತ್ರೇಃ ಅರ್ಧಂ ಅರ್ಧರಾತ್ರಃ ತಸ್ಮಾತ್, ಶೋಭನಾ ಚ ಸಾ ಗತಿಶ್ಚ, ಸುಗತಿಃ ;

ಚಕ್ರೇ ಚಕ್ರಾತೇ ಚಕ್ರಿರೇ, ಕೃಧಾತು ಲಿಟ್, ಸ್ಯಾತ್ ಸ್ಯಾತಾಂ ಸ್ಯುಃ ಅಸ ಧಾತು ವಿಧಿಲಿಙ್.

ಶ್ರವಣಮನನಹೇತೋಃ ಪ್ರಾಕ್ ಚಿರಾಯಾಸ್ತನಿದ್ರಃ
ಸಪದಿ ವಿವಶಯಂತ್ಯಾ ನಿದ್ರಯಾ ಗ್ರಸ್ತಚೇತಾಃ ।
ಸ್ವಯಮಪಿ ನಯತಿ ದ್ರಾಗಂಗವಸ್ತ್ರಾದಿ ಪೂಜ್ಯೇ
ಝಟಿತಿ ವಿಗತನಿದ್ರಃ ಕೋಽಪಿ ಶಿಷ್ಯೋಽನ್ವಶೇತ ॥೧೦॥

ಶ್ರವಣಮನನಹೇತೋಃ ಪ್ರಾಕ್ ಚಿರಾಯ ಅಸ್ತನಿದ್ರಃ ಸಪದಿ ವಿವಶಯಂತ್ಯಾ ನಿದ್ರಯಾ ಗ್ರಸ್ತಚೇತಾಃ ಝಟಿತಿ ವಿಗತನಿದ್ರಃ ಕೋಽಪಿ ಶಿಷ್ಯಃ ಪೂಜ್ಯೇ ಅಂಗವಸ್ತ್ರಾದಿ ಸ್ವಯಂ ಅಪಿ ದ್ರಾಕ್ ನಯತಿ ಸತಿ ಅನ್ವಶೇತ.

ಶ್ರವಣಮನನಹೇತೋಃ = ಗ್ರಂಥಶ್ರವಣ ಮತ್ತು ಗ್ರಂಥಾರ್ಥ ಚಿಂತನ ಇವುಗಳಿಗಾಗಿ, ಪ್ರಾಕ್ = ಹಿಂದಿನರಾತ್ರಿ, ಚಿರಾಯ ಅಸ್ತನಿದ್ರಃ = ಬಹಳಹೊತ್ತು ನಿದ್ರೆಗೆಟ್ಟಿದ್ದ, ಸಪದಿ = (ಅರುಣೋದಯಕಾಲದಲ್ಲಿ) ಕೂಡಲೇ, ವಿವಶಯಂತ್ಯಾ = ಪರಾಧೀನನನ್ನಾಗಿ ಮಾಡುವ, ನಿದ್ರಯಾ = ನಿದ್ದೆಯಿಂದ, ಗ್ರಸ್ತಚೇತಾಃ = ಆಕ್ರಮಿಸಲ್ಪಟ್ಟ ಮನಸ್ಸುಳ್ಳ, ಝಟಿತಿ ವಿಗತನಿದ್ರಃ = ಕೂಡಲೇ ನಿದ್ರೆಯಿಂದ ಎದ್ದ, ಕೋಽಪಿ ಶಿಷ್ಯಃ = ಯಾವನೋ ಒಬ್ಬ ಶಿಷ್ಯನು, ಪೂಜ್ಯೇ = ಗುರುಗಳು, ಅಂಗವಸ್ತ್ರಾದಿ = ಸ್ನಾನದ ಬಟ್ಟೆ ಮೊದಲಾದುದನ್ನು, ಸ್ವಯಂ ಅಪಿ = ತಾನೇ, ದ್ರಾಕ್ ನಯತಿ ಸತಿ = ಬೇಗನೇ ಒಯ್ಯುತ್ತಿರಲಾಗಿ, ಅನ್ವಶೇತ = ಪಶ್ಚಾತ್ತಾಪ ಪಟ್ಟನು.

Rarest Archiver

ಒಬ್ಬ ಶಿಷ್ಯನು ಹಿಂದಿನ ರಾತ್ರಿ ಪಾಠಕೇಳುವುದು, ಚಿಂತನ ಮಾಡುವುದು ಈ ನಿಮಿತ್ತದಿಂದ ರಾತ್ರಿ ಬಹಳಹೊತ್ತು ನಿದ್ರೆಬಿಟ್ಟಿದ್ದನು ; ಉಷಃಕಾಲದಲ್ಲಿ ಅವನು ಏಳಬೇಕಾಗಿದ್ದರೂ ನಿದ್ರೆಯು ಅವನನ್ನು ಪರಾಧೀನಗೊಳಿಸಿದ್ದರಿಂದ ಏಳಲಾಗಲಿಲ್ಲ. ಆದರೆ ಆತನ ಗುರುಗಳು ತಾವೇ ಸ್ವತಃ ಸ್ನಾನವಸ್ತ್ರ, ದಂಡ, ಕಮಂಡಲು ಮೊದಲಾದುದನ್ನು ಕೊಂಡೊಯ್ಯುತ್ತಿದ್ದಾಗ ಅವನು ಕೂಡಲೇ ನಿದ್ರೆಯಿಂದ ಎಚ್ಚೆತ್ತು ಬಹಳ ಪಶ್ಚಾತ್ತಾಪ ಪಟ್ಟನು. ಗುರುಗಳು ಶಿಷ್ಯನು ಶಾಸ್ತ್ರಚಿಂತನದಿಂದ ನಿದ್ದೆಗೆಟ್ಟು ಬಳಲಿದ್ದಾನೆ, ಈಗ ನಿದ್ರಿಸುತ್ತಿದ್ದಾನೆ ಎಂದು ದಯೆಯಿಂದ ಅವನನ್ನು ಎಬ್ಬಿಸದೆ ತಾವೇ ಸ್ನಾನಸಾಮಗ್ರಿಯನ್ನು ಒಯ್ದರು. ಶಿಷ್ಯನು ಎಚ್ಚೆತ್ತು ತಾನು ದೊಡ್ಡ ತಪ್ಪುಮಾಡಿದೆನೆಂದು ಪಶ್ಚಾತ್ತಾಪ ಪಟ್ಟನು. ಎಂದು ತಾತ್ಪರ್ಯ. ಇದರಿಂದ ಗುರುಗಳಿಗೆ ಶಿಷ್ಯವಾತ್ಸಲ್ಯವೂ ಶಿಷ್ಯರಿಗೆ ಗುರುಭಕ್ತಿಯೂ ವರ್ಣಿತವಾಯಿತು.

ಶ್ರವಣಂ ಚ ಮನನಂ ಚ ಶ್ರವಣಮನನೇ ತೇ ಏವ ಹೇತುಃ ತಸ್ಮಾತ್, ಅಸ್ತಾ ನಿದ್ರಾ ಯೇನ ಸಃ, ಗ್ರಸ್ತಂ ಚೇತಃ ಯಸ್ಯ ಸಃ, ಅಂಗವಸ್ತ್ರಂ ಆದಿ ಯಸ್ಯ ತತ್, ವಿಗತಾ ನಿದ್ರಾ ಯಸ್ಮಾತ್ ಸಃ ;

ಅನು + ಅಶೇತ, ಅಶಯಾತಾಂ ಅಶೇರತ, ಅಶೇಥಾಃ ಅಶಯಾಥಾಂ ಅಶೇಧ್ವಂ. ಅಶಯಿ ಅಶೇವಹಿ ಅಶೇಮಹಿ. ಶೀಙ್ ಸ್ವಪ್ನೇ ಲಙ್.

ವಿಹಿತಮವಿಹಿತಂ ಪ್ರಾಗೇವ ಕಸ್ಮಾದ್ವಿನಿದ್ರೈ-
ರಿತಿಗುರುಪರಿವಾದಾಶಂಕಯಾ ನಮ್ರಗಾತ್ರಾಃ ।
ಚಿರಮನವತರಂತಃ ಶ್ರಾವಕಾ ಮುಕ್ತಮಾರ್ಗಾಃ
ಗುರುಷು ಜಲಸಕಾಶಸ್ಥೇಷು ತೂಷ್ಣೀಮತಿಷ್ಠನ್ ॥ ೧೧ ॥

(ಹೇ ಶ್ರಾವಕಾಃ!) ಪ್ರಾಗೇವ ವಿನಿದ್ರೈಃ (ಯುಷ್ಮಾಭಿಃ) ಕಸ್ಮಾತ್ ವಿಹಿತಂ ಅವಿಹಿತಂ ಇತಿ ಗುರುಪರಿವಾದಾಶಂಕಯಾ ನಮ್ರಗಾತ್ರಾಃ ಗುರುಷು ಜಲಸಕಾಶಸ್ಥೇಷು ಚಿರಂ ಅನವತರಂತಃ ಮುಕ್ತಮಾರ್ಗಾಃ ಶ್ರಾವಕಾಃ ತೂಷ್ಣೀಂ ಅತಿಷ್ಠನ್.

Rarest Archiver

(ಹೇಶ್ರಾವಕಾಃ = ಎಲೈ ಶಿಷ್ಯರೇ !) ಪ್ರಾಗೇವ ವಿನಿದ್ರೈಃ (ಯುಷ್ಮಾಭಿಃ) = ನಮಗಿಂತ ಮೊದಲೇ ನಿದ್ರೆಯಿಂದ ಎದ್ದ ನಿಮ್ಮಿಂದ, ವಿಹಿತಂ = ನಿಮಗೆ ನೇಮಿಸಿದ ಕಾರ್ಯವು, ಕಸ್ಮಾತ್ ಅವಿಹಿತಂ = ಏತಕ್ಕೆ ಮಾಡಲ್ಪಡಲಿಲ್ಲ? ಇತಿ = ಈ ರೀತಿಯಾದ, ಗುರುಪರಿವಾದಾಶಂಕಯಾ = ಗುರುಗಳ ಆಕ್ಷೇಪದ ಮಾತಿನ ಸಂದೇಹದಿಂದ, ನಮ್ರಗಾತ್ರಾಃ = ಬಾಗಿದ ಶರೀರವುಳ್ಳ, ಗುರುಷು = ಗುರುಗಳು, ಜಲಸಕಾಶಸ್ಥೇಷು ಸತ್ಸು = ನೀರಿನ ಹತ್ತಿರವಿರಲು, ಚಿರಂ ಅನವತರಂತಃ = ಬಹಳಹೊತ್ತು ನೀರಿಗೆ ಇಳಿಯದಿದ್ದವರಾಗಿ, ಮುಕ್ತಮಾರ್ಗಾಃ = ಇತರರಿಗೆ ಬಿಡಲ್ಪಟ್ಟ ದಾರಿಯುಳ್ಳವರಾಗಿ, ಶ್ರಾವಕಾಃ = ಶಿಷ್ಯರು, ತೂಷ್ಣೀಂ ಅತಿಷ್ಠನ್ = ಸುಮ್ಮನೆ ನಿಂತಿದ್ದರು.

'ಎಲೈ ಶಿಷ್ಯರೇ ! ನಮಗಿಂತ ಮೊದಲೇ ನಿದ್ರೆಯಿಂದ ಎದ್ದು ನೀವು ಮಾಡತಕ್ಕ ಕೆಲಸವನ್ನು ಏಕೆ ಮಾಡಲಿಲ್ಲ ?' ಎಂದು ತಮ್ಮ ಗುರುಗಳು ತಮ್ಮನ್ನು ಗದರಿಸುವರೋ, ಆಕ್ಷೇಪಿಸುವರೋ ಎಂಬ ಸಂದೇಹ - ಭಯ ಗಳಿಂದ ಕೆಲವು ಶಿಷ್ಯರು ತಮ್ಮ ದೇಹದಲ್ಲೇ ತಾವು ಹುದುಗಿಕೊಂಡಂತೆ ಇದ್ದರು. ಅವರು ಬಹುಕಾಲ ನೀರಿಗೆ ಇಳಿಯದೆ ಸ್ನಾನಮಾಡಿ ಬರುವ ಗುರುಗಳಿಗೆ ದಾರಿಯನ್ನು ಬಿಟ್ಟು, ತಮ್ಮ ಗುರುಗಳು ನೀರಿನ ಬಳಿಯಲ್ಲಿರು ವಾಗ ತಾವು ಸುಮ್ಮನೆ ನಿಂತುಕೊಂಡರು.

ವಿಗತಾ ನಿದ್ರಾ ಯೇಭ್ಯಃ ತೇ ವಿನಿದ್ರಾಃ, ತೈಃ ಗುರೂಣಾಂ ಪರಿವಾದಃ ಗುರುಪರಿವಾದಃ ಗುರುಪರಿವಾದಸ್ಯ ಆಶಂಕಾ ಗುರು ಪರಿವಾದಾಶಂಕಾ ತಯಾ, ನಮ್ರಂ ಗಾತ್ರಂ ಯೇಷಾಂ ತೇ, ನ ಅವತರಂತಃ, ಮುಕ್ತಃ ಮಾರ್ಗಃ ಯೈಃ ತೇ ತೈಃ, ಜಲಸ್ಯ ಸಕಾಶಂ ಜಲಸಕಾಶಂ, ಜಲಸಕಾಶೇ ತಿಷ್ಠಂತೀತಿ ಜಲಸಕಾಶಸ್ಥಾಃ ತೇಷು.

ಅತಿಷ್ಠತ್ ಅತಿಷ್ಠತಾಂ ಅತಿಷ್ಠನ್ ಷ್ಠಾ(ಸ್ಥಾ) ಗತಿನಿವೃತ್ತೌ ಲಙ್.

ಆಚಾರ್ಯರ ಶಿಷ್ಯಯತಿಗಳೊಬ್ಬರು ದೇವರ ನಿರ್ಮಾಲ್ಯವಿಸರ್ಜನೆ ಯನ್ನು ಮಾಡಿದರು—

Rarest Archiver

ವಿಪುಲಹೃದಯಪಾರ್ಶ್ವೇ ದೀಪದೀಪ್ತಿಪ್ರದೀಪ್ತೇ
ದರವರಪರಿಪೂರ್ಣೈರ್ವಾರ್ಭಿರರ್ಘ್ಯಾದಿ ದತ್ವಾ ।
ಯತಿರತಿಯತಚೇತಾಶ್ಚಕ್ರಿಣೋಽರ್ಚಾನಿಕಾಯಾತ್
ಕುಸುಮಸಮಿತಿಮಗ್ರ್ಯ್ಯಾಮಾದರಾದುಜ್ಜಹಾರ ॥ ೧೨ ॥

ಅತಿಯತಚೇತಾಃ ಯತಿಃ ದೀಪದೀಪ್ತಿಪ್ರದೀಪ್ತೇ ವಿಪುಲಹೃದಯ ಪಾರ್ಶ್ವೇ ದರವರಪರಿಪೂರ್ಣೈಃ ವಾರ್ಭಿಃ ಅರ್ಘ್ಯಾದಿ ದತ್ವಾ ಚಕ್ರಿಣಃ ಅರ್ಚಾನಿಕಾಯಾತ್ ಅಗ್ರ್ಯ್ಯಾಂ ಕುಸುಮಸಮಿತಿಂ ಆದರಾತ್ ಉಜ್ಜಹಾರ.

ಅತಿಯತಚೇತಾಃ = ಚೆನ್ನಾಗಿ ನಿಗ್ರಹಿಸಲ್ಪಟ್ಟ ಮನಸ್ಸುಳ್ಳ, ಯತಿಃ = ಒಬ್ಬಸನ್ಯಾಸಿಗಳು, ದೀಪದೀಪ್ತಿಪ್ರದೀಪ್ತೇ= ದೀಪಗಳ ಪ್ರಕಾಶ ದಿಂದ ಉಜ್ಜ್ವಲವಾದ, ವಿಪುಲಹೃದಯಪಾರ್ಶ್ವೇ = ಶ್ರೀಪೂರ್ಣಪ್ರಜ್ಞರ ಹತ್ತಿರದಲ್ಲಿ, ದರವರಪರಿಪೂರ್ಣೈಃ = ಉತ್ತಮವಾದ ಶಂಖದಲ್ಲಿ ತುಂಬಿದ, ವಾರ್ಭಿಃ=ನೀರುಗಳಿಂದ, ಅರ್ಘ್ಯಾದಿ= ಅರ್ಘ್ಯಪಾದ್ಯಾದಿಗಳನ್ನು, ದತ್ವಾ = ಕೊಟ್ಟು, ಚಕ್ರಿಣಃ = ಶ್ರೀಹರಿಯ, ಅರ್ಚಾನಿಕಾಯಾತ್ = ಶಾಲಿಗ್ರಾಮ ಪ್ರತಿಮಾದಿಗಳ ಸಮೂಹದ ದೆಸೆಯಿಂದ, ಅಗ್ರ್ಯ್ಯಾಂ = ಶ್ರೇಷ್ಠವಾದ, ಕುಸುಮಸಮಿತಿಂ = ತುಳಸೀಪುಷ್ಪಸಮೂಹವನ್ನು, ಆದರಾತ್ = ಭಕ್ತಿ ಯಿಂದ, ಉಜ್ಜಹಾರ=ತೆಗೆದರು.

ಶ್ರೀಪೂರ್ಣಪ್ರಜ್ಞರು ಆಹ್ನಿಕಮಾಡುವಾಗ ಅವರ ಹತ್ತಿರ ದೀಪ ಗಳನ್ನು ಹಚ್ಚಿ ಇಟ್ಟಿದ್ದರು. ಆಗ ಅತಿಶಯವಾದ ಇಂದ್ರಿಯನಿಗ್ರಹವುಳ್ಳ ಒಬ್ಬ ಯತಿಗಳು ಶ್ರೀಮನ್ನಾರಾಯಣನ ಶಾಲಗ್ರಾಮಪ್ರತಿಮೆ ಮುಂತಾದುವುಗಳಿಗೆ, ಶಂಖದಲ್ಲಿ ನೀರನ್ನು ತುಂಬಿ ಅರ್ಘ್ಯಪಾದ್ಯಾದಿ ಉಪಚಾರಗಳನ್ನು ಸಮರ್ಪಿಸಿದರು. ಅನಂತರ ಹಿಂದಿನ ದಿನ ಅಲಂಕಾರ ಮಾಡಿದ್ದ ತುಳಸೀಪುಷ್ಪಗಳನ್ನು ಭಕ್ತಿಯಿಂದ ತೆಗೆದು ನಿರ್ಮಾಲ್ಯ ವಿಸರ್ಜನ ಮಾಡಿದರು.

ವಿಪುಲಂ ಹೃದಯಂ ಯಸ್ಯ ಸಃ, ವಿಪುಲಹೃದಯಸ್ಯ ಪಾರ್ಶ್ವಂ ತಸ್ಮಿನ್, ದೀಪಾನಾಂ ದೀಪ್ತಿಃ, ದೀಪದೀಪ್ತ್ಯಾ ಪ್ರದೀಪ್ತಂ ತಸ್ಮಿನ್, ದರೇಷು ವರಃ, ದರವರೇ ಪರಿಪೂರ್ಣಾನಿ ತೈಃ, ಅರ್ಘ್ಯಂ ಆದಿಃ ಯಸ್ಯ

Rarest Archiver

ತತ್, ಅತಿಯತಂ ಚೇತಃ ಯಸ್ಯ ಸಃ, ಚಕ್ರಂ ಅಸ್ಯ ಅಸ್ತೀತಿ ಚಕ್ರೀ ತಸ್ಯ; ಅರ್ಜುನಾನಾಂ ನಿಕಾಯಃ ತಸ್ಮಾತ್, ಕುಸುಮಾನಾಂ ಸಮಿತಿಃ ತಾಂ ;

ಉತ್ + ಜಹಾರ ಜಹೃತುಃ ಜಹ್ರುಃ, ಹೃಞ್ ಹರಣೇ ಲಿಟ್.

ಅಮೃತಮಪಿ ನಿರೀಕ್ಷ್ಯಾಸ್ರಾವಿ ನಿರ್ಮಾಲ್ಯಸೂನೇ
ಘೃತಮಿದಮಿತಿಸದ್ಯೋ ಭ್ರಾಂತಿಮಂತೋಽಪಿ ಶಿಷ್ಯಾಃ ।
ಶ್ರದಧುರಧಿಕವಾಕ್ಯೈರ್ವಿಭ್ರಮಾಸ್ತಚ್ಚ ಪಶ್ಚಾ-
ದನುದಿನಮಮೃತಾನ್ನೈಸ್ತಸ್ಯ ಸೇವ್ಯಸ್ಯ ಶಕ್ತ್ಯಾ ॥ ೧೩ ॥

ಅನುದಿನಂ ಅಮೃತಾನ್ನೈಃ ಸೇವ್ಯಸ್ಯ ತಸ್ಯ ಶಕ್ತ್ಯಾ ನಿರ್ಮಾಲ್ಯ-ಸೂನೇ ಆಸ್ರಾವಿ ಅಮೃತಂ ನಿರೀಕ್ಷ್ಯಾಪಿ ಸದ್ಯಃ ಇದಂ ಘೃತಂ ಇತಿ ಶಿಷ್ಯಾಃ ಭ್ರಾಂತಿಮಂತಃ ಅಪಿ ಪಶ್ಚಾತ್ ಅಧಿಕವಾಕ್ಯೈಃ ವಿಭ್ರಮಾಃ ತಚ್ಚ ಶ್ರದಧುಃ.

ಅನುದಿನಂ = ಪ್ರತಿದಿನವೂ, ಅಮೃತಾನ್ನೈಃ ಸೇವ್ಯಸ್ಯ = ಅಮೃತವೇ ಆಹಾರವಾಗಿ ಉಳ್ಳ ದೇವತೆಗಳಿಂದ ಸೇವಿಸಲು ಯೋಗ್ಯರಾದ, ತಸ್ಯ ಶಕ್ತ್ಯಾ = ಆ ಶ್ರೀಮಧ್ವಾಚಾರ್ಯರ ಸಾಮರ್ಥ್ಯದಿಂದ, ನಿರ್ಮಾಲ್ಯಸೂನೇ = ನಿರ್ಮಾಲ್ಯದ ಹೂವಿನಲ್ಲಿ, ಆಸ್ರಾವಿ ಅಮೃತಂ = ಸುರಿಯುತ್ತಿರುವ ಅಮೃತವನ್ನು, ನಿರೀಕ್ಷ್ಯ ಅಪಿ = ನೋಡಿಯೂ, ಕೂಡ ಸದ್ಯಃ = ತತ್ಕಾಲ ದಲ್ಲಿ, ಇದಂ ಘೃತಂ ಇತಿ = ಇದು ತುಪ್ಪವೆಂದು, ಶಿಷ್ಯಾಃ = ಶಿಷ್ಯರು, ಭ್ರಾಂತಿಮಂತಃ ಅಪಿ = ಭ್ರಮೆವುಳ್ಳವರಾದರೂ, ಪಶ್ಚಾತ್ = ಅನಂತರ, ಅಧಿಕವಾಕ್ಯೈಃ = ದೊಡ್ಡವರ ಮಾತುಗಳಿಂದ, ವಿಭ್ರಮಾಃ ಸಂತಃ = ಭ್ರಾಂತಿರಹಿತರಾಗಿ, ತತ್ ಚ = ಅದು ಅಮೃತವೆಂಬುದನ್ನೂ, ಶ್ರದಧುಃ = ನಂಬಿದರು.

ಪ್ರತಿದಿನವೂ ಅಮೃತಭೋಜನರಾದ ದೇವತೆಗಳಿಂದ ಸೇವಿಸಲ್ಪಡುವ ಆ ಮಧ್ವಾಚಾರ್ಯರ ಮಹಿಮೆಯಿಂದ ನಿರ್ಮಾಲ್ಯಪುಷ್ಪದಲ್ಲಿ ಅಮೃತವು ತೊಟ್ಟಿಕ್ಕುತ್ತಿತ್ತು. ಆ ಕ್ಷಣದಲ್ಲಿ ಇದು ತುಪ್ಪವೆಂದು ಶಿಷ್ಯರು ಭ್ರಮಿಸಿ ದರು. ಅನಂತರ ಹಿರಿಯರು ಇದು ಅಮೃತವೆಂದು ತಿಳಿಸಿದಾಗ ಆ

Rarest Archiver

ಮಾತನ್ನು ನಂಬಿದರು. ಆಚಾರ್ಯರ ಮಹಿಮೆಯಿಂದ ಅವರು ಪೂಜೆ ಮಾಡಿದ ನಿರ್ಮಾಲ್ಯದಲ್ಲಿ ಅಮೃತವೇ ಸುರಿಯುತ್ತಿತ್ತು. ಎಂದು ಭಾವ.

ನಿರ್ಮಾಲ್ಯಂ ಚ ತತ್ ಸೂನಂ ಚ ತಸ್ಮಿನ್, ಭ್ರಾಂತಿಃ ಏಷಾಂ ಅಸ್ತೀತಿ ಭ್ರಾಂತಿಮಂತಃ, ಅಧಿಕಾನಾಂ ವಾಕ್ಯಾನಿ ತೈಃ, ವಿಗತಃ ಭ್ರಮಃ ಯೇಭ್ಯಃ ತೇ ವಿಭ್ರಮಾಃ ತೈಃ, ಅಮೃತಂ ಅನ್ನಂ ಯೇಷಾಂ ತೇ ಅಮೃತಾನ್ನಾಃ ತೈಃ.

ಶ್ರತ್ + ಅಧುಃ ಅಧಾತ್ ಅಧಾತಾಂ ಅಧುಃ 'ಶ್ರತ್' ಅವ್ಯಯ ಪೂರ್ವಕವಾದ ಡುಧಾಞ್ ಧಾರಣಪೋಷಣಯೋಃ ಧಾತು ಲುಙ್. 'ಶ್ರದಂತರೋಃ ಉಪಸರ್ಗವದ್ ವೃತ್ತಿಃ ವಾಚ್ಯಾ' ಎಂಬ ವಚನದಿಂದ 'ಶ್ರತ್' ಎಂಬುದು ಉಪಸರ್ಗದಂತೆ ಇರುತ್ತದೆ.

ಅಷ್ಟರಲ್ಲಿ ಸೂರ್ಯೋದಯವಾಯಿತು—

ಅಗಮದುಚಿತಮಂತ್ರೈಸ್ತೂದಯಾನಾಂ ತ್ರಯಾಣಾಂ
ಕೃತಿಭಿರನುಮತಾತ್ಮಾ ತತ್ರ ಪಂಚಾಂಗವಿದ್ಭಿಃ ।
ಉದಯಮಹಿಮರೋಚಿಶ್ಚಕ್ರವರ್ತೀ ತ್ರಿಶಕ್ತಿ-
ರ್ದಧದತಿಬೃಹದಂತಃ ಷಡ್ಗುಣಂ ಸ್ವಾತ್ಮತೇಜಃ ॥ ೧೪ ॥

ಉಚಿತಮಂತ್ರೈಃ ಪಂಚಾಂಗವಿದ್ಭಿಃ ಕೃತಿಭಿಃ ತ್ರಯಾಣಾಂ ಉದಯಾನಾಂ ಅನುಮತಾತ್ಮಾ ತ್ರಿಶಕ್ತಿಃ ಅಂತಃ ಅತಿಬೃಹತ್ ಷಡ್ಗುಣಂ ಸ್ವಾತ್ಮತೇಜಃ ದಧತ್ ಅಹಿಮರೋಚಿಶ್ಚಕ್ರವರ್ತೀ ತು ತತ್ರ ಉದಯಂ ಅಗಮತ್.

ಉಚಿತಮಂತ್ರೈಃ = ಜಪಕ್ಕೆ ಉಚಿತವಾದ ಗಾಯತ್ರೀ ಮುಂತಾದ ಮಂತ್ರಗಳುಳ್ಳ, ಮಿತ್ರರ ಅಭ್ಯುದಯಕ್ಕೆ ಯೋಗ್ಯವಾದ ಗುಟ್ಟಾದ ಮಂತ್ರಾಲೋಚನೆಯುಳ್ಳ, ಪಂಚಾಂಗವಿದ್ಭಿಃ = ಹೃದಯ, ಶಿರಸ್ಸು ಶಿಖಾ ಕವಚ ಅಸ್ತ್ರವೆಂಬ ಐದು ಅಂಗಗಳನ್ನು ತಿಳಿದ, ಕಾರ್ಯಾರಂಭಕ್ಕೆ ಉಚಿತವಾದ ಉಪಾಯ, ಜನಸಂಪತ್ತು ಮತ್ತು ದ್ರವ್ಯಸಂಪತ್ತು, ಅಪಾಯಕ್ಕೆ ಪ್ರತೀಕಾರ, ದೇಶಕಾಲಗಳ ವಿಮರ್ಶೆ, ಕಾರ್ಯಸಿದ್ಧಿ ಎಂಬ ಐದು ಅಂಗ

Rarest Archiver

ಗಳನ್ನು ತಿಳಿದ, ಕೃತಿಭಿಃ=ಕುಶಲರಾದ ಜ್ಞಾನಿಗಳಿಂದ, ಮಂತ್ರಿಗಳಿಂದ, ತ್ರಯಾಣಾಂ ಉದಯಾನಾಂ=ಮೂರಾದ, ಅರುಣೋದಯ, ಉಷೋದಯ, ಸೂರ್ಯೋದಯ ಇವುಗಳ ವಿಷಯದಲ್ಲಿ; ಮಿತ್ರೋದಯ, ಭೂಮಿಯ ಉದಯ, ಕೋಶೋದಯ ಎಂಬ ಮೂರು ಉದಯಗಳಿಗೆ, ಅನುಮತಾತ್ಮಾ = ಸಮ್ಮತವಾದ ಸ್ವರೂಪವುಳ್ಳ, ತ್ರಿಶಕ್ತಿಃ=ಪ್ರಕಾಶನ, ತಾಪನ, ಆಹ್ಲಾದನ ಎಂಬ ಮೂರುಶಕ್ತಿಗಳುಳ್ಳ, ಉತ್ಸಾಹಶಕ್ತಿ, ಪ್ರಭುಶಕ್ತಿ, ಮಂತ್ರಶಕ್ತಿ ಎಂಬ ಮೂರುಶಕ್ತಿಗಳುಳ್ಳ, ಅಂತಃ = ತನ್ನ ಮಂಡಲದ ಒಳಗೆ, ದೇಶದೊಳಗೆ, ಅತಿಬೃಹತ್ = ಅತ್ಯಂತದೊಡ್ಡದಾದ, ಷಡ್ಗುಣಂ=ಪೂರ್ಣೈಶ್ವರ್ಯ, ಸಾಮರ್ಥ್ಯ, ಕೀರ್ತಿ, ಸಂಪತ್ತು, ಜ್ಞಾನ, ವೈರಾಗ್ಯ ಎಂಬ ೬ ಗುಣಗಳುಳ್ಳ, ಸಂಧಿ, ವಿಗ್ರಹ (ಯುದ್ಧ) ಯಾನ(ಯುದ್ಧ ಪ್ರಯಾಣ) ಆಸನ (ಸುಮ್ಮನಿರುವುದು) ದ್ವೈಧೀಭಾವ, (ಭೇದೋಪಾಯ) ಆಶ್ರಯ (ತನಗಿಂತ ಪ್ರಬಲರನ್ನು ಆಶ್ರಯಿಸುವುದು) ಎಂಬ ಆರುಗುಣ ಗಳುಳ್ಳ. ಸ್ವಾತ್ಮತೇಜಃ = ತನ್ನ ಸ್ವಾಮಿಯಾದ ವಿಷ್ಣುವಿನ ತೇಜಸ್ಸನ್ನು, ಸ್ವರೂಪಸಾಮರ್ಥ್ಯವನ್ನು, ದಧತ್=ಧರಿಸಿದ, ಅಹಿಮರೋಚಿಶ್ಚಕ್ರವರ್ತೀ ತು = ಉಷ್ಣಕಿರಣಗಳುಳ್ಳ ಸೂರ್ಯನೆಂಬ ಸಾರ್ವಭೌಮನಾದರೋ, ತತ್ರ=ಆ ಸಮಯದಲ್ಲಿ, ಉದಯಂ=ಉದಯವನ್ನು, ಅಭ್ಯುದಯವನ್ನು, ಅಗಮತ್= ಹೊಂದಿದನು.

ಒಂದು ದೇಶದ ಚಕ್ರವರ್ತಿಯು ತನ್ನ ಪ್ರಜೆಗಳ ಮತ್ತು ಸ್ನೇಹಿತರ ಅಭಿವೃದ್ಧಿಗೆ ಉಚಿತವಾದ ಮಂತ್ರಾಲೋಚನಕಾರ್ಯದಲ್ಲಿ ನಿಪುಣರಾದ, ಸಹಾಯ, ಕಾರ್ಯಾರಂಭದ ಉಪಾಯ, ಮನುಷ್ಯ, ದ್ರವ್ಯಸಂಪತ್ತು, ಅವನತಿಯ ಪ್ರತೀಕಾರ, ದೇಶಕಾಲಗಳ ಪರಿಜ್ಞಾನ, ಕಾರ್ಯಸಿದ್ಧಿ ಇವು ಗಳನ್ನು ಬಲ್ಲ ಮಂತ್ರಿಗಳನ್ನು ಹೊಂದಿರಬೇಕು. ಅವರ ಪ್ರಯತ್ನದಿಂದ ಒದಗಿದ, ಸ್ನೇಹಿತರು, ಭೂಮಿ (ರಾಜ್ಯ) ಕೋಶ ಇವುಗಳ ಏಳಿಗೆಯನ್ನು ಆ ಸಾರ್ವಭೌಮನು ಮತ್ತಷ್ಟು ಹೆಚ್ಚಿಸಿಕೊಳ್ಳಬೇಕು ತನ್ನ ಪ್ರಭುಶಕ್ತಿ ರಾಜ್ಯಾಧಿಕಾರದ ಶಕ್ತಿ) ಮಂತ್ರಶಕ್ತಿ, ಉತ್ಸಾಹಶಕ್ತಿಗಳಿಂದ ಅವನು ಯಾವಾಗಲೂ ತುಂಬಿರಬೇಕು. ಸಂಧಾನ, ಯುದ್ಧ, ಯುದ್ಧಪ್ರಯಾಣ,

Rarest Archiver

ಆಸನ, (ಯುದ್ಧಮಾಡದೆ ಸುಮ್ಮನಿರುವುದು), ಭೇದೋಪಾಯ, ತನಗಿಂತ ಅಧಿಕ ಬಲವುಳ್ಳವರನ್ನು ಆಶ್ರಯಿಸುವುದು ಎಂಬ ಆರುಗುಣಗಳನ್ನು ಅನುಸರಿಸಿ ಅತಿಹೆಚ್ಚಾದ ಸಾಮರ್ಥ್ಯವನ್ನು ಪಡೆಯಬೇಕು. ಹೀಗಿದ್ದರೆ ಆ ಚಕ್ರವರ್ತಿಯ ಏಳಿಗೆಯನ್ನು ಹೊಂದುವನು. ಹಾಗೆಯೇ ಪ್ರಕೃತದಲ್ಲಿಯೂ ಉಷ್ಣಕಿರಣಪ್ರಭಾವವುಳ್ಳ ತೇಜಸ್ಸುಗಳಲ್ಲಿ ಚಕ್ರವರ್ತಿಯಂತಿರುವ ಸೂರ್ಯನೂ ಉದಯವೆಂಬ ಅಭ್ಯುದಯವನ್ನು ಹೊಂದಿದನು. ಗಾಯತ್ರ್ಯಾದಿ ಮಂತ್ರಗಳನ್ನು ಜಪಿಸುವಾಗ ಹೃದಯ, ಶಿರಸ್ಸು, ಶಿಖಾ, ಕವಚ, ಅಸ್ತ್ರವೆಂಬ ಪಂಚಾಂಗನ್ಯಾಸವನ್ನು ಬಲ್ಲ ಜ್ಞಾನಿಗಳು, ಅರುಣೋದಯ, ಉಷೋದಯ, ಸೂರ್ಯೋದಯ ಎಂಬ ಮೂರು ಉದಯಗಳಲ್ಲಿ ಸೂರ್ಯನ ಸ್ವರೂಪವನ್ನು ಬಹಳಪ್ರೀತಿಯಿಂದ ತಮ್ಮ ಜಪಧ್ಯಾನಾದಿ ಅನುಷ್ಠಾನಕ್ಕಾಗಿ ಎದುರು ನೋಡುತ್ತಾರೆ. ಸೂರ್ಯನು ಪ್ರಕಾಶಗೊಳಿಸುವುದು, ತಾಪವನ್ನುಂಟುಮಾಡುವುದು, ಸಂತೋಷಪಡಿಸುವುದು ಎಂಬ ಮೂರು ಕಾರ್ಯಗಳನ್ನು ಮಾಡುವ ಸಹಸ್ರಕಿರಣಗಳುಳ್ಳವನು. ತನ್ನ ಬಿಂಬದೊಳಗೆ ಪೂರ್ಣವಾದ ಐಶ್ವರ್ಯ, ವೀರ್ಯ, ಕೀರ್ತಿ, ಸಂಪತ್ತು, ಜ್ಞಾನ, ವೈರಾಗ್ಯವೆಂಬ ಸ್ವರೂಪಭೂತವಾದ ಆರು ಗುಣಗಳುಳ್ಳ ಶ್ರೀಮನ್ ನಾರಾಯಣನ ತೇಜಸ್ಸನ್ನು ಧರಿಸಿರುವನು. ಚಕ್ರವರ್ತಿಯು ಅಭ್ಯುದಯಗಿರಿಯನ್ನೇರುವಂತೆ ಸೂರ್ಯನು ಉದಯಗಿರಿಯನ್ನೇರಿದನು ಎಂದು ಭಾವ.

ಉಚಿತಃ ಮಂತ್ರಃ ಯೇಷಾಂ ತೇ ಉಚಿತಮಂತ್ರಾಃ ತೈಃ, ಅನುಮತಃ ಆತ್ಮಾ ಯಸ್ಯ ಸಃ, ಪಂಚ ಅಂಗಾನಿ ವಿದಂತೀತಿ ಪಂಚಾಂಗವಿದಃ ತೈಃ, ನ ಹಿಮಂ ಅಹಿಮಂ, ಅಹಿಮಂ ರೋಚಿಃ ಯಸ್ಯ ಸಃ, ಅಹಿಮರೋಚಿರೇವ ಚಕ್ರವರ್ತೀ, ತಿಸ್ರಃ ಶಕ್ತಯಃ ಯಸ್ಯ ಸಃ, ಷಟ್ ಗುಣಾಃ ಯಸ್ಯ ತತ್, ಸ್ವಸ್ಯ ಆತ್ಮಾ ಸ್ವಾತ್ಮಾ, ಸ್ವಾತ್ಮನಃ ತೇಜಃ ಸ್ವಾತ್ಮತೇಜಃ ತತ್;

ಅಗಮತ್ ಅಗಮತಾಂ ಅಗಮನ್ ಗಮ್ಲೃ ಗತೌ ಲುಙ್.

ಆ ಸೂರ್ಯನು ಹೇಗಿದ್ದನು?—

ತಿಮಿರನಿಕರಕುಂಭಿವ್ರಾತಮತ್ಯಂತತೀವ್ರಂ
ಸ್ಥಿರತರಮಖಿಲಾನಾಂ ಪ್ರಾಣಿನಾಂ ರುದ್ಧಮಾರ್ಗಂ |

Rarest Archiver

ಭುವನಭವನಪೂರ್ಣಂ ಭಾನುಮಾನಂಜನಾಭಂ
ಹರಿರಿವ ನಖರೈಃ ಪ್ರಾಗ್ ರಶ್ಮಿಜಾಲೈರ್ನಿರಾಸ ॥ ೧೫ ॥

ಭಾನುಮಾನ್ ಅತ್ಯಂತತೀವ್ರಂ ಸ್ಥಿರತರಂ ಅಖಿಲಾನಾಂ ಪ್ರಾಣಿನಾಂ ರುದ್ಧಮಾರ್ಗಂ ಭುವನಭವನಪೂರ್ಣಂ ಅಂಜನಾಭಂ ತಿಮಿರನಿಕರಕುಂಭಿ-ವ್ರಾತಂ ಪ್ರಾಕ್ ರಶ್ಮಿಜಾಲೈಃ ಹರಿಃ ಇವ ನಿರಾಸ.

ಭಾನುಮಾನ್ = ಸೂರ್ಯನು, ಅತ್ಯಂತತೀವ್ರಂ = ಬಹಳಕಠಿನವಾದ, ಸ್ಥಿರತರಂ = ಬಲವಾಗಿ ಬೇರೂರಿರುವ, ಅಖಿಲಾನಾಂ ಪ್ರಾಣಿನಾಂ = ಎಲ್ಲಾ ಪ್ರಾಣಿಗಳ, ರುದ್ಧಮಾರ್ಗಂ = ತಡೆಯಲ್ಪಟ್ಟಮಾರ್ಗವುಳ್ಳ, ಭುವನಭವನಪೂರ್ಣಂ = ಲೋಕವೆಂಬ ಮನೆಯಲ್ಲಿ ತುಂಬಿರುವ, ಅಂಜ-ನಾಭಂ = ಕಾಡಿಗೆಯಂತಹ ಕಾಂತಿಯುಳ್ಳ, ತಿಮಿರನಿಕರಕುಂಭಿವ್ರಾತಂ = ಕತ್ತಲೆಯ ಸಮೂಹವೆಂಬ ಆನೆಗಳ ಗುಂಪನ್ನು, ಪ್ರಾಕ್ = ಮೊದಲು, ರಶ್ಮಿಜಾಲೈಃ = ಕಿರಣಗಳ ಸಮೂಹದಿಂದ, ನಖರೈಃ = ಉಗುರುಗಳಿಂದ, ಹರಿಃ ಇವ = ಸಿಂಹದಂತೆ, ನಿರಾಸ = ನಿವಾರಿಸಿದನು.

ಸಿಂಹವು ತನ್ನ ಹರಿತವಾದ ಗಟ್ಟಿಯಾದ ಉಗುರುಗಳಿಂದ ಮಾರ್ಗವನ್ನು ತಡೆದು ನಿಂತಿರುವ ಕಾಡಿಗೆಯಂತೆ ಕಪ್ಪಾದ ಆನೆಗಳ ಹಿಂಡನ್ನು ಕುಂಭಸ್ಥಳವನ್ನು ಸೀಳಿ ಕೊಲ್ಲುತ್ತದೆ. ಅದರಂತೆ ಸೂರ್ಯನು ಸಮಸ್ತ ಪ್ರಾಣಿಗಳ ಮಾರ್ಗವನ್ನೇ ತಡೆದು ಲೋಕದಲ್ಲೆಲ್ಲಾ ತುಂಬಿಕೊಂಡಿರುವ ಸಹಿಸಲು ಅಸಾಧ್ಯವಾಗಿ ಸ್ಥಿರವಾಗಿರುವ ಕಾಡಿಗೆಯಂತೆ ಕಪ್ಪಾಗಿರುವ ಕತ್ತಲೆಯ ರಾಶಿಯನ್ನು ಅದು ಲೋಕದಲ್ಲಿ ಮತ್ತಷ್ಟು ವ್ಯಾಪಿಸುವ ಮೊದಲೇ ತನ್ನ ಕಿರಣಗಳ ಸಮೂಹದಿಂದ (ಕೊಂದನು) ಪರಿಹರಿಸಿದನು. ಸೂರ್ಯೋದಯವಾದ ಕೂಡಲೇ ಕತ್ತಲೆಯು ಪರಿಹಾರವಾಗಿ ಎಲ್ಲೆಡೆಯಲ್ಲಿಯೂ ಬೆಳಕಾಯಿತು.

ತಿಮಿರಾಣಾಂ ನಿಕರಃ ತಿಮಿರನಿಕರಃ, ಕುಂಭಃ ಏಷಾಂ ಅಸ್ತೀತಿ ಕುಂಭಿನಃ, ಕುಂಭಿನಾಂ ವ್ರಾತಃ ಕುಂಭಿವ್ರಾತಃ, ತಿಮಿರನಿಕರ ಏವ ಕುಂಭಿ-ವ್ರಾತಃ ತಂ, ಅತಿಶಯೇನ ಸ್ಥಿರಃ ಸ್ಥಿರತರಃ, ರುದ್ಧಃ ಮಾರ್ಗಃ ಯೇನ ಸಃ ರುದ್ಧಮಾರ್ಗಃ ತಂ, ಭುವನಮೇವ ಭವನಂ ಭುವನಭವನಂ ತಸ್ಮಿನ್,

Rarest Archive

ಪೂರ್ಣಃ ತಂ, ಭಾನವಃ ಅಸ್ಯ ಸಂತೀತಿ ಭಾನುಮಾನ್, ಭಾನು = ಕಿರಣ, ಸೂರ್ಯ, ಭಾನುಃ ಕಿರಣಸೂರ್ಯಯೋಃ—ವಿಶ್ವ. ಅಂಜನಸ್ಯ ಆಭೇವ ಆಭಾ ಯಸ್ಯ ಸಃ ಅಂಜನಾಭಃ ತಂ, ರಶ್ಮೀನಾಂ ಜಾಲಾನಿ ರಶ್ಮಿಜಾಲಾನಿ ತೈಃ, ಜಾಲಂ ಸಮೂಹ ಆನಾಯಃ—ಕೋಶ. ರಶ್ಮಿಃ = ಕಿರಣ, ಹಗ್ಗ, ಕಿರಣ-ಪ್ರಗ್ರಹೌ ರಶ್ಮೀ– ಅಮರ, ಜಾಲಂ = ಸಮೂಹ, ಬಲೆ.

ನಿರ್ + ಆಸ, ಆಸತುಃ ಆಸುಃ, ಆಸಿಥ ಆಸಥುಃ ಆಸ, ಆಸ ಆಸಿವ ಆಸಿಮ, ನಿರ್ ಉಪ. ಅಸು (ಅಸ್) ಕ್ಷೇಪಣೇ, ಸಕ. ಸೇಟ್ ಪರ. ಲಿಟ್. to throw.

ಮತ್ತೂ ಆ ಸೂರ್ಯನನ್ನು ವರ್ಣಿಸುತ್ತಾರೆ—

ಮಧುರಪತಗರಾವಾಃ ಶಾಂತನೈಶಾಂಬುಬಾಷ್ಪಾಃ
ಸಪದಿ ವಿಪುಲರಾಗಾಃ ಸ್ವಾಭಿಸಾರಾತ್ ಪ್ರಸನ್ನಾಃ ।
ಅರುಣತರಣಿರತ್ಯಚ್ಛಾಂಬರಾ ದಿಕ್‌ಪುರಂಧ್ರೀಃ
ಸ್ಮಿತಸರಸಿಜವಕ್ತ್ರಾಃ ಸ್ವೈಃ ಕರೈರಾಲಿಲಿಂಗೇ || ೧೬ ||

ಅರುಣತರಣಿಃ ಸ್ವೈಃ ಕರೈಃ ಮಧುರಪತಗರಾವಾಃ ಶಾಂತನೈಶಾಂಬು-ಬಾಷ್ಪಾಃ ಸಪದಿ ವಿಪುಲರಾಗಾಃ ಸ್ವಾಭಿಸಾರಾತ್ ಪ್ರಸನ್ನಾಃ ಅತ್ಯಚ್ಛಾಂ-ಬರಾಃ ಸ್ಮಿತಸರಸಿಜವಕ್ತ್ರಾಃ ದಿಕ್‌ಪುರಂಧ್ರೀಃ ಆಲಿಲಿಂಗೇ.

ಅರುಣತರಣಿಃ = ಕೆಂಪಾಗಿರುವ ಸೂರ್ಯನು, ಸ್ವೈಃ ಕರೈಃ = ತನ್ನ ಕಿರಣಗಳಿಂದ, ಕೈಗಳಿಂದ, ಮಧುರಪತಗರಾವಾಃ = ಇಂಪಾದ ಹಕ್ಕಿಗಳ ಧ್ವನಿಯುಳ್ಳ, ಕೋಗಿಲೆಯಂತಹ ಧ್ವನಿಯುಳ್ಳ, ಶಾಂತ = ಮರೆಯಾದ, ನೈಶ = ರಾತ್ರಿಯ, ಅಂಬುಬಾಷ್ಪಾಃ = ಹಿಮಜಲವೆಂಬ ಕಣ್ಣೀರುಳ್ಳ, ಸಪದಿ = ಕೂಡಲೇ, ವಿಪುಲರಾಗಾಃ = ಹೆಚ್ಚಾದ ಕೆಂಪುಳ್ಳ, ಸ್ನೇಹವುಳ್ಳ, ಸ್ವಾಭಿಸಾರಾತ್ = ತನ್ನ ವ್ಯಾಪ್ತಿಯಿಂದ, ಆಗಮನದಿಂದ, ಪ್ರಸನ್ನಾಃ = ನಿರ್ಮಲವಾದ, ಸಂತೋಷಗೊಂಡ, ಅತ್ಯಚ್ಛಾಂಬರಾಃ = ನಿರ್ಮಲವಾದ ಆಕಾಶವುಳ್ಳ, ಸ್ವಚ್ಛವಾದ ವಸ್ತ್ರವುಳ್ಳ, ಸ್ಮಿತಸರಸಿಜವಕ್ತ್ರಾಃ = ಅರಳಿದ ಕಮಲ ವೆಂಬ ಮುಖವುಳ್ಳ, ಅರಳಿದಕಮಲದಂತಹ ಮುಖವುಳ್ಳ, ದಿಕ್‌ಪುರಂಧ್ರೀಃ = ದಿಕ್ಕುಗಳೆಂಬ ಸುಮಾಸಿನಿಯರನ್ನು, ಆಲಿಲಿಂಗೇ = ಅಪ್ಪಿಕೊಂಡನು.

Rarest Archiver

ಆಗ ತಾನೇ ಉದಯಿಸಿದುದರಿಂದ ಕೆಂಪಾಗಿರುವ ಬಾಲಸೂರ್ಯನು, ಕಿವಿಗಿಂಪಾದ ಪಕ್ಷಿಗಳ ಶಬ್ದವುಳ್ಳ ರಾತ್ರಿಯಲ್ಲಿ ಬಿದ್ದಿರುವ ಮಂಜಿನ ನೀರು ಮಾಯವಾಗಿರುವ ಆ ಕ್ಷಣದಲ್ಲಿ ಹೆಚ್ಚಾದ ಕೆಂಪುಬಣ್ಣವುಳ್ಳ ತಾನು ಉದಯಿಸಿದ್ದರಿಂದ ನಿರ್ಮಲವಾಗಿರುವ ಅತ್ಯಂತಸ್ವಚ್ಛವಾದ ಆಕಾಶವುಳ್ಳ ಅರಳಿದ ತಾವರೆಗಳುಳ್ಳ ದಿಕ್ಕುಗಳೆಂಬ ಸುವಾಸಿನಿಯರನ್ನು ತನ್ನ ಕಿರಣಗಳೆಂಬ ಕೈಗಳಿಂದ ಆಲಿಂಗಿಸಿದನು. ಸೂರ್ಯನು ಉದಯಿಸಿ ಎಲ್ಲಾಕಡೆಗೆ ವ್ಯಾಪಿಸಿದನು. ಒಬ್ಬ ಪ್ರಿಯನಾದ ತರುಣನು ಇಂಪಾಗಿ ಕೂಗುವ ಕೋಗಿಲೆಯಂತಹ ಧ್ವನಿಯುಳ್ಳ ತನ್ನ ಪ್ರೇಯಸಿಯನ್ನು ಕೈಚಾಚಿ ಆಲಿಂಗಿಸುವನು, ಅವಳು ಪ್ರಿಯನ ಸಮಾಗಮದಿಂದ ಅಗಲಿಕೆಯ ದುಃಖದ ಕಣ್ಣೀರನ್ನು ಸುರಿಸದೆ ತುಂಬಾ ಅನುರಾಗದಿಂದ ತನ್ನ ಕೋಪವನ್ನು ಬಿಡುವಳು. ಸ್ವಚ್ಛವಾದ ವಸ್ತ್ರವನ್ನುಟ್ಟು ಅಲಂಕರಿಸಿಕೊಂಡು ಸಂತೋಷದಿಂದ ಅರಳಿದ ತಾವರೆಹೂವಿನಂತೆ ಮಂದಹಾಸಪೂರ್ಣವಾದ ಮುಖವುಳ್ಳವಳಾಗಿರುವಳು. ಅದರಂತೆಯೇ ಆಗತಾನೇ ಉದಯಿಸಿ ಕೆಂಪಾಗಿರುವ ಸೂರ್ಯನ ಕಿರಣಗಳು ದಿಕ್ಕುಗಳಲ್ಲಿ ಹರಡಿದವು. ಅಲ್ಲೆಲ್ಲಾ ಹಕ್ಕಿಗಳ ಇಂಪಾದ ಕೂಗು ಪ್ರತಿಧ್ವನಿಸುತ್ತಿತ್ತು. ರಾತ್ರಿಯಲ್ಲಿ ಬಿದ್ದಿರುವ ಮಂಜಿನಹನಿಗಳು ಮಾಯವಾಗಿದ್ದವು. ಪ್ರಾತಃಕಾಲದ ಕೆಂಪಿನಿಂದ ಕೂಡಿದ ನಿರ್ಮಲವಾದ ಸೂರ್ಯಕಿರಣಗಳು ಸ್ವಚ್ಛವಾದ ಆಕಾಶದಲ್ಲಿ ಹರಡಿದ್ದವು. ಕೊಳಗಳಲ್ಲಿ ತಾವರೆಹೂವುಗಳು ಅರಳಿ ವಿರಾಜಿಸುತ್ತಿದ್ದವು. ಅಂದು ಪ್ರಾತಃಕಾಲದ ಸೊಬಗು ಹೀಗಿತ್ತು.

ಪತಗಾನಾಂ ರಾವಾಃ ಪತಗರಾವಾಃ, ಮಧುರಾಃ ಪತಗರಾವಾಃ ಯಾಸಾಂ ತಾಃ ಮಧುರಪತಗರಾವಾಃ ತಾಃ, ಮಧುರಃ ಪತಗವತ್ ರಾವಃ ಯಾಸಾಂ ತಾಃ, ತಾಃ; ನಿಶಾಯಾಂ ಭವಂ ನೈಶಂ, ನೈಶಂ ಚ ತತ್ ಅಂಬು ಚ ನೈಶಾಂಬು, ನೈಶಾಂಬು ಏವ ಬಾಷ್ಪಂ ನೈಶಾಂಬುಬಾಷ್ಪಂ, ಶಾಂತಂ ನೈಶಾಂಬುಬಾಷ್ಪಂ ಯಾಸಾಂ ತಾಃ, ಬಾಷ್ಪಂ = ಹಬೆ, ಕಣ್ಣೀರು. ಬಾಷ್ಪಮ್ ಊಷ್ಮಾಶ್ರು —ಅಮರ. ವಿಪುಲಃ ರಾಗಃ ಯಾಸಾಂ ತಾಃ, ಸ್ವೇಷಾಂ (ಸ್ವಸ್ಯ) ಅಭಿಸಾರಃ ತಸ್ಮಾತ್. ಅರುಣಶ್ಚಾಸೌ ತರಣಿಶ್ಚ, ಅತ್ಯ-ಚ್ಛಂ ಅಂಬರಂ ಯಾಸಾಂ ತಾಃ. ದಿಶ ಏವ ಪುರಂಧ್ರ್ಯಃ ತಾಃ, ಸ್ಮಿತಾನಿ ಸರಸಿಜಾನ್ಯೇವ (ಸ್ಮಿತಾನಿ ಸರಸಿಜಾನಿ ಇವ), ವಕ್ತ್ರಾಣಿ ಯಾಸಾಂ ತಾಃ.

Rarest Archiver

ಆಲಿಲಿಂಗೇ, ಲಿಲಿಂಗೇ ಲಿಲಿಂಗಾತೇ ಲಿಲಿಂಗಿರೇ ಇತ್ಯಾದಿ. ಲಿಗಿ-ಗತೌ ಲಿಟ್ ಆತ್ಮನೇಪದಿ. ಈ ಧಾತುವು ಪರಸ್ಮೈಪದಿಯಾಗಿದ್ದರೂ 'ಚಾಂದ್ರಾದಯಸ್ತು ಮನ್ಯಂತೇ ಸರ್ವಸ್ಮಾದುಭಯಂ ಪದಂ' ಎಂಬ ವಚನ ದಂತೆ ಇಲ್ಲಿ ಆತ್ಮನೇಪದವು ಬಂದಿದೆ.

ವಿದ್ಯಾರ್ಥಿಗಳಿಗೆ ಉದಯರವಿಯ ಕಿರಣಗಳು ಮಾಡಿದ ಉಪಕಾರ—

ಪ್ರಣತಿರಭಸಧೂಲೀಬದ್ಧಶೋಭಾವಿಶೇಷಾ
ದಧುರುಪಕೃತಿಮತ್ತಾಂ ಸಾಧುಜಾಲಾಂತರಾಪ್ತಾಃ।
ಸಮಯಮುಪನತಂ ಸಂವೇದಯಂತೋ ವಯಸ್ಯಾ
ಇವ ದಶಶತಕೇತೋಃ ಕೇತವಃ ಶ್ರಾವಕಾಣಾಂ ॥ ೧೭ ॥

ಪ್ರಣತಿರಭಸಧೂಲೀಬದ್ಧಶೋಭಾವಿಶೇಷಾಃ ಸಾಧುಜಾಲಾಂತರಾಪ್ತಾಃ ಸಮಯಂ ಉಪನತಂ ಸಂವೇದಯಂತಃ ದಶಶತಕೇತೋಃ ಕೇತವಃ ವಯಸ್ಯಾಃ ಇವ ಶ್ರಾವಕಾಣಾಂ ಉಪಕೃತಿಮತ್ತಾಂ ದಧುಃ.

ಪ್ರಣತಿರಭಸಧೂಲೀ = ನಮಸ್ಕಾರದ ವೇಗದಿಂದ ಉಂಟಾದ ಧೂಳಿ ನಿಂದ, ಬದ್ಧ = ಉಂಟಾದ, ಶೋಭಾವಿಶೇಷಾಃ = ಅತಿಶಯಕಾಂತಿಗಳುಳ್ಳ, ಸಾಧುಜಾಲ = ಚೆನ್ನಾಗಿರುವ ಗವಾಕ್ಷಗಳ, ಅಂತರಾಪ್ತಾಃ = ಮಧ್ಯದಿಂದ ಬಂದ, ಸಜ್ಜನರ ಸಮೂಹದಿಂದ ಬಂದಿರುವ, ಸಮಯಂ = ಶಾಸ್ತ್ರ ಶ್ರವಣದ ಸಮಯವನ್ನು, ಉಪನತಂ = ಬಂದಿರುವುದನ್ನಾಗಿ, ಸಂವೇದ-ಯಂತಃ = ತಿಳಿಸುವ, ದಶಶತಕೇತೋಃ ಕೇತವಃ = ಸಹಸ್ರಕಿರಣನಾದ ಸೂರ್ಯನ ಕಿರಣಗಳು, ಶ್ರಾವಕಾಣಾಂ = ಕೇಳುವ ಶಿಷ್ಯರಿಗೆ, ಉಪಕೃತಿ-ಮತ್ತಾಂ = ಉಪಕಾರಸಂಬಂಧವನ್ನು, ದಧುಃ = ಮಾಡಿದುವು.

ಶಿಷ್ಯರು ಗುರುನಮಸ್ಕಾರ, ದೇವತಾನಮಸ್ಕಾರ ಮಾಡುವಾಗ ನಮಸ್ಕಾರದ ವೇಗದಿಂದ ಎದ್ದ ಧೂಳುಗಳು ಅವರ ಮೈಗೆ ಅಂಟಿಕೊಂಡು ಅತಿಶಯವಾದ ಶೋಭೆಯನ್ನುಂಟುಮಾಡುತ್ತಿದ್ದುವು. ಸಜ್ಜನರ ಸಮೂಹ ದಿಂದ ಬಂದಿರುವ ಸುಸಂಸ್ಕೃತರಾದ ಆ ಶಿಷ್ಯರು ತಮ್ಮ ಸಹಪಾಠಿಗಳಿಗೆ ಪಾಠದ ಸಮಯವಾಯಿತೆಂದು ತಿಳಿಸುತ್ತಿದ್ದರು. ಹೀಗೆ ಪರಸ್ಪರ

Rarest Archiver

ಉಪಕಾರಮಾಡುತ್ತಿರುವ ಶಿಷ್ಯರಂತೆ, ಸೂರ್ಯನಕಿರಣಗಳೂ ಆಚಾರ್ಯರ ಶಿಷ್ಯರಿಗೆ ಉಪಕಾರಮಾಡಿದುವು. ಶಿಷ್ಯರು ಗುರುದೇವತಾನಮಸ್ಕಾರ ಮಾಡುವಾಗ ಆ ರಭಸದಿಂದ ಮೇಲೆದ್ದ ಧೂಳಿನ ಕಣಗಳು ಸೂರ್ಯನ ಎಳೆಯ ಕೆಂಪುಕಿರಣಗಳಿಗೆ ಶೋಭಾವಿಶೇಷವನ್ನುಂಟುಮಾಡುತ್ತಿದ್ದುವು. ಆ ಕಿರಣಗಳು ಚೆನ್ನಾಗಿರುವ ಕಿಟಕಿಗಳ ಮಧ್ಯದಿಂದ ತೂರಿಕೊಂಡು ಬರುತ್ತಿದ್ದುವು. ಪಾಠದ ಸಮಯವಾಯಿತು, ಏಳಿರಿ ಎಂದು ಸೂಚಿಸು ವಂತೆ ಇದ್ದುವು. ಸೂರ್ಯಕಿರಣಗಳಿಂದ ಶಿಷ್ಯರಿಗೆ ಉಪಕಾರ, ಶಿಷ್ಯರಿಂದ ಸೂರ್ಯಕಿರಣಗಳಿಗೆ ಉಪಕಾರವು ಎಂಬ ಸನ್ನಿವೇಶವು ಉಂಟಾಗಿತ್ತು. ಅರುಣೋದಯಕಾಲದಲ್ಲಿ ಎದ್ದು ಸ್ನಾನಾದಿಗಳನ್ನು ಮಾಡಿ ಜಪಧ್ಯಾನಾದಿ ಗಳನ್ನು ಮಾಡುತ್ತಾ ಇದ್ದ ಶಿಷ್ಯರು ಗವಾಕ್ಷಗಳ ಸಂದಿಗಳಿಂದ ಒಳಬಂದ ಸೂರ್ಯಕಿರಣಗಳಿಗೆ ತಾವು ನಮಸ್ಕಾರಮಾಡುವಾಗ ಎದ್ದಧೂಳುಗಳಿಂದ ಶೋಭೆಯನ್ನುಂಟುಮಾಡಿ. ತಾವು ಸ್ವತಃ ನಮಸ್ಕಾರಮಾಡುವಾಗ ಅಂಟಿಕೊಂಡ ಧೂಳಿನಿಂದ ಅಲಂಕೃತರಾಗಿ, ಗವಾಕ್ಷಗಳ ಸಂದಿಗಳಿಂದ ಒಳಬಂದ ಕಿರಣಗಳನ್ನು ನೋಡಿ ಈಗ ಪಾಠ ಶ್ರವಣದ ಸಮಯವೆಂದರಿತು ಸಹಪಾಠಿಗಳಿಗೂ ತಿಳಿಸಿ ತಾವು ವ್ಯಾಸಂಗಕ್ಕೆ ಸಿದ್ಧರಾದರು ಎಂದು ಭಾವ.

ಪ್ರಣತೇಃ ರಭಸಃ (ಸಂಭ್ರಮ ಅಥವಾ ವೇಗ, ರಭಸೋ ವೇಗಹರ್ಷಯೋಃ — ವಿಶ್ವ) ಪ್ರಣತಿರಭಸೇನ ಧೂಲಯಃ, ಪ್ರಣತಿರಭಸ-ಧೂಲಿಭಿಃ ಬದ್ಧಃ ಶೋಭಾಯಾಃ ವಿಶೇಷಃ ಯೇಷಾಂ ತೇ, ಉಪಕೃತಿರೇಷಾಂ ಅಸ್ತೀತಿ ಉಪಕೃತಿಮಂತಃ ತೇಷಾಂ ಭಾವಃ ಉಪಕೃತಿಮತ್ತಾ ತಾಂ, ಸಾಧೂನಿ ಚ ತಾನಿ ಜಾಲಾನಿ ಚ (ಸಾಧೂನಾಂ ಜಾಲಾನಿ) ಸಾಧು-ಜಾಲಾನಿ, ಸಾಧುಜಾಲಾನಾಂ ಅಂತರಂ ಆಪ್ತಾಃ; ದಶಶತಂ ಕೇತವಃ ಯಸ್ಯ ಸಃ ತಸ್ಯ.

ದಧೌ ದಧತುಃ ದಧುಃ ಇತ್ಯಾದಿ, ಧಾಧಾತು ಲಿಟ್.

ಆ ಕೂಡಲೇ ಪಾಠ ಕೇಳಲು ಶಿಷ್ಯರೆಲ್ಲರೂ ಸಿದ್ಧರಾದರು—

ನಿಹಿತಮುಚಿತಮುಚ್ಚಂ ಯೋಗಪೀಠಂ ಪ್ರವಕ್ತುಃ
ಪರಿಷದಿ ಪರಿತೋಽಮೀ ಸತ್ತ್ವರಾಃ ಸತ್ತ್ವಭಾಜಃ।

Rarest Archiver

ದ್ರುತಮವಸಿತಕೃತ್ಯೈರ್ಧನ್ಯಸನ್ನ್ಯಾಸಿವರ್ಗೈಃ (ಸಂಘೈಃ)
ಶ್ರವಣಪರಮಕೃತ್ಯಾಯೋಪತಸ್ಥುಸ್ಸಮೇತಾಃ ॥ ೧೮॥

ಸತ್ವರಾಃ ಸತ್ತ್ವಭಾಜಃ ಅಮೀ ದ್ರುತಂ ಅವಸಿತಕೃತ್ಯೈಃ ಧನ್ಯ-ಸಂನ್ಯಾಸಿವರ್ಗೈಃ (ಸಂಘೈಃ) ಸಮೇತಾಃ ಪರಿಷದಿ ನಿಹಿತಂ ಉಚಿತಂ ಉಚ್ಚಂ ಪ್ರವಕ್ತುಃ ಯೋಗಪೀಠಂ ಪರಿತಃ ಶ್ರವಣಪರಮಕೃತ್ಯಾಯ ಉಪತಸ್ಥುಃ.

ಸತ್ವರಾಃ = ವೇಗದಿಂದ ಕೂಡಿದ, ಸತ್ತ್ವಭಾಜಃ = ಸಾತ್ತ್ವಿಕ ಸ್ವಭಾವದ, ಅಮೀ (ಶ್ರಾವಕಾಃ) = ಈ ಶ್ರೋತೃಗಳು, ದ್ರುತಂ ಅವಸಿತ-ಕೃತ್ಯೈಃ = ಬೇಗನೇ ಮುಗಿಸಿದ ಆಹ್ನಿಕವುಳ್ಳ, ಧನ್ಯಸನ್ನ್ಯಾಸಿವರ್ಗೈಃ = ಕೃತಾರ್ಥರಾದ ಸನ್ನ್ಯಾಸಿಗಳ ಸಮೂಹಗಳಿಂದ, ಸಮೇತಾಃ = ಕೂಡಿದವರಾಗಿ, ಪರಿಷದಿ = ಪ್ರವಚನದ ಸಭೆಯಲ್ಲಿ, ನಿಹಿತಂ = ಇಡಲ್ಪಟ್ಟ, ಉಚಿತಂ = ಯೋಗ್ಯವಾದ, ಉಚ್ಚಂ = ಎತ್ತರವಾದ, ಪ್ರವಕ್ತುಃ = ಪ್ರವಚನ ಮಾಡಲಿರುವ ಆಚಾರ್ಯರ, ಯೋಗಪೀಠಂ ಪರಿತಃ = ಪ್ರವಚನದ ಆಸನದ ಸುತ್ತಲೂ, ಶ್ರವಣಪರಮಕೃತ್ಯಾಯ = ಶಾಸ್ತ್ರದ ಕೇಳುವಿಕೆಯೆಂಬ ಶ್ರೇಷ್ಠವಾದ ಕಾರ್ಯಕ್ಕಾಗಿ, ಉಪತಸ್ಥುಃ = ಕುಳಿತರು.

ಪ್ರವಚನಮಂಟಪದಲ್ಲಿ ವ್ಯಾಖ್ಯಾನಮಾಡುವ ಶ್ರೀಮಧ್ವಾಚಾರ್ಯರು ಕುಳಿತುಕೊಳ್ಳಲು ಯೋಗ್ಯವಾದ ಬೇಕಾದಷ್ಟು ಎತ್ತರವಾದ ಪ್ರವಚನ ಪೀಠವನ್ನು ಇಟ್ಟಿದ್ದರು. ಅದರ ಸುತ್ತಲೂ ಸಾತ್ತ್ವಿಕರಾದ ಶ್ರಾವಕರು ಬೇಗನೆ ಆಹ್ನಿಕವನ್ನು ಮುಗಿಸಿದ ಶ್ರೇಷ್ಠ ಸನ್ನ್ಯಾಸಿಗಳೊಡನೆ ಪ್ರವಚನವನ್ನು ಕೇಳುವುದಕ್ಕಾಗಿ ಬೇಗನೆ ಬಂದು ಕುಳಿತರು.

ಯೋಗಾಯ ಪೀಠಂ ತತ್, ತ್ವರಯಾ ಸಹಿತಾಃ ಸತ್ವರಾಃ, ಸತ್ತ್ವಂ ಭಜಂತೀತಿ ಸತ್ತ್ವಭಾಜಃ, ಅವಸಿತಾನಿ ಕೃತ್ಯಾನಿ ಯೈಃ ತೇ ಅವಸಿತಕೃತ್ಯಾಃ ತೈಃ, ಧನ್ಯಾಶ್ಚ ತೇ ಸನ್ನ್ಯಾಸಿನಶ್ಚ ಧನ್ಯಸನ್ನ್ಯಾಸಿನಃ, ಧನ್ಯಸನ್ನ್ಯಾಸಿನಾಂ ವರ್ಗಾಃ, ತೈಃ, ಪರಮಂ ಚ ತತ್ ಕೃತ್ಯಂ ಚ ಪರಮಕೃತ್ಯಂ, ಶ್ರವಣಂ ಇತಿ ಪರಮಕೃತ್ಯಂ ಶ್ರವಣಪರಮಕೃತ್ಯಂ ತಸ್ಮೈ.

Rarest Archiver

ಉಪ + ತಸ್ಥುಃ, ತಸ್ಥೌ ತಸ್ಥತುಃ ತಸ್ಥುಃ ಷ್ಠಾ (ಸ್ಥಾ) ಗತಿನಿವೃತ್ತೌ ಲಿಟ್.

ಆ ಶ್ರೋತೃಗಳು ಓದುತ್ತಿದ್ದ ಓಲೆಗರಿಪುಸ್ತಕಗಳು ಹೇಗಿದ್ದುವು?

ಬಭುರಮಲಗುಣಾನಾಂ ಶೋಭನಾಚ್ಛಾದನಾನಾಂ
ಮುರರಿಪುನಿಲಯಾನಾಂ ಹಂತ ವೈದಾಂತಿಕೀನಾಂ।
ಸಪದಿ ಸುವಿವೃತಾನಾಮಂತರಾರ್ಥಾ ಧಿಯಾಂ ವಾ
ವಿವಿಧಕವಲಿಕಾನಾಂ ಸಂಚಯಾಃ ಪತ್ರಿಕಾಣಾಂ ॥ ೧೯ ॥

ಅಮಲಗುಣಾನಾಂ ಶೋಭನಾಚ್ಛಾದನಾನಾಂ ಮುರರಿಪುನಿಲಯಾನಾಂ ವೈದಾಂತಿಕೀನಾಂ ಸಪದಿ ಸುವಿವೃತಾನಾಂ ವಿವಿಧಕವಲಿಕಾನಾಂ ಪತ್ರಿಕಾಣಾಂ ಸಂಚಯಾಃ ಅಂತಃ ಧಿಯಾಂ ಅರ್ಥಾ ವಾ ಬಭುಃ ಹಂತ!

ಅಮಲಗುಣಾನಾಂ = ನಿರ್ಮಲವಾದ ಕಟ್ಟುವ ದಾರಗಳುಳ್ಳ, ನಿರ್ದೋಷವಾದ ಜ್ಞಾನಭಕ್ತಿವೈರಾಗ್ಯಾದಿಗುಣಗಳುಳ್ಳ, ಶೋಭನಾಚ್ಛಾದನಾನಾಂ = ಚೆನ್ನಾಗಿರುವ ಸುತ್ತುವ ಬಟ್ಟೆಯುಳ್ಳ, ಅಯೋಗ್ಯರಲ್ಲಿ ಮಂಗಳಕರನಾದ ಪರಮಾತ್ಮನನ್ನು ಮುಚ್ಚಿ ಇಡುವ, ಮುರರಿಪುನಿಲಯಾನಾಂ = ಶ್ರೀಹರಿಯನ್ನು ಪ್ರತಿಪಾದಿಸುವುದರಿಂದ ಅವನಿಗೆ ಆಶ್ರಯವಾದ, ಶ್ರೀಮನ್ನಾರಾಯಣನಿಗೆ ಆಶ್ರಯವಾದ ಹೃದಯಕಮಲವುಳ್ಳ, ವೈದಾಂತಿಕೀನಾಂ = ವೇದಾಂತಶಾಸ್ತ್ರಕ್ಕೆ ಸಂಬಂಧಪಟ್ಟಿರುವ, ವೇದಾಂತಶಾಸ್ತ್ರವನ್ನು ವಿಚಾರಮಾಡುವ, ಸಪದಿ = ಕೂಡಲೇ, ಸುವಿವೃತಾನಾಂ = ಚೆನ್ನಾಗಿ ತೆರೆಯಲ್ಪಟ್ಟ, ದೂರಮಾಡಲ್ಪಟ್ಟ ಅಜ್ಞಾನಾವರಣವುಳ್ಳ, ವಿವಿಧಕವಲಿಕಾನಾಂ = ನಾನಾಬಗೆಯ ಒಳಗಿನ ಪತ್ರವುಳ್ಳ, (ಪುಸ್ತಕಗಳನ್ನು ಇಡುವುದಕ್ಕಾಗಿ ಮಾಡಿರುವ ನಾನಾವಿಧದ [ಚಾಪೆಗಳಂತಹ] ಆಸನಗಳುಳ್ಳ) ಪತ್ರಿಕಾಣಾಂ = ಓಲೆಗಳ, ಸಂಚಯಾಃ = ಸಮೂಹರೂಪವಾದ ಪುಸ್ತಕಗಳು, ಅಂತಃ = (ಸಜ್ಜನರ) ಮನಸ್ಸಿನಲ್ಲಿ, ಧಿಯಾಂ = ಬುದ್ಧಿಗಳ, ಅರ್ಥಾಃ ವಾ = ವಿಷಯಗಳಂತೆ, ಬಭುಃ ಹಂತ! = ಪ್ರಕಾಶಿಸಿದುವು; ಸಂತೋಷ!

ಓಲೆಪುಸ್ತಕಗಳು ಸಜ್ಜನರ ಬುದ್ಧಿಯಲ್ಲಿ ವಿಷಯವಾಗಿರುವ ಪರಮಾತ್ಮನ ಸ್ವರೂಪಗಳಂತೆ ಪ್ರಕಾಶಿಸಿದುವು.

Rarest Archiver

ಓಲೆ ಪುಸ್ತಕಗಳು ನಿರ್ಮಲವಾದ ಕಟ್ಟುವ ಹಗ್ಗದಿಂದ ಕೂಡಿವೆ, ಸುಂದರವಾದ ಬಟ್ಟೆಗಳಿಂದ ಆಚ್ಛಾದಿತವಾಗಿರುತ್ತವೆ. ಶ್ರೀಕೃಷ್ಣನನ್ನು ಪ್ರತಿಪಾದಿಸುವುದರಿಂದ ಅವನಿಗೆ ಆವಾಸಸ್ಥಾನವಾಗಿವೆ. ಪಾಠಕೇಳುವ ಮತ್ತು ಓದುವ ಸಮಯದಲ್ಲಿ ತೆರೆಯಲ್ಪಡುತ್ತವೆ. ಪುಸ್ತಕಗಳನ್ನು ಇಡಲು ಬೇಕಾದ ದರ್ಭೆಯ ಚಾಪೆ, ವ್ಯಾಸಪೀಠ ಮುಂತಾದ ನಾನಾವಿಧ ವಾದ ಪೀಠಗಳಿಂದ ಕೂಡಿರುತ್ತವೆ. ಪರಮಾತ್ಮನ ಸ್ವರೂಪವನ್ನು ತಿಳಿಯುವ ಬುದ್ಧಿಗಳೂ ನಿರ್ಮಲಜ್ಞಾನಭಕ್ತ್ಯಾದಿಗುಣಗಳುಳ್ಳವುಗಳು, ಪರಮಾತ್ಮನ ಸ್ವರೂಪವನ್ನು ಅಯೋಗ್ಯರಿಗೆ ತಿಳಿಸದೆ ಗೋಪ್ಯವಾಗಿ ಇರಿಸಿಕೊಳ್ಳುತ್ತವೆ. ಶ್ರೀಕೃಷ್ಣನನ್ನು ಧ್ಯಾನರೂಪದಿಂದ ಧರಿಸಿರುತ್ತವೆ. ವೇದಾಂತವಿಚಾರಗಳನ್ನೇ ಒಳಗೊಂಡಿರುತ್ತವೆ. ಗುರುಗಳ ಉಪದೇಶ ಕಾಲದಲ್ಲಿ ಅಜ್ಞಾನವನ್ನು ದೂರಮಾಡಿಕೊಳ್ಳುತ್ತವೆ. ಇಂತಹ ಸಜ್ಜನರ ಅಂತಃಕರಣ ಪರಿಣಾಮವಾದ ಬುದ್ಧಿಗಳಿಗೆ ವಿಷಯವಾದ ಭಗವಂತನ ಸ್ವರೂಪಗಳಂತೆ ಆ ಓಲೆಗರಿಗಳ ಸಮೂಹಗಳಾದ ಗ್ರಂಥಗಳು ವಿರಾಜಿಸಿದುವು.

ಅಮಲಾಃ ಗುಣಾಃ ಯಾಸಾಂ ತಾಃ ಅಮಲಗುಣಾಃ ತಾಸಾಂ, ಶೋಭನಂ ಆಚ್ಛಾದನಂ ಯಾಸಾಂ ತಾಃ ಶೋಭನಾಚ್ಛಾದನಾಃ ತಾಸಾಂ, ಮುರಸ್ಯ ರಿಪೋಃ ನಿಲಯಾಃ ಮುರರಿಪುನಿಲಯಾಃ ತೇಷಾಂ, ವೇದಾಂತಸ್ಯ ಇಮೇ ವೇದಾಂತಿಕ್ಯಃ ತಾಸಾಂ, ವಿವಿಧಾಃ ಕವಲಿಕಾಃ ಯಾಸಾಂ ತಾಃ ತಾಸಾಂ ;

ಬಭೌ ಬಭತುಃ ಬಭುಃ ಇತ್ಯಾದಿ, ಭಾದೀಪ್ತೌ ಲಿಟ್.

ಆ ಪುಸ್ತಕಗಳಲ್ಲಿದ್ದ ಅಕ್ಷರಗಳು ಹೀಗಿದ್ದುವು.

ಅನತಿವಿರಲಭಾವಾ ಅಪ್ಯನನ್ಯೋನ್ಯಸಂಗಾ
ಋಜುತರತತನಾನಾಪಂಕ್ತಿಸಾವ್ಯಾಪ್ತಶೋಭಾಃ ।
ದ್ವಿರದತುರಗದೇಶ್ಯಾ ದೂರತೋ ವರ್ಜಿತಾಂತಾಃ
ಕುಶಲಲಿಖಿತರೂಪಾ ರೇಜಿರೇ ತೇಷು ವರ್ಣಾಃ ॥ ೨೦ ॥

Rarest Archiver

ಅನತಿವಿರಲಭಾವಾಃ ಅಪಿ ಅನನ್ಯೋನ್ಯಸಂಗಾಃ ಋಜುತರತತನಾನಾ-ಪಂಕ್ತಿಸಾಮ್ಯಾಪ್ತಶೋಭಾಃ ದ್ವಿರದತುರಗದೇಶ್ಯಾಃ ದೂರತಃ ವರ್ಜಿತಾಂತಾಃ ಕುಶಲಲಿಖಿತರೂಪಾಃ ವರ್ಣಾಃ ತೇಷು ರೇಜಿರೇ.

ಅನತಿವಿರಲಭಾವಾಃ ಅಪಿ = ಹೆಚ್ಚು ವಿರಳವಾಗಿರದಿದ್ದರೂ, ಅನನ್ಯೋನ್ಯಸಂಗಾಃ = ಒಂದಕ್ಕೊಂದು ತಾಕದಿರುವ, ಋಜುತರ-ತತ-ನಾನಾ-ಪಂಕ್ತಿ = ಹೆಚ್ಚು ನೆಟ್ಟಗಿರುವ ವ್ಯಾಪ್ತವಾದ ಅನೇಕಸಾಲುಗಳ, ಸಾಮ್ಯಾಪ್ತಶೋಭಾಃ = ಸಾದೃಶ್ಯದಿಂದ ಪ್ರಾಪ್ತವಾದ ಕಾಂತಿಗಳುಳ್ಳ, ದ್ವಿರದತುರಗದೇಶ್ಯಾಃ = ಆನೆ ಕುದುರೆಗಳ ಆಕೃತಿಗೆ ಸಮಾನವಾದ ಆಕೃತಿಯುಳ್ಳ, ದೂರತಃ ವರ್ಜಿತಾಂತಾಃ = ದೂರದಿಂದಬಿಡಲ್ಪಟ್ಟಕೊನೆಗಳುಳ್ಳ, ಕುಶಲಲಿಖಿತರೂಪಾಃ = ನಿಪುಣರಿಂದ ಬರೆಯಲ್ಪಟ್ಟ ಸ್ವರೂಪವುಳ್ಳ, ವರ್ಣಾಃ = ಅಕ್ಷರಗಳು, ತೇಷು = ಆ ಪುಸ್ತಕಗಳಲ್ಲಿ, ರೇಜಿರೇ = ಪ್ರಕಾಶಿಸಿದುವು

ಓಲೆಗರಿಯ ಆ ಪುಸ್ತಕಗಳಲ್ಲಿರುವ ಅಕ್ಷರಗಳು ಹೆಚ್ಚು ವಿರಳವಾಗಿರದೆ ಒತ್ತೊತ್ತಾಗಿಯೇ ಬರೆಯಲ್ಪಟ್ಟಿದ್ದುವು, ಆದರೆ ಒಂದಕ್ಕೊಂದು ತಗಲಿಕೊಂಡಿರಲಿಲ್ಲ, ಪಂಕ್ತಿಗಳು ನೇರವಾಗಿದ್ದುವು, ಒಂದೇ ರೀತಿಯ ನೀಟವಾದ ಪರಸ್ಪರಹೋಲಿಕೆಯುಳ್ಳ ಪಂಕ್ತಿಗಳಿಂದ ಪುಸ್ತಕಗಳಿಗೆ ಒಳ್ಳೆಯ ಶೋಭೆಯುಂಟಾಗಿತ್ತು. ಕೆಲವು ಗಜಲಿಪಿಗಳು, ಅಂದರೆ ದೊಡ್ಡ ಅಕ್ಷರಗಳಿದ್ದುವು. ಕೆಲವು ತುರಗಲಿಪಿಗಳು (ಸ್ವಲ್ಪ ಚಿಕ್ಕ ಅಕ್ಷರಗಳು). (ಅ ಅ – ಹೀಗೆ) ಹೀಗಿದ್ದ ಅಕ್ಷರಗಳು ಗುಂಡಗೆ ಅಕ್ಕಪಕ್ಕದಲ್ಲಿ ಬೇಕಾದಷ್ಟೇ ಹರಡಿಕೊಂಡಿದ್ದುವು. ಪತ್ರದ ಎಡಬಲ ಕೆಳಗೆ ಮೇಲೆ ಸ್ಥಳಾವಕಾಶವನ್ನು ಬಿಟ್ಟು ಬರೆದಿದ್ದರು. ಒಳ್ಳೆಯ ಕೈಬರಹವುಳ್ಳ ಬುದ್ಧಿವಂತರು ಬರೆದಿರುವ ನಯನರಮ್ಯವಾದ ಅಕ್ಷರಗಳು ಆ ಪುಸ್ತಕಗಳಲ್ಲಿ ಹೀಗೆ ಪ್ರಕಾಶಿಸಿದುವು.

ವಿರಲಃ ಇತಿಭಾವಃ ವಿರಲಭಾವಃ, ಅತ್ಯಂತವಿರಲಭಾವಃ ಅತಿವಿರಲಭಾವಃ, ನ ವಿದ್ಯತೇ ಅತಿವಿರಲಭಾವಃ ಯೇಷಾಂ ತೇ ಅನತಿವಿರಲ-ಭಾವಾಃ ; ಅನ್ಯೋನ್ಯಂ ಸಂಗಃ, ನ ವಿದ್ಯತೇ ಅನ್ಯೋನ್ಯಸಂಗಃ ಯೇಷಾಂ ತೇ ಅನನ್ಯೋನ್ಯಸಂಗಾಃ ; ಅತಿಶಯೇನ ಋಜವಃ ಋಜುತರಾಃ,

Rarest Archiver

ಋಜುತರಾಶ್ಚ ತತಾಶ್ಚ, ನಾನಾ ಚ ತಾಃ ಪಂಕ್ತಯಶ್ಚ ಋಜುತರತ ತನಾನಾಪಂಕ್ತಯಃ, ಸಮಾನಾಂ ಭಾವಃ ಸಾಮ್ಯಂ, ಋಜು .... ಪಂಕ್ತೀನಾಂ ಸಾಮ್ಯಂ, ... ಸಾಮ್ಯೇನ ಆಪ್ತಾ ಶೋಭಾ ಯೇಷಾಂ ತೇ ಋಜುತರ .... ಶೋಭಾಃ ; ದ್ವಿರದಾಶ್ಚ ತುರಗಾಶ್ಚ, ಈಷದಸಮಾಪ್ತಾಃ (ಸದೃಶಾಃ) ದ್ವಿರದತುರಗಾಃ ದ್ವಿರದತುರಗದೇಶ್ಯಾಃ, ವರ್ಜಿತಃ ಅಂತಃ ಯೇಷಾಂ ತೇ, ಕುಶಲೈಃ ಲಿಖಿತಾನಿ ರೂಪಾಣಿ ಯೇಷಾಂ ತೇ ;

ರೇಜೇ ರೇಜಾತೇ ರೇಜಿರೇ ಇತ್ಯಾದಿ ರಾಜೃ ದೀಪ್ತೌ ಆತ್ಮನೇ, to shine ಲಿಟ್.

ಆಗ ಆ ಶಿಷ್ಯರು ಪಾಠವನ್ನು ಕೇಳಲು ಆರಂಭಿಸಿದ ರೀತಿ ಹೀಗಿತ್ತು—

ಸಪದಿ (ಝಟಿತಿ)ದದೃಶುರೇಕೇ ವಾಚನೀಯಾದಿಭಾಗಂ
ಪರಿಚಯಪಟುತಾಭ್ಯಾಂ ತಾವದೇಕೇ ಚಿರೇಣ ।
ಹರಿಗುರುನಮನಂ ದ್ರಾಗ್ಯತ್ನತೋಽಮೀ ವಿಧಾಯ
ಪ್ರಯಯುರಪರಸಾಮ್ಯಂ ಸಿದ್ಧಯೇ ಸ್ಯಾದ್ಧಿ ಯತ್ನಃ ॥ ೨೧ ॥

ಏಕೇ ವಾಚನೀಯಾದಿಭಾಗಂ ಪರಿಚಯಪಟುತಾಭ್ಯಾಂ ಸಪದಿ ದದೃಶುಃ, ತಾವತ್ ಏಕೇ ಚಿರೇಣ ದದೃಶುಃ; ಅಮೀ ಯತ್ನತಃ ಹರಿಗುರು ನಮನಂ ದ್ರಾಕ್ ವಿಧಾಯ ಅಪರಸಾಮ್ಯಂ ಪ್ರಯಯುಃ ಹಿ ಯತ್ನಃ ಸಿದ್ಧಯೇ ಸ್ಯಾತ್ !

ಏಕೇ = ಕೇಳತಕ್ಕ ಶಿಷ್ಯರಲ್ಲಿ ಕೆಲವರು, ವಾಚನೀಯಾದಿಭಾಗಂ = ಆ ದಿನ ಓದಬೇಕಾದುದರ ಪ್ರಾರಂಭದ ಭಾಗವನ್ನು, ಪರಿಚಯಪಟುತಾಭ್ಯಾಂ = ಓದಿದ ಅಭ್ಯಾಸ ಮತ್ತು ಚುರುಕುತನದಿಂದ, ಸಪದಿ ದದೃಶುಃ = ಬೇಗನೇ ನೋಡಿದರು. ಏಕೇ = ಕೆಲವರು, ಚಿರೇಣ ದದೃಶುಃ = ವಿಳಂಬ ದಿಂದ ನೋಡಿದರು. ಅಮೀ = ಈ ತಡವಾಗಿ ನೋಡಿದವರು, ಯತ್ನತಃ = ಪ್ರಯತ್ನದಿಂದ, ಹರಿಗುರುನಮನಂ = ದೇವತೆ ಮತ್ತು ಗುರುಗಳ ನಮಸ್ಕಾರ ವನ್ನು, ದ್ರಾಕ್ ವಿಧಾಯ = ಬೇಗನೆ ಮಾಡಿ, ಅಪರಸಾಮ್ಯಂ ಪ್ರಯಯುಃ = ಬೇಗನೆ ನೋಡಿದವರ ಸಾಮ್ಯವನ್ನು ಹೊಂದಿದರು. ಹಿ = ಯಾವಕಾರಣ

Rarest Archiver

ದಿಂದ, ಯತ್ನಃ=ಪ್ರಯತ್ನವು, ಸಿದ್ಧಯೇ ಸ್ಯಾತ್=ಕಾರ್ಯದ ನೆರವೇರು ವಿಕೆಗೆ ಆಗಿಯೇ ಆಗುತ್ತದೆ.

ಕೆಲವು ಶಿಷ್ಯರು ತಾವು ಆ ದಿನ ಓದಬೇಕಾದ ಗ್ರಂಥದ ಆದಿಭಾಗವನ್ನು ಅಭ್ಯಾಸ ಮತ್ತು ಬುದ್ಧಿಚಾತುರ್ಯಗಳಿಂದ ಕೂಡಲೇ ಕಂಡುಕೊಂಡರು. ಆದರೆ ಕೆಲವರು ವಿಲಂಬದಿಂದ ನೋಡಿದರು. ಹಾಗಿದ್ದರೂ ವಿಲಂಬದಿಂದ ಕಂಡ ಈ ಶಿಷ್ಯರು ಪ್ರಯತ್ನದಿಂದ ಹರಿಗುರುನಮನಗಳನ್ನು (ದ್ವಾದಶ ನಮಸ್ಕಾರ ಇತ್ಯಾದಿಯನ್ನು) ಬೇಗನೆ ಮಾಡಿ, ಬೇಗನೆ ನೋಡಿದವರ ಸಾಮ್ಯವನ್ನು ಹೊಂದಿದರು. ಇದು ಯುಕ್ತವೇ ಆಗಿದೆ ಏಕೆಂದರೆ ದೇಶ ಕಾಲಾನುಗುಣವಾದ ಪ್ರಯತ್ನವು ಕಾರ್ಯಸಿದ್ಧಿಯನ್ನು ಉಂಟುಮಾಡಿಯೇ ತೀರುತ್ತದೆ. ಅರ್ಥಾಂತರನ್ಯಾಸಾಲಂಕಾರ

ವಾಚಯಿತುಂ ಯೋಗ್ಯಃ ವಾಚನೀಯಃ, ಆದಿಶ್ಚಾಸೌ ಭಾಗಶ್ಚ, ವಾಚನೀಯಸ್ಯ ಆದಿಭಾಗಃ ತಂ. ಪಟೋಃ ಭಾವಃ ಪಟುತಾ, ಪರಿಚಯಶ್ಚ ಪಟುತಾ ಚ ಪರಿಚಯಪಟುತೇ ತಾಭ್ಯಾಂ, ಹರಿಶ್ಚ ಗುರುಶ್ಚ ಹರಿಗುರೂ, ಹರಿಗುರ್ವೋಃ ನಮನಂ, ತತ್; ಸಮಸ್ಯ ಭಾವಃ ಸಾಮ್ಯಂ, ಅಪರೇಷಾಂ ಸಾಮ್ಯಂ ಅಪರಸಾಮ್ಯಂ ತತ್,

ದದರ್ಶ ದದೃಶತುಃ ದದೃಶುಃ ಇತ್ಯಾದಿ ದೃಶಿರ್ (ದೃಶ್) ಪ್ರೇಕ್ಷಣೇ ಲಿಟ್; ಪ್ರ+ಯಯೌ ಯಯತುಃ ಯಯುಃ ಇತ್ಯಾದಿ. ಯಾ ಪ್ರಾಪಣೇ ಲಿಟ್; ಸ್ಯಾತ್ ಸ್ಯಾತಾಂ ಸ್ಯುಃ ಇತ್ಯಾದಿ ಅಸ ಭುವಿ ವಿಧಿಲಿಙ್.

ಆಚಾರ್ಯರು ಸಭಾಲಂಕಾರಮಾಡಿದರು—

ಯತವಚಸಿ ಜನೇಽಸ್ಮಿನ್ನಾನತೇ ಸನ್ನಿರಸ್ಯನ್
ಸಿಚಯಯವನಿಕಾಂ ತಾಂ ಸಾಂಧ್ಯಜೀಮೂತರಕ್ತಾಂ ।
ರವಿರಿವ ರವಿಪೂಜ್ಯಾಂಘ್ರಿಃ ಸಮಾಜಾಂತರಿಕ್ಷೇ
ವ್ಯಲಸದತಿಶಯಾಲುಃ ಸನ್ ಸಹಸ್ರಪ್ರಕಾಶಃ ॥ ೨೨ ॥

ಆನತೇ ಅಸ್ಮಿನ್ ಜನೇ ಯತವಚಸಿ ಸತಿ ಸಾಂಧ್ಯಜೀಮೂತರಕ್ತಾಂ ತಾಂ ಸಿಚಯಯವನಿಕಾಂ ಸನ್ನಿರಸ್ಯನ್ ರವಿಪೂಜ್ಯಾಂಘ್ರಿಃ ಅತಿಶಯಾಲುಃ ಸನ್ ಸಹಸ್ರಪ್ರಕಾಶಃ ಸಮಾಜಾಂತರಿಕ್ಷೇ ರವಿಃ ಇವ ವ್ಯಲಸತ್.

Rarest Archiver

ಆನತೇ = ನಮಸ್ಕಾರಮಾಡಿರುವ, ಅಸ್ಮಿನ್ ಜನೇ = ಈ ಶ್ರೋತೃ ಜನರು, ಯತವಚಸಿ ಸತಿ=ಮೌನದಿಂದ ಇರುತ್ತಿರಲು, ಸಾಂಧ್ಯಜೀಮೂತ-ರಕ್ತಾಂ = ಸಂಜೆಯ ಮೋಡದಂತೆ ಕೆಂಪಾಗಿರುವ, ಸಿಚಯಯವನಿಕಾಂ = ಬಟ್ಟೆಯ ಪರದೆಯನ್ನು, ಸನ್ನಿರಸ್ಯನ್=ಸರಿಸುತ್ತಾ, ರವಿಪೂಜ್ಯಾಂಘ್ರಿಃ = ಸೂರ್ಯನಿಂದ ಪೂಜಿಸಲು ಯೋಗ್ಯವಾದ ಪಾದಗಳುಳ್ಳ, ಅತಿಶಯಾಲುಃ = ತನ್ನ ಗುಣಗಳಿಂದ ಸೂರ್ಯನನ್ನು ಮೀರಿಸಿದ, ಸಹಸ್ರಪ್ರಕಾಶಃ = ಅನಂತಪ್ರಕಾಶವುಳ್ಳ ಆಚಾರ್ಯರು. ಸಮಾಜಾಂತರಿಕ್ಷೇ = ವ್ಯಾಖ್ಯಾನಸಭೆ ಯೆಂಬ ಆಕಾಶದಲ್ಲಿ (ಸಹಸ್ರಪ್ರಕಾಶಃ) ರವಿಃ ಇವ ವ್ಯಲಸತ್ = ಸಹಸ್ರ ಕಿರಣನಾದ ಸೂರ್ಯನಂತೆ ಪ್ರಕಾಶಿಸಿದರು.

ಸಂಧ್ಯಾವಂದನಾದಿಗಳನ್ನು ಮಾಡುತ್ತಿರುವ ಜನರು ಮೌನವಾಗಿದ್ದು ನಮಸ್ಕಾರಮಾಡುತ್ತಿರುವಾಗ ಸಂಧ್ಯಾಕಾಲದ ಕೆಂಪಾದ ಮೋಡಗಳೆಂಬ ಪರದೆಯನ್ನು ಸರಿಸಿ ಸಹಸ್ರಕಿರಣನಾದ ನಕ್ಷತ್ರಾದಿತೇಜಸ್ಸುಗಳನ್ನು ಮೀರಿಸಿದ ಸೂರ್ಯನು ಉದಯಿಸುತ್ತಾನೆ. ಅದರಂತೆ ಶಿಷ್ಯರು ಹರಿಗುರು ನಮಸ್ಕಾರಗಳನ್ನು ಮಾಡಿ ಮೌನವಾಗಿ ಆಚಾರ್ಯರ ಆಗಮನವನ್ನು ನಿರೀಕ್ಷಿಸುತ್ತಿರುವಾಗ ಸೂರ್ಯನಿಂದಲೂ ಪೂಜ್ಯಪಾದರಾದ ಆಚಾರ್ಯರು ಸಂಧ್ಯಾಕಾಲದ ಮೋಡದಂತೆ ಕೆಂಪಾದ ವಸ್ತ್ರದ ಪರದೆಯನ್ನು ಸರಿಸಿ ಅನಂತ ಪ್ರಕಾಶರಾಗಿ ವ್ಯಾಖ್ಯಾನಮಂಟಪದಲ್ಲಿ ಶೋಭಿಸಿದರು.

ಯತಂ ವಚಃ ಯಸ್ಯ ಸಃ ತಸ್ಮಿನ್, ಸಿಚಯಸ್ಯ ಯವನಿಕಾ ತಾಂ, ಸಿಚಯ=ಬಟ್ಟೆ, 'ವಸ್ತ್ರಂ ಸಿಚಯಃ ಪಟಃ ಪ್ರೋಕ್ತಃ'— ಹಲ. ಸಂಧ್ಯಾಯಾಂ ಭವಃ ಸಾಂಧ್ಯಃ, ಸಾಂಧ್ಯಶ್ಚಾಸೌ ಜೀಮೂತಶ್ಚ, ಸಾಂಧ್ಯಜೀಮೂತವತ್ ರಕ್ತಾ ತಾಂ; ರವಿಣಾ ಪೂಜ್ಯೌ ಅಂಘ್ರೀ ಯಸ್ಯ ಸಃ, ಸಮಾಜ ಏವ ಅಂತ-ರಿಕ್ಷಂ ತಸ್ಮಿನ್, ಸಹಸ್ರಂ ಪ್ರಕಾಶಾಃ ಯಸ್ಯ ಸಃ;

ವಿ + ಅಲಸತ್ ಅಲಸತಾಂ ಅಲಸನ್ ಇತ್ಯಾದಿ, ಲಸ ಶ್ಲೇಷಣಕ್ರೀಡ-ನಯೋಃ (ಕಾಂತೌ ಚ) ಲಙ್.

ಆಚಾರ್ಯರು 'ಓಂ' ಎಂದು ಮಂಗಳಾಶಾಸನವನ್ನು ಮಾಡಿದರು—

Rarest Archiver

ತ್ರಿಭುವನವರತೇಜೋವ್ಯಕ್ತವೇದಾರ್ಥಶುಕ್ಲ
ತ್ರಿತಯರಸತಯಾ ಯೇ ವರ್ಣಿತಾ ವರ್ಣವರ್ಯಾಃ ।
ಪೃಥುಮತಿರಥ ತೇಷಾಮೈಕ್ಯಮಾಪಾದ್ಯ ಸಮ್ಯಕ್
ಪ್ರವಚನಪರಿಶುದ್ಧ್ಯೈ ಸ್ಮ ಪ್ರಣೌತಿ ಪ್ರವೀಣಃ ॥ ೨೩ ॥

ಅಥ ಪ್ರವೀಣಃ ಪೃಥುಮತಿಃ ಯೇ ವರ್ಣವರ್ಯಾಃ ತ್ರಿಭುವನವರ-ತೇಜೋವ್ಯಕ್ತವೇದಾರ್ಥಶುಕ್ಲತ್ರಿತಯರಸತಯಾ ವರ್ಣಿತಾಃ ತೇಷಾಂ ಐಕ್ಯಂ ಸಮ್ಯಕ್ ಆಪಾದ್ಯ ಪ್ರವಚನಪರಿಶುದ್ಧ್ಯೈ ಪ್ರಣೌತಿ ಸ್ಮ.

ಅಥ = ಅನಂತರ, ಪ್ರವೀಣಃ ಪೃಥುಮತಿಃ = ನಿಪುಣರಾದ ಶ್ರೀಪೂರ್ಣಪ್ರಜ್ಞಾಚಾರ್ಯರು, ಯೇ ವರ್ಣವರ್ಯಾಃ = ಯಾವ ಅಕಾರ ಉಕಾರ ಮಕಾರವೆಂಬ ಉತ್ತಮವರ್ಣಗಳು, ತ್ರಿಭುವನ = ಮೂರುಲೋಕಗಳ, ವರತೇಜಃ = ಉತ್ತಮತೇಜಸ್ಸಾದ ಅಗ್ನಿವಾಯುಸೂರ್ಯರಿಂದ, ವ್ಯಕ್ತ = ಸಾರರೂಪವಾಗಿ ಪ್ರಕಟಗೊಂಡ, ವೇದಾರ್ಥ = ಋಗ್, ಯಜುಃ, ಸಾಮವೇದಗಳ ಅರ್ಥಗಳಾದ, ಶುಕ್ಲತ್ರಿತಯ = ಭೂಃ ಭುವಃ ಸುವಃ ಎಂಬ ಮೂರುವ್ಯಾಹೃತಿಗಳ ರಸತಯಾ = ಸಾರರೂಪದಿಂದ, ವರ್ಣಿತಾಃ (ಸಂತಿ) = ವರ್ಣಿಸಲ್ಪಟ್ಟಿವೆಯೋ, ತೇಷಾಂ ಐಕ್ಯಂ ಸಮ್ಯಕ್ ಆಪಾದ್ಯ = ಆ ಮೂರುವರ್ಣಗಳ ಸೇರುವಿಕೆಯನ್ನು ಚೆನ್ನಾಗಿ ಸಾಧಿಸಿ, ಪ್ರವಚನಪರಿ-ಶುದ್ಧ್ಯೈ = ವ್ಯಾಖ್ಯಾನದ ಪವಿತ್ರತೆಗಾಗಿ, ಪ್ರಣೌತಿ ಸ್ಮ = ಓಂಕಾರೋಚ್ಚಾರಣೆಯನ್ನು ಮಾಡಿದರು.

ಈ ಪ್ರಪಂಚದಲ್ಲಿ ಭೂಮಿ ಆಕಾಶ ಸ್ವರ್ಗ ಎಂಬ ಮೂರುಲೋಕಗಳಿವೆ. ಈ ಮೂರುಲೋಕಗಳ ಸಾರರೂಪರಾದವರೇ ಅಗ್ನಿ ವಾಯು ಸೂರ್ಯ ಎಂಬ ಮೂರು ತೇಜೋದೇವತೆಗಳು. ಈ ಮೂರು ತೇಜಸ್ಸುಗಳಿಂದ ಋಗ್, ಯಜುಸ್ಸು ಸಾಮ ಎಂಬ ಮೂರು ವೇದಗಳು ಆವಿರ್ಭವಿಸಿವೆ. ಈ ಮೂರು ವೇದಗಳ ಸಾರಾರ್ಥವೇ ಭೂಃ ಭುವಃ ಸುವಃ ಎಂಬ ಮೂರು ವ್ಯಾಹೃತಿಗಳು. ಆ ಮೂರು ವ್ಯಾಹೃತಿಗಳ ಸಾರವೇ ಅ, ಉ, ಮ್ ಎಂಬ ಮೂರು ಅಕ್ಷರಗಳು. ವೇದಜ್ಞರಲ್ಲಿ ಅತ್ಯಂತ ಶ್ರೇಷ್ಠರಾದ ಪ್ರವಚನಪ್ರವೀಣರಾದ ಆಚಾರ್ಯರು ತನ್ನ ಪ್ರವಚನದ ಪರಿಶುದ್ಧಿ

ಗಾಗಿ ಈ ಮೂರು ವರ್ಣಗಳ ಸಂಯೋಜನವನ್ನು ಮಾಡಿ 'ಓಂ' ಎಂದು ಮೊದಲು ಉಚ್ಚರಿಸಿ ಪ್ರವಚನದ ಮಂಗಳವನ್ನು ಪ್ರಾರಂಭಿಸಿದರು.

ತ್ರಯಾಣಾಂ ಭುವನಾನಾಂ ಸಮಾಹಾರಃ ತ್ರಿಭುವನಂ, ವರಾಣಿ ಚ ತಾನಿ ತೇಜಾಂಸಿ ಚ ವರತೇಜಾಂಸಿ, ತ್ರಿಭುವನೇ ವರತೇಜಾಂಸಿ ತ್ರಿಭುವನ-ವರತೇಜಾಂಸಿ, ತ್ರಿಭುವನವರತೇಜೋಭ್ಯಃ ವ್ಯಕ್ತಾಶ್ಚ ತೇ ವೇದಾಶ್ಚ, ತ್ರಿಭುವನ ವೇದಾಃ, ತೇಷಾಂ ಅರ್ಥಃ, ಶುಕ್ಲಾನಾಂ ತ್ರಿತಯಂ ಶುಕ್ಲ-ತ್ರಿತಯಂ, ತ್ರಿಭುವನ .... ವೇದಾರ್ಥಶ್ಚ ತತ್ ಶುಕ್ಲತ್ರಿತಯಂ ಚ, ತ್ರಿಭುವನ .... ತ್ರಿತಯಸ್ಯ ರಸಃ, ತಸ್ಯ ಭಾವಃ ತ್ರಿಭುವನ .... ರಸತಾ, ತಯಾ, ವರ್ಣೇಷು ವರ್ಯಾಃ, ಪೃಥುಃ ಮತಿಃ ಯಸ್ಯ ಸಃ, ಏಕಸ್ಯ ಭಾವಃ ಐಕ್ಯಂ ತತ್, ಪ್ರವಚನಸ್ಯ ಪರಿಶುದ್ಧಿಃ ತಸ್ಯೈ;

ಪ್ರ+ನೌತಿ ನುತಃ ನುವಂತಿ, ನೌಷಿ ನುಥಃ ನುಥ, ನೌಮಿ ನುವಃ ನುಮಃ, ಣು (ನು) ಸ್ತುತೌ ಲಟ್.

ಆಚಾರ್ಯರ ಪಾಠದ ಕ್ರಮವು ಹೀಗಿತ್ತು—

ಸ್ವರಮಚರಮಕಾಲೇ ಮಂದ್ರಮೇವಾತ್ಯಜದ್ಭಿಃ
ಸ್ಫುಟಮುಪನಿಷದಂತೇ ವಾಚಕೈರ್ವಾಚ್ಯಮಾನೇ ।
ಪ್ರವಚನಮತಿಚಿತ್ರಂ ಪ್ರಾಣಭಾಜಾಂ ಶ್ರುತೀನಾ
ಮಮೃತಮಮೃತಭಾವಸ್ಯೈಷ ಹೇತುಂ ಚಕಾರ || ೨೪ ||

ಅಚರಮಕಾಲೇ ಮಂದ್ರಂ ಸ್ವರಂ ಅತ್ಯಜದ್ಭಿಃ ಏವ ವಾಚಕೈಃ ಉಪನಿಷದಂತೇ ಸ್ಫುಟಂ ವಾಚ್ಯಮಾನೇ (ಸತಿ) ಏಷಃ ಪ್ರಾಣಭಾಜಾಂ ಶ್ರುತೀನಾಂ ಅಮೃತಂ ಅಮೃತಭಾವಸ್ಯ ಹೇತುಂ ಅತಿಚಿತ್ರಂ ಪ್ರವಚನಂ ಚಕಾರ.

ಅಚರಮಕಾಲೇ = ಆರಂಭದ ಸಮಯದಲ್ಲಿ, ಮಂದ್ರಂ ಸ್ವರಂ ಗಂಭೀರ (ಮಂದ)ವಾದ ಧ್ವನಿಯನ್ನು, ಅತ್ಯಜದ್ಭಿಃ ಏವ=ಬಿಡದೇ ಇರುವ, ವಾಚಕೈಃ=ಓದುವ ಶಿಷ್ಯರಿಂದ, ಉಪನಿಷದಂತೇ=ಬ್ರಹ್ಮಮೀಮಾಂಸಾ ಶಾಸ್ತ್ರವು, (ಅಥವಾ ಉಪನಿಷದ್ಭಾಷ್ಯವು) ಸ್ಫುಟಂ ವಾಚ್ಯಮಾನೇ ಸತಿ=

Rarest Archiver

ಸ್ಪಷ್ಟವಾಗಿ ಓದಲ್ಪಡುತ್ತಿರಲು, ಏಷಃ = ಈ ಮಧ್ವಾಚಾರ್ಯರು, ಪ್ರಾಣ-ಭಾಜಾಂ = ಯೋಗ್ಯ ಜೀವಾತ್ಮರ . (ಪ್ರಾಣದೇವನಿಗೆ ಒಲಿದಿರುವ) ಶ್ರುತೀನಾಂ = ಕಿವಿಗಳಿಗೆ (ವೇದಗಳ) ಅಮೃತಂ = ಅಮೃತದಂತಿರುವ, ಅಮೃತಭಾವಸ್ಯ ಹೇತುಂ = ಮೋಕ್ಷಕ್ಕೆ ಕಾರಣವಾದ, ಅತಿಚಿತ್ರಂ ಪ್ರವಚನಂ = ಅತ್ಯಂತ ಆಶ್ಚರ್ಯಕರವಾದ, ಶ್ರೇಷ್ಠವಾದ ವ್ಯಾಖ್ಯಾನವನ್ನು, ಚಕಾರ = ಮಾಡಿದರು.

ಪಾಠದ ಆರಂಭಸಮಯದಲ್ಲಿ ಶಿಷ್ಯರು ಮೃದುಗಂಭೀರಸ್ವರದಿಂದ ಬ್ರಹ್ಮಮೀಮಾಂಸಾಶಾಸ್ತ್ರ (ಅಥವಾ ಉಪನಿಷದ್ಭಾಷ್ಯ) ವನ್ನು ಸ್ಪಷ್ಟವಾಗಿ ಓದಲು ಪ್ರಾರಂಭಿಸಿದರು. ಶಿಷ್ಯರು ಕೊನೆಯವರೆಗೂ ಅದೇ ಕ್ರಮದಿಂದಲೇ ಓದುತ್ತಿದ್ದರು. ಆಚಾರ್ಯರು ಕೇಳತಕ್ಕ ಸಜ್ಜೀವರ ಕಿವಿಗಳಿಗೆ ಅಮೃತ ದಂತಿರುವ, ಪ್ರಾಣಾವತಾರರಾದ ಆಚಾರ್ಯರಿಗೆ (ತನಗೆ) ಒಲಿದಿರುವ ಶ್ರುತಿ ಗಳ ಅಮೃತಪ್ರಾಯವಾದ ಸಾರವನ್ನು ಅತ್ಯಾಶ್ಚರ್ಯಕರವಾದ ರೀತಿಯಿಂದ ಬೋಧಿಸಿದರು. ಆಚಾರ್ಯರ ಪ್ರವಚನವು ಮೋಕ್ಷಪ್ರಾಪ್ತಿಗೆ ಕಾರಣ ವಾಗಿತ್ತು. ಪಾಠಾರಂಭಸಮಯದಲ್ಲಿ ಗುರುಗಳ ಸನ್ನಿಧಿಯಲ್ಲಿ ಉಚ್ಚ ಧ್ವನಿಯು ನಿಷಿದ್ಧ. ಧೀರಗಂಭೀರಧ್ವನಿಯಿಂದ ಶಿಷ್ಯರು ಗ್ರಂಥವನ್ನು ಓದಿದರು. ಆಚಾರ್ಯರು ಅರ್ಥವನ್ನು ಬೋಧಿಸಿದರು. ಈ ಪ್ರವಚನವನ್ನು ಕೇಳಿದವರು ಮೋಕ್ಷವನ್ನೇ ಪಡೆಯುತ್ತಾರೆ ಎಂದು ಭಾವ.

ಚರಮಶ್ಚಾಸೌ ಕಾಲಶ್ಚ ಚರಮಕಾಲಃ, ನ ಚರಮಕಾಲಃ ಅಚರಮ-ಕಾಲಃ ತಸ್ಮಿನ್, ನ ತ್ಯಜಂತಃ ಅತ್ಯಜಂತಃ ತೈಃ, ಉಪನಿಷದಾಂ ಅಂತಃ (ನಿರ್ಣಯಃ) ಯಸ್ಮಿನ್ ಸಃ ಉಪನಿಷದಂತಃ (ಗ್ರಂಥಃ) ತಸ್ಮಿನ್, ಪ್ರಾಣಾನ್ ಭಜಂತೀತಿ ಪ್ರಾಣಭಾಜಃ ತೇಷಾಂ, ಅಮೃತಂ ಇತಿ ಭಾವಃ ಅಮೃತಭಾವಃ ತಸ್ಯ;

ಚಕಾರ ಚಕ್ರತುಃ ಚಕ್ರುಃ ಇತ್ಯಾದಿ ಕೃ ಧಾತು ಲಿಟ್.

ಪ್ರವಚನಸಮಯದಲ್ಲಿ ಪ್ರಶ್ನಿಸಿದವರಿಗೆ ಆಚಾರ್ಯರು ಹೀಗೆ ಉತ್ತರ ವಿತ್ತರು—

Rarest Archiver

ಧನಮಿವ ಸಧನಾಯೇಭ್ಯೋಽರ್ಕಸೂನುಃ ಪ್ರಸನ್ನಃ
ಶರಶತಮಿವ ಪಾರ್ಥಃ ಸಂಯುಗಾರ್ಥಿಭ್ಯ ಉಗ್ರಃ ।
ಅರತಿವಿರಹಿತಃ ಸೋಽನಾರತಂ ನಾ (ನೋಽ)ದಿಶನ್ನೋ
ಪ್ರತಿವಚನಮದೀನಂ ಚೋದಕೇಭ್ಯೋಽಖಿಲೇಭ್ಯಃ ॥ ೨೫ ॥

ಪ್ರಸನ್ನಃ ಅರ್ಕಸೂನುಃ ಸಧನಾಯೇಭ್ಯಃ ಧನಂ ಇವ, ಉಗ್ರಃ ಪಾರ್ಥಃ ಸಂಯುಗಾರ್ಥಿಭ್ಯಃ ಶರಶತಂ ಇವ, ಅರತಿವಿರಹಿತಃ ಸಃ ಅಖಿಲೇಭ್ಯಃ ಚೋದಕೇಭ್ಯಃ ಅದೀನಂ ಪ್ರತಿವಚನಂ ಅನಾರತಂ ನ (ನೋ) ಅದಿಶತ್ ಇತಿ ನೋ.

ಪ್ರಸನ್ನಃ ಅರ್ಕಸೂನುಃ = ಸಂತುಷ್ಟನಾದ ಸೂರ್ಯಪುತ್ರನಾದ ಕರ್ಣನು, ಸಧನಾಯೇಭ್ಯಃ = ಹಣವನ್ನು ಆಪೇಕ್ಷಿಸುವವರಿಗೆ, ಧನಂ ಇವ = ಹಣವನ್ನು ಎಂಬಂತೆ, ಉಗ್ರಃ ಪಾರ್ಥಃ = ಶತ್ರುಭಯಂಕರನಾದ ಅರ್ಜುನನು, ಸಂಯುಗಾರ್ಥಿಭ್ಯಃ = ಯುದ್ಧವನ್ನು ಬಯಸುವವರಿಗೆ, ಶರಶತಂ ಇವ = ನೂರಾರು ಬಾಣಗಳನ್ನೆಂಬಂತೆಯೂ, ಅರತಿವಿರಹಿತಃ ಸಃ = ಔದಾಸೀನ್ಯವಿಲ್ಲದ ಆ ಮಧ್ವಾಚಾರ್ಯರು, ಅಖಿಲೇಭ್ಯಃ ಚೋದಕೇಭ್ಯಃ = ಪ್ರಶ್ನೆಕೇಳುವ ಎಲ್ಲರಿಗೂ, ಅದೀನಂ ಪ್ರತಿವಚನಂ = ಅತ್ಯಂತಪ್ರೌಢವಾದ ಪ್ರತ್ಯುತ್ತರವನ್ನು, ಅನಾರತಂ = ಯಾವಾಗಲೂ, ನ (ನೋ) ಅದಿಶತ್ ಇತಿ ನೋ = ಕೊಡಲಿಲ್ಲವೆಂದಿಲ್ಲ. ಉತ್ತರವನ್ನು ಕೊಟ್ಟೇ ಕೊಡುತ್ತಿದ್ದರು.

ಸೂರ್ಯಪುತ್ರನಾದ ಕರ್ಣನು ಹಣದ ಆಸೆಯಿಂದ ಬಂದ ಯಾಚಕರಿಗೆ ಪ್ರಸನ್ನತೆಯಿಂದ ದಾನಮಾಡುತ್ತಿದ್ದನು. ಶತ್ರುಭಯಂಕರನಾದ ಅರ್ಜುನನು ಯುದ್ಧವನ್ನು ಅಪೇಕ್ಷಿಸುವ ವೀರರಿಗೆ ನೂರಾರು ಬಾಣಗಳನ್ನು ಪ್ರಯೋಗಿಸಿ ಅವರ ಯುದ್ಧದ ಆಸೆಯನ್ನು ನೆರವೇರಿಸುತ್ತಿದ್ದನು. ಅದರಂತೆ ಆಲಸ್ಯಕೋಪಗಳಿಲ್ಲದ ಸ್ಥಿರವಾದ ನಿಲುವುಳ್ಳ ಆಚಾರ್ಯರು ಪ್ರಶ್ನೆ ಮಾಡುವವರೆಲ್ಲರಿಗೂ ಸಂತೋಷದಿಂದ ದೃಢವಾದ ಉತ್ತರವನ್ನು ನಿರಂತರವಾಗಿ ಕೊಡುತ್ತಲೇ ಇರುತ್ತಿದ್ದರು.

Rarest Archives

ಧನಾಯಯಾ ಸಹಿತಾಃ ಸಧನಾಯಾಃ, ಅಶನಾಯೋದನ್ಯಾಧನಾಯಾಃ ಪಿಪಾಸಾಗರ್ಧೇಷು (ಪಾ. 7–4–34) ಎಂಬ ಸೂತ್ರದಿಂದ ನಿಪಾತ. ಅರ್ಕಸ್ಯ ಸೂನುಃ, ಶರಾಣಾಂ ಶತಂ ತತ್, ಸಂಯುಗಂ ಅರ್ಥಯಂತೇ ಇತಿ ಸಂಯುಗಾರ್ಥಿನಃ ತೇಭ್ಯಃ, ರತೇರಭಾವಃ ಅರತಿಃ, ಅರತ್ಯಾ ವಿರಹಿತಃ;

ಅದಿಶತ್ ಅದಿಶತಾಂ ಅದಿಶನ್ ದಿಶ ಅತಿಸರ್ಜನೇ to give ಲಙ್.

ಹೀಗೆ ಪ್ರವಚನವನ್ನು ನಡೆಸಿ ಆಚಾರ್ಯರು ಮಾಧ್ಯಾಹ್ನಿಕಸ್ನಾನಕ್ಕೆ ಎದ್ದರು —

ಅಥದಶಶತಶೋಚಿಷ್ಯಪ್ರಯಾತಿ ಪ್ರತೀಚ್ಯಾಃ (ಚ್ಯಾಂ)
ಪ್ರವಚನಮವಸಾಯ್ಯ (ಯ) ಸ್ನಾತುಮಾಯಾತ್ತಟಾಕಂ ।
ಪೃಥುಮತಿರಿಹತಾವಚ್ಛ್ರೇಷ್ಠ ಸಂಸರ್ಗಲೋಲೈಃ
ಸಮಗಮಿ ಸಪದಿ ಸ್ವರ್ನಿಮ್ನಗಾದ್ಯೈಶ್ಚ (ಸ್ಸು)ತೀರ್ಥ್ಯೈಃ ॥೨೬॥

ಅಥ ದಶಶತಶೋಚಿಷಿ ಪ್ರತೀಚ್ಯಾಃ ಅಪ್ರಯಾತಿ (ಸತಿ) ಪೃಥುಮತಿಃ ಪ್ರವಚನಂ ಅವಸಾಯ್ಯ ಸ್ನಾತುಂ ತಟಾಕಂ ಆಯಾತ್. ತಾವತ್ ಇಹ ಶ್ರೇಷ್ಠ ಸಂಸರ್ಗಲೋಲೈಃ ಸ್ವರ್ನಿಮ್ನಗಾದ್ಯೈಃ (ಸು) ತೀರ್ಥ್ಯೈಃ ಚ ಸಪದಿ ಸಮಗಮಿ.

ಅಥ = ತರುವಾಯ, ದಶಶತಶೋಚಿಷಿ–ಸಹಸ್ರಕಿರಣನಾದ ಸೂರ್ಯನು, ಪ್ರತೀಚ್ಯಾಃ ಆ ಪ್ರಯಾತಿ = ಪಶ್ಚಿಮದಿಕ್ಕಿಗೆ ಅಭಿಮುಖನಾಗಲು, ಪೃಥುಮತಿಃ = ಶ್ರೀಮಧ್ವಾಚಾರ್ಯರು, ಸ್ನಾತುಂ ತಟಾಕಂ ಆಯಾತ್ = ಸ್ನಾನ ಮಾಡಲು ಸರೋವರಕ್ಕೆ ಬಂದರು. ತಾವತ್ = ಅಷ್ಟರಲ್ಲಿ, ಇಹ = ಈ ಸರೋವರದಲ್ಲಿ, ಶ್ರೇಷ್ಠ ಸಂಸರ್ಗಲೋಲೈಃ = ಉತ್ತಮರಾದ ಶ್ರೀಮಧ್ವಾಚಾರ್ಯರ (ಜೊತೆಗೆ ಸ್ನಾನ)ಸಂಬಂಧದಲ್ಲಿ ಆಸೆಯುಳ್ಳ, ಸ್ವರ್ನಿಮ್ನಗಾದ್ಯೈಃ = ಗಂಗೆಯೇ ಮೊದಲಾದ, (ಸು) ತೀರ್ಥ್ಯೈಃ ಚ = ಉತ್ತಮರಾದತೀರ್ಥಾಭಿಮಾನಿದೇವತೆಗಳಿಂದಲೂ, ಸಪದಿ ಸಮಗಮಿ = ಕೂಡಲೇ ಸೇರಲ್ಪಟ್ಟಿತು.

Rarest Archiver

ಹೀಗೆ ಶ್ರೀಮಧ್ವರು ಪ್ರವಚನಮಾಡುತ್ತಿದ್ದಾಗ ಸೂರ್ಯನು ಸ್ವಲ್ಪ ಪಶ್ಚಿಮದ ಕಡೆಗೆ ವಾಲುತ್ತಿದ್ದನು. ಮಧ್ಯಾಹ್ನದ ವೇಳೆಯಾಯಿತು. ಆಚಾರ್ಯರು ಪಾಠವನ್ನು ಮುಗಿಸಿ ಮಾಧ್ಯಾಹ್ನಿಕಸ್ನಾನಕ್ಕಾಗಿ ಸರೋವರದ ಕಡೆಗೆ ಹೊರಟರು. ಆಗ ಜ್ಞಾನಿಶ್ರೇಷ್ಠರಾದ ಆಚಾರ್ಯರ ಸಂಸರ್ಗದಲ್ಲಿ ಆಸೆಯುಳ್ಳ ಗಂಗಾದಿಸಮಸ್ತತೀರ್ಥಾಭಿಮಾನಿದೇವತೆಗಳೂ ಈ ಸರೋವರದಲ್ಲಿ ಆಚಾರ್ಯರ ಸ್ನಾನಕಾಲದಲ್ಲಿ ಬಂದು ಸೇರಿದರು. ಎಲ್ಲಾ ತೀರ್ಥಾಭಿಮಾನಿದೇವತೆಗಳೂ ಆ ಸರೋವರದಲ್ಲಿ ತಮ್ಮ ಸನ್ನಿಧಾನವನ್ನಿಟ್ಟರು ಎಂದು ಭಾವ.

ದಶ ಚ ತಾನಿ ಶತಾನಿ ಚ ದಶಶತಾನಿ, ದಶಶತಾನಿ ಶೋಚೀಂಷಿ ಯಸ್ಯ ಸಃ ತಸ್ಮಿನ್; ಪೃಥುಃ ಮತಿಃ ಯಸ್ಯ ಸಃ ಪೃಥುಮತಿಃ, ಶ್ರೇಷ್ಠಾನಾಂ ಸಂಸರ್ಗಃ ಶ್ರೇಷ್ಠಸಂಸರ್ಗಃ ಶ್ರೇಷ್ಠಸಂಸರ್ಗೇ ಲೋಲಾಃ ತೈಃ, ಸ್ವರ್ನಿಮ್ನಗಾ ಆದ್ಯಾ ಯೇಷಾಂ ತಾನಿ ಸ್ವರ್ನಿಮ್ನಗಾದ್ಯಾನಿ ತೈಃ।

ಆ + ಅಯಾತ್ ಅಯಾತಾಂ ಅಯುಃ ಅಯಾನ್, ಇತ್ಯಾದಿ. ಯಾ ಪ್ರಾಪಣೇ ಲಙ್. ಸಮ್ + ಅಗಮಿ ಗಮ್ಲೃ ಗತೌ ಭಾವೇ ಲುಙ್. ಸಮೋಗಮ್ಯೃಚ್ಛಿಭ್ಯಾಂ ಸೂತ್ರದಿಂದ, (1-3-29) ಅಕರ್ಮಕವಾದಾಗ ಆತ್ಮನೇಪದ. ಸ್ವರ್ನಿಮ್ನಗಾದ್ಯಾನಿ ತೀರ್ಥಾನಿ ಸಮಗಂಸತ (ಕರ್ತರಿ).

ಆನಂದತೀರ್ಥರ ತೀರ್ಥಸ್ನಾನವು ಹೀಗಿತ್ತು—

ಘನರಸನಿಕರೋಽಸಾವಂತರತ್ಯಂತಶುದ್ಧೋ-
ಮುನಿಗಣ ಇವ ಭೂಯಃ ಸ್ನೇಹವಾನ್ ಪ್ರಾಗ್ ದಧಾನಃ।
ಪ್ರತಿಕೃತಿಮಖಿಲಜ್ಞಸ್ಯಾಪರೋಕ್ಷ್ಯೇಣ ತಾವತ್
ಸ್ಫುಟಮಲಭತ ರೂಪಂ ಮಜ್ಜನೇ ಸಜ್ಜನೇಷ್ಟಂ ॥ ೨೭ ॥

ಅಂತಃ ಅತ್ಯಂತಶುದ್ಧಃ ಭೂಯಃ ಸ್ನೇಹವಾನ್ ಅಸೌ ಘನರಸನಿಕರಃ ಪ್ರಾಕ್ ಅಖಿಲಜ್ಞಸ್ಯ ಪ್ರತಿಕೃತಿಂ ದಧಾನಃ ತಾವತ್ ಮಜ್ಜನೇ ಸಜ್ಜನೇಷ್ಟಂ ರೂಪಂ ಸ್ಫುಟಂ ಅಪರೋಕ್ಷ್ಯೇಣ ಮುನಿಗಣಃ ಇವ ಅಲಭತ.

ಅಂತಃ ಅತ್ಯಂತಶುದ್ಧಃ = ಒಳಗೆ, ಮನಸ್ಸಿನಲ್ಲಿ, ಬಹಳಪವಿತ್ರವಾದ, ಭೂಯಃ = ಬಹಳ, ಸ್ನೇಹವಾನ್ = ಸ್ನೇಹ (ಜಿಡ್ಡು) ಎಂಬ ಗುಣವುಳ್ಳ,

Rarest Archiver

ಅಸೌ ಘನರಸನಿಕರಃ = ಈ ನೀರಿನ ಸಮೂಹವು, ಪ್ರಾಕ್ = ಮೊದಲು, ಅಖಿಲಜ್ಞಸ್ಯ-ಶ್ರೀಮಧ್ವಾಚಾರ್ಯರ, ಶ್ರೀಮನ್ನಾರಾಯಣನ, ಪ್ರತಿಕೃತಿಂ = ಪ್ರತಿಬಿಂಬವನ್ನು, ದಧಾನಃ = ಧರಿಸಿದ್ದು, ತಾವತ್ ಮಜ್ಜನೇ = ಆಚಾರ್ಯರ ಸ್ನಾನಸಮಯದಲ್ಲಿ, ಸಜ್ಜನೇಷ್ಟಂ = ಸಜ್ಜನರಿಗೆ ಪ್ರೀತಿವಿಷಯವಾಗಿರುವ, ರೂಪಂ = ಆಚಾರ್ಯರ ಆಕೃತಿಯನ್ನು, ಸ್ಫುಟಂ = ಸ್ಪಷ್ಟವಾಗಿ, ಅಪರೋಕ್ಷ್ಯೇಣ = ಪ್ರತ್ಯಕ್ಷವಾಗಿ, ಮುನಿಗಣಃ ಇವ = ಮುನಿಗಳ ಸಮೂಹದಂತೆ, ಅಲಭತ = ಹೊಂದಿತು.

ಆ ಸರೋವರದ ನೀರು ಸ್ನೇಹವೆಂಬ ಜಲದ ಗುಣದಿಂದ ಕೂಡಿಕೊಂಡಿತ್ತು. ಒಳಗೆ ಕೆಸರಿಲ್ಲದೆ ಅತ್ಯಂತಶುದ್ಧವಾಗಿತ್ತು. ಋಷಿಗಳ ಹೃದಯವು ಪರಿಶುದ್ಧವೂ, ಯಾವ ಪಾಪವಿಲ್ಲದ್ದೂ, ಪರಮಾತ್ಮನ ವಿಷಯದಲ್ಲಿ ಸುದೃಢಸ್ನೇಹವೆಂಬ ಭಕ್ತಿಯಿಂದ ಸಹಿತವೂ ಆಗಿರುತ್ತದೆ. ಅಂತಹ ಋಷಿಗಳ ಸಮೂಹದಂತೆ ಆ ಸರೋವರದ ನೀರು, ಆಚಾರ್ಯರು ನೀರಿಗೆ ಇಳಿಯುವ ಮೊದಲು ದಡದಲ್ಲಿರುವಾಗ ಅವರ ಪ್ರತಿಬಿಂಬವನ್ನು ಧರಿಸಿತ್ತು. ಅವರು ನೀರಿಗೆ ಇಳಿದು ಮುಳುಗುವಾಗ ಸಜ್ಜನರಿಗೆ ಪ್ರೀತಿಪಾತ್ರವಾದ ಅವರ ರೂಪವನ್ನು ಸ್ಪಷ್ಟವಾಗಿ ಪ್ರತ್ಯಕ್ಷವಾಗಿ ಹೊಂದಿತು. ಮುನಿಗಳು ಧ್ಯಾನಯೋಗದ ಸಿದ್ಧಿಗಿಂತ ಮೊದಲು ಪ್ರತಿಮೆಯನ್ನು ಪೂಜಿಸುತ್ತಾರೆ, ಮತ್ತು ಮಾನಸವಾಸನಾಮಯವಾದ ಪರಮಾತ್ಮನ ಪ್ರತಿಬಿಂಬವನ್ನು ಹೃದಯದಲ್ಲಿ ಧರಿಸುತ್ತಾರೆ. ಧ್ಯಾನಯೋಗವು ಪರಿಪಕ್ವವಾದ ಮೇಲೆ ತಮ್ಮ ಇಷ್ಟದೇವತೆಯಾದ ಶ್ರೀಹರಿಯ ರೂಪವನ್ನು ಪ್ರತ್ಯಕ್ಷವಾಗಿ ಸ್ಪಷ್ಟವಾಗಿ ನೋಡುತ್ತಾರೆ. ಅದರಂತೆ ಆಚಾರ್ಯರು ಸ್ನಾನಕ್ಕಾಗಿ ದಡಕ್ಕೆ ಬಂದಾಗ ಆ ಸರೋವರದ ನೀರು ಅವರ ಪ್ರತಿಬಿಂಬವನ್ನು (ನೆರಳನ್ನು) ತನ್ನೊಳಗೆ ಧರಿಸಿತು. ಅವರು ನೀರಿನಲ್ಲಿ ಮುಳುಗುವಾಗ ಅವರ ನಿಜವಾದ ರೂಪವನ್ನೇ ಹೃದಯದಲ್ಲಿ ಧರಿಸಿತು. ಇದು ಮುನಿಗಳು ಧ್ಯಾನದ ಪರಿಪಕ್ವತೆಗಿಂತ ಮೊದಲು ತಮ್ಮ ಹೃದಯದಲ್ಲಿ ವಾಸನಾಮಯವಾದ ಪರಮಾತ್ಮನ ರೂಪವನ್ನು ಧರಿಸಿ ಆನಂತರ ಸಾಕ್ಷಾತ್ ಪರಮಾತ್ಮನನ್ನೇ ಹೃದಯದಲ್ಲಿ (ಧರಿಸಿದಂತಾಯಿತು) ನೋಡಿದಂತಾಯಿತು ಎಂದು ಭಾವ.

Rarest Archiver

ಘನರಸಾನಾಂ ನಿಕರಃ, ಘನರಸ=ಮೋಡದ ಸಾರ, ನೀರು. ಮೇಘ-ಪುಷ್ಪಂ ಘನರಸಃ—ಅಮರ. ಮುನೀನಾಂ ಗಣಃ, ಭೂಯಾನ್ ಚ ಅಸೌ ಸ್ನೇಹಶ್ಚ, ಭೂಯಃಸ್ನೇಹಃ ಅಸ್ಯ ಅಸ್ತೀತಿ ಭೂಯಃಸ್ನೇಹವಾನ್, ಅಖಿಲಂ ಜಾನಾತೀತಿ ಅಖಿಲಜ್ಞಃ ತಸ್ಯ, ಅಪರೋಕ್ಷಸ್ಯ ಭಾವಃ ಆಪರೋಕ್ಷ್ಯಂ ತೇನ, ಸಜ್ಜನಾನಾಂ ಇಷ್ಟಂ, ತತ್;

ಅಲಭತ ಅಲಭೇತಾಂ ಅಲಭಂತ ಇತ್ಯಾದಿ. ಡುಲಭಷ್ (ಲಭ್) ಪ್ರಾಪ್ತೌ ಆತ್ಮನೇ. ಲಙ್.

ಸ್ನಾನಾನಂತರ ಆಚಾರ್ಯರು ಸಾಲಿಗ್ರಾಮಗಳಿಗೆ ಅಭಿಷೇಕವನ್ನು ಮಾಡಿದರು—

ಅಪರಿಮಿತಮುನೀಷಸ್ಯೋಲ್ಲಸಚ್ಛಂಖಬಾಹೋ
ರಥಚರಣಿಶಿಲಾನಾಂ ತನ್ವತೋಽತ್ರಾಭಿಷೇಕಂ ।
ಪ್ರತಿತನವ ಉದಾರಾಸ್ತಾಸ್ವಲಂ ಸನ್ನಿಧಾತು-
ಸ್ತನವ ವಿರೇಜುಃ ಪಾಂಚಜನ್ಯಪ್ರಿಯಸ್ಯ ॥ ೨೮ ॥

ಅತ್ರ ರಥಚರಣಿಶಿಲಾನಾಂ ಅಭಿಷೇಕಂ ತನ್ವತಃ ಉಲ್ಲಸಚ್ಛಂಖ-ಬಾಹೋಃ ಅಪರಿಮಿತಮುನೀಷಸ್ಯ ಉದಾರಾಃ ಪ್ರತಿತನವಃ ತಾಸು ಅಲಂ ಸನ್ನಿಧಾತುಃ ಪಾಂಚಜನ್ಯಪ್ರಿಯಸ್ಯ ತನವಃ ಇವ ವಿರೇಜುಃ.

ಅತ್ರ = ಈ ಸರಸ್ಸಿನಲ್ಲಿ, ರಥಚರಣಿಶಿಲಾನಾಂ = ಶಾಲಗ್ರಾಮ (ಸುದರ್ಶನ)ಗಳಿಗೆ, ಅಭಿಷೇಕಂ ತನ್ವತಃ = ಅಭಿಷೇಕಸ್ನಾನವನ್ನು ಮಾಡಿಸುತ್ತಿರುವ, ಉಲ್ಲಸತ್-ಶಂಖಬಾಹೋಃ = ಪ್ರಕಾಶಮಾನವಾದ ಶಂಖವು ಕೈಯಲ್ಲಿ ಉಳ್ಳ, ಅಪರಿಮಿತಮುನೀಷಸ್ಯ = ಶ್ರೀಪೂರ್ಣಪ್ರಜ್ಞರ, ಉದಾರಾಃ ಪ್ರತಿತನವಃ = ಸುಂದರವಾದ ಪ್ರತಿಬಿಂಬಗಳು, ತಾಸು = ಆ ಶಿಲೆಗಳಲ್ಲಿ, ಅಲಂ ಸನ್ನಿಧಾತುಃ = ಅತಿಶಯವಾಗಿ ಸನ್ನಿಧಾನವನ್ನು ಇಟ್ಟಿರುವ, ಪಾಂಚ-ಜನ್ಯಪ್ರಿಯಸ್ಯ = ಪಾಂಚಜನ್ಯಶಂಖವು ಇಷ್ಟವಾಗಿಉಳ್ಳ ಶ್ರೀಹರಿಯ, ಉದಾರಾಃ ತನವಃ ಇವ = ಸುಂದರವಾದ ಬಿಂಬದೇಹಗಳಂತೆ, ವಿರೇಜುಃ = ಶೋಭಿಸಿದುವು.

Rarest Archiver

ಆಚಾರ್ಯರು ಸರೋವರದ ದಡದಲ್ಲಿ ಕುಳಿತು ಶಂಖವನ್ನು ಬಲಗೈಯಲ್ಲಿ ಹಿಡಿದುಕೊಂಡು ಸಾಲಿಗ್ರಾಮ ಸುದರ್ಶನಶಿಲೆಗಳಿಗೆ ಅಭಿಷೇಕವನ್ನು ಮಾಡುತ್ತಿದ್ದರು. ಆಗ ಆಚಾರ್ಯರ ಪ್ರತಿಬಿಂಬವು ಆ ಶಿಲೆಗಳಲ್ಲಿ ಚೆನ್ನಾಗಿ ಕಾಣಿಸುತ್ತಿತ್ತು. ಈ ಪ್ರತಿಬಿಂಬಗಳು ಆ ಸಾಲಿಗ್ರಾಮದಲ್ಲಿ ಚೆನ್ನಾಗಿ ಸನ್ನಿಧಾನವನ್ನಿಟ್ಟಿರುವ ತನ್ನ ಬಾಹುವಿನಲ್ಲಿ ಪಾಂಚಜನ್ಯಶಂಖಧಾರಿಯಾದ ಶ್ರೀಹರಿಯ ರೂಪಗಳೋ ಎಂಬಂತೆ ಪ್ರಕಾಶಿಸಿದುವು. ಸಾಲಿಗ್ರಾಮಶಿಲೆಗಳಿಗೆ ಅಭಿಷೇಕಮಾಡುವಾಗ ಕೈಯಲ್ಲಿ ಶಂಖವನ್ನು ಧರಿಸಿದ ಆಚಾರ್ಯರ ಪ್ರತಿಬಿಂಬಗಳು ಆ ಶಿಲೆಗಳಲ್ಲಿ ಕಂಡವು. ಅವುಗಳು ಪಾಂಚಜನ್ಯಶಂಖವನ್ನು ಕೈಯಲ್ಲಿ ಧರಿಸಿದ ಹರಿಯ ರೂಪಗಳಂತೆ ತೋರಿದುವು ಎಂದು ಭಾವ.

ಅಪರಿಮಿತಾ ಮನೀಷಾ ಯಸ್ಯ, ತಸ್ಯ; ಉಲ್ಲಸನ್ ಚ ಅಸೌ ಶಂಖಶ್ಚ, ಉಲ್ಲಸಚ್ಛಂಖಃ ಬಾಹೌ ಯಸ್ಯ ಸಃ ಉಲ್ಲಸಚ್ಛಂಖಬಾಹುಃ ತಸ್ಯ, ರಥಚರಣಾಃ (ಚಕ್ರಾಣಿ=ಚಕ್ರಗಳು) ಆಸು ಸಂತೀತಿ, ರಥಚರಣ್ಯಶ್ಚ ತಾಃ ಶಿಲಾಶ್ಚ ರಥಚರಣಿಶಿಲಾಃ ತಾಸಾಂ, ಪಾಂಚಜನ್ಯಃ ಪ್ರಿಯಃ ಯಸ್ಯ ಸಃ ತಸ್ಯ.

ವಿ+ರೇಜುಃ, ರರಾಜ ರರಾಜತುಃ ರೇಜತುಃ ರರಾಜುಃ ರೇಜುಃ, ಇತ್ಯಾದಿ. ರಾಜೃ (ರಾಜ್)ದೀಪ್ತೌ ಪರ. ಲಿಟ್.

ನಿರ್ಮಾಲ್ಯಾಭಿಷೇಕದ ತೀರ್ಥಪ್ರಾಶನದ ಮಹಿಮೆಯು ಹೀಗಿದೆ—

ಅಭಿದಧತಿ ಮುನೀಂದ್ರಾ ದ್ವಾದಶಾಬ್ದೋಪವಾಸ-
ಪ್ರತಿಮಫಲಮಲಂ ಯತ್ಸೇವನಂ ಭಕ್ತಿಯುಕ್ತಂ।
ಅಧಿಕಮಮರನದ್ಯಾದ್ಯಾಪ್ಲವಾದ್ಧನ್ಯಮಾನ್ಯಾ-
ದಪಿಬದಲವಬೋಧೋ ವಿಷ್ಣುಪಾದೋದಕಂ ತತ್ ॥ ೨೯ ॥

ಮುನೀಂದ್ರಾಃ ಭಕ್ತಿಯುಕ್ತಂ ಯತ್ಸೇವನಂ ಅಲಂ ದ್ವಾದಶಾಬ್ದೋಪವಾಸಪ್ರತಿಮಫಲಂ, ಧನ್ಯಮಾನ್ಯಾತ್ ಅಮರನದ್ಯಾದ್ಯಾಪ್ಲವಾತ್ ಅಧಿಕಂ, ಅಭಿದಧತಿ, ಅಲವಬೋಧಃ, ತತ್ ವಿಷ್ಣುಪಾದೋದಕಂ ಅಪಿಬತ್.

ಮುನೀಂದ್ರಾಃ=ಮುನಿಶ್ರೇಷ್ಠರು, ಭಕ್ತಿಯುಕ್ತಂ=ಭಕ್ತಿಪೂರ್ವಕವಾದ, ಯತ್‌ಸೇವನಂ=ಯಾವ ವಿಷ್ಣುಪಾದೋದಕದ ಸೇವೆಯನ್ನು,

ಅಲಂ = ಚೆನ್ನಾಗಿ, ದ್ವಾದಶಾಬ್ದ - ಉಪವಾಸಪ್ರತಿಮಫಲಂ = ಹನ್ನೆರಡು ವರ್ಷಗಳಲ್ಲಿ ನಿತ್ಯೋಪವಾಸಕ್ಕೆ ಸಮಾನವಾದ ಫಲವುಳ್ಳದ್ದನ್ನಾಗಿಯೂ, ಧನ್ಯಮಾನ್ಯಾತ್ = ಪುಣ್ಯವಂತರಾದ ಮಹನೀಯರಿಂದ ಗೌರವಿಸಲ್ಪಡುವ, ಅಮರನದ್ಯಾದ್ಯಾಪ್ಲವಾತ್ = ಗಂಗಾನದಿಯೇ ಮೊದಲಾದವುಗಳಲ್ಲಿ ಸ್ನಾನ ಮಾಡುವುದಕ್ಕಿಂತಲೂ, ಅಧಿಕಂ = ಮಹತ್ವವುಳ್ಳದ್ದನ್ನಾಗಿ, ಅಭಿದಧತಿ = ಹೇಳುತ್ತಾರೋ, ಅಲವಬೋಧಃ = ಶ್ರೀಪೂರ್ಣಪ್ರಜ್ಞರು, ತತ್ ವಿಷ್ಣು-ಪಾದೋದಕಂ = ಅಂತಹ ವಿಷ್ಣುಪಾದೋದಕರೂಪವಾದ ತೀರ್ಥವನ್ನು, ಅಪಿಬತ್ = ಕುಡಿದರು.

ಸಮುದ್ರವನ್ನು ಸೇರದಿರುವ ನದಿಗಳ ನೀರಿನ ಸ್ನಾನವು ಮೂರುರಾತ್ರಿಗಳ ಉಪವಾಸದ ಫಲವನ್ನು ಕೊಡುತ್ತದೆ. ಸಮುದ್ರಗಾಮಿಯಾದ ನದಿಗಳ ಸ್ನಾನವು ಹದಿನೈದು ದಿನಗಳ ಉಪವಾಸಫಲವನ್ನೂ, ಸಮುದ್ರಸ್ನಾನವು ಒಂದು ತಿಂಗಳ ಉಪವಾಸದ ಫಲವನ್ನೂ, ಗೋದಾವರೀ ಸ್ನಾನವು ಆರುತಿಂಗಳ ಉಪವಾಸದ ಫಲವನ್ನೂ. ಗಂಗಾಸ್ನಾನವು ವರ್ಷೋಪವಾಸದ ಫಲವನ್ನು ಕೊಡುತ್ತದೆಯೆಂದೂ ವಿಷ್ಣುಪಾದೋದಕವನ್ನು ಸೇವಿಸಿದರೆ ಹನ್ನೆರಡುವರ್ಷಗಳ ಉಪವಾಸಫಲವು ದೊರಕುತ್ತದೆ—ಎಂದೂ ಮುನಿಶ್ರೇಷ್ಠರು ಹೇಳುತ್ತಾರೆ. ಹೀಗೆ ಹಿರಿಯರು ವಿಷ್ಣುಪಾದೋದಕದ ಮಹಿಮೆಯನ್ನು ಬಹಳವಾಗಿ ಹೊಗಳಿದ್ದಾರೆ. ವಿಷ್ಣುಪಾದೋದಕವು ಗಂಗಾದಿ ಸಮಸ್ತನದಿಗಳ ಸ್ನಾನಕ್ಕಿಂತಲೂ ಹೆಚ್ಚುಫಲವನ್ನು ಕೊಡುತ್ತದೆಯೆಂದು ಹೇಳಿದ್ದಾರೆ. ಶ್ರೀಮಧ್ವಾಚಾರ್ಯರು ಇಂತಹ ವಿಷ್ಣುಪಾದೋದಕವನ್ನು ಸ್ವೀಕರಿಸಿದರು, ಪ್ರಾಶನಮಾಡಿದರು.

ಮುನೀನಾಂ ಇಂದ್ರಾಃ, ದ್ವಾದಶ ಚ ತೇ ಅಬ್ದಾಶ್ಚ, ದ್ವಾದಶಾ-ಬ್ದೇಷು ಉಪವಾಸಃ ದ್ವಾದಶಾಬ್ದೋಪವಾಸೇನ ಪ್ರತಿಮಾ ಯಸ್ಯ ತತ್, ದ್ವಾದಶಾಬ್ದೋಪವಾಸಪ್ರತಿಮಂ ಫಲಂ ಯಸ್ಯ ತತ್, ಯಸ್ಯ ಸೇವನಂ ಯತ್ಸೇವನಂ, ಭಕ್ತ್ಯಾ ಯುಕ್ತಂ ಭಕ್ತಿಯುಕ್ತಂ, ಅಮರಾಣಾಂ ನದೀ, ಅಮರನದೀ ಆದ್ಯಾ ಯಾಸಾಂ ತಾಃ, ಅಮರನದ್ಯಾದ್ಯಾಸು ಆಪ್ಲವಃ ಅಮರನದ್ಯಾದ್ಯಾಪ್ಲವಃ ತಸ್ಮಾತ್; ಧನ್ಯೈಃ ಮಾನ್ಯಃ ತಸ್ಮಾತ್, ನ ಲವಃ

Rarest Archiver

ಅಲವಃ, ಅಲವಃ ಬೋಧಃ ಯಸ್ಯ ಸಃ, ವಿಷ್ಣೋಃ ಪಾದಯೋಃ ಉದಕಂ ವಿಷ್ಣುಪಾದೋದಕಂ ತತ್.

ಅಭಿ+ದಧತಿ, ದಧಾತಿ ಧತ್ತಃ ದಧತಿ ಇತ್ಯಾದಿ ಡುಧಾಞ್ (ಧಾ) ಧಾರಣಪೋಷಣಯೋಃ ಪರ ಲಟ್. ಅಪಿಬತ್ ಅಪಿಬತಾಂ ಅಪಿಬನ್ ಇತ್ಯಾದಿ. ಪಾ ಪಾನೇ ಲಙ್. ಸಾರ್ವಧಾತುಕ (ಲಟ್ ಲೋಟ್ ಲಙ್ ವಿಧಿಲಙ್) ಲಕಾರಗಳಲ್ಲಿ ಪಾಘ್ರಾ ... ಪಿಬಜಿಘ್ರ- (7-3-78) ಇತ್ಯಾದಿ ಸೂತ್ರದಿಂದ ಪಿಬಾದೇಶ.

ಆಚಾರ್ಯರು ಊರ್ಧ್ವಪುಂಡ್ರ, ಚಕ್ರಶಂಖಾದಿಮುದ್ರೆಗಳನ್ನು ಧರಿಸಿದರು—

ತರಣಿಭಿರಿವ ಗೌರೈರೂರ್ಧ್ವಪುಂಡ್ರೈರ್ದ್ವಿಷಡ್ಭಿಃ
ಸದರಪರಮಚಕ್ರೋದೀರ್ಣತೇಜಾ ಹರೀಷ್ಟಃ ।
ಮುರರಿಪುವಿಮುಖಾನಾಂ ದುಸ್ಸಹೋ ದೇಹಭಾಜಾಂ
ಲಯಸಮಯ ಇವಾನ್ಯೋ ಮಾನ್ಯಧೀರಾಬಭಾಸೇ ॥ ೩೦ ॥

ಸದರಪರಮಚಕ್ರೋದೀರ್ಣತೇಜಾಃ ಹರೀಷ್ಟಃ ಮುರರಿಪುವಿಮುಖಾನಾಂ ದೇಹಭಾಜಾಂ ದುಸ್ಸಹಃ ಮಾನ್ಯಧೀಃ ತರಣಿಭಿಃ ಇವ ಗೌರೈಃ ದ್ವಿಷಡ್ಭಿಃ ಊರ್ಧ್ವಪುಂಡ್ರೈಃ ಅನ್ಯಃ ಲಯಸಮಯಃ ಇವ ಆಬಭಾಸೇ.

ಸದರ = ಶಂಖದಿಂದಸಹಿತವಾದ, ಅರೆಕಾಲುಗಳಿಂದ ಕೂಡಿದ, ಪರಮಚಕ್ರ = ಉತ್ತಮವಾದ ಸುದರ್ಶನಚಕ್ರಚಿಹ್ನೆಯಿಂದ, ಉದೀರ್ಣತೇಜಾಃ = ಉತ್ಕೃಷ್ಟವಾಗಿರುವ (ಪೂರ್ಣವಾದ) ತೇಜಸ್ಸುಳ್ಳ, ಹರೀಷ್ಟಃ = ಶ್ರೀಮನ್ನಾರಾಯಣನಿಗೆ ಪ್ರಿಯರಾದ, ಮುರರಿಪುವಿಮುಖಾನಾಂ = ಶ್ರೀಹರಿಗೆ ವಿರುದ್ಧರಾದ, ದೇಹಭಾಜಾಂ = ಜೀವರಿಗೆ, ದುಸ್ಸಹಃ = ಸಹಿಸಲಾಗದ, ಮಾನ್ಯಧೀಃ = ಪೂಜ್ಯವಾದ ಬುದ್ಧಿಯುಳ್ಳ ಶ್ರೀಮಧ್ವಾಚಾರ್ಯರು, ತರಣಿಭಿಃ ಇವ = ಸೂರ್ಯರುಗಳಿಂದ ಎಂಬಂತೆ, ಗೌರೈಃ = ಬೆಳ್ಳಗಿರುವ, ದ್ವಿಷಡ್ಭಿಃ ಊರ್ಧ್ವಪುಂಡ್ರೈಃ = ಹನ್ನೆರಡು ಸಂಖ್ಯೆಯ ಮೇಲ್ಮುಖವಾದ ನಾಮಗಳಿಂದ, ಅನ್ಯಃ ಲಯಸಮಯಃ ಇವ = ಮತ್ತೊಂದು ಪ್ರಲಯಕಾಲದಂತೆ, ಆಬಭಾಸೇ = ಪ್ರಕಾಶಿಸಿದರು.

Rarest Archiver

ಆಚಾರ್ಯರು ಹನ್ನೆರಡುಸೂರ್ಯರಂತೆ ಶುಭ್ರವಾದ ಗೋಪೀ ಚಂದನದ ಹನ್ನೆರಡು ಊರ್ಧ್ವಪುಂಡ್ರಗಳನ್ನು ಧರಿಸಿದರು. ಶಂಖಚಕ್ರಗಳ ಮುದ್ರೆಗಳನ್ನು ಧರಿಸಿ ಉತ್ಕೃಷ್ಟವಾದ ಕಾಂತಿಯನ್ನು ಪಡೆದರು. ಹೀಗೆ ಪರಮಾತ್ಮನಿಗೆ ಇಷ್ಟರಾದ, ಪರಮಾತ್ಮನ ವಿರೋಧಿಗಳಿಗೆ ಸಹಿಸಲು ಅಸಾಧ್ಯರಾದ ಆಚಾರ್ಯರು ಬೇರೊಂದು ಪ್ರಲಯಕಾಲದ ಹಾಗೆ ಪ್ರಕಾಶಿಸಿದರು. ಸ್ನಾನಾನಂತರ ಗೋಪಿಚಂದನದಿಂದ ಹನ್ನೆರಡು ಊರ್ಧ್ವಪುಂಡ್ರಗಳನ್ನು ಧರಿಸಿ ಶಂಖಚಕ್ರಚಿಹ್ನೆಯನ್ನು ಧರಿಸಿದರು. ವಿಷ್ಣುದ್ವೇಷಿಗಳಿಗೆ ಇಂತಹ ಆಚಾರ್ಯರನ್ನು ಕಂಡಾಗ ದ್ವೇಷವು ಹುಟ್ಟುತ್ತಿತ್ತು. ಪ್ರಲಯಕಾಲದಲ್ಲಿಯೂ ಹನ್ನೆರಡು ಸೂರ್ಯರು ಏಕಕಾಲದಲ್ಲಿ ಪ್ರಕಾಶಿಸುತ್ತಾರೆ. ಒಳ್ಳೆಯ ಅರೆಕಾಲುಗಳುಳ್ಳ ಲೋಕಸಂಹಾರಕವಾದ ಸುದರ್ಶನಚಕ್ರವು ತನ್ನ ತೇಜಸ್ಸನ್ನು ಆಗ ಎಲ್ಲಾಕಡೆ ಹರಡಿರುತ್ತದೆ. ಪ್ರಲಯವು ಪರಮಾತ್ಮನ ಸಂಕಲ್ಪದಂತೆ ನಡೆಯುವುದರಿಂದ ಅವನಿಗೆ ಪ್ರಿಯವಾದುದು. ತಮೋಯೋಗ್ಯರಾದ ವಿಷ್ಣುದ್ವೇಷಿಗಳಿಗೆ ಸಹಿಸಲು ಅಸಾಧ್ಯವಾದುದು. ಪ್ರಲಯಕಾಲದಲ್ಲಿ ದುಷ್ಟರು ಅಂಧಂತಮಸ್ಸನ್ನು ಹೊಂದುವರು. (ಹೀಗೆ ಆಚಾರ್ಯರಿಗೆ ಪ್ರಲಯಸಾಮ್ಯವಿದೆ.)

ಊರ್ಧ್ವಾನಿ ಚ ತಾನಿ ಪುಂಡ್ರಾಣಿ ಚ ಊರ್ಧ್ವಪುಂಡ್ರಾಣಿ. ದ್ವಿಗುಣಿತಾನಿ ಷಟ್ ದ್ವಿಷಟ್ ತೈಃ ದ್ವಿಷಡ್ಭಿಃ, ದರೇಣ ಸಹಿತಂ ಸದರಂ (ಸಂತಿ ಅರಾಣಿ ಯಸ್ಯ ತತ್); ಪರಮಂ ಚ ತತ್ ಚಕ್ರಂ ಚ ಪರಮಚಕ್ರಂ, ಸದರಂ ಚ ತತ್ ಪರಮಚಕ್ರಂ ಚ ಸದರಪರಮಚಕ್ರಂ, ತೇನ ಉದೀರ್ಣಂ ತೇಜಃ ಯಸ್ಯ ಸಃ, ಹರೇಃ ಇಷ್ಟಃ, ಮುರಸ್ಯ ರಿಪುಃ, ಮುರರಿಪೋಃ ವಿಮುಖಾಃ ತೇಷಾಂ, ದುಃಖೇನ ಸೋಢುಂ ಶಕ್ಯಃ ದುಸ್ಸಹಃ, ದೇಹಂ ಭಜಂತೀತಿ ದೇಹಭಾಜಃ ತೇಷಾಂ, ಲಯಸ್ಯ ಸಮಯಃ, ಮಾನ್ಯಾಃ ಧೀಃ ಯಸ್ಯ ಸಃ.

ಆ + ಬಭಾಸೇ ಬಭಾಸಾತೇ ಬಭಾಸಿರೇ ಭಾಸೃ ದೀಪ್ತೌ ಆತ್ಮನೇ ಲಿಟ್.

ಸ್ನಾನಮಾಡಿ ಪೂಜಾಸ್ಥಳಕ್ಕೆ ಬರುತ್ತಿರುವ ಆಚಾರ್ಯರಿಗೆ ಜನರು ತಾವಾಗಿಯೇ ದೂರಸರಿದು ಪಕ್ಕದಲ್ಲಿ ನಿಂತು ದಾರಿಯನ್ನು ಬಿಡುತ್ತಿದ್ದರು—

Rarest Archiver

ಸಮಧಿಕಧಿಷಣಸ್ಯ ಪ್ರೇಕ್ಷಮಾಣೋ ಜನೌಘಃ
ಪ್ರಕೃತಿಮಧುರಮಾಸ್ಯವ್ಯಾಜಪೂರ್ಣೇಂದುಬಿಂಬಂ ।
ಅಮುಂಚದಪಸರೇತಿ ಶ್ರಾವಕೋಕ್ತೇಃ ಪುರಾಸ್ಮಿನ್
ಪ್ರಚಲತಿ ಪದವೀಂ ತಾಂ ಪ್ರಾಂಜಲಿಸ್ತೂರ್ಣಮಾರಾತ್ ॥೩೧॥

ಸಮಧಿಕಧಿಷಣಸ್ಯ ಪ್ರಕೃತಿಮಧುರಂ ಆಸ್ಯವ್ಯಾಜಪೂರ್ಣೇಂದುಬಿಂಬಂ ಪ್ರೇಕ್ಷಮಾಣಃ ಜನೌಘಃ 'ಅಪಸರ' ಇತಿಶ್ರಾವಕೋಕ್ತೇಃ ಪುರಾ ಅಸ್ಮಿನ್ ಪ್ರಚಲತಿ ಪ್ರಾಂಜಲಿಃ ತೂರ್ಣಂ ಆರಾತ್ ತಾಂ ಪದವೀಂ ಅಮುಂಚತ್.

ಸಮಧಿಕಧಿಷಣಸ್ಯ = ಶ್ರೀಪೂರ್ಣಪ್ರಜ್ಞರ, ಪ್ರಕೃತಿಮಧುರಂ = ಸ್ವಭಾವದಿಂದ ಸುಂದರವಾದ, ಆಸ್ಯವ್ಯಾಜಪೂರ್ಣೇಂದುಬಿಂಬಂ = ಮುಖವೆಂಬ ನೆಪವುಳ್ಳ ಪೂರ್ಣಚಂದ್ರಮಂಡಲವನ್ನು, ಪ್ರೇಕ್ಷಮಾಣಃ = ನೋಡುತ್ತಿರುವ, ಜನೌಘಃ = ಜನರ ಗುಂಪು, ಅಪಸರ ಇತಿ = ಪಕ್ಕಕ್ಕೆ ಸರಿ ಎಂದು, ಶ್ರಾವಕೋಕ್ತೇಃ ಪುರಾ = ಶಿಷ್ಯನ ಮಾತಿಗಿಂತ ಮೊದಲೇ, ಅಸ್ಮಿನ್ ಪ್ರಚಲತಿ ಸತಿ = ಈ ಮಧ್ವಾಚಾರ್ಯರು ಹೊರಡುತ್ತಿರಲು, ಪ್ರಾಂಜಲಿಃ ಸನ್ = ಕೈಮುಗಿದುದಾಗಿ, ತೂರ್ಣಂ = ಬೇಗನೇ, ಆರಾತ್ = ದೂರದಲ್ಲಿ, ತಾಂ = ಆ ಮಧ್ವರು ಹೋಗುವ, ಪದವೀಂ = ದಾರಿಯನ್ನು, ಅಮುಂಚತ್ = ಬಿಟ್ಟಿತು.

ಶ್ರೀಮಧ್ವಾಚಾರ್ಯರ ಸ್ವಭಾವಮನೋಹರವಾದ ಮುಖವೆಂಬ ಪೂರ್ಣಚಂದ್ರಮಂಡಲವನ್ನು ನೋಡುತ್ತಿರುವ, ಜನಸಮುದಾಯವು ಆಚಾರ್ಯರು ಸ್ನಾನಮಾಡಿ ಪೂಜಾಗೃಹಕ್ಕೆ ಬರುತ್ತಿರುವಾಗ 'ಎಲೈ ! ಜನರೇ, ದಾರಿ ಬಿಟ್ಟು ದೂರಕ್ಕೆ ಸರಿಯಿರಿ' ಎಂದು ಶಿಷ್ಯರು ಹೇಳುವ ಮೊದಲೇ ಕೈಮುಗಿದುಕೊಂಡು ಬೇಗನೆ ದೂರದಲ್ಲಿ ಅವರಿಗೆ ಮಾರ್ಗವನ್ನು ಬಿಟ್ಟುಕೊಟ್ಟಿತು. ಮಹಾತ್ಮರಾದ ಆಚಾರ್ಯರನ್ನು ಕಂಡಕೂಡಲೇ ಜನರಿಗೆ ಸ್ವಾಭಾವಿಕವಾಗಿ ಭಕ್ತಿಗೌರವಗಳು ಹುಟ್ಟಿ ಅವರು ಆಚಾರ್ಯರಿಗೆ ದಾರಿಬಿಟ್ಟು ದೂರಸರಿದರು ಎಂದು ಭಾವ.

ಸಮ್ಯಕ್ ಅಧಿಕಾ ಧಿಷಣಾ ಯಸ್ಯ ಸಃ ತಸ್ಯ, ಪ್ರಕೃತ್ಯಾ ಮಧುರಂ ಪ್ರಕೃತಿಮಧುರಂ, ಆಸ್ಯಂ ಇತಿ ವ್ಯಾಜಃ ಯಸ್ಯ ತತ್, ಪೂರ್ಣಶ್ಚಾಸೌ

Rarest Archiver

ಇಂದುಶ್ಚ ಪೂರ್ಣೇಂದುಃ ತಸ್ಯ ಬಿಂಬಂ, ಆಸ್ಯವ್ಯಾಜಂ ಚ ತತ್ ಪೂರ್ಣೇಂದು ಬಿಂಬಂ ಚ ತತ್ (ಅದನ್ನು), ಶ್ರಾವಕಸ್ಯ ಉಕ್ತಿಃ ತಸ್ಯಾಃ, ಪುರಾ ಎಂಬುದು ದಿಗ್‌ವಾಚಕಶಬ್ದವಾದುದರಿಂದ ಅನ್ಯಾರಾದಿತರರ್ತೇ ದಿಕ್‌ಶಬ್ದ ...., 2–3–29 ಸೂತ್ರದಿಂದ ಪಂಚಮೀ, ಪ್ರಬದ್ಧಃ ಅಂಜಲಿಃ ಯೇನ ಸಃ ಪ್ರಾಂಜಲಿಃ, ಆರಾತ್ = ದೂರ, ಸಮೀಪ, 'ಆರಾದ್ದೂರ ಸಮೀಪಯೋಃ' — ಅಮರ.

ಅಮುಚತ್ ಅಮುಚತಾಂ ಅಮುಚನ್ ಇತ್ಯಾದಿ ಮುಚ್ಲೃ-ಮೋಚನೇ, ಸಕ, ಪರಸ್ಮೈ, ಲುಙ್.

ಆಚಾರ್ಯರ ಪಾದಪ್ರಕ್ಷಾಲನಜಲವನ್ನು ಭಕ್ತರು ಶಿರಸ್ಸಿನಲ್ಲಿ ಧರಿಸಿದರು —

ಗುರುಚರಣಸರೋಜದ್ವಂದ್ವನಿರ್ಣೇಜನಾಂಭೋ
ದಧತಿ ಜನನಿಕಾಯೇ ಸರ್ವಮುರ್ವೀಗತಂ ಚ ।
ಅವನಿರನಭಿನಂದಿನ್ಯಪ್ಯದಶ್ಚಕ್ಷಮೇಽಸೌ
ಕಥಮಪಿ ಕಥಮೇವ ಸ್ಯಾತ್ ಕ್ಷಮಾಖ್ಯಾನ್ಯಥಾಽಸ್ಯಾಃ ॥೩೨॥

ಜನನಿಕಾಯೇ ಉರ್ವೀಗತಂ ಗುರುಚರಣಸರೋಜದ್ವಂದ್ವನಿರ್ಣೇ-ಜನಾಂಭಃ ಸರ್ವಂ ಚ ದಧತಿ ಅಸೌ ಅವನಿಃ ಅನಭಿನಂದಿನೀ ಅಪಿ ಅದಃ ಕಥಂ ಅಪಿ ಚಕ್ಷಮೇ, ಅನ್ಯಥಾ ಅಸ್ಯಾಃ ಕ್ಷಮಾಖ್ಯಾ ಕಥಂ ಏವ ಸ್ಯಾತ್.

ಜನನಿಕಾಯೇ = ಜನರ ಗುಂಪು, ಉರ್ವೀಗತಂ = ನೆಲದ ಮೇಲೆ ಬಿದ್ದಿರುವ, ಗುರು-ಚರಣಸರೋಜದ್ವಂದ್ವ-ನಿರ್ಣೇಜನಾಂಭಃ = ಶ್ರೀಮಧ್ವ ಗುರುವರ್ಯರ ಎರಡು ಪಾದಕಮಲಗಳ ಪ್ರಕ್ಷಾಲನೋದಕವನ್ನು, ಸರ್ವಂ ಚ = ಎಲ್ಲವನ್ನೂ, ದಧತಿ ಸತಿ = ತಲೆಯ ಮೇಲೆ ಧರಿಸುತ್ತಿರಲು, ಅಸೌ ಅವನಿಃ = ಈ ಭೂಮಿಯು, ಅನಭಿನಂದಿನೀ ಅಪಿ = ಈ ಕಾರ್ಯವನ್ನು ಅಭಿನಂದಿಸದೆ (ಅನುಮೋದಿಸದೆ) ಇದ್ದವಳಾದರೂ, ಅದಃ = ಎಲ್ಲಾ ನೀರನ್ನು ಭಕ್ತರು ತಾವು ಧರಿಸುವುದನ್ನು, ಕಥಂ ಅಪಿ = ಹೇಗಾದರೂ (ಕಷ್ಟದಿಂದ), ಚಕ್ಷಮೇ = ಸಹಿಸಿಕೊಂಡಳು, ಅನ್ಯಥಾ = ಹೀಗೆ ಕ್ಷಮಿಸ

Rarest Archiver

ದಿದ್ದರೆ, ಅಸ್ಯಾಃ = ಈ ಭೂದೇವಿಗೆ, ಕ್ಷಮಾಖ್ಯಾ = ಕ್ಷಮಾ ಎಂಬ ಹೆಸರು, ಕಥಂ ಏವ ಸ್ಯಾತ್ = ಹೇಗೆ ತಾನೆ ಆದೀತು?

ಆಚಾರ್ಯರು ಸ್ನಾನಮಾಡಿ ದೇವಗೃಹಕ್ಕೆ ಬರುವಾಗ ಒಬ್ಬ ಶಿಷ್ಯನು ಅವರ ಪಾದಗಳನ್ನು ತೊಳೆದನು. ಆಗ ಅಲ್ಲಿದ್ದ ಜನರು ನೆಲದ ಮೇಲೆ ಬಿದ್ದ ಆಚಾರ್ಯರ ಪಾದಪ್ರಕ್ಷಾಲನಜಲವನ್ನೆಲ್ಲಾ ಸ್ವಲ್ಪವೂ ಉಳಿಸದೆ ತಮ್ಮ ತಲೆಗೆ ಪ್ರೋಕ್ಷಿಸಿಕೊಂಡು ಧನ್ಯರಾದರು. ತನಗೆ ಸ್ವಲ್ಪವೂ ಉಳಿಸದೆ ಸಮಸ್ತಜಲವನ್ನು ಜನರು ಉಪಯೋಗಿಸಿಕೊಂಡಿರುವುದನ್ನು ಭೂದೇವಿಯು ಅಭಿನಂದಿಸಲಿಲ್ಲ, ಅನುಮೋದಿಸಲಿಲ್ಲ. ಅವಳು ಅಸಂತುಷ್ಟ ಳಾದಳು. ಆದರೂ ಜನರ ಈ ಕಾರ್ಯವನ್ನು ಬಹಳಕಷ್ಟದಿಂದ ಸಹಿಸಿ ಕೊಂಡಳು. ಹಾಗೆ ಕ್ಷಮಿಸದಿದ್ದಲ್ಲಿ ಈ ಭೂದೇವಿಗೆ **ಕ್ಷಮಾ** ಎಂಬ ಹೆಸರು ಹೇಗೆ ಕೂಡುತ್ತದೆ? ಆಚಾರ್ಯರ ಪಾದೋದಕವನ್ನು ಒಂದು ತೊಟ್ಟೂ ಉಳಿಯದಂತೆ ಭಕ್ತರು ಧರಿಸಿದಾಗ, ತಾನೂ ಧರಿಸಬೇಕೆಂಬ ಆಸೆಯಿಂದ ಈ ಭೂದೇವಿಯು ಅಸಂತುಷ್ಟಳಾದರೂ ಕ್ಷಮಿಸಿದಳು. ಆದುದ ರಿಂದಲೇ ಕ್ಷಮಿಸುವವಳಾದುದರಿಂದ ಕ್ಷಮಾ. **(ಗೌರಿಲಾ ಕುಂಭಿನೀ ಕ್ಷಮಾ)** ಎಂಬ ಕೋಶದಂತೆ ಕ್ಷಮಾ ಎಂಬ ಅನ್ವರ್ಥವಾದ ಹೆಸರಿಗೆ ಪಾತ್ರಳಾದಳು ಎಂದು ಭಾವ.

ಚರಣಾವೇವ ಸರೋಜೇ ಚರಣಸರೋಜೇ, ಗುರೋಃ ಚರಣ-ಸರೋಜೇ ಗುರುಚರಣಸರೋಜೇ, ಗುರುಚರಣಸರೋಜಯೋಃ ದ್ವಂದ್ವಂ ಗುರುಚರಣಸರೋಜದ್ವಂದ್ವಂ, ... ದ್ವಂದ್ವಸ್ಯ ನಿರ್ಣೇಜನಂ, ... ನಿರ್ಣೇ-ಜನಸ್ಯ ಅಂಭಃ ಗುರು .... ನಾಂಭಃ ತತ್, ಜನಾನಾಂ ನಿಕಾಯಃ ತಸ್ಮಿನ್, ಉರ್ವ್ಯಾಂ ಗತಂ, ಅಭಿನಂದಿತುಂ ಶೀಲಂ ಅಸ್ಯಾಃ ಇತಿ ಅಭಿನಂದಿನೀ, ನ ಅಭಿನಂದಿನೀ ಅನಭಿನಂದಿನೀ, ಕ್ಷಮಾ ಇತಿ ಆಖ್ಯಾ ಯಸ್ಯಾಃ ಸಾ,

ಚಕ್ಷಮೇ ಚಕ್ಷಮಾತೇ ಚಕ್ಷಮಿರೇ, ಚಕ್ಷಮಿಷೇ ಚಕ್ಷಂಸೇ ಚಕ್ಷಮಾಥೇ ಚಕ್ಷಮಿಧ್ವೇ ಚಕ್ಷಂಧ್ವೇ, ಚಕ್ಷಮೇ ಚಕ್ಷಮಿವಹೇ ಚಕ್ಷಣ್ವಹೇ ಚಕ್ಷಮಿಮಹೇ ಚಕ್ಷಣ್ಮಹೇ. ಕ್ಷಮೂಷ್ (ಕ್ಷಮ್) ಸಹನೇ ಸಕರ್ಮಕ. ವೇಟ್. ಆತ್ಮ. ಲಿಟ್.

Rarest Archiver

ಆಚಾರ್ಯರ ಪೂಜೆಗೆ ಒಬ್ಬ ಯತಿಯು ಅರ್ಘ್ಯೋದಕವನ್ನು ತಂದರು —

ಅವಿದಿತರಸಭೇದಂ ಶೀತಲಂ ಲಘ್ವಗಂಧಂ
ವಿಮಲಮಮಲಪಾಣಿಃ ಪಾಣಿಜೈರಪ್ರವಿಷ್ಟಂ ।
ವದನಪವನಭೀತ್ಯಾ ಪಾರ್ಶ್ವತೋ ಬಿಭ್ರದಗ್ರ್ಯಂ
ಕಮಥ ಕರಕಪೂರ್ಣಂ ಸಂಯಮೀಹಾನಿನಾಯ ॥ ೩೩ ॥

ಅಥ ಅಮಲಪಾಣಿಃ ಸಂಯಮೀ ವದನಪವನಭೀತ್ಯಾ ಪಾರ್ಶ್ವತಃ ಬಿಭ್ರತ್ ಸನ್ ಅವಿದಿತರಸಭೇದಂ ಶೀತಲಂ ಲಘು ಅಗಂಧಂ ವಿಮಲಂ ಪಾಣಿಜೈಃ ಅಪ್ರವಿಷ್ಟಂ ಕರಕಪೂರ್ಣಂ ಅಗ್ರ್ಯಂ ಕಂ ಇಹ ಆನಿನಾಯ.

ಅಥ = ತರುವಾಯ, ಅಮಲಪಾಣಿಃ = ಸ್ವಚ್ಛವಾದ ಕೈಯುಳ್ಳ, ಸಂಯಮೀ = ಜಿತೇಂದ್ರಿಯರಾದ ಒಬ್ಬ ಸನ್ಯಾಸಿಗಳು, ವದನಪವನಭೀತ್ಯಾ = ಬಾಯಿಯ ಗಾಳಿಯ ಹೆದರಿಕೆಯಿಂದ, ಪಾರ್ಶ್ವತಃ = ಒಂದು ಪಕ್ಕದಲ್ಲಿ, ಬಿಭ್ರತ್ (ಸನ್) = ಹಿಡಿದುಕೊಂಡವರಾಗಿ, ಅವಿದಿತರಸಭೇದಂ = ತಿಳಿಯಲ್ಪಡದ ರುಚಿಯ ವ್ಯತ್ಯಾಸವುಳ್ಳ, ಶೀತಲಂ = ತಂಪಾದ, ಲಘು = ಹಗುರವಾದ, ಅಗಂಧಂ = ದುರ್ವಾಸನೆಯಿಲ್ಲದ, ವಿಮಲಂ = ನಿರ್ಮಲವಾದ, ಪಾಣಿಜೈಃ ಅಪ್ರವಿಷ್ಟಂ = ಉಗುರುಗಳ ಸಂಪರ್ಕವಿಲ್ಲದಿರುವ, ಕರಕಪೂರ್ಣಂ = ಕಮಂಡಲುವಿನಲ್ಲಿ ತುಂಬಿರುವ, ಅಗ್ರ್ಯಂ ಕಂ = ಶ್ರೇಷ್ಠವಾದ ನೀರನ್ನು, ಇಹ ಆನಿನಾಯ = ಇಲ್ಲಿಗೆ ತಂದರು.

ಪೂಜೆಗಾಗಿ ತರುವ ನೀರಿಗೆ ಅರ್ಘ್ಯೋದಕವೆಂದು ಹೆಸರು. ಅದು ಕುಡಿದು ಉಳಿದ ನೀರು ಆಗಿರಬಾರದು, ತಂಪಾಗಿ ತಣ್ಣಗೆ ಇದ್ದು ದುರ್ವಾಸನೆ ಇಲ್ಲದಿರಬೇಕು. ನಿರ್ಮಲವಾಗಿ ಉಗುರು ಮುಟ್ಟದೆ ಇರಬೇಕು. ಇಂತಹ ಉತ್ತಮವಾದ ನೀರನ್ನು ಕೈತೊಳೆದು ಕೊಂಡು ಕಮಂಡಲುವಿನಲ್ಲಿ ತುಂಬಿ ಒಬ್ಬ ಸನ್ಯಾಸಿಗಳು ಬಾಯಿಯ ಉಸಿರು ತಗಲೀತೆಂಬ ಭೀತಿಯಿಂದ ಪಕ್ಕದಲ್ಲಿ ಹಿಡಿದುಕೊಂಡು ಆಚಾರ್ಯರು ಪೂಜೆಮಾಡುವ ಸ್ಥಳಕ್ಕೆ ತಂದರು. (ಈ ರೀತಿ ಯಾವ ಅಪರಾಧವೂ ಆಗದಂತೆ ಭಕ್ತಿಯಿಂದ ದೇವರ ಪೂಜೆಗೆ ನೀರುತರಬೇಕು ಎಂದು ಭಾವ.)

Rarest Archiver

ರಸಸ್ಯ ಭೇದಃ, ನ ವಿದಿತಃ ಅವಿದಿತಃ, ಅವಿದಿತಃ ರಸಭೇದಃ ಯಸ್ಯ ತತ್, ನ ವಿದ್ಯತೇ ಗಂಧಃ ಯಸ್ಯ ತತ್, ಅಮಲೌ ಪಾಣೀ ಯಸ್ಯ ಸಃ, ಪಾಣೇಃ ಜಾತಾಃ ಪಾಣಿಜಾಃ (ನಖಾಃ) ತೈಃ, ವದನಸ್ಯ ಪವನಾತ್ ಭೀತಿಃ ತಯಾ, ಕರಕೇ ಪೂರ್ಣಂ, ಸಂಯಮಃ ಅಸ್ಯ ಅಸ್ತೀತಿ ಸಂಯಮೀ.

ಆ + ನಿನಾಯ ನಿನ್ಯತುಃ ನಿನ್ಯುಃ ಣೀಞ್ ಪ್ರಾಪಣೇ ಪರ. ಲಿಟ್.

ಆ ಅರ್ಘ್ಯೋದಕವನ್ನು ಆಚಾರ್ಯರು ಶಂಖದಲ್ಲಿ ತುಂಬಿಸಿದರು—

ವಿಹಸಿತಬಿಸಭಂಗಶ್ರೀಪ್ರಕರ್ಷಂ ಸಿತಿಮ್ನಾ
ಜಲಜಮಮೃತಪೂರೈಃ ಪೂರಯಾಮಾಸ ರಮ್ಯಂ ।
ಸಮಯಗುಣವಿಶೇಷಾಲೋಚಕೈರ್ಲಾಲನೀಯಃ
ಸಸುರಭಿಸುಮನೋಭಿಃ ಸ ಸ್ಫುಟಂ ಗೌರಪಕ್ಷಃ ॥ ೩೪ ॥

ಗೌರಪಕ್ಷಃ ಸಮಯಗುಣವಿಶೇಷಾಲೋಚಕೈಃ ಸುಮನೋಭಿಃ ಸ್ಫುಟಂ ಲಾಲನೀಯಃ ಸಃ ಸಿತಿಮ್ನಾ ವಿಹಸಿತಬಿಸಭಂಗಶ್ರೀಪ್ರಕರ್ಷಂ ರಮ್ಯಂ ಜಲಜಂ ಸಸುರಭಿಸುಮನೋಭಿಃ ಅಮೃತಪೂರೈಃ ಪೂರಯಾಮಾಸ.

ಗೌರಪಕ್ಷಃ = ಶುದ್ಧವಾದ ಸಿದ್ಧಾಂತವುಳ್ಳ, ಸಮಯಗುಣ-ವಿಶೇಷಾಲೋಚಕೈಃ = ಸಿದ್ಧಾಂತಶಾಸ್ತ್ರದ ಗುಣಾತಿಶಯಗಳನ್ನು ವಿಮರ್ಶಿಸುವ, ಸುಮನೋಭಿಃ = ಕಾಮಧೇನು ಸಹಿತರಾದ ದೇವತೆಗಳಿಂದ ಲಾಲನೀಯಃ = ಗೌರವಿಸಲು ಯೋಗ್ಯರಾದ, ಸಃ = ಆ ಮಧ್ವಾಚಾರ್ಯರು, ಸಿತಿಮ್ನಾ = ಬಿಳಿಯಬಣ್ಣದಿಂದ, ವಿಹಸಿತ-ಬಿಸಭಂಗ-ಶ್ರೀಪ್ರಕರ್ಷಂ = ಹಾಸ್ಯಮಾಡಲ್ಪಟ್ಟ ತಾವರೆದಂಟಿನ ತುಂಡಿನ ಅತಿಶಯ ಕಾಂತಿಯುಳ್ಳ, ರಮ್ಯಂ ಜಲಜಂ = ಸುಂದರವಾದ ಶಂಖವನ್ನು, ಸಸುರಭಿ-ಸುಮನೋಭಿಃ = ಸುವಾಸನೆಯ ಹೂವುಗಳಿಂದ ಕೂಡಿದ, ಅಮೃತಪೂರೈಃ = ಜಲಧಾರೆಗಳಿಂದ, ಪೂರಯಾಮಾಸ = ತುಂಬಿಸಿದರು. (ಅರ್ಥಾಂತರ) ಸಮಯಗುಣವಿಶೇಷಾಲೋಚಕೈಃ = ಶುಕ್ಲಪಕ್ಷವೇ ಮೊದಲಾದ ಕಾಲಗಳ ಗುಣಾತಿಶಯವನ್ನು ಆಲೋಚಿಸುವ ಜೋಯಿಸರಿಂದ, ಲಾಲನೀಯಃ ಗೌರಪಕ್ಷಃ = ಗೌರವಿಸಲು ಯೋಗ್ಯವಾದ ಶುಕ್ಲಪಕ್ಷವು, ಸಿತಿಮ್ನಾ ವಿಹಸಿತ-

Rarest Archiver

ಬಿಸಭಂಗಶ್ರೀಪ್ರಕರ್ಷಂ = ಬಿಳುಪಿನಿಂದ ತಾವರೆದಂಟಿನ ತುಂಡಿನ ಕಾಂತಿಯನ್ನು ಅಪಹಾಸ್ಯಮಾಡುವ, ರಮ್ಯಂ ಜಲಜಂ = ಸುಂದರನಾದ ಚಂದ್ರನನ್ನು, ಸಸುರಭಿಸುಮನೋಭಿಃ = ಕಾಮಧೇನುವಿನಿಂದ ಸಹಿತರಾದ ದೇವತೆಗಳಿಂದ, ಅಮೃತಪೂರೈಃ ಪೂರಯಾಮಾಸ = ಅಮೃತಮಯ ಕಲೆಗಳಿಂದ ತುಂಬಿಸಿತು.

ದೇವತೆಗಳು ನಿರ್ಮಲವಾದ ವೈಷ್ಣವಸಿದ್ಧಾಂತವನ್ನೇ ಅನುಸರಿಸುತ್ತಾರೆ. ಶ್ರುತಿಸ್ಮೃತ್ಯಾದಿಸಮಸ್ತಪ್ರಮಾಣಗಳಿಗೂ ಈ ಸಿದ್ಧಾಂತವು ಅನುಗುಣವೆಂದು ದೃಢವಾದ ನಿಶ್ಚಯವನ್ನುಹೊಂದಿ, ಈ ಸಿದ್ಧಾಂತದ ಅತಿಶಯಗಳನ್ನು ಪರ್ಯಾಲೋಚನೆಮಾಡುತ್ತಾ ಇರುತ್ತಾರೆ. ಇಂತಹ ದೇವತೆಗಳಿಂದ ಶ್ರೀಮಧ್ವಾಚಾರ್ಯರು ಸ್ಪಷ್ಟವಾಗಿ ಗೌರವಿಸಲ್ಪಡುತ್ತಾರೆ. ಹೀಗೆ ಶುದ್ಧಸಿದ್ಧಾಂತಸ್ಥಾಪಕರಾದ ಆಚಾರ್ಯರು ತಾವರೆದಂಟಿನ ಬಿಳಿಯ ಬಣ್ಣವನ್ನು ತಿರಸ್ಕರಿಸುವ ಅತ್ಯಂತಶುದ್ಧವಾದ ಶಂಖದಲ್ಲಿ ಸುವಾಸನೆಯಿಂದ ಕೂಡಿದ ಹೂವುಗಳ ಸಹಿತವಾಗಿ ಶುದ್ಧಜಲವನ್ನು ತುಂಬಿ ಶಂಖಪೂಜೆಯನ್ನು ಮಾಡಿದರು.

ಬೆಳದಿಂಗಳಿನಿಂದ ಶುಭ್ರವಾದ ಹದಿನೈದುದಿನಗಳು ಶುಕ್ಲಪಕ್ಷ, ಎದುರುಕತ್ತಲೆಯುಕೃಷ್ಣಪಕ್ಷ, ಇನ್ನಿತರ ಕಾಲವಿಶೇಷಗಳನ್ನು ಜ್ಯೋತಿಷ್ಕರು ವಿಚಾರಮಾಡಿ ಶುಕ್ಲಪಕ್ಷವು ವಿಶೇಷವಾಗಿ ಶುಭಕಾರ್ಯಗಳಿಗೆ ಯೋಗ್ಯವೆಂದು ಅದನ್ನು ಗೌರವಿಸುತ್ತಾರೆ. ಈ ಶುಕ್ಲಪಕ್ಷವು ರಾತ್ರಿಯ ಪೂರ್ವಾರ್ಧದಿಂದ ಹೆಚ್ಚು ಹೆಚ್ಚು ಕಾಲಗಳಲ್ಲಿ ಬೆಳಗುವ, ತಾವರೆಯ ದಂಟಿನ ತುಂಡಿಗಿಂತಲೂ ಬಿಳಿಯಾದ ಸುಂದರಚಂದ್ರನನ್ನು ಪಾಡ್ಯದಿಂದ ಆರಂಭಿಸಿ ದಿನದಿನದಲ್ಲಿಯೂ ಅಮೃತಕಲೆಗಳಿಂದ ತುಂಬಿಸಿ ಹುಣ್ಣಿಮೆಯ ದಿನ ಪೂರ್ಣಚಂದ್ರನನ್ನು ಸಜ್ಜುಗೊಳಿಸುತ್ತದೆ. ಹೀಗೆ ಶುಕ್ಲಪಕ್ಷವು ಚಂದ್ರನಲ್ಲಿ ಕಲೆಗಳನ್ನು ತುಂಬಿದಂತೆ ಆಚಾರ್ಯರು ಶಂಖದಲ್ಲಿ ಅರ್ಘ್ಯೋದಕವನ್ನು ತುಂಬಿ ಪೂಜಿಸಿದರು ಎಂದು ಭಾವ. 'ಪೂರಯಂತಿ ದಿಶಃ ಸೋಮಂ ದೇವಾ ಗಾವಃ ಸರಸ್ವತೀ' ಎಂಬ ಪ್ರಮಾಣದಲ್ಲಿ ಕಾಮಧೇನು ಸಹಿತರಾದ ದೇವತೆಗಳು ಚಂದ್ರನಲ್ಲಿ ಕಲೆಗಳನ್ನು ತುಂಬುತ್ತಾರೆ ಎಂದು ಹೇಳಿದೆ.

Rarest Archiver

ಬಿಸಸ್ಯ ಭಂಗಃ ತಸ್ಯ ಶ್ರೀಃ, ಬಿಸಭಂಗಶ್ರಿಯಃ ಪ್ರಕರ್ಷಃ ವಿಹಸಿತಃ ಬಿಸಭಂಗಶ್ರೀಪ್ರಕರ್ಷಃ ಯೇನ ಸಃ ತಂ ; ಸಿತಸ್ಯ ಭಾವಃ ಸಿತಿಮಾ ತೇನ, ಅಮೃತಸ್ಯ ಪೂರಾಃ ತೈಃ, ಅಮೃತ=ನೀರು, 'ಪಯಃ ಕೀಲಾಲಮಮೃತಂ' ಅಮರ. ಗುಣಾನಾಂ ವಿಶೇಷಾಃ ಸಮಯಸ್ಯ ಗುಣವಿಶೇಷಾಃ ಸಮಯಗುಣವಿಶೇಷಾನ್ ಆಲೋಚಯಂತೀತಿ ಸಮಯಗುಣವಿಶೇಷಾಲೋಚಕಾಃ ತೈಃ, ಲಾಲಯಿತುಂ ಯೋಗ್ಯೈಃ, ಸುರಭಯಶ್ಚ ತಾಃ ಸುಮನಸಶ್ಚ, ಸುರಭಿಸುಮನೋಭಿಃ ಸಹಿತಾಃ ಸಸುರಭಿಸುಮನಸಃ (ಅಮೃತಪೂರಾಃ) ತೈಃ ;

ಪೂರಯಾಮಾಸ, ಪೂರಯಾಮಾಸತುಃ ಇತ್ಯಾದಿ ಪೂರೀಆಪ್ಯಾಯನೇ ಸಕ. ಉಭಯಪದಿ ಲಿಟ್.

ಆಚಾರ್ಯರು ಗಂಧಪುಷ್ಪಾದಿಗಳಿಂದ ದೇವರನ್ನು ಪೂಜಿಸಿದರು—

ವಿಮಲಮಲಯಜಾಂಭೋಬಿಂದುಭಿಶ್ಚರ್ಚಿತಾರ್ಚೋ
ನವಲಲಿತತುಲಸ್ಯಾ ಪುಷ್ಪರಾಜ್ಯಾರ್ಚ (ರ್ಚಯ) ಚತ್ ಸಃ ।
ಸ್ಥಲಜಜಲಜವಲ್ಲೀವೃಕ್ಷವೀರುತ್ಸಮಸ್ತ–
ಪ್ರಸವವಿಜಯಲಕ್ಷ್ಮ್ಯಾ ಮೂರ್ತಯೇವೇಂದಿರೇಶಂ ॥ ೩೫ ॥

ವಿಮಲಮಲಯಜಾಂಭೋಬಿಂದುಭಿಃ ಚರ್ಚಿತಾರ್ಚಃ ನವಲಲಿತತುಲಸ್ಯಾ ಮೂರ್ತಯಾ ಸ್ಥಲಜಜಲಜವಲ್ಲೀವೃಕ್ಷವೀರುತ್ಸಮಸ್ತಪ್ರಸವವಿಜಯಲಕ್ಷ್ಮ್ಯಾ ಇವ ಪುಷ್ಪರಾಜ್ಯಾ ಇಂದಿರೇಶಂ ಆರ್ಚಿಚತ್(ಆರ್ಚಯತ್).

ವಿಮಲಮಲಯಜಾಂಭೋಬಿಂದುಭಿಃ = ನಿರ್ಮಲವಾದ ಗಂಧದ ನೀರಿನಹನಿಗಳಿಂದ, ಚರ್ಚಿತಾರ್ಚಃ ಸಃ = ಲೇಪಿಸಲ್ಪಟ್ಟಪ್ರತಿಮೆಯುಳ್ಳ, ಆ ಮಧ್ವಾಚಾರ್ಯರು, ನವಲಲಿತತುಲಸ್ಯಾ = ಹೊಸದಾದ ಮೃದುವಾದ ತುಲಸಿಯಿಂದ, ಮೂರ್ತಯಾ = ದೇಹವನ್ನು ಧರಿಸಿದ, ಸ್ಥಲಜಜಲಜ = ನೆಲದಲ್ಲಿ ಬೆಳೆದ ಜಾಜಿಮಲ್ಲಿಗೆ ಮೊದಲಾದುವುಗಳ, ಮತ್ತು ನೀರಿನಲ್ಲಿ ಬೆಳೆದ ಕಮಲ ಮುಂತಾದುವುಗಳ, ವಲ್ಲೀವೃಕ್ಷ = ಇತರ ಬಳ್ಳಿಗಳು, ಮತ್ತು ಸಂಪಿಗೆ ಮೊದಲಾದ ಮರಗಳು, ವೀರುತ್ = ನೆಲದ ಮೇಲೆ ಹಬ್ಬಿರುವ ಬಳ್ಳಿಗಳು ಇವುಗಳ, ಸಮಸ್ತಪ್ರಸವ = ಎಲ್ಲಾ ಹೂವುಗಳ, ವಿಜಯಲಕ್ಷ್ಮ್ಯಾ

Rarest Archiver

ಇವ = ಉತ್ಕರ್ಷಕ್ಕೆ ಅಭಿಮಾನಿಯಾಗಿರುವ ಲಕ್ಷ್ಮಿಯೋ ಎಂಬಂತಿರುವ, ಪುಷ್ಪರಾಜ್ಯಾ = ಹೂವುಗಳ ಸಮೂಹದಿಂದ, ಇಂದಿರೇಶಂ = ಶ್ರೀಮನ್ ನಾರಾಯಣನನ್ನು ಆರ್ಚಿಚತ್ (ಆರ್ಚಯತ್) = ಪೂಜಿಸಿದರು.

ಆಚಾರ್ಯರು ನಿರ್ಮಲವಾದ ಗಂಧದಿಂದ ಶಾಲಿಗ್ರಾಮ ಮತ್ತು ಪ್ರತಿಮೆಗಳನ್ನು ಪೂಜಿಸಿದರು. ತುಳಸಿಯಿಂದ ಅರ್ಚಿಸಿದರು. ನೆಲದಲ್ಲಿ ಬೆಳೆಯುವ ಗಿಡಗಳ ಜಾಜಿ ಮಲ್ಲಿಗೆ ಮುಂತಾದ ಹೂವುಗಳು, ನೀರಿನಲ್ಲಿ ಬೆಳೆಯುವ ತಾವರೆ ಮುಂತಾದ ಹೂವುಗಳು, ಸಂಪಿಗೆ ಮುಂತಾದ ಮರದ ಹೂವುಗಳು, ನೆಲದಲ್ಲಿ ಹಬ್ಬಿ ಬೆಳೆಯುವ ಬಳ್ಳಿಗಳ ಹೂವುಗಳು, ಮರಗಳಲ್ಲಿ ಹಬ್ಬಿ ಬೆಳೆಯುವ ಬಳ್ಳಿಗಳ ಹೂವುಗಳು ಇವುಗಳೆಲ್ಲದರ ರಾಶಿಯನ್ನು ಅರ್ಪಿಸಿದರು. ಎಲ್ಲಾ ಪುಷ್ಪಗಳ ವಿಜಯಲಕ್ಷ್ಮಿಯೋ ಎಂಬಂತಿರುವ ಈ ಹೂವಿನ ರಾಶಿಯಿಂದ ಶ್ರೀಹರಿಯನ್ನು ಪೂಜಿಸಿದರು. ಇದರಿಂದ ನೋಡು ವವರಿಗೆ ಲಕ್ಷ್ಮೀದೇವಿಯೇ ತನ್ನ ಪತಿಯನ್ನು ಪೂಜಿಸುತ್ತಾಳೋ ಎಂಬ ಭಾವನೆ ಉಂಟಾಗುತ್ತಿತ್ತು. ಎಂದು ಭಾವ.

ವಿಮಲಂ ಚ ತತ್ ಮಲಯಜಂ ಚ, ವಿಮಲಮಲಯಜಸ್ಯ ಅಂಭಃ, ವಿಮಲಮಲಯಜಾಂಭಸಃ ಬಿಂದವಃ, ವಿಮಲಮಲಯಜಾಂಭೋ-ಬಿಂದವಃ ತೈಃ ; ಚರ್ಚಿತಾ ಅರ್ಚಾ ಯೇನ ಸಃ ಚರ್ಚಿತಾರ್ಚಃ ; ನವಾ ಚ ಸಾ ಲಲಿತಾ ಚ ಸಾ ತುಲಸೀ ಚ ನವಲಲಿತತುಲಸೀ ತಯಾ, ಪುಷ್ಪಾಣಾಂ ರಾಜಿಃ ತಯಾ, ವಲ್ಲ್ಯಶ್ಚ ವೃಕ್ಷಾಶ್ಚ ವೀರುಧಶ್ಚ, ವಲ್ಲೀವೃಕ್ಷ-ವೀರುಧಃ, ಸ್ಥಲಜಾಶ್ಚ ಜಲಜಾಶ್ಚ ವಲ್ಲೀವೃಕ್ಷವೀರುಧಶ್ಚ, ಸ್ಥಲಜ .... ವಿರುಧಾಂ ಸಮಸ್ತಾನಾಂ ಪ್ರಸವಾನಾಂ ವಿಜಯಸ್ಯ ಲಕ್ಷ್ಮೀಃ ತಯಾ, ಇಂದಿರಾಯಾಃ ಈಶಃ ತಂ ;

ಆರ್ಚಿಚತ್ ಅರ್ಚ ಪೂಜಾಯಾಂ ಣಿಜಂತಾತ್ ಲುಙ್. (ಆರ್ಚಯತ್ ಲಙ್)

ಆಚಾರ್ಯರು ಸಮಸ್ತರಾಜೋಪಚಾರಗಳಿಂದ ಅಪರಾಧವಿಲ್ಲದೆ ಪೂಜಿಸಿದರು —

Rarest Archiver

ಸ ದದದಧಿಕಬೋಧಃ ಷೋಡಶಾತ್ರೋಪಚಾರಾನ್
ವ್ಯರಹಯದಗುಣಾನ್ ದ್ವಾತ್ರಿಂಶದಾಗಃಪುರೋಗಾನ್ ।
ಅಗಣಿತಗುಣಮುಚ್ಚೈಸ್ತೋಷಯಂಛಾರ್ಙ್ಗಪಾಣಿಂ
ಷಡಪಿ ಪರಮಭಕ್ತ್ಯಾನೂಪಚಾರಾನ್ ದಿದೇಶ ॥ ೩೬ ॥

ಅತ್ರ ಷೋಡಶ ಉಪಚಾರಾನ್ ದದತ್ ಅಗಣಿತಗುಣಂ ಶಾರ್ಙ್ಗ-ಪಾಣಿಂ ಉಚ್ಚೈಃ ತೋಷಯನ್ ಸಃ ಅಧಿಕಬೋಧಃ ದ್ವಾತ್ರಿಂಶದಾಗಃ-ಪುರೋಗಾನ್ ಅಗುಣಾನ್ ವ್ಯರಹಯತ್. ಪರಮಭಕ್ತ್ಯಾ ಷಟ್ ಅನೂಪಚಾರಾನ್ ಅಪಿ ದಿದೇಶ.

ಅತ್ರ = ಈ ಪೂಜಾಸಮಯದಲ್ಲಿ, ಷೋಡಶ ಉಪಚಾರಾನ್ = ಹದಿನಾರು ಉಪಚಾರಗಳನ್ನು, ದದತ್ = ಕೊಡುತ್ತಿರುವ, ಅಗಣಿತ-ಗುಣಂ = ಅನಂತಗುಣಪೂರ್ಣನಾದ, ಶಾರ್ಙ್ಗಪಾಣಿಂ = ಶ್ರೀಹರಿಯನ್ನು, ಉಚ್ಚೈಃ ತೋಷಯನ್ = ಅಧಿಕವಾಗಿ ಸಂತೋಷಪಡಿಸುತ್ತಿರುವ, ಸಃ ಅಧಿಕಬೋಧಃ = ಆ ಶ್ರೀಮಧ್ವಾಚಾರ್ಯರು, ದ್ವಾತ್ರಿಂಶದಾಗಃ-ಪುರೋಗಾನ್ = ಮೂವತ್ತ ಎರಡು ಅಪರಾಧವೇ ಮೊದಲಾಗಿ ಉಳ್ಳ, ಅಗುಣಾನ್ = ದೋಷಗಳನ್ನು, ವ್ಯರಹಯತ್ = ವರ್ಜಿಸಿದರು. ಪರಮ-ಭಕ್ತ್ಯಾ = ಅತ್ಯಂತಭಕ್ತಿಯಿಂದ, ಷಟ್ ಅನೂಪಚಾರಾನ್ ಅಪಿ = ಆರು ಅನಂತರದ ಉಪಚಾರಗಳನ್ನು, ದಿದೇಶ = ಕೊಟ್ಟರು.

ಪೂಜಾಕಾಲದಲ್ಲಿ, ಆಚಾರ್ಯರು ಅರ್ಘ್ಯಪಾದ್ಯಾದಿ ಹದಿನಾರು ಉಪಚಾರಗಳನ್ನು ಸಮರ್ಪಿಸಿದರು. ಅಪರಿಮಿತಗುಣಗಣಪೂರ್ಣನಾದ ಶ್ರೀಮನ್ನಾರಾಯಣನನ್ನು ಬಹಳ ಚೆನ್ನಾಗಿ ಸಂತೋಷಪಡಿಸಿದರು. ಮೂವತ್ತು ಎರಡು ಅಪರಾಧಗಳೇ ಮೊದಲಾದ ದೋಷಗಳು ಬಾರದಂತೆ ನೋಡಿಕೊಂಡರು. ಅತ್ಯಂತಭಕ್ತಿಯಿಂದ ಆರು ಅನೂಪಚಾರಗಳನ್ನು ಭಗವಂತನಿಗೆ ಸಮರ್ಪಿಸಿದರು.

ವಿಶೇಷಾಂಶ : ಷೋಡಶ ಉಪಚಾರಗಳು ಅರ್ಘ್ಯ, ಪಾದ್ಯ, ಆಚಮನೀಯ, ಮಧುಪರ್ಕ, ಪುನರಾಚಮನೀಯ, ಸ್ನಾನ, ವಸ್ತ್ರ, ಅಲಂಕಾರ, ಯಜ್ಞೋಪವೀತ, ಆಸನ, ಗಂಧ, ಪುಷ್ಪ, ಧೂಪ, ದೀಪ,

Rarest Archiver

ನೈವೇದ್ಯ, ನಮಸ್ಕಾರ. ಆರು ಅನೂಪಚಾರಗಳು — ಮುಖವಸ್ತ್ರ, ತಾಂಬೂಲ ಕನ್ನಡಿ, ಛತ್ರಿ, ಚಾಮರ, ಪಾದುಕಾ-ಇವುಗಳು. **ಮೂವತ್ತ ಎರಡು ಅಪರಾಧಗಳು.** ಭೋಜನಾನಂತರಪೂಜೆ, ನೀರುಕುಡಿದು ಪೂಜೆ, ಹಲ್ಲುಜ್ಜಿಕೊಳ್ಳದೆ ದೇವರ ಹತ್ತಿರ ಹೋಗುವುದು, ಸ್ತ್ರೀಭೋಗಾನಂತರ ದೇವರ ಪೂಜೆ, ಶವಸ್ಪರ್ಶದ ನಂತರ ದೇವರಪೂಜೆ, ಪೂಜಾಮಧ್ಯದಲ್ಲಿ ಮಲವಿಸರ್ಜನ, ಮೂತ್ರವಿಸರ್ಜನ, ಕಣ್ಣೀರು ಸುರಿಸುತ್ತ ಮಾತನಾಡುವುದು, ಕರೀವಸ್ತ್ರ ಹೊದ್ದು ಕೊಳ್ಳುವುದು, ರಾಜಾನ್ನಭೋಜನ, ದೂರ ನಿಂತು ಪೂಜೆ, ಆಚಮನಮಾಡದೆ ಪೂಜೆ, ಕೋಪ, ನಿಷಿದ್ಧ ಪುಷ್ಪಗಳಿಂದ ಪೂಜೆ, ರಕ್ತಕೌಪೀನಧಾರಣ, ಕರೀವಸ್ತ್ರಧಾರಣ, ಕತ್ತಲೆಯಲ್ಲಿ ದೇವಸ್ಪರ್ಶ, ಕಾಮುಕತೆ, ಕರೀವಸ್ತ್ರಜಾಡಿಸುವುದು, ನಾಯಿಯ ಸ್ಪರ್ಶ, ಶೂಕರಮಾಂಸಭೋಜನ, ತುದಿಗಾಲಿನ ಆಸನ, ಕೆಸರಿನಿಂದ ಮಲಿನನಾಗಿ ದೇವರನ್ನು ಸಮೀಪಿಸುವುದು, ಚಿತಾಸ್ಪರ್ಶದನಂತರ ದೇವರ ಹತ್ತಿರ ಹೋಗುವುದು. ಹಿಂಡಿತಿನ್ನುವುದು, ಹಂದಿ ಮಾಂಸಾರ್ಪಣ, ಮದ್ಯಪಾನ, ಕುಸುಬೆಹೂವಿನ ಭಕ್ಷಣ, ಪುಷ್ಪವನ್ನರ್ಪಿಸದೆ ಧೂಪದಾನ, ವಿಷ್ಣುಪ್ರತಿಮೆಯನ್ನು ಹೊತ್ತವನು ಪಾದರಕ್ಷೆ ಧಾರಣ ಮಾಡಿರುವುದು, ನಗಾರಿಹೊಡೆಯುವವನಲ್ಲದ ಇತರ ಶೂದ್ರನು ದೇವರಹತ್ತಿರ ಬರುವುದು, ಆಹಾರ ಜೀರ್ಣಿಸದಿರುವಾಗ ಪೂಜೆ, ಇವುಗಳೇ ಮೂವತ್ತ ಎರಡು ಅಪರಾಧಗಳು. ಹೀಗೆ ವರ್ಜಿಸಬೇಕಾದ ಶತಾಪರಾಧಗಳು ಸಹಸ್ರಾಪರಾಧಗಳೂ ಇವೆ.

ಅಧಿಕಃ ಬೋಧಃ ಯಸ್ಯ ಸಃ, ನ ಗುಣಾಃ ಅಗುಣಾಃ ತಾನ್, ದ್ವಾತ್ರಿಂಶಚ್ಚ ತಾನಿ ಆಗಾಂಸಿ ಚ, ದ್ವಾತ್ರಿಂಶದಾಗಾಂಸಿ ಪುರೋಗಾಣಿ ಯೇಷಾಂ ತೇ ದ್ವಾತ್ರಿಂಶದಾಗಃಪುರೋಗಾಃ ತಾನ್, ಅಗಣಿತಾಃ ಗುಣಾಃ ಯಸ್ಯ ಸಃ ತಂ, ಶಾಂರ್ಗಂ ಪಾಣೌ ಯಸ್ಯ ಸಃ ತಂ, ಪರಮಾ ಚ ಸಾ ಭಕ್ತಿಶ್ಚ ತಯಾ;

ವಿ + ಅರಹಯತ್ ಅರಹಯತಾಂ ಅರಹಯನ್ ಇತ್ಯಾದಿ, ರಹ ತ್ಯಾಗೇ ಸಕ. ಸೇಟ್. ಉಭ. ಲಜ್. ದಿದೇಶ ದಿದಿಶತುಃ ದಿದಿಶುಃ, ದಿದೇಶಿಥ ದಿದಿಶಥುಃ ದಿದಿಶ, ದಿದೇಶ ದಿದಿಶಿವ ದಿದಿಶಿಮ. ದಿಶ ಅತಿಸರ್ಜನೇ = (ದಾನೇ) ಸಕ. ಅನಿ. ಪರ. ಲಿಟ್.

Rarest Archiver

ಆಚಾರ್ಯರು ಯೋಗಿಶ್ರೇಷ್ಠರಾದುದರಿಂದ ಹೃದಯದಲ್ಲಿಯೂ ನಿರಂತರ ಹರಿಪೂಜೆ ಮಾಡುತ್ತಾರೆ—

ತಮರುಣಮಣಿವರ್ಣಂ ದಿವ್ಯದೇಹಾಖ್ಯಗೇಹೇ
ಸ್ನಪಿತಮತಿಪೃಥುಶ್ರದ್ಧಾನದೀಚಿತ್ತವಾರ್ಭಿಃ ।
ನನು ಸ ಯಜತಿ ನಿತ್ಯಂ ಹೃತ್ಸರೋಜಾಸನಸ್ಥಂ
ನ ತು ಸಕೃದಿತಿಪುಷ್ಟೈರಷ್ಟಭಿರ್ಭಾವಪುಷ್ಪೈಃ ॥ ೩೭ ॥

ಸಃ ಅರುಣಮಣಿವರ್ಣಂ ದಿವ್ಯದೇಹಾಖ್ಯಗೇಹೇ ಅತಿಪೃಥುಶ್ರದ್ಧಾನದೀಚಿತ್ತವಾರ್ಭಿಃ ಸ್ನಪಿತಂ ಹೃತ್ಸರೋಜಾಸನಸ್ಥಂ ಪುಷ್ಟೈಃ ಅಷ್ಟಭಿಃ ಭಾವಪುಷ್ಪೈಃ ನಿತ್ಯ ಯಜತಿ ನನು. ಸಕೃತ್ ತು ಯಜತೀತಿ ನ.

ಸಃ=ಆ ಮಧ್ವಾಚಾರ್ಯರು, ಅರುಣಮಣಿವರ್ಣಂ=ಪದ್ಮರಾಗ ಮಣಿಯ ಬಣ್ಣವುಳ್ಳ, ದಿವ್ಯದೇಹಾಖ್ಯಗೇಹೇ=ದೇವರಸಂಬಂಧಿಯಾದ, ದೇಹವೆಂಬ ಹೆಸರುಳ್ಳ ಮನೆಯಲ್ಲಿ, ಅತಿಪೃಥುಶ್ರದ್ಧಾನದೀಚಿತ್ತವಾರ್ಭಿಃ= ಬಹಳದೊಡ್ಡದಾದ ಶ್ರದ್ಧೆಯೆಂಬ ನದಿಯ ಮನೋವೃತ್ತಿಗಳೆಂಬ ನೀರುಗಳಿಂದ, ಸ್ನಪಿತಂ=ಸ್ನಾನಮಾಡಿಸಲ್ಪಟ್ಟ, ಹೃತ್ಸರೋಜಾಸನಸ್ಥಂ ತಂ= ಹೃದಯಕಮಲದಲ್ಲಿರುವ ಆ ಪರಮಾತ್ಮನನ್ನು, ಪುಷ್ಟೈಃ=ಪೂರ್ಣವಾದ, ಅಷ್ಟಭಿಃ ಭಾವಪುಷ್ಪೈಃ=ಎಂಟು ಸಂಖ್ಯೆಯ ಭಾವವೆಂಬ ಹೂವುಗಳಿಂದ, ನಿತ್ಯಂ ಯಜತಿನನು=ಯಾವಾಗಲೂ ಪೂಜಿಸುತ್ತಾರಷ್ಟೆ! ಸಕೃತ್ ತು= ಒಂದು ಬಾರಿಮಾತ್ರ, ಯಜತಿ ಇತಿ ನ=ಪೂಜಿಸುತ್ತಾರೆಂದು ಅಲ್ಲ.

ಶ್ರೀಮಧ್ವಗುರುರಾಜರು ಹಿಂದೆ ಹೇಳಿದಂತೆ ಅನೇಕವಿಧವಾದ ಹೂವುಗಳಿಂದ, ನಿತ್ಯದಲ್ಲಿ ಒಂದು ಸಲಮಾತ್ರ ಆ ಪರಮಾತ್ಮನನ್ನು ಪೂಜಿಸುತ್ತಾರೆಂದು ಅಲ್ಲ. ತನ್ನ ದಿವ್ಯವಾದ ದೇಹವೆಂಬ ಮನೆಯಲ್ಲಿ ಅತಿಶ್ರೇಷ್ಠವಾದ ಶ್ರದ್ಧೆಯೆಂಬ ನದಿಯ ಮನೋವ್ಯಾಪಾರಗಳೆಂಬ ನೀರುಗಳಿಂದ ಸ್ನಾನ ಮಾಡಿಸಿ ಕೆಂಪು ರತ್ನದ ವರ್ಣವುಳ್ಳ ಹೃದಯಕಮಲವೆಂಬ ಪೀಠದಲ್ಲಿರುವ ಆ ಪರಮಾತ್ಮನನ್ನು ಅಹಿಂಸಾ ಮುಂತಾದ ಎಂಟು ಭಾವಪುಷ್ಪಗಳಿಂದ ಯಾವಾಗಲೂ ನಿಶ್ಚಯವಾಗಿ ಪೂಜಿಸುತ್ತಾರೆ.

Rarest Archiver

ಆರಾಧಯಾಮಿ ಮಣಿಸನ್ನಿಭಮಾತ್ಮಬಿಂಬಂ
ಮಾಯಾಪುರೇ ಹೃದಯಪಂಕಜಸನ್ನಿವಿಷ್ಟಂ ।
ಶ್ರದ್ಧಾನದೀವಿಮಲಚಿತ್ತಜಲಾಭಿಷೇಕಂ
ಭಾವಾಷ್ಟಪುಷ್ಪವಿಧಿನಾ ಹರಿಮರ್ಚಯಾಮಿ ॥

ಇದು ಭೀಮಸೇನವಚನ—ಶ್ರೀಹರಿಯ ಇಚ್ಛೆಯಿಂದ ನಿರ್ಮಿತವಾದ ಈ ದೇಹವೆಂಬ ಪುರದಲ್ಲಿ ಹೃದಯಕಮಲದಲ್ಲಿ, ಪ್ರತಿಬಿಂಬನಾದ ನನಗೆ ಬಿಂಬ ಸ್ವರೂಪನಾಗಿ ನೆಲೆಸಿರುವ ಶ್ರೀಹರಿಯನ್ನು ಶ್ರದ್ಧೆಯೆಂಬ ನದಿಯ ನಿರ್ಮಲ ಮನೋವೃತ್ತಿಗಳೆಂಬ ನೀರುಗಳಿಂದ ಅಭಿಷೇಕಿಸುತ್ತೇನೆ. ಎಂಟು ಭಾವಪುಷ್ಪಗಳನ್ನು ಅರ್ಪಿಸಿ ಪೂಜಿಸುತ್ತೇನೆ" ಎಂದು ಇದರ ತಾತ್ಪರ್ಯ. ಈ ಭೀಮಸೇನ ದೇವರ ವಾಕ್ಯದಂತೆ ಭೀಮಾವತಾರರಾದ ಆಚಾರ್ಯರು ಯೋಗಿಶ್ರೇಷ್ಠರು, ನಿತ್ಯಾಪರೋಕ್ಷಿಗಳು, ಹೃದಯದಲ್ಲಿ ನಿರಂತರ ಹರಿಪೂಜೆ ಮಾಡುವವರು. ಅಂತಹ ಮಹಾತ್ಮರು ಅಪ್ರಬುದ್ಧರಾದ ಭಕ್ತರಿಗೆ ಪೂಜಾಕ್ರಮವನ್ನು ತೋರಿಸಿ ಭಗವಂತನ ಅನುಗ್ರಹವಾಗುವಂತೆ ಪ್ರತಿಮೆಯಲ್ಲಿ ಹರಿಯನ್ನು ಬಾಹ್ಯಪುಷ್ಪಗಳಿಂದ ಪೂಜಿಸಿದರು ಎಂದು ಭಾವ.

ಅಹಿಂಸಾ ಪ್ರಥಮಂ ಪುಷ್ಪಂ ಪುಷ್ಪಮಿಂದ್ರಿಯನಿಗ್ರಹಃ ।
ಸರ್ವಭೂತದಯಾಪುಷ್ಪಂ ಕ್ಷಮಾಪುಷ್ಪಂ ವಿಶಿಷ್ಯತೇ ।
ಜ್ಞಾನಪುಷ್ಪಂ ತಪಃಪುಷ್ಪಂ ಧ್ಯಾನಪುಷ್ಪಂ ತು ಸಪ್ತಮಂ ।
ಸತ್ಯಂ ಚೈವಾಷ್ಟಮಂ ಪುಷ್ಪಮೇಭಿಸ್ತುಷ್ಯತಿ ಕೇಶವಃ ॥

ಅಹಿಂಸಾ, ಇಂದ್ರಿಯಜಯ, ಸರ್ವಪ್ರಾಣಿದಯಾ, ಕ್ಷಮಾ, ಜ್ಞಾನ, ತಪಸ್ಸು, ಧ್ಯಾನ, ಸತ್ಯ, ಇವೇ ಎಂಟು ಭಾವಪುಷ್ಪಗಳು. ಅಹಿಂಸಾ ಮುಂತಾದ ಎಂಟು ಭಾವಗಳನ್ನು ಆಚರಿಸುವುದರಿಂದ ಶ್ರೀಹರಿಯು ಸಂತುಷ್ಟನಾಗುವನು ಎಂದು ಭಾವ.

ಅರುಣಾಶ್ಚ ತೇ ಮಣಯಶ್ಚ, ಅರುಣಮಣೀನಾಂ ವರ್ಣ ಇವ ವರ್ಣಃ ಯಸ್ಯ ಸಃ ತಂ, ದಿವ್ಯಶ್ಚಾಸೌ ದೇಹಶ್ಚ, ದಿವ್ಯದೇಹ ಇತಿ ಆಖ್ಯಾ ಯಸ್ಯ ತತ್, ದಿವ್ಯದೇಹಾಖ್ಯಂ ಚ ತತ್ ಗೇಹಂ ಚ ದಿವ್ಯದೇಹಾಖ್ಯ-

Rarest Archive

ಗೇಹಂ ತಸ್ಮಿನ್, ಶ್ರದ್ಧಾ ಏವ ನದೀ, ಅತಿಪೃಥುಶ್ಚ ಸಾ ಶ್ರದ್ಧಾನದೀ ಚ, ಚಿತ್ತಾನ್ಯೇನ ವಾರಿ, ಅತಿಪೃಥುಶ್ರದ್ಧಾನದ್ಯಾಃ ಚಿತ್ತವಾರಿ ತೈಃ, (ವಾಃ ವಾರೀ ವಾರಿ ಇತ್ಯಾದಿ. ರೇಫಾಂತ ನಪುಂ. ವಾರ್‌ಶಬ್ದ ವಾರ್ಭಿಃ ತೃ. ಬ.) ಹೃದೇವ ಸರೋಜಂ, ಹೃತ್ಸರೋಜಂ ಇತಿ ಆಸನಂ, ಹೃತ್‌ಸರೋಜಾಸನೇ ತಿಷ್ಠತೀತಿ ಹೃತ್‌ಸರೋಜಾಸನಸ್ಥಃ ತಂ, ಭಾವಾ ಏವ ಪುಷ್ಪಾಣಿ ತೈಃ.

ಯಜತಿ ಯಜತಃ ಯಜಂತಿ ಇತ್ಯಾದಿ ಯಜ ದೇವಪೂಜಾಸಂಗತಿಕರಣದಾನೇಷು. ಭ್ವಾದಿ. ಸಕ. ಉಭ. ಅನಿಟ್ ಲಟ್. to sacrifice, (to worship.) to make an oblation to, to give, to associate with.

ಪೂಜಾನಂತರ ಆಚಾರ್ಯರು ಶ್ರೀಹರಿಯ ಗಂಧಾದಿಪ್ರಸಾದವನ್ನು ಸ್ವೀಕರಿಸಿದರು—

ಕೃತಪರಮಸಪರ್ಯಃ ಸಾಂದ್ರಸಚ್ಚಂದನಾಂಭಃ-
ಪರಿಮಲಿತಭುಜೋರೋಮಂಡಲಾಂಸೋ ಮನೀಷೀ ।
ಸ್ಮಿತರುಚಿರಮುಖೇಂದುಃ ಸ್ನಿಗ್ಧಕೌಶೇಯವಾಸಾಃ
ಸ ಮುನಿಸುರನರಾಣಾಂ ಚಕ್ಷುಷಾಮುತ್ಸವೋಽಭೂತ್ ॥೩೮॥

ಕೃತಪರಮಸಪರ್ಯಃ ಸಾಂದ್ರಸಚ್ಚಂದನಾಂಭಃ ಪರಿಮಲಿತಭುಜೋರೋಮಂಡಲಾಂಸಃ ಸ್ಮಿತರುಚಿರಮುಖೇಂದುಃ ಸ್ನಿಗ್ಧಕೌಶೇಯವಾಸಾಃ ಮನೀಷೀ ಸಃ ಮುನಿಸುರನರಾಣಾಂ ಚಕ್ಷುಷಾಂ ಉತ್ಸವಃ ಅಭೂತ್.

ಕೃತಪರಮಸಪರ್ಯಃ = ಮಾಡಲ್ಪಟ್ಟ ಸರ್ವೋತ್ತಮನಾದ ಶ್ರೀಹರಿಯ ಪೂಜೆಯುಳ್ಳ, ಸಾಂದ್ರಸಚ್ಚಂದನಾಂಭಃ= ಸ್ವಲ್ಪಗಟ್ಟಿಯಾದ ಒಳ್ಳೆಯ ಗಂಧದ ನೀರಿನಿಂದ, ಪರಿಮಲಿತಭುಜೋರೋಮಂಡಲಾಂಸಃ= ಸುವಾಸನೆಗೊಳಿಸಲ್ಪಟ್ಟ ತೋಳುಗಳು, ಎದೆಯ ಪ್ರದೇಶ ಹೆಗಲು ಇವುಗಳುಳ್ಳ, ಸ್ಮಿತರುಚಿರಮುಖೇಂದುಃ= ಮಂದಹಾಸದಿಂದ ಮನೋಹರವಾದ ಮುಖಚಂದ್ರನುಳ್ಳ, ಸ್ನಿಗ್ಧಕೌಶೇಯವಾಸಾಃ= ನುಣುಪಾದ ರೇಷ್ಮೆ ಬಟ್ಟೆಯುಳ್ಳ, ಮನೀಷೀ ಸಃ= ಜ್ಞಾನಿವರೇಣ್ಯರಾದ ಆ ಮಧ್ವಗುರುರಾಜರು,

Rarest Archiver

ಮುನಿಸುರನರಾಣಾಂ=ಮುನಿಗಳು, ದೇವತೆಗಳು, ಮತ್ತು ಮನುಷ್ಯರು ಇವರ, ಚಕ್ಷುಷಾಂ=ಕಣ್ಣುಗಳಿಗೆ, ಉತ್ಸವಃ ಅಭೂತ್ = ಸಂತೋಷವನ್ನು ಉಂಟುಮಾಡುವವರಾದರು.

ಜ್ಞಾನಿಗಳಾದ ಶ್ರೀಮಧ್ವಗುರುಗಳು ಪರಮಾತ್ಮನ ಪೂಜೆಯನ್ನು ಮಾಡಿದ ಮೇಲೆ ಘಟ್ಟಿಯಾದ ಹರಿಪ್ರಸಾದಗಂಧವನ್ನು ನೀರಾಗಿ ಮಾಡಿ ತೋಳು ಎದೆ ಹೆಗಲುಗಳಲ್ಲಿ ಹಚ್ಚಿಕೊಂಡು ಪರಿಮಳಭರಿತರಾದರು. (ಹೀಗೆಯೇ ಹರಿಪ್ರಸಾದರೂಪವಾದ ಅಕ್ಷತೆ, ಅಂಗಾರ, ತುಳಸೀದಳಗಳನ್ನು ಧರಿಸಿದರು ಎಂದು ತಿಳಿಯಬೇಕು.) ಮಂದಹಾಸವನ್ನು ಸೂಸುವ ಮುಖಚಂದ್ರನುಳ್ಳವರಾಗಿ ಮೃದುವಾದ ರೇಶ್ಮೆಯ ಬಟ್ಟೆಯನ್ನುಟ್ಟು ಮುನಿಗಳಿಗೂ ದೇವತೆಗಳಿಗೂ, ಮನುಷ್ಯರಿಗೂ ಕಣ್ಣುಗಳಿಗೆ ಆನಂದ ವನ್ನುಂಟುಮಾಡಿದರು. ಪೂಜೆ ಮಾಡಿ ಹರಿಪ್ರಸಾದಗಳಿಂದ ದೇಹ- ವನ್ನಲಂಕರಿಸಿಕೊಂಡಾಗ ಎಲ್ಲರೂ ಅವರನ್ನು ನೋಡಿ ಆನಂದಿಸಿದರು ಎಂದು ಹೇಳಿದ್ದರಿಂದ ಹರಿಭಕ್ತರು ಹರಿಪ್ರಸಾದರೂಪವಾದ ಗಂಧ, ಅಕ್ಷತೆ, ಅಂಗಾರ, ತುಳಸಿಗಳನ್ನು ಸ್ವೀಕರಿಸಬೇಕು, ಅವುಗಳಿಂದ ದೇಹಾಲಂಕಾರ ಮಾಡಿಕೊಳ್ಳಬೇಕೆಂದು ಸೂಚಿತವಾಯಿತು.

ಪರಮಸ್ಯ ಸಪರ್ಯಾ, ಕೃತಾ ಪರಮಸಪರ್ಯಾ ಯೇನ ಸಃ, ಸಾಂದ್ರಂ ಚ ಸಚ್ಛ ತತ್ ಚಂದನಂ ಚ, ಸಾಂದ್ರಸಚ್ಛಂದನಸ್ಯ ಅಂಭಃ, ಉರಸಃ ಮಂಡಲಂ ಉರೋಮಂಡಲಂ, ಭುಜೌ ಚ ಉರೋಮಂಡಲಂ ಚ ಅಂಸೌ ಚ ಭುಜೋರೋಮಂಡಲಾಂಸಾಃ, ಸಾಂದ್ರಸಚ್ಛಂದನಾಂಭಸಾ- ಪರಿಮಲಿತಾಃ ಭುಜೋರೋಮಂಡಲಾಂಸಾಃ ಯಸ್ಯ ಸಃ, ಸ್ಮಿತೇನ ರುಚಿರಂ ಮುಖಮೇವ ಇಂದುಃ ಯಸ್ಯ ಸಃ, ಸ್ನಿಗ್ಧಂ ಕೌಶೇಯಂ ವಾಸಃ ಯಸ್ಯ ಸಃ ;

ಅನಂತರ ಆಚಾರ್ಯರು ಶ್ರೀಹರಿಯ ಪ್ರಸಾದವನ್ನು ಸ್ವೀಕರಿಸಿದರು—

ಪರಮಥ ಪರಮಾನ್ನಂ ಪ್ರಾಪ್ತಮೇವಾಪ್ರಯಾಸಂ
ಪ್ರಭುರಿಹ ಬುಭುಜೇsಸೌ ವೇದವಾದಪ್ರವೀಣಃ।
ಅಜಿತಪರಮಭಕ್ತಿಃ ಸಂತತಂ ಮನ್ಯಮಾನಃ
ಸಕಲಜಗದಧೀಶಃ ಪ್ರೀಯತಾಂ ಶೌರಿರಿತ್ಥಂ ॥ ೩೯ ॥

Rarest Archiver

ಅಥ ಪ್ರಭುಃ ಸಕಲಜಗದಧೀಶಃ ಶೌರಿಃ ಪ್ರೀಯತಾಂ ಇತ್ಥಂ ಸಂತತಂ ಮನ್ಯಮಾನಃ ವೇದವಾದಪ್ರವೀಣಃ ಅಜಿತಪರಮಭಕ್ತಃ ಅಸೌ ಅಪ್ರಯಾಸಂ ಏವ ಪ್ರಾಪ್ತಂ ಪರಂ ಪರಮಾನ್ನಂ ಇಹ ಬುಭುಜೇ.

ಅಥ=ಶ್ರೀಹರಿಯ ಪೂಜಾನಂತರದಲ್ಲಿ 'ಪ್ರಭುಃ=ಸಮರ್ಥನಾದ, ಸಕಲಜಗದಧೀಶಃ = ಸಮಸ್ತಪ್ರಪಂಚಕ್ಕೆ ನಿಯಾಮಕನಾದ, ಶೌರಿಃ ಪ್ರೀಯತಾಂ = ಶ್ರೀಹರಿಯು ಸುಪ್ರೀತನಾಗಲಿ' ಇತ್ಥಂ ಸಂತತಂ ಮನ್ಯ-ಮಾನಃ = ಈರೀತಿ ಯಾವಾಗಲೂ ಅನುಸಂಧಾನಮಾಡುತ್ತಿರುವ, ವೇದವಾದಪ್ರವೀಣಃ = ವೇದಾರ್ಥವನ್ನು ಹೇಳುವುದರಲ್ಲಿ ಕುಶಲರಾದ, ಅಜಿತಪರಮಭಕ್ತಃ ಅಸೌ = ಶ್ರೀಹರಿಯ ಏಕಾಂತಭಕ್ತರಾದ ಈ ಶ್ರೀಮಧ್ವಾಚಾರ್ಯರು. ಅಪ್ರಯಾಸಂ ಪ್ರಾಪ್ತಂ = ಪ್ರಯತ್ನವಿಲ್ಲದೆ (ಶ್ರೀಹರೀಚ್ಛೆಯಿಂದ) ಒದಗಿದ, ಪರಂ ಪರಮಾನ್ನಂ = ಶ್ರೇಷ್ಠವಾದ ಶ್ರೀಹರಿಪ್ರಸಾದರೂಪವಾದ ಪಾಯಸವನ್ನು , ಬುಭುಜೇ=(ಭುಂಜಿಸಿದರು) ಊಟಮಾಡಿದರು.

ಶ್ರೀಮಧ್ವಾಚಾರ್ಯರು – 'ಸ್ವಾಮಿಯೂ ಸಕಲಜಗನ್ನಿಯಾಮಕನೂ ಆದ ಶ್ರೀಕೃಷ್ಣನು ಪ್ರಸನ್ನನಾಗಲಿ' ಎಂದು ಯಾವಾಗಲೂ ಚಿಂತಿಸುವ ಪರಮೈಕಾಂತಿಗಳು. ಅವರು ಪೂಜೆಯ ಅನಂತರ, ಪೂಜೆಯನ್ನು ನಡೆಸಿದ ಆ ದೇವಾಲಯದಲ್ಲಿ, ಪ್ರಯತ್ನವಿಲ್ಲದೆ ಹರಿಪ್ರಸಾದರೂಪದಿಂದ ದೊರಕಿದ ಉತ್ತಮವಾದ ಪಾಯಸವನ್ನು, ಯತಿಗಳಿಗೆ ಭೋಜನಾರ್ಹವಾದ ಇತರ ಆಹಾರವಸ್ತುವನ್ನೂ ಭುಂಜಿಸಿದರು. ಆಚಾರ್ಯರು ಸಕಲ ಕಾರ್ಯಗಳನ್ನೂ ಭಗವಂತನಿಗೆ ಪ್ರೀತಿಯಾಗಲೆಂದೇ ಆಚರಿಸುವವರು. ಆದುದರಿಂದ ಭಿಕ್ಷೆಯನ್ನು (ಸನ್ನ್ಯಾಸಿಗಳ ಆಹಾರ) ಪರಮಾತ್ಮನು ಸುಪ್ರೀತನಾಗಲಿ ಎಂದೇ ಚಿಂತಿಸುತ್ತಾ ಸ್ವೀಕರಿಸುತ್ತಿದ್ದರು. ಪ್ರಾಯಃ ಸೋಽಯಮನಾಯಾಸಂ ಪೂಜ್ಯತೇ ಪರಮೇಶ್ವರಃ। ಪ್ರೀಯತಾಮಿತಿ ತದ್ಭಕ್ತ್ಯಾ ಸತತಂ ವೇದಶಾಲಿಭಿಃ॥ ವೇದಜ್ಞರಾದ ವಿಪ್ರರು ಶ್ರೀಹರಿಯಲ್ಲಿ ನಿರಂತರವಾದ ಭಕ್ತಿಯಿಂದ 'ಭಗವಂತನು ಈ ಕಾರ್ಯದಿಂದ ಪ್ರಸನ್ನನಾಗಲಿ' ಎಂದು ನಿರಂತರವಾಗಿ ಪ್ರಾರ್ಥಿಸುತ್ತಲೇ ಎಲ್ಲಾ ಕಾರ್ಯಗಳನ್ನು

ಮಾಡುವರು. ಇದು ಸುಲಭವಾಗಿ ಹರಿಪೂಜೆಯನ್ನು ಸಾಧಿಸುವ ಉಪಾಯ.

ಪರಮಂ ಚ ತತ್ ಅನ್ನಂ ಚ (ಪರಮಸ್ಯ ಅನ್ನಂ) ತತ್; ನ ವಿದ್ಯತೇ ಪ್ರಯಾಸಃ ಯಥಾ ತಥಾ, ವೇದಾನಾಂ ವಾದಃ, ವೇದವಾದೇ ಪ್ರವೀಣಃ; ಪರಮಶ್ಚಾಸೌ ಭಕ್ತಶ್ಚ, ಅಜಿತಸ್ಯ ಪರಮಭಕ್ತಃ, ಸಕಲಾನಿ ಚ ತಾನಿ ಜಗಂತಿ ಚ, ಸಕಲಜಗತಾಂ ಅಧೀಶಃ, ಶೂರಸ್ಯ ಅಪತ್ಯಂ ಪುಮಾನ್ ಶೌರಿಃ.

ಬುಭುಜೇ ಬುಭುಜಾತೇ ಬುಭುಜಿರೇ ಇತ್ಯಾದಿ, ಭುಜ ಪಾಲನಾಭ್ಯವಹಾರಯೋಃ ಸಕ ಅನಿಟ್. ಪಾಲನಾರ್ಥದಲ್ಲಿ ಪರ. ಅಭ್ಯವಹಾರ= ತಿನ್ನುವುದು ಎಂಬ ಅರ್ಥದಲ್ಲಿ ಆತ್ಮನೇ. (ಸೂ. — ಭುಜೋಽನವನೇ) to protect, to eat ಪ್ರೀಯತಾಂ ಪ್ರೀಯೇತಾಂ ಪ್ರೀಯಂತಾಂ, ಪ್ರೀಯಸ್ವ ಪ್ರೀಯೇಥಾಂ ಪ್ರೀಯಧ್ವಂ, ಪ್ರೀಯೈ ಪ್ರೀಯಾವಹೈ ಪ್ರೀಯಾಮಹೈ. ಪ್ರೀಙ್ ಪ್ರೀತೌ ಅಕರ್ಮಕ. ಅನಿಟ್. ಆತ್ಮ. ಲೋಟ್.

ಭಿಕ್ಷಾಸ್ವೀಕಾರವಾದ ಮೇಲೆ ಆಚಾರ್ಯರು ಶಾಸ್ತ್ರಾರ್ಥವಿಚಾರ ಮಾಡಿದರು —

ಸಹಚರಪರಿಕ್ಲೃಪ್ತೇ ಸೂಕ್ಷ್ಮವಸ್ತ್ರಾಸ್ತೃತೇಽಸಾ-
ವವಿತನುರುಹರೂಪಾಶೀರವರ್ಯೇ ನಿಷಣ್ಣಃ।
ಅರಮಯದಿಹ ನಾನಾಹೃದ್ಯವಿದ್ಯಾವಿಲಾಸೈಃ
ಕವಿಜನಪರಿವಾರಂ ಮಂಡಯನ್ ಮಂಟಪಾಗ್ರ್ಯಂ ॥ ೪೦ ॥

ಸಹಚರಪರಿಕ್ಲೃಪ್ತೇ ಸೂಕ್ಷ್ಮವಸ್ತ್ರಾಸ್ತೃತೇ (ಸ್ತೃತೇ) ಅವಿತನುರುಹ-ರೂಪಾಶೀರವರ್ಯೇ ನಿಷಣ್ಣಃ ಮಂಟಪಾಗ್ರ್ಯಂ ಮಂಡಯನ್ ಅಸೌ ಇಹ ಕವಿಜನಪರಿವಾರಂ ನಾನಾಹೃದ್ಯವಿದ್ಯಾವಿಲಾಸೈಃ ಅರಮಯತ್.

ಸಹಚರಪರಿಕ್ಲೃಪ್ತೇ = ಶಿಷ್ಯರಿಂದ ಸಿದ್ಧಗೊಳಿಸಲ್ಪಟ್ಟ, ಸೂಕ್ಷ್ಮವಸ್ತ್ರಾಸ್ತೃತೇ = ತೆಳ್ಳಗಿರುವ ಬಟ್ಟೆಯನ್ನು ಹಾಸಿರುವ, ಅವಿತನುರುಹ-

Rarest Archive

ರೂಪ = ಕುರಿಯರೋಮದಿಂದ ನಿರ್ಮಿತವಾದ, ಔಶೀರವರ್ಯೇ = ಶ್ರೇಷ್ಠವಾದ ರತ್ನಗಂಬಳಿಯ ಆಸನದಲ್ಲಿ, ನಿಷಣ್ಣಃ-ಕುಳಿತಿರುವ, ಮಂಟಪಾಗ್ರ್ಯಂ ಶ್ರೇಷ್ಠವಾದ ಮಂಟಪವನ್ನು, ಮಂಡಯನ್ = ಅಲಂಕರಿಸುತ್ತಿರುವ, ಅಸೌ = ಈ ಶ್ರೀಮಧ್ವಾಚಾರ್ಯರು, ಇಹ = ಈ ಮಂಟಪದಲ್ಲಿ, ಕವಿಜನ-ಪರಿವಾರಂ = ತನ್ನ ಪರಿವಾರವಾದ ವಿದ್ವಾಂಸರ ಸಮೂಹವನ್ನು, ನಾನಾ-ಹೃದ್ಯವಿದ್ಯಾವಿಲಾಸೈಃ = ಅನೇಕ ಬಗೆಯ ಮನೋಹರವಾದ ವಿದ್ಯೆಯ ವಿನೋದಗಳಿಂದ, ಅರಮಯತ್ = ಸಂತೋಷಪಡಿಸಿದರು.

ಶಿಷ್ಯರು ಶ್ರೇಷ್ಠವಾದ ಒಂದು ರತ್ನಗಂಬಳಿಯನ್ನು ಹಾಸಿ ಅದನ್ನು ತೆಳ್ಳಗಿರುವ ಬಟ್ಟೆಯಿಂದ ಮುಚ್ಚಿದ್ದರು. ಈ ಶ್ರೇಷ್ಠವಾದ ಆಸನವನ್ನು ಅಲಂಕರಿಸಿದ ಆಚಾರ್ಯರು, ಆ ಮಂಟಪದಲ್ಲಿ ಕುಳಿತ ಪಂಡಿತರ ಸಮೂಹವನ್ನು ನಾನಾವಿಧವಾದ ಮನೋಹರವಾದ ಶಾಸ್ತ್ರಾರ್ಥವಿಚಾರವೆಂಬ ವಿನೋದಗಳಿಂದ ಸಂತೋಷಪಡಿಸಿದರು.

ಸಹಚರೇಣ ಪರಿಕ್ಲೃಪ್ತಂ ತಸ್ಮಿನ್, ಸೂಕ್ಷ್ಮಂ ಚ ತತ್ ವಸ್ತ್ರಂ ಚ ಸೂಕ್ಷ್ಮವಸ್ತ್ರೇಣ ಆಸ್ತೃತಂ ಸೂಕ್ಷ್ಮವಸ್ತ್ರಾಸ್ತೃತಂ ತಸ್ಮಿನ್, ಅವೀನಾಂ ತನು-ರುಹರೂಪಂ, ಔಶೀರೇಷು ವರ್ಯಂ, ಅವಿತನುರುಹರೂಪಂ ಚ ತತ್ ಔಶೀರ-ವರ್ಯಂ ಚ ಅವಿತನುರುಹರೂಪೌಶೀರವರ್ಯಂ ತಸ್ಮಿನ್, ನಾನಾ ಚ ತಾಃ ಹೃದ್ಯಾಶ್ಚ ತಾಃ ವಿದ್ಯಾಶ್ಚ, ನಾನಾಹೃದ್ಯವಿದ್ಯಾನಾಂ ವಿಲಾಸಾಃ ತೈಃ, ಕವಿಶ್ಚಾಸೌ ಜನಶ್ಚಕವಿಜನಃ, ಕವಿಜನಶ್ಚಾಸೌ ಪರಿವಾರಶ್ಚ, ಮಂಟಪೇಷು ಅಗ್ರ್ಯಃ ಮಂಟಪಾಗ್ರ್ಯಃ ತಂ;

ಅರಮಯತ್ ಅರಮಯತಾಂ ಅರಮಯನ್ ಇತ್ಯಾದಿ, ರಮು ಕ್ರೀಡಾಯಾಂ ಣಿಜಂತ ಲಜ್.

ಆಚಾರ್ಯರಲ್ಲಿ ಶಿಷ್ಯನು ಕಾರ್ಯವನ್ನು ಬಿನ್ನವಿಸಿದ ರೀತಿ —

ಅವಸರಮಧಿಗಮ್ಯ ಭ್ರೂವಿಜೃಂಭಾದಭೀಷ್ಟೋ
ಮುಖಸತತಗಲಕ್ಷ್ಮೀಭೂತಪಾಣಿಪ್ರವಾಲಃ ।
ಸ್ಮಿತನಯನವಿಕಾಸೈಸ್ತಸ್ಯ ವಿಜ್ಞಾತಭಾವಃ
ಶ್ರವಸಿ ಕಿಮಪಿ ಕಾರ್ಯಂ ಮಂತ್ರಯಾಮಾಸ ಮಂಕ್ಷು ॥೪೧॥

Rarest Archiver

ಅಭೀಷ್ಟಃ ಭ್ರೂವಿಜೃಂಭಾತ್ ಅವಸರಂ ಅಧಿಗಮ್ಯ ಸ್ಮಿತನಯನ ವಿಕಾಸೈಃ ವಿಜ್ಞಾತಭಾವಃ ತಸ್ಯ ಶ್ರವಸಿ ಕಿಮಪಿ ಕಾರ್ಯಂ ಮಂಕ್ಷು ಮುಖಸತತಗಲಕ್ಷ್ಮೀಭೂತಪಾಣಿಪ್ರವಾಲಃ ಮಂತ್ರಯಾಮಾಸ.

ಅಭೀಷ್ಟಃ = ಆಚಾರ್ಯರಿಗೆ ಸಂಮತನಾದ, ಒಬ್ಬ ಶಿಷ್ಯನು, ಭ್ರೂವಿಜೃಂಭಾತ್ = ಹುಬ್ಬಿನವಿಲಾಸದಿಂದ, (ಸಂಕೇತದಿಂದ) ಅವಸರಂ ಅಧಿಗಮ್ಯ = ಸಮಯವನ್ನು ಪಡೆದು, ಸ್ಮಿತನಯನವಿಕಾಸೈಃ = ಮಂದಹಾಸ ಮತ್ತು ಕಣ್ಣುಗಳ ಅರಳುವಿಕೆ ಇವುಗಳಿಂದ, ವಿಜ್ಞಾತಭಾವಃ=ತಿಳಿಯಲ್ಪಟ್ಟ ಅಭಿಪ್ರಾಯವುಳ್ಳವನಾಗಿ, ತಸ್ಯ ಶ್ರವಸಿ = ಆಚಾರ್ಯರ ಕಿವಿಯಲ್ಲಿ, ಕಿಮಪಿ ಕಾರ್ಯಂ = ಯಾವುದೋ ಒಂದು ಕೆಲಸವನ್ನು, ಮಂಕ್ಷು= ಬೇಗನೆ, ಮುಖಸತತಗ = ಬಾಯಿಯ ಉಸಿರಿನಗಾಳಿಗೆ, ಲಕ್ಷ್ಮೀಭೂತ= ಸಂಪತ್ತಿನಂತಿರುವ, ಪಾಣಿಪ್ರವಾಲಃ = ಕೈಯೆಂಬ ಚಿಗುರೆಲೆಯುಳ್ಳವನಾಗಿ, ಮಂತ್ರಯಾಮಾಸ = ಗುಟ್ಟಾಗಿ ಹೇಳಿದನು.

ಆಚಾರ್ಯರಿಗೆ ಅತ್ಯಂತಪ್ರಿಯನಾದ ಶಿಷ್ಯನೊಬ್ಬನು ಅವರಲ್ಲಿ ಯಾವುದೋ ಒಂದು ಕಾರ್ಯವನ್ನು ವಿಜ್ಞಾಪಿಸಿಸಲು ಸಮಯವನ್ನು ಎದುರು ನೋಡುತ್ತಿದ್ದನು. ಆಚಾರ್ಯರ ಹುಬ್ಬಿನ ಸಂಕೇತದಿಂದ ಅವನು ಇದೇ ಸಮಯವೆಂದರಿತು ಕಿರುನಗೆ ಮತ್ತು ಅರಳಿದ ಕಣ್ಣುಗಳಿಂದ ಆಚಾರ್ಯರು ಈಗ ನನ್ನ ಮಾತನ್ನು ಕೇಳಲು ಸಿದ್ಧರಾಗಿದ್ದಾರೆ ಎಂದು ಅರಿತು, ತನ್ನ ಬಾಯಿಯ ಗಾಳಿಯು ಆಚಾರ್ಯರಿಗೆ ತಗಲಬಾರದೆಂದು ಮುಖಕ್ಕೆ ಚಿಗುರಿನಂತಹ ಅಂಗೈಯನ್ನು ಅಡ್ಡ ಹಿಡಿದು ಆಚಾರ್ಯರ ಕಿವಿಯಲ್ಲಿ ಬೇಗನೇ ಯಾವುದೋ ಒಂದು ಕಾರ್ಯವನ್ನು ಮೆಲ್ಲನೆ ವಿಜ್ಞಾಪಿಸಿದನು.

ಭ್ರುವಃ ವಿಜೃಂಭಃ ತಸ್ಮಾತ್, ಸತತಂ ಗಚ್ಛತೀತಿ ಸತತಗಃ (ಸದಾಗತಿಃ=ಗಾಳಿ) ಮುಖಸ್ಯ ಸತತಗಃ, ಮುಖಸತತಗಸ್ಯ ಲಕ್ಷ್ಮೀಭೂತಃ, ಪಾಣಿರೇವ ಪ್ರವಾಲಃ, ಮುಖಸತತಗಲಕ್ಷ್ಮೀಭೂತಃ ಪಾಣಿಪ್ರವಾಲಃ ಯಸ್ಯ ಸಃ, ನಯನಯೋಃ ವಿಕಾಸಾಃ, ಸ್ಮಿತಂ ಚ ನಯನ-ವಿಕಾಸಾಶ್ಚ ಸ್ಮಿತನಯನವಿಕಾಸಾಃ ತೈಃ, ವಿಜ್ಞಾತಃ ಭಾವಃ ಯೇನ ಸಃ;

Rarest Archiver

ಮಂತ್ರಯಾಮಾಸ ಮಂತ್ರಯಾಮಾಸತುಃ ಮಂತ್ರಯಾಮಾಸುಃ ಇತ್ಯಾದಿ, ಮತ್ರಿ ಗುಪ್ತಭಾಷಣೇ ಲಿಟ್. ಇದು ಆತ್ಮನೇಪದಿ. ಆದರೆ ಮಂತ್ರಂ ಕರೋತಿ ಮಂತ್ರಯತಿ ಎಂಬ ವ್ಯುತ್ಪತ್ತಿಯಿಂದ 'ತತ್ಕರೋತಿ ತದಾಚಷ್ಟೇ' ಎಂಬ ನಿಯಮದಂತೆ ಪರಸ್ಮೈಪದಮಾಡಿಕೊಳ್ಳಬೇಕು.

ಶಿಷ್ಯನು ತಿಳಿಸಿದಾಗ ಆಚಾರ್ಯರ ದರ್ಶನಕ್ಕಾಗಿ ಬಂದ ಜನತೆಯು ಬಂದು ವಂದಿಸಿತು —

ಪ್ರಣತಿಪರಮಕೃತ್ಯಾಃ ಸನ್ಮತೇರ್ಯೇ ಜನೌಘಾಃ
ವಿಬಭುರನತಿದೂರೇ ಸಂಹತಾಸ್ತಾನತೀತ್ಯ ।
ಅಹಮಹಮಿಕಯಾಶು ಪ್ರಾಪ್ಯ ಪಾರ್ಶ್ವಂ ಪ್ರಣೇಮುಃ
ಬಹವ ಇಹ ಗೃಹಸ್ಥಾಃ ಪೂರ್ವಸೇವಾಂ ವಿಧಾತುಂ ॥ ೪೨ ॥

ಇಹ ಬಹವಃ ಗೃಹಸ್ಥಾಃ ಪೂರ್ವಸೇವಾಂ ವಿಧಾತುಂ ಅಹಮಹಮಿಕಯಾ ಆಶು ಪಾರ್ಶ್ವಂ ಪ್ರಾಪ್ಯ ಪ್ರಣತಿಪರಮಕೃತ್ಯಾಃ ಯೇ ಜನೌಘಾಃ ಸನ್ಮತೇಃ ಅನತಿದೂರೇ ಸಂಗತಾಃ ವಿಬಭುಃ ತಾನ್ ಅತೀತ್ಯ ಪ್ರಣೇಮುಃ.

ಇಹ = ಈ ಸಭೆಯಲ್ಲಿ, ಬಹವಃ ಗೃಹಸ್ಥಾಃ = ಅನೇಕಮಂದಿ ಕುಟುಂಬಿಗಳು, ಪೂರ್ವಸೇವಾಂ ವಿಧಾತುಂ = ಮೊದಲಿನ ಸೇವೆಯನ್ನು ಮಾಡುವುದಕ್ಕಾಗಿ, ಅಹಮಹಮಿಕಯಾ=ನಾನು ಮೊದಲು ಮಾಡುವೆನು, ನಾನು ಮೊದಲು ಮಾಡುವೆನು ಎಂಬ ಅಭಿಪ್ರಾಯದಿಂದ, ಆಶು ಪಾರ್ಶ್ವಂ ಪ್ರಾಪ್ಯ = ಬೇಗನೆ ಹತ್ತಿರಕ್ಕೆ ಬಂದು, ಪ್ರಣತಿಪರಮಕೃತ್ಯಾಃ= ನಮಸ್ಕಾರವೇ ಮುಖ್ಯಕೆಲಸವಾಗಿ ಉಳ್ಳ, ಯೇ ಜನೌಘಾಃ = ಯಾವ ಜನರ ಗುಂಪುಗಳು, ಸನ್ಮತೇಃ ಅನತಿದೂರೇ = ಶ್ರೀಪೂರ್ಣಪ್ರಜ್ಞರ ಹತ್ತಿರದಲ್ಲಿ, ಸಂಗತಾಃ = ಸೇರಿದವುಗಳಾಗಿ, ವಿಬಭುಃ = ಶೋಭಿಸಿದವೋ, ತಾನ್ ಅತೀತ್ಯ = ಅವರನ್ನು ದಾಟಿ ಬಂದು, ಪ್ರಣೇಮುಃ = ನಮಸ್ಕರಿಸಿದರು.

ಆ ಸಭಾಮಂಟಪದಲ್ಲಿ ಅನೇಕಜನಸದ್ಗೃಹಸ್ಥರು ಸೇರಿದ್ದರು. ಅವರಲ್ಲಿ ಕೆಲವರು ಆಚಾರ್ಯರ (ಪಾದ) ಸೇವಾಮುಂತಾದ ಕಾರ್ಯಕ್ಕಾಗಿ ಬಂದಿದ್ದರು. ಮತ್ತೆಕೆಲವರು ನಮಸ್ಕಾರಮಾಡಿ ಹೋಗುವ ಉದ್ದೇಶವನ್ನಷ್ಟೇ ಇಟ್ಟುಕೊಂಡಿದ್ದರು. ಆಚಾರ್ಯರ ಸೇವೆಯಲ್ಲಿ ಉತ್ಕಂಠಿತರಾದ

Rarest Archiver

ಮೊದಲನೆಯ ರೀತಿಯ ಜನರು ನಾನು ಮೊದಲು ಸೇವಿಸಬೇಕು, ನಾನು ಮೊದಲು ಸೇವಿಸಬೇಕು ಎಂದು ಕೇವಲನಮಸ್ಕಾರಕ್ಕಾಗಿ ಬಂದಿರುವ ಜನರ ಗುಂಪುಗಳನ್ನು ದಾಟಿ ಬಂದು ಆಚಾರ್ಯರ ಸನ್ನಿಧಿಯಲ್ಲಿ ನಮಿಸಿದರು.

ಪ್ರಣತಿರೇವ ಪರಮಂ ಕೃತ್ಯಂ ಯೇಷಾಂ ತೇ, ಸತೀ ಮತಿಃ ಯಸ್ಯ ಸಃ ಸನ್ಮತಿಃ ತಸ್ಯ, ಜನಾನಾಂ ಓಘಾಃ ಜನೌಘಾಃ, ನ ಅತಿದೂರಂ ಅನತಿದೂರಂ ತಸ್ಮಿನ್, ಅಹಂ ಅಹಂ ಶಬ್ದಃ ಅಸ್ತಿ ಅತ್ರ ಇತಿ ಅಹಮಹಮಿಕಾ ತಯಾ, ಪೂರ್ವಾ ಚ ಸಾ ಸೇವಾ ಚ ತಾಂ ;

ವಿ + ಬಭೌ ಬಭತುಃ ಬಭುಃ ಇತ್ಯಾದಿ ಭಾ ದೀಪ್ತೌ ಅಕ. ಲಿಟ್. ಪ್ರ + ನನಾಮ ನೇಮತುಃ ನೇಮುಃ, ನೇಮಿಥ ನನಂಥ ನೇಮಥುಃ ಇತ್ಯಾದಿ ಣಮ (ನಮ್) ಪ್ರಹ್ವತ್ವೇ ಶಬ್ದೇ ಚ ಲಿಟ್.

ವಂದಿಸುವ ಜನರನ್ನು ಆಚಾರ್ಯರು ಅಭಿನಂದಿಸಿದರು —

ವಿವಿಧಜನಪದಸ್ಥಾಃ ಪ್ರಾಕ್‌ಶ್ರುತೇಭ್ಯೋ ಗುಣೇಭ್ಯಃ
ಶತಗುಣಗುಣಮೇನಂ ವಿಸ್ಮಿತಾ ವೀಕ್ಷಮಾಣಾಃ ।
ಮುಕುಲಿತಕರಪದ್ಮಾ ಆಸ್ಯತಾಮಿತ್ಯವಾಪ್ತಾ
ಪ್ರಚುರತರಹೃದಾ ಸಂಭಾವಯಾಂಚಕ್ರಿರೇಽನ್ಯೇ ॥ ೪೩ ॥

ಪ್ರಾಕ್‌ಶ್ರುತೇಭ್ಯಃ ಗುಣೇಭ್ಯಃ ಶತಗುಣಗುಣಂ ಏನಂ ವೀಕ್ಷಮಾಣಾಃ ವಿಸ್ಮಿತಾಃ ಮುಕುಲಿತಕರಪದ್ಮಾಃ ಅವಾಪ್ತಾಃ ವಿವಿಧಜನಪದಸ್ಥಾಃ ಅನ್ಯೇ ಪ್ರಚುರತರಹೃದಾ 'ಆಸ್ಯತಾಂ' ಇತಿ ಸಂಭಾವಯಾಂಚಕ್ರಿರೇ.

ಪ್ರಾಕ್‌ಶ್ರುತೇಭ್ಯಃ = ಹಿಂದೆಕೇಳಿದ್ದ, ಗುಣೇಭ್ಯಃ = ಗುಣಗಳಿಗಿಂತ, ಶತಗುಣಗುಣಂ = ನೂರುಮಡಿಗುಣಗಳುಳ್ಳ, ಏನಂ = ಈ ಶ್ರೀಮಧ್ವಾಚಾರ್ಯರನ್ನು, ವೀಕ್ಷಮಾಣಾಃ = ನೋಡುತ್ತಿರುವ, ವಿಸ್ಮಿತಾಃ = ಆಶ್ಚರ್ಯಪಟ್ಟಿರುವ, ಮುಕುಲಿತಕರಪದ್ಮಾಃ = ಜೋಡಿಸಿದ ಕರಕಮಲಗಳುಳ್ಳವರಾದ, ಅವಾಪ್ತಾಃ = ಅಲ್ಲಿ ಬಂದುಸೇರಿದ, ವಿವಿಧಜನಪದಸ್ಥಾಃ ಅನ್ಯೇ = ಬೇರೆ ಬೇರೆ ಪ್ರದೇಶದ ಇತರಜನರೂ, ಪ್ರಚುರತರಹೃದಾ =

Rarest Archiver

ಶ್ರೀಪೂರ್ಣಪ್ರಜ್ಞಾಚಾರ್ಯರಿಂದ, ಆಸ್ಯತಾಂ ಇತಿ=ಕುಳಿತುಕೊಳ್ಳೋಣ ವಾಗಲಿ ಎಂದು, ಸಂಭಾವಯಾಂಚಕ್ರಿರೇ=ಸನ್ಮಾನಿಸಲ್ಪಟ್ಟರು.

ಅನೇಕದೇಶಗಳಿಂದ ಬೇರೆ ಬೇರೆ ಜನರು ಆಚಾರ್ಯರನ್ನು ನೋಡಲು ಅಲ್ಲಿಗೆ ಬಂದಿದ್ದರು. ಅವರು ತಾವು ಮೊದಲು ಕೇಳಿ ತಿಳಿದ ಗುಣಗಳಿಗಿಂತ ನೂರುಪಟ್ಟು ಹೆಚ್ಚುಗುಣಗಳುಳ್ಳ ಆಚಾರ್ಯರನ್ನು ಪ್ರತ್ಯಕ್ಷವಾಗಿ ನೋಡುತ್ತಾ, ಆಶ್ಚರ್ಯಪಟ್ಟು ಕರಕಮಲಗಳನ್ನು ಜೋಡಿಸಿ ನಿಂತರು. ಆಚಾರ್ಯರು ಅವರನ್ನು 'ಕುಳಿತು ಕೊಳ್ಳಿರಿ' ಎಂದು ಸನ್ಮಾನಿಸಿದರು.

ವಿವಿಧಾಶ್ಚ ತೇ ಜನಪದಾಶ್ಚ ವಿವಿಧಜನಪದೇಷು ತಿಷ್ಠಂತೀತಿ ವಿವಿಧ ಜನಪದಸ್ಥಾಃ, ಶತಂ ಗುಣಾಃ ಯೇಷಾಂ ತೇ, ಶತಗುಣಾಃ ಗುಣಾಃ ಯಸ್ಯ ಸಃ ಶತಗುಣಗುಣಗುಣಃ ತಂ, ಕರೌ ಏವ ಪದ್ಮೇ, ಮುಕುಲಿತೇ ಕರಪದ್ಮೇ ಯೇಷಾಂ ತೇ, ಅತಿಶಯೇನ ಪ್ರಚುರಂ, ಪ್ರಚುರತರಂ ಹೃತ್ ಯಸ್ಯ ಸಃ ತೇನ ;

ಆಸ್ಯತಾಂ ಆಸ ಉಪವೇಶನೇ ಭಾವೇ ಲೋಟ್ ಎಲ್ಲಾ ಪುರುಷ ವಚನಗಳಲ್ಲಿ ಒಂದೇ ರೂಪ. ಸಂಭಾವಯಾಂ + ಚಕ್ರೇ, ಚಕ್ರಾತೇ ಚಕ್ರಿರೇ, ಇತ್ಯಾದಿ. ಸಂ ಉಪ. ಭೂಧಾತು ಣಿಜಂತ ಕರ್ಮಣಿ ಲಿಟ್ ಪ್ರ. ಪು. ಬಹು.

ಆಗ ಪಾಠಕ್ಕಾಗಿ ಸೇರುವ ಶಿಷ್ಯರ ಸಂಭ್ರಮವು ಹೀಗಿತ್ತು —

ಅಲಮಲಮನುವಾದೇನಾನುವಾಚ್ಯೇತ ಪಶ್ಚಾತ್
ನನು ಗುರವ ಇದಾನೀಮುದ್ಯತಾ ಹಿ ಪ್ರವಕ್ತುಂ ।
ನ ಮನನಮಧುನಾ ದ್ರಾಗಾವ್ರಜೇತ್ಯಾಹ್ವಯತ್ತಾನ್
ಶ್ರುತಪರಿಚಯಸಕ್ತಾನ್ ಶ್ರಾವಕಾನ್ ಶ್ರಾವಕಾಗ್ರ್ಯಃ ॥೪೪॥

ಅನುವಾದೇನ ಅಲಂ ಅಲಂ. ಪಶ್ಚಾತ್ ಅನುವಾಚ್ಯೇತ. ಮನನಂ ಅಧುನಾ ನ. ಹಿ ಇದಾನೀಂ ಗುರವಃ ಪ್ರವಕ್ತುಂ ಉದ್ಯತಾಃ ನನು. ದ್ರಾಕ್ ಆವ್ರಜ-ಇತಿ ಶ್ರಾವಕಾಗ್ರ್ಯಃ ಶ್ರುತಪರಿಚಯಸಕ್ತಾನ್ ತಾನ್ ಶ್ರಾವಕಾನ್ ಆಹ್ವಯತ್.

Rarest Archiver

ಅನುವಾದೇನ ಅಲಂ ಅಲಂ=ಓದಿದ ಪ್ರಮೇಯವನ್ನು ಪುನಃ ಪುನಃ ಆವೃತ್ತಿ ಮಾಡುವುದು ಸಾಕು ಸಾಕು. ಪಶ್ಚಾತ್ ಅನುವಾಚ್ಯೇತ= ಅನಂತರಪಾಠದ ಆವೃತ್ತಿಯು ಮಾಡಲ್ಪಡಬಹುದು. ಮನನಂ ಅಧುನಾ ನ = ಚಿಂತನೆಯು ಈಗ ಅಲ್ಲ, ಹಿ = ಏಕೆಂದರೆ, ಇದಾನೀಂ = ಈಗ, ಗುರವಃ=ಗುರುಗಳು, ಪ್ರವಕ್ತುಂ ಉದ್ಯತಾಃ=ವ್ಯಾಖ್ಯಾನಮಾಡುವುದಕ್ಕೆ ಉದ್ಯುಕ್ತರಾಗಿದ್ದಾರೆ. ದ್ರಾಕ್ ಆವ್ರಜ = ಬೇಗನೆ ಬಾ; ಇತಿ= ಹೀಗೆಂದು, ಶ್ರಾವಕಾಗ್ರ್ಯಃ=ಶಿಷ್ಯರಲ್ಲಿ ಹಿರೇಯುವನು, (ಹಿರೇಮಾಣಿ) ಶ್ರುತಪರಿಚಯಸಕ್ತಾನ್ = ಶ್ರವಣಮಾಡಿದ ಗ್ರಂಥದ ಅಭ್ಯಾಸದಲ್ಲಿ ಆಸಕ್ತರಾದ, ತಾನ್ ಶ್ರಾವಕಾನ್=ಆ ಇತರ ಶಿಷ್ಯರನ್ನು, ಆಹ್ವಯತ್ =ಕರೆದನು.

'ಎಲೈ ಸ್ನೇಹಿತನೇ ! ಪ್ರಮೇಯಾನುವಾದವನ್ನು ನಿಲ್ಲಿಸು. ಗ್ರಂಥಾವೃತ್ತಿಯೂ ಈಗ ಬೇಡ. ಈಗ ಚಿಂತನವೂ ಕೂಡ ಬೇಡ. ಪಾಠವಾದ ಮೇಲೆ ಮಾಡಬಹುದು ಗುರುಗಳು ಪಾಠ ಹೇಳಲು ಪ್ರಾರಂಭಿಸುತ್ತಾರೆ. ಆದುದರಿಂದ ನೀನು ಬೇಗನೆ ಬಾ.' ಎಂದು ಮುಖ್ಯಶಿಷ್ಯನು ಹಿಂದಿನ ದಿನದ ಪಾಠವನ್ನು ಅಭ್ಯಾಸಮಾಡುತ್ತಿರುವ ಶಿಷ್ಯರನ್ನುಕರೆದನು. (ಹಿಂದಿನ ದಿನ ಕೇಳಿದ ಗ್ರಂಥದ ಪ್ರಮೇಯಾನುವಾದ, ಅನೇಕಬಾರಿಗ್ರಂಥಾವೃತ್ತಿ, ಗ್ರಂಥವನ್ನು ಬಿಟ್ಟು ವಿಷಯವನ್ನು ಮನಸ್ಸಿನಲ್ಲಿಯೇ ಚಿಂತಿಸುವುದು, ಇವೆಲ್ಲಾ ಅಭ್ಯಾಸದ ಕ್ರಮ ಎಂದು ಇದರಿಂದ ತಿಳಿದು ಬರುತ್ತದೆ.)

ಶ್ರುತಸ್ಯ ಪರಿಚಯಃ, ಶ್ರುತಪರಿಚಯೇ ಸಕ್ತಾಃ ತಾನ್, ಶ್ರಾವಕೇಷು ಅಗ್ರ್ಯಃ; ಅನುವಾದೇನ ಅಲಂ ಅಲಂ ಎಂಬಲ್ಲಿ 'ಗಮ್ಯಮಾನಾಪಿ ಕ್ರಿಯಾ ಕಾರಕವಿಭಕ್ತೌ ಪ್ರಯೋಜಿಕಾ' ಎಂಬ ವಚನದಂತೆ ತೃತೀಯಾ; ಈಗ ಅನುವಾದದಿಂದ ಸಾಧ್ಯವಾದುದು ಇಲ್ಲ-ಪ್ರಯೋಜನವಿಲ್ಲ ಎಂದು ಅರ್ಥ. 'ಅಲಂ ಶ್ರಮೇಣ' ಎಂಬಂತೆ; ಇಲ್ಲಿ ಸಂಭ್ರಮದಲ್ಲಿ ದ್ವಿರುಕ್ತಿ.

ಅನು + ವಾಚ್ಯೇತ ವಾಚ್ಯೇಯಾತಾಂ ವಾಚ್ಯೇರನ್ ಇತ್ಯಾದಿ; ಬ್ರೂಞ್ ಧಾತು ವಚ್ ಆದೇಶ, ಣಿಜಂತ ಕರ್ಮಣಿ ವಿಧಿಲಿಙ್. ತ್ವಂ ಪಶ್ಚಾತ್ ಅನುವಾಚಯೇಃ (ಕರ್ತರಿ) ಆ + ವ್ರಜ, ವ್ರಜತು ವ್ರಜತಾತ್

Rarest Archiver

ವ್ರಜತಾಂ ವ್ರಜಂತು, ವ್ರಜ ವ್ರಜತಾತ್ ವ್ರಜತಂ ವ್ರಜತ; ಇತ್ಯಾದಿ ವ್ರಜ ಗತೌ ಲೋಟ್ ಮ. ಪು. ಏಕ. ಆಹ್ವಯತ್ ಆಹ್ವಯತಾಂ ಆಹ್ವಯನ್ ಇತ್ಯಾದಿ. ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ ಲಙ್.

ಆಗ ಪಾಠಕೇಳುವ ಜನರಿಗೆ ಆದ ಆನಂದವು ವರ್ಣನಾತೀತ —

ಅಧಿಕಧಿಷಣಮೇನಂ ವ್ಯಾಖ್ಯಯಾ ಶೋಭಮಾನಂ
ಹರಿಮಿವ ಕವಿವರ್ಯಂ ಸತ್ಯವತ್ಯಾಸ್ತನೂಜಂ ।
ಸತತಮನಿಮಿಷಂ ಸಂದೃಶ್ಯ ಸಾನಂದಚಿತ್ತಾಃ
ಸಮಯಮಪಿ ಗತಂ ಸಂವಿದ್ರತೇ ನ ಸ್ಮ ಲೋಕಾಃ ॥ ೪೫ ॥

ಲೋಕಾಃ ವ್ಯಾಖ್ಯಯಾ ಶೋಭಮಾನಂ ಕವಿವರ್ಯಂ ಸತ್ಯವತ್ಯಾಃ ತನೂಜಂ ಹರಿಂ ಇವ ಏನಂ ಅಧಿಕಧಿಷಣಂ ಸತತಂ ಅನಿಮಿಷಂ ಸಂದೃಶ್ಯ ಸಾನಂದಚಿತ್ತಾಃ ಗತಂ ಸಮಯಂ ಅಪಿ ನ ಸಂವಿದ್ರತೇ ಸ್ಮ.

ಲೋಕಾಃ = ಜನರು, ವ್ಯಾಖ್ಯಯಾ ಶೋಭಮಾನಂ = ಪ್ರವಚನದಿಂದ ಪ್ರಕಾಶಿಸುತ್ತಿರುವ, ಕವಿವರ್ಯಂ = ಜ್ಞಾನಿಶ್ರೇಷ್ಠರಾದ, ಸತ್ಯವತ್ಯಾಃ ತನೂಜಂ = ಸತ್ಯವತೀದೇವಿಯ ಮಗನಾದ, ಹರಿಂ ಇವ = ವೇದವ್ಯಾಸರನ್ನೋ ಎಂಬಂತೆ, ಏನಂ ಅಧಿಕಧಿಷಣಂ = ಈ ಶ್ರೀಪೂರ್ಣಪ್ರಜ್ಞರನ್ನು, ಸತತಂ = ಎಡೆಬಿಡದೆ, ಅನಿಮಿಷಂ = ರೆಪ್ಪೆ ಮುಚ್ಚದಂತೆ, ಸಂದೃಶ್ಯ = ನೋಡಿ, ಸಾನಂದಚಿತ್ತಾಃ = ಸಂತುಷ್ಟವಾದ ಮನುಸ್ಸುಉಳ್ಳವರಾಗಿ, ಗತಂ ಸಮಯಂ ಅಪಿ = ಕಳೆದು ಹೋದ ಕಾಲವನ್ನೂ, ನ ಸಂವಿದ್ರತೇ ಸ್ಮ = ತಿಳಿಯಲಿಲ್ಲ.

ಜ್ಞಾನಿಶ್ರೇಷ್ಠರಾದ ಆಚಾರ್ಯರು ಪಾಠಹೇಳುತ್ತಿರುವಾಗ ಮತ್ತಷ್ಟು ಪ್ರಕಾಶಿಸುತ್ತಿದ್ದರು. ಜನರು ಎಡೆಬಿಡದೆ ಎವೆಯಿಕ್ಕದೆ ಸತ್ಯವತೀದೇವಿಯ ಮಗನಾದ ವೇದವ್ಯಾಸರಾಗಿ ಅವತರಿಸಿದ ಶ್ರೀಹರಿಯನ್ನೋ ಎಂಬಂತೆ ಆಚಾರ್ಯರನ್ನು ನೋಡುತ್ತಾ ತುಂಬಾ ಆನಂದಭರಿತರಾಗಿ ಸಮಯ ಕಳೆದುದನ್ನು ತಿಳಿಯಲೇ ಇಲ್ಲ.

ಅಧಿಕಾ ಧಿಷಣಾ ಯಸ್ಯ ಸಃ ತಂ, ಕವಿಷು ವರ್ಯಃ ತಂ, ತನ್ವಾಃ ಜಾಯತ ಇತಿ ತನೂಜಃ ತಂ, ನ ವಿದ್ಯತೇ ನಿಮೇಷಃ ಯಸ್ಮಿನ್ ಕರ್ಮಣಿ

Rarest Archiver

ತದ್ಯಥಾ ಭವತಿ ತಥಾ, ಆನಂದೇನ ಸಹಿತಂ ಸಾನಂದಂ, ಸಾನಂದಂ ಚಿತ್ತಂ ಯೇಷಾಂ ತೇ.

ಸಂ + ವಿತ್ತೇ. ಸಂವಿದಾತೇ ಸಂವಿದ್ರತೇ ಸಂವಿದತೇ, ಸಂವಿತ್ಸೇ ಸಂವಿದಾಥೇ ಸಂವಿದ್ಧ್ವೇ, ಸಂವಿದೇ ಸಂವಿದ್ವಹೇ ಸಂವಿದ್ಮಹೇ, ವಿದ ಜ್ಞಾನೇ ಸಕ. ಸೇಟ್. ಪರ. **'ವಿದಿಪ್ರಚ್ಛಿಸ್ವರತೀನಾಮುಪಸಂಖ್ಯಾನಂ'** ಎಂಬ ವಚನದಿಂದ ಆತ್ಮನೇಪದ. ಸಂವಿದ್ರತೇ ಎಂಬಲ್ಲಿ ವೇತ್ತೇರ್ವಿಭಾಷಾ ಎಂಬ ಸೂತ್ರದಿಂದ 'ರುಟ್' ಆಗಮ ವಿಕಲ್ಪ. ಸಂವಿದತೇ ಎಂಬ ಪಾಠದಲ್ಲಿ ವಿದ ವಿಚಾರಣೇ ಎಂಬ ರುಧಾದಿಧಾತು, ಶ್ನಮ್‌ವಿಕರಣ. ವಿಂತೇ ವಿಂದಾತೇ ವಿಂದತೇ, ವಿನ್ತ್ಸೇ ವಿಂದಾಥೇ ವಿಂದ್ಧ್ವೇ, ವಿಂದೇ ವಿಂದ್ವಹೇ ವಿಂದ್ಮಹೇ ಎಂದು ರೂಪ.

ಆಗ ಸೂರ್ಯಾಸ್ತಮಯವಾಯಿತು —

ಉದಯಮಿತ ಇವಾಸ್ತಂ ಯಂಶ್ಚ ಭಾನುರ್ಬಭಾಸೇ
ಸ್ಫುಟಮಕಲುಷರೂಪೋ ದರ್ಶನೀಯೋಽನುರಾಗೀ ।
ಶುಚಿಹರಿಪದಮಾಪತ್‌ಸಂಪದೋರಾಶ್ರಿತಾನಾಂ
ನ ಹಿ ಭವತಿ ವಿಶೇಷಃ ಸ್ವಪ್ರಕಾಶೋನ್ನತಾನಾಂ ॥೪೬॥

ಅಕಲುಷರೂಪಃ ದರ್ಶನೀಯಃ ಅನುರಾಗೀ ಭಾನುಃ ಅಸ್ತಂ ಯನ್ ಚ ಉದಯಂ ಇತಃ ಇವ ಸ್ಫುಟಂ ಬಭಾಸೇ । ಶುಚಿಹರಿಪದಂ ಆಶ್ರಿತಾನಾಂ ಸ್ವಪ್ರಕಾಶೋನ್ನತಾನಾಂ ಆಪತ್‌ಸಂಪದೋಃ ವಿಶೇಷಃ ನ ಭವತಿ ಹಿ ॥

ಅಕಲುಷರೂಪಃ = ನಿರ್ಮಲವಾದ ಆಕೃತಿಯುಳ್ಳ, ದರ್ಶನೀಯಃ = ನೋಡಲು ಯೋಗ್ಯನಾದ, ಅನುರಾಗೀ = ಕೆಂಪುಬಣ್ಣವುಳ್ಳ, ಪ್ರೇಮವುಳ್ಳ, ಭಾನುಃ = ಸೂರ್ಯನು, ಅಸ್ತಂ ಯನ್ ಚ = ಮುಳುಗುತ್ತಿರುವವನಾದರೂ, ಉದಯಂ ಇತಃ ಇವ = ಉದಯವನ್ನು ಹೊಂದಿದವನಂತೆ, ಸ್ಫುಟಂ ಬಭಾಸೇ = ಚೆನ್ನಾಗಿ ಹೊಳೆದನು. ಶುಚಿ = ನಿರ್ಮಲವಾದ, ಪವಿತ್ರವಾದ, ಹರಿಪದಂ = ಆಕಾಶವನ್ನು, ವಿಷ್ಣುವಿನ ಪಾದವನ್ನು, ಆಶ್ರಿತಾನಾಂ = ಆಶ್ರಯಿಸಿದ, ಸ್ವಪ್ರಕಾಶೋನ್ನತಾನಾಂ = ತಮ್ಮ ಸ್ವಂತಪ್ರಕಾಶದಿಂದ ಮೇಲೇರಿದವರಿಗೆ, ಉತ್ಕೃಷ್ಟರಾದವರಿಗೆ, ಆಪತ್‌ಸಂಪದೋಃ = ಆಪತ್ತು

ಮತ್ತು ಸಂಪತ್ತುಗಳ, ವಿಶೇಷಃ = ಭೇದವು ; ನ ಭವತಿ ಹಿ = ಇರುವುದಿಲ್ಲವಷ್ಟೆ.

ಸೂರ್ಯನು ನಿರ್ಮಲಸ್ವರೂಪನಾಗಿ ಬೆಳಿಗ್ಗೆ ಮತ್ತು ಸಾಯಂಕಾಲ ನೋಡಲು ಯೋಗ್ಯನಾಗಿದ್ದನು, ಸಂಧ್ಯಾಕಾಲದ ಕೆಂಪು ಬಣ್ಣವನ್ನು ಧರಿಸಿ ಸೂರ್ಯನು ಆಗ ಅಸ್ತಂಗತನಾಗುತ್ತಿದ್ದನು. ಆದರೂ ಉದಯಿಸುವ ಸೂರ್ಯನಂತೆಯೇ ಸ್ಪಷ್ಟವಾಗಿ ಪ್ರಕಾಶಿಸಿದನು. ಅದು-ಯುಕ್ತವೇ ಸರಿ ಏಕೆಂದರೆ ನಿರ್ಮಲವಾದ ವಿಷ್ಣುವಿನ ಪಾದವನ್ನೆಂಬಂತೆ ವಿಷ್ಣುಪದ (ಆಕಾಶ) ವನ್ನು ಆಶ್ರಯಿಸಿ ತಮ್ಮ ಪ್ರಕಾಶದಿಂದಲೇ ಶ್ರೇಷ್ಠರಾದ ಸೂರ್ಯನಂತಹ ಸಜ್ಜನರಿಗೆ ಸಂಪತ್ತಿನಲ್ಲಿಯೂ ಆಪತ್ತಿನಲ್ಲಿಯೂ ಸುಖದುಃಖವೆಂಬ ವ್ಯತ್ಯಾಸವುಂಟಾಗುವುದಿಲ್ಲ. ದೇವರನ್ನು ನಂಬಿದವರು ಸಂಪತ್ತಿನಲ್ಲಿಯೂ ಆಪತ್ತಿನಲ್ಲಿಯೂ ಸುಖದುಃಖಗಳ ಏರುಪೇರಿಲ್ಲದೆ ಒಂದೇರೀತಿಯಿಂದ ಇರುತ್ತಾರೆ. ನಿರ್ಮಲಸ್ವಭಾವವುಳ್ಳ, ಸೌಮ್ಯರೂಪವುಳ್ಳ ಎಲ್ಲರಲ್ಲಿಯೂ ಪ್ರೀತಿಯುಳ್ಳ ಸತ್ಪುರುಷನಂತೆ ಇವೇ ಗುಣಗಳಿಂದ ಕೂಡಿದ ಸೂರ್ಯನು ಮುಳುಗುವಾಗಲೂ ಕಂಗೊಳಿಸಿದನು. ಸೂರ್ಯಾಸ್ತಮಯವು ಸೂರ್ಯನ ಆಪತ್ತೆಂದು ತೋರಲಿಲ್ಲ ಎಂದು ಭಾವ.

ನ ಕಲುಷಂ, ಅಕಲುಷಂ ರೂಪಂ ಯಸ್ಯ ಸಃ, ಅನುರಾಗಃ ಅಸ್ಯ ಅಸ್ತೀತಿ, ಹರೇಃ ಪದಂ ತತ್, ಆಪಚ್ಚ ಸಂಪಚ್ಚ ಆಪತ್ಸಂಪದೌ ತಯೋಃ, ಸ್ವಸ್ಯ ಪ್ರಕಾಶಃ ಸ್ವಪ್ರಕಾಶಃ, ತೇನ ಉನ್ನತಾಃ, ತೇಷಾಂ.

ಬಭಾಸೇ ಬಭಾಸಾತೇ ಬಭಾಸಿರೇ ಇತ್ಯಾದಿ ಭಾಸೃ ದೀಪ್ತೌ ಲಿಟ್.

ಆಗ ಅರ್ಧ ಮುಳುಗುತ್ತಿರುವ ಸೂರ್ಯನ ಸೊಬಗು ಹೀಗಿತ್ತು —

ಮರಕತಮಣಿವರ್ಣೇ ಭೂತಧಾತ್ರೀಪುರಂಧ್ರ್ಯಾ
ಲಸತಿ ಜಲಧಿವಾಸಸ್ಯರ್ಧಲೀನಃ ಕ್ಷಣಾರ್ಧಂ ।
ಅರುಣತರಣಿಬಿಂಬಚ್ಛದ್ಮನಾ ಪದ್ಮರಾಗಃ
ಕಪಿಶಕರಕಲಾಪೋಲ್ಲಾಸ್ಯಭೂತ್ ಪ್ರೇಕ್ಷಣೀಯಃ ॥ ೪೭ ॥

Rarest Archiver

ಭೂತಧಾತ್ರೀಪುರಂಧ್ರ್ಯಾಃ ಮರಕತಮಣಿವರ್ಣೇ ಲಸತಿ ಜಲಧಿವಾಸಸಿ ಕ್ಷಣಾರ್ಧಂ ಅರ್ಧಲೀನಃ ಅರುಣತರಣಿಬಿಂಬಚ್ಛದ್ಮನಾ ಕಪಿಶಕರಕಲಾ-ಪೋಲ್ಲಾಸೀ ಪದ್ಮರಾಗಃ ಪ್ರೇಕ್ಷಣೀಯಃ ಅಭೂತ್ |

ಭೂತಧಾತ್ರೀಪುರಂಧ್ರ್ಯಾಃ = ಎಲ್ಲಾಪ್ರಾಣಿಗಳ ತಾಯಿಯಾದ ಭೂದೇವಿಯೆಂಬ ಮಕ್ಕಳಿರುವ ಮುತ್ತೈದೆಹೆಂಗಸಿನ, ಮರಕತಮಣಿವರ್ಣೇ = ಗರುಡಪಚ್ಚೆಮಣಿಯ ಬಣ್ಣವುಳ್ಳ, ಲಸತಿ ಜಲಧಿವಾಸಸಿ = ಹೊಳೆಯುತ್ತಿರುವ ಸಮುದ್ರವೆಂಬ ಸೀರೆಯಲ್ಲಿ, ಕ್ಷಣಾರ್ಧಂ ಅರ್ಧಲೀನಃ = ಸ್ವಲ್ಪಹೊತ್ತು ಅರ್ಧಮರೆಯಾಗಿದ್ದ, ಅರುಣತರಣಿಬಿಂಬಚ್ಛದ್ಮನಾ = ನಸುಗೆಂಪು ಬಣ್ಣದ ಸೂರ್ಯಬಿಂಬದ ನೆಪದಿಂದ, ಕಪಿಶಕರಕಲಾ-ಪೋಲ್ಲಾಸೀ = ಕೆಂಪುಕಿರಣಗಳ ಸಮೂಹಗಳಿಂದ ಶೋಭಿಸುವ, ಪದ್ಮರಾಗಃ = ಕೆಂಪುರತ್ನವು, ಪ್ರೇಕ್ಷಣೀಯಃ ಅಭೂತ್ = ನೋಡಲು ಯೋಗ್ಯವಾಯಿತು.

ಪಚ್ಚೆಮಣಿಯಂತೆ ನೀಲವಾದ ಸಮುದ್ರವು ಭೂಮಿಯ ವಸ್ತ್ರದಂತಿದೆ. ಸಾಯಂಕಾಲ ಕೆಂಪಗಿರುವ ಸೂರ್ಯಮಂಡಲವು ಇಂತಹ ಸಮುದ್ರದಲ್ಲಿ ಅರ್ಧಮುಳುಗುತ್ತ ಸ್ವಲ್ಪ ಹೊತ್ತು ಕೆಂಪುಕಿರಣಗಳಿಂದ ಕಂಗೊಳಿಸುತ್ತಿತ್ತು. ಆಗ ಭೂದೇವಿಯೆಂಬ ಮಕ್ಕಳಿರುವ ಮುತ್ತೈದೆಯು ಉಟ್ಟಿರುವ ಸೀರೆಯಲ್ಲಿ ಹಿಂಭಾಗದಲ್ಲಿ ಅರ್ಧಅಡಗಿ ಅರ್ಧಮಾತ್ರಕಾಣಿಸುತ್ತಿರುವ ನಸುಗೆಂಪುಬಣ್ಣದ ಕಿರಣಗಳನ್ನು ಹೊರಹೊಮ್ಮಿಸುತ್ತಿರುವ ಪದ್ಮರಾಗವು ಅರುಣವರ್ಣದ ಸೂರ್ಯಬಿಂಬದ ನೆಪದಿಂದ ಕಾಣಿಸುತ್ತಿದೆಯೋ ಎಂಬಂತಿತ್ತು ಎಂದು ಸಂಜೆ ಕಪ್ಪಾದ ಸಮುದ್ರದಲ್ಲಿ ಅರ್ಧಮುಳುಗುತ್ತಿರುವ ಸೂರ್ಯನನ್ನು ವರ್ಣಿಸಿದ್ದಾರೆ.

ಮರಕತಂ ಇತಿ ಮಣಿಃ ಮರಕತಮಣಿವತ್ ವರ್ಣಃ ಯಸ್ಯ ತತ್, ಭೂತಧಾತ್ರೀ ಏವ ಪುರಂಧ್ರೀ ತಸ್ಯಾಃ, ಜಲಧಿರೇವ ವಾಸಃ ತಸ್ಮಿನ್, ಅರ್ಧಂ ಲೀನಃ, ತರಣೇಃ ಬಿಂಬಂ, ಅರುಣಂ ಚ ತತ್ ತರಣಿಬಿಂಬಂ ಚ, ಅರುಣತರಣಿಬಿಂಬಮೇವ ಛದ್ಮ ತೇನ, ಕಪಿಶಾಶ್ಚ ತೇ ಕರಾಶ್ಚ ಕಪಿಶ-ಕರಾಣಾಂ ಕಲಾಪಾಃ ಕಪಿಶಕರಕಲಾಪೈಃ ಉಲ್ಲಸಿತುಂ ಶೀಲಂ ಅಸ್ಯೇತಿ ಕಪಿಶಕರಕಲಾಪೋಲ್ಲಾಸೀ ;

Rarest Archiver

ಆಚಾರ್ಯರ ಸಾಯಂಕಾಲದ ಧ್ಯಾನಜಪಾದಿಗಳು ಹೀಗಿದ್ದುವು—

ಅವನಿವನವನಧ್ರುಗ್ವಾಯುಖಾಹಂಮಹತ್ಸು
ಪ್ರಕೃತಿಗುಣಸಮೇತಾವ್ಯಾಕೃತಾಕಾಶ ಏಕಂ ।
ತತಮತನುಮನಾಃ ಸೋಽಚಿಂತಯತ್ ಸತ್ಸಮಾಧಾ
ವಸುರಸುರನರೇಭ್ಯಃ ಸದ್ಗುಣಂ ನಾಥಮನ್ಯಂ ॥ ೪೮ ॥

ಸಃ ಅತನುಮನಾಃ ಸತ್ಸಮಾಧೌ ಅವನಿ-ವನವನಧ್ರುಗ್ವಾಯು ಖಾಹಂಮಹತ್ಸು ಪ್ರಕೃತಿಗುಣಸಮೇತಾವ್ಯಾಕೃತಾಕಾಶೇ ತತಂ ಏಕಂ ಅಸುರಸುರನರೇಭ್ಯಃ ಅನ್ಯಂ ಸದ್ಗುಣಂ ನಾಥಂ ಅಚಿಂತಯತ್ ।

ಸಃ ಅತನುಮನಾಃ = ಅಂತಹ ಶ್ರೀಪೂರ್ಣಪ್ರಜ್ಞಾಚಾರ್ಯರು. ಸತ್ ಸಮಾಧೌ = ಒಳ್ಳೆಯ ಧ್ಯಾನಯೋಗಕಾಲದಲ್ಲಿ, ಅವನಿ = ಭೂಮಿ, ವನ = ನೀರು, ವನಧ್ರುಕ್ = ಅಗ್ನಿ (ತೇಜಸ್ಸು), ವಾಯು = ಗಾಳಿ, ಖಂ = ಆಕಾಶ, ಅಹಂ ಮಹತ್ಸು = ಅಹಂಕಾರತತ್ತ್ವ ಮತ್ತು ಮಹತ್ತತ್ತ್ವ ಇವು ಗಳಲ್ಲಿ, ಪ್ರಕೃತಿಗುಣಸಮೇತ = ಜಡಪ್ರಕೃತಿಯ ಗುಣಗಳಾದ ಸತ್ತ್ವ ರಜಸ್ಸು ತಮಸ್ಸು ಎಂಬ ಮೂರುಗುಣಗಳಿಂದ ಕೂಡಿದ, ಅವ್ಯಾಕೃತಾಕಾಶೇ ತತಂ = ಅವ್ಯಾಕೃತಾಕಾಶದಲ್ಲಿ ವ್ಯಾಪಿಸಿಕೊಂಡಿರುವ, ಏಕಂ = ಮುಖ್ಯ ನಾದ (ತನ್ನ ಎಲ್ಲಾರೂಪಗಳಿಂದಲೂ ಅಭಿನ್ನನಾದ), ಅಸುರಸುರನರೇಭ್ಯಃ ಅನ್ಯಂ = ದೈತ್ಯರು ದೇವತೆಗಳು ಮನುಷ್ಯರು ಇವರಿಗಿಂತ ಬೇರೆಯಾದ, ಸದ್ಗುಣಂ = ನಿರ್ದೋಷಜ್ಞಾನಾನಂದಭರಿತನಾದ, ನಾಥಂ = ಸ್ವಾಮಿಯಾದ ನಾರಾಯಣನನ್ನು, ಅಚಿಂತಯತ್ = ಧ್ಯಾನಿಸಿದರು.

ಪೂರ್ಣಹೃದಯರಾದ ಶ್ರೀಮಧ್ವಾಚಾರ್ಯರು ಉತ್ತಮವಾದ ತಮ್ಮ ಅಸಂಪ್ರಜ್ಞಾತಧ್ಯಾನಯೋಗದ ಸಮಾಧಿಕಾಲದಲ್ಲಿ, ಮನಸ್ಸನ್ನು ಪರ ಮಾತ್ಮನಲ್ಲಿ ಇಟ್ಟು, ನೆಲ ಜಲ ತೇಜಸ್ಸು ಗಾಳಿ ಆಕಾಶ ಅಹಂಕಾರತತ್ತ್ವ ಮಹತ್ತತ್ತ್ವ ಈ ತತ್ತ್ವಗಳಲ್ಲಿಯೂ, ಸತ್ತ್ವ ರಜಸ್ಸು ತಮಸ್ಸು ಎಂಬ ಮೂರು ಗುಣಗಳಿಂದ ಕೂಡಿದ ಜಡ ಪ್ರಕೃತಿ ಮತ್ತು ಅವ್ಯಾಕೃತಾಕಾಶ ದಲ್ಲಿಯೂ ವ್ಯಾಪಿಸಿರುವ, ಅವತಾರಗುಣಕ್ರಿಯಾಸ್ಥಾನನಿಮಿತ್ತವಾದ ಭೇದ ವಿಲ್ಲದಿರುವ, ದೈತ್ಯ ಮನುಷ್ಯ ದೇವತೆಗಳಿಗಿಂತ ಭಿನ್ನನಾದ, ಜ್ಞಾನಾ-

Rarest Archiver

ನಂದಾದಿಸದ್ಗುಣಪೂರ್ಣನೂ ಸರ್ವಸ್ವಾಮಿಯೂ ಆದ ಪರಮಾತ್ಮನನ್ನು ಧ್ಯಾನಮಾಡಿದರು. ಆಚಾರ್ಯರು ಸಾಯಂಕಾಲ ಸ್ನಾನಮಾಡಿ ಜಪ ತರ್ಪಣಗಳನ್ನು ಮಾಡಿದರು, ಅನಂತರ ಯೋಗಿಶ್ರೇಷ್ಠರಾದ ಆಚಾರ್ಯರು ಮನಸ್ಸನ್ನು ಪರಮಾತ್ಮನಲ್ಲಿಯೇ ನಿಲ್ಲಿಸಿ ಸಮಸ್ತ ತತ್ತ್ವಗಳಲ್ಲಿಯೂ ಇರುವ ಪರಮಾತ್ಮನನ್ನು ಧ್ಯಾನಿಸಿದರು. ಹೀಗೆ ಆಚಾರ್ಯರು ಪರಮಯೋಗ ಮಾರ್ಗಾಭಿಜ್ಞರು, ನಿತ್ಯನಿರಂತರದಲ್ಲಿ ಬಿಂಬರೂಪನಾದ ಹರಿಯನ್ನು ನೋಡುವವರು ಎಂದು ಹೇಳಿದಂತಾಯಿತು.

ಅವನಿಶ್ಚ ವನಂ ಚ (ವನಂ ದ್ರೋಗ್ಧಿ ಇತಿ) ವನಧ್ರುಕ್ ಚ ವಾಯುಶ್ಚ ಖಂ ಚ ಅಹಂ ಚ ಮಹಚ್ಚ ಅವನಿವನವನಧ್ರುಗ್ವಾಯುಖಾಹಂಮಹಾಂತಿ ತೇಷು, ಪ್ರಕೃತೇಃ ಗುಣಾಃ ಪ್ರಕೃತಿಗುಣೈಃ ಸಮೇತಂ, ಪ್ರಕೃತಿಗುಣ ಸಮೇತಂ ಚ ತತ್ ಅವ್ಯಾಕೃತಾಕಾಶಂ ಚ ತಸ್ಮಿನ್, ನ ತನು, ಅತನು ಮನಃ ಯಸ್ಯ ಸಃ, ಸನ್ ಚ ಅಸೌ ಸಮಾಧಿಶ್ಚ ತಸ್ಮಿನ್, ಅಸುರಾಶ್ಚ ಸುರಾಶ್ಚ ನರಾಶ್ಚ ಅಸುರಸುರನರಾಃ ತೇಭ್ಯಃ ಸಂತಃ ಗುಣಾಃ ಯಸ್ಯ ಸಃ ತಂ;

ಅಚಿಂತಯತ್ ಅಚಿಂತಯತಾಂ ಅಚಿಂತಯನ್ ಇತ್ಯಾದಿ. ಚಿತಿ ಸ್ಮೃತ್ಯಾಂ ಚುರಾದಿ ಸೇಟ್ ಉಭ. ಲಜ್.

ಇತರ ಬ್ರಾಹ್ಮಣರೂ ಸಂಧ್ಯಾವಂದನೆಯನ್ನು ಮಾಡಿದರು —

ವ್ಯದಧತ ಪರಿದೃಷ್ಟಜ್ಯೋತಿಷಃ ಸಾಧು ಸಾಂಧ್ಯಂ
ನಿಯಮಮವನಿದೇವಾ ಜ್ಯೋತಿಷೋಽಸ್ಯಾವಲೋಕಾತ್ ।
ವಿಹಿತಮನುಸರಂತೋ ಧರ್ಮಶಾಸ್ತ್ರಪ್ರವೀಣಾಃ
ಸವಿತರಿ ಸವಿತಾರಂ ಚಿಂತಯಂತಸ್ತ್ರಿಲೋಕ್ಯಾಃ ॥ ೪೯ ॥

ವಿಹಿತಂ ಅನುಸರಂತಃ ಧರ್ಮಶಾಸ್ತ್ರಪ್ರವೀಣಾಃ ಸವಿತರಿ ತ್ರಿಲೋಕ್ಯಾಃ ಸವಿತಾರಂ ಚಿಂತಯಂತಃ ಪರಿದೃಷ್ಟಜ್ಯೋತಿಷಃ ಅವನಿದೇವಾಃ ಜ್ಯೋತಿಷಃ ಅವಲೋಕಾತ್ ಸಾಂಧ್ಯಂ ನಿಯಮಂ ಅಪಿ ಸಾಧು ವ್ಯದಧತ ।

ವಿಹಿತಂ=ಶ್ರುತಿಸ್ಮೃತಿಗಳಲ್ಲಿ ಹೇಳಿರುವ ಆಚಾರವನ್ನು, ಅನುಸರಂತಃ = ಅನುಸರಿಸುತ್ತಿರುವ, ಧರ್ಮಶಾಸ್ತ್ರಪ್ರವೀಣಾಃ = ಧರ್ಮಶಾಸ್ತ್ರಗಳಲ್ಲಿ

Rarest Archiver

ಕುಶಲರಾದ, ಸವಿತರಿ = ಸೂರ್ಯನಲ್ಲಿ, ತ್ರಿಲೋಕ್ಯಾಃ ಸವಿತಾರಂ = ಮೂರು ಲೋಕಗಳನ್ನು ಸೃಜಿಸಿದ ಶ್ರೀಮನ್ನಾರಾಯಣನನ್ನು, ಚಿಂತಯಂತಃ = ಧ್ಯಾನಿಸುತ್ತಿರುವ, ಪರಿದೃಷ್ಟಜ್ಯೋತಿಷಃ = ನೋಡಲ್ಪಟ್ಟ ಸೂರ್ಯ ಕಿರಣಗಳುಳ್ಳ, ಅವನಿದೇವಾಃ=ಬ್ರಾಹ್ಮಣರು, ಜ್ಯೋತಿಷಃ ಆವಲ್ಲೋಕಾತ್ = ನಕ್ಷತ್ರಗಳ ದರ್ಶನದವರೆಗೂ, ಸಾಂಧ್ಯಂ ನಿಯಮಂ ಅಪಿ=ಸಂಧ್ಯಾಕಾಲದ ಅನುಷ್ಠಾನವನ್ನೂ, ಸಾಧು ವ್ಯದಧತ=ಚೆನ್ನಾಗಿ ಮಾಡಿದರು.

ಆಚಾರ್ಯರ ಜೊತೆಗೆ ಇದ್ದ ಬ್ರಾಹ್ಮಣರು ಶ್ರುತಿಸ್ಮೃತ್ಯುಕ್ತವಾದ ಆಚಾರಗಳನ್ನು ಧರ್ಮಶಾಸ್ತ್ರದ ಕೂಲಂಕಷವಾದ ಅಧ್ಯಯನವನ್ನು ಮಾಡಿ ತಿಳಿದವರು. ಅದರಂತೆಯೇ ಆಚರಿಸುತ್ತಲೂ ಇದ್ದವರು. ಅವರು ಸೂರ್ಯ ಕಿರಣಗಳಿರುವಾಗಲೇ ಸಂಧ್ಯಾವಂದನವನ್ನು ಪ್ರಾರಂಭಿಸಿ ಸೂರ್ಯನಲ್ಲಿರುವ ಜಗತ್ತಿನ ಸೃಷ್ಟ್ಯಾದಿಗಳಿಗೆ ಕಾರಣನಾದ ನಾರಾಯಣನೆಂಬ ಪರಬ್ರಹ್ಮನನ್ನು ಧ್ಯಾನಮಾಡುತ್ತಾ ನಕ್ಷತ್ರಗಳನ್ನು ನೋಡುವವರೆಗೆ ಸಂಧ್ಯಾಕಾಲದ ಗಾಯತ್ರೀಜಪವನ್ನು ಭಕ್ತಿಯಿಂದ ಸ್ವಲ್ಪವೂ ಲೋಪವಿಲ್ಲದಂತೆ ಮಾಡಿದರು. ಪೂರ್ವಾಂ ಸಂಧ್ಯಾಂ ಜಪಂಸ್ತಿಷ್ಠೇತ್ ಸಾವಿತ್ರೀಮಾರ್ಕದರ್ಶನಾತ್। ಉತ್ತರಾಂ ತು ಸಮಾಸೀತ ಸಮ್ಯಗೃಕ್ಷವಿಭಾವನಾತ್ ॥ ಬೆಳಿಗ್ಗೆ ಸೂರ್ಯ ನನ್ನು ನೋಡುವ ತನಕ ಗಾಯತ್ರೀಜಪವನ್ನು ಮಾಡುತ್ತಾ ನಿಂತಿರಬೇಕು. ಸಾಯಂಕಾಲ ಚೆನ್ನಾಗಿ ನಕ್ಷತ್ರ ತೋರುವವರೆಗೆ ಗಾಯತ್ರೀಜಪ ಮಾಡುತ್ತಾ ಕುಳಿತಿರಬೇಕು. (ಮನು)

ಪರಿದೃಷ್ಟಾನಿ ಜ್ಯೋತೀಂಷಿ ಯೈಃ ತೇ, ಸಂಧ್ಯಾಯಾಃ ಅಯಂ ಸಾಂಧ್ಯಃ ತಂ, ಅವನೇಃ ದೇವಾಃ, ಧರ್ಮಶಾಸ್ತ್ರೇಷು ಪ್ರವೀಣಾಃ, ತ್ರಯಾಣಾಂ ಲೋಕಾನಾಂ ಸಮಾಹಾರಃತ್ರಿಲೋಕೀ ತಸ್ಯಾಃ।

ವಿ+ಅದಧತ, ಅಧತ್ತ ಅದಧಾತಾಂ ಅದಧತ, ಡುಧಾಞ್ ಧಾರಣ ಪೋಷಣಯೋಃ ಲಙ್,

ಅಗ್ನಿಹೋತ್ರಿಗಳಾದ ಬ್ರಾಹ್ಮಣರು ಏನು ಮಾಡಿದರು ?—

ವಿವಿದುರತಿತರಾಂ ಯೇ ದೇವತಾಃ ಷೋಡಶೋಕ್ತಾ

ಹರಹರಿಹಯಪೂರ್ವಾಂತ್ಯಾಃ ಕಲಾಭೇದತೋಽಸ್ಯ।

Rarest Archiver

ಸುಹುತಮತಿಸೃಜಂತೋಽಗ್ನ್ಯಾಹಿತಾಸ್ತೇಽಗ್ನಿಹೋತ್ರಂ
ವ್ಯಧುರುಚಿತಮಪೂರ್ವಂ ಯೇನ ಗಾಯತ್ರಲೋಕಃ ॥ ೩೦ ॥

ಯೇ ಅಗ್ನ್ಯಾಹಿತಾಃ ಅಸ್ಯ ಕಲಾಭೇದತಃ ಉಕ್ತಾಃ ಹರಹರಿಹಯ ಪೂರ್ವಾಂತ್ಯಾಃ ಷೋಡಶದೇವತಾಃ ಅತಿತರಾಂ ವಿವಿದುಃ ತೇ ಸುಹುತಂ ಅತಿಸೃಜಂತಃ ಯೇನ ಗಾಯತ್ರಲೋಕಃ ಭವತಿ ತತ್ ಉಚಿತಂ ಅಪೂರ್ವಂ ಅಗ್ನಿಹೋತ್ರಂ ವ್ಯಧುಃ ।

ಯೇ ಅಗ್ನ್ಯಾಹಿತಾಃ = ಯಾವ ಅಗ್ನಿಹೋತ್ರಿಗಳು, ಅಸ್ಯಕಲಾಭೇದತಃ = ಈ ಅಗ್ನಿಹೋತ್ರದ ಅವಾಂತರವಿಭಾಗಗಳ ಭೇದದಿಂದ, ಉಕ್ತಾಃ = ಹೇಳಲ್ಪಟ್ಟ, ಹರಹರಿಹಯ ಪೂರ್ವಾಂತ್ಯಾಃ = ರುದ್ರ ಮತ್ತು ಇಂದ್ರರು ಮೊದಲು ಮತ್ತು ಕೊನೆಯಲ್ಲಿ ಉಳ್ಳ, ಷೋಡಶದೇವತಾಃ = ಹದಿನಾರು ಮಂದಿ ದೇವತೆಗಳನ್ನು, ಅತಿತರಾಂ ವಿವಿದುಃ = ಚೆನ್ನಾಗಿ ತಿಳಿದಿದ್ದರೋ, ತೇ = ಅಂತಹ ಅಗ್ನಿಹೋತ್ರಿಗಳು, ಸುಹುತಂ = ಸರಿಯಾದ ಹೋಮವನ್ನು, ಅತಿಸೃಜಂತಃ = ಸ್ವಾಹಾ ನ ಮಮ ಎಂಬ ತ್ಯಾಗಪೂರ್ವಕವಾಗಿ ಹೋಮಿಸುತ್ತ, ಯೇನ ಗಾಯತ್ರಲೋಕಃ ಭವತಿ = ಯಾವ ಅಗ್ನಿಹೋತ್ರಹೋಮದಿಂದ, ಗಾನಮಾಡುವವರನ್ನು ರಕ್ಷಿಸುವ ವಿಷ್ಣುವಿನ ವೈಕುಂಠಲೋಕವು ಸಿಗುತ್ತದೆಯೋ, ಉಚಿತಂ = ತಮಗೆ ಯೋಗ್ಯವಾದ, ಅಪೂರ್ವಂ = ಅಸಾಧಾರಣವಾದ, (ತತ್ = ಅಂತಹ) ಅಗ್ನಿಹೋತ್ರಂ ವ್ಯಧುಃ = ಅಗ್ನಿಹೋತ್ರಹೋಮವನ್ನು ಮಾಡಿದರು.

ಅಗ್ನಿಹೋತ್ರ ಎಂಬ ಹೋಮಕ್ಕೆ ಒಳಗಿನ ಭೇದದಿಂದ ಆದಿಯಲ್ಲಿ ರುದ್ರ ಅಂತ್ಯದಲ್ಲಿ ಇಂದ್ರ ಎಂಬ ಹದಿನಾರು ದೇವತೆಗಳಿದ್ದಾರೆ. ಇದನ್ನೆಲ್ಲಾ ತಿಳಿದು ಅಗ್ನ್ಯಾಧಾನಮಾಡಿರುವ ಅಗ್ನಿಹೋತ್ರಿಗಳು ಹೋಮವನ್ನು ಮಾಡಿದರೆ ಅವರಿಗೆ ಗಾನವನ್ನು ಮಾಡುವರನ್ನು ರಕ್ಷಿಸುವುದರಿಂದ ಗಾಯತ್ರ ಎಂಬ ಹೆಸರಿನ ವಿಷ್ಣುವಿನ ಲೋಕವು ಪ್ರಾಪ್ತವಾಗುತ್ತದೆ. ಅಂತಹ ಕೆಲವು ಅಗ್ನಿಹೋತ್ರಿಗಳು 'ನ ಮಮ' ಎಂದು ಸ್ವತ್ವತ್ಯಾಗ ಮಾಡುತ್ತಾ ಯೋಗ್ಯವಾದ ಅಪೂರ್ವವಾದ ಅಗ್ನಿಹೋತ್ರಹೋಮವನ್ನು ಮಾಡಿದರು. ಮಮತೆ ಅಹಂಕಾರವನ್ನು ಬಿಟ್ಟು ಫಲಾಪೇಕ್ಷೆ ಇಲ್ಲದೆ ಮಾಡಿ

Rarest Archiver

ಪರಮಾತ್ಮನಲ್ಲಿ, ಸಮರ್ಪಿಸುವ ಅಗ್ನಿಹೋತ್ರಾದಿಕರ್ಮವು ಶೀಘ್ರವಾಗಿ ಅತಿಶಯಜ್ಞಾನದ್ವಾರಾ ಮೋಕ್ಷಪ್ರದವಾಗುತ್ತದೆ.

ವಿಶೇಷಾಂಶ :—ಅಗ್ನಿಹೋತ್ರಕ್ಕೆ ಬೇಕಾದ ಹಾಲು ಹಸುವಿನಲ್ಲಿರುವಾಗ ೧) ರುದ್ರನು ದೇವತೆ ೨) ಹಾಲು ಕೆಚ್ಚಲಲ್ಲಿರುವಾಗ ವಾಯು ೩) ಕರೆಯುತ್ತಿರುವಾಗ ಅಶ್ವಿನೀದೇವತೆಗಳು ೪) ಕರೆದ ಮೇಲೆ ಸೋಮ ೫) ಬಿಸಿಮಾಡಲು ಒಲೆಯ ಮೇಲಿಟ್ಟಾಗ ವರುಣ ೬) ಉಕ್ಕುತ್ತಿರುವಾಗ ಪೂಷ ೭) ಉಕ್ಕಿಪಾತ್ರದಿಂದ ಹರಿಯುತ್ತಿರುವಾಗ ಮರುತ್ತು ೮) ಉಕ್ಕುವ ಬಿಂದುಗಳಲ್ಲಿ ವಿಶ್ವೇದೇವತೆಗಳು ೯) ಹಾಲಿನ ಮೇಲಿನ ಕೆನೆಗೆ ಮಿತ್ರ ೧೦) ಒಲೆಯಿಂದ ಕೆಳಗಿಟ್ಟಾಗ ದ್ಯಾವಾಪೃಥಿವಿಗಳು ೧೧) ಹೋಮಿಸಲು ಪ್ರಾರಂಭಿಸಿದಾಗ ಸವಿತೃ ೧೨) ಅಗ್ನಿಯ ಹತ್ತಿರಕ್ಕೆ ತೆಗೆದುಕೊಂಡು ಬಂದಾಗ ವಿಷ್ಣು ೧೩) ಅಗ್ನಿಯ ಹತ್ತಿರ ಬಂದಾಗ ಬೃಹಸ್ಪತಿ ೧೪) ಕ್ಷೀರದ ಮೊದಲನೆ ಆಹುತಿಗೆ ಅಗ್ನಿ ೧೫) ಮುಂದಿನ ಆಹುತಿಗೆ ಪ್ರಜಾಪತಿ, ೧೬) ಹೋಮಕ್ರಿಯೆಗೆ ಇಂದ್ರನು, ಹೀಗೆ ೧೬ ದೇವತೆಗಳು.

ಹರಶ್ಚ ಹರಿಹಯಶ್ಚ ಹರಹರಿಹಯೌ, ಪೂರ್ವಶ್ಚ ಅಂತ್ಯಶ್ಚ ಪೂರ್ವಾಂತ್ಯೌ ಹರಿಹಯೌ ಪೂರ್ವಾಂತ್ಯೌ ಯಾಸಾಂ ತಾಃ, ಜಂಭಭೇದೀ ಹರಿಹಯಃ – ಅಮರ. ಕಲಾನಾಂ ಭೇದಃ, ಕಲಾಭೇದಾತ್ ಇತಿ ಕಲಾಭೇದತಃ, ಆಹಿತಃ ಅಗ್ನಿಃ ಯೈಃ ತೇ ಅಗ್ನ್ಯಾಹಿತಾಃ, ವಾಹಿತಾಗ್ನ್ಯಾದಿಷು. ವಿಶೇಷಣಕ್ಕೆ ಪೂರ್ವನಿಪಾತ. ಗಾಯಂತಂ ತ್ರಾಯತೇ ಇತಿ ಗಾಯತ್ರಃ (ವಿಷ್ಣು) ಗಾಯತ್ರಸ್ಯ ಲೋಕಃ.

ವಿವೇದ ವಿವಿದತುಃ ವಿವಿದುಃ ಇತ್ಯಾದಿ ವಿದ ಜ್ಞಾನೇ ಲಿಟ್. ವಿ + ಅಧಾತ್ ಅಧಾತಾಂ ಅಧುಃ ಡುಧಾಞ್ ಧಾರಣಪೋಷಣಯೋಃ ಲುಜ್.

ಆಗ ಚಂದ್ರೋದಯವಾಯಿತು —

ವಿಧುರಯಮಕಲಂಕಃ ಸ್ಯಾದ್ಯದಿ ಸ್ಯಾದವಶ್ಯಂ
ನನು ನಿಜಸಹಜಾಯಾಃ ಸುಂದರಾಸ್ಯೇಂದುಕಲ್ಪಃ ।

Rarest Archiver

ಇತಿ ಸುರಲಲನಾಭಿಃ ಲಾಲಿತಃ ಖೇಚರೀಭಿಃ
ಸಮಧಿಕಮಧುರಿಮ್ಣಾ ಪೂರ್ಣಚಂದ್ರಸ್ತದೋದೈತ್ ॥ ೫೧ ॥

ತದಾ ಖೇಚರೀಭಿಃ ಸುರಲಲನಾಭಿಃ 'ಅಯಂ ವಿಧುಃ ಅಕಲಂಕಃ ಯದಿ ಸ್ಯಾತ್, ಸಮಧಿಕಮಧುರಿಮ್ಣಾ ನಿಜಸಹಜಾಯಾಃ ಸುಂದರಾಸ್ಯೇಂದುಕಲ್ಪಃ ಅವಶ್ಯಂ ಸ್ಯಾತ್ ನನು' ಇತಿ ಲಾಲಿತಃ ಪೂರ್ಣಚಂದ್ರಃ ಉದೈತ್ ।

ತದಾ = ಆಗ, ಖೇಚರೀಭಿಃ ಸುರಲಲನಾಭಿಃ = ಆಕಾಶಸಂಚಾರಿಗಳಾದ ದೇವತಾಸ್ತ್ರೀಯರಿಂದ, ಅಯಂ ವಿಧುಃ = ಈ ಚಂದ್ರನು, ಅಕಲಂಕಃ ಯದಿ ಸ್ಯಾತ್ = ಕಳಂಕರಹಿತನಾಗಿ ಆಗಿದ್ದರೆ, ಸಮಧಿಕಮಧುರಿಮ್ಣಾ = ಅತ್ಯಧಿಕಸೌಂದರ್ಯದಿಂದ, ನಿಜಸಹಜಾಯಾಃ = ತನ್ನ ಸಹೋದರಿಯಾದ ಲಕ್ಷ್ಮಿಯು, ಸುಂದರಾಸ್ಯೇಂದುಕಲ್ಪಃ = ಮನೋಹರವಾದ ಮುಖಚಂದ್ರನಿಗೆ ಸಮಾನನು, ಅವಶ್ಯಂ ಸ್ಯಾತ್ ನನು = ನಿಶ್ಚಯವಾಗಿಯೂ ಆಗಿಯೇ ಆಗುತ್ತಾನಷ್ಟೇ ? ಇತಿ ಲಾಲಿತಃ = ಹೀಗೆಂದು ಹೊಗಳಲ್ಪಟ್ಟ, ಪೂರ್ಣಚಂದ್ರಃ = ಪರಿಪೂರ್ಣಚಂದ್ರನು, ಉದೈತ್ = ಉದಯಿಸಿದನು.

'ಈ ಚಂದ್ರನು ಕಲಂಕವಿಲ್ಲದವನಾಗಿದ್ದಿದ್ದರೆ, ತನ್ನ ಸಹೋದರಿಯಾದ ಲಕ್ಷ್ಮೀದೇವಿಯ ಸುಂದರವಾದ ಮುಖಚಂದ್ರನಿಗೆ ನಿಶ್ಚಯವಾಗಿಯೂ ಸಮಾನವಾಗುತ್ತಿದ್ದನು. ಹೀಗೆ ಇವನು ಪೂರ್ಣವಾಗಿ ಲಕ್ಷ್ಮೀಮುಖಸಾಮ್ಯವನ್ನು ಎಂದೂ ಹೊಂದಲಾರದಿದ್ದರೂ ಉತ್ತಮವಾದ ಸೌಂದರ್ಯದಿಂದ ಕೂಡಿಯೇ ಇದ್ದಾನೆ.' ಎಂದು ಆಕಾಶಸಂಚಾರಿಗಳಾದ ದೇವಸ್ತ್ರೀಯರು ಅಂದು ಉದಯಿಸುತ್ತಿರುವ ಹುಣ್ಣಿಮೆಯ ಚಂದ್ರನನ್ನು ಹೊಗಳುತ್ತಿರುವಾಗ, ಚಂದ್ರೋದಯವಾಯಿತು.

ನ + ವಿದ್ಯತೇ ಕಲಂಕಃ ಯಸ್ಯ ಸಃ, ಸಹಜಾಯತೇ ಇತಿ ಸಹಜಾ, ನಿಜಾ ಚ ಸಾ ಸಹಜಾ ಚ ತಸ್ಯಾಃ, ಸುಂದರಂ ಆಸ್ಯಂ ಏವ ಇಂದುಃ, ಸುಂದರಾಸ್ಯೇಂದುನಾ ಈಷತ್ ಸದೃಶಃ, ಸುಂದರಾಸ್ಯೇಂದುಕಲ್ಪಃ । ಸುರಾಣಾಂ ಲಲನಾಃ ತಾಭಿಃ, ಮಧುರಸ್ಯ ಭಾವಃ ಮಧುರಿಮಾ, ಸಮ-

Rarest Archiver

ಧಿಕಶ್ಚಾಸೌ ಮಧುರಿಮಾ ಚ ತೇನ, ಮಧುರ = ಪ್ರಿಯ, ಸುಂದರ, ಸ್ವಾದು-ಪ್ರಿಯೌ ತು ಮಧುರೌ—ಅಮರ.

ಉದ್ + ಐತ್ ಐತಾಂ ಆಯನ್, ಐಃ ಐತಂ ಐತ, ಆಯಂ ಐವ ಐಮ. ಇಣ್ ಗತೌ ಲಙ್.

ರಾತ್ರಿಹಗಲುಗಳು ಅದೃಷ್ಟಕ್ಕೆ ತಕ್ಕಂತೆ ಅವರವರಿಗೆ ಸುಖದುಃಖಗಳನ್ನು ಕೊಡುತ್ತವೆ—

ಇನವಿರಹಮಸಹ್ಯಂ ಪ್ರಾಪ್ಯ ಪದ್ಮೈಃ ಸಚಕ್ರೈ-
ಶ್ಚಿರಮಿಹ ಪರಿತಪ್ತಂ ಪೂರ್ವತಪ್ತೈಃ ಸುತುಷ್ಟಂ ।
ಮೃದುಕುಮುದಚಕೋರೈಃ ಪಾದಸಂಗೇನ ರಾಜ್ಞಃ
ಕಮಪಿ ಸಕಲಹೃದ್ಯಂ ಕಲ್ಪಯೇನ್ನೈವ ದೈವಂ ॥ ೫೨ ॥

ಇಹ ಸಚಕ್ರೈಃ ಪದ್ಮೈಃ ಅಸಹ್ಯಂ ಇನವಿರಹಂ ಪ್ರಾಪ್ಯ ಚಿರಂ ಪರಿತಪ್ತಂ ರಾಜ್ಞಃ ಪಾದಸಂಗೇನ ಪೂರ್ವತಪ್ತೈಃ ಮೃದುಕುಮುದ-ಚಕೋರೈಃ (ಅಪಿ) ಸುತುಷ್ಟಂ. ದೈವಂ ಕಮಪಿ ಸಕಲಹೃದ್ಯಂ ನೈವ ಕಲ್ಪಯೇತ್.

ಇಹ = ಈ ರಾತ್ರಿಯಲ್ಲಿ, ಸಚಕ್ರೈಃ ಪದ್ಮೈಃ = ಚಕ್ರವಾಕಪಕ್ಷಿಗಳಿಂದ ಸಹಿತವಾದ ಕಮಲಗಳಿಂದ, ಅಸಹ್ಯಂ ಇನವಿರಹಂ ಪ್ರಾಪ್ಯ = ಸಹಿಸಲಾಗದ ಸೂರ್ಯನ ಅಗಲಿಕೆಯನ್ನು ಹೊಂದಿ, ಚಿರಂ ಪರಿತಪ್ತಂ = ಬಹುಕಾಲ (ರಾತ್ರಿಯೆಲ್ಲಾ) ವ್ಯಥೆಹೊಂದಲ್ಪಟ್ಟಿತು. ರಾಜ್ಞಃ ಪಾದಸಂಗೇನ = ಚಂದ್ರನ ಕಿರಣಗಳ ಸಂಬಂಧದಿಂದ, ಪೂರ್ವತಪ್ತೈಃ = ಹಗಲು ಸೂರ್ಯ ಕಿರಣಗಳಿಂದ ತಾಪಗೊಂಡ, ಮೃದುಕುಮುದಚಕೋರೈಃ = ಕೋಮಲವಾದ ನೈದಿಲೆ ಚಕೋರ ಪಕ್ಷಿ ಇವುಗಳಿಂದ, ಸುತುಷ್ಟಂ = ಸಂತೋಷ ಹೊಂದಲ್ಪಟ್ಟಿತು. ದೈವಂ = ವಿಧಿಯು, ಕಮಪಿ = ಯಾವನನ್ನೂ, ಸಕಲ-ಹೃದ್ಯಂ = ಎಲ್ಲರಿಗೂ ಪ್ರಿಯವಾಗಿ, ನೈವ ಕಲ್ಪಯೇತ್ = ಮಾಡಲಾರದು.

ರಾತ್ರಿಯಲ್ಲಿ ಚಕ್ರವಾಕಪಕ್ಷಿಗಳೊಡನೆ ಕಮಲಗಳು ಸಹಿಸಲಸಾಧ್ಯವಾದ ಸೂರ್ಯನ ವಿರಹವನ್ನು ಹೊಂದಿ ಚಂದ್ರನ ಕಿರಣಸಂಪರ್ಕದಿಂದ

Rarest Archiver

(ಕಾಲುಗಳ ಒದೆತಗಳಿಂದ) ಬೆಳಗಾಗುವವರೆಗೆ ದುಃಖಪಟ್ಟವು. ಹಿಂದೆ ಸೂರ್ಯನಿರುವಾಗ ಸಂತಾಪಹೊಂದಿದ ಕೋಮಲವಾದ ಕುಮುದಗಳೂ ಚಕೋರಗಳೂ ಈಗ ಚಂದ್ರೋದಯಕಾಲದಲ್ಲಿ ಸಂತೋಷಪಟ್ಟವು. ಇದು ಯುಕ್ತವೇ ಸರಿ. ಏಕೆಂದರೆ ದೈವವು ಯಾವ ವಸ್ತುವನ್ನೇ ಆಗಲಿ ಎಲ್ಲರಿಗೂ ಪ್ರಿಯವನ್ನಾಗಿ, ಅನುಕೂಲವನ್ನಾಗಿ ಮಾಡುವುದಿಲ್ಲ. ನಿರ್ದೋಷವಾದ ವಸ್ತುವು ಯಾವುದೂ ಇಲ್ಲ. ಒಂದು ವಸ್ತುವು ಒಂದಕ್ಕೆ ಅನುಕೂಲವಾದರೆ ಮತ್ತೊಂದಕ್ಕೆ ಪ್ರತಿಕೂಲವಾಗುತ್ತದೆ.

ಸೋಢುಂ ಅಶಕ್ಯಃ ಅಸಹ್ಯಃ, ಚಕ್ರೈಃ ಸಹಿತಾನಿ ಸಚಕ್ರಾಣಿ ತೈಃ, ಪೂರ್ವಂ ತಪ್ತಾಃ ತೈಃ, ಕುಮುದಾನಿ ಚ ಚಕೋರಾಶ್ಚ, ಮೃದವಶ್ಚ ತೇ ಕುಮುದಚಕೋರಾಶ್ಚ ತೈಃ, ಪಾದಾನಾಂ ಸಂಗಃ, ತೇನ, ಸಕಲಾನಾಂ ಹೃದ್ಯಃ ತಂ ;

ಕಲ್ಪಯೇತ್ ಕಲ್ಪಯೇತಾಂ ಕಲ್ಪಯೇಯುಃ ಇತ್ಯಾದಿ ಕ್ಲೃಪೂ ಸಾಮರ್ಥ್ಯೇ ಣಿಜಂತ ವಿಧಿಲಿಜ್.

ಉದಿಸಿದ ಚಂದ್ರನು ಆಕಾಶವನ್ನೂ ಆಚಾರ್ಯರು ಶ್ರೀಕೃಷ್ಣನನ್ನೂ ಪ್ರಕಾಶಗೊಳಿಸಿದರು—

ದಲಿತೇಂದ್ರನೀಲಮಣಿನೀಲವಿಭ್ರಮಂ
ನವಕುಂದಕುಡ್ಮಲಸಿತದ್ವಿಜಾವಲಿ ।
ಸ್ಮಿತಯಾ ನಗೋತ್ತಮಶಿರಸ್ಸುಜಾತಯಾ
ವನಮಾಲಯಾ ಸುರಭಿತಾಶಯಾನ್ವಿತಂ ॥ ೩೩ ॥

'ತ್ರಿಭಿಃ ಶ್ಲೋಕೈಃ ವಿಶೇಷಕಂ' ಎಂಬಂತೆ ಮೂರು ಶ್ಲೋಕಗಳಿಗೆ ಏಕಕ್ರಿಯಾನ್ವಯ ಬಂದರೆ ವಿಶೇಷಕವು. ಇದು ವಿಶೇಷಕವಾಗಿರುವುದರಿಂದ ಮೂರು ಶ್ಲೋಕಗಳಿಗೆ ಏಕಾನ್ವಯವು—

ಭಗವಾನ್ ಸಃ ದಲಿತೇಂದ್ರನೀಲಮಣಿನೀಲವಿಭ್ರಮಂ ನವಕುಡ್ಮಲಸಿತದ್ವಿಜಾವಲಿ ಸ್ಮಿತಯಾ ನಗೋತ್ತಮಶಿರಸ್ಸುಜಾತಯಾ ಸುರಭಿತಾಶಯಾ ವನಮಾಲಯಾ ಅನ್ವಿತಂ ಅರ್ಥಾಂತರಂ ಗೋಭಿಃ ಪ್ರಕಟೀಚಕಾರ. ಚಂದ್ರಸ್ತು ಶಬ್ದಗುಣಂ ಅರ್ಥಾಂತರಂ ಪ್ರಕಟೀಚಕಾರ.

Rarest Archiver

ಭಗವಾನ್ ಸಃ = ಪೂಜ್ಯರಾದ ಆ ಮಧ್ವಾಚಾರ್ಯರು, ದಲಿತೇಂದ್ರ-ನೀಲಮಣಿ = ಒರೆಹಿಡಿದು ಸ್ವಚ್ಛಗೊಳಿಸಿದ ಇಂದ್ರನೀಲರತ್ನದಂತೆ, ನೀಲ-ವಿಭ್ರಮಂ = ನೀಲಕಾಂತಿಯುಳ್ಳ, ನವಕುಂದಕುಡ್ಮಲ = ಹೊಸದಾದ ಮಲ್ಲಿಗೆಯ ಮೊಗ್ಗಿನಂತೆ, ಸಿತದ್ವಿಜಾವಲಿ = ಬೆಳ್ಳಗಿರುವ ಹಲ್ಲುಗಳ ಸಾಲುಳ್ಳ, ನಕ್ಷತ್ರಗಳ ಸಮೂಹವುಳ್ಳ, ಸ್ಮಿತಯಾ = ಅರಳಿದ, ನಗೋ-ತ್ತಮಶಿರಃ = ಶ್ರೇಷ್ಠವಾದ ಮರದ ತುದಿಯಲ್ಲಿ ಹುಟ್ಟಿದ; ಶ್ರೇಷ್ಠವಾದ ಪರ್ವತದ ತುದಿಯಲ್ಲಿ ಹುಟ್ಟಿದ, ಸುರಭಿತಾಶಯಾ = ಸುವಾಸನೆಗೊಳಿಸಲ್ಪಟ್ಟ ದಿಕ್ಕುಗಳುಳ್ಳ, ವನಮಾಲಯಾ ಅನ್ವಿತಂ = ವೈಜಯಂತೀಮಾಲೆಯಿಂದ, ಕಾಡುಗಳ ಸಾಲಿನಿಂದ, ಕೂಡಿದ, ಅರ್ಥಾಂತರಂ = ಶ್ರೀಕೃಷ್ಣನನ್ನು, ಗೋಭಿಃ ಪ್ರಕಟೀಚಕಾರ = ಮಾತುಗಳಿಂದ ವ್ಯಕ್ತಗೊಳಿಸಿದರು. ಚಂದ್ರಸ್ತು = ಚಂದ್ರನಾದರೋ, ಶಬ್ದಗುಣಂ ಅರ್ಥಾಂತರಂ ಪ್ರಕಟೀಚಕಾರ = ಶಬ್ದವೆಂಬ ಅಪ್ರಧಾನವಸ್ತುವುಳ್ಳ ಆಕಾಶವೆಂಬ ವಸ್ತುವನ್ನು ಪ್ರಕಟಗೊಳಿಸಿದನು.

ಆಗ ಉದಯಿಸಿದ ಪೂರ್ಣಚಂದ್ರನು ಚೆನ್ನಾಗಿ ಸಾಣೆಹಿಡಿದು ಸ್ವಚ್ಛಗೊಳಿಸಿದ ಇಂದ್ರನೀಲಮಣಿಯಂತೆ ನೀಲವರ್ಣವುಳ್ಳ, ಹೊಸ ಮಲ್ಲಿಗೆ ಮೊಗ್ಗಿನಂತಿರುವ ನಕ್ಷತ್ರಗಳ ಸಾಲುಳ್ಳ, ಅರಳಿದ ಹೂವುಗಳಿಂದ ಕಂಗೊಳಿಸುವ ಬೆಟ್ಟದ ತುದಿಯಲ್ಲಿ ಹುಟ್ಟಿದ ವನಸಮೂಹಗಳಿಂದ ಕೂಡಿದ ಆಕಾಶವನ್ನು ತನ್ನ ಕಿರಣಗಳಿಂದ ಪ್ರಕಾಶಗೊಳಿಸಿದನು.

ಹಾಗೆಯೇ ಪೂಜ್ಯರಾದ ಆಚಾರ್ಯರು ತಮ್ಮ ಮಾತುಗಳಿಂದ ಇಂದ್ರನೀಲಮಣಿವರ್ಣನಾದ, ಮಲ್ಲಿಗೆಯ ಮೊಗ್ಗಿನಂತಹ ಹಲ್ಲಿನ ಸಾಲುಳ್ಳ ಉತ್ತಮವಾದ ಗಿಡದ ಮೇಲೆ ಬೆಳೆದ ಹೂವುಗಳಿಂದಾದ, ದಿಕ್ಕುಗಳನ್ನು ಸುವಾಸನೆಗೊಳಿಸುವ ವನಮಾಲೆಯಿಂದ ಕೂಡಿದ ಶ್ರೀಕೃಷ್ಣನೆಂಬ ವಸ್ತುವನ್ನು ಪ್ರಕಾಶಗೊಳಿಸಿದರು.

ದಲಿತಶ್ಚಾಸೌ ಇಂದ್ರನೀಲಮಣಿಶ್ಚ, ದಲಿತೇಂದ್ರನೀಲಮಣೇಃ ನೀಲಃ ವಿಭ್ರಮಃ ಯಸ್ಯ ತತ್, ನವಾಶ್ಚ ತೇ ಕುಂದಕುಡ್ಮಲಾಶ್ಚ, ನವಕುಂದ-ಕುಡ್ಮಲವತ್ ಸಿತದ್ವಿಜಾನಾಂ (ದಂತಾನಾಂ ನಕ್ಷತ್ರಾಣಾಂ ಚ) ಆವಲಿಃ

Rarest Archiver

ಯಸ್ಯ ತತ್, ನಗೇಷು ಉತ್ತಮಾಃ, ನಗೋತ್ತಮಾನಾಂ ಶಿರಾಂಸಿ, ನಗೋತ್ತಮಶಿರಸ್ಸು ಸುಜಾತಾ ತಯಾ, ಸುರಭಿತಾ ಆಶಾಃ ಯಯಾ ಸಾ ತಯಾ ;

ಇಲ್ಲಿ ಮಂಜುಭಾಷಿಣೀವೃತ್ತ, 'ಸಜಸಾ ಜಗೌ ಚ ಯದಿ ಮಂಜು-ಭಾಷಿಣೀ' ಎಂದು ಲಕ್ಷಣ.

ಹೀಗೆ ಚಮತ್ಕಾರವಾದ ಅರ್ಥಾಂತರವರ್ಣನೆಯನ್ನು ಮುಂದುವರಿಸಿ 55ನೆಯ ಶ್ಲೋಕದಿಂದ ಸರ್ಗವನ್ನು ಪೂರ್ಣಗೊಳಿಸುತ್ತಾರೆ—

ಮೃದುಗಾಮಿವಿಮಾನಸಂಪದೋ
ರಮಯತ್ ಸುಸ್ಮಿತಗೋಪಸುಂದರೀಃ ।
ಪರಿತಾಪವಿಹೀನಮುಜ್ಜ್ವಲಂ
ಸುತತಂ ಸೂಕ್ಷ್ಮತರಾಂಬರಂ ವರಂ ॥ ೫೪ ॥

ಗೋಭಿಸ್ತಮಾಂಸ್ಯಪನಯನ್ ಗತಿದಂ ಪ್ರಜಾನಾ
ಮರ್ಥಾಂತರಂ ಸ ಭಗವಾನ್ ಪ್ರಕಟೀಚಕಾರ ।
ಸಾನಂದಚಿದ್ಗುಣಗಣಂ ಪರಿಪೂರ್ಣಸಂವಿ-
ಚ್ಚಂದ್ರಸ್ತು ಶಬ್ದಗುಣಮಿತ್ಯಯಮೇವ ಭೇದಃ ॥ ೫೫ ॥

ಇತಿಶ್ರೀಮತ್ಕವಿಕುಲತಿಲಕಶ್ರೀಮತ್ತ್ರಿವಿಕ್ರಮಪಂಡಿತಾಚಾರ್ಯಸುತ
ನಾರಾಯಣಪಂಡಿತಾಚಾರ್ಯವಿರಚಿತೇ ಶ್ರೀಮತ್ಸುಮಧ್ವವಿಜಯೇ
ಮಹಾಕಾವ್ಯೇ ಆನಂದಾಂಕೇ 'ಆಹ್ನಿಕವರ್ಣನಂ'ನಾಮ
ಚತುರ್ದಶಃಸರ್ಗಃ

ಭಗವಾನ್ ಸಃ ಪರಿಪೂರ್ಣಸಂವಿತ್ ಗೋಭಿಃ ತಮಾಂಸಿ ಅಪನಯನ್ 'ಪ್ರಜಾನಾಂ ಗತಿದಂ, ಮೃದುಗಾಮಿವಿಮಾನಸಂಪದಃ ಸುಸ್ಮಿತಗೋಪ-ಸುಂದರೀಃ ರಮಯತ್, ಪರಿತಾಪವಿಹೀನಂ, ಉಜ್ಜ್ವಲಂ ಸುತತಂ ಸೂಕ್ಷ್ಮತರಾಂಬರಂ ವರಂ ಸಾನಂದಚಿದ್ಗುಣಗಣಂ ಅರ್ಥಾಂತರಂ' ಪ್ರಕಟೀ-ಚಕಾರ, ಚಂದ್ರಸ್ತು ಶಬ್ದಗುಣಂ ಅರ್ಥಾಂತರಂ ಪ್ರಕಟೀಚಕಾರ ಇತಿ ಅಯಂ ಏವ ಭೇದಃ.

Rarest Archiver

ಭಗವಾನ್ ಸಃ ಪರಿಪೂರ್ಣಸಂವಿತ್ = ಪೂಜ್ಯರಾದ ಆ ಪೂರ್ಣ ಪ್ರಜ್ಞಾಚಾರ್ಯರು, ಗೋಭಿಃ = ಮಾತುಗಳಿಂದ, ಕಿರಣಗಳಿಂದ, ತಮಾಂಸಿ ಅಪನಯನ್ = ಅಜ್ಞಾನವನ್ನು, ಕತ್ತಲೆಯನ್ನು, ನಿವಾರಿಸುವವರಾ(ನಾ)ಗಿ, ಪ್ರಜಾನಾಂ ಗತಿದಂ = ಸಾತ್ತ್ವಿಕಜೀವರಿಗೆ ಮೋಕ್ಷವನ್ನೀಯುವ, ಜನರಿಗೆ ಗಮನಕ್ಕೆ ಅವಕಾಶವನ್ನೀಯುವ, ಮೃದು-ಗಾಮಿವಿಮಾನಸಂಪದಃ = ಮೆಲ್ಲಗೆ ಸಂಚರಿಸುವ ಶ್ರೀಕೃಷ್ಣನ ಮೇಲಿನ ಪ್ರೇಮದಿಂದ ನಾಚಿಕೆಯನ್ನು ಬಿಟ್ಟಿರುವ, ಮೆಲ್ಲಗೆ ಸಂಚರಿಸುವ ವಿಮಾನಗಳ ಸಮೃದ್ಧಿಯುಳ್ಳ, ಸುಸ್ಮಿತಗೋಪಸುಂದರೀಃ = ಮಂದಹಾಸಭರಿತರಾದ ಗೋಪಿಕಾಸ್ತ್ರೀಯರನ್ನೂ, ದೇವತಾಸ್ತ್ರೀಯರನ್ನೂ, ರಮಯತ್ = ಸಂತೋಷಪಡಿಸುವ, ಪರಿತಾಪವಿಹೀನಂ = ದುಃಖವಿಲ್ಲದ, ಉಜ್ಜ್ವಲಂ = ನಿರ್ದೋಷವಾದ, ನಿರ್ಮಲವಾದ, ಸುತತಂ = ಒಳ್ಳೆಯ ವೀಣೆಮೊದಲಾದ ವಾದ್ಯಗಳುಳ್ಳ, ಚೆನ್ನಾಗಿ ಎಲ್ಲಾ ಕಡೆ ವ್ಯಾಪ್ತವಾದ, ಸೂಕ್ಷ್ಮತರಾಂಬರಂ = ಅತ್ಯಂತ ತೆಳುವಾದ ವಸ್ತ್ರವುಳ್ಳ, ಬಾಹ್ಯೇಂದ್ರಿಯಾಗೋಚರವಾದ, ಆಕಾಶರೂಪವಾದ, ವರಂ = ಉತ್ತಮವಾದ, ಸಾನಂದಚಿದ್ಗುಣಗಣಂ = ಆನಂದಜ್ಞಾನಸಹಿತವಾದ ಗುಣಗಳ ಸಮೂಹವುಳ್ಳ, ಅರ್ಥಾಂತರಂ = ಶ್ರೀಕೃಷ್ಣನೆಂಬ ಲೋಕವಿಲಕ್ಷಣವಾದ ವಸ್ತುವನ್ನು, ಪ್ರಕಟೀಚಕಾರ = ಪ್ರಕಟಗೊಳಿಸಿದರು. ಚಂದ್ರಸ್ತು = ಚಂದ್ರನಾದರೋ, ಶಬ್ದಗುಣಂ ಅರ್ಥಾಂತರಂ = ಶಬ್ದವೆಂಬ ಒಂದೇ ಗುಣವುಳ್ಳ ಆಕಾಶವೆಂಬ ವಸ್ತುವನ್ನು, ಪ್ರಕಟೀಚಕಾರ = ಪ್ರಕಟಗೊಳಿಸಿದನು, ಇತಿ ಅಯಮೇವ ಭೇದಃ = ಹೀಗೆಂದು ಇದೇ ವ್ಯತ್ಯಾಸವು.

ಪೂಜ್ಯರಾದ ಶ್ರೀಮನ್ಮಧ್ವಗುರುವರ್ಯರು ಶಾಸ್ತ್ರವಚನಗಳ ವ್ಯಾಖ್ಯಾನದಿಂದ ಭಕ್ತರಾದ ಜನರ ಅಜ್ಞಾನವನ್ನು ನೀಗಿಸಿದರು. ಅವರ ಮನಸ್ಸಿನಲ್ಲಿ ಜ್ಞಾನಾನಂದಾದಿಸದ್ಗುಣಪರಿಪೂರ್ಣನಾದ ಶ್ರೀಕೃಷ್ಣನಲ್ಲಿ ಭಕ್ತಿಯುಂಟಾಗುವಂತೆ ಮಾಡಿದರು. ಆ ಕೃಷ್ಣನಾದರೋ ಮೋಕ್ಷವನ್ನು ಹೊಂದಲು ಯೋಗ್ಯರಾದ ಸಾತ್ತ್ವಿಕಭಕ್ತರಿಗೆ ಮಾತ್ರವೇ ಮೋಕ್ಷವನ್ನೀಯುವನು. ಗೋಕುಲ-ವೃಂದಾವನಗಳಲ್ಲಿ ಶ್ರೀಕೃಷ್ಣನಲ್ಲಿ ಪ್ರೇಮವನ್ನು ತೋರಿಸುವುದರಲ್ಲಿ ಲಜ್ಜೆಯನ್ನು ಬಿಟ್ಟು ಮುಗುಳ್ನಗೆಯನ್ನು ಸೂಸುತ್ತಾ

Rarest Archives

ಅವನಲ್ಲಿ ಪ್ರೇಮಭಕ್ತಿಯನ್ನು ಹೊಂದಿದ್ದ ಮಂದಗಮನೆಯರಾದ ಗೋಪಾಂಗನೆಯರೊಡನೆ ವಿಹರಿಸಿ ಅವರನ್ನು ಸಂತೋಷಪಡಿಸಿದವನು. ಸರ್ವತಂತ್ರ ಸ್ವತಂತ್ರನಾದುದರಿಂದ ತನ್ನ ಯಾವ ಪ್ರವೃತ್ತಿಯಿಂದಲೂ ಧರ್ಮಾಧರ್ಮ ಸುಖದುಃಖಗಳ ಕರ್ಮಗಳ ಲೇಪವಿಲ್ಲದವನು. ಸಮಸ್ತದೋಷದೂರನಾದ ನಿತ್ಯಾನಂದೋದ್ರೇಕವುಳ್ಳ ಅವನು ವೀಣಾದಿವಾದ್ಯಗಳಿಂದ ಸ್ತುತಿಸಿದಾಗ ಆನಂದವನ್ನು ಪ್ರಕಟಗೊಳಿಸಿ ಭಕ್ತರಲ್ಲಿ ಅನುಗ್ರಹವನ್ನು ಮಾಡುವನು. ಮೃದುವಾದ ಅಪ್ರಾಕೃತವಾದ ಪೀತಾಂಬರ, ಅಲಂಕಾರಗಳಿಂದ ಭೂಷಿತನಾಗಿ ಸರ್ವೋತ್ತಮನಾಗಿರುವನು ಶ್ರೀಕೃಷ್ಣನು.

ಚಂದ್ರನು ತನ್ನ ಕಿರಣಗಳಿಂದ ಅಂಧಕಾರವನ್ನು ಹೋಗಲಾಡಿಸುತ್ತಾನೆ. ಎಲ್ಲಾ ವಸ್ತುಗಳನ್ನೂ ಪ್ರಕಾಶಗೊಳಿಸುತ್ತಾನೆ. ಅವನು ಸಂಚರಿಸುವ ಆಕಾಶವಾದರೋ ಜನರಿಗೆ ಅವಕಾಶವನ್ನು ಕೊಡುತ್ತದೆ. ಓಡಾಡಲು ದಾರಿಯನ್ನು ಕಲ್ಪಿಸುತ್ತದೆ. ವಿಮಾನಗಳಲ್ಲಿ ಕುಳಿತು ಸಂಚರಿಸುವ ಮಂದಗಮನೆಯರಾದ ದೇವತಾಸ್ತ್ರೀಯರಿಗೆ ವಿಹಾರಮಾಡಲು ಅನುಕೂಲವಾಗಿರುತ್ತದೆ. ಸೂರ್ಯಚಂದ್ರರಿಂದ ಪ್ರಕಾಶವನ್ನು ಹೊಂದಿ ಯಾವಾಗಲೂ ನಿರ್ಮಲವಾಗಿ ನಿರ್ಲೇಪವಾಗಿರುತ್ತದೆ. ಅತ್ಯಂತಸೂಕ್ಷ್ಮವಾಗಿ ಎಲ್ಲಿಡೆ ವ್ಯಾಪಿಸಿದ್ದರೂ ಇಂದ್ರಿಯಗಳಿಗೆ ಗೋಚರವಾಗುವುದಿಲ್ಲ. ಹೀಗೆಲ್ಲಾ ಆಕಾಶವು ಉತ್ತಮವಾಗಿದ್ದರೂ ಅದರಲ್ಲಿ ಶ್ರೀಕೃಷ್ಣನಂತೆ ಅಗಣಿತಗುಣಗಳಿಲ್ಲ, ಬಹಳಗುಣಗಳೂ ಇಲ್ಲ. ಶಬ್ದವೆಂಬ ಒಂದೇ ಗುಣವಿಶೇಷವಿದೆ. ಇಂತಹ ಆಕಾಶವನ್ನು ಚಂದ್ರನು ಪ್ರಕಟಗೊಳಿಸಿದನು. ಆದರೆ ಶ್ರೀಮಧ್ವಾಚಾರ್ಯರು ಅನಂತಗುಣಪೂರ್ಣನಾದ ಶ್ರೀಕೃಷ್ಣನನ್ನು ಪ್ರಕಟಗೊಳಿಸಿದರು. ಆಚಾರ್ಯರಿಗೂ ಚಂದ್ರನಿಗೂ ಇದೇ ಒಂದು ದೊಡ್ಡ ವ್ಯತ್ಯಾಸ.

(ಶ್ಲೋ. 54) ಮಾನ ಏವ ಸಂಪತ್, ವಿಗತಾ ಮಾನಸಂಪತ್ ಯಾಸಾಂ ತಾಃ, ಮೃದು ಯಥಾ ತಥಾ ಗಂತುಂ ಶೀಲಂ ಆಸಾಂ ಇತಿ ಮೃದುಗಾಮಿನ್ಯಃ, ಮೃದುಗಾಮಿನ್ಯಶ್ಚ ತಾಃ, ವಿಮಾನಸಂಪದಶ್ಚ ಮೃದು-ಗಾಮಿವಿಮಾನಸಂಪದಃ (ತಾಃ), (ಅರ್ಥಾಂತರದಲ್ಲಿ) ಮೃದುಗಾಮೀನಿ ಚ ತಾನಿ ವಿಮಾನಾನಿ ಚ, ಮೃದುಗಾಮಿವಿಮಾನಾನಾಂ ಸಂಪತ್ ಯಾಸಾಂ

Rarest Archiver

ತಾಃ (ತಾಃ), ಶೋಭನಂ ಸ್ಮಿತಂ ಯಾಸಾಂ ತಾಃ, ಸುಸ್ಮಿತಾಶ್ಚ ತಾಃ ಗೋಪಸುಂದರ್ಯಶ್ಚ ತಾಃ, ಸುಸ್ಮಿತಗೋಪಸುಂದರೀಃ (ತಾಃ) ಸುಸ್ಮಿತಾಃ ಯಾಃ, ಗಾಂ ಸ್ವರ್ಗಂ ಪಾಂತಿ ಇತಿ ಗೋಪಾ ದೇವಾಃ ತೇಷಾಂ ಸುಂದರ್ಯಃ (ತಾಃ), ಪರಿತಾಪೇನ ವಿಹೀನಂ, ಸು (ಶೋಭನಂ) ತತಂ ವೀಣಾದಿವಾದ್ಯಂ ಯಸ್ಯ ತತ್ (ಗೊಲ್ಲತಿಯರೊಡನೆ ವೀಣಾದಿವಾದ್ಯದಿಂದ ವಿಹರಿಸುವವನು,) ಸು ಸಮ್ಯಕ್ ತತಂ, ಸೂಕ್ಷ್ಮತರಂ ಅಂಬರಂ ಯಸ್ಯ ತತ್. ಸೂಕ್ಷ್ಮತರಂ ಚ ತತ್ ಅಂಬರಂ ಚ ;

ಶ್ಲೋ. 55 ಗತಿಂ ದದಾತೀತಿ ಗತಿದಂ, ಅನ್ಯಃ ಅರ್ಥಃ ಅರ್ಥಾಂತರಂ, ಆನಂದಶ್ಚ ಚಿಚ್ಚ ಆನಂದಚಿತೌ, ಆನಂದಚಿದ್ಭ್ಯಾಂ ಸಹಿತಾಃ ಸಾನಂದ-ಚಿತಃ, ಸಾನಂದಚಿತಶ್ಚ ತೇ ಗುಣಾಶ್ಚ, ಸಾನಂದಚಿದ್ಗುಣಾನಾಂ ಗಣಃ ಯಸ್ಯ ತತ್, ಪರಿಪೂರ್ಣಾ ಸಂವಿತ್ ಯಸ್ಯ ಸಃ, ಶಬ್ದಃ ಗುಣಃ ಯಸ್ಯ ತತ್;

ಅಪ್ರಕಟಂ ಪ್ರಕಟಂ ಸಂಪದ್ಯಮಾನಂ ಚಕಾರ ಪ್ರಕಟೀಚಕಾರ, ಚಕ್ರತುಃ ಇತ್ಯಾದಿ. ಕೃ ಧಾತು ಲಿಟ್. ೫೪ನೆಯ ಶ್ಲೋಕದಲ್ಲಿ ಸುಂದರೀ ವೃತ್ತ (ಸರ್ಗ 7 ರಲ್ಲಿ ಲಕ್ಷಣಕೊಟ್ಟಿದೆ.) ೫೫ರಲ್ಲಿ ವಸಂತತಿಲಕವೃತ್ತ. ೧೩ನೆಯ ಸರ್ಗದ ಕೊನೆಯಲ್ಲಿ ಲಕ್ಷಣಕೊಟ್ಟಿದೆ.

ಇಲ್ಲಿಗೆ ಶ್ರೀಮನ್ನಾರಾಯಣಪಂಡಿತಾಚಾರ್ಯವಿರಚಿತವಾದ
ಶ್ರೀಸುಮಧ್ವವಿಜಯಮಹಾಕಾವ್ಯದ ಹದಿನಾಲ್ಕನೆಯ ಸರ್ಗದ
ಕರ್ನಾಟಕಭಾಷಾನುವಾದವು ಸಮಾಪ್ತವಾಯಿತು.

Rarest Archiver

ಶ್ರೀಃ

ಶ್ರೀಸುಮಧ್ವವಿಜಯಮಹಾಕಾವ್ಯಂ

ಹದಿನೈದನೆಯ ಸರ್ಗದ ಕಥಾಸಾರ

ತರುವಾಯ ಶ್ರೀಮಧ್ವಾಚಾರ್ಯರು ಪಾಡಿಕುಡೆಲ್ ಎಂಬ ಹಳ್ಳಿಯ ದೇವಾಲಯದಲ್ಲಿ ವಾಸಮಾಡುತ್ತ ತಾವು ರಚಿಸಿದ ಬ್ರಹ್ಮಸೂತ್ರಭಾಷ್ಯದ ಪ್ರವಚನ ನಡೆಸಿದರು. ಆಗ ತ್ರಿವಿಕ್ರಮಪಂಡಿತಾಚಾರ್ಯರು ಯುದ್ಧದಲ್ಲಿ ಎದುರಿಸುವ ಪ್ರತಿಪಕ್ಷನಾಯಕನಂತೆ ದ್ವೈತವನ್ನು ಖಂಡಿಸಿ ಅದ್ವೈತವನ್ನು ಸಮರ್ಥಿಸಲು ಮುಂದಾದರು. ಶ್ರೀಮಧ್ವಾಚಾರ್ಯರು ಶ್ರೀಹರಿಯೇ ಸಮಸ್ತ ಜಗತ್ತಿನ ಸೃಷ್ಟ್ಯಾದಿಕಾರಣನು ಎಂದು ಸಮರ್ಥಿಸುತ್ತಾ ಗಂಗಾಪ್ರವಾಹದಂತೆ ತಡೆಯಿಲ್ಲದೆ ನುಡಿಯುತ್ತಾ ಉಪನ್ಯಾಸಭಾರತಿಯನ್ನು ಪ್ರಕಟಗೊಳಿಸಿದರು. ಅವರ ಮಾತಿಗೆ ವೇದ ಉಪನಿಷತ್ತುಗಳ ಬೆಂಬಲವಿತ್ತು. ರುದ್ರಾದಿಗಳಿಂದಲೂ ಶಿರಸಾಮಾನ್ಯವಾದ ಅವರ ಮಾತುಗಳು ತ್ರಿವಿಕ್ರಮಪಂಡಿತರ ಕಡೆಗೆ ಬಾಣಗಳ ಸುರಿಮಳೆಯಂತೆ ಮುನ್ನುಗ್ಗುತ್ತಿದ್ದುವು.

'ನಾರಾಯಣನು ಅನಂತಗುಣಪೂರ್ಣನು. ವೇದಪ್ರತಿಪಾದ್ಯನು. ಅವನೇ ಬ್ರಹ್ಮಶಬ್ದವಾಚ್ಯನು. ಸೃಷ್ಟ್ಯಾದಿಕರ್ತನೆ'ಂದು ಪ್ರಮಾಣ ಗಳಿಂದ ಮಧ್ವರು ಸಾಧಿಸಿದರು. ಅವರು–ನಿರೀಶ್ವರಸಾಂಖ್ಯ ಸೇಶ್ವರಸಾಂಖ್ಯಮತಗಳನ್ನೂ, ಚಾರ್ವಾಕ, ಭಾಟ್ಟ, ಪ್ರಾಭಾಕರಾದಿಮತಗಳನ್ನೂ, ಖಂಡಿಸಿದರು. ಅನಂತರ ವೇದೋಪನಿಷತ್ತುಗಳ ಪ್ರಾಮಾಣ್ಯವನ್ನು ಸಾಧಿಸಿದರು– ನಾರಾಯಣನೇ ಜಗಜ್ಜನ್ಮಾದಿಕರ್ತನೆಂದು ಸಿದ್ಧಗೊಳಿಸಿ, ಪಾಶುಪತ, ಗಾಣಾಪತ್ಯ, ಸೌರ, ಸ್ಕಾಂದ, ಮೊದಲಾದ ಮತಗಳನ್ನು ನಿರಾಕರಿಸಿದರು. ಅನುಮಾನಾಗಮಗಳಿಂದ ನಾರಾಯಣನು ಅನಂತಗುಣಗಳುಳ್ಳವನೆಂದು ಸಾಧಿಸಿ ವೈಶೇಷಿಕಮತವನ್ನೂ ನಿರಾಕರಿಸಿದರು. ಶೂನ್ಯವಾದಿಬೌದ್ಧರಿಗೂ,

Rarest Archiver

ಮಾಯಾವಾದಿಗಳಿಗೂ ವ್ಯತ್ಯಾಸವಿಲ್ಲ. ಮಾಯಾವಾದಿಗಳು ಪ್ರಚ್ಛನ್ನ ಬೌದ್ಧರು ಎಂದು ಸಿದ್ಧಪಡಿಸಿ ಆ ಎರಡು ಮತಗಳನ್ನು ಯುಕ್ತಿಗಳಿಂದ ಖಂಡಿಸಿದರು. ಶ್ರೀಮನ್ನಾರಾಯಣನ ಅನುಗ್ರಹದಿಂದಲೇ ಯೋಗ್ಯರಾದ ಭಕ್ತಚೇತನರು ಸ್ವರೂಪಾನಂದಾವಿರ್ಭಾವವೆಂಬ ಮುಕ್ತಿಯನ್ನು ಪಡೆಯುತ್ತಾರೆ—ಇತ್ಯಾದಿ ತತ್ತ್ವವಾದಸಿದ್ಧಾಂತದ ಪ್ರಮೇಯವನ್ನು ಅನೇಕರೀತಿಗಳಿಂದ ವಿವರಿಸಿದರು.

ಇದನ್ನೆಲ್ಲಾ ಕೇಳಿದ ತ್ರಿವಿಕ್ರಮಪಂಡಿತರು ಮಾಯಾವಾದಿ ಮತವನ್ನು ಸಮರ್ಥಿಸಲು ಪ್ರಬಲವಾದ ಅನೇಕ ಅನುಮಾನಪ್ರಮಾಣಗಳನ್ನು ಮುಂದಿಟ್ಟರು. ಆಚಾರ್ಯರು ಅವರ ಅನುಮಾನಗಳನ್ನೆಲ್ಲಾ ಖಂಡಿಸಿದರು. ಹೀಗೆ ಅವರಿಬ್ಬರಿಗೂ ನಾಯಕಪ್ರತಿನಾಯಕರಿಗೆ ಹೋರಾಟ ನಡೆಯುವಂತೆ 15ದಿನಗಳಕಾಲ ವಾದನಡೆಯಿತು ಕೊನೆಗೆ ತ್ರಿವಿಕ್ರಮಪಂಡಿತರು ಸೋತು—'ಸ್ವಾಮಿ! ಕ್ಷಮಿಸಬೇಕು' ಎಂದು ಹೇಳಿ ಆಚಾರ್ಯರ ದಾಸ್ಯವನ್ನು ಯಾಚಿಸಿ ಅವರ ಶಿಷ್ಯರಾದರು. ಆಚಾರ್ಯರು ತ್ರಿವಿಕ್ರಮಪಂಡಿತರಿಗೆ ವೈಷ್ಣವಸಿದ್ಧಾಂತದ ದೀಕ್ಷೆಯನ್ನಿತ್ತು ತತ್ತ್ವೋಪದೇಶವನ್ನು ಮಾಡಿ ತಾವು ರಚಿಸಿದ ಬ್ರಹ್ಮಸೂತ್ರಭಾಷ್ಯಕ್ಕೆ ಟೀಕೆಯನ್ನು ಬರೆಯಲು ಆಜ್ಞಾಪಿಸಿದರು. ತ್ರಿವಿಕ್ರಮರು 'ತತ್ತ್ವದೀಪಿಕಾ' (ತತ್ತ್ವಪ್ರದೀಪ) ಎಂಬ ಭಾಷ್ಯ ಟೀಕೆಯನ್ನು ಬರೆದರು. ತ್ರಿವಿಕ್ರಮಪಂಡಿತರು ಆಚಾರ್ಯರು ಬರೆದಿರುವ ಗ್ರಂಥಗಳನ್ನೆಲ್ಲಾ ಹೊಗಳಿ, ಸ್ಪಷ್ಟವಾದ ಯುಕ್ತಿಗಳಿಂದ ನಮ್ಮಂತಹ ಮಂದಮತಿಗಳಿಗೂ ತಿಳಿಯುವಂತೆ ಪರಮತಗಳನ್ನು ಖಂಡಿಸುವ ಮತ್ತೊಂದು ಶ್ರೇಷ್ಠಗ್ರಂಥವನ್ನು ಬರೆಯಬೇಕೆಂದು ಬೇಡಿಕೊಂಡರು. ಆಗ ಆಚಾರ್ಯರು— **'ಅನುವ್ಯಾಖ್ಯಾನ'**— ಎಂಬ ನಾಲ್ಕುಅಧ್ಯಾಯರೂಪವಾದ ಬ್ರಹ್ಮಸೂತ್ರಗಳ 'ಅನುಭಾಷ್ಯ'ವನ್ನು— ನಾಲ್ಕುಮಂದಿ ಶಿಷ್ಯರಿಂದ ಒಂದೇ ಸಮಯದಲ್ಲಿ ಬರೆಸಿದರು. ಇದು ಸಜ್ಜನರಿಗೆ **ಸುಧೆಯಾಯಿತು.** ಅಲ್ಲಿ ಹೇಳಿರುವ ಯುಕ್ತಿಗಳನ್ನು ವಿವರಿಸುವ ನ್ಯಾಯವಿವರಣ ಎಂಬ ಗ್ರಂಥವನ್ನೂ ಬರೆದರು ಹೀಗೆ ಆಚಾರ್ಯರು ಮೂವತ್ತುಏಳು ಗ್ರಂಥಗಳನ್ನು ಬರೆದರು.

ಆಚಾರ್ಯರ ಪೂರ್ವಾಶ್ರಮದ ಮಾತಾಪಿತೃಗಳು ದೇಹಾವಸಾನ ಹೊಂದಿದನಂತರ ಪಾಜಕಕ್ಷೇತ್ರದ ಆಚಾರ್ಯರ ಮನೆಯಲ್ಲಿ ಅವರ ಸಹೋ

Rarest Archiver

ದರನು ವಾಸವಾಗಿದ್ದನು. ಅದೃಷ್ಟವಶದಿಂದ ಅವರ ಧನಧಾನ್ಯಾದಿ ಸಂಪತ್ತೆಲ್ಲವೂ ಹಾಳಾದಾಗ ವಿರಕ್ತನಾಗಿ ಅವನು ಅಣ್ಣಂದಿರಾದ ಆಚಾರ್ಯರ ಹತ್ತಿರ ಬಂದು ತನಗೆ ಸನ್ನ್ಯಾಸಕೊಡಬೇಕೆಂದು ಬೇಡಿಕೊಂಡನು. ಆಚಾರ್ಯರು ಸನ್ನ್ಯಾಸಕೊಡುವುದಕ್ಕೆ ಯೋಗ್ಯಕಾಲವನ್ನು ನಿರ್ಧರಿಸಿ-ತತ್ಕಾಲದಲ್ಲಿ ಅವನನ್ನು ಹಿಂದಕ್ಕೆ ಕಳುಹಿಸಿದರು. ಊಟ ನಿದ್ದೆ ಮಾತು ನಗು ಎಲ್ಲವನ್ನು ಬಿಟ್ಟು ಆಚಾರ್ಯರ ಅನುಗ್ರಹವನ್ನೇ ಎದುರುನೋಡುತ್ತಿದ್ದ ತಮ್ಮನಿಗೆ ಆಚಾರ್ಯರು ಪಾಜಕಕ್ಷೇತ್ರಕ್ಕೆ ಬಂದು ಸನ್ನ್ಯಾಸವನ್ನು ಕೊಟ್ಟು ಮಂತ್ರೋಪದೇಶಮಾಡಿ 'ವಿಷ್ಣುತೀರ್ಥ' ಎಂಬ ಆಶ್ರಮನಾಮವನ್ನು ಕೊಟ್ಟರು. ವಿಷ್ಣುತೀರ್ಥರು ಆಚಾರ್ಯರಿಂದ ವೇದಾಂತಶಾಸ್ತ್ರವನ್ನು ಕೇಳಿ, ಮನನಮಾಡಿ, ತನ್ನ ಸಮಯವನ್ನು ಒಂದುಕ್ಷಣವೂ ವ್ಯರ್ಥಮಾಡದೆ ಧ್ಯಾನ-ಪ್ರವಚನಗಳನ್ನು ಮಾಡುತ್ತಾ ಇದ್ದರು. ಆಚಾರ್ಯರ ದಯೆಯಿಂದ ಅಪರೋಕ್ಷಜ್ಞಾನಿಗಳಾದರು. ಅವರು ಯಾತ್ರೆಯನ್ನು ಮಾಡಿ ಹಿಂತಿರುಗಿ ಬಂದು ಸಹ್ಯಪರ್ವತದ ಸಾಲಿನಲ್ಲಿರುವ ಕುಮಾರಪರ್ವತದ ಹತ್ತಿರದಲ್ಲಿಯೇ ಇರುವ ಹರಿಶ್ಚಂದ್ರಪರ್ವತವನ್ನು ಹತ್ತಿ ಅಲ್ಲಿ ತಪಸ್ಸು ಮಾಡಲಾರಂಭಿಸಿದರು. ಅಲ್ಲಿ ಉಪವಾಸದಿಂದ ತಪಸ್ಸನ್ನು ಮಾಡುತ್ತಾ ಭಕ್ತರ ಪ್ರಾರ್ಥನೆಯಂತೆ ಐದುದಿನಗಳಿಗೊಮ್ಮೆ ಸ್ವಲ್ಪ ಪಂಚಗವ್ಯವನ್ನು ಸ್ವೀಕರಿಸುತ್ತಿದ್ದರು. ಕೊನೆಗೆ ಅದನ್ನೂ ತ್ಯಜಿಸಿ ನೆಲದ ಮೇಲೆ ತಾನಾಗಿ ಬಿದ್ದ ಬಿಲ್ವಪತ್ರೆಗಳನ್ನು ತಿಂದು ನೀರು ಮಾತ್ರ ಕುಡಿಯುತ್ತಿದ್ದರು. ತುಂಬಾಶೀತಲವಾದ ಶಿಲೆಯ ಮೇಲೆ ಕುಳಿತು ಘೋರತಪಸ್ಸನ್ನು ಆಚರಿಸುತ್ತಾ ಪರಮಾತ್ಮನ ಧ್ಯಾನದಲ್ಲಿ ಮಗ್ನರಾಗಿ ಮುಕುಂದನ ಸುಂದರರೂಪವನ್ನು ಅಸಂಪ್ರಜ್ಞಾತಸಮಾಧಿಯಲ್ಲಿ ಕಂಡು ಅಲೌಕಿಕಾನಂದವನ್ನು ಅನುಭವಿಸಿದರು. ವಿಷ್ಣುತೀರ್ಥರು ಅನಿರುದ್ಧತೀರ್ಥರೆಂಬ ಪ್ರಿಯಶಿಷ್ಯರ ಪ್ರಾರ್ಥನೆಯಂತೆ ಉಡುಪಿಗೂ ಬಂದರು. ಅಲ್ಲಿ ವ್ಯಾಸತೀರ್ಥರು (ಬಾದರಾಯಣತೀರ್ಥರು) ಎಂಬ ಇನ್ನೊಬ್ಬ ಶಿಷ್ಯರನ್ನು ಕೃಷ್ಣಪೂಜೆಗಾಗಿ ನಿಲ್ಲಿಸಿ, ಅವರನ್ನು ಅನುಗ್ರಹಿಸಿ ತಾವು ಮನುಷ್ಯರಿಗೆ ಅದೃಶ್ಯರಾಗಿ ಕುಮಾರಪರ್ವತವನ್ನು ಹತ್ತಿ ಅಲ್ಲಿಯೇ ದೇಹತ್ಯಾಗಮಾಡದೆ ಈಗಲೂ ತಪಸ್ಸುಮಾಡುತ್ತಿದ್ದಾರೆ ಎಂದು ಐತಿಹ್ಯವಿದೆ.

Rarest Archives

ಶ್ರೀಪೂರ್ಣಪ್ರಜ್ಞರಿಗೆ ಗೋದಾವರೀತೀರದ ಪಂಡಿತೋತ್ತಮರಾದ ಪದ್ಮನಾಭತೀರ್ಥರೂ ಪ್ರಿಯಶಿಷ್ಯರಾಗಿದ್ದರು. ಅವರು ಆಚಾರ್ಯರಲ್ಲಿ ವೇದಾಂತಶಾಸ್ತ್ರವನ್ನು ಅಭ್ಯಾಸಮಾಡಿ ಅನೇಕ ಪ್ರಾಯವಾದಿಗಳನ್ನು ಜಯಿಸಿದರು. ಅವರು ಆಚಾರ್ಯರ ಅನುವ್ಯಾಖ್ಯಾನಕ್ಕೆ ಸನ್ನ್ಯಾಯರತ್ನಾವಳೀ ಎಂಬ ವ್ಯಾಖ್ಯಾನವನ್ನೂ ರಚಿಸಿದರು.

ಇವರಲ್ಲದೆ ಆಚಾರ್ಯರಿಗೆ ಭಾರತದೇಶದಲ್ಲಿ ಅಲ್ಲಲ್ಲಿ ಬಹುಮಂದಿ ಶಿಷ್ಯರಾದರು. ಅವರಲ್ಲಿ ಹೃಷೀಕೇಶತೀರ್ಥರು, ಜನಾರ್ದನತೀರ್ಥರು, ನರಸಿಂಹತೀರ್ಥರು, ಉಪೇಂದ್ರತೀರ್ಥರು, ವಾಮನತೀರ್ಥರು, ರಾಮ-ತೀರ್ಥರು, ಅಧೋಕ್ಷಜತೀರ್ಥರು ಮುಖ್ಯರು. ಇವರು ಆಚಾರ್ಯರ ಸಿದ್ಧಾಂತವನ್ನು ಸಾತ್ತ್ವಿಕಜನತೆಯಲ್ಲಿ ಪ್ರಚಾರಗೊಳಿಸುತ್ತಾ, ಆಚಾರ್ಯರು ಅನುಗ್ರಹಿಸಿದ ಪ್ರತಿಮೆಗಳನ್ನು ಪೂಜಿಸುತ್ತಾ, ಆಚಾರ್ಯರ ಅಪ್ಪಣೆಯಂತೆ ಶಿಷ್ಯಪ್ರಶಿಷ್ಯಪರಂಪರೆಯನ್ನು ಮುಂದುವರಿಸುತ್ತಿದ್ದರು. ಹೀಗೆ ಆಚಾರ್ಯರ ಶಿಷ್ಯಪರಂಪರೆಯು ಭಾರತದೇಶದಲ್ಲಿ ಅಭಿವೃದ್ಧಿಹೊಂದುತ್ತಾ ಇತ್ತು. ಅನೇಕಮಂದಿ ಗೃಹಸ್ಥರೂ ಆಚಾರ್ಯರಿಗೆ ಶಿಷ್ಯರಾಗಿದ್ದರು. ಅವರಲ್ಲಿ ಲಿಕುಚ ವಂಶದ ತ್ರಿವಿಕ್ರಮಪಂಡಿತಾಚಾರ್ಯರು, ಇವರ ತಮ್ಮನಾದ ಶಂಕರಾ ಚಾರ್ಯರು, ಇವರ ವಂಶದ ಇನ್ನೊಬ್ಬ ಶಂಕರಾಚಾರ್ಯರು ಅದ್ವಿತೀಯ ಪಂಡಿತರಾಗಿ ಶಿಷ್ಯರಿಗೆ ಮಧ್ವಶಾಸ್ತ್ರವನ್ನು ಉಪದೇಶಮಾಡುತ್ತಿದ್ದರು; ಲೌಕಿಕರಾದ ಗೃಹಸ್ಥರೂ ಆಚಾರ್ಯರ ಶಿಷ್ಯರಾಗಿ ಸಜ್ಜನರ ರಕ್ಷಣೆ ಮಾಡಿ ಭಗವಂತನ ಅನುಗ್ರಹವನ್ನು ಪಡೆದರು. ಹೀಗೆ ಆಚಾರ್ಯರು ವೈಷ್ಣವಸಿದ್ಧಾಂತ ದಲ್ಲಿ ದೃಢನಿಷ್ಠೆಯುಳ್ಳವರಿಗೆಲ್ಲರಿಗೂ ಶ್ರೀರಾಮನಂತೆ ಮೋಕ್ಷಮಾರ್ಗವನ್ನು ತೋರಿಸಿದ್ದರು. ಅವರು ಹಳ್ಳಿಹಳ್ಳಿಗಳಲ್ಲಿಯೂ ವೈಷ್ಣವಸಿದ್ಧಾಂತವನ್ನು ಸಾರುತ್ತಾ ತಾಂತ್ಯ ಎಂಬ ಹಳ್ಳಿಯ ಭಕ್ತರ ಪ್ರಾರ್ಥನೆಯಂತೆ ಅಲ್ಲಿಯ ಒಂದು ಮಠದಲ್ಲಿ ಚಾತುರ್ಮಾಸ್ಯವ್ರತವನ್ನು ಆಚರಿಸಿದರು.

Rarest Archives

ಹದಿನೈದನೆಯ ಸರ್ಗ

ವಿಜಯ–ಗ್ರಂಥನಿರ್ಮಾಣ–ಶಿಷ್ಯಸಂಪತ್ತಿ

ಆಚಾರ್ಯರು ಭಾಷ್ಯಪ್ರವಚನಮಾಡಿದರು —

ಭೂಯೋಬೋಧಸ್ತತೋ ಭೂಯೋ
ವ್ಯಾಚಖ್ಯೌ ಭಾಷ್ಯಮದ್ಭುತಂ ।
ಗ್ರಾಮೇ ಗ್ರಾಮೀಣಸಾಮಾನ್ಯೇ-
ವಸಂಸ್ತತ್ರಾಮರಾಲಯೇ ॥ ೧ ॥

ತತಃ ಭೂಯೋಬೋಧಃ ತತ್ರಗ್ರಾಮೇ ಗ್ರಾಮೀಣಸಾಮಾನ್ಯೇ ಅಮರಾಲಯೇ ವಸನ್ ಭೂಯಃ ಅದ್ಭುತಂ ಭಾಷ್ಯಂ ವ್ಯಾಚಖ್ಯೌ.

ತತಃ = ಅನಂತರ, ಭೂಯೋಬೋಧಃ = ಶ್ರೀಪೂರ್ಣಪ್ರಜ್ಞರು, ತತ್ರ ಗ್ರಾಮೇ = ಆ ಪಾಡಿಕುಡಲ್ ಎಂಬ ಹಳ್ಳಿಯಲ್ಲಿ, ಗ್ರಾಮೀಣ-ಸಾಮಾನ್ಯೇ = ಹಳ್ಳಿಯವರಿಗೆಲ್ಲಾ ಸೇರಿದ, ಅಮರಾಲಯೇ = 'ಕೂಡಲು' ದೇವಾಲಯದಲ್ಲಿ, ವಸನ್ = ವಾಸಿಸುತ್ತಾ, ಭೂಯಃ = ಮತ್ತೂ, ಅದ್ಭುತಂ ಭಾಷ್ಯಂ = ಆಶ್ಚರ್ಯಕರವಾದ ಬ್ರಹ್ಮಸೂತ್ರಭಾಷ್ಯವನ್ನು, ವ್ಯಾಚಖ್ಯೌ = ವ್ಯಾಖ್ಯಾನಿಸಿದರು.

ವಿಷ್ಣುಮಂಗಲದೇವಾಲಯದಲ್ಲಿ ಕೆಲವು ಸಮಯವಾಸಮಾಡಿದ ಮೇಲೆ ಶ್ರೀಮಧ್ವಾಚಾರ್ಯರು, ಆ ಗ್ರಾಮದಲ್ಲಿ ಗ್ರಾಮದವರಿಗೆಲ್ಲಾ ಸೇರಿದ 'ಕುಡಿಲು' ದೇವಾಲಯದಲ್ಲಿ ವಾಸಮಾಡುತ್ತಾ ಆಶ್ಚರ್ಯಕರವಾದ ತಾನು ಮಾಡಿದ ದ್ವೈತಸಿದ್ಧಾಂತಾನುಗುಣವಾದ ಬ್ರಹ್ಮಸೂತ್ರಭಾಷ್ಯದ ಪ್ರವಚನ ಮಾಡಿದರು.

ಭೂಯಾನ್ ಬೋಧಃ ಯಸ್ಯ ಸಃ, ಗ್ರಾಮೀಣಾನಾಂ ಸಾಮಾನ್ಯಃ ತಸ್ಮಿನ್, ಅಮರಾಣಾಂ ಆಲಯಃ ತಸ್ಮಿನ್;

ವಿ + ಆ + ಚಖ್ಯೌ ಚಖ್ಯತುಃ ಚಖ್ಯುಃ ವಿ, ಆ, ಉಪಸರ್ಗಗಳು. ಚಕ್ಷಿಙ್ (ಚಕ್ಷ್) ವ್ಯಕ್ತಾಯಾಂ ವಾಚಿ ಸಕ. ಸೇಟ್. ಆತ್ಮ. 'ಚಕ್ಷಿಙಃ'

Rarest Archiver

ಖ್ಯಾಞ್ (2-4-54) ಎಂಬ ಸೂತ್ರದಿಂದ ಖ್ಯಾಞ್ ಆದೇಶಪಕ್ಷದಲ್ಲಿ ಪರಸ್ಮೈಪ.

ಇಲ್ಲಿ ಪಥ್ಯಾವಕ್ತ್ರ ಎಂಬ ಅನುಷ್ಟುಪ್ ವೃತ್ತದ ಪ್ರಭೇದ. ಯುಜೋರ್ಜೇನ ಸರಿದ್ಭರ್ತುಃ ಪಥ್ಯಾವಕ್ತ್ರಂ ಪ್ರಕೀರ್ತಿತಂ। ಲಕ್ಷಣ.

ಆಚಾರ್ಯರು ತನಗೆ ಪ್ರತಿಭಟನಾಗಿ ಬಂದಿರುವ ತ್ರಿವಿಕ್ರಮಪಂಡಿತರನ್ನು ನೋಡಿದರು —

ಪರಪಕ್ಷರಥಾರೂಢಂ ಖರತರ್ಕಮಹಾಯುಧಂ ।
ತ್ರಿವಿಕ್ರಮಾರ್ಯಂ ಸೋಽಪಶ್ಯತ್ ಪ್ರತಿವೀರಮಿವಾಗ್ರತಃ ॥ ೨ ॥

ಸಃ ಪರಪಕ್ಷರಥಾರೂಢಂ ಖರತರ್ಕಮಹಾಯುಧಂ ತ್ರಿವಿಕ್ರಮಾರ್ಯಂ ಪ್ರತಿವೀರಂ ಇವ ಅಗ್ರತಃ ಅಪಶ್ಯತ್.

ಸಃ = ಆ ಮಧ್ವಾಚಾರ್ಯರು, ಪರಪಕ್ಷರಥಾರೂಢಂ = ಪ್ರತಿಸಿದ್ಧಾಂತವೆಂಬ ರಥವನ್ನು ಏರಿರುವ, ಖರತರ್ಕಮಹಾಯುಧಂ = ಕಠಿನವಾದ (ಹರಿತವಾದ) ಅನುಮಾನಗಳೆಂಬ ದೊಡ್ಡ ಅಸ್ತ್ರಗಳುಳ್ಳ, ತ್ರಿವಿಕ್ರಮಾರ್ಯಂ ತ್ರಿವಿಕ್ರಮಪಂಡಿತಾಚಾರ್ಯರನ್ನು, ಪ್ರತಿವೀರಂ ಇವ = ಪ್ರತಿಭಟನಾಯಕನನ್ನೆಂಬಂತೆ, ಅಗ್ರತಃ = ಎದುರಿನಲ್ಲಿ, ಅಪಶ್ಯತ್ = ನೋಡಿದರು.

ಆ ಮಧ್ವಾಚಾರ್ಯರು ತನ್ನ ಇದಿರಿನಲ್ಲಿ ನಿಂತ ತ್ರಿವಿಕ್ರಮಪಂಡಿತಾಚಾರ್ಯರನ್ನು ಪ್ರತಿಸಿದ್ಧಾಂತವಾದ ಅದ್ವೈತಸಿದ್ಧಾಂತವೆಂಬ ರಥವನ್ನೇರಿ ತೀಕ್ಷ್ಣವಾದ ಅನುಮಾನಗಳೆಂಬ ಆಯುಧಗಳನ್ನು ಧರಿಸಿರುವವರನ್ನಾಗಿಯೂ ಪ್ರತಿಭಟನನ್ನಾಗಿಯೂ ತಿಳಿದರು. ಯುದ್ಧರಂಗದಲ್ಲಿ ಪ್ರತಿಪಕ್ಷದ ನಾಯಕನು ರಥವನ್ನೇರಿ ತೀಕ್ಷ್ಣವಾದ ಆಯುಧಗಳನ್ನು ಧರಿಸಿ ಎದುರಿನಲ್ಲಿ ನಿಲ್ಲುವಂತೆ ಅದ್ವೈತಪಕ್ಷವನ್ನು ವಹಿಸಿ ಯುಕ್ತಿಶೂರರಾದ ತ್ರಿವಿಕ್ರಮಪಂಡಿತರು ತನಗೆ ಪ್ರತಿವಾದಿಯಾಗಿ ಬಂದಿರುವರೆಂದು ತಿಳಿದರು.

ಪರಶ್ಚಾಸೌ ಪಕ್ಷಶ್ಚ, ಪರಪಕ್ಷ ಏವ ರಥಃ, ಪರಪಕ್ಷರಥಂ ಆರೂಢಃ, ತಂ, ಖರಾಶ್ಚ ತೇ ತರ್ಕಾಶ್ಚ, ಮಹಾಂತಿ ಚ ತಾನಿ ಆಯುಧಾನಿ ಚ, ಖರತರ್ಕಾ ಏವ ಮಹಾಯುಧಾನಿ ಯಸ್ಯ ಸಃ ;

Rarest Archive

ಅಪಶ್ಯತ್ ಅಪಶ್ಯತಾಂ ಅಪಶ್ಯನ್ ದೃಶಿರ್ (ದೃಶ್ = ಪಶ್ಯ್) ಪ್ರೇಕ್ಷಣೇ ಲಙ್.

ಆಚಾರ್ಯರ ಉಪನ್ಯಾಸಭಾರತಿಯು ಶಿಬಿರದಿಂದ ಸೇನೆಯು ಹೊರಡುವಂತೆ ಹೊರಟಿತು—

ತದಾ ತದಾನನಾಂಭೋಜಾದ್ ವೃತ್ತೋಪನ್ಯಾಸಭಾರತೀ।
ಸೇನಾ ಸೇನಾಗ್ರಹಾ ದಿವ್ಯಾ ಶಿಬಿರಾದಿವ ನಿರ್ಯಯೌ ॥ ೩ ॥

ಈ ಶ್ಲೋಕದಿಂದ ೭ನೆಯ ಶ್ಲೋಕದ ವರೆಗೆ ಒಟ್ಟಿಗೆ ಸೇರಿಸಿ ಅರ್ಥ ಹೇಳಬೇಕು – ಇದು ಆದಿಕುಲಕ.

ತದಾ ವೃತ್ತಾ ದಿವ್ಯಾ ಸೇನಾಗ್ರಹಾ ಉಪನ್ಯಾಸಭಾರತೀ ತದಾನನಾಂಭೋಜಾತ್ ಸೇನಾ ಶಿಬಿರಾತ್ ಇವ ನಿರ್ಯಯೌ ।

ತದಾ = ಆ ತ್ರಿವಿಕ್ರಮಪಂಡಿತಾಚಾರ್ಯರು ಕೇಳುತ್ತಿರಲು, ವೃತ್ತಾ = ಉಂಟಾದ, ದಿವ್ಯಾ = ಅಲೌಕಿಕವಾದ, ಸೇನಾಗ್ರಹಾ = ಸಮಸ್ತ ಜಗತ್ತಿನ ಸೃಷ್ಟ್ಯಾದಿಕಾರಣನಾದ ವಿಷ್ಣುವಿಗೆ ಜಗದೀಶ್ವರತ್ವವನ್ನು ಸಮರ್ಥಿಸುವುದರಲ್ಲಿ ತಾತ್ಪರ್ಯವುಳ್ಳ, ಸೇನಾಪತಿಗೆ ಜಯವನ್ನು ತಂದು ಕೊಡುವುದರಲ್ಲಿ ಹಠದಿಂದ ಕೂಡಿದ, ಉಪನ್ಯಾಸಭಾರತೀ = ಉಪನ್ಯಾಸ ರೂಪವಾದ ವಾಣಿಯು, ತದಾನನಾಂಭೋಜಾತ್ = ಆ ಮಧ್ವರ ಕಮಲ ದಂತಿರುವ ಮುಖದಿಂದ, ಸೇನಾ ಶಿಬಿರಾತ್ ಇವ = ಸೇನೆಯು ಡೇರೆ ಯಿಂದಲೋ ಎಂಬಂತೆ, ನಿರ್ಯಯೌ = ಹೊರಟಿತು.

ತ್ರಿವಿಕ್ರಮಪಂಡಿತರು ಕೇಳುತ್ತಿರುವಾಗಲೇ ಆಚಾರ್ಯರ ಬಾಯಿ ಯಿಂದ ಆಶ್ಚರ್ಯಕರವಾದ ಅಲೌಕಿಕವಾದ ಶ್ರೀಮನ್ನಾರಾಯಣನನ್ನು ಸರ್ವೋತ್ತಮನೆಂದು ಸಾಧಿಸುವುದರಲ್ಲಿ ಆಗ್ರಹವುಳ್ಳ, ಉಪನ್ಯಾಸರೂಪ ವಾದ ಭಾರತಿಯು (ವಚನವು) ಮುಖಕಮಲದಿಂದ, ಡೇರೆಯಿಂದ ಸ್ವಾಮಿಭಕ್ತಿಯುಳ್ಳ, ತಮ್ಮ ನಾಯಕನಿಗೆ ಜಯವನ್ನು ತಂದುಕೊಡುವುದ ರಲ್ಲಿ ಹಠವುಳ್ಳ ಸೇನೆಯಂತೆ ಹೊರಟಿತು. ಶತ್ರುವನ್ನು ಕಂಡೊಡನೆ ಉತ್ಸಾಹದಿಂದ ಸೈನ್ಯವು ಇದಿರಾಗಿ ಹೊರಟಂತೆ ಆಚಾರ್ಯರ ಮುಖದಿಂದ ಉಪನ್ಯಾಸವು ತಡೆಯಿಲ್ಲದೆ ಹೊರಟಿತು. ಮುಖ್ಯಪ್ರಾಣನ ಪತ್ನಿಯಾದ

Rarest Archiver

ಭಾರತಿಯು ತನ್ನ ಸ್ವಾಮಿಗೆ ಜಯವನ್ನು ತಂದುಕೊಡುವ ಹಠವುಳ್ಳವಳಾಗಿ ಪಚನರೂಪದಿಂದ ಆಚಾರ್ಯರ ಮುಖಕಮಲದಿಂದ ಹೊರಹೊರಟಳು ಎಂದು ಧ್ವನಿ.

ತಸ್ಯ ಆನನಂ ತದಾನನಂ, ತದಾನನಂ ಏವಂ ಅಂಭೋಜಂ ತದಾನನಾಂಭೋಜಂ ತಸ್ಮಾತ್, ಉಪನ್ಯಾಸರೂಪಾ ಚ ಸಾ ಭಾರತೀ ಚ, ಇನೇ ಅಗ್ರಹಃ. ಇನಾಗ್ರಹಃ, ಇನಾಗ್ರಹೇಣ ಸಹಿತಾ ಸೇನಾಗ್ರಹಾ, (ಇನಸ್ಯ ಆಗ್ರಹೇಣ ಸಹಿತಾ.)

ನಿರ್ + ಯಯೌ ಯಯತುಃ ಯಯುಃ ಇತ್ಯಾದಿ ಯಾ ಪ್ರಾಪಣೇ ಲಿಟ್.

ಆ ಉಪನ್ಯಾಸಭಾರತಿಯನ್ನೇ ಸೇನೆಯಂತೆ ವರ್ಣಿಸುತ್ತಾರೆ —

ನಾತ್ಯತ್ವರಾ ನಾತಿರಯಾ ನ ಸ್ಖಲಂತೀ ನಿರಂತರಾ ।
ಅನಾನಾವಯವೇತ್ಯೇವ ದವೀಯೋಭಿಃ ಪ್ರತರ್ಕಿತಾ ॥ ೪ ॥

ನಾತ್ಯತ್ವರಾ ನಾತಿರಯಾ ನ ಸ್ಖಲಂತೀ ನಿರಂತರಾ ದವೀಯೋಭಿಃ ಅನಾನಾವಯವಾ ಇತ್ಯೇವ ಪ್ರತರ್ಕಿತಾ (ಉಪನ್ಯಾಸಭಾರತೀ ಸೇನಾ ಶಿಬಿರಾದಿವ ನಿರ್ಯಯೌ.)

ನಾತ್ಯತ್ವರಾ = ಹೆಚ್ಚು ಮಂದಗತಿಯಿಲ್ಲದ, ನಾತಿರಯಾ = ಹೆಚ್ಚು ವೇಗವಿಲ್ಲದ, ನಸ್ಖಲಂತೀ = ಎಡವದ (ಸ್ಖಲನವಿಲ್ಲದ), ನಿರಂತರಾ = ಎಡೆ ಬಿಡದ, ದವೀಯೋಭಿಃ = ದೂರದಲ್ಲಿರುವವರಿಂದ, ಅನಾನಾವಯವಾ ಇತ್ಯೇವ = ಸ್ವರವರ್ಣಪದಾದಿನಾನಾವಾಕ್ಯಾವಯವಗಳಿಲ್ಲದುದು ಎಂದೇ, ರಥ, ಕುದುರೆ ಮೊದಲಾದ ಸೇನಾಂಗವಿಲ್ಲದುದೆಂದೇ, ಪ್ರತರ್ಕಿತಾ = ಊಹಿಸಲ್ಪಟ್ಟ (ಉಪನ್ಯಾಸಭಾರತಿಯು ಸೇನೆಯು ಶಿಬಿರದಿಂದಲೆಂಬಂತೆ ಹೊರಟಿತು.)

ಸೇನೆಯು ಬಹಳ ಮಂದಗತಿಯಿಂದ ಕೂಡಿಲ್ಲದೆ, ಅತಿವೇಗದಿಂದಲೂ ಅಲ್ಲದೆ, ಎಡೆಬಿಡದೆ ಶಿಬಿರದಿಂದ ಹೊರಟು ದೂರದಲ್ಲಿರುವುದರಿಂದ ರಥ ಕುದುರೆ ಮೊದಲಾದ ಸೇನಾಂಗಗಳಿಲ್ಲವೆಂದೇ ದೂರದಲ್ಲಿರುವವರಿಂದ ತಿಳಿಯಲ್ಪಡುತ್ತದೆ. ಹೀಗೆಯೇ ಶ್ರೀಮಧ್ವಾಚಾರ್ಯರ ಬಾಯಿಯಿಂದ

Rarest Archiver

ಹೊರಟ (ಭಾರತಿಯು) ಮಾತು ಅತ್ಯಂತನಿಲ್ಲಗೆಯೂ ಅಲ್ಲದೆ, ಅತ್ಯಂತ ವೇಗವುಳ್ಳದ್ದೂ ಆಗಿರದೆ, ಮಧ್ಯದಲ್ಲಿ ತಪ್ಪುಗಳು, ಎಡರುಗಳು, ಉಗ್ಗು ಇತ್ಯಾದಿ ದೋಷಗಳಿಲ್ಲದೆ ಆದರ್ಶವಾಗಿತ್ತು. ದೂರದಲ್ಲಿ ಕೇಳುತ್ತಿದ್ದ ಜನರಿಗೆ ಅವರ ಮಾತಿನಲ್ಲಿ ಸ್ವರವರ್ಣಮೊದಲಾದ ವಾಕ್ಯಾವಯವಗಳಿಲ್ಲ ವೆಂದೇ ತೋರುತ್ತಿತ್ತು. ಸೇನೆಯು ದೂರದಲ್ಲಿ ಒಂದು ದೊಡ್ಡ ಅಖಂಡ ಸಮುದಾಯ ಎಂದು ತೋರುವಂತೆ, ಉಪನ್ಯಾಸಭಾರತಿಯು ಅಖಂಡ-ಗಂಭೀರನಾದದ ಭಾರತಿಯಂತೆ ತೋರುತ್ತಿತ್ತು ಎಂದು ಭಾವ.

ನ ವಿದ್ಯತೇ ತ್ವರಾ ಯಸ್ಯಾಃ ಸಾ ಅತ್ವರಾ, ಅತ್ಯಂತಂ ಅತ್ವರಾ ಅತ್ಯತ್ವರಾ, ಅತ್ಯತ್ವರಾ ನ ಭವತೀತಿ ನಾತ್ಯತ್ವರಾ, ಅತ್ಯಂತಂ ರಯಃ ಯಸ್ಯಾಃ ಸಾ ಅತಿರಯಾ, ಅತಿರಯಾ ನ ಭವತೀತಿ ನಾತಿರಯಾ, ಸ್ಖಲಂತೀ ನ ಭವತೀತಿ ನಸ್ಖಲಂತೀ (ನಾತ್ಯತ್ವರಾ, ನಾತಿರಯಾ, ನಸ್ಖಲಂತೀ ಈ ಮೂರು ಶಬ್ದಗಳಲ್ಲಿಯೂ ನಞ್ ಅಲ್ಲ, ನಶಬ್ದ.) ನಿರ್ಗತಂ ಅಂತರಂ ಯಸ್ಯಾಃ ಸಾ ನಿರಂತರಾ, ನ ವಿದ್ಯಂತೇ ನಾನಾವಯಾಃ ಯಸ್ಯಾಃ ಸಾ, ಅತ್ಯಂತಂ ದೂರಾಃ ದವೀಯಾಂಸಃ ತೈಃ (ದವೀಯಸ್.)

ಆ ಉಪನ್ಯಾಸಭಾರತಿಯು ಮತ್ತೂ ಹೇಗಿತ್ತು —

ಸೂತ್ರಸ್ಯಂದನವೃಂದಾಢ್ಯಾ ದುರ್ವಾರಶ್ರುತಿವಾರಣಾ ।
ಸೋಪಪತ್ತಿಮಹಾಪತ್ತಿರ್ವಿಚಿತ್ರಸ್ಮೃತಿಸಪ್ತಿಕಾ ॥ ೫ ॥

ಸೂತ್ರಸ್ಯಂದನವೃಂದಾಢ್ಯಾ ದುರ್ವಾರಶ್ರುತಿವಾರಣಾ ಸೋಪಪತ್ತಿ ಮಹಾಪತ್ತಿಃ ವಿಚಿತ್ರಸ್ಮೃತಿಸಪ್ತಿಕಾ ಉಪನ್ಯಾಸಭಾರತೀ ಸೇನೇವ ನಿರ್ಯಯೌ.

ಸೂತ್ರಸ್ಯಂದನವೃಂಧಾಢ್ಯಾ = ಬ್ರಹ್ಮಸೂತ್ರಗಳೆಂಬ ರಥಗಳ ಸಮೂಹದಿಂದ ಕೂಡಿರುವ, ದುರ್ವಾರಶ್ರುತಿವಾರಣಾ = ಖಂಡಿಸಲಾಗದ, ತಡೆಯಲಾಗದ, ವೇದಗಳೆಂಬ ಆನೆಗಳುಳ್ಳ, ಸೋಪಪತ್ತಿಮಹಾಪತ್ತಿಃ = ಒಳ್ಳೆಯ ಯುಕ್ತಿಗಳೆಂಬ ದೊಡ್ಡ ಕಾಲಾಳುಗಳುಳ್ಳ, ವಿಚಿತ್ರಸ್ಮೃತಿಸಪ್ತಿಕಾ = ಆಶ್ಚರ್ಯಕರವಾದ ಸ್ಮೃತಿಗಳೆಂಬ ಕುದುರೆಗಳುಳ್ಳ, (ಉಪನ್ಯಾಸ ಭಾರತಿಯು ಸೇನೆಯಂತೆ ಹೊರಟಿತು.)

Rarest Archiver

ಬ್ರಹ್ಮಸೂತ್ರಗಳೆಂಬ ಅನೇಕರಥಗಳಿಂದ ಕೂಡಿದ, ಶ್ರುತಿಗಳೆಂಬ ತಡೆಯಲು ಸಾಧ್ಯವಿಲ್ಲದ ಆನೆಗಳಿಂದ ಸಹಿತವಾದ, ಶ್ರೇಷ್ಠವಾದ ಯುಕ್ತಿಗಳೆಂಬ ದೊಡ್ಡ ದೊಡ್ಡ ಕಾಲಾಳುಗಳಿಂದ ಸಹಿತವಾದ, ಸ್ವಪಕ್ಷಸಾಧನಸಮರ್ಥವಾದ ಸ್ಮೃತಿಗಳೆಂಬ ಕುದುರೆಗಳಿಂದ ಕೂಡಿದ ಉಪನ್ಯಾಸಭಾರತಿಯು ಆಚಾರ್ಯರ ಮುಖಕಮಲದಿಂದ, ಶಿಬಿರದಿಂದ ಸೇನೆಯು ಹೊರಡುವಂತೆ ಹೊರಹೊರಟಿತು. ರಥ, ಆನೆ, ಕಾಲಾಳು ಕುದುರೆಗಳಿಂದ ಕೂಡಿ ಸೇನೆಯು ಶಿಬಿರದಿಂದ ಯುದ್ಧಕ್ಕೆ ಹೊರಡುತ್ತದೆ. ಅದರಂತೆಯೇ ಆಚಾರ್ಯರ ಉಪನ್ಯಾಸಭಾರತಿಯು ರಥದಂತಹ ಬ್ರಹ್ಮಸೂತ್ರಗಳು ಆನೆಗಳಂತಹ ವೇದೋಪನಿಷತ್ತುಗಳು ಕಾಲ್ದಳದಂತಹ ಉತ್ತಮಯುಕ್ತಿಗಳು, ಕುದುರೆಗಳಂತಹ ಸ್ಮೃತಿಗಳಿಂದ ಕೂಡಿಕೊಂಡು ಶಿಸ್ತಿನಿಂದ ಸೇನೆಯು ಹೊರಡುವ ಮತ್ತೆ ಆಚಾರ್ಯರ ಮುಖದಿಂದ ಹೊರಟಿತು.

ಸೂತ್ರಾಣ್ಯೇವ ಸ್ಯಂದನಾಃ ಸೂತ್ರಸ್ಯಂದನಾನಾಂ ವೃಂದಾನಿ, ಸೂತ್ರಸ್ಯಂದನವೃಂದೈಃ ಆಢ್ಯಾ, ವಾರಯಿತುಮಶಕ್ಯಾಃ ದುರ್ವಾರಾಃ, ದುರ್ವಾರಾಶ್ಚ ತಾಃ ಶ್ರುತಯಶ್ಚ, ದುರ್ವಾರಶ್ರುತಯ ಏವ ವಾರಣಾಃ ಯಸ್ಯಾಃ ಸಾ, (ಸು) ಶೋಭನಾಶ್ಚ ತಾಃ ಉಪಪತ್ತಯಶ್ಚ, (ಸೂಪಪತ್ತಯಃ) ಮಹಾಂತಶ್ಚ ತೇ ಪತ್ತಯಶ್ಚ, ಸೂಪಪತ್ತಯ ಏವ ಮಹಾಪತ್ತಯಃ ಯಸ್ಯಾಂ ಸಾ, ವಿಚಿತ್ರಾಶ್ಚ ತಾಃ ಸ್ಮೃತಯಶ್ಚ, ವಿಚಿತ್ರಸ್ಮೃತಯಃ ಏವ ಸಪ್ತಯಃ ಯಸ್ಯಾಂ ಸಾ ;

ಲಕ್ಷ್ಮೀದೇವಿ, ಸಗರರಾಜನ ಸೇನೆ, ಸಗರಪುತ್ರರ ಕಾಂತಿ, ಸಾಗರಶ್ರೀ ಇವುಗಳಿಗೆ ಹೋಲಿಸಿ ಉಪನ್ಯಾಸಭಾರತಿಯನ್ನು ವರ್ಣಿಸುತ್ತಾರೆ—

ವರ್ಧಿತೋರ್ಮಿಹರಿಪ್ರೇಷ್ಠಾ ಸುಪಯೋಧರಸುಸ್ವನಾ ।
ಸವಿತಾನಪ್ರಕಾಶಾರ್ಥಾ ಸಾಗರೀ ಶ್ರೀರಿವಾಪರಾ ॥ ೬॥

ವರ್ಧಿತೋರ್ಮಿಹರಿಪ್ರೇಷ್ಠಾ ಸುಪಯೋಧರಸುಸ್ವನಾ ಸವಿತಾನಪ್ರಕಾಶಾರ್ಥಾ ಅಪರಾ ಸಾಗರೀಶ್ರೀಃ ಇವ.

ವರ್ಧಿತೋರ್ಮಿ = ಖಂಡಿಸಲ್ಪಟ್ಟಷಡೂರ್ಮಿಗಳುಳ್ಳ, ಹರಿಪ್ರೇಷ್ಠಾ = ಶ್ರೀಹರಿಗೆ ಅತ್ಯಂತಪ್ರಿಯವಾದ, ಸುಪಯೋಧರಸುಸ್ವನಾ = ಒಳ್ಳೆಯ

Rarest Archiver

ಮೋಡದ ಧ್ವನಿಯಂತೆ ಧ್ವನಿಯುಳ್ಳ, ಸವಿತಾನ=ವಿಸ್ತಾರದಿಂದ ಸಹಿತ ವಾಗಿ, ಪ್ರಕಾಶಾರ್ಥಾ = ಸ್ಪಷ್ಟಗೊಳಿಸಿದ ಅಭಿಪ್ರಾಯವುಳ್ಳ, ಉಪನ್ಯಾಸ ಭಾರತಿಯು, ಅಪರಾ ಸಾಗರೀಶ್ರೀಃ ಇವ=ಬೇರೊಬ್ಬಳಾದ, ಸಮುದ್ರಪುತ್ರಿ ಯಾದ ಲಕ್ಷ್ಮಿಯಂತೆ, ನಿರ್ಯಯೌ=ಹೊರಟಿತು. ಲಕ್ಷ್ಮಿಯೂ ಕೂಡ, ವರ್ಧಿತೋರ್ಮಿಹರಿಪ್ರೇಷ್ಠಾ = ಖಂಡಿಸಲ್ಪಟ್ಟ ಆರು ಊರ್ಮಿಗಳುಳ್ಳ ಹರಿಗೆ ಅತ್ಯಂತಪ್ರಿಯಳು, ಸುಪಯೋಧರ-ಸುಸ್ವನಾ = ಸುಂದರವಾದ ಸ್ತನಗಳುಳ್ಳವಳೂ ಮತ್ತು ಇಂಪಾದ ಕಂಠಸ್ವರಉಳ್ಳವಳು, ಸವಿತಾನ ಪ್ರಕಾಶಾರ್ಥಾ = ವಿಸ್ತಾರವಾದ ತೇಜೋರೂಪವಾದ ದ್ರವ್ಯಸ್ವರೂಪಳು, ಸಾಗರೀ=ಸಮುದ್ರರಾಜನ ಮಗಳೂ ಆದ, ಸಾಗರೀ ಶ್ರೀಃ=ಸಗರರಾಜನ ಸೇನೆಯ ಕಾಂತಿಯೂ, ವರ್ಧಿತೋರ್ಮಿಹರಿಪ್ರೇಷ್ಠಾ = ಕುದುರೆ ಸವಾರ ರಿಂದ ಹೆಚ್ಚಿಸಲ್ಪಟ್ಟ ಊರ್ಮಿ ಎಂಬ ಗಮನವಿಶೇಷವುಳ್ಳ, ಕುದುರೆಗಳಿಗೆ ಅತ್ಯಂತಪ್ರಿಯವಾದ, ಸುಪಯೋಧರಸುಸ್ವನಾ = ಒಳ್ಳೆಯ ಮೋಡದ ಧ್ವನಿಯಂತೆ ಧ್ವನಿಯುಳ್ಳ, ಸವಿತಾನಪ್ರಕಾಶಾರ್ಥಾ = ವಿಸ್ತಾರದಿಂದ ಸಹಿತವಾಗಿ ಪ್ರಕಾಶಗೊಳ್ಳುವುದರಿಂದ ಶತ್ರುಭಯವೆಂಬ ಪ್ರಯೋಜನ ವುಳ್ಳದ್ದು, ಸಾಗರೀ ಶ್ರೀಃ = ಸಗರನ ಅರವತ್ತು ಸಾವಿರ ಮಕ್ಕಳ ಕಾಂತಿಯು, ವರ್ಧಿತೋರ್ಮಿಹರಿಪ್ರೇಷ್ಠಾ = ಹೆಚ್ಚಿಸಲ್ಪಟ್ಟ ಊರ್ಮಿ ಯೆಂಬ ಗತಿವಿಶೇಷವುಳ್ಳ ಯಜ್ಞಾಶ್ವಕ್ಕೆ ಅತ್ಯಂತ ಪ್ರಿಯವಾದುದು, ಸುಪಯೋಧರಸುಸ್ವನಾ = ಒಳ್ಳೆಯ ಮೋಡದ ಧ್ವನಿಯಂತಹ ಧ್ವನಿ ಯುಳ್ಳದ್ದು, ಸವಿತಾನಪ್ರಕಾಶಾರ್ಥಾ = ಯಜ್ಞವನ್ನು ಪ್ರಕಾಶಗೊಳಿಸು ವುದು ಎಂಬ ಪ್ರಯೋಜನಸಹಿತವಾದುದು, ಸಾಗರೀ ಶ್ರೀಃ = ಸಮುದ್ರದ ಕಾಂತಿಯಾದರೋ, ವರ್ಧಿತೋರ್ಮಿಹರಿಪ್ರೇಷ್ಠಾ = ಹೆಚ್ಚಿಸಲ್ಪಟ್ಟ ಅಲೆ ಗಳುಳ್ಳ ಚಂದ್ರನಿಗೆ ಪ್ರಿಯವಾದುದು, ಸುಪಯೋಧರಸುಸ್ವನಾ = ಒಳ್ಳೆಯ ಮೇಘದ ಧ್ವನಿಯಂತೆ ಗಂಭೀರಧ್ವನಿಯುಳ್ಳದ್ದು, ಸವಿತಾನಪ್ರಕಾಶಾರ್ಥಾ =ವಿಸ್ತಾರವಾದ ಹೆಚ್ಚಾದ ತೇಜಸ್ಸುಳ್ಳ ರತ್ನವೆಂಬ ಪದಾರ್ಥವುಳ್ಳದ್ದು;

ಶ್ರೀಮಧ್ವಾಚಾರ್ಯರ ಮುಖಕಮಲದಿಂದ ಹೊರಟ ಉಪನ್ಯಾಸ ಭಾರತಿಯು, ವೃದ್ಧಿಕ್ಷಯರಹಿತನಾದ, ಷಡೂರ್ಮಿನಿವಾರಕನಾದ ಶ್ರೀಹರಿಗೆ ಅತ್ಯಂತ ಪ್ರಿಯವಾದುದು, ಗುಡುಗಿನಂತೆಗಂಭೀರವಾದುದು, ವಿಸ್ತಾರವಾಗಿ

Rarest Archiver

ಸ್ಪಷ್ಟವಾದ ಅಭಿಪ್ರಾಯವುಳ್ಳದ್ದು. ಈ ಭಾರತಿಯು ಲಕ್ಷ್ಮೀದೇವಿಯಂತೆ, ಸಗರರಾಜನ ಸೇನೆಯಂತೆ, ಸೇನೆಯ ಜತೆಗಿದ್ದ ಸಗರಪುತ್ರರ ಕಾಂತಿಯಂತೆ, ಸಮುದ್ರದ ಕಾಂತಿಯಂತೆ ಇದೆ. ಹೇಗೆಂದರೆ ಲಕ್ಷ್ಮೀದೇವಿಯು ಷಡೂರ್ಮಿಗಳನ್ನು ನಿವಾರಿಸುವ ಶ್ರೀಹರಿಗೆ ಅತ್ಯಂತಪ್ರಿಯಳು, ಸುಂದರವಾದ ಸ್ತನಗಳುಳ್ಳವಳು, ಇಂಪಾದ ಕಂಠಸ್ವರವುಳ್ಳವಳು, ವಿಸ್ತಾರವಾದ ತೇಜೋಮಯ ಅಪ್ರಾಕೃತದ್ರವ್ಯಸ್ವರೂಪಳು; ಶಿಬಿರದಿಂದ ಹೊರಟ ಸಗರರಾಜನ ಸೇನೆಯು ಕುದುರೆಸವಾರರಿಂದ ಹೆಚ್ಚುಮಾಡಲ್ಪಟ್ಟ ಊರ್ಮಿಯೆಂಬ ನಡಿಗೆಯುಳ್ಳ ಕುದುರೆಗಳಿಗೆ ಅತ್ಯಂತಪ್ರಿಯವಾದುದು, ಮೇಘಗರ್ಜನೆಯಂತೆ ಧ್ವನಿಯುಳ್ಳದ್ದು, ಗುಂಪುಗುಂಪಾಗಿ ಮುಂದಕ್ಕೆ ಸಾಗಿ ಶತ್ರುಗಳಿಗೆ ಭಯವನ್ನುಂಟುಮಾಡತಕ್ಕದ್ದು. ಸೇನೆಯ ಜೊತೆಗೆ ಹೋಗುತ್ತಿದ್ದ ೬೦ ಸಾವಿರ ಮಂದಿ ಸಗರಪುತ್ರರ ಕಾಂತಿಯು, ಹೆಚ್ಚಿಸಲ್ಪಟ್ಟ ಊರ್ಮಿಎಂಬ ಗತಿವಿಶೇಷವುಳ್ಳ ಯಜ್ಞಾಶ್ವಕ್ಕೆ ಅತ್ಯಂತಪ್ರಿಯವಾದುದು, ಮೋಡದ ಧ್ವನಿಯಂತಿರುವ ಧ್ವನಿಯಿಂದ ಕೂಡಿದುದು, ಯಜ್ಞವನ್ನು ಪ್ರಕಟಗೊಳಿಸುವುದೆಂಬ ಪ್ರಯೋಜನಉಳ್ಳದ್ದು; ಸಮುದ್ರವು ತನ್ನ ಅಲೆಗಳನ್ನು ಹೆಚ್ಚಿಸಿರುವ ಚಂದ್ರನಿಗೆ ಅತ್ಯಂತಪ್ರಿಯವಾದುದು, ಒಳ್ಳೆಯ ಗುಡುಗಿನಂತೆ ಗಂಭೀರವಾದ ಶಬ್ದವುಳ್ಳದ್ದು, ಪ್ರಕಾಶಿಸುವ ರತ್ನವೆಂಬ ಉತ್ಕೃಷ್ಟದ್ರವ್ಯಉಳ್ಳದ್ದು. ಹೀಗೆ ಉಪನ್ಯಾಸಭಾರತಿಯು ಸಾಗರಪುತ್ರಿಯಾದ ಲಕ್ಷ್ಮಿಯಂತೆ, ಸಗರರಾಜನ ಸೇನೆಯಂತೆ, ಸಗರಪುತ್ರರ ಕಾಂತಿಯಂತೆ, ಸಾಗರದ ಕಾಂತಿಯಂತೆ ಇತ್ತು. ಅಥವಾ ಸಾಗರಶ್ರೀಯಂತೆ ಇರುವ ಸಗರಪುತ್ರರ ಕಾಂತಿಯಂತೆ ಇರುವ, ಸಗರನ ಸೇನೆಯಂತಿರುವ, ಸಾಗರಕುಮಾರಿ ಲಕ್ಷ್ಮಿಯಂತೆ ಈ ಉಪನ್ಯಾಸಭಾರತಿಯು ಇತ್ತು. ಇಲ್ಲಿ ಮಾಲೋಪಮಾ ಅಥವಾ ಪರಂಪರೋಪಮಾ. ನಾಲ್ಕು ಉಪಮಾನಗಳು ಒಂದು ಉಪಮೇಯ —ಇಷ್ಟು ಅರ್ಥಗಳನ್ನು ಹೇಳುವ ಒಟ್ಟು ೫ ಅರ್ಥಗಳುಳ್ಳ ಅದ್ಭುತವಾದ ಶ್ಲೋಕವಿದು.

ವರ್ಧಿತಾಃ ಊರ್ಮಯಃ ಯೇನ ಸಃ ವರ್ಧಿತೋರ್ಮಿಃ, ವರ್ಧಿತೋರ್ಮಿಶ್ಚಾಸೌ ಹರಿಶ್ಚ; ಅತಿಶಯೇನ ಪ್ರಿಯಾ ಪ್ರೇಷ್ಠಾ, ವರ್ಧಿತೋರ್ಮಿಹರೇಃ ಪ್ರೇಷ್ಠಾ, ವರ್ಧನ=ಅಭಿವೃದ್ಧಿ, ಕತ್ತರಿಸುವುದು (ಸು) ಶೋಭನ-

Rarest Archiver

ಶ್ಚಾಸೌ ಪಯೋಧರಶ್ಚ, ಸುಪಯೋಧರವತ್ ಸುಸ್ವನಃ ಯಸ್ಯಾಃ ಸಾ, ಲಕ್ಷ್ಮೀಪಕ್ಷದಲ್ಲಿ, (ಸು) ಶೋಭನೌ ಪಯೋಧರೌ ಯಸ್ಯಾಃ ಸಾ, (ಸು) ಶೋಭನಃ ಸ್ವನಃ ಯಸ್ಯಾಃ ಸಾ, ಸುಪಯೋಧರಾ ಚ ಸಾ ಸುಸ್ವನಾ ಚ, ವಿತಾನೇನ ಸಹಿತಂ ಯಥಾ ಭವತಿ ತಥಾ, ಸವಿತಾನಂ ಪ್ರಕಾಶಃ ಅರ್ಥಃ ಯಸ್ಯಾಃ ಸಾ, (ಸೇನೆ) ವಿತಾನೇನ ಸಹವರ್ತತ ಇತಿ ಸವಿತಾನಃ, ಸವಿತಾನಃ ಪ್ರಕಾಶಃ ಅರ್ಥಃ ಯಸ್ಯಾಃ ಸಾ, ಸವಿತಾನಂ ಪ್ರಕಾಶೇನ ಅರ್ಥಃ ಯಸ್ಯಾಃ ಸಾ, (ಸಗರಪುತ್ರರ ಪಕ್ಷದಲ್ಲಿ) ವಿತಾನಸ್ಯ (ಯಜ್ಞಸ್ಯ) ಪ್ರಕಾಶಃ, ವಿತಾನ ಪ್ರಕಾಶಶ್ಚಾಸೌ ಅರ್ಥಶ್ಚ, ವಿತಾನಪ್ರಕಾಶಾರ್ಥೇನ ಸಹಿತಾ ಸವಿತಾನ-ಪ್ರಕಾಶಾರ್ಥಾ, (ಸಮುದ್ರಪಕ್ಷದಲ್ಲಿ) ವಿತಾನೇನ ಸಹಿತಃ ಸವಿತಾನಃ, ಸವಿತಾನಃ ಪ್ರಕಾಶಃ ಯೇಷಾಂ ತೇ ಸವಿತಾನಪ್ರಕಾಶಾಃ, ಸವಿತಾನ ಪ್ರಕಾಶಾಃ ಅರ್ಥಾಃ ಯಸ್ಯಾಃ ಸಾ ; ಹರಿ = ಕುದುರೆ, ಚಂದ್ರ, ವಿಷ್ಣು ;

ಪದ್ಮೇಶಪದಪದ್ಮಶ್ರಿತ್‌ಕೃತ್ಯಾಂಗಂ ಪದ್ಮಜನ್ಮನಃ |
ಲಾಲಿತಾ ಶಿರಸೇಶೇನ ಗಂಗೇವಾಶೇಷಪಾವನೀ ॥ ೭ ॥

ಪದ್ಮೇಶಪದಪದ್ಮಶ್ರಿತ್ ಪದ್ಮಜನ್ಮನಃ ಕೃತ್ಯಾಂಗಂ ಈಶೇನ ಶಿರಸಾ ಲಾಲಿತಾ ಗಂಗಾ ಇವ ಅಶೇಷಪಾವನೀ (ಉಪನ್ಯಾಸಭಾರತೀ). ಪದ್ಮೇಶ-ಪದಪದ್ಮ-ಶ್ರಿತ್ = ಲಕ್ಷ್ಮೀಪತಿಯಾದ ಶ್ರೀಹರಿಯ ಪಾದಕಮಲಗಳನ್ನು ಆಶ್ರಯಿಸಿರುವ, ಪದ್ಮಜನ್ಮನಃ = ಕಮಲಸಂಭವರಾದ ಚತುರ್ಮುಖ ಬ್ರಹ್ಮದೇವರ, ಕೃತ್ಯಾಂಗಂ = ಶ್ರೀಹರಿಯ ಪಾದಪ್ರಕ್ಷಾಲನವೆಂಬ ಕಾರ್ಯಕ್ಕೆ ಸಾಧನವಾದ, ಈಶೇನ ಶಿರಸಾ ಲಾಲಿತಾ = ಶಂಕರನಿಂದ ಶಿರಸ್ಸಿನಿಂದ (ಧರಿಸಿ) ಗೌರವಿಸಲ್ಪಟ್ಟ, (ಅಶೇಷಪಾವನಿಯಾದ) ಗಂಗೇವ = ಗಂಗೆಯಂತೆ, ಅಶೇಷಪಾವನೀ = ಸಮಸ್ತಪ್ರಪಂಚವನ್ನು ಪವಿತ್ರಗೊಳಿಸುವ (ಉಪನ್ಯಾಸ ಭಾರತಿಯು ಹೊರಟಿತು.)

ಗಂಗೆಯು ಶ್ರೀಹರಿಯ ಪಾದಕಮಲಗಳಿಂದ ಹುಟ್ಟಿ, ಪಾದಗಳನ್ನೇ ಆಶ್ರಯಿಸಿರುತ್ತಾಳೆ, ಚತುರ್ಮುಖಬ್ರಹ್ಮದೇವರಿಗೆ ಹರಿಪಾದಪ್ರಕ್ಷಾಲನ ಮಾಡಲು ಗಂಗೆಯು ಸಾಧನವಾಗಿದ್ದಾಳೆ. ಶಂಕರನು ಅವಳನ್ನು ತಲೆಯ ಮೇಲೆ ಹೊತ್ತು ಗೌರವಿಸಿರುವನು. ಗಂಗೆಯು ಜಗತ್ತಿನ ಎಲ್ಲಾ ಜನರನ್ನು

Rarest Archiver

ದರ್ಶನ ಸ್ಪರ್ಶನಾದಿಗಳಿಂದ ಪವಿತ್ರಗೊಳಿಸುತ್ತಾಳೆ. ಅದರಂತೆ ಆಚಾರ್ಯರ ಉಪನ್ಯಾಸಭಾರತಿಯೂ, ಶ್ರೀಹರಿಯ ಸರ್ವೋತ್ತಮತ್ವವನ್ನು ಪ್ರತಿಪಾದಿಸುವುದರಿಂದ ಶ್ರೀಹರಿಯ ಪಾದಕಮಲವನ್ನೇ ಆಶ್ರಯಿಸಿದೆ. ಯಾವಾಗಲೂ ಶ್ರೀಹರಿಯ ಸರ್ವೋತ್ತಮತ್ವ (ಪದ) ಸ್ವರೂಪವಿಷಯಕವಾಗಿಯೇ ಇರುತ್ತದೆ. ಬ್ರಹ್ಮಪದವಿಗೆ ಯೋಗ್ಯರಾದ ಜೀವರಿಗೆ ಬ್ರಹ್ಮನ ಪದವಿಯನ್ನು ಕೊಟ್ಟು ಅವರಿಂದ ಜಗತ್ತಿನ ಸೃಷ್ಟ್ಯಾದಿವ್ಯಾಪಾರಗಳನ್ನು ಮಾಡಿಸಲು ಸಾಧನವಾದುದು. (ಯಾವಾಗಲೂ ಶ್ರೀಹರಿಯ ಸರ್ವೋತ್ತಮತ್ವವನ್ನು ಪ್ರತಿಪಾದಿಸುವುದರಿಂದಲೇ ಬ್ರಹ್ಮಪದವಿಗೆ ಯೋಗ್ಯರಾದ ಜೀವರು ಆ ಸ್ಥಾನವನ್ನು ಪಡೆದು ತಮ್ಮ ವ್ಯಾಪಾರವನ್ನು ನಡೆಸುತ್ತಾರೆ.) ಶಂಕರನೂ ಗಂಗೆಯನ್ನು ಹೇಗೋ ಹಾಗೆ ಈ ಉಪನ್ಯಾಸಭಾರತಿಯನ್ನು ಭಕ್ತಿಯಿಂದ ಶಿರಸಾ ಮಾನ್ಯಮಾಡುತ್ತಾನೆ. ಸ್ನಾನದಿಂದ ಗಂಗೆಯಂತೆ ಶ್ರವಣದಿಂದ ಈ ಉಪನ್ಯಾಸಭಾರತಿಯೂ ಎಲ್ಲರನ್ನೂ ಪವಿತ್ರಗೊಳಿಸುತ್ತದೆ. ಇಂತಹ ಭಾರತಿಯು ಆಚಾರ್ಯರ ವದನಕಮಲದಿಂದ ಹೊರಹೊರಟಿತು.

ಪದ್ಮಾಯಾಃ ಈಶಃ, ಪದೇ ಪದ್ಮೇ ಇವ, ಪದ್ಮೇಶಸ್ಯ ಪದಪದ್ಮೇ, ಪದ್ಮೇಶಪದಪದ್ಮೇ ಶ್ರಯತೀತಿ ಪದ್ಮೇಶಪದಪದ್ಮಶ್ರಿತ್, ಕೃತ್ಯಸ್ಯ ಅಂಗಂ-ಕೃತ್ಯಾಂಗಂ, ಪದ್ಮಾತ್ ಜನ್ಮ ಯಸ್ಯ ಸಃ ಪದ್ಮಜನ್ಮಾ ತಸ್ಯ, ಅಶೇಷಾನ್ ಪಾವಯತೀತಿ ಅಶೇಷಪಾವನೀ.

ಆಚಾರ್ಯರು ಉಪನ್ಯಾಸಭಾರತಿಯಿಂದ ಏನನ್ನು ಸಾಧಿಸಿದರು ?—

ನಾರಾಯಣೋಽನಂತಗುಣೋ ಬ್ರಹ್ಮಾಖ್ಯೋ ವೇದವೇದಿತಃ ।
ವಿಶ್ವಕರ್ತೇತಿ ವಿಶ್ವಜ್ಞಃ ಶ್ರುತ್ಯಾ ಯುಕ್ತ್ಯಾಪ್ಯಸೀಷಧತ್ ॥ ೮ ॥

ವಿಶ್ವಜ್ಞಃ 'ನಾರಾಯಣಃ ಅನಂತಗುಣಃ ಬ್ರಹ್ಮಾಖ್ಯಃ ವೇದವೇದಿತಃ ವಿಶ್ವಕರ್ತಾ' ಇತಿ ಶ್ರುತ್ಯಾ ಯುಕ್ತ್ಯಾ ಅಪಿ ಅಸೀಷಧತ್

ವಿಶ್ವಜ್ಞಃ = ಸಮಸ್ತಶಾಸ್ತ್ರಾರ್ಥಗಳನ್ನು ತಿಳಿದಿರುವ ಶ್ರೀಪೂರ್ಣಪ್ರಜ್ಞಾಚಾರ್ಯರು, ನಾರಾಯಣಃ = ಶ್ರೀಹರಿಯು, ಅನಂತಗುಣಃ = ದೇಶ, ಕಾಲ, ಗುಣ, ಸಂಖ್ಯೆಗಳ ಪರಿಮಿತಿಇಲ್ಲದ, ಜ್ಞಾನ, ಶಕ್ತಿ, ಬಲ,

Rarest Archiver

ಐಶ್ವರ್ಯ, ತೇಜಸ್ಸು ಮೊದಲಾದ ಶುಭಧರ್ಮಗಳುಳ್ಳವನು, ಬ್ರಹ್ಮಾಖ್ಯಃ = ಎಲ್ಲಾ ಪ್ರಕಾರಗಳಿಂದಲೂ ಪರಿಪೂರ್ಣನಾದುದರಿಂದ ಬ್ರಹ್ಮನೆಂಬ ಹೆಸರುಳ್ಳವನು, ವೇದವೇದಿತಃ = ವೇದಗಳಿಂದಲೇ ತಿಳಿಯಲ್ಪಡುವವನು, ವಿಶ್ವಕರ್ತಾ = ಜಗತ್ತಿನ ಸೃಷ್ಟ್ಯಾದಿಸಮಸ್ತವ್ಯಾಪಾರಗಳನ್ನೂ ಮಾಡ ತಕ್ಕವನು, ಇತಿ = ಹೀಗೆಂದು, ಶ್ರುತ್ಯಾ = ವೇದಗಳಿಂದ, ಯುಕ್ತ್ಯಾ ಅಪಿ = ಯುಕ್ತಿಯಿಂದಲೂ, ಅಸೀಷಧತ್ = ಸಾಧಿಸಿದರು.

ಶ್ರೀಮನ್ನಾರಾಯಣನು ಜ್ಞಾನ, ಶಕ್ತಿ, ಬಲ, ಐಶ್ವರ್ಯ, ತೇಜಸ್ಸು, ಓಜಸ್ಸು ಮುಂತಾದ ಶುಭಧರ್ಮಗಳಿಂದ ಪರಿಪೂರ್ಣನಾಗಿರುವನು. ಅವನ ಜ್ಞಾನಾದಿಗುಣಗಳು ಇಷ್ಟೇ ಪ್ರದೇಶಗಳಲ್ಲಿ, ಇಷ್ಟೇ ಕಾಲಗಳಲ್ಲಿ, ಇವೆಯೆಂದೂ, ಈ ಗುಣಗಳಲ್ಲಿ ಇಷ್ಟೇ ಗುಣಗಳಿವೆಯೆಂದೂ, ಈ ಗುಣಗಳು ಇನ್ನೊಬ್ಬರ ಗುಣಕ್ಕಿಂತ ಇಷ್ಟು ಪಟ್ಟು ಹೆಚ್ಚಾಗಿವೆಯೆಂದೂ, ಈ ಗುಣಗಳ ಸಂಖ್ಯೆಯೂ ಇಷ್ಟೇ ಎಂದೂ ನಿರ್ಣಯಿಸಲು ಸಾಧ್ಯವಿಲ್ಲ. ಸಕಲವಿಧ ಗಳಿಂದಲೂ ಪರಿಪೂರ್ಣನಾದುದರಿಂದ ಅವನಿಗೇ ಬ್ರಹ್ಮ ಎಂದು ಹೆಸರು. ಅವನು ವೇದೈಕವೇದ್ಯನು, ಪ್ರಪಂಚದ ಸೃಷ್ಟಿಮೊದಲಾದುವುಗಳನ್ನು ಅವನೊಬ್ಬನೇ ಮಾಡುವನು. ಈ ರೀತಿ ಶ್ರೀಪೂರ್ಣಪ್ರಜ್ಞಾಚಾರ್ಯರು ವೇದ ಮತ್ತು ಅನುಮಾನಪ್ರಮಾಣಗಳಿಂದ ಸಾಧಿಸಿದರು.

ವಿ. ವಿಷಯ :— 'ವಿಷ್ಣೋರ್ನು ಕಂ ವೀರ್ಯಾಣಿ ಪ್ರವೋಚಂ ಯಃ ಪಾರ್ಥಿವಾನಿ ವಿಮಮೇ ರಜಾಂಸಿ, ಸತ್ಯಂ ಜ್ಞಾನಂ ಅನಂತಂ ಬ್ರಹ್ಮ;' ಇದರಿಂದ ವಿಷ್ಣುವು ಅನಂತಗುಣಪರಿಪೂರ್ಣನೆಂದೂ, 'ಸರ್ವೇಷು ಭೂತೇಷು ಏತಮೇವ ಬ್ರಹ್ಮೇತ್ಯಾಚಕ್ಷತೇ, ಏಷ ಪಂಥಾ ಏತತ್ಕರ್ಮ ಏತದ್ ಬ್ರಹ್ಮ, ಏಷ ಉ ಏವ ಬ್ರಹ್ಮ ಏಷ ಉ ಏವ ಆತ್ಮಾ' ಇತ್ಯಾದಿವಾಕ್ಯ ಗಳಿಂದ ವಿಷ್ಣುವು ಒಬ್ಬನೇ ಬ್ರಹ್ಮಶಬ್ದದಿಂದ ಪರಮಮುಖ್ಯವಾಚ್ಯನೆಂದೂ, 'ತಾ ವಾ ಏತಾ ಋಚಃ ಸರ್ವೇ ವೇದಾಃ ಸರ್ವೇ ಘೋಷಾಃ ಏಕೈವ ವ್ಯಾಹೃತಿಃ, ಸ ಏವ ಸರ್ವವೇದೇಡ್ಯಃ, ಸರ್ವೇ ವೇದಾ ಯತ್ಪದಮಾಮ್ನ- ನಂತಿ' ಇತ್ಯಾದಿಗಳಿಂದ ನಾರಾಯಣನು ಸರ್ವವೇದವೇದ್ಯನೆಂದೂ, ಯೋ ನಃ ಪಿತಾ ಜನಿತಾ ಯೋ ವಿಧಾತಾ ಧಾಮಾನಿ ವೇದ ಭುವನಾನಿ ವಿಶ್ವಾ,

Rarest Archives

ನ ತಂ ವಿದಾಥ ಯ ಇಮಾ ಜಜಾನ, ಆತ್ಮಾ ವಾ ಇದಮೇಕ ಅಗ್ರ ಆಸೀತ್ ನಾನ್ಯತ್ ಕಿಂಚಿನ ಮಿಷತ್ ಸ ಐಕ್ಷತ ಲೋಕಾನ್ನು ಸೃಜಾ ಇತಿ ಸ ಇಮಾನ್ ಲೋಕಾನಸೃಜತ್, ವಿಶ್ವಸ್ಯ ಕರ್ತಾ ಭುವನಸ್ಯಗೋಪ್ತಾ-ಇತ್ಯಾದಿಗಳಿಂದ ಅವನೇ ಸೃಷ್ಟ್ಯಾದ್ಯಷ್ಟಕರ್ತನೆಂದೂ, ತಿಳಿದು ಬರುತ್ತದೆ.

ನ ವಿದ್ಯತೇ ಅಂತಃ ಯೇಷಾಂ ತೇ ಅನಂತಾಃ, ಅನಂತಾಃ ಗುಣಾಃ ಯಸ್ಯ ಸಃ, ಬ್ರಹ್ಮ ಇತಿ ಆಖ್ಯಾ ಯಸ್ಯ ಸಃ, ವೇದೈಃ ವೇದಿತಃ, ವಿಶ್ವಸ್ಯ ಕರ್ತಾ, ವಿಶ್ವಂ ಜಾನಾತಿ ಇತಿ ವಿಶ್ವಜ್ಞಃ;

ಅಸೀಷಧತ್ ಅಸೀಷಧತಾಂ ಅಸೀಷಧನ್ ಇತ್ಯಾದಿ, ಸಾಧ ಸಂಸಿದ್ಧೌ (ಶ್ನು ವಿಕರಣ,) ಣಿಜಂತಾತ್ ಲುಙ್.

ಪ್ರಧಾನಮಪರಾಧೀನಂ (9) ಎಂಬ ಶ್ಲೋಕದಿಂದ ವಿಷ್ಣುರ್ಮೋಕ್ಷಾದಿದಾತೇತಿ (63) ಎಂಬಲ್ಲಿಯವರೆಗೆ ನಾರಾಯಣನ ಅನಂತಗುಣಪೂರ್ಣತ್ವವನ್ನು ವಿವರಿಸುತ್ತಾರೆ.

ಮೊದಲು ನಿರೀಶ್ವರಸಾಂಖ್ಯಮತವನ್ನು ನಿರಾಕರಿಸುತ್ತಾರೆ —

ಪ್ರಧಾನಮಪರಾಧೀನಂ ಕಾರಣಂ ಪರಿಣಾಮಿ ಯತ್ ।
ಪಯೋವದಿತಿ ಚೇತ್ ಸಾಧ್ಯವೈಕಲ್ಯಂ ಸ್ಯಾನ್ನಿದರ್ಶನೇ ॥ ೯ ॥

ಪ್ರಧಾನಂ ಯತ್ ಪರಿಣಾಮಿ (ತತ್) ಪಯೋವತ್ ಅಪರಾಧೀನಂ ಕಾರಣಂ ಚೇತ್ ನಿದರ್ಶನೇ ಸಾಧ್ಯವೈಕಲ್ಯಂ ಸ್ಯಾತ್.

ಪ್ರಧಾನಂ = ಪ್ರಧಾನವೆಂಬ ಹೆಸರುಳ್ಳ ಜಡಪ್ರಕೃತಿಯು, ಯತ್ = ಯಾವ ಕಾರಣದಿಂದ, ಪರಿಣಾಮಿ = ವಿಕಾರವುಳ್ಳದ್ದೋ, ತತ್ = ಆದುದರಿಂದ, (ತತ್ = ಅದು) ಪಯೋವತ್ = ಹಾಲಿನಂತೆ, ಅಪರಾಧೀನಂ = ಸ್ವತಂತ್ರವಾದ, ಕಾರಣಂ = ಕಾರಣವು, ಚೇತ್ = ಹೀಗೆ ಹೇಳಿದರೆ, ನಿದರ್ಶನೇ = ದೃಷ್ಟಾಂತವಾದ ಹಾಲಿನಲ್ಲಿ, ಸಾಧ್ಯವೈಕಲ್ಯಂ ಸ್ಯಾತ್ = ಸಾಧಿಸಲ್ಪಡುವ ವಿಷಯದ ಹೀನತೆಯು ಆದೀತು.

ಈ ಪದ್ಯದಲ್ಲಿ ನಿರೀಶ್ವರಸಾಂಖ್ಯಮತವನ್ನು ಖಂಡಿಸುತ್ತಾರೆ. ಸಾಂಖ್ಯರು ಎರಡು ವಿಧ– ನಿರೀಶ್ವರ ಮತ್ತು ಸೇಶ್ವರ ಎಂದು. ಈಶ್ವರನನ್ನು ಒಪ್ಪಿಕೊಳ್ಳದಿರುವವರು ನಿರೀಶ್ವರಸಾಂಖ್ಯರು, ಈಶ್ವರನನ್ನು ಒಪ್ಪಿಕೊಳ್ಳು

Rarest Archiver

ಪವರು ಸೇಶ್ವರಸಾಂಖ್ಯರು. ನಿರೀಶ್ವರಸಾಂಖ್ಯರು ಪ್ರಧಾನವೆಂಬ ಹೆಸರುಳ್ಳ ಜಡಪ್ರಕೃತಿಯೇ ಸ್ವತಂತ್ರವಾಗಿ ವಿಕಾರವನ್ನು ಹೊಂದಿ ಜಗತ್ತಿನ ರೂಪ ವನ್ನು ಪಡೆಯುತ್ತದೆ ಎಂದು ಹೇಳುತ್ತಾರೆ. ಆ ವಿಷಯವನ್ನು ಸಾಧಿಸಲು ಈ ರೀತಿ ಅನುಮಾನವನ್ನು ಪ್ರಯೋಗಿಸುತ್ತಾರೆ. 'ಪ್ರಧಾನಂ ಸ್ವತಂತ್ರ-ಕಾರಣಂ ಭವಿತುಮರ್ಹತಿ ಪರಿಣಾಮಿತ್ವಾತ್ ಕ್ಷೀರವತ್' ಎಂದು ಅನುಮಾನ ಪ್ರಯೋಗವು. ಈ ಅನುಮಾನದಲ್ಲಿ ದೃಷ್ಟಾಂತವಾಗಿ ಕೊಟ್ಟಿರುವ ಹಾಲಿ ನಲ್ಲಿ ಮೊಸರಿನ ರೂಪದ ವಿಕಾರವಿದ್ದರೂ ಸ್ವತಂತ್ರಕಾರಣತ್ವವೆಂಬ ಸಾಧ್ಯವು ಇಲ್ಲ. ಹಾಲು ಮೊಸರಾಗಬೇಕಾದರೆ ಹೆಪ್ಪುಹಾಕುವವನೊಬ್ಬನು ಬೇಕೇ ಬೇಕಷ್ಟೆ. ಆದ್ದರಿಂದ ದೃಷ್ಟಾಂತದಲ್ಲಿ ಸಾಧ್ಯವೈಕಲ್ಯವೆಂಬ ದೋಷವು ಬಂದಿದ್ದರಿಂದ ಈ ಅನುಮಾನವು ದುಷ್ಟವಾಯಿತು. ಅಂದರೆ ಈ ದೃಷ್ಟಾಂತ ದಿಂದ ಪ್ರಧಾನವು ಪ್ರಪಂಚರೂಪದಿಂದ ಪರಿಣಮಿಸುವುದೆಂದು ಸಿದ್ಧಿಸಿದರೂ ಅದು ಸ್ವತಂತ್ರಕಾರಣವೆಂದು ಸಿದ್ಧವಾಗುವುದಿಲ್ಲ. 'ಏತೇನ ಹ ವಾವ ಪಯೋ ಮಂಡಂ ಭವತಿ', 'ನ ಋತೇ ತತ್ಕ್ರಿಯತೇ ಕಿಂಚನಾರೇ', 'ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ' ಇತ್ಯಾದಿ ಪ್ರಮಾಣ ಗಳಿಂದ ಮೊಸರಿನಲ್ಲಿ ದಧಿರೂಪವಾದ ಪರಿಣಾಮವು ಪರಮಾತ್ಮನ ಸಂಕಲ್ಪ ದಿಂದಲೇ ಆಗುತ್ತದೆ. ಆದರಂತೆಯೇ ಪ್ರಕೃತಿಯು ಜಗತ್ತಾಗಿ ಪರಿಣಮಿಸು ವುದಕ್ಕೆ ಪ್ರೇರಕನಾದ ಸ್ವತಂತ್ರಕಾರಣನಾದ ಪರಮಾತ್ಮನನ್ನು ಒಪ್ಪಲೇ ಬೇಕು.

ವಿಶೇಷಾಂಶ :—ನ್ಯಾಯಶಾಸ್ತ್ರದವರು ಒಂದು ವಿಷಯವನ್ನು ಸಾಧಿಸಲು ವಿಶೇಷವಾಗಿ ಅನುಮಾನವನ್ನೇ ಉಪಯೋಗಿಸುತ್ತಾರೆ. ಸ್ವಾರ್ಥಾನುಮಾನ ಮತ್ತು ಪರಾರ್ಥಾನುಮಾನ ಎಂದು ಆ ಅನುಮಾನವು ಎರಡು ವಿಧ. ತನ್ನ ಅನುಮಿತಿಗೆ ಹೇತುವಾದ ಅನುಮಾನವು ಸ್ವಾರ್ಥಾನು ಮಾನವು, ಇನ್ನೊಬ್ಬರ ಅನುಮಿತಿಗೆ ಹೇತುವಾದ ಅನುಮಾನವು ಪರಾರ್ಥಾನುಮಾನವು, ಅನುಮಿತಿ ಎಂದರೆ ಪ್ರಾಮಾಣಿಕವಾದ ಊಹೆ. ಅನುಮಾನವೆಂದರೆ ಅಂತಹ ಊಹೆಗೆ ಸಾಧನವಾದ ವಿಷಯ. ಈ ಅನು ಮಾನಗಳಲ್ಲಿ ಪರಾರ್ಥಾನುಮಾನಕ್ಕೆ ಪ್ರತಿಜ್ಞಾ, ಹೇತು, ಉದಾಹರಣ, ಉಪನಯ, ನಿಗಮನವೆಂದು ಐದು ಅಂಗಗಳಿವೆ. ಪರ್ವತೋ ವಹ್ನಿಮಾನ್

Rarest Archiver

ಬೆಟ್ಟವು ಬೆಂಕಿಯುಳ್ಳದ್ದು ಎಂಬುದು ಪ್ರತಿಜ್ಞೆ, ಧೂಮಾತ್ ಹೊಗೆಯಿರುವುದರಿಂದ ಎಂಬುದು ಹೇತು. ಯೋ ಯೋ ಧೂಮವಾನ್ ಸಃ ವಹ್ನಿಮಾನ್ ಯಥಾ ಮಹಾನಸಂ ಎಲ್ಲೆಲ್ಲಿ ಹೊಗೆಯಿದೆಯೋ ಅಲ್ಲಲ್ಲಿ ಬೆಂಕಿಯಿದೆ, ಅಡಿಗೆಮನೆಯಂತೆ ಎಂಬುದು ಉದಾಹರಣ. ತಥಾ ಚಾಯಂ ಅಯಂ ಪರ್ವತಶ್ಚ ಈ ಪರ್ವತವು ತಥಾ ಹಾಗೆಯೇ ಬೆಂಕಿಯುಳ್ಳದ್ದು ಎಂಬುದು ಉಪನಯ. ತಸ್ಮಾತ್ ತಥಾ, ಆದ್ದರಿಂದ ಅಂದರೆ ವಹ್ನಿವ್ಯಾಪ್ತವಾದ ಧೂಮವಿರುವುದರಿಂದ ಈ ಪರ್ವತವೂ ಹಾಗೆಯೇ ಅಂದರೆ ವಹ್ನಿವುಳ್ಳದ್ದು ಎಂಬುದು ನಿಗಮನ. ಸಾಂಖ್ಯರು ಇಲ್ಲಿ ಅನುಮಾನವನ್ನು ಹೀಗೆ ಪ್ರಯೋಗಿಸುವರು. ಪ್ರಧಾನಂ ಸ್ವತಂತ್ರಕಾರಣಂ ಎಂಬುದು ಪ್ರತಿಜ್ಞೆ. ಪರಿಣಾಮಿತ್ವಾತ್ ಎಂಬುದು ಹೇತು. ಯತ್ ಪರಿಣಾಮಿ ತತ್ ಸ್ವತಂತ್ರಕಾರಣಂ ಯಥಾ ಕ್ಷೀರಂ ಎಂಬುದು ಉದಾಹರಣೆ. ಪರಿಣಾಮಿ ಚ ಇದಂ ಎಂಬುದು ಉಪನಯ, ಪರಿಣಾಮಿತ್ವಾತ್ ಸ್ವತಂತ್ರಕಾರಣಂ ಎಂಬುದು ನಿಗಮನ. ಈ ಅನುಮಾನಕ್ಕೆ ಶ್ರುತಿಪ್ರಮಾಣವಿರೋಧವನ್ನು ನಾವು ಹೇಳುತ್ತೇವೆ. ಆದುದರಿಂದ ಈ ದುಷ್ಟಾನುಮಾನವು ಪ್ರಧಾನಕ್ಕೆ ಸ್ವತಂತ್ರಕಾರಣತ್ವವನ್ನು ಸಾಧಿಸಲಾರದು.

ಪರಸ್ಮಿನ್ ಅಧಿ ಪರಾಧೀನಂ 'ಸಪ್ತಮೀ ಶೌಂಡೈಃ' 2–1–40 ಎಂಬ ಸೂತ್ರದಿಂದ ಸಮಾಸ. 'ಅಷಡಕ್ಷ.... ಅಧ್ಯುತ್ತರಪದಾತ್ ಖಃ 5–4–7 ಈ ಸೂತ್ರದಿಂದ ಖಪ್ರತ್ಯಯ, ಈನಾದೇಶ. 'ಪರತಂತ್ರಃ ಪರಾಧೀನಃ'—ಎಂದು ಅಮರ. ಪರಿಣಾಮಃ ಅಸ್ಯ ಅಸ್ತೀತಿ ಪರಿಣಾಮಿ, ಪಯಸಾ ತುಲ್ಯಂ ಪಯೋವತ್, ವಿಕಲಸ್ಯ ಭಾವಃ ವೈಕಲ್ಯಂ, ಸಾಧ್ಯಸ್ಯ ವೈಕಲ್ಯಂ ಸಾಧ್ಯ-ವೈಕಲ್ಯಂ.

ಹೀಗೆ ಸಾಂಖ್ಯರ ಅನುಮಾನವನ್ನು ಖಂಡಿಸಿ ತನ್ನ ಪಕ್ಷವನ್ನು ಸಾಧಿಸುವ ಅನುಮಾನವನ್ನು ಹೇಳುತ್ತಾರೆ —

ವಿವಾದಾಧ್ಯಾಸಿತಾ ಸೃಷ್ಟಿಶ್ಚೇತನೇಚ್ಛಾನುಸಾರಿಣೀ ।
ಸೃಷ್ಟಿತ್ವಾತ್ ಪಟಸೃಷ್ಟಿರ್ವೇತ್ಯನುಮಾ ಪಕ್ಷಸಾಧಿಕಾ ॥೧೦॥

Rarest Archives

ವಿವಾದಾಧ್ಯಾಸಿತಾ ಸೃಷ್ಟಿಃ ಚೇತನೇಚ್ಛಾನುಸಾರಿಣೀ ಸೃಷ್ಟಿತ್ವಾತ್ ಪಟಸೃಷ್ಟಿರ್ವಾ ಇತಿ ಅನುಮಾ ಪಕ್ಷಸಾಧಿಕಾ.

ವಿವಾದಾಧ್ಯಾಸಿತಾ = ಚೇತನಾಧೀನವೋ ಜಡಾಧೀನವೋ ಎಂದು ವಿವಾದವಿಷಯವಾದ, ಸೃಷ್ಟಿಃ = ಈ ಪ್ರಪಂಚದ ಸೃಷ್ಟಿಯು, ಚೇತನೇ-ಚ್ಛಾನುಸಾರಿಣೀ = ಚೇತನನ ಇಚ್ಛೆಯನ್ನು ಅನುಸರಿಸಿ ಇರತಕ್ಕದ್ದು, ಸೃಷ್ಟಿತ್ವಾತ್ = ಸೃಷ್ಟಿಯು ಆದುದರಿಂದ, ಪಟಸೃಷ್ಟಿಃ ವಾ = ಬಟ್ಟೆಯ ಉತ್ಪತ್ತಿಯಂತೆ, ಇತಿ ಅನುಮಾ = ಎಂಬ ಅನುಮಾನವು, ಪಕ್ಷಸಾಧಿಕಾ = ನಮ್ಮ ಸಿದ್ಧಾಂತವನ್ನು ಸಾಧಿಸತಕ್ಕದ್ದಾಗಿದೆ.

ಚೇತನಾಧೀನವೋ ಜಡಾಧೀನವೋ ಎಂಬ ಸಂಶಯಕ್ಕೆ ಒಳಗಾದ ಈ ಪ್ರಪಂಚದ ಉತ್ಪತ್ತಿಯು ಒಬ್ಬ ಚೇತನನ ಅಂದರೆ ಜ್ಞಾನವುಳ್ಳವನ ಇಚ್ಛೆಯನ್ನು ಅನುಸರಿಸಿ ಹುಟ್ಟುತ್ತದೆ. ನೇಕಾರನ ಇಚ್ಛೆಗನುಸಾರವಾಗಿ ಉತ್ಪತ್ತಿಯಾಗುವ ಬಟ್ಟೆಯಂತೆ ಎಂಬ ಯುಕ್ತಿಯು ನಮ್ಮ ಸಿದ್ಧಾಂತಕ್ಕೆ ಸಾಧಕವಾಗಿದೆ. ಒಂದು ವಸ್ತ್ರವು ಆಗಬೇಕಾದರೆ ಒಬ್ಬ ನೇಕಾರನು ಬಟ್ಟೆಯ ವಿಷಯದ ಜ್ಞಾನವನ್ನೆಲ್ಲಾ ಸಂಪಾದಿಸಿ ತಾನು ವಸ್ತ್ರಮಾಡಬೇಕೆಂದು ಇಚ್ಛಿಸಿ, ತನ್ನ ಇಚ್ಛೆಯಂತೆ ಪ್ರಯತ್ನಿಸಿ ವಸ್ತ್ರನಿರ್ಮಾಣಮಾಡುತ್ತಾನೆ. ಪುರುಷಪ್ರಯತ್ನವಿಲ್ಲದೆ ವಸ್ತ್ರವು ಹುಟ್ಟಲಾರದು. ಜಡ-ಪ್ರಕೃತಿಯು ಪ್ರಪಂಚದ ರೂಪದಿಂದ ಪರಿಣಮಿಸುವುದೇ ಸೃಷ್ಟಿಯು. ಇದು ಒಬ್ಬ ಜ್ಞಾನವುಳ್ಳ ಪುರುಷನ ಇಚ್ಛಾಪ್ರಯತ್ನಗಳನ್ನು ಅನುಸರಿಸಿ ನಡೆಯುತ್ತದೆಯೆಂದು ಹೇಳಬೇಕಲ್ಲದೆ ತಾನಾಗಿ ಆಗಲಾರದು. ಆ ಪುರುಷನೇ ಭಗವಂತ.

ವಿವಾದಂ ಅಧ್ಯಾಸಿತಾ, ಚೇತನಸ್ಯ ಇಚ್ಛಾ, ಚೇತನೇಚ್ಛಾಂ ಅನು-ಸರತೀತಿ, ಪಟಸ್ಯ ಸೃಷ್ಟಿಃ, ಪಕ್ಷಸ್ಯ ಸಾಧಿಕಾ.

ನಿರೀಶ್ವರಸಾಂಖ್ಯಮತದಂತೆ ಸೇಶ್ವರಸಾಂಖ್ಯಮತವೂ ಹೇಯವು—

ಯಚ್ಚೇತನಾಚೇತನಯೋರಂಗಾಂಗಿತ್ವಾದಿ ಮನ್ಯತೇ ।
ಸೃಷ್ಟಾವೀಶಾನಪೇಕ್ಷಾಯಾಂ ತನ್ನ ಶೋಭನತಾಂ ವ್ರಜೇತ್ ॥೧೧॥

Rarest Archiver

ಸೃಷ್ಟೌ ಚೇತನಾಚೇತನಯೋಃ ಯತ್ ಅಂಗಾಂಗಿತ್ವಾದಿ ಮನ್ವತೇ
ತತ್ ಈಶಾನಪೇಕ್ಷಾಯಾಂ ಶೋಭನತಾಂ ನ ವ್ರಜೇತ್.

ಸೃಷ್ಟೌ=ಪ್ರಪಂಚದ ಉತ್ಪತ್ತಿಯ ವಿಷಯದಲ್ಲಿ, ಚೇತನಾಚೇತನಯೋಃ=ಜೀವವೆಂಬಜ್ಞಾನವುಳ್ಳದ್ದೂ, ಅಚೇತನವಾದ ಜಡಪ್ರಕೃತಿಯೂ, ಇವೆರಡಕ್ಕೂ, ಯತ್ ಅಂಗಾಂಗಿತ್ವಾದಿ=ಯಾವ ಅಮುಖ್ಯತ್ವ ಮತ್ತು ಪ್ರಧಾನತ್ವ ಇವುಗಳೇ ಮೊದಲಾದುದನ್ನು, ಮನ್ವತೇ=ತಿಳಿಯುತ್ತಾರೋ, ತತ್=ಅದು, ಈಶಾನಪೇಕ್ಷಾಯಾಂ=ಈಶ್ವರನ ಅಪೇಕ್ಷೆ ಇಲ್ಲದಿದ್ದರೆ, ಶೋಭನತಾಂ ನ ವ್ರಜೇತ್=ಚೆನ್ನಾಗಿರಲಾರದು.

ಸೃಷ್ಟಿಮೊದಲಾದಕಾರ್ಯದಲ್ಲಿ ಚೇತನವು ಅಮುಖ್ಯವೆಂದೂ ಅಚೇತನವಾದ ಜಡಪ್ರಕೃತಿಯು ಮುಖ್ಯವೆಂದೂ ಸಾಂಖ್ಯರು ತಿಳಿಯುತ್ತಾರೆ. ಇವರು ಕ್ಲೇಶ, ಕರ್ಮವಿಪಾಕಸಂಸ್ಕಾರಗಳಿಂದ ರಹಿತವಾದ ಒಬ್ಬ ಉದಾಸೀನಪುರುಷನನ್ನು ಈಶ್ವರ ಎಂದು ಒಪ್ಪುತ್ತಾರೆ. ಆದರೆ ಸೃಷ್ಟಿಯ ಕಾರ್ಯದಲ್ಲಿ ಈಶ್ವರನ ಪಾತ್ರವೇನೂ ಇಲ್ಲವೆನ್ನುತ್ತಾರೆ. ಸೃಷ್ಟಿಯ ವಿಷಯದಲ್ಲಿ ಈಶ್ವರನ ಅಪೇಕ್ಷೆಇಲ್ಲವೆಂದು ಹೇಳಿದರೆ ಆ ಪಕ್ಷವು ವಿವೇಕಿಗಳಿಗೆ ಸಮ್ಮತವಾಗಲಾರದು. ಅಮುಖ್ಯವಾದ ಚೇತನವೂ ಮುಖ್ಯವಾದ ಅಚೇತನವೂ ಪರಸ್ಪರ ಸೇರಿಕೊಂಡು ಸೃಷ್ಟಿ ಮೊದಲಾದ್ದನ್ನು ಮಾಡುತ್ತದೆಯೆಂದು ಒಪ್ಪಿಕೊಂಡರೆ ಈ ಚೇತನಾಚೇತನಗಳ ಸೇರುವಿಕೆಯೆಂಬ ಮೊದಲನೇ ಕಾರ್ಯವನ್ನು, ಚೇತನಾಚೇತನಗಳಲ್ಲಿ ಮುಖ್ಯವಾಗಿ ಯಾವುದು ಯಾವುದನ್ನು ಸೇರಿಕೊಂಡು ಮಾಡುತ್ತದೆ ಎಂಬ ಪ್ರಶ್ನೆಗೆ ಉತ್ತರ ಸಿಗಲಾರದು. ಸೃಷ್ಟಿಯ ಆದಿಯಲ್ಲಿ ಚೇತನಾಚೇತನಗಳ ಅನ್ಯೋನ್ಯ ಸಂಸರ್ಗವನ್ನು ಚೇತನಾನಪೇಕ್ಷವಾದ ಕೇವಲಜಡವು ಮಾಡಲಾರದು. ಕೇವಲ ಅಚೇತನವು ಕಾರ್ಯವನ್ನು ಮಾಡುವುದಿಲ್ಲವೆಂದು ಸಾಂಖ್ಯರೇ ಒಪ್ಪಿರುತ್ತಾರೆ. ಹಾಗೆ ಒಪ್ಪುವುದಾದರೆ ಕಾರ್ಯಾಂತರವನ್ನು ಕೇವಲ ಅಚೇತನವೇ ಮಾಡಬಹುದಷ್ಟೆ! ಹೀಗೆಯೇ ಚೇತನವು ಅಚೇತನವನ್ನು ಅಪೇಕ್ಷಿಸಿಯೇ ಕಾರ್ಯವನ್ನು ಮಾಡುತ್ತದೆಯೆಂದು ಒಪ್ಪಿದರೆ ಅನ್ಯೋನ್ಯಾಶ್ರಯ ದೋಷವು ಬರುತ್ತದೆ. ಮದುವೆಯಾಗದೆ ಹುಚ್ಚುಬಿಡದು ಹುಚ್ಚುಬಿಡದೆ

Rarest Archiver

ಮದುವೆಯಾಗದು ಎಂಬಂತೆ ಒಂದಾಗದೆ ಮತ್ತೊಂದಾಗದು ಎಂಬುದೇ ಅನ್ಯೋನ್ಯಾಶ್ರಯ. ಆದುದರಿಂದ ಚೇತನಾಚೇತನನಿಯಾಮಕನಾದ ಈಶ್ವರನನ್ನು ಒಪ್ಪದಿದ್ದರೆ ಆ ಚೇತನಾಚೇತನಗಳಿಗೆ ಪರಸ್ಪರಸಂಪರ್ಕವೇ ಸಂಭವಿಸಲಾರದು. ಆದ್ದರಿಂದ ನಿರೀಶ್ವರಸಾಂಖ್ಯಮತವು ಅಯುಕ್ತ. ನಾವು ಸೃಷ್ಟಿವಿಷಯದಲ್ಲಿ ಸ್ವತಂತ್ರನಾದ ಪರಮಾತ್ಮನು ತನ್ನ ಅಧೀನವಾದ ಪ್ರಕೃತಿಯಿಂದ ಕುಂಬಾರನು ಮಣ್ಣಿನಿಂದ ಮಡಿಕೆ ಮಾಡುವಂತೆ ಪ್ರಪಂಚವನ್ನು ನಿರ್ಮಿಸುವನು ಎಂದು ಹೇಳುತ್ತೇವೆ. ಹೀಗೆ ನಿರ್ಣಯಿಸಿದಾಗ ಪ್ರಕೃತಿಯೇ ಮುಖ್ಯವು, ಪರಮಾತ್ಮನು ಅಮುಖ್ಯನೆಂಬ ಸೇಶ್ವರಸಾಂಖ್ಯಮತವು ಅಯುಕ್ತವೆಂದಾಗುತ್ತದೆ. ಅಂಗಾಂಗಿತ್ವಾದಿ ಎಂಬಲ್ಲಿ ಆದಿಪದದಿಂದ ಭೂಮಿ, ಜಲ, ತೇಜಸ್ಸು, ವಾಯು ಎಂಬ ಭೂತಚತುಷ್ಟಯದಿಂದಲೇ ಎಲ್ಲಾ ಕಾರ್ಯವು ಹುಟ್ಟಿದೆ. ಚೇತನವೆಂಬ ವಸ್ತುವೇ ಇಲ್ಲವೆಂದು ಹೇಳುವ ಚಾರ್ವಾಕರ ಮತವೂ ಸರಿಯಲ್ಲವೆಂದು ಹೇಳಿದಂತಾಯಿತು. ಈಶ್ವರನನ್ನೇ ಒಪ್ಪದಿರುವ ಭಾಟ್ಟ, ಪ್ರಾಭಾಕರರೆಂಬ ಮೀಮಾಂಸಕರ ಮತವನ್ನೂ ನಿರಾಕರಿಸಿದಂತೆ ಆಯಿತು.

ಚೇತನಂ ಚ ಅಚೇತನಂ ಚ ಚೇತನಾಚೇತನೇ, ತಯೋಃ, ಅಂಗಮಸ್ಯಾಸ್ತೀತಿ ಅಂಗಿ, ಅಂಗಂ ಚ ಅಂಗಿ ಚ ಅಂಗಾಂಗಿನೀ ತಯೋರ್ಭಾವಃ ಅಂಗಾಂಗಿತ್ವೇ, ತೇ ಆದಿನೀ ಯಸ್ಯ ತತ್, ಈಶಸ್ಯ ಅಪೇಕ್ಷಾ, ಈಶಾಪೇಕ್ಷಾಯಾಃ ಅಭಾವಃ ಈಶಾನಪೇಕ್ಷಾ ತಸ್ಯಾಂ..

ಮನುತೇ ಮನ್ವಾತೇ ಮನ್ವತೇ, ಇತ್ಯಾದಿ. ಮನು ಅವಬೋಧನೇ ಲಿಟ್.

ಈಶ್ವರನನ್ನು ನಾವು (ಸಿದ್ಧಾಂತಿಗಳು) ಕೇವಲವ್ಯತಿರೇಕಿ ಅನುಮಾನದಿಂದ ಸಾಧಿಸುತ್ತೇವೆ —

ಸರ್ವವಿನ್ನಿರ್ಮಿತಂ ಸರ್ವಂ ಕಾದಾಚಿತ್ಕತ್ವಹೇತುತಃ ।
ನ ಯದೇವಂ ನೋ ತದೇವಂ ಯಥಾತ್ಮೇತೀಶ್ವರಾನುಮಾ ॥

ಸರ್ವಂ ಸರ್ವವಿನ್ನಿರ್ಮಿತಂ ಕಾದಾಚಿತ್ಕತ್ವಹೇತುತಃ ಯತ್ ಏವಂ ನ ತತ್ ಏವಂ ನೋ ಯಥಾ ಆತ್ಮಾ ಇತಿ ಈಶ್ವರಾನುಮಾ ಭವತಿ. ॥ ೧೨ ॥

Rarest Archiver

ಸರ್ವಂ = ಸಮಸ್ತಕಾರ್ಯಸಮೂಹವೂ, ಸರ್ವವಿನ್ನಿರ್ಮಿತಂ = ಸರ್ವಜ್ಞನಾದ ಒಬ್ಬಚೇತನನಿಂದ ನಿರ್ಮಿತವಾಗಿದೆ. ಕಾದಾಚಿತ್ಕತ್ವ-ಹೇತುತಃ = ಹಿಂದೆ ಇಲ್ಲದೆ ಇದ್ದು ಉಂಟಾಗುವ ಕಾರಣದಿಂದ, ಯತ್ ಏವಂ ನ = ಯಾವುದು ಸರ್ವಜ್ಞನಾದ ಭಗವಂತನಿಂದ ಸೃಷ್ಟಿಸಲ್ಪಟ್ಟದ್ದಲ್ಲವೋ, ತತ್ ಏವಂ ನೋ = ಅದು ಹಿಂದೆ ಹೇಳಿದಂತೆ ಹಿಂದೆ ಇಲ್ಲದೆ ಇದ್ದು ಎಂದಾದರೂ ಇರುವುದಲ್ಲ, (ಅನಿತ್ಯವಲ್ಲ) ಆತ್ಮಾ ಯಥಾ = ಜೀವಾತ್ಮನು ಹೇಗೋ ಹಾಗೆ, ಇತಿ ಈಶ್ವರಾನುಮಾ = ಎಂದು ಈಶ್ವರನನ್ನು ಸಾಧಿಸುವ ಅನುಮಾನವು.

ನಿರೀಶ್ವರವಾದಿಗಳು ಇಲ್ಲಿ ಈ ರೀತಿ ಪೂರ್ವಪಕ್ಷ ಮಾಡುತ್ತಾರೆ— ಈಶ್ವರನು ಇದ್ದಾನೆ ಎಂಬವಿಷಯದಲ್ಲಿ ಪ್ರಮಾಣವಿಲ್ಲದ್ದರಿಂದ, ಅವನನ್ನು ಹೇಗೆ ಒಪ್ಪಲು ಸಾಧ್ಯ? ವೇದವು ಈಶ್ವರನು ಇದ್ದಾನೆ ಎಂಬ ವಿಷಯದಲ್ಲಿ ಪ್ರಮಾಣವೆಂದು ಹೇಳಲು ಬರುವುದಿಲ್ಲ, ಏಕೆಂದರೆ ವೇದಪ್ರಾಮಾಣ್ಯವನ್ನು ಒಪ್ಪದಿರುವವನನ್ನು ಕುರಿತು ವೇದದಿಂದ ಈಶ್ವರನನ್ನು ಹೇಗೆ ಸಾಧಿಸಲು ಸಾಧ್ಯ? ಇಂದ್ರಿಯಗಳಿಗೆ ಈಶ್ವರನು ಗೋಚರನಾಗುವುದಿಲ್ಲವಾದುದರಿಂದ ಈಶ್ವರನ ವಿಷಯದಲ್ಲಿ ಪ್ರತ್ಯಕ್ಷಪ್ರಮಾಣವೂ ಇಲ್ಲ, ಈಶ್ವರನ ಹಾಗೆ ಇರುವವನು ಮತ್ತೊಬ್ಬನಿಲ್ಲ. ಹೀಗೆ ದೃಷ್ಟಾಂತವಿಲ್ಲದಿರುವುದರಿಂದ ಅನುಮಾನದಿಂದಲೂ ಈಶ್ವರನನ್ನು ಸಾಧಿಸಲು ಬರುವುದಿಲ್ಲ ಎಂಬ ಪೂರ್ವಪಕ್ಷಕ್ಕೆ ಉತ್ತರ:— ಹಿಂದೆ ಮುಂದೆ ಇಲ್ಲದೆ ಎಂದಾದರೊಂದು ಕಾಲದ ಪರಿಮಿತಿಯಲ್ಲಿ ಇರುವುದರಿಂದ ಇದ್ದು ನಾಶವಾಗುವುದರಿಂದ (ಅನಿತ್ಯವಾದುದರಿಂದ) ಸಮಸ್ತಕಾರ್ಯವೂ ಪರಮಾತ್ಮನಿಂದಲೇ ನಿರ್ಮಿತವಾಗಿದೆ. ಯಾವ ವಸ್ತುವು ಪರಮಾತ್ಮನಿಂದ ನಿರ್ಮಿಸಲ್ಪಟ್ಟದ್ದಲ್ಲವೋ ಅದು ಕಾದಾಚಿತ್ಕ (ಅನಿತ್ಯ)ವಲ್ಲ—ಜೀವನು ಕಾದಾಚಿತ್ಕ (ಅನಿತ್ಯ)ನಲ್ಲ— ಈಶ್ವರನಿರ್ಮಿತನೂ ಅಲ್ಲ. ಇದಕ್ಕೆ ವಿರುದ್ಧವಾಗಿ ಸರ್ವಪ್ರಪಂಚವೂ-ನಶ್ವರ -ಕಾದಾಚಿತ್ಕ (ಅಂದರೆ ಅನಿತ್ಯ) – ಆದುದರಿಂದ ಇದನ್ನು ಸೃಷ್ಟಿಮಾಡುವ ಈಶ್ವರನನ್ನು ಒಪ್ಪಲೇ ಬೇಕಾಗುತ್ತದೆ. ಈ ಅನುಮಾನವು ಈಶ್ವರನನ್ನು ಸಾಧಿಸುತ್ತದೆ. ಈ ರೀತಿಯಾಗಿ ಈಶ್ವರನಂತೆ ಸರ್ವಜ್ಞನು ಮತ್ತೊಬ್ಬನಿಲ್ಲದಿದ್ದರೂ ಈ ವ್ಯತಿರೇಕಿಅನುಮಾನದಿಂದ ಈಶ್ವರನು ಸಿದ್ಧಿಸುತ್ತಾನೆ.

Rarest Archiver

ಸರ್ವಂ ವೇತ್ತೀತಿ ಸರ್ವವಿತ್, ಸರ್ವವಿದಾ ನಿರ್ಮಿತಂ, ಕದಾಚಿತ್ ಭವಂ ಕಾದಾಚಿತ್ಕಂ, ತಸ್ಯ ಭಾವಃ, ಕಾದಾಚಿತ್ಕತ್ವಂ ಇತಿ ಹೇತುಃ, ಕಾದಾಚಿತ್ಕತ್ವಹೇತೋಃ ಇತಿ; ಈಶ್ವರಸ್ಯ ಅನುಮಾ.

ವೇದವನ್ನು ಪ್ರಮಾಣವೆಂದು ಒಪ್ಪಲೇ ಬೇಕು—

ಬಲಾಯ ಸರ್ವಾನುಮಾನಾಂ ವೇದಾಃ ಸ್ಯುರ್ಯೈರಪಾಲಿತಾಃ।
ಕಾಮಾದೇತಾಃ ಪ್ರವರ್ತಂತೇ ಕಾಮಿನ್ಯ ಇವ ಭರ್ತೃಭಿಃ ॥೧೩॥

ವೇದಾಃ ಸರ್ವಾನುಮಾನಾಂ ಬಲಾಯ ಸ್ಯುಃ, ಯೈಃ ಅಪಾಲಿತಾಃ ಏತಾಃ ಭರ್ತೃಭಿಃ ಅಪಾಲಿತಾಃ ಕಾಮಿನ್ಯಃ ಇವ ಕಾಮಾತ್ ಪ್ರವರ್ತಂತೇ.

ವೇದಾಃ=ವೇದಗಳು, ಸರ್ವಾನುಮಾನಾಂ = ಎಲ್ಲಾ ಅನುಮಾನ ಗಳಿಗೆ, ಬಲಾಯ = ಪ್ರಾಬಲ್ಯಕ್ಕಾಗಿ, ಸ್ಯುಃ = ಆಗಿಯೇ ಇರುತ್ತವೆ, ಯೈಃ = ಯಾವ ವೇದಗಳಿಂದ, ಅಪಾಲಿತಾಃ = ರಕ್ಷಿಸಲ್ಪಡದಿರುವ (ಅನುಗ್ರಹಿಸಲ್ಪಡದಿರುವ), ಏತಾಃ = ಈ ಅನುಮಾನಗಳು, ಭರ್ತೃಭಿಃ ಅಪಾಲಿತಾಃ=ಗಂಡಂದಿರಿಂದ ರಕ್ಷಿಸಲ್ಪಡದಿರುವ (ನಿಯಮಿಸಲ್ಪಡದಿರುವ) ಕಾಮಿನ್ಯಃ ಇವ=ಪುರುಷಾಭಿಲಾಷೆಯುಳ್ಳ ಸ್ತ್ರೀಯರಂತೆ, ಕಾಮಾತ್= ವಾದಿಪ್ರತಿವಾದಿಗಳ ಇಚ್ಛೆಯಂತೆ, ಪ್ರವರ್ತಂತೆ=ಪ್ರಯುಕ್ತವಾಗುತ್ತವೆ;

ವೇದಗಳು ಎಲ್ಲಾ ಅನುಮಾನಗಳಿಗೂ ಮೂಲಾಧಾರವಾಗಿರುತ್ತವೆ. ಅಂದರೆ ವೇದಪ್ರಮಾಣಬಲದಿಂದಲೇ ಅನುಮಾನಗಳು ಪ್ರಮಾಣಗಳೆನಿಸು ತ್ತವೆ. ಅಂತಹ ವೇದಗಳಿಂದ ನಿಯಮಿಸಲ್ಪಡದ ಅನುಮಾನಗಳು ತಮ್ಮ ಪತಿಗಳಿಂದ ರಕ್ಷಿಸಲ್ಪಡದಿರುವ ಕಾಮಾಪೇಕ್ಷಿಗಳಾದ ಸ್ತ್ರೀಯರಂತೆ ಸ್ವೇಚ್ಛೆ ಯಿಂದ ವರ್ತಿಸುತ್ತವೆ. ಹೇಗೆ ಪತಿಯ ರಕ್ಷಣೆಗೊಳಪಡದಿರುವ ಕಾಮಿನಿಯರು ಮನಬಂದ ಪುರುಷನನ್ನು ಸೇರಿ ವ್ಯಭಿಚಾರಿಣಿಯರಾಗುವ ಅವಕಾಶವಿರುತ್ತದೆಯೋ ಅದರಂತೆ ವೇದಗಳ ಅನುಗ್ರಹವಿಲ್ಲದಿರುವ ಅನುಮಾನಗಳು ವಾದಿಪ್ರತಿವಾದಿಗಳ ಮನಬಂದಂತೆ ವರ್ತಿಸಿ ಯಾವ ವಿಷಯವನ್ನೂ ಸಾಧಿಸಲು ಸಮರ್ಥವಾಗುವುದಿಲ್ಲ. ಆದುದರಿಂದ ವೇದ ದಿಂದಲೇ ಜಗದೀಶ್ವರನು ಇದ್ದಾನೆಂದು ಸಾಧಿಸಲು ಸಾಧ್ಯ. ಹೀಗೆ

Rarest Archiver

ವೇದವು ಪ್ರಮಾಣವೆಂದು ಅಂಗೀಕರಿಸಬೇಕಾಗುತ್ತದೆ. ಆ ವೇದಾನುಗ್ರಾಹ್ಯವಾದ ಅನುಮಾನವೂ ಅನಂತರ ಪ್ರಮಾಣವಾಗುತ್ತದೆ. 'ಶ್ರುತಿ-ಸಾಹಾಯ್ಯರಹಿತಮನುಮಾನಂ ನ ಕುತ್ರಚಿತ್ | ನಿಶ್ಚಯಾತ್ ಸಾಧಯೇ-ದರ್ಥಂ ಪ್ರಮಾಣಾಂತರಮೇವ ಚ ||' ಎಂಬ ವಚನವು ಈ ವಿಷಯದಲ್ಲಿ ಆಧಾರವಾಗಿದೆ.

ಸರ್ವಾಶ್ಚ ತಾಃ ಅನುಮಾಶ್ಚ ಸರ್ವಾನುಮಾಃ ತಾಸಾಂ, ನ ಪಾಲಿತಾಃ ಅಪಾಲಿತಾಃ, ಕಾಮಃ ಆಸಾಂ ಅಸ್ತೀತಿ ಕಾಮಿನ್ಯಃ.

ಪ್ರ+ವರ್ತತೇ ವರ್ತೇತೇ ವರ್ತಂತೇ ವೃತು ವರ್ತನೇ ಆತ್ಮ. ಲಿಟ್.

ಮಣ್ಣು ಗಡಿಗೆಯಾಗಿ ಪರಿಣಾಮ ಹೊಂದುವಂತೆ ಪರಬ್ರಹ್ಮನೇ ಜಗತ್ತಿನ ರೂಪದಿಂದ ಪರಿಣಮಿಸುತ್ತಾನೆ ಎಂಬ ಭಾಸ್ಕರಾದಿಗಳ ವಾದವನ್ನು ನಿರಾಕರಿಸುತ್ತಾರೆ—

ಕಾರಣಂ ಪರಿಣಾಮಿ ಸ್ಯಾದ್ ಬ್ರಹ್ಮ ನೋ ಚೇತನತ್ವತಃ |
ನ ಯದಿತ್ಥಂ ನೋ ತದಿತ್ಥಂ ಯಥಾ ಕ್ಷೀರಪುರಸ್ಸರಂ || ೧೪ ||

ಬ್ರಹ್ಮ ಪರಿಣಾಮಿ ಕಾರಣಂ ನೋ ಸ್ಯಾತ್ ಚೇತನತ್ವತಃ, ಯತ್ ಇತ್ಥಂ ನ ತತ್ ಇತ್ಥಂ ನೋ ಕ್ಷೀರಪುರಸ್ಸರಂ ಯಥಾ.

ಬ್ರಹ್ಮ = ಪರಬ್ರಹ್ಮವು, ಪರಿಣಾಮಿ ಕಾರಣಂ ನೋ ಸ್ಯಾತ್ = ವಿಕಾರವುಳ್ಳ ಕಾರಣವು ಆಗಲಾರದು, ಚೇತನತ್ವತಃ = ನಿತ್ಯನಿರ್ವಿಕಾರವಾದ ಚೇತನವಸ್ತುವಾದುದರಿಂದ, ಯತ್ ಇತ್ಥಂ ನ = ಯಾವ ವಸ್ತುವು ಪರಿಣಾಮಿಕಾರಣವಲ್ಲವೆಂದು ಅಲ್ಲವೋ, ತತ್ ಇತ್ಥಂ ನ = ಅದು ಚೇತನತ್ವವುಳ್ಳದ್ದು ಅಲ್ಲ, ಕ್ಷೀರಪುರಸ್ಸರಂ ಯಥಾ = ಹಾಲು ಮೊದಲಾದ ಪದಾರ್ಥಗಳಂತೆ.

ಪರಬ್ರಹ್ಮವು ಚೇತನವಾಗಿರುವುದರಿಂದ ಜಗತ್ತಿನರೂಪದಿಂದ ವಿಕಾರಹೊಂದುವ ಕಾರಣವಾಗಲಾರದು. ಯಾವ ವಸ್ತುವು ಪರಿಣಮಿಸುವ ಅಂದರೆ ವಿಕಾರಹೊಂದುವ ಕಾರಣವು ಆಗುವುದಿಲ್ಲವೆಂದಿಲ್ಲವೋ, ಪರಿಣಾಮಿ ಕಾರಣವಾಗುತ್ತದೆಯೋ ಆ ವಸ್ತುವು ಚೇತನವಾಗಲಾರದು. ಹಾಲು

Rarest Archiver

ಮೊದಲಾದುದು ಮೊಸರು ಮೊದಲಾದ ರೂಪದಿಂದ ಪರಿಣಮಿಸುತ್ತದೆ. ಅದು ಚೇತನವೂ ಅಲ್ಲ, ಪರಬ್ರಹ್ಮನು ಅಚೇತನನಲ್ಲ, ಪರಮಮುಖ್ಯ ಚೇತನನು, ಅವನು ಜಗತ್ತಿನ ರೂಪದಿಂದ ವಿಕಾರಹೊಂದುವ ಪರಿಣಾಮಿಕಾರಣನೂ ಆಗುವುದಿಲ್ಲ. ಬ್ರಹ್ಮ ಪರಿಣಾಮಿಕಾರಣಂ ನ ಭವತಿ ಚೇತನತ್ವಾತ್, ಯತ್ ಪರಿಣಾಮಿಕಾರಣಂ ತತ್ ಅಚೇತನಂ ಯಥಾ ಕ್ಷೀರಾದಿಕಂ, ನ ತಥಾಚೇದಂ ಅಚೇತನಂ, ತಸ್ಮಾತ್ ನ ಪರಿಣಾಮಿ ಕಾರಣಂ ಎಂದು ಇಲ್ಲಿ ಅನುಮಾನಪ್ರಯೋಗವು.

ಪರಿಣಾಮಃ ಅಸ್ಯ ಅಸ್ತೀತಿ ಪರಿಣಾಮಿ, ಚೇತನಸ್ಯಃ ಭಾವಃ, ಚೇತನತ್ವಾತ್ ಇತಿ ಚೇತನತ್ವತಃ, ಕ್ಷೀರಂ ಪುರಸ್ಸರಂ ಯಸ್ಯ ತತ್.

ನಾರಾಯಣನೇ ಪರಬ್ರಹ್ಮನು, ಅವನೇ ಜಗತ್ಕಾರಣನು ಎಂದು ಅನೇಯ ಶ್ಲೋಕದಲ್ಲಿ ಹೇಳಿದುದು ಅಯುಕ್ತ, ಏಕೆಂದರೆ ಶಿವ, ಗಣಪತಿ, ಸುಬ್ರಹ್ಮಣ್ಯ, ಸೂರ್ಯ, ಮೊದಲಾದವರೇ ವಿಶ್ವಕರ್ತರೆಂದು ವೇದಗಳಲ್ಲಿ ಹೇಳಿದೆ. ಎಂಬ ಆಕ್ಷೇಪವನ್ನು ಖಂಡಿಸುತ್ತಾರೆ —

ನ ವಿಶ್ವಕೃತ್ ಪಶುಪತಿಃ ಶ್ರೂಯಮಾಣಾಗುಣತ್ವತಃ ।
ಚೈತ್ರವತ್ ಕಿಂ ಪುನರ್ವಿಘ್ನಬ್ರಧ್ನಾದ್ಯಾ ಬಾಲಶಂಕಿತಾಃ ॥೧೫॥

ಪಶುಪತಿಃ ವಿಶ್ವಕೃತ್ ನ, ಶ್ರೂಯಮಾಣಾಗುಣತ್ವತಃ ಚೈತ್ರವತ್, ಬಾಲಶಂಕಿತಾಃ ವಿಘ್ನಬ್ರಧ್ನಾದ್ಯಾಃ (ವಿಶ್ವಕೃತಃ ನ ಭವಂತೀತಿ) ಪುನಃ ಕಿಂ (ವಕ್ತವ್ಯಂ) ?

ಪಶುಪತಿಃ = ಪಶು ಎಂಬ ಹೆಸರುಳ್ಳ ಎಲ್ಲಾ ಜೀವರಿಗೂ ಸ್ವಾಮಿಯಾದ ಶಂಭುವು, ವಿಶ್ವಕೃತ್ ನ= ಜಗತ್ತಿನ ಜನ್ಮಾದಿಕಾರಣನು ಅಲ್ಲ, ಶ್ರೂಯಮಾಣಾಗುಣತ್ವತಃ = ವೇದಗಳಿಂದ ಪ್ರತಿಪಾದಿಸಲ್ಪಡುವ ದೋಷವುಳ್ಳತನದಿಂದ, ಚೈತ್ರವತ್ = ಚೈತ್ರನೆಂಬ ದೋಷಿಯಾದ ಅಲ್ಪ ಶಕ್ತಿಯ ಜೀವನಂತೆ. ಬಾಲಶಂಕಿತಾಃ = ಅಜ್ಞಾನಿಗಳಿಂದ ವಿಶ್ವಕರ್ತರೆಂದು ಊಹಿಸಲ್ಪಟ್ಟ, ವಿಘ್ನಬ್ರಧ್ನಾದ್ಯಾಃ = ಗಣೇಶ, ಸೂರ್ಯ, ಸುಬ್ರಹ್ಮಣ್ಯ ಮೊದಲಾದವರು, (ವಿಶ್ವಕೃತಃ ನ ಭವಂತೀತಿ = ಸೃಷ್ಟ್ಯಾದಿಕರ್ತರು ಅಲ್ಲವೆಂದು) ಪುನಃ ಕಿಂ (ವಕ್ತವ್ಯಂ) = ಮತ್ತೆ ಏನು ಹೇಳತಕ್ಕದ್ದಿದೆ?

Rarest Archiver

ಉಗ್ರನಾದ ಮಹೇಶ್ವರನು ಜಗತ್ಕರ್ತನಲ್ಲ, ಏಕೆಂದರೆ 'ಸೋಽರೋದೀತ್, ಯಂ ಕಾಮಯೇ ತಂ ತಮುಗ್ರಂ ಕೃಣೋಮಿ' ಇತ್ಯಾದಿ ವೇದಗಳಲ್ಲಿ ಶಂಕರನು, ದುಃಖಿಯೆಂದೂ, ಲಕ್ಷ್ಮಿಯ ಅಧೀನನೆಂದೂ, ಹೇಳಿದ್ದಾರೆ. ಹೀಗೆ ದುಃಖಿಯೂ ಪರತಂತ್ರನೂ ಆದ ಶೂಲಿಯು ಜಗತ್ತಿನ ಜನ್ಮಾದಿ ಕಾರಣನಾಗಲಾರನು. ಚೈತ್ರನೆಂಬ ದುಃಖಿಯೂ ಪರಾಧೀನನೂ ಆದ ಜೀವನು ಜಗತ್ಕರ್ತನಲ್ಲ ಅದರಂತೆ–ಎಂದು ದೃಷ್ಟಾಂತವು. ಹೀಗಿದ್ದಾಗ ಬುದ್ಧಿಮೋಹವುಳ್ಳವರು ಗಣಪತಿ ಸೂರ್ಯ ಮೊದಲಾದ ದೇವತೆಗಳನ್ನು ವಿಶ್ವಕರ್ತೃಗಳೆಂದು ಹೇಳಿದ್ದಾರೆ. ಆದರೆ ಅದೂ ಅಯುಕ್ತವೆಂದು ಬೇರೆಯಾಗಿ ಹೇಳಬೇಕಾಗಿಯೇ ಇಲ್ಲ. ವೇದಾದಿಸಚ್ಛಾಸ್ತ್ರಗಳಿಂದಲೂ, ಸದನುಮಾನಗಳಿಂದಲೂ, ಜ್ಞಾನಿಗಳ ದಿವ್ಯಪ್ರತ್ಯಕ್ಷದಿಂದಲೂ, ನಿರ್ದೋಷನೂ, ಸ್ವತಂತ್ರನೂ ಸರ್ವಜ್ಞನೂ ಆದ ವಿಷ್ಣುವೇ ಜಗತ್ಕರ್ತನೆಂದು ನಿರ್ಣಯವಾಗಿರುವುದರಿಂದ ಪಾಶುಪತಾದಿದುರ್ಬಲಶಾಸ್ತ್ರಗಳಲ್ಲಿ ರುದ್ರನೇ ಜಗತ್ಕಾರಣನೆಂದು ಹೇಳಿದುದು ಅಯುಕ್ತವೆಂದಾದ ಮೇಲೆ, ರುದ್ರನಿಗಿಂತ ಕೆಳನಗಿನವರಾದ ಸೂರ್ಯಾದಿಗಳು ಜಗತ್ಕರ್ತರಲ್ಲವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದರಿಂದ ಸೌರ, ಗಾಣಾಪತ್ಯ, ಸ್ಕಾಂಧ, ಪಾಶುಪತ ಎಂಬ ನಾಲ್ಕುಮತಗಳನ್ನು ನಿರಾಕರಿಸಿದರು. ಪುರುಷಾನುಗ್ರಹ ವಿಲ್ಲದಿರುವ ಕೇವಲಸ್ತ್ರೀಯಿಂದ ಸೃಷ್ಟ್ಯಾದಿಗಳು ನಡೆಯುವುದಿಲ್ಲವಾದ್ದರಿಂದ ಶಾಕ್ತಮತವೂ ನಿರಾಕೃತವಾಯಿತು. ವೈಷ್ಣವಮತಎಂಬುದನ್ನೂ ಸೇರಿಸಿ ಆರು ಮತಗಳನ್ನು ಹಿಂದಿನವರು ಸ್ಥಾಪಿಸಿದ್ದರಿಂದ ಅವೆಲ್ಲವೂ ಪ್ರಮಾಣಗಳು ಎಂಬುದೂ ಸರಿಯಲ್ಲ ಎಂದೂ, 'ಆದಿತ್ಯಂ ಅಂಬಿಕಾಂ ವಿಷ್ಣುಂ ಗಣನಾಥಂ ಮಹೇಶ್ವರಂ, ಸ್ಕಂದಂವಾ' ಎಂಬಲ್ಲಿ ಹೇಳಿದಂತೆ ಎಲ್ಲಾ ದೇವತೆಗಳಿಗೂ ಒಂದೇ ಕಡೆ ಸಮಾನವಾಗಿ ಪಂಚಾಯತನ ಪೂಜೆಯೂ ಸರಿಯಲ್ಲವೆಂದೂ, ಆಚಾರ್ಯರು ಹೇಳಿದಂತೆ ಸರ್ವೋತ್ತಮನಾಗಿ ಶ್ರೀಹರಿಯನ್ನು ಪೂಜಿಸುವುದೇ ಸರಿಯಾದ ಕ್ರಮವೆಂದೂ ಹೇಳಿದಂತಾಯಿತು.

ವಿಶ್ವಂ ಕರೋತೀತಿ, ಪಶೂನಾಂ ಪತಿಃ, ನ ಗುಣಾಃ ಅಗುಣಾಃ, ಗುಣವಿರುದ್ಧಾಃ ದೋಷಾಃ, ಶ್ರೂಯಮಾಣಾಃ ಅಗುಣಾಃ ಯಸ್ಯ ಸಃ, ಶ್ರೂಯಮಾಣಾಗುಣಸ್ಯ ಭಾವಃ, ಶ್ರೂಯಮಾಣಾಗುಣತ್ವಾತ್ ಇತಿ;

ಚೈತ್ರೇಣ ತುಲ್ಯಂ, ವಿಘ್ನಶ್ಚ ಬ್ರಧ್ನಶ್ಚ, ವಿಘ್ನಬ್ರಧ್ನೌ, ಆದ್ಯೌ ಯೇಷಾಂ ತೇ, ಬಾಲೈಃ ಶಂಕಿತಾಃ ;

'ನಾರಾಯಣೋಽನಂತಗುಣಃ' ನಾರಾಯಣನೊಬ್ಬನೇ ಅನಂತಕಲ್ಯಾಣ ಗುಣಪರಿಪೂರ್ಣನು, ಪರಬ್ರಹ್ಮನು, ಎಂದು (ಶ್ಲೋಕ ೮) ಹೇಳಿದ್ದು ಸರಿಯಲ್ಲ, ಎಂದು ಹೇಳುವ ವೈಶೇಷಿಕತಾರ್ಕಿಕರ ಆಕ್ಷೇಪವು ಹೀಗಿದೆ —

ನನು ಸೌಖ್ಯಾದಿಮಾನ್ನೇಶೋ ದುಃಖಾದಿರಹಿತತ್ವತಃ ।
ಯೋ ನೈವಂ ಸ್ಯಾತ್ ಸ ನೈವಂ ಸ್ಯಾದ್ಯಥಾ ಸಂಸೃತಿಮಾನಿತಿ ॥೧೬॥

ಈಶಃ ಸೌಖ್ಯಾದಿಮಾನ್ ನ ದುಃಖಾದಿ ರಹಿತತ್ವತಃ ಯಃ ಏವಂ ನ ಸ್ಯಾತ್ ಸಃ ಏವಂ ನ ಸ್ಯಾತ್ ಸಂಸೃತಿಮಾನ್ ಯಥಾ ಇತಿ ನನು – ?

ಈಶಃ = ಆನಂದಾದಿಗುಣಪೂರ್ಣನೆಂದು ನೀವು ಅಂಗೀಕರಿಸಿರುವ ನಾರಾಯಣನು, ಸೌಖ್ಯಾದಿಮಾನ್ ನ = ಆನಂದಾದಿಗುಣಗಳುಳ್ಳವನು ಅಲ್ಲ, ದುಃಖಾದಿರಹಿತತ್ವತಃ = ದುಃಖ ಅಜ್ಞಾನ ಮೊದಲಾದುವುಗಳು ಇಲ್ಲದಿರುವುದರಿಂದ, ಯಃ ಏವಂ ನ ಸ್ಯಾತ್ = ಯಾವನು–ಆನಂದಾದಿ ಗುಣಗಳಿಲ್ಲದವನು ಆಗಲಾರನೋ, ಸಃ ಏವಂ ನ ಸ್ಯಾತ್ = ಅವನು ದುಃಖಾದಿಗಳಿಲ್ಲದವನು ಆಗಲಾರನು, ಸಂಸೃತಿಮಾನ್ ಯಥಾ = ಸಂಸಾರಿಯಾದ ಚೈತ್ರಾದಿ ಮನುಷ್ಯನಂತೆ, ಇತಿ ನನು = ಹೀಗೆಂದು ವೈಶೇಷಿಕರೆಂಬ ತಾರ್ಕಿಕರಾದ ನಿಮ್ಮ ವಿರೋಧೋಕ್ತಿಯಷ್ಟೆ !

ಈಶ್ವರನು (ನಾರಾಯಣನು) ಆನಂದಾದಿಗುಣಗಳುಳ್ಳವನು ಆಗಲಾರನು, ಏಕೆಂದರೆ ಅವನಲ್ಲಿ ದುಃಖಾದಿಗಳು ಇಲ್ಲದಿರುವುದರಿಂದ, ಯಾವನು ಆನಂದಾದಿಗುಣಗಳಿಲ್ಲದವನಲ್ಲವೋ ಆತನು ದುಃಖಾದಿಗಳೂ ಇಲ್ಲದವನಲ್ಲ ಎಂದು ಸಂಸಾರಿಯಾದ ಚೈತ್ರಾದಿಗಳಲ್ಲಿ ಕಂಡಿದೆ. ಅಂದರೆ ಸುಖವಿದ್ದಲ್ಲಿ ದುಃಖವಿರಲೇ ಬೇಕು. ಸಂಸಾರಿಯು ಇದಕ್ಕೆ ದೃಷ್ಟಾಂತ. ನೀವು ಈಶ್ವರನಲ್ಲಿ ಸುಖವಿದೆಯೆನ್ನುತ್ತೀರಿ, ಆದರೆ ದುಃಖ ಅಜ್ಞಾನಾದಿಗಳನ್ನು ಒಪ್ಪುವುದಿಲ್ಲ, ಇದು ಅಯುಕ್ತ ಎಂದು ತಾರ್ಕಿಕರ ಆಕ್ಷೇಪ.

ವಿಮತಃ ಈಶ್ವರಃ ಸುಖಾದಿರಹಿತಃ ದುಃಖಾದಿರಹಿತತ್ವಾತ್ ಯಃ ಸುಖಾದಿರಹಿತಃ ನ ಭವತಿ ಸಃ ದುಃಖಾದಿರಹಿತಃ ನ ಭವತಿ ಯಥಾ

Rarest Archives

ಸಂಸಾರೀ ನ ಚಾಯಂ ದುಃಖಾದಿಮಾನ್ ತಸ್ಮಾತ್ ನ ಸುಖಾದಿಮಾನ್ ಎಂದು ಇಲ್ಲಿ ಅನುಮಾನಪ್ರಯೋಗ.

ನನು ಚ ಸ್ಯಾದ್ ವಿರೋಧೋಕ್ತೌ=ನನು=ಹಿಂದೆ ಹೇಳಿದ್ದಕ್ಕೆ ವಿರುದ್ಧವಾದ ಮಾತು (ಆಕ್ಷೇಪ) ಸುಖಮೇವ ಸೌಖ್ಯಂ, ಸೌಖ್ಯಂ ಆದಿಃ ಯೇಷಾಂ ತೇ, ಸೌಖ್ಯಾದಯಃ ಅಸ್ಯ ಸಂತೀತಿ, ದುಃಖಂ ಆದಿಃ ಯೇಷಾಂ ತೇ, ದುಃಖಾದಯಃ, ದುಃಖಾದಿಭಿಃ ರಹಿತಃ ದುಃಖಾದಿರಹಿತಃ ತಸ್ಯ ಭಾವಃ, ದುಃಖಾದಿರಹಿತತ್ವಾತ್ ಇತಿ ದುಃಖಾದಿರಹಿತತ್ವತಃ, ಸಂಸೃತಿಃ ಅಸ್ಯ ಅಸ್ತೀತಿ ;

ತಾರ್ಕಿಕರ ಅನುಮಾನಕ್ಕೆ ನಾವು ಪ್ರತ್ಯನುಮಾನ ಹೇಳುತ್ತೇವೆ —

ಏವಂ ಚೇದ್ವಿಮತೋ ಜ್ಞಾನೀ ನ ಭ್ರಾಂತಿರಹಿತತ್ವತಃ ।
ಯ ಏವಂ ನೋ ಸ ಏವಂ ನೋ ಭವೀವೇತ್ಯನುಮೀಯತೇ ॥೧೭॥

ಏವಂ ಚೇತ್ ವಿಮತಃ ಜ್ಞಾನೀ ನ ಭ್ರಾಂತಿರಹಿತತ್ವತಃ ಯಃ ಏವಂ ನೋ ಸಃ ಏವಂ ನೋ ಭವೀ ಇವ ಇತಿ ಅನುಮೀಯತೇ.

ಏವಂ ಚೇತ್=ಹೀಗೆ ವೈಶೇಷಿಕನು ಈಶ್ವರನಲ್ಲಿ ದುಃಖಾಜ್ಞಾನಾದಿಗಳು ಇಲ್ಲದಿರುವುದರಿಂದ ಸುಖಾದಿಗಳೂ ಇಲ್ಲವೆಂದು ಅನುಮಾನದಿಂದ ಸಾಧಿಸುವುದಾದರೆ, ವಿಮತಃ = ಜ್ಞಾನಿಯೋ ಅಜ್ಞಾನಿಯೋ ಎಂದು ವೈಶೇಷಿಕನಿಗೂ ನಮಗೂ ಸಂಶಯವಿಷಯನಾದ ಈಶ್ವರನು, ಜ್ಞಾನೀ ನ=ಜ್ಞಾನವುಳ್ಳವನಲ್ಲ, ಭ್ರಾಂತಿರಹಿತತ್ವತಃ=ಭ್ರಾಂತಿಇಲ್ಲದಿರುವುದರಿಂದ, ಯಃ ಏವಂ ನೋ=ಯಾವನು ಜ್ಞಾನವಿಲ್ಲದವನು ಅಲ್ಲವೋ, ಸಃ ಏವಂ ನೋ=ಅವನು ಭ್ರಾಂತಿ ಇಲ್ಲದವನಲ್ಲ, ಭವೀ ಇವ=ಸಂಸಾರಿಯಂತೆ, ಇತಿ ಅನುಮೀಯತೇ=ಹೀಗೆ ಅನುಮಾನಮಾಡಲ್ಪಡುತ್ತದೆ.

ವೈಶೇಷಿಕನು ಅನುಮಾನದಿಂದ ಈಶ್ವರನಲ್ಲಿ ಆನಂದವಿಲ್ಲ-ಎಂದು ಸಾಧಿಸಿದರೆ ದ್ವೈತಿಗಳಾದ ನಾವೂ ಅನುಮಾನದಿಂದಲೇ, ಸರ್ವಜ್ಞನೋ ಅಲ್ಲವೋ ಎಂದು ಸಂಶಯವಿಷಯನಾದ ಪರಮಾತ್ಮನನ್ನು ಜ್ಞಾನವುಳ್ಳವನೂ ಆಗದಿರಲಿ ಎಂದು ಸಾಧಿಸುತ್ತೇವೆ. ಏಕೆಂದರೆ ಅವನಿಗೆ ಭ್ರಾಂತಿಯಿಲ್ಲ.

Rarest Archiver

ಲೋಕದಲ್ಲಿ ಯಾವನಿಗೆ ಜ್ಞಾನವಿದೆಯೋ ಅವನಿಗೆ ಭ್ರಾಂತಿಯು ಇದ್ದೇ ಇದೆ. ಇದಕ್ಕೆ ದೃಷ್ಟಾಂತ ಸಂಸಾರಿಜೀವನು. ಸಂಸಾರಿಗೆ ಜ್ಞಾನವಿದೆ, ಭ್ರಾಂತಿ ಇದೆ. ನೀವು ಜೀವರ ದೃಷ್ಟಾಂತದಿಂದ ಈಶ್ವರನಲ್ಲಿ ಆನಂದವಿಲ್ಲವೆಂದರೆ ನಾವು ಅದೇ ದೃಷ್ಟಾಂತದಿಂದ ಅನುಮಾನದಿಂದ ಈಶ್ವರನು ಜ್ಞಾನವಿಲ್ಲದವನೆಂದು ಸಾಧಿಸುತ್ತೇವೆ. ಎಂದು ತಾತ್ಪರ್ಯ.

ಜ್ಞಾನಂ ಅಸ್ಯ ಅಸ್ತೀತಿ, ಭ್ರಾಂತ್ಯಾ ರಹಿತಃ, ಭ್ರಾಂತಿರಹಿತಸ್ಯ ಭಾವಃ, ಭ್ರಾಂತಿರಹಿತತ್ವಾತ್ ಇತಿ ; ಭವಃ (ಸಂಸಾರಃ) ಅಸ್ಯ ಅಸ್ತೀತಿ.

ಅನು + ಮೀಯತೇ ಮೀಯೇತೇ ಮೀಯಂತೇ ಇತ್ಯಾದಿ.

ವೇದಪ್ರಾಮಾಣ್ಯವನ್ನೊಪ್ಪುವ ದ್ವೈತಿಗಳಾದ ನೀವು ಕೇವಲ ಯುಕ್ತಿಯಿಂದ ಈಶ್ವರನಲ್ಲಿ ಜ್ಞಾನವಿಲ್ಲವೆಂದು ಆಪಾದಿಸುವುದು ಅಯುಕ್ತ, ಈಶ್ವರನು ಸರ್ವಜ್ಞನೆಂದು ವೇದದಲ್ಲಿದೆ, ಎಂದರೆ ಅದೇ ನ್ಯಾಯದಿಂದ ತಾರ್ಕಿಕರಾದ ನಿಮ್ಮ ಯುಕ್ತಿಯೂ ಯುಕ್ತವಲ್ಲ ಎಂದು ಹೇಳುತ್ತೇವೆ —

ಸರ್ವಜ್ಞಸ್ಯಾಜ್ಞತಾಂ ವೇದಃ ಶ್ರದ್ಧೇಯೋ ವಿರುಣದ್ಧಿ ಚೇತ್ ।
ತಸ್ಯೈವಾಮಂದಮಾನಂದಂ ವದನ್ನಾಶ್ರಾವ್ಯಸೌ ಕಥಂ ॥೧೮॥

ಶ್ರದ್ಧೇಯಃ **ವೇದಃ** ಸರ್ವಜ್ಞಸ್ಯ ಅಜ್ಞತಾಂ ವಿರುಣದ್ಧಿ ಚೇತ್ **ತಸ್ಯೈವ** ಅಮಂದಂ **ಆನಂದಂ** ವದನ್ ಅಸೌ ಕಥಂ ನ ಅಶ್ರಾವಿ ?

ಶ್ರದ್ಧೇಯಃ ವೇದಃ = ಪರಮಪ್ರಮಾಣವೆಂದು ನಂಬಲು ಯೋಗ್ಯವಾದ ವೇದವು, ಸರ್ವಜ್ಞಸ್ಯ = ಎಲ್ಲವನ್ನೂ ಬಲ್ಲವನು, ಎಂದು ನಿಶ್ಚಿತನಾದ ಈಶ್ವರನಿಗೆ, ಅಜ್ಞತಾಂ = ಅಜ್ಞಾನವನ್ನು, ವಿರುಣದ್ಧಿ ಚೇತ್ = ವಿರೋಧಿಸುತ್ತದೆಯೆಂದಾದರೆ, ತಸ್ಯೈವ = ಆ ಸರ್ವವಿಷಯಕವಾದ ಜ್ಞಾನವುಳ್ಳ ಈಶ್ವರನಿಗೆಯೇ, ಅಮಂದಂ ಆನಂದಂ = ಪರಿಪೂರ್ಣವಾದ ಆನಂದವನ್ನು, ವದನ್ ಅಸೌ = ಹೇಳುತ್ತಿರುವ ಈ ವೇದವು, ಕಥಂ (ತ್ವಯಾ) ನ ಅಶ್ರಾವಿ = ಹೇಗೆ ನಿನ್ನಿಂದ ಕೇಳಲ್ಪಡಲಿಲ್ಲ ?

ಪರಮಪ್ರಮಾಣವೆಂದು ನೀವೂ ನಂಬಿರುವ 'ಯಃ ಸರ್ವಜ್ಞಃ ಸರ್ವವಿತ್ 'ಇತ್ಯಾದಿ' ವೇದವು ಜಗದೀಶ್ವರನಿಗೆ ಜ್ಞಾನವಿಲ್ಲ ಎಂದು

Rarest Archiver

ಸಾಧಿಸುವ ಯುಕ್ತಿಯನ್ನು ನಿರಾಕರಿಸುತ್ತದೆ ಎಂದು ತಾರ್ಕಿಕನಾದ ನೀನು ಹೇಳುತ್ತೀಯಾದರೆ—ಆ ಪರಮೇಶ್ವರನಿಗೆ ಅಪರಿಮಿತವಾದ ಆನಂದ ವಿದೆಯೆಂದು ಹೇಳುವ "ಆನಂದಂ ಬ್ರಹ್ಮಣೋ ವಿದ್ವಾನ್" ಎಂಬ ವೇದವು ಅದೇಕೆ ನಿನ್ನಿಂದ ಕೇಳಲ್ಪಡಲಿಲ್ಲ ? ನೀನು ಕೇವಲಯುಕ್ತಿಯಿಂದ ಈಶ್ವರನಲ್ಲಿ ಸುಖವಿಲ್ಲವೆಂದು ಸಾಧಿಸಿದರೆ ನಾವು ಈಶ್ವರನಲ್ಲಿ ಜ್ಞಾನವೂ ಇಲ್ಲವೆಂದಾಗಲಿ ಎಂದು ಆಕ್ಷೇಪಿಸಿದೆವು. ನೀನು ವೇದದಿಂದ ಈಶ್ವರನು ಸರ್ವಜ್ಞನೆಂದು ಸಾಧಿಸುವುದಾದರೆ ನಾವೂ ವೇದದಿಂದಲೇ ಈಶ್ವರನಿಗೆ ಸುಖವಿದೆ ಎಂದು ಸಾಧಿಸುತ್ತೇವೆ. ಈಶ್ವರನಿಗೆ ಜ್ಞಾನವಿದೆಯೆಂದು ವೇದದ ಆಧಾರದಿಂದ ಒಪ್ಪುವ ನೀನು ಈಶ್ವರನಿಗೆ ಆನಂದವಿದೆಯೆಂಬ ವೇದವನ್ನು ಕೇಳಲೇ ಇಲ್ಲವೇನು ? ಆಶ್ಚರ್ಯ. ಹೀಗೆ ವಿಮರ್ಶಿಸಿದಾಗ ಈಶ್ವರನು ದುಃಖಾದಿ ಸಮಸ್ತದೋಷದೂರನು, ಸುಖಜ್ಞಾನಾದಿ ಸಕಲ ಗುಣಪೂರ್ಣನು ಎಂದೂ ಸಿದ್ಧವಾಯಿತು.

ಸರ್ವಂ ಜಾನಾತೀತಿ ಸರ್ವಜ್ಞಃ ತಸ್ಯ, ನ ಜಾನಾತೀತಿ ಅಜ್ಞಃ, ತಸ್ಯ ಭಾವಃ ಅಜ್ಞತಾ ತಾಂ, ಶ್ರದ್ಧಾತುಂ ಯೋಗ್ಯಃ ಶ್ರದ್ಧೇಯಃ, ನ ಮಂದಃ ಅಮಂದಃ ತಂ, ಮಂದ = ಅಲ್ಪ ; ಮೂಢಾಲ್ಪಾಪಟುನಿರ್ಭಾಗ್ಯಾಃ ಮಂದಾಃ—ಅಮರ.

ವಿ + ರುಣದ್ಧಿ, ರುಂಧಃ ರುಂಧಂತಿ, ಇತ್ಯಾದಿ ರುಧಿರ್ ಆವರಣೇ ಲಿಟ್. ಅಶ್ರಾವಿ ಅಶ್ರಾವಿಷಾತಾಂ ಅಶ್ರಾವಿಷತ, ಶ್ರು ಶ್ರವಣೇ ಕರ್ಮಣಿ ಲುಙ್.

ಈಶ್ವರನಲ್ಲಿ ಸುಖವಿದೆಯೆಂದು ನಾವು ಒಪ್ಪುವುದಿಲ್ಲ. ಏಕೆಂದರೆ ಅವನು ಸುಖಿಯಾದರೆ ದುಃಖಿಯೂ ಆಗಲೇ ಬೇಕು. 'ಆನಂದಂ ಬ್ರಹ್ಮಣಃ' ಎಂಬ ವೇದದಿಂದ ಈಶ್ವರನಲ್ಲಿ ದುಃಖಾಭಾವವು (ದುಃಖವಿಲ್ಲ ಎಂದು) ಸಿದ್ಧಿಸುತ್ತದೆಯೇ ಹೊರತು ಸುಖವಿದೆಯೆಂದು ಸಿದ್ಧಿಸುವುದಿಲ್ಲ— ಎಂಬ ತಾರ್ಕಿಕರ ಆಕ್ಷೇಪಕ್ಕೆ ಉತ್ತರ —

ದುಃಖಂ ಪರಿಜಿಹೀರ್ಷನ್ ಯಃ ಸುಖಂ ನೋರೀಚಿಕೀರ್ಷತಿ ।
ಸ ಘಂತಾಪತಿತಂ ದುಃಖವಿನಾಶಸ್ಯ ವ್ಯಸ್ಮರಜ್ಜಡಃ ॥೧೯॥

(1) Absence of suffering or pain is happiness

ದುಃಖಂ ಪರಿಜಿಹೀರ್ಷನ್ ಯಃ ಸುಖಂ ನ ಊರೀಚಿಕೀರ್ಷತಿ, ಸಃ ಜಡಃ ಈಶಸ್ಯ ಆಪತಿತಂ ದುಖಂ ವ್ಯಸ್ಮರತ್ ಹಂತ !

ದುಖಂ ಪರಿಜಿಹೀರ್ಷನ್ ಯಃ = ದುಃಖವನ್ನು ಪರಿಹರಿಸಲು ಇಚ್ಛಿಸುವ ಯಾವ ತಾರ್ಕಿಕನು, ಸುಖಂ ನ ಊರೀಚಿಕೀರ್ಷತಿ = ಸುಖವನ್ನು ಒಪ್ಪಲು ಇಚ್ಛಿಸುವುದಿಲ್ಲವೋ, ಸಃ ಜಡಃ = ಆ ದಡ್ಡನು, ಈಶಸ್ಯ ಆಪತಿತಂ = ಅವನ ಆ ಪರಮೇಶ್ವರನಿಗೆ ಒಪ್ಪಲೇ ಬೇಕಾಗಿ ಬಂದೊದಗಿದ, ದುಃಖಂ ವ್ಯಸ್ಮರತ್ = ದುಃಖವನ್ನು ಮರೆತನು. ಹಂತ = ಆಶ್ಚರ್ಯ! ಅಯ್ಯೋ ಪಾಪ !

(1) ಪರಮೇಶ್ವರನಿಗೆ ದುಃಖವನ್ನು ಪರಿಹರಿಸಲು ಅಪೇಕ್ಷಿಸಿದ ತಾರ್ಕಿಕನು ಸುಖವೆಂದರೆ ದುಃಖಾಭಾವ. ದುಃಖವಿಲ್ಲದಿರುವುದು ಎಂಬ ಬುದ್ಧಿಯಿಂದ ದುಃಖಾಭಾವಕ್ಕಿಂತ ಬೇರೆಯಾದ ಸುಖವನ್ನು ಒಪ್ಪಿಕೊಳ್ಳುವುದಿಲ್ಲ, ಆದರೆ ದಡ್ಡನಾದ ಆ ತಾರ್ಕಿಕನು ಈಶ್ವರನಲ್ಲಿ ಅನಪೇಕ್ಷಿತವಾಗಿ ಬಲಾತ್ಕಾರವಾಗಿ ಬೆನ್ನಿಗೆ ಬಂದು ಬಿದ್ದ ದುಃಖವನ್ನು ಮರೆತನು. ಈತನ ಅವಿವೇಕ ಆಶ್ಚರ್ಯಕರ. ಅಯ್ಯೋ ಪಾಪ! ಏಕೆ? ಈಶ್ವರನೂ ಜೀವನಂತೆ ಚೇತನನಾದುದರಿಂದ ಸುಖದುಃಖವುಳ್ಳವನೆಂದು ಒಪ್ಪಿಕೊಳ್ಳಬೇಕೆಂದು ಹೇಳಿ ಈಶ್ವರನಲ್ಲಿ ಸುಖಾಭಾವವನ್ನು ಮಾತ್ರ ಅಂಗೀಕರಿಸಿದರೆ ದುಃಖವೂ ಬರಲಿಲ್ಲವೇ ? ಏಕೆಂದರೆ ಜೀವನಲ್ಲಿ ಸುಖವಿಲ್ಲದಿದ್ದರೆ ದುಃಖ, ದುಃಖವಿಲ್ಲದಿದ್ದರೆ ಸುಖ ಎಂಬ ನಿಯಮ ಕಂಡಿದೆ. ಆ ದೃಷ್ಟಾಂತದಿಂದ ಈಶ್ವರನಲ್ಲಿ ಸುಖವಿಲ್ಲದಿದ್ದರೆ ದುಃಖವು ಬಂದೊದಗಿತಲ್ಲವೇ ? ಹೀಗೆ ತಾರ್ಕಿಕನ ಯುಕ್ತಿಯು ಅಯುಕ್ತವಾದುದರಿಂದ ವೇದಾನುಸಾರವಾಗಿ ಈಶ್ವರನಲ್ಲಿ ಸುಖವನ್ನು ಒಪ್ಪಿಕೊಳ್ಳಲೇಬೇಕು.

ಪರಿಹರ್ತುಂ ಇಚ್ಛನ್ ಪರಿಜಿಹೀರ್ಷನ್, ಊರೀಕರ್ತುಂ ಇಚ್ಛತಿ ಊರೀಚಿಕೀರ್ಷತಿ.

ಅಷ್ಟೇ ಅಲ್ಲ, ತಾರ್ಕಿಕನ ಯುಕ್ತಿಯಲ್ಲಿ ಅಸಿದ್ಧಿಯೆಂಬ ದೋಷವೂ ಇದೆ —

ಯೋ ದುಃಖಸಮವಾಯೋಽಯಂ ಚೈತ್ರೇ ತೇನ ಹ್ಯಭೇದವಾನ್ ।
ಸಮವಾಯಃ ಕಶ್ಚಿದೀಶೇ ತದನೇಕತ್ವಮನ್ಯಥಾ ॥ ೨೦ ॥

Rarest Archiver

ಚೈತ್ರೇ ಯಃ ಅಯಂ ದುಃಖಸಮವಾಯಃ ತೇನ ಅಭೇದವಾನ್ ಕಶ್ಚಿತ್ ಸಮವಾಯಃ ಈಶೇ ಹಿ ಅನ್ಯಥಾ ತದನೇಕತ್ವಂ (ಸ್ಯಾತ್).

ಚೈತ್ರೇ = ಚೈತ್ರನೆಂಬ ಸಂಸಾರಿಜೀವನಲ್ಲಿ, ಯೋಽಯಂ ದುಃಖ-ಸಮವಾಯಃ = ಯಾವ ಈ ದುಃಖದ ಸಮವಾಯ ಎಂಬ ಸಂಬಂಧ ವಿದೆಯೋ, ತೇನ ಅಭೇದವಾನ್ = ಆ ಸಮವಾಯದಿಂದ (ದೊಡನೆ) ಅಭೇದವುಳ್ಳ (ಭೇದವಿಲ್ಲದ), ಕಶ್ಚಿತ್ ಸಮವಾಯಃ = ಯಾವುದೋ ಒಂದು ಜ್ಞಾನಾದಿಸಮವಾಯಸಂಬಂಧವು, ಈಶೇ ಹಿ = ಈಶ್ವರನಲ್ಲಿ ಇದೆಯಷ್ಟೆ! (ಇದರಿಂದ ಈಶ್ವರನೂ ದುಃಖಸಮವಾಯಸಂಬಂಧವುಳ್ಳವನಾದನು.) ಅನ್ಯಥಾ = ದುಃಖಸಮವಾಯ, ಜ್ಞಾನಸಮವಾಯ ಎಂಬ ಸಂಬಂಧಗಳಿಗೆ ಭೇದವಿದೆಯೆನ್ನುವುದಾದರೆ, ತದನೇಕತ್ವಂ = (ಸ್ಯಾತ್) ಆ ಸಮವಾಯ ಸಂಬಂಧಕ್ಕೆ ಅನೇಕತ್ವವು (ಸಮವಾಯವು ಅನೇಕವೆಂದು) ಆದೀತು.

'ಈಶ್ವರಃ ಸುಖಾದಿರಹಿತಃ ದುಃಖರಹಿತತ್ವತಃ' ಈಶ್ವರನಲ್ಲಿ ದುಃಖ ವಿಲ್ಲದಿರುವುದರಿಂದ ಅವನು ಸುಖರಹಿತನು ಎಂಬ ಅನುಮಾನಕ್ಕೆ ಬಾಧ, ಪ್ರತ್ಯನುಮಾನದಿಂದ ಆಘಾತ ಎಂಬ ದೋಷ ಹೇಳಿದ್ದಾರೆ. ಈಗ ಅಸಿದ್ಧಿ ಯೆಂಬ ದೋಷವನ್ನೂ ಹೇಳುತ್ತಾರೆ — ತಾರ್ಕಿಕರು ಗುಣ ಮತ್ತು ಗುಣ ವುಳ್ಳ ದ್ರವ್ಯಕ್ಕೆ ಸಮವಾಯ ಎಂಬ ಸಂಬಂಧವನ್ನು ಹೇಳುತ್ತಾರೆ. ಈ ಸಮವಾಯಸಂಬಂಧವು ನಿತ್ಯ ಮತ್ತು ಒಂದೇ ಆಗಿದೆ. ಹೀಗಾದರೆ ಚೈತ್ರ ನೆಂಬ ಸಂಸಾರಿಜೀವನಲ್ಲಿರುವ ದುಃಖಸಮವಾಯವೂ, ಈಶ್ವರನಲ್ಲಿರುವ ಜ್ಞಾನಸಮವಾಯವೂ ಒಂದೇ ಆದುದರಿಂದ ಈಶ್ವರನಲ್ಲಿ ದುಃಖಸಮ ವಾಯವು ಬಂದಿತು. ಸಂಬಂಧವಿದ್ದರೆ ಆ ಸಂಬಂಧದಿಂದ ಸಂಬಂಧಿಯೂ ಇದೆಯೆಂದು ಒಪ್ಪಬೇಕಾಗುತ್ತದೆ. ಹೀಗೆ ಸಮವಾಯಸಂಬಂಧದಿಂದ ಈಶ್ವರನಲ್ಲಿ ದುಃಖವೂ ಬರಬೇಕಾಯಿತು. ಆಗ 'ದುಃಖರಹಿತನಾದುದರಿಂದ' ಎಂಬ ಹೇತುವು ಈಶ್ವರನಲ್ಲಿ ಇಲ್ಲದ್ದರಿಂದ ಸ್ವರೂಪಾಸಿದ್ಧಿ ಎಂಬ ದೋಷವು ಬಂದಿತು. ದುಃಖಸಮವಾಯವು ಬೇರೆ ಜ್ಞಾನಸಮವಾಯವು ಬೇರೆ ಎಂದು ಹೇಳಿದರೆ ಸಮವಾಯವನ್ನು ಅನೇಕವೆಂದು ಒಪ್ಪಿದಂತಾಗಿ ಸಮವಾಯವು ಒಂದೇ ಎಂದು ಹೇಳುವ ತಾರ್ಕಿಕರಿಗೆ ಅಪಸಿದ್ಧಾಂತವು ಬರುತ್ತದೆ. (ಅಪ

Rarest Archives

ಸಿದ್ಧಾಂತ = ಪೂರ್ವಾಚಾರ್ಯರು ಒಪ್ಪಿದ್ದಕ್ಕೆ ವಿರುದ್ಧವಾಗಿ ಅಂಗೀಕರಿಸುವುದು.)

ದುಃಖಸ್ಯ ಸಮವಾಯಃ, ಅಭೇದಃ ಅಸ್ಯ ಅಸ್ತೀತಿ, ತಸ್ಯ ಅನೇಕತ್ವಂ ತದನೇಕತ್ವಂ.

ಸಮವಾಯವು ಒಂದೇ ಆದರೂ ಚೈತ್ರ, ಮೈತ್ರ ಈಶ್ವರ ಎಂಬ ಉಪಾಧಿ (ಆಶ್ರಯವಸ್ತು) ಭೇದದಿಂದ ಔಪಾಧಿಕವಾದ (ಸ್ವಾಭಾವಿಕವಲ್ಲದ) ಭೇದವು ಸಮವಾಯದಲ್ಲಿದೆ. ಹೀಗೆ ಜೀವನಲ್ಲಿ ದುಃಖಸಮವಾಯವಿದ್ದರೂ ಈಶ್ವರನಲ್ಲಿರುವ ಜ್ಞಾನಸಮವಾಯವು ಅದಕ್ಕಿಂತ ಭಿನ್ನವಾಗಿದೆ. ಆಗ ಈಶ್ವರನಲ್ಲಿ ದುಃಖಸಮವಾಯವಿಲ್ಲ, ಹಾಗೂ ದುಃಖವಿಲ್ಲವಾದ್ದರಿಂದ ದುಃಖರಹಿತತ್ವ ಎಂಬ ಹೇತುವಿಗೆ ಅಸಿದ್ಧಿ ಇಲ್ಲ ಎಂದರೆ ಉತ್ತರ—

ಔಪಾಧಿಕೋಽಸ್ಯ ಭೇದಶ್ಚೇತ್ ಸತ್ಯೋಽಸತ್ಯಃ ಸ್ವಿದುಚ್ಯತಾಂ ।
ತದ್ದ್ವಯಂ ಚೋಕ್ತದೋಷಂ ಹಿ ಮಾಯಿವನ್ಮಾವದೇತ್ ಪರಂ॥

ಅಸ್ಯ ಔಪಾಧಿಕಃ ಭೇದಃ ಚೇತ್ (ಸಃ) ಸತ್ಯಃ (ಸ್ವಿತ್) ಅಸತ್ಯಃ ಸ್ವಿತ್ ಉಚ್ಯತಾಂ, ತತ್ ದ್ವಯಂ ಚ ಉಕ್ತದೋಷಂ ಹಿ, ಮಾಯಿವತ್ ಪರಂ ಮಾ ವದೇತ್. ॥ ೨೧ ॥

ಅಸ್ಯ = ಈ ಸಮವಾಯಕ್ಕೆ, ಔಪಾಧಿಕಃ ಭೇದಃ ಚೇತ್ = ಉಪಾಧಿಯಿಂದ ಉಂಟಾದ ಭೇದವು ಅಂಗೀಕರಿಸಲ್ಪಟ್ಟರೆ, (ಸಃ = ಆ ಔಪಾಧಿಕ ಭೇದವು), ಸತ್ಯಃ ಸ್ವಿತ್ = ಸತ್ಯವೋ, ಅಸತ್ಯಃ ಸ್ವಿತ್ = ಅಸತ್ಯವೋ, ಉಚ್ಯತಾಂ = ಹೇಳಲ್ಪಡಲಿ, ತದ್ದ್ವಯಂ ಚ = ಆ ಪಕ್ಷಗಳೆರಡೂ, ಉಕ್ತ-ದೋಷಂ ಹಿ = ನಮ್ಮಿಂದ ಹೇಳಲ್ಪಟ್ಟ ದೋಷಗಳುಳ್ಳವೇ, ಮಾಯಿವತ್ = ಮಾಯಾವಾದಿಯಂತೆ (ಅದ್ವೈತಿಯಂತೆ), ಪರಂ = ಸತ್ಯಾಸತ್ಯವಿಲಕ್ಷಣವೆಂಬ ಮತ್ತೊಂದು ಪಕ್ಷವನ್ನು, ಮಾ ವದೇತ್ = ತಾರ್ಕಿಕನು ಹೇಳಕೂಡದು.

ಈ ಸಮವಾಯಸಂಬಂಧಕ್ಕೆ ನೀನು ಹೇಳುವ ಔಪಾಧಿಕಭೇದವು ಸತ್ಯವೋ ಸುಳ್ಳೋ, ಹೇಳಯ್ಯಾ ! ಸತ್ಯವಾದರೆ ಸಮವಾಯವು ಒಂದೇ

Rarest Archiver

ಎಂಬ ನಿನ್ನ ಮತಕ್ಕೆ ವಿರೋಧವು ಬಂತು. ಅಸತ್ಯವಾದರೆ ಈಶ್ವರನಲ್ಲಿ ದುಃಖವು ಇರಬೇಕೆಂದಾಯಿತು. ಹೀಗೆ ಎರಡು ಪಕ್ಷಗಳಲ್ಲಿಯೂ ನಾವು ಹೇಳಿದ ದೋಷವು ಬಂದೇ ಬರುತ್ತದೆ. ಸಮವಾಯವು ಅನೇಕವೆಂದರೆ ಅಪಸಿದ್ಧಾಂತವು, ಒಂದೇ ಅಂದರೆ ಬ್ರಹ್ಮನಲ್ಲಿ ದುಃಖವು ಬರಬೇಕಾಗುತ್ತದೆ. ಅನುಮಾನದಲ್ಲಿ ಅಸಿದ್ಧಿದೋಷವು. ಈ ದೋಷಪರಿಹಾರಕ್ಕಾಗಿ ಅದ್ವೈತಿಯಂತೆ ಸಮವಾಯವು ಸದಸದ್ವಿಲಕ್ಷಣವೆಂದು ತಾರ್ಕಿಕನು ಹೇಳಲು ಸಾಧ್ಯವಿಲ್ಲ. ಆದುದರಿಂದ ಈಶ್ವರನು ದುಃಖಾಭಾವಕ್ಕಿಂತಲೂ ಬೇರೆಯಾದ ಸುಖದಿಂದ ಪೂರ್ಣನು ಎಂದು ಆಚಾರ್ಯರು ಸಾಧಿಸಿದರು.

ಉಪಾಧಿನಾ ಪ್ರಾಪ್ತಃ ಔಪಾಧಿಕಃ, ಉಕ್ತಾಃ ದೋಷಾಃ ಯಸ್ಯ ತತ್, ಮಾಯಿನಾ ತುಲ್ಯಂ ಮಾಯಿವತ್;

ಉಚ್ಯತಾಂ ಉಚ್ಯೇತಾಂ ಉಚ್ಯಂತಾಂ, ಬ್ರೂಞ್ ಧಾತು ಕರ್ಮಣಿ ಲೋಟ್, ವಚ್ ಆದೇಶ. ವದೇತ್ ವದೇತಾಂ ವದೇಯುಃ ಇತ್ಯಾದಿ. ವದ ವ್ಯಕ್ತಾಯಾಂ ವಾಚಿ ಪರ. ವಿಧಿಲಿಙ್.

ಪರಮಾತ್ಮನಲ್ಲಿರುವ ಜ್ಞಾನ ಇಚ್ಛಾ ಪ್ರಯತ್ನಾದಿಗುಣಗಳಿಗೂ ಔಪಾಧಿಕಭೇದವನ್ನು ಹೇಳುವುದು ಸರಿಯಲ್ಲ—

ಬ್ರೂಯುರೌಪಾಧಿಕಂ ಭೇದಂ ಜ್ಞಾನಾದೀನಾಂ ಯದಾತ್ಮನಃ ।
ನೀತ್ಯಾನಯಾ ತನ್ನಿರಾಸಾತ್ ಸ್ಯಾತ್ತಸ್ಯಾನಂತಧರ್ಮತಾ ॥ ೨೨ ॥

ಆತ್ಮನಃ ಜ್ಞಾನಾದೀನಾಂ ಔಪಾಧಿಕಂ ಭೇದಂ ಬ್ರೂಯುಃ ಇತಿ ಯತ್ ಅನಯಾ ನೀತ್ಯಾ ತನ್ನಿರಾಸಾತ್ ತಸ್ಯ ಅನಂತಧರ್ಮತಾ ಸ್ಯಾತ್.

ಆತ್ಮನಃ = ಪರಮಾತ್ಮನ, ಜ್ಞಾನಾದೀನಾಂ = ಜ್ಞಾನ ಮೊದಲಾದ ಗುಣಗಳಿಗೆ, ಔಪಾಧಿಕಂ ಭೇದಂ = ಉಪಾಧಿನಿಮಿತ್ತಕವಾದ ಭೇದವನ್ನು, ಬ್ರೂಯುಃ ಇತಿ ಯತ್ = ತಾರ್ಕಿಕರು ಹೇಳಿಯೇ ತೀರುತ್ತಾರೆ ಎಂಬುದು ಏನಿದೆಯೋ, ಅನಯಾ ನೀತ್ಯಾ = ಸಮವಾಯಕ್ಕೆ ಔಪಾಧಿಕಭೇದವನ್ನು ನಿರಾಕರಿಸುವ ಈ ಯುಕ್ತಿಯಿಂದ, ತನ್ನಿರಾಸಾತ್ = ಪರಮಾತ್ಮನ ಜ್ಞಾನಾದಿಗುಣಗಳಿಗೆ ಔಪಾಧಿಕಭೇದದ ನಿರಾಕರಣೆಯೂ ಆಗುವುದರಿಂದ,

Rarest Archives

ತಸ್ಯ=ಆ ಪರಮಾತ್ಮನಿಗೆ, ಅನಂತಧರ್ಮತಾ ಸ್ಯಾತ್=ಅಪರಿಮಿತಗುಣ ವುಳ್ಳತನವು ಬಂದೇ ಬರುತ್ತದೆ.

ಪರಮಾತ್ಮನ ಜ್ಞಾನಾದಿಗುಣಗಳಿಗೆ ಔಪಾಧಿಕಭೇದವನ್ನು ಹೇಳಿದರೆ ಔಪಾಧಿಕಭೇದವನ್ನು ನಿರಾಕರಿಸುವ ಹಿಂದಿನ ಯುಕ್ತಿಯಿಂದಲೇ ಅಂತಹ ಭೇದವು ನಿರಾಕೃತವಾಗುತ್ತದೆಯೆಂದು ಸಿದ್ಧವಾಯಿತು. ಹೀಗೆ ಪರಮಾತ್ಮ ನಲ್ಲಿ ಅನಂತಗುಣಗಳಿವೆಯೆಂದು ಸಿದ್ಧಿಸುತ್ತದೆ. ಪರಮಾತ್ಮನಲ್ಲಿರುವ ಗುಣಗಳಿಗೆ ಪರಸ್ಪರವಾಗಿಯೂ, ಪರಮಾತ್ಮನಿಗೂ ಆ ಗುಣಗಳಿಗೂ ಪರಸ್ಪರಭೇದವನ್ನು ಅಂಗೀಕರಿಸಬೇಕು. ಆ ಗುಣಗಳಿಗೆ ಉಪಾಧಿನಿಮಿತ್ತ ಭೇದವನ್ನು ಹೇಳಲು ಆಗುವುದಿಲ್ಲ. ಅದನ್ನು ಹಿಂದೆಯೇ ನಿರಾಕರಿಸ ಲಾಗಿದೆ. ಹೀಗೆ ಗುಣಭೇದವು ಸ್ವಾಭಾವಿಕವೆಂದು ಒಪ್ಪಿದಮೇಲೆ ಈಶ್ವರನಿಗೆ ಅನಂತಾನಂತಗುಣಗಳಿವೆಯೆಂದು ಶ್ರುತಿಬಲದಿಂದಲೂ ಒಪ್ಪಬೇಕಾಗುತ್ತದೆ. (ಅನಂತಗುಣಗಳಿಗೂ ಈಶ್ವರನಿಗೂ ಅತ್ಯಂತಾಭೇದವಿದ್ದರೂ ವಿಶೇಷಬಲ ದಿಂದ ಭೇದವ್ಯವಹಾರವೆಂದು ಮುಂದೆ ಹೇಳುತ್ತಾರೆ.)

ಜ್ಞಾನಂ ಆದಿ ಯೇಷಾಂ ತೇ ಜ್ಞಾನಾದಯಃ ತೇಷಾಂ, ಅನಂತಾಃ ಧರ್ಮಾಃ ಯಸ್ಯ ಸಃ ಅನಂತಧರ್ಮಾ (ಧರ್ಮನ್-ನಾಂತ) ತಸ್ಯ ಭಾವಃ.

ಬ್ರೂಯಾತ್ ಬ್ರೂಯಾತಾಂ ಬ್ರೂಯುಃ ಇತ್ಯಾದಿ ಬ್ರೂಞ್ ವ್ಯಕ್ತಾಯಾಂ ವಾಚಿ. ವಿಧಿಲಿಙ್.

ತಂತು – ಪಟಮುಂತಾದ ಅವಯವ - ಅವಯವಿಗಳಿಗೆ, ರೂಪ ಮುಂತಾದ ಗುಣ–ಗುಣವುಳ್ಳದ್ರವ್ಯ ಇವುಗಳಿಗೆ, ಕ್ರಿಯೆ ಮತ್ತು ಕ್ರಿಯೆ ವುಳ್ಳದ್ದಕ್ಕೆ, ಘಟತ್ವಾದಿಜಾತಿ ಮತ್ತು ಜಾತಿಯುಳ್ಳ ಘಟಾದಿವಸ್ತುಗಳಿಗೆ, ತಾರ್ಕಿಕರು ಪರಮಾಣುಮುಂತಾದ ನಿತ್ಯವಸ್ತುಗಳಲ್ಲಿ ಅಂಗೀಕರಿಸಿರುವ ವಿಶೇಷ ಮತ್ತು ನಿತ್ಯದ್ರವ್ಯಗಳಿಗೆ (ಈ ಆಯುತಸಿದ್ಧ ಪಂಚಕಗಳಿಗೆ) ಸಮ ವಾಯ ಎಂಬ ಸಂಬಂಧವಿದೆಯೆಂದು ಒಪ್ಪುತ್ತಾರೆ. ಇದೂ ನಿರಾಕೃತ ವಾಯಿತು —

ಗುಣಾದಿಭೇದೇ ಸಂಬಂಧಮಪೇಕ್ಷ್ಯಾಪ್ಯನವಸ್ಥಿತೇಃ |
ವಿಶೇಷಮಾತ್ರೇಣಾನಂತ್ಯಂ ಗುಣಾನಾಂ ಶೋಭತೇ ವಿಭೋಃ ||

Rarest Archive

ಗುಣಾದಿಭೇದೇ ಸಂಬಂಧಮಪೇಕ್ಷ್ಯಾಪ್ಯನವಸ್ಥಿತೇಃ ವಿಶೇಷಮಾತ್ರೇಣ ವಿಭೋಃ ಗುಣಾನಾಂ ಆನಂತ್ಯಂ ಶೋಭತೇ. || ೨೩ ||

ಗುಣಾದಿಭೇದೇ ಸತಿ = ಗುಣಗುಣಿಗಳಿಗೆ ಭೇದವನ್ನು ಒಪ್ಪಿಕೊಂಡರೆ, ಸಂಬಂಧಂ ಅಪೇಕ್ಷ್ಯಾಪಿ = ಗುಣಗುಣಿಗಳಿಗೂ ಭೇದಕ್ಕೂ ಇರುವ ಸಮವಾಯಸಂಬಂಧವನ್ನು ಅಪೇಕ್ಷಿಸಿಯೂ ಕೂಡ, ಅನವಸ್ಥಿತೇಃ = ಅನವಸ್ಥಾ ಎಂಬ ದೋಷದ, (ಸಂಭವಾತ್ = ಸಂಭವವಿರುವುದರಿಂದ) ವಿಶೇಷಮಾತ್ರೇಣ = ಭೇದವಿಲ್ಲದ ವಸ್ತುವಿನಲ್ಲಿ ಭೇದನಿಮಿತ್ತಕವಾದ ಅನೇಕವ್ಯವಹಾರಗಳಿಗೆ ಕಾರಣವಾದ ವಿಶೇಷದಿಂದಲೇ (ವಿಶೇಷವೆಂಬ ಪದಾರ್ಥವನ್ನು ಒಪ್ಪಿಕೊಳ್ಳುವುದರಿಂದಲೇ) ವಿಭೋಃ = ವ್ಯಾಪ್ತನಾದ ನಾರಾಯಣನ, ಗುಣಾನಾಂ = ಗುಣಗಳಿಗೆ, ಆನಂತ್ಯಂ = ಅಪರಿಮಿತತ್ವವು, ಶೋಭತೇ = ಶೋಭಿಸುತ್ತದೆ.

ಘಟವೆಂಬ ಅವಯವಿಗೆ ಕಾರಣವಾದ ಕಪಾಲವೆಂಬ ಅವಯವಕ್ಕೂ ಘಟಕ್ಕೆ ಉಪಾದಾನ (ಸಮವಾಯಿಕಾರಣ)ವಾದ ಮೃತ್ಪಿಂಡವೆಂಬ ಪೃಥಿವಿಗೂ ಅದರ ಗಂಧಕ್ಕೂ, ಘಟಕ್ಕೆ ಕಾರಣವಾದ ಚಲಿಸುವ ಚಕ್ರವೆಂಬ ನಿಮಿತ್ತಕಾರಣಕ್ಕೂ ಅದರ ಭ್ರಮಣಕ್ಕೂ, ಘಟವೆಂಬ ವ್ಯಕ್ತಿಗೂ ಅದರಲ್ಲಿರುವ ಘಟತ್ವವೆಂಬ ಜಾತಿಗೂ, ಘಟಾದಿಗಳ ಪರಮಾಣುಗಳೆಂಬ ನಿತ್ಯದ್ರವ್ಯಗಳಿಗೂ ಅವುಗಳಿಗೆ ಭೇದವನ್ನುಂಟುಮಾಡುವ ವಿಶೇಷವೆಂಬ ಪದಾರ್ಥಕ್ಕೂ ಸಮವಾಯವೆಂಬ ಸಂಬಂಧವನ್ನು ತಾರ್ಕಿಕರು ಒಪ್ಪಿಕೊಳ್ಳುತ್ತಾರೆ. ಇದರಿಂದ ಗುಣಗುಣಿಗಳಿಗೆ ಭೇದವಿದೆಯೆಂದು ಹೇಳಿದಂತಾಗುವುದು. ಇದನ್ನು ಈಗ ಖಂಡಿಸುತ್ತಾರೆ. ಗುಣಗುಣಿಗಳಿಗೆ ಭೇದವನ್ನು ಒಪ್ಪಿಕೊಂಡರೆ ಆ ಗುಣಗುಣಿಗಳಿಗೂ ಭೇದಕ್ಕೂ ಭೇದವಿರುವುದರಿಂದ ಪರಸ್ಪರಸಂಬಂಧವನ್ನು ಹೇಳಬೇಕಾಗುತ್ತದೆ. ಹೀಗೆಯೇ ಮುಂದುವರಿಯುತ್ತಾ ಇರುವುದರಿಂದ ಅನವಸ್ಥಾ ಎಂಬ ದೋಷವು ಬರುತ್ತದೆ. ಆದುದರಿಂದ ಭೇದವನ್ನು ಒಪ್ಪಿಕೊಳ್ಳಬಾರದು. ಗುಣಗುಣಿಗಳು ಭಿನ್ನವಾಗಿವೆ ಎಂಬಲ್ಲಿ ಗುಣಗುಣಿಗಳು ವಿಶೇಷ್ಯ, ಭೇದವು ವಿಶೇಷಣ ಇವುಗಳಿಗೆ ಪರಸ್ಪರ ಭೇದವನ್ನು ಅಂಗೀಕರಿಸಬೇಕು. ಭೇದವನ್ನು ಅಂಗೀಕರಿಸದಿದ್ದರೆ ವಿಶೇಷ್ಯ

Rarest Archives

ವಿಶೇಷಣಭಾವವು ಕೂಡುವುದಿಲ್ಲ. ಆ ಭೇದಕ್ಕೂ ಗುಣಗುಣಿಗಳಿಗೂ ಭೇದವಿದೆ ಎಂಬ ರೀತಿಯಿಂದ ಅನವಸ್ಥಾದೋಷವು ಸಂಭವಿಸುತ್ತದೆ. ಹಾಗಾದರೆ ದ್ವೈತಿಗಳಾದ ನಿಮ್ಮ ಮತದಲ್ಲಿಯೂ ಗುಣಗುಣಿಗಳಿಗೆ ಭೇದವನ್ನು ಒಪ್ಪಿಕೊಳ್ಳಬೇಕು. ಒಪ್ಪಿಕೊಳ್ಳದಿದ್ದರೆ ಈಶ್ವರನು ಗುಣವುಳ್ಳವನಾಗಲಾರನು ಮತ್ತು ಗುಣಗಳಿಗೆ ಪರಸ್ಪರಭೇದವಿಲ್ಲವೆಂದರೆ ಈಶ್ವರನು ಅನಂತಗುಣಗಳುಳ್ಳವನು ಎಂಬುದೂ ಸರಿಹೊಂದುವುದಿಲ್ಲ. ಹೀಗೆ ಭೇದವನ್ನು ಒಪ್ಪಿಕೊಂಡರೆ ನಿಮ್ಮ ಮತದಲ್ಲಿಯೂ ಅನವಸ್ಥಾದೋಷವು ಸಂಭವಿಸುತ್ತದೆ ಎಂಬ ಆಕ್ಷೇಪಕ್ಕೆ ನಮ್ಮ ಉತ್ತರ :—ನಾವು ಭೇದವನ್ನು ಒಪ್ಪಿಕೊಳ್ಳುವುದಿಲ್ಲ. ಅದಕ್ಕೆ ಬದಲಾಗಿ ವಸ್ತುವಿನಲ್ಲಿ ಭೇದನಿಮಿತ್ತಕವಾದ ಅನೇಕ ವ್ಯವಹಾರಗಳಿಗೆ ಕಾರಣವಾದ ವಿಶೇಷವನ್ನು ಒಪ್ಪಿಕೊಳ್ಳುತ್ತೇವೆ. ಆದರಿಂದ ವ್ಯಾಪ್ತನಾದ ವಿಷ್ಣುವಿನ ಗುಣಗಳು ಅನಂತವೆಂದೂ, ಅವನು ಅನಂತ ಗುಣವುಳ್ಳವನೆಂದೂ, ಆನಂದಾದಿಗಳು ಗುಣಗಳು ಈಶ್ವರನು ಗುಣಗಳುಳ್ಳವನೆಂದೂ, ಆನಂದಾದಿಗಳು ಭೋಗ್ಯಗಳೆಂದೂ ಈಶ್ವರನು ಸ್ವಾಭಿನ್ನವಾದ ಆನಂದಾದಿಗಳಿಗೆ ಭೋಕ್ತಾ ಎಂದೂ ವಿಶೇಷಬಲದಿಂದ ಹೊಂದುತ್ತದೆ.

ಗುಣಃ ಆದಿಃ ಯೇಷಾಂ ತೇ ಗುಣಾದಯಃ ತೇಷಾಂ ಭೇದಃ ತಸ್ಮಿನ್, ಅವಸ್ಥಿತೇಃ ಅಭಾವಃ ಅನವಸ್ಥಿತಿಃ ತಸ್ಯಾಃ, ವಿಶೇಷಾ ಏವ ವಿಶೇಷಮಾತ್ರಂ ತೇನ. ಅನಂತಾನಾಂ ಭಾವಃ ಆನಂತ್ಯಂ.

ಶೋಭತೇ ಶೋಭೇತೇ ಶೋಭಂತೇ ಇತ್ಯಾದಿ ಶುಭ – ದೀಪ್ತೌ, ಆತ್ಮನೇಪದೀ.

ಪ್ರಚ್ಛನ್ನಶೂನ್ಯವಾದಿಗಳಾದ ಮಾಯಾವಾದಿಗಳೂ ಪರಮೇಶ್ವರನು ಅನಂತಗುಣಗಳುಳ್ಳವನು ಎಂದು ಒಪ್ಪುವುದಿಲ್ಲ ಎಂದು ಸಾಧಿಸಲು ಶೂನ್ಯವಾದಿಗಳು ಮತ್ತು ಮಾಯಾವಾದಿಗಳು ಇವರುಗಳ ತೋರಿಕೆಯ ವ್ಯತ್ಯಾಸವನ್ನು ತಿಳಿಸುತ್ತಾರೆ —

ಮನ್ಯಂತೇ ಶೂನ್ಯಮೇವಾನ್ಯೇ ತತ್ಸಮಾಗಮನ್ಯೈರಿಣಃ ।
ಮತಾ ಮಾಧ್ಯಮಿಕಾಸ್ತೇಽಪಿ ವ್ಯಕ್ತಾಶ್ಛನ್ನಾ ಇತಿ ದ್ವಯೇ ॥ ೨೪ ॥

Rarest Archiver

ಅನ್ಯೇ ಆಗಮವೈರಿಣಃ ಮಾಧ್ಯಮಿಕಾಃ ಶೂನ್ಯಂ ಏವ ತತ್ತ್ವಂ ಮನ್ಯಂತೇ, ತೇಽಪಿ ವ್ಯಕ್ತಾಃ ಛನ್ನಾಃ ಇತಿ ದ್ವಯೇ ಮತಾಃ.

ಅನ್ಯೇ=ತಾರ್ಕಿಕಭಿನ್ನರಾದ, ಆಗಮವೈರಿಣಃ ಮಾಧ್ಯಮಿಕಾಃ= ವೇದಪ್ರಾಮಾಣ್ಯವನ್ನು ಒಪ್ಪದಿರುವ ಮಾಧ್ಯಮಿಕಬೌದ್ಧರು, ಶೂನ್ಯಮೇವ=ಶೂನ್ಯವನ್ನೇ, ತತ್ತ್ವಂ ಮನ್ಯಂತೇ=ತತ್ತ್ವವನ್ನಾಗಿ ತಿಳಿಯುತ್ತಾರೆ. ತೇಽಪಿ=ಅವರೂ ಕೂಡ, ವ್ಯಕ್ತಾಃ=ಪ್ರಕಟಬೌದ್ಧರು, ಛನ್ನಾಃ=ಗುಪ್ತಬೌದ್ಧರು, ಇತಿ ದ್ವಯೇ ಮತಾಃ=ಹೀಗೆಂದು ಎರಡು ವಿಧವಾಗಿ ತಿಳಿಯಲ್ಪಟ್ಟಿದ್ದಾರೆ.

ತಾರ್ಕಿಕರಿಂದ ಭಿನ್ನರಾದ ವೇದಾದಿಸಚ್ಛಾಸ್ತ್ರಗಳಿಗೆ ವಿರೋಧಿಗಳಾದ ಬೌದ್ಧರು ಶೂನ್ಯವೇ ತತ್ತ್ವವೆಂದು ತಿಳಿಯುತ್ತಾರೆ. ಅವರಲ್ಲಿ ಪ್ರಕಟ ಬೌದ್ಧರು, ಪ್ರಚ್ಛನ್ನಬೌದ್ಧರು ಎಂದು ಎರಡುವಿಧ. ಪ್ರಚ್ಛನ್ನಬೌದ್ಧರೇ ಮಾಯಾವಾದಿಗಳು.

ಆಗಮಸ್ಯ ವೈರಿಣಃ, ದ್ವಯಃ ದ್ವಯೇ, ದ್ವಯಾಃ ಇತ್ಯಾದಿ, ದ್ವಿವಚನ ರಹಿತವಾದ ರೂಪಗಳು ರಾಮಶಬ್ದದಂತೆ, ಪ್ರಥಮಚರಮತಯ.... ಎಂಬ ಸೂತ್ರದಲ್ಲಿ (1-1-33) ತಯಪ್‌ಪ್ರತ್ಯಯವನ್ನು ತೆಗೆದುಕೊಂಡಿರುವುದರಿಂದ ಆ ತಯಪ್‌ಪ್ರತ್ಯಯಕ್ಕೆ 'ದ್ವಿತ್ರಿಭ್ಯಾಂ ತಯಸ್ಯ ಅಯಜ್ವಾ (5--2-43) ಎಂಬ ಸೂತ್ರದಿಂದ ಅಯಚ್ ಆದೇಶವು ಬಂದಿರುವುದರಿಂದ ದ್ವಿತಯೇ ದ್ವಿತಯಾಃ ಎಂಬಂತೆ ಇಲ್ಲಿಯೂ ಎರಡು ರೂಪಗಳು.

ಮನ್ಯತೇ ಮನ್ಯೇತೇ ಮನ್ಯಂತೇ ಇತ್ಯಾದಿ ಮನ-ಜ್ಞಾನೇ ಆತ್ಮ-ಲಟ್.

ಬ್ರಹ್ಮವಾದಿಗಳಾದ ಮಾಯಾವಾದಿಗಳು ಹೇಗೆ ಶೂನ್ಯವಾದಿಗಳಾಗುತ್ತಾರೆ ? ವೇದಾಂತಿಗಳಾದ ಅವರು ವೇದವಿರೋಧಿಗಳು ಹೇಗಾಗುತ್ತಾರೆ? ಇದಕ್ಕೆ ಉತ್ತರ —

ಶೂನ್ಯಂ ಬ್ರಹ್ಮಾಹ್ವಯೇನಾಹುಃ ಸ್ವಾಂಶ್ಚ ವೇದಾಂತಿನೋಽಭ್ಯಧುಃ ।
ಅತತ್ತ್ವಾವೇದಕಂ ವೇದಂ ವದಂತಶ್ಚರಮೋ ಖಲಾಃ ॥ ೨೫ ॥

Rarest Archiver

ವೇದಂ ಅತತ್ತ್ವಾವೇದಕಂ ವದಂತಃ ಚರಮೇ ಖಲಾಃ ಶೂನ್ಯಂ ಬ್ರಹ್ಮಾಹ್ವಯೇನ ಆಹುಃ ಸ್ವಾನ್ ಚ ವೇದಾಂತಿನಃ ಅಭ್ಯಧುಃ.

ವೇದಂ = ಮಂತ್ರ-ಬ್ರಾಹ್ಮಣ-ಉಪನಿಷದ್ರೂಪವಾದ ವೇದವನ್ನು, ಅತತ್ತ್ವಾವೇದಕಂ = ಬ್ರಹ್ಮವ್ಯತಿರಿಕ್ತವಾದ ಯಾಗಾದಿಕರ್ಮ (ಪ್ರಪಂಚ) ವನ್ನು ತಿಳಿಸತಕ್ಕದ್ದನ್ನಾಗಿ (ಬ್ರಹ್ಮತತ್ತ್ವವನ್ನು ತಿಳಿಸುವುದು ಅಲ್ಲವೆಂಬುದಾಗಿ, ಅಪ್ರಮಾಣವನ್ನಾಗಿ), ವದಂತಃ = ಹೇಳುತ್ತಿರುವ, ಚರಮೇ = ಕೊನೆಯವ ರಾದ, ಖಲಾಃ = ದುಷ್ಟರಾದ ಮಾಯಾವಾದಿಗಳು, ಶೂನ್ಯಂ = ಬೌದ್ಧರು ಹೇಳುವ ಶೂನ್ಯವನ್ನು, ಬ್ರಹ್ಮಾಹ್ವಯೇನ = ಬ್ರಹ್ಮವೆಂಬ ಹೆಸರಿನಿಂದ, ಆಹುಃ = ಹೇಳುತ್ತಾರೆ. ಸ್ವಾನ್ ಚ = ತಮ್ಮನ್ನೂ, ವೇದಾಂತಿನಃ = ವೇದಾಂತಿಗಳನ್ನಾಗಿ, ಅಭ್ಯಧುಃ = ಹೇಳಿಕೊಂಡಿದ್ದಾರೆ.

ಈಗ ಬ್ರಹ್ಮವನ್ನು ಒಪ್ಪಿಕೊಂಡಿರುವ ಮಾಯಾವಾದಿಗಳು ಶೂನ್ಯ ವಾದಿಗಳೆಂದೂ ವೇದದ್ವೇಷಿಗಳೆಂದೂ ಸಮರ್ಥಿಸುತ್ತಾರೆ. ವೇದವು ಮಂತ್ರ ಬ್ರಾಹ್ಮಣ - ಆರಣ್ಯಕೋಪನಿಷತ್ ಎಂದು ಮೂರು ವಿಧವಾಗಿದೆ. (ಬ್ರಹ್ಮವು ಒಂದೇ ತತ್ತ್ವ, ಉಳಿದೆದುಲ್ಲವೂ ಅತತ್ತ್ವ). ಮಂತ್ರ-ಬ್ರಾಹ್ಮಣ ಗಳು, ಮಿಥ್ಯೆಯಾಗಿರುವ ಕರ್ಮ ಮತ್ತು ಇತರ ಪ್ರಪಂಚವನ್ನು ಹೇಳು ವುದರಿಂದ ತತ್ತ್ವಪ್ರತಿಪಾದಕಗಳಲ್ಲ ಅಂದರೆ ಸತ್ಯವಸ್ತುವನ್ನು (ಬ್ರಹ್ಮವನ್ನು) ಬೋಧಿಸುವುದಿಲ್ಲ. ಆದುದರಿಂದ ಆ ವೇದಭಾಗವು ಅಪ್ರಮಾಣವಾಯಿತು. ಉಪನಿಷತ್ತು ಮಾತ್ರ ಪರತತ್ತ್ವ (ಬ್ರಹ್ಮ) ಬೋಧಕವಾಗಿದೆ. ಆ ಪರತತ್ತ್ವ ವಾದ ಬ್ರಹ್ಮವೂ ಶೂನ್ಯರೂಪವೇ ಆಗಿರುವುದರಿಂದ ಹಿಂದೆ ಹೇಳಿದ ಪ್ರಕಟ, ಮತ್ತು ಪ್ರಚ್ಛನ್ನ ಎಂಬ ಎರಡು ವಿಧ ಬೌದ್ಧರಲ್ಲಿ ಕೊನೆಯವರಾದ ಅಂದರೆ ಪ್ರಚ್ಛನ್ನಬೌದ್ಧರೇ ಆದ ಈ ಮಾಯಾವಾದಿಗಳು ದುಷ್ಟರು. ಅವರು ವೇದತಾತ್ಪರ್ಯವಿಷಯವಲ್ಲದ ಶೂನ್ಯವನ್ನೇ ಬ್ರಹ್ಮವೆಂದು ಹೇಳುವುದರಿಂದ ವೇದದ್ವೇಷಿಗಳೂ ಆದರು. ಶೂನ್ಯವಾದಿಗಳು ನಿರಾಕಾರ, ನಿರ್ವಿಶೇಷವಾದ ಶೂನ್ಯವನ್ನು ಪರತತ್ತ್ವವೆಂದು ಹೇಳುತ್ತಾರೆ. ಮಾಯಾವಾದಿಗಳು ಶೂನ್ಯ ಕ್ಕಿಂತ ಯಾವ ವಿಶೇಷವೂ ಇಲ್ಲದಿರುವ ಪರತತ್ತ್ವವನ್ನು ಬ್ರಹ್ಮವೆಂದು ಹೇಳುತ್ತಾರೆ. ಹೀಗೆ ನಾಮವ್ಯತ್ಯಾಸವೇ ಹೊರತು ವಸ್ತುವಿನಲ್ಲಿ ಇಬ್ಬರಿಗೂ

Rarest Archiver

ವ್ಯತ್ಯಾಸವಿಲ್ಲ. ಹಾಗಿದ್ದರೂ ತಮ್ಮನ್ನು ವೇದಾಂತಿಗಳೆಂದು ಪ್ರಚ್ಛನ್ನ ಬೌದ್ಧರಾದ ಮಾಯಾವಾದಿಗಳು ಘೋಷಿಸಿಕೊಳ್ಳುತ್ತಾರೆ.

ಬ್ರಹ್ಮ ಇತಿ ಆಹ್ವಯಃ ಬ್ರಹ್ಮಾಹ್ವಯಃ ತೇನ, ಅಥಾಹ್ವಯಃ| ಆಖ್ಯಾಹ್ವೇ ಅಭಿಧಾನಂಚ—**ಅಮರ**. ವೇದಾಂತಃ ಏಷಾಂ ಅಸ್ತೀತಿ ತಾನ್, ತತ್ವಂ ಆವೇದಯತೀತಿ ತತ್ವಾವೇದಕಃ, ನ ತತ್ವಾವೇದಕಃ ತಂ.

ಚರಮಃ ಚರಮೌ ಚರಮೇ ಚರಮಾಃ ಮುಂದೆ ರಾಮಶಬ್ದದಂತೆ– ಅಭಿ+ ಅಧುಃ, ಅಧಾತ್ ಅಧಾತಾಂ ಅಧುಃ ಧಾ—ಧಾತು ಲುಙ್.

ಹೀಗೆ ಶೂನ್ಯವಾದಿಗಳಿಗೂ ಮಾಯಾವಾದಿಗಳಿಗೂ ಪರತತ್ವವಿಷಯ ದಲ್ಲಿ ವಿವಾದವಿರಲು ಸಾಧ್ಯವಿಲ್ಲ ಎಂದು ಸಮರ್ಥಿಸಿ ಅಪರತತ್ವವಿಷಯ ದಲ್ಲಿಯೂ ವಿವಾದವಿಲ್ಲವೆಂದು ಹೇಳುತ್ತಾರೆ—

ಪರತತ್ವವಿವರ್ತತ್ವಾದಪರಸ್ಯಾಖಿಲಸ್ಯ ಚ |
ಅವಿಶೇಷತ್ವತಶ್ಚಾಸ್ಯ ನಾಂತರಂತರಮೇತಯೋಃ || ೨೬ ||

ಅಖಿಲಸ್ಯ ಅಪರಸ್ಯ ಚ ಪರತತ್ವವಿವರ್ತತ್ವಾತ್ ಅಸ್ಯ ಅವಿಶೇಷ- ತ್ವತಶ್ಚ ಏತಯೋಃ ಅಂತಃ ಅಂತರಂ ನ (ಅಸ್ತಿ).

ಅಖಿಲಸ್ಯ ಅಪರಸ್ಯ ಚ = ಎಲ್ಲಾ ಭೂಮಿ, ಪರ್ವತ, ಜಲ ಮುಂತಾದ ಪ್ರಪಂಚವೆಂಬ ಅಪರತತ್ವಕ್ಕೆ, ಪರತತ್ವವಿವರ್ತತ್ವಾತ್ = ಬ್ರಹ್ಮವೆಂಬ ಪರತತ್ವದ ಅಪಾರಮಾರ್ಥಿಕವಾದ ಅನ್ಯಥಾಭಾವವೆಂಬ ವಿವರ್ತಸ್ವರೂಪವಿರುವುದರಿಂದ (ಪರತತ್ವವಾದ ಬ್ರಹ್ಮದಲ್ಲಿ ಮಿಥ್ಯಾ ಭೂತವಾಗಿ ಕಾಣಿಸುವುದರಿಂದ), ಅಸ್ಯ = ಈ ಬ್ರಹ್ಮನಿಗೆ, ಅವಿಶೇಷತ್ವತಶ್ಚ = (ಶೂನ್ಯಕ್ಕಿಂತ) ವಿಶೇಷವಿಲ್ಲದಿರುವುದರಿಂದಲೂ, ಏತಯೋಃ ಅಂತಃ = ಈ ಎರಡು ಸಿದ್ಧಾಂತಗಳ ಮಧ್ಯದಲ್ಲಿ, ಅಂತರಂ ನ (ಅಸ್ತಿ) = ವ್ಯತ್ಯಾಸ ವಿಲ್ಲ.

ಸಮಸ್ತವಾದ ಬ್ರಹ್ಮಾತಿರಿಕ್ತಪ್ರಪಂಚಕ್ಕೆ ಬ್ರಹ್ಮವೇ ವಿವರ್ತೋ- ಪಾದಾನಕಾರಣವು. ಕಪ್ಪೆಚಿಪ್ಪು ಇದು ಬೆಳ್ಳಿಯೆಂಬ ಭ್ರಾಂತಿಗೆ ಹೇಗೆ ವಿವರ್ತೋಪಾದಾನಕಾರಣವಾಗುತ್ತದೆಯೋ, (ಕಪ್ಪೆಚಿಪ್ಪು ಬೆಳ್ಳಿಯೆಂದು

Rarest Archiver

ಹೇಗೆ ತೋರುತ್ತದೆಯೋ) ಹಾಗೆ ಪರಬ್ರಹ್ಮನೇ ಪ್ರಪಂಚವೆಂಬ ಭ್ರಾಂತಿಗೆ ವಿಷಯನಾಗುತ್ತಾನೆ. ಮಿಥ್ಯೆಯಾಗಿರುವ ಅನ್ಯಥಾಪ್ರತೀತಿಗೆ ಕಾರಣವಾದುದನ್ನೇ ವಿವರ್ತೋಪಾದಾನವೆಂದು ಕರೆಯುತ್ತಾರೆ. ಶೂನ್ಯವಾದಿಗಳು ಶೂನ್ಯವೇ ಪ್ರಪಂಚದ ರೂಪದಿಂದ ತೋರುತ್ತದೆ, ಎನ್ನುತ್ತಾರೆ. ಮಾಯಾವಾದಿಗಳು ಬ್ರಹ್ಮವು ಪ್ರಪಂಚರೂಪದಿಂದ ತೋರುತ್ತದೆ ಎನ್ನುತ್ತಾರೆ. ಶೂನ್ಯಕ್ಕೂ ಮಾಯಾವಾದಿಯ ಪರಬ್ರಹ್ಮಕ್ಕೂ ವಿಶೇಷವಿಲ್ಲದ್ದರಿಂದ ಈ ಎರಡು ಮತಗಳಿಗೂ ಭೇದವಿಲ್ಲ.

ಪರಂ ಚ ತತ್ ತತ್ತ್ವಂ ಚ ಪರತತ್ತ್ವಂ, ತಸ್ಯ ವಿವರ್ತಃ, ಪರತತ್ತ್ವವಿವರ್ತಸ್ಯ ಭಾವಃ ಪರತತ್ತ್ವವಿವರ್ತತ್ವಂ ತಸ್ಮಾತ್, ನ ವಿದ್ಯತೇ ವಿಶೇಷಃ ಯಸ್ಯ ತತ್ ಅವಿಶೇಷಂ, ತಸ್ಯ ಭಾವಃ ಅವಿಶೇಷತ್ವಂ, ತಸ್ಮಾತ್ ;

ಹೀಗೆ ಅನುವಾದ ಮಾಡಿ ಆ ಎರಡು ಮತಗಳನ್ನು ಆಚಾರ್ಯರು ಈ ಕ್ರಮದಿಂದ ನಿರಾಕರಿಸಿದರು —

ಅಖಂಡಖಂಡನನ್ಯಾಯಾನಖಂಡಮಪಿ ಖಂಡಯನ್ ।
ಅಖಂಡಯದಖಂಡಜ್ಞೋ ದ್ವಯಾಂಶ್ಚಾಖಂಡಲದ್ವಿಷಃ ॥ ೨೭ ॥

ಅಖಂಡಖಂಡನನ್ಯಾಯಾನ್ ಅಖಂಡಮಪಿ ಖಂಡಯನ್ ಅಖಂಡಜ್ಞಃ ದ್ವಯಾಂಶ್ಚ ಆಖಂಡಲದ್ವಿಷಃ ಅಖಂಡಯತ್.

ಅಖಂಡಖಂಡನನ್ಯಾಯಾನ್ = ಸತ್ಸಿದ್ಧಾಂತಖಂಡನಕ್ಕೆ ಉಪಯೋಗಿಸಿರುವ ಎಲ್ಲಾ ನ್ಯಾಯಗಳನ್ನೂ, ಅಖಂಡಂ ಅಪಿ = ನಿರ್ವಿಶೇಷವಾದ ಮಾಯಿ ಮತ್ತು ಬೌದ್ಧರ ಪರತತ್ತ್ವವನ್ನೂ, ಖಂಡಯನ್ = ಖಂಡಿಸುತ್ತಿರುವ, ಅಖಂಡಜ್ಞಃ = ಎಲ್ಲವನ್ನೂ ಬಲ್ಲ ಶ್ರೀಮಧ್ವಾಚಾರ್ಯರು, ದ್ವಯಾನ್ = ಎರಡು ವಿಧರಾದ, ಆಖಂಡಲದ್ವಿಷಃ = ಇಂದ್ರಶತ್ರುಗಳಾದ (ಬೌದ್ಧ ಮತ್ತು ಮಾಯಾವಾದಿಗಳೆಂಬ) ಅಸುರರನ್ನು, ಅಖಂಡಯತ್ = ನಿರಾಕರಿಸಿದರು.

ಶ್ರೀಪೂರ್ಣಪ್ರಜ್ಞರು ಬೌದ್ಧರು ಮತ್ತು ಮಾಯಾವಾದಿಗಳು ಸತ್ಸಿದ್ಧಾಂತವನ್ನು ಖಂಡಿಸಲು ಪ್ರಯೋಗಿಸುತ್ತಿದ್ದ ನ್ಯಾಯಗಳನ್ನು ಖಂಡಿ

Rarest Archiver

ಸಿದರು. ಪರತತ್ವವು ವಿಶೇಷವಿಲ್ಲದುದು (ಶೂನ್ಯ ಬ್ರಹ್ಮಗಳೆರಡೂ ನಿರ್ವಿಶೇಷಗಳು) ಅವುಗಳು ಭಿನ್ನ ಎಂಬ ವಿಷಯದಲ್ಲಿ ಪ್ರಮಾಣವಿಲ್ಲವೆಂದೂ ನಿರೂಪಿಸಿ, ಇಂದ್ರಶತ್ರುಗಳಾದ ಅಸುರರಂತಿರುವ ಬೌದ್ಧರು ಮತ್ತು ಮಾಯಾವಾದಿಗಳನ್ನೂ ಖಂಡಿಸಿದರು.

ಖಂಡನಸ್ಯ ನ್ಯಾಯಾಃ, ಅಖಂಡಾಶ್ಚ ತೇ ಖಂಡನನ್ಯಾಯಾಶ್ಚ, ತಾನ್; ಅಖಂಡಂ ಜಾನಾತೀತಿ ಅಖಂಡಜ್ಞಃ, ಅಖಂಡಲಸ್ಯ ದ್ವಿಷಃ ತಾನ್.

ಶೂನ್ಯವಾದಿಮತನಿರಾಕರಣ —

ವಿಮತಂ ಕಾರಣಂ ನ ಸ್ಯಾದಸತ್ತ್ವಾನ್ನ ಯದೀದೃಶಂ ।
ನೇದೃಶಂ ತದ್ಯಥಾ ಕುಂಭಕರ್ತೇತ್ಯತ್ರಾನುಮೀಯತೇ ॥ ೨೮ ॥

ಅಂಘೋ (ಅಹೋ) ತಾಪಸ ನೋ ಶೂನ್ಯಂ
ಕಾರಣಂ ಕುಂಭಕರ್ತೃವತ್ ।
ಯತ್ಸಂವೃತ್ಯುತ್ಥಿತಂ ವಿಶ್ವಂ ತತ್ಕಾರಣಮಿತೀರ್ಯತೇ ॥ ೨೯ ॥

ಅಂಘೋ! (ಅಹೋ) ತಾಪಸ! ವಿಮತಂ ಅಸತ್ತ್ವಾತ್ ಕಾರಣಂ ನ ಸ್ಯಾತ್, ಯತ್ ಈದೃಶಂ ನ, ತತ್ ಈದೃಶಂ ನ, ಕುಂಭಕರ್ತಾ ಯಥಾ, ಇತಿ ಅತ್ರ ಅನುಮೀಯತೇ. (ಬೌದ್ಧಃ ಶಂಕತೇ) ಶೂನ್ಯಂ ಕುಂಭ-ಕರ್ತೃವತ್ ಕಾರಣಂ ನೋ. ವಿಶ್ವಂ ಯತ್ಸಂವೃತ್ಯುತ್ಥಿತಂ ತತ್ ಕಾರಣಂ ಇತಿ ಈರ್ಯತೇ.

ಅಂಘೋ (ಅಹೋ) ತಾಪಸ! = ಎಲೈ ಬೌದ್ಧಭಿಕ್ಷುವೇ! ವಿಮತಂ = ವಿವಾದವಿಷಯವಾದ ಶೂನ್ಯವು, ಅಸತ್ತ್ವಾತ್ = ಇರುವ ಪದಾರ್ಥವು ಅಲ್ಲದಿರುವುದರಿಂದ, ಕಾರಣಂ ನ ಸ್ಯಾತ್ = ಜಗತ್ತಿಗೆ ಕಾರಣವಾಗಲಾರದು. ಯತ್ ಈದೃಶಂ ನ = ಯಾವುದು ಕಾರಣವಲ್ಲವೆಂದಲ್ಲವೋ, ತತ್ ಈದೃಶಂ ನ = ಅದು ಅಸತ್ ಅಲ್ಲ. ಇತಿ = ಹೀಗೆಂದು, ಅತ್ರ ಅನುಮೀಯತೇ = ಈ ವಿಷಯದಲ್ಲಿ ಸರಿಯಾಗಿ ಊಹಿಸಲ್ಪಡುತ್ತದೆ. (ಬೌದ್ಧಃ ಶಂಕತೇ = ಈ ವಿಷಯದಲ್ಲಿ ಬೌದ್ಧನು ಆಕ್ಷೇಪಿಸುತ್ತಾನೆ—) ಅಂಘೋ ತಾಪಸ! = ಎಲೈ ವೇದಾಂತಿಮುನಿಯೇ! ಶೂನ್ಯಂ = ಶೂನ್ಯವು, ಕುಂಭಕರ್ತೃವತ್ =

Rarest Archiver

ಕುಂಬಾರನಂತೆ, ಕಾರಣಂ ನೋ = ಕಾರಣವಲ್ಲ. ವಿಶ್ವಂ ಯತ್ ಸಂವೃತ್ಯು- ತ್ಥಿತಂ = ಪ್ರಪಂಚವು ಯಾವ ಶೂನ್ಯದ ಅಜ್ಞಾನದಿಂದ ಉಂಟಾಗಿದೆಯೋ, ತತ್ = ಅದು, ಕಾರಣಂ ಇತಿ ಈರ್ಯತೇ = ಕಾರಣವೆಂದು ಹೇಳಲ್ಪಡು ತ್ತದೆ.

ಎಲೈ ಬೌದ್ಧಮುನಿಯೇ! ನೀನು ಜಗತ್ತಿಗೆ ಕಾರಣವೆಂದು ಹೇಳುವ, ನಾವು ಕಾರಣವಲ್ಲವೆಂದು ಹೇಳುವ ವಿವಾದಾಸ್ಪದವಾದ ಶೂನ್ಯವು ವಾಸ್ತವ ವಾಗಿ ಜಗತ್ತಿಗೆ ಕಾರಣವಲ್ಲ. ಏಕೆಂದರೆ ಈ ಶೂನ್ಯವು 'ಅಸತ್' ಇರುವ ವಸ್ತುವೇ ಅಲ್ಲ, ಅಂದರೆ ನೀನು ಕಾರಣವೆಂದು ಹೇಳುವ ವಸ್ತುವು ತಾನೇ ಇಲ್ಲದಿದ್ದಮೇಲೆ ಈ ಕಾಣಿಸುತ್ತಿರುವ ಪ್ರಪಂಚಕ್ಕೆ ಹೇಗೆ ಕಾರಣವಾದೀತು? ಲೋಕದಲ್ಲಿ ಯಾವುದು ಕಾರಣವಾಗಿರುತ್ತದೆಯೋ ಅದು ಅಸತ್ ಇಲ್ಲದಿರುವುದು ಆಗುವುದಿಲ್ಲ. ಪರಂತು ಅದು ಇರುವ ವಸ್ತುವೇ ಆಗಿರಬೇಕು. ಕುಂಬಾರನು ಮಡಿಕೆಗೆ ಕಾರಣನು, ಅವನು ಇರತಕ್ಕವನೇ ಆಗಿದ್ದಾನೆ. ಈ ಅನುಮಾನಪ್ರಮಾಣದಿಂದ ಶೂನ್ಯವೇ ಜಗತ್ತಿಗೆ ಕಾರಣವೆಂಬ ವಿಷಯವನ್ನು ನಿರಾಕರಿಸುತ್ತೇವೆ. ಸತ್ = ಮಡಿಕೆ ಮುಂತಾದ ಇರತಕ್ಕ ವಸ್ತು. ಅಸತ್ ಎಂದರೆ ಬೆಕ್ಕಿನ ಕೋಡು, ಮೊಲದ ಕೋಡು ಇವುಗಳಂತೆ ಸರ್ವಥಾ ಇಲ್ಲ ದಿರುವುದು. 'ವಿಮತಂ ಶೂನ್ಯಂ ಕಾರಣಂ ನ ಭವತಿ ಅಸತ್ತ್ವಾತ್ ಯತ್ ಕಾರಣಂ ತತ್ ಸತ್ ಯಥಾ ಕುಲಾಲಃ' ಎಂದು ಇಲ್ಲಿ ನಮ್ಮ ಅನುಮಾನ ಪ್ರಯೋಗವು.

ವೇದಾಂತಿಗಳ ಈ ಖಂಡನೆಗೆ ಶೂನ್ಯವಾದಿಯು ಸಮಾಧಾನ ಹೇಳು ತ್ತಾನೆ—ಎಲೈ ವೇದಾಂತಿಮುನಿಯೇ! ಶೂನ್ಯವು ಕುಂಬಾರನಂತೆ ಜಗತ್ತಿಗೆ ಕಾರಣವೆಂದು ನಾನು ಹೇಳುವುದಿಲ್ಲ. ಶೂನ್ಯಕ್ಕೆ ಸಂವೃತಿ ಅಂದರೆ ಅಜ್ಞಾನದ ಸಂಬಂಧವುಂಟಾಗಿ ಶೂನ್ಯವೇ ಪ್ರಪಂಚದ ರೂಪದಿಂದ ಕಾಣಿಸು ತ್ತದೆ. ಮುತ್ತಿನಚಿಪ್ಪನ್ನು ನೋಡಿ ಒಬ್ಬನು ಅದರಲ್ಲಿರುವ ಥಳಥಳಪ್ರಕಾಶ ದಿಂದ ಅಜ್ಞಾನವನ್ನು (ಭ್ರಾಂತಿಯನ್ನು) ಹೊಂದಿ ಇದು ಬೆಳ್ಳಿ ಎಂದು ತಿಳಿಯುತ್ತಾನೆ. ಇದು ಬೆಳ್ಳಿಯೆಂಬ ಜ್ಞಾನಕ್ಕೆ ಅಜ್ಞಾನಸಂಬಂಧದಿಂದ ಮುತ್ತಿನಚಿಪ್ಪು ಕಾರಣವಾಗುವಂತೆ ಶೂನ್ಯತತ್ತ್ವವನ್ನು ಚೆನ್ನಾಗಿ ತಿಳಿಯ ದಿರುವುದರಿಂದ, ಅಂದರೆ ಶೂನ್ಯಕ್ಕೆ ಸಂವೃತಿ ಎಂಬ ಮಾಯೆಯ ಸಂಬಂಧ

Rarest Archiver

ವುಂಟಾಗಿ ಅದು ಪ್ರಪಂಚದಂತೆ ಕಾಣುತ್ತದೆ. ಹೀಗೆ ಯಾವ ಶೂನ್ಯಕ್ಕೆ ಸಂಬಂಧಪಟ್ಟ ಸಂವೃತಿಯಿಂದ ಪ್ರಪಂಚವು ಕಾಣುತ್ತದೆಯೋ ಆ ಶೂನ್ಯ ವನ್ನು ಜಗತ್ತಿಗೆ ಕಾರಣವೆಂದು ಹೇಳುತ್ತೇವೆ. ಅಜ್ಞಾನಸಂಬಂಧದಿಂದ ಮುತ್ತಿನಚಿಪ್ಪು ಬೆಳ್ಳಿಗೆ ಕಾರಣವಾಗುವಂತೆ ಇಲ್ಲಿ ಶೂನ್ಯವು ಸಂವೃತಿಸಂಬಂಧ ದಿಂದ ಪ್ರಪಂಚಕ್ಕೆ ಕಾರಣವು ಎಂದು ನಮ್ಮ ಅಭಿಪ್ರಾಯ. ಕುಂಬಾರನಂತೆ ಪ್ರಪಂಚಕ್ಕೆ ಶೂನ್ಯವು ಕಾರಣವೆಂದು ನಾವು ಹೇಳುವುದಿಲ್ಲ.

ನ ಸತ್ ಅಸತ್, ತಸ್ಯ ಭಾವಃ ತಸ್ಮಾತ್, ಕುಂಭಸ್ಯಕರ್ತಾ. ಯಸ್ಯ ಸಂವೃತಿಃ, ಯತ್ಸಂವೃತೇಃ ಉತ್ಥಿತಂ;

ಈರ್ಯತೇ ಈರ್ಯೇತೇ ಈರ್ಯಂತೇ ;– ಈರ ಪ್ರೇರಣೇ ಕರ್ಮಣಿ ಲಟ್.

ಶೂನ್ಯವಾದಿಯ ಈ ಸಮಾಧಾನಕ್ಕೆ ನಮ್ಮ ಖಂಡನೆ—

ಏವಂ ಚೇತ್‌ಕಾರಣಂ ಮಾಸ್ಮಬ್ರವೀಃ ಶೂನ್ಯಂ ಕಥಂಚನ।
ಆಯುಷ್ಮಂಸ್ತದಧಿಷ್ಠಾನಂ ವೃತ್ಸಿತ್ಸಸ್ವ ಗುರೋರ್ಗೃಹೇ ॥ ೩೦ ॥

ಏವಂ ಚೇತ್ ಶೂನ್ಯಂ ಕಥಂಚನ ಕಾರಣಂ ಮಾಸ್ಮಬ್ರವೀಃ ಆಯು-ಷ್ಮನ್! ತತ್ ಅಧಿಷ್ಠಾನಂ ಗುರೋಃ ಗೃಹೇ ವೃತ್ಸಿತ್ಸಸ್ವ.

ಏವಂ ಚೇತ್ = ಹೀಗೆ ಶೂನ್ಯತತ್ತ್ವಾಜ್ಞಾನದಿಂದ ತೋರುವ ಪ್ರಪಂಚಕ್ಕೆ ಶೂನ್ಯವು ಕಾರಣವೆಂದು ಒಪ್ಪಿಕೊಳ್ಳುವುದಾದರೆ, ಶೂನ್ಯಂ= ಶೂನ್ಯವನ್ನು, ಕಥಂಚನ=ಯಾವ ಪ್ರಕಾರದಿಂದಲೂ, ಕಾರಣಂ ಮಾಸ್ಮ-ಬ್ರವೀಃ=ಕಾರಣವೆಂದು ಹೇಳಬೇಡ. ಆಯುಷ್ಮನ್=ಎಲೈ ಚಿರಂಜೀವಿಯೇ! (ತಮ್ಮಾ, ಮಗೂ!) ತತ್ = ನೀನು ಅಂಗೀಕರಿಸಿರುವ ಶೂನ್ಯವು, ಅಧಿಷ್ಠಾನಂ= ಆಧಾರವು; ಗುರೋಃ ಗೃಹೇ = ಉಪಾಧ್ಯಾಯರ ಮನೆಯಲ್ಲಿ, ವೃತ್ಸಿತ್ಸಸ್ವ=ಕಾರಣವೆಂದರೇನು, ಅಧಿಷ್ಠಾನವೆಂದರೇನು ಎಂದು ತಿಳಿಯಲು ಇಚ್ಛಿಸು.

ಅಯ್ಯಾ ಬೌದ್ಧನೇ! ನೀನು ಹಿಂದೆ ಹೇಳಿದಂತೆಯೇ ನಿನ್ನ ಮತ ವಾದರೆ, ನಿನ್ನ ಆ ಶೂನ್ಯವನ್ನು ಪ್ರಪಂಚಕ್ಕೆ, ಸ್ವತಂತ್ರಕಾರಣವೆಂದಾಗಲೀ,

Rarest Archiver

ಕಾರಣವೆಂದೇ ಆಗಲಿ ಸರ್ವಥಾ ಹೇಳಬೇಡ. ಹಾಗಾದರೆ ನಾನೇನು ಮಾಡ ಬೇಕು ಎಂದು ಕೇಳುತ್ತೀಯಾ ? ಹೇಳುತ್ತೇನೆ ಕೇಳು — ಎಲೈ ಚಿರಂಜೀವಿ ಯಾದ ಮಗೂ, ತಮ್ಮಾ, ನಿನಗೆ ಇನ್ನೂ ಬುದ್ಧಿ ಸಾಲದು. ನೀನು ಹೇಳುವ ಶೂನ್ಯವು ಪ್ರಪಂಚಕ್ಕೆ ಅಧಿಷ್ಠಾನ (ಆಧಾರ) ವಾಯಿತು. ಗಡಿಗೆಗಳಿಗೆ ಕುಂಬಾರನ ಶಾಲೆಯು ವಾಸಸ್ಥಳ. ಅದರಂತೆ ಪ್ರಪಂಚಕ್ಕೆ ನಿನ್ನ ಮತದ ಪ್ರಕಾರ ಶೂನ್ಯವು ವಾಸಸ್ಥಳ, ಕಾರಣವಲ್ಲ. ಮನುಷ್ಯನು ಮನೆಯಲ್ಲಿದ್ದಾನೆ ಎಂದು ಹೇಳಿದಾಗ ಮನೆಯು ಅವನಿಗೆ ವಾಸಸ್ಥಳ, ಕಾರಣವಲ್ಲ. ಕಾರಣ ವೆಂದರೇನು ? ಅಧಿಷ್ಠಾನವೆಂದರೇನು ? ಎಂಬ ವಿಷಯವನ್ನು ತಿಳಿಯದ ದಡ್ಡನಾದ ನೀನು ಗುರುಗಳ ಮನೆಗೆ ಹೋಗಿ ಚೆನ್ನಾಗಿ ಪಾಠಕಲಿತುಕೋ. ಇದುವರೆಗಿನ ನಿನ್ನ ಆಯುಸ್ಸು ವ್ಯರ್ಥವಾಯಿತು.

ಆಯುಃ ಅಸ್ಯ ಅಸ್ತೀತಿ ಆಯುಷ್ಮಾನ್ — ಇಲ್ಲಿ ನಿಂದೆಯಲ್ಲಿ ಮತುಪ್ ಜಲವತೀ ಕಾಕನದೀ, ಕಾಗೆ ನದಿ ಕೆಟ್ಟನೀರುಳ್ಳದ್ದು ಎಂಬಂತೆ.

ಮಾಸ್ಮಬ್ರವೀಃ = ಸ್ಮೋತ್ತರೇ ಲಙ್ ಚ (3-3-176) ಎಂಬ ಸೂತ್ರದಿಂದ ಮಾಙ್ ಮತ್ತು ಸ್ಮಯೋಗವಿದ್ದಾಗ ಲಙ್, ನ ಮಾಙ್ಯೋಗೇ (6-4-74) ಎಂದು ಅಡಾಗಮನಿಷೇಧ. ಅಬ್ರವೀತ್ ಅಬ್ರೂತಾಂ ಅಬ್ರುವನ್, ಅಬ್ರವೀಃ ಅಬ್ರೂತಂ ಅಬ್ರೂತ, ಅಬ್ರವಂ, ಅಬ್ರೂವ ಅಬ್ರೂಮ. ಬ್ರೂಞ್ ವ್ಯಕ್ತಾಯಾಂ ವಾಚಿ (ಉಭ.) ಪರ. ಲಙ್. ವಿ+ ಉತ್+ಪಿತ್ಸಸ್ವ ವ್ಯುತ್ಪಿತ್ಸುಂ ಇಚ್ಛ ವಿ+ಉತ್, ಉಪಸರ್ಗದ್ವಯ. ಪದ ಗತೌ ಸನ್ನಂತ ಲೋಟ್ ಮ. ಪು. ಪಿತ್ಸತಾಂ ಪಿತ್ಸೇತಾಂ ಪಿತ್ಸಂತಾಂ, ಪಿತ್ಸಸ್ವ ಪಿತ್ಸೇಥಾಂ ಪಿತ್ಸಧ್ವಂ, ಪಿತ್ಸೈ ಪಿತ್ಸಾವಹೈ ಪಿತ್ಸಾಮಹೈ.

ಜಗತ್ತಿಗೆ ಶೂನ್ಯವು ಅಧಿಷ್ಠಾನವೆಂದು ನಾವು ಹೇಳಿದುದೂ ಕೂಡ ಪರಾಭಿಪ್ರಾಯದ ಅನುವಾದವೇ ಹೊರತು ನಮ್ಮ ಸಿದ್ಧಾಂತವಲ್ಲ. ನಮ್ಮ ಮತದಂತೆ ಶೂನ್ಯವು ಅಧಿಷ್ಠಾನವೂ ಆಗುವುದಿಲ್ಲ —

ವಿವಾದಸ್ಯ ಪದಂ ನಸ್ಯಾದಧಿಷ್ಠಾನಮಸತ್ತ್ವತಃ ।
ವೈಧರ್ಮ್ಯೇಣೈಷ ದೃಷ್ಟಾಂತಃ ಶುಕ್ತ್ಯಾದಿಪದೀರ್ಯತೇ ॥೩೧॥

ವಿವಾದಸ್ಯ ಪದಂ ಅಸತ್ತ್ವತಃ ಅಧಿಷ್ಠಾನಂ ನ ಸ್ಯಾತ್ ವೈಧರ್ಮ್ಯೇಣ ಶುಕ್ತ್ಯಾದಿವತ್ ಇತಿ ಏಷಃ ದೃಷ್ಟಾಂತಃ ಈರ್ಯತೇ.

ವಿವಾದಸ್ಯ ಪದಂ = ವಿವಾದಕ್ಕೆ ವಿಷಯವಾದ ಶೂನ್ಯವು, ಅಧಿಷ್ಠಾನಂ ನ ಸ್ಯಾತ್ = ಪ್ರಪಂಚಾರೋಪಕ್ಕೆ ಆಶ್ರಯವೂ (ವಾಸಸ್ಥಾನ) ಆಗಲಾರದು, ವೈಧರ್ಮ್ಯೇಣ = ಪಕ್ಷದಲ್ಲಿರುವ ಸಾಧ್ಯಧರ್ಮ ಮತ್ತು ಸಾಧನಧರ್ಮಕ್ಕೆ ವಿರುದ್ಧವಾಗಿ, (ಸಾಧ್ಯಾಭಾವ ಇದ್ದಲ್ಲಿ ಸಾಧನಾಭಾವ ಇದೆ ಎಂಬ ವಿರುದ್ಧರೀತಿಯಿಂದ) ಶುಕ್ತ್ಯಾದಿವತ್ = ಮುತ್ತಿನ ಚಿಪ್ಪುಮೊದಲಾದವುಗಳಂತೆ, ಇತಿ = ಎಂದು, ಏಷಃ ದೃಷ್ಟಾಂತಃ ಈರ್ಯತೇ = ಈ ದೃಷ್ಟಾಂತವು ಹೇಳಲ್ಪಡುತ್ತದೆ.

ವಿವಾದಾಸ್ಪದವಾದ ಶೂನ್ಯವು ಅತ್ಯಂತ ಅಸತ್, ಸರ್ವಥಾ ಇಲ್ಲದೇ ಇರುವುದರಿಂದ ಅಧಿಷ್ಠಾನವೂ ಪ್ರಪಂಚರೂಪದಿಂದ ಕಾಣತಕ್ಕ ವಸ್ತುವೂ ಆಗುವುದಿಲ್ಲ. ಇದಕ್ಕೆ ಒಂದು ವಿರುದ್ಧದೃಷ್ಟಾಂತವು ಹೀಗಿದೆ—ಬೆಳ್ಳಿ ಎಂದು ಕಾಣಿಸುವ ಮುತ್ತಿನಚಿಪ್ಪು ಮೊದಲಾದ ವಸ್ತುವು ಸತ್ = ಇರುವ ವಸ್ತುವೇ ಆಗಿದೆ. ಚಿಪ್ಪನ್ನು ಕಂಡು ಬೆಳ್ಳಿಎಂಬ ಭ್ರಾಂತಿಯು ಬರುವಾಗ, ಅಲ್ಲಿ ಬೆಳ್ಳಿ ಎಂಬ ಭ್ರಮೆಗೆ ವಿಷಯವಾದ ಮುತ್ತಿನಚಿಪ್ಪು 'ಸತ್' = ಸತ್ಯವಾದುದೇ ಅಂದರೆ ಇರುವಂತಹುದೇ ಆಗಿರುತ್ತದೆ. ಅಂತೂ ಆರೋಪವೆಂಬ ಭ್ರಮಜ್ಞಾನಕ್ಕೆ ಅಧಿಷ್ಠಾನವು ಸತ್ಯವಾದುದೇ ಅಂದರೆ ಇರುವಂತಹುದೇ ಆಗಿದೆ. ಪ್ರಕೃತದಲ್ಲಿ ಪ್ರಪಂಚದ ಆರೋಪಕ್ಕೆ ಅಧಿಷ್ಠಾನವೆಂದು ನೀನು ಹೇಳುವ ಶೂನ್ಯವು ಅಸತ್ಯ-ಅಸತ್ ಇಲ್ಲದೇ ಇರುವಂತಹುದು ; ಆದುದರಿಂದ ಅಧಿಷ್ಠಾನವಾಗಲಾರದು. ವಿಮತಂ ಶೂನ್ಯಂ ಜಗದಾರೋಪಾಧಿಷ್ಠಾನಂ ನ ಭವತಿ ಅಸತ್ತ್ವಾತ್ ಯತ್ ಆರೋಪಾಧಿಷ್ಠಾನಂ ತತ್ ಸತ್ ಯಥಾ ರಜತಾರೋಪಾಧಿಷ್ಠಾನಶುಕ್ತ್ಯಾದಿ ಎಂದು ಅನುಮಾನಪ್ರಯೋಗ. ಹೀಗೆ ಆಚಾರ್ಯರು ಶೂನ್ಯವಾದಿಯ ಮತವನ್ನು ಖಂಡಿಸಿದರು.

ವಿರುದ್ಧಃ ಧರ್ಮಃ ಯಸ್ಯ ಸಃ ವಿಧರ್ಮಾ ವಿಧರ್ಮಣಃ ಭಾವಃ ವೈಧರ್ಮ್ಯಂ ತೇನ.

Rarest Archiver

ಶೂನ್ಯವಾದಿಗಳು ವೇದವು ಅಪ್ರಮಾಣವೆಂದು ಹೇಳುತ್ತಾರೆ. ಮಾಯಾವಾದಿಗಳು ವೇದವು ಪ್ರಮಾಣವೆಂದು ಹೇಳುತ್ತಾರೆ. ಹೀಗಿರುವಾಗ ಶೂನ್ಯವಾದ ಮಾಯಾವಾದಗಳೆರಡೂ ಒಂದೇ ಎಂಬುದು ಹೇಗೆ—

ಅತತ್ವಾವೇದಕಂ ಮಾನಮಿತಿ ಸ್ವವ್ಯಾಹತಂ ಯತಃ ।
ತದ್ವಾದೀ ತೇನ ವೇದಸ್ಯ ಸೋಽಭಿಪ್ರೈತ್ಯಪ್ರಮಾಣತಾಮ್ ॥

ಯತಃ ಅತತ್ವಾವೇದಕಂ ಮಾನಂ ಇತಿ ಸ್ವವ್ಯಾಹತಂ ತೇನ ತದ್ವಾದೀ ಸಃ ವೇದಸ್ಯ ಅಪ್ರಮಾಣತಾಂ ಅಭಿಪ್ರೈತಿ. ॥ ೩೨ ॥

ಯತಃ = ಯಾವಕಾರಣದಿಂದ, ಅತತ್ವಾವೇದಕಂ = ತತ್ವವನ್ನು ತಿಳಿಸದೇ ಇರತಕ್ಕಂತಹುದು (ಅಯಥಾರ್ಥವಿಷಯವನ್ನು ತಿಳಿಸುವಂತಹುದು) ಮಾನಂ ಇತಿ = ಪ್ರಮಾಣವೆಂಬ ಮಾತು, ಸ್ವವ್ಯಾಹತಂ=ಪರಸ್ಪರ ವಿರುದ್ಧವಾದುದು, ತೇನ = ಆ ಕಾರಣದಿಂದ, ತದ್ವಾದೀ ಸಃ = ವೇದವು ಅತತ್ವಾವೇದಕವೆಂದು ಹೇಳುವ ಆ ಮಾಯಾವಾದಿಯು, ವೇದಸ್ಯ ಅಪ್ರಮಾಣತಾಂ = ವೇದಕ್ಕೆ ಅಪ್ರಾಮಾಣ್ಯವನ್ನೇ, ಅಭಿಪ್ರೈತಿ = ಒಪ್ಪುತ್ತಾನೆ.

ವೇದಗಳು ತತ್ವವನ್ನು ತಿಳಿಸುವುದಿಲ್ಲ. ಅಸತ್ಯವಾದ ವಿಷಯವನ್ನೇ ತಿಳಿಸುತ್ತವೆ. ಆದರೂ ವೇದಗಳು ಪ್ರಮಾಣಗಳು ಎಂಬ ಮಾತು ಸ್ವವ್ಯಾಹತವು; ತನ್ನ ಮಾತಿಗೆ ವಿರುದ್ಧವಾದುದು. ಆದುದರಿಂದ ವೇದವು ಅತತ್ವಾವೇದಕವೆಂದು ಹೇಳುವ ಆ ಮಾಯಾವಾದಿಯು ವೇದವು ಅಪ್ರಮಾಣವೆಂದೇ ಅಭಿಪ್ರಾಯಪಡುತ್ತಾನೆ. ಲೋಕದಲ್ಲಿ ಬೆಕ್ಕಿಗೆ ಕೋಡು ಇದೆ ಎಂಬ ಮಾತು ಸುಳ್ಳಾದ ವಸ್ತುವನ್ನು ಬೋಧಿಸುವಪ್ರಯುಕ್ತ ಅಪ್ರಮಾಣವಾಗುತ್ತದೆ. ಅಂದರೆ ನಂಬಲು ಅಯೋಗ್ಯವಾಗುತ್ತದೆ. ಅದರಂತೆ ವೇದವು ಅತತ್ವಾವೇದಕ ಎಂದು ಹೇಳಿದರೆ ವೇದವು ಸುಳ್ಳುಮಾತೆಂದೇ ಆಯಿತು. ಆದುದರಿಂದ ವೇದವು ಅಪ್ರಮಾಣವೆಂದು ಬೇರೆ ಹೇಳಬೇಕಾಗಿಲ್ಲ. ಹಾಗೆ ಹೇಳಿಯೂ ವೇದವು ಪ್ರಮಾಣವೆಂದರೆ ಮೇ ಮಾತಾ ವಂಧ್ಯಾ; ನನ್ನ ತಾಯಿ ಬಂಜೆ, ಯಾವಜ್ಜೀವಂ ಅಹಂ ಮೂಕಃ; ಬದುಕಿರುವವರೆಗೆ ನಾನು

Rarest Archiver

ಮೂಕನು ಎಂಬ ಮಾತಿನಂತೆ ತನ್ನ ಮಾತಿಗೇ ಪೂರ್ವೋತ್ತರವಿರುದ್ಧ ವಾದುದರಿಂದ ಮಾಯಾವಾದಿಯು ವೇದವು ಅಪ್ರಮಾಣವೆಂದೇ ಅಂಗೀ. ಕರಿಸಿದಂತಾಯಿತು. ಹೀಗೆ ಶೂನ್ಯವಾದ ಮತ್ತು ಮಾಯಾವಾದಮತಗಳು ಒಂದೇ ಆದವು.

ಸ್ವೇನ ವ್ಯಾಹತಂ ಸ್ವವ್ಯಾಹತಂ, ನ ಪ್ರಮಾಣಂ ಅಪ್ರಮಾಣಂ ತಸ್ಯ ಭಾವಃ ಅಪ್ರಮಾಣತಾ ತಾಂ.

ಅಭಿ+ಪ್ರ+ಏತಿ ಇತಃ ಯಂತಿ ಇತ್ಯಾದಿ. ಇಣ್—ಗತೌಲಟ್.

ಶೂನ್ಯವಾದಿಗಳು ಸಂಪೂರ್ಣವೇದವನ್ನೇ ಪ್ರಮಾಣವೆಂದು ಒಪ್ಪುವುದಿಲ್ಲ. ಮಾಯಾವಾದಿಗಳು ಮಂತ್ರ-ಬ್ರಾಹ್ಮಣರೂಪವಾದ ವೇದವು ಮಿಥ್ಯಾಭೂತಪ್ರಪಂಚವನ್ನು ಬೋಧಿಸುವುದರಿಂದ ಅತತ್ತ್ವಾವೇದಕ ಪ್ರಮಾಣವು (ವ್ಯಾವಹಾರಿಕಪ್ರಮಾಣವು) ಉಪನಿಷತ್ತೆಂಬ ವೇದಭಾಗವು ಪರಬ್ರಹ್ಮತತ್ತ್ವವನ್ನು ಬೋಧಿಸುವುದರಿಂದ ಪಾರಮಾರ್ಥಿಕಪ್ರಮಾಣವು ಎಂದು ಹೇಳುತ್ತಾರೆ. ಅದರ ಖಂಡನ—

ಯಂ ತತ್ತ್ವಾವೇದಕಂ ವೇದ ವೇದಾಂಶಂ (ತಂ) ವೇದದೂಷಕಃ ।
ತತ್ತ್ವಸ್ಯಾವರ್ಣನೀಯತ್ವಾತ್ ಸ ತತ್ತ್ವಾವೇದಕಃ ಕಥಂ ॥ ೩೩ ॥

ವೇದದೂಷಕಃ ಯಂ ವೇದಾಂಶಂ ತತ್ತ್ವಾವೇದಕಂ ವೇದ ಸಃ ತತ್ತ್ವಸ್ಯ ಅವರ್ಣನೀಯತ್ವಾತ್ ತತ್ತ್ವಾವೇದಕಃ ಕಥಂ?

ವೇದದೂಷಕಃ = ವೇದವನ್ನು ಅತತ್ತ್ವಾವೇದಕಪ್ರಮಾಣವೆಂದು ಹೇಳಿ ನಿಂದಿಸುವ ಮಾಯಾವಾದಿಯು, ಯಂ ವೇದಾಂಶಂ = ಯಾವ ವೇದ ಭಾಗದ ಉಪನಿಷತ್ತನ್ನು, ತತ್ತ್ವಾವೇದಕಂ ವೇದ = ಬ್ರಹ್ಮತತ್ತ್ವವನ್ನು ತಿಳಿಸತಕ್ಕದ್ದನ್ನಾಗಿ ತಿಳಿಯುತ್ತಾನೋ. ಸಃ = ಆ ವೇದಭಾಗವಾದ ಉಪನಿಷತ್ತು, ತತ್ತ್ವಸ್ಯ = ಪರಮಾರ್ಥಸ್ವರೂಪನಾದ ಬ್ರಹ್ಮನಿಗೆ, ಅವರ್ಣನೀಯತ್ವಾತ್ = ಅವಾಚ್ಯತ್ವವಿರುವುದರಿಂದ, ತತ್ತ್ವಾವೇದಕಃ ಕಥಂ = ಪರಬ್ರಹ್ಮಬೋಧಕವು ಹೇಗೆ?

Rarest Archiver

ವೇದವನ್ನು ಅತತ್ತ್ವಾವೇದಕವೆಂದು ಮಾಯಾವಾದಿಯು ನಿಂದಿಸುತ್ತಾನೆ, ಆದರೆ ಉಪನಿಷತ್ತೆಂಬ ವೇದಭಾಗವು ಮಾತ್ರ ತತ್ತ್ವಾವೇದಕವೆಂದು ಹೇಳುತ್ತಾನೆ. ತತ್ತ್ವವೆಂದರೆ ಸತ್ಯವಾದ ಪರಬ್ರಹ್ಮವು, ಅದು ಅನಿರ್ವಚನೀಯ, ಹೇಳಲು ಬಾರದಿದ್ದುದು—ಎಂದು ಹೇಳುವ ಮಾಯಾವಾದವು ಪಾರಮಾರ್ಥಿಕವಾದ ಪರಬ್ರಹ್ಮನನ್ನು ಹೇಗೆ ಪ್ರತಿಪಾದಿಸುತ್ತದೆ? ಬ್ರಹ್ಮನು ಅವಾಚ್ಯನೆಂದು ಒಪ್ಪಿ ಅಂತಹ ಬ್ರಹ್ಮನನ್ನು ಉಪನಿಷತ್ತು ಪ್ರತಿಪಾದಿಸುತ್ತದೆ ಎಂದರೆ ಇದು ಪರಸ್ಪರ ವಿರುದ್ಧವಾದ ಮಾತು. ಅಂತೂ ಉಪನಿಷತ್ತು ಅವೇದ್ಯ-ಅನಿರ್ವಾಚ್ಯವಾದ ಸತ್ಯವಾದ ಪರಬ್ರಹ್ಮಪ್ರತಿಪಾದಕ, ತತ್ತ್ವಾವೇದಕ ಎಂಬಮಾತು ವಿರುದ್ಧ.

ವೇದಸ್ಯ ಅಂಶಃ ತಂ, ವೇದಂ ದೂಷಯತೀತಿ ವೇದದೂಷಕಃ ;

ವೇದ ವಿದತುಃ ವಿದುಃ, ವೇತ್ಥ ವಿದಥುಃ ವಿದ, ವೇದ ವಿದ್ವ ವಿದ್ಮ ; ವಿದ ಜ್ಞಾನೇ ಲಟ್. ವಿದೋ ಲಟೋ ವಾ (3-4-83) ಈ ಸೂತ್ರದಿಂದ ಲಟ್‌ಗೆ ಲಿಟ್‌ನ ಆದೇಶಗಳು.

ವೇದವು ಸಾಕ್ಷಾತ್ (ಶಕ್ತಿ-[ಅಭಿಧಾ] ವೃತ್ತಿಯಿಂದ)ಬಹ್ಮವನ್ನು ಹೇಳದಿದ್ದರೂ ಲಕ್ಷಣಾವೃತ್ತಿಯಿಂದ ಅದನ್ನು ಪ್ರತಿಪಾದಿಸುತ್ತದೆ, ಆದ್ದರಿಂದ ತತ್ತ್ವಾವೇದಕವಾಗಬಹುದಷ್ಟೆ ?—

ಲಕ್ಷಣಾಭಿಃ ಪ್ರವರ್ತಂತೇ ವಾಕ್ಯಾನಿ ತಿಸೃಭಿರ್ಯದಿ ।
ವಿಷಯತ್ವಂ ಲಕ್ಷಣಾನಾಂ ತಸ್ಯೈವಾನಿಷ್ಟಮಾಗತಂ ॥ ೩೪ ॥

ಯದಿ ವಾಕ್ಯಾನಿ ತಿಸೃಭಿಃ ಲಕ್ಷಣಾಭಿಃ ಪ್ರವರ್ತಂತೇ ತರ್ಹಿ ತಸ್ಯೈವ ಅನಿಷ್ಟಂ ಲಕ್ಷಣಾನಾಂ ವಿಷಯತ್ವಂ ಆಗತಂ.

ಯದಿ=ಒಂದುವೇಳೆ, ವಾಕ್ಯಾನಿ=ತತ್ತ್ವಾವೇದಕಗಳೆಂದು ಅಂಗೀಕರಿಸಿರುವ ವೇದಗಳು, ತಿಸೃಭಿಃ ಲಕ್ಷಣಾಭಿಃ=ಜಹಲ್ಲಕ್ಷಣಾ, ಅಜಹಲ್ಲಕ್ಷಣಾ, ಜಹದಜಹಲ್ಲಕ್ಷಣಾ ಎಂಬ ಮೂರುಲಕ್ಷಣಾವೃತ್ತಿಗಳಿಂದ, ಪ್ರವರ್ತಂತೇ ತರ್ಹಿ=ಬ್ರಹ್ಮನಲ್ಲಿ ಪ್ರವರ್ತಿಸುವುದಾದರೆ, ತಸ್ಯೈವ=ವಾಚ್ಯತ್ವ-

ಜ್ಞೇಯತ್ವಮುಂತಾದ ಸಕಲ ವಿಶೇಷರಹಿತವೆಂದು ಮಾಯಾವಾದಿಯಿಂದ ಅಂಗೀಕರಿಸಲ್ಪಟ್ಟಿರುವ ಆ ಬ್ರಹ್ಮನಿಗೇ, ಅನಿಷ್ಟಂ = ಅಪಸಿದ್ಧಾಂತವಾದುದ ರಿಂದ ಒಪ್ಪಲು ಅಯೋಗ್ಯವಾದ, ಲಕ್ಷಣಾನಾಂ ವಿಷಯತ್ವಂ = ಲಕ್ಷಣಾ ವೃತ್ತಿಗಳಿಗೆ ಗೋಚರತೆಯು, ಆಗತಂ = ಬಂದಿತು.

ತತ್ತ್ವಾವೇದಕಪ್ರಮಾಣಗಳೂ ಕೂಡ ವಚನವೃತ್ತಿಯಿಂದ ಬ್ರಹ್ಮ ವನ್ನು ಪ್ರತಿಪಾದಿಸದಿರುವುದರಿಂದ ವೇದಕ್ಕೆ ನಿರ್ವಿಷಯತ್ವವು ಪ್ರಾಪ್ತ ವಾಯಿತು. ಆದುದರಿಂದ ವೇದಗಳಿಗೆ ಅಪ್ರಾಮಾಣ್ಯವೂ ಬಂದಿತು ಎಂದು ಹೇಳಿದುದು ಸರಿಯಲ್ಲ. 'ಯತೋ ವಾಚೋ ನಿವರ್ತಂತೇ' ಇತ್ಯಾದಿ ವಾಕ್ಯಗಳು ಬ್ರಹ್ಮವು ಅವಾಚ್ಯವೆಂದು ಹೇಳಿದರೂ ಬ್ರಹ್ಮವು ಲಕ್ಷಣಾವೃತ್ತಿ ಯಿಂದ ಬೋಧ್ಯವಾಗಬಹುದು;

ಲಕ್ಷಣಾ ಮೂರು ವಿಧವಾಗಿದೆ. ಜಹಲ್ಲಕ್ಷಣಾ, ಅಜಹಲಕ್ಷಣಾ, ಜಹದಜಹಲ್ಲಕ್ಷಣಾ ಎಂದು. ಶಕ್ಯಾರ್ಥವನ್ನು ಬಿಟ್ಟು ಲಕ್ಷ್ಯಾರ್ಥವನ್ನು ಮಾತ್ರ ಬೋಧಿಸುವುದು ಜಹಲ್ಲಕ್ಷಣಾ. 'ಗಂಗಾಯಾಂ ಘೋಷಃ' ಎಂಬುದು ಜಹಲ್ಲಕ್ಷಣಾವೃತ್ತಿಗೆ ಉದಾಹರಣ. ಇಲ್ಲಿ ಗಂಗಾಪದದ ಶಕ್ಯಾರ್ಥವಾದ ಪ್ರವಾಹ ಎಂಬ ಅರ್ಥವನ್ನು ಬಿಟ್ಟು ಪ್ರವಾಹಸಂಬಂಧವಿರುವ ತೀರವೆಂಬ ಅರ್ಥವನ್ನು ನಾವು ಸ್ವೀಕರಿಸಿರುತ್ತೇವೆ. ಅದರಂತೆ 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಇತ್ಯಾದಿ ವಾಕ್ಯಗಳು ಜಹಲ್ಲಕ್ಷಣಾವೃತ್ತಿಯಿಂದ ಬ್ರಹ್ಮವನ್ನು ಬೋಧಿಸುತ್ತವೆ. ಸೃಷ್ಟ್ಯಾದಿಕರ್ತೃತ್ವದಿಂದ ಬ್ರಹ್ಮವು ಲಕ್ಷ್ಯ ವಾಗುತ್ತದೆ ಎಂದು ಅರ್ಥ. ಶಕ್ಯಲಕ್ಷ್ಯಉಭಯಾರ್ಥವನ್ನು ಬೋಧಿಸು ವುದು ಅಜಹಲ್ಲಕ್ಷಣಾ. ಇದಕ್ಕೆ 'ಕಾಕೇಭ್ಯೋ ದಧಿರಕ್ಷ್ಯತಾಂ' ಎಂಬುದು ಉದಾಹರಣ—ಮೊಸರನ್ನು ನಮಗೆ ಸಿಗದಂತೆ ಮಾಡುವ ಕಾಗೆ ಎಂಬ ಶಕ್ಯಾರ್ಥ, ಬೆಕ್ಕು ಕೋತಿ ಮುಂತಾದ ಲಕ್ಷ್ಯಾರ್ಥ ಎರಡನ್ನೂ ಬೋಧಿಸು ವುದರಿಂದ ಇದು ಅಜಹಲ್ಲಕ್ಷಣಾ ಆಯಿತು. ಹಾಗೆಯೇ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಇತ್ಯಾದಿ ವಾಕ್ಯಗಳು ಶಕ್ಯವಾದ ಸತ್ಯತ್ವವಿಶಿಷ್ಟ ಬ್ರಹ್ಮವನ್ನು, ಲಕ್ಷ್ಯವಾದ ಅಸತ್ಯತ್ವವ್ಯಾವೃತ್ತಿವಿಶಿಷ್ಟವಾದ ಬ್ರಹ್ಮವನ್ನು ಬೋಧಿಸುತ್ತವೆ. ಶಕ್ಯಾರ್ಥಗಳ ಧರ್ಮವನ್ನು (ಶಕ್ಯತಾವಚ್ಛೇದಕ)

Rarest Archiver

ತ್ಯಜಿಸಿ ಸ್ವರೂಪಮಾತ್ರಬೋಧಕವಾದ ಲಕ್ಷಣಾವೃತ್ತಿಯು ಜಹದಜಹಲ್ಲಕ್ಷಣಾ. ಮಾಯಾವಾದಿಗಳ ಮತದ ರೀತಿಯಿಂದಮಾತ್ರ ಅಂಗೀಕೃತವಾದ ಈ ಲಕ್ಷಣಾಕ್ಕೆ ತತ್ತ್ವಮಸಿ ಎಂಬ ವೇದಾಂತವಾಕ್ಯವು ಉದಾಹರಣ. ಇಲ್ಲಿ ತ್ವಂ ಎಂದರೆ ಅಲ್ಪಜ್ಞತ್ವವಿಶಿಷ್ಟಚೇತನ, ತತ್ ಎಂದರೆ ಸರ್ವಜ್ಞತ್ವವಿಶಿಷ್ಟ ಚೇತನ. ಇಲ್ಲಿ ಅಲ್ಪಜ್ಞತ್ವ, ಸರ್ವಜ್ಞತ್ವಧರ್ಮಗಳನ್ನು ಬಿಟ್ಟು ಚೇತನವು ಚೇತನವಾಗಿದೆ. (ಚಿತ್ ಚಿತ್) ಎಂದು ಜೀವ ಚಿತ್ ಬ್ರಹ್ಮ ಚಿತ್‌ಗಳಿಗೆ ಅಭೇದವನ್ನು ಹೇಳುವುದರಿಂದ ಇದು ಜಹದಜಹಲ್ಲಕ್ಷಣಾ ಆಯಿತು. ಹೀಗೆ ಅಭಿಧಾವೃತ್ತಿಯಿಂದ ವೇದವು ಬ್ರಹ್ಮವನ್ನು ಪ್ರತಿಪಾದಿಸದಿದ್ದರೂ ಮೇಲೆಹೇಳಿದ ಮೂರು ಲಕ್ಷಣಾವೃತ್ತಿಗಳಿಂದ ತತ್ತ್ವವೇದಕವಾದ ವೇದವು ಬ್ರಹ್ಮವನ್ನು ಪ್ರತಿಪಾದಿಸುತ್ತದೆ ಎಂದು ಹೇಳಿದರೆ ಬ್ರಹ್ಮನಲ್ಲಿ ಲಕ್ಷಣಾವೃತ್ತಿವಿಷಯತ್ವವೆಂಬ ಧರ್ಮವು ಬಂದಿತು. ನಿರ್ಧರ್ಮಕನಾದ ಬ್ರಹ್ಮನಿಗೆ ಲಕ್ಷಣಾವೃತ್ತಿವಿಷಯತ್ವವನ್ನು ಒಪ್ಪಿದರೆ ಮಾಯಾವಾದಿಗೆ ಅಪಸಿದ್ಧಾಂತವು ಬಂದಿತು. ನಿರ್ವಿಶೇಷ, ನಿರ್ವಿಶೇಷಣ, ಅವಿಶಿಷ್ಟ ಎಂದು ಅಂಗೀಕರಿಸಿರುವ ಬ್ರಹ್ಮವು ವಿಶಿಷ್ಟವಾಯಿತು. ಹೀಗೆ ಬ್ರಹ್ಮಕ್ಕೆ ಲಕ್ಷಣಾವಿಷಯತ್ವವೂ ಕೂಡುವುದಿಲ್ಲವಾದುದರಿಂದ ಮಾಯಾವಾದಿಯು ತತ್ತ್ವವೇದಕವೆಂದು ಹೇಳುವ ವೇದವೂ ನಿರ್ವಿಷಯಕವಾದುದರಿಂದ ಅಪ್ರಮಾಣವಾಯಿತು.

ವಿಶೇಷಾಂಶ :— ಒಂದು ಶಬ್ದವು ಒಂದು ಅರ್ಥವನ್ನು ತಿಳಿಸಬೇಕಾದರೆ ವೃತ್ತಿ ಎಂಬ ಸಂಬಂಧವು ಅವಶ್ಯಕ. ಶಾಬ್ದಬೋಧಕ್ಕೆ ಪ್ರಯೋಜಕವಾದ ಪದಪದಾರ್ಥಗಳ ಸಂಬಂಧವು ವೃತ್ತಿ. ಈ ವೃತ್ತಿಯು ಶಕ್ತಿ (ಅಭಿಧಾ) ಮತ್ತು ಲಕ್ಷಣಾ ಎಂದು ಎರಡು ವಿಧ. ಆ ಲಕ್ಷಣಾವೃತ್ತಿಯ ವಿವರಣೆಯನ್ನು ಮೇಲೆ ಕೊಡಲಾಗಿದೆ.

ಪ್ರ-ವರ್ತಂತೇ, ವರ್ತತೇ ವರ್ತೇತೇ ವರ್ತಂತೇ, ವೃತು-ವರ್ತನೇ ಲಟ್.

ಮಾಯಾವಾದಕ್ಕೆ ಮತ್ತೊಂದು ದೂಷಣವೂ ಇದೆ—

ಕಿಂಚಾಖಂಡೇಽತ್ರ ವಾಕ್ಯಾನಿ ಕಿಂಚಿದ್ವಿದಧತೇ ನ ಹಿ ।
ತಾನಭ್ಯಧುರಭಾವಂ ಚೇಜ್ಜಾಡ್ಯಾದೇಸ್ತನ್ನ ಶೋಭತೇ ॥ ೩೫ ॥

ಕಿಂಚ, ಅಖಂಡೇ ಅತ್ರ ವಾಕ್ಯಾನಿ ಕಿಂಚಿತ್ ನ ಹಿ ವಿದಧತೇ. ತಾನಿ ಜಾಡ್ಯಾದೇಃ ಅಭಾವಂ ಅಭ್ಯುಧುಃ ಚೇತ್ ತತ್ ನ ಶೋಭತೇ.

ಕಿಂಚ = ಮತ್ತು, ಅಖಂಡೇ = ಭೇದವಿಲ್ಲದ (ನಿರ್ವಿಶೇಷನಾದ), ಅತ್ರ = ಈ ಬ್ರಹ್ಮನಲ್ಲಿ, ವಾಕ್ಯಾನಿ = 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಇತ್ಯಾದಿ ವೇದವಾಕ್ಯಗಳು, ಕಿಂಚಿತ್ = ಯಾವ ವಿಶೇಷಣವನ್ನೂ, ನ ಹಿ ವಿದಧತೇ = ಹೇಳುವುದಿಲ್ಲವಷ್ಟೇ; ತಾನಿ = ಆ ವಾಕ್ಯಗಳು ಜಾಡ್ಯಾದೇಃ ಅಭಾವಂ = ಜಡತ್ವ (ಅಜ್ಞಾನಸ್ವರೂಪತ್ವ) ಮುಂತಾದ ಧರ್ಮಗಳ ಇಲ್ಲದಿರುವಿಕೆಯನ್ನು, ಅಭ್ಯಧುಃ ಚೇತ್ = ಹೇಳಿದುವು ಎಂದು ಅಂಗೀಕರಿಸಿದರೆ, ತತ್ ನ ಶೋಭತೇ = ಅದೂ ಚೆನ್ನಾಗಿರುವುದಿಲ್ಲ.

ಪರಬ್ರಹ್ಮವು ಅಖಂಡ ಅಂದರೆ ಭೇದರಹಿತ, ನಿರ್ವಿಶೇಷ ಎಂದು ಒಪ್ಪುವ ಮಾಯಾವಾದಿಯ ಮತದ ಪ್ರಕಾರ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಇತ್ಯಾದಿ ವೇದವಾಕ್ಯಗಳು ಸತ್ಯತ್ವ, ಜ್ಞಾನತ್ವ, ಅನಂತತ್ವ ಮೊದಲಾದ ಯಾವ ಧರ್ಮವಿಶೇಷವನ್ನೂ ನಿರ್ವಿಶೇಷತ್ವಕ್ಕೆ ಭಂಗ ಬರುವುದರಿಂದ ಹೇಳಲಾರವಷ್ಟೆ. ಹೀಗೆ ವಾಕ್ಯಗಳು ಬ್ರಹ್ಮನಲ್ಲಿ ಯಾವ ಒಂದು ವಿಶೇಷ ಧರ್ಮವನ್ನೂ ಹೇಳಲು ಸಾಧ್ಯವಾಗದಿರುವುದರಿಂದ ಲಕ್ಷಣಾವೃತ್ತಿಯನ್ನು ಅಂಗೀಕರಿಸಿದ್ದು ನಿರರ್ಥಕವಾಯಿತು. ಇನ್ನು ಬ್ರಹ್ಮನಲ್ಲಿ 'ಸತ್ಯಂ ಜ್ಞಾನಂ' ಇತ್ಯಾದಿ ವಾಕ್ಯಗಳು ಸತ್ಯತ್ವಾದಿಭಾವಧರ್ಮಗಳನ್ನು ಹೇಳದಿದ್ದರೂ ಅಸತ್ಯತ್ವವ್ಯಾವೃತ್ತಿ—ಅಜ್ಞಾನತ್ವವ್ಯಾವೃತ್ತಿ ಮುಂತಾದ ಧರ್ಮಗಳನ್ನು ಬೋಧಿಸುತ್ತವೆ ಎಂದು ಹೇಳಿದರೆ ಅದೂ ಕೂಡ ಚೆನ್ನಾಗಿರುವುದಿಲ್ಲ. ಅಂದರೆ 'ಸತ್ಯಂ ಜ್ಞಾನಂ' ಇತ್ಯಾದಿವಾಕ್ಯಗಳು ಬ್ರಹ್ಮನಲ್ಲಿ ಅಸತ್ಯತ್ವವಿಲ್ಲ, ಅಜ್ಞಾನತ್ವ (ಜಡತ್ವ) ವಿಲ್ಲ ಎಂದು ಅಸತ್ಯತ್ವಾಭಾವ—ಜಡತ್ವಾಭಾವ ಇತ್ಯಾದಿಗಳನ್ನು ಹೇಳುತ್ತವೆ ಎಂಬ ಪಕ್ಷವೂ ಸರಿಯಲ್ಲವೆಂದು ಮುಂದಿನ ಶ್ಲೋಕದಲ್ಲಿ ಹೇಳುತ್ತಾರೆ.

ನ ವಿದ್ಯತೇ ಖಂಡಃ ಯಸ್ಯ ತತ್ ತಸ್ಮಿನ್. ಜಡಸ್ಯ ಭಾವಃ ಜಾಡ್ಯಂ, ತತ್ ಆದಿಃ ಯಸ್ಯ ಸಃ ತಸ್ಯ.

Rarest Archiver

ವಿ+ದಧತೇ ಧತ್ತೇ ದಧಾತೇ ದಧತೇ ಧಾ—ದಾತು ಲೋಟ್. ಅಭಿ+ಅಧುಃ ಧಾ—ಧಾತು ಲುಙ್.

ಹಿಂದೆ ಹೇಳಿದ ಪಕ್ಷದ ದೂಷಣವನ್ನು ಹೇಳುತ್ತಾರೆ—

ಅಭಾವಭಾವಸ್ಯಾಭಾವಾದ್ ಭಾವರೂಪಸ್ಯ ತಸ್ಯ ತು ।
ಭಾವಾಭಾವವಿಶೇಷಾಣಾಮಭಾವಾದವಿಶೇಷಿಣಃ ॥ ೩೬ ॥

ಭಾವರೂಪಸ್ಯ ತಸ್ಯ ತು ಅಭಾವಭಾವಸ್ಯ ಅಭಾವಾತ್ ಅವಿಶೇಷಿಣಃ ಭಾವಾಭಾವವಿಶೇಷಾಣಾಂ ಅಭಾವಾತ್ (ಸತ್ಯಜ್ಞಾನಾದಿವಾಕ್ಯಾನಿ ತತ್ವಾವೇದಕಾನಿ ನ ಭವಂತಿ.)

ಭಾವರೂಪಸ್ಯ ತಸ್ಯ ತು=ಭಾವಸ್ವರೂಪನಾದ ಆ ಬ್ರಹ್ಮನಿಗಾದರೋ, ಅಭಾವಭಾವಸ್ಯ=ಅಭಾವದ ಅಭಾವತ್ವವೆಂಬ ಧರ್ಮದ, ಅಭಾವಾತ್= ಇಲ್ಲದಿರುವಿಕೆಯಿಂದ, ಅವಿಶೇಷಿಣಃ=ವಿಶೇಷವಿಲ್ಲದ ಬ್ರಹ್ಮನಿಗೆ, ಭಾವಾಭಾವವಿಶೇಷಾಣಾಂ=ಭಾವಾತ್ಮಕ ಮತ್ತು ಅಭಾವಾತ್ಮಕಧರ್ಮಗಳ ಅಭಾವಾತ್=ಇಲ್ಲದಿರುವಿಕೆಯಿಂದಲೂ, (ಸತ್ಯಜ್ಞಾನಾದಿವೇದವಾಕ್ಯಗಳು ತತ್ತ್ವಾವೇದಕಗಳಾಗುವುದಿಲ್ಲ).

ಸತ್ಯಜ್ಞಾನಾದಿವಾಕ್ಯಗಳಿಂದ ಪ್ರತಿಪಾದ್ಯವಾದ ಅಸತ್ಯತ್ವಾದ್ಯಭಾವವು ಬ್ರಹ್ಮಸ್ವರೂಪವೋ ? ಅಥವಾ ಪರಬ್ರಹ್ಮನಲ್ಲಿರತಕ್ಕ ಧರ್ಮವೋ ? ಮೊದಲನೇ ಪಕ್ಷದಲ್ಲಿ ಬ್ರಹ್ಮವು ಅಭಾವರೂಪವೆಂದಾಗುತ್ತದೆ. ಭಾವಸ್ವರೂಪವೆಂದು ಅಂಗೀಕೃತವಾದ ಪರಬ್ರಹ್ಮವು ಅಭಾವಸ್ವರೂಪವೆಂದರೆ ಅಪಸಿದ್ಧಾಂತವು ಬರುತ್ತದೆ. ಭಾವಾಭಾವಗಳಿಗೆ ಪರಸ್ಪರ ವಿರೋಧವೂ ಇದೆ. ಇನ್ನು ಅಸತ್ಯತ್ವಾದ್ಯಭಾವವು ಬ್ರಹ್ಮನ ಧರ್ಮ ವಿಶೇಷವೆಂದರೆ ಭಾವಾಭಾವರೂಪವಾದ ಯಾವ ಧರ್ಮವೂ ಇಲ್ಲದ್ದರಿಂದ ನಿರ್ವಿಶೇಷವೆಂದು ಮಾಯಾವಾದದಲ್ಲಿ ಅಂಗೀಕೃತವಾದ ಬ್ರಹ್ಮನಿಗೆ ಅಸತ್ಯತ್ವಾದ್ಯಭಾವರೂಪ ಧರ್ಮವು ಇದೆ ಎಂದು ಹೇಳುವುದೂ ಅಯುಕ್ತವೆಂದಾಗುತ್ತದೆ. ಹೀಗೆ ನಿನ್ನ ಮತದಂತೆಯೇ ನೀನು ತತ್ವಾವೇದಕವೆಂದು ಹೇಳುವ ವೇದವಾಕ್ಯಗಳು ಅತತ್ವಾವೇದಕಗಳೇ ಆಗಿ ಅಪ್ರಮಾಣವಾಗುತ್ತವೆ.

Rarest Archive

ಅಭಾವಸ್ಯ ಭಾವಃ ತಸ್ಯ, ಭ್ರಾವಃ ರೂಪಂ ಯಸ್ಯ ತತ್ ತಸ್ಯ, ಭಾವಾಶ್ಚ ಅಭಾವಾಶ್ಚ, ಭಾವಾಭಾವಾಃ ಇತಿ ವಿಶೇಷಾಃ ತೇಷಾಂ, ವಿಶೇಷಾಃ ಅಸ್ಯ ಅಸ್ತೀತಿ ವಿಶೇಷಿ (ಷಿನ್) ನ ವಿಶೇಷಿ ಅವಿಶೇಷಿ ತಸ್ಯ.

ಮಾಯಾವಾದಿಗಳು ಪ್ರಚ್ಛನ್ನಬೌದ್ಧರೆಂಬುವುದಕ್ಕೆ ಮತ್ತೊಂದು ಯುಕ್ತಿ—

ಯೋ ವೇದವೇದಿತಾರ್ಥಾನಾಂ ನಿತ್ಯಸಂತ್ಯಾಗಸಂಶ್ರವೀ ।
ವೇದಬಾಹ್ಯೋ ವಿಪಶ್ಚಿದ್ಭಿರೇಷ ನಿಶ್ಚೀಯತಾಂ ತತಃ ॥ ೩೭ ॥

ಯಃ ವೇದವೇದಿತಾರ್ಥಾನಾಂ ನಿತ್ಯಸಂತ್ಯಾಗಸಂಶ್ರವೀ ಏಷಃ ತತಃ ವಿಪಶ್ಚಿದ್ಭಿಃ ವೇದಬಾಹ್ಯಃ ನಿಶ್ಚೀಯತಾಂ.

ಯಃ=ಯಾವ ಮಾಯಾವಾದಿಯು, ವೇದವೇದಿತಾರ್ಥಾನಾಂ= ವೇದಗಳಿಂದ ತಿಳಿಸಲ್ಪಟ್ಟ ಪ್ರಪಂಚಸತ್ಯತ್ವ ಮುಂತಾದ ವಿಷಯಗಳ, ನಿತ್ಯ(ಂ) ಸಂತ್ಯಾಗಸಂಶ್ರವೀ=ಯಾವಾಗಲೂ ತ್ಯಜಿಸುವ ಪ್ರತಿಜ್ಞೆಯುಳ್ಳವನೋ, ಏಷಃ= ಈ ಮಾಯಾವಾದಿಯು, ತತಃ=ಆದುದರಿಂದ, ವಿಪಶ್ಚಿದ್ಭಿಃ= ವಿದ್ವಾಂಸರಿಂದ, ವೇದಬಾಹ್ಯಃ=ವೇದದೂಷಕನೆಂದು, ನಿಶ್ಚೀಯತಾಂ= ನಿಶ್ಚಯಿಸಲ್ಪಡಲಿ.

ವೇದಗಳೂ ಪ್ರಪಂಚವು ಸತ್ಯ, ವಿಷ್ಣುವು ಅನಂತಗುಣಪೂರ್ಣನು ನಿರ್ದೋಷನು ಎಂದು ಘೋಷಿಸುತ್ತವೆ. ಆದರೆ ಮಾಯಾವಾದಿಯು ಮೇಲೆ ಹೇಳಿದ ವಿಷಯುವನ್ನು ವೇದವು ಸಾವಿರಬಾರಿ ಘೋಷಿಸಿದರೂ ವೇದ ದಲ್ಲಿ ಹೇಳಿದ ವಿಷಯುವೆಲ್ಲವೂ ಸುಳ್ಳೇ ಆಗಿದೆ, ತಾನು ಅವುಗಳಲ್ಲಿ ಯಾವು ದನ್ನೂ ಸತ್ಯವೆಂದು ಒಪ್ಪುವುದೇ ಇಲ್ಲ ಎಂದು ಪ್ರತಿಜ್ಞೆ ಮಾಡಿರುತ್ತಾನೆ. ಬೌದ್ಧನು ವೇದವು ಸುಳ್ಳನ್ನು ಹೇಳುವುದರಿಂದ ಅದು ಅಪ್ರಮಾಣ ವೆನ್ನುತ್ತಾನೆ. ಅದರಿಂದ ಅವನು ವೇದಬಾಹ್ಯನು. ಮಾಯಾವಾದಿಯು ವೇದವನ್ನು ಪ್ರಮಾಣವೆಂದು ಒಪ್ಪಿಕೊಂಡರೂ ಅದು ತಿಳಿಸಿರುವ ಅರ್ಥ ವೆಲ್ಲವೂ ಸುಳ್ಳೆಂದು ಹೇಳುವುದರಿಂದ ಅವನೂ ಬೌದ್ಧರಂತೆ ವೇದಬಾಹ್ಯನೇ (ವೇದಾಪ್ರಾಮಾಣ್ಯವಾದಿಯೇ) ಆದನು. ಈ ವಿಷಯುವನ್ನು ಪಂಡಿತರು ನಿರ್ಣಯಿಸಲಿ.

Rarest Archiver

ವೇದೈಃ ವೇದಿತಾಃ ವೇದವೇದಿತಾಃ ವೇದವೇದಿತಾಶ್ಚ ತೇ ಅರ್ಥಾಶ್ಚ ತೇಷಾಂ. ನಿತ್ಯಂ ಸಂತ್ಯಾಗೇ ಸಂಶ್ರವಃ ಅಸ್ಯ ಅಸ್ತೀತಿ. ವೇದೇಭ್ಯಃ ಬಾಹ್ಯಃ.

ನಿಸ್ + ಚೀಯತಾಂ ಚೀಯೇತಾಂ ಚೀಯಂತಾಂ ಚಿಞ್ ಚಯನೇ ಕರ್ಮಣಿ ಲೋಟ್. ವಿಪಶ್ಚಿತಃ ಏತಂ ವೇದಬಾಹ್ಯಂ ನಿಶ್ಚಿನ್ವಂತು-ಕರ್ತರಿ.

ಹೀಗೆ ಇಬ್ಬರು ವಾದಿಗಳಿಗೂ ಸಾಮ್ಯವನ್ನು ಹೇಳಿದ್ದರಿಂದ ಫಲವೇನು ? —

ಜ್ಯಾಯಸೋ ದೂಷಣೇನೈವ ಧೂರ್ತಂಮನ್ಯೋಽಪಿ ದೂಷಿತಃ |
ಪಕ್ಷಯೋರವಿಶೇಷತ್ವಾದೇತಯೋಃ ಸದ್ವಿಪಕ್ಷಯೋಃ || ೩೮ ||

ಜ್ಯಾಯಸಃ ದೂಷಣೇನೈವ ಸದ್ವಿಪಕ್ಷಯೋಃ ಏತಯೋಃ ಪಕ್ಷಯೋಃ ಅವಿಶೇಷತ್ವಾತ್ ಧೂರ್ತಂಮನ್ಯಃ ಅಪಿ ದೂಷಿತಃ.

ಜ್ಯಾಯಸಃ ದೂಷಣೇನೈವ = ಹಿರಿಯವನಾದ ಶೂನ್ಯವಾದಿಯ ದೂಷಣದಿಂದಲೇ, ಸದ್ವಿಪಕ್ಷಯೋಃ = ಸಜ್ಜನರಿಗೆ ವಿರುದ್ಧವಾದ, ಏತಯೋಃ ಪಕ್ಷಯೋಃ = ಈ ಎರಡು ಪಕ್ಷಗಳಿಗೂ ಅವಿಶೇಷತ್ವಾತ್ = ವ್ಯತ್ಯಾಸವಿಲ್ಲದಿರುವುದರಿಂದ, ಧೂರ್ತಂಮನ್ಯಃ ಅಪಿಃ = ತಾನು ಮೋಸಗಾರನೆಂದು ತಿಳಿದಿರುವ ಮಾಯಾವಾದಿಯೂ, ದೂಷಿತಃ = ಖಂಡಿಸಲ್ಪಟ್ಟನು.

ಪ್ರಕಟಬೌದ್ಧರು ಪ್ರಚ್ಛನ್ನಬೌದ್ಧರು ಎಂದು ಎರಡುವಿಧವಾದ ಬೌದ್ಧರಲ್ಲಿ ಹಿರಿಯಣ್ಣನಾದ ಶೂನ್ಯವಾದಿಯನ್ನು ಖಂಡಿಸಿದ್ದರಿಂದಲೇ ಮಹಾವಂಚಕನಾದ ಮಾಯಾವಾದಿಯನ್ನು ದೂಷಿಸಿದಂತಾಯಿತು. ಏಕೆಂದರೆ ಸಜ್ಜನರಿಗೆ ವಿರೋಧಿಗಳಾದ ಇವರಿಬ್ಬರ ಸಿದ್ಧಾಂತಗಳಲ್ಲಿಯೂ ಪರಸ್ಪರವಾಗಿ ಯಾವ ವಿಶೇಷವೂ ಇಲ್ಲದಿರುವುದರಿಂದ ಒಂದುಪಕ್ಷದ ಖಂಡನೆಯಿಂದ ಮತ್ತೊಂದು ಪಕ್ಷವನ್ನೂ ಖಂಡಿಸಿದಂತಾಯಿತು.

ನ ವಿದ್ಯತೇ ವಿಶೇಷಃ ಯಯೋಸ್ತೌ ಅವಿಶೇಷೌ, ಅವಿಶೇಷಯೋ-ರ್ಭಾವಃ ಅವಿಶೇಷತ್ವಂ ತಸ್ಮಾತ್, ಸತಾಂ ವಿಪಕ್ಷೌ ಸದ್ವಿಪಕ್ಷೌ ತಯೋಃ;

Rarest Archiver

ವೃದ್ಧಃ, ಜ್ಯಾಯಾನ್ ವರ್ಷೀಯಾನ್ ಜ್ಯೇಷ್ಠಃ ವರ್ಷಿಷ್ಠಃ ಹಿರಿಯವನು ಎಂಬುದರ ತುಲನಾ ರೂಪಗಳು 'ಜ್ಯಾಯಸ್'-ಜ್ಯಾಯಾನ್ ಜ್ಯಾಯಾಂಸೌ ಜ್ಯಾಯಾಂಸಃ-, ಆತ್ಮಾನಂ ಧೂರ್ತಂ ಮನ್ಯತೇ ಇತಿ ಧೂರ್ತಂಮನ್ಯಃ ಆತ್ಮಮಾನೇ ಖಶ್ ಚ (3-2-83) ಅರುರ್ದ್ವಿಷದಜಂತಸ್ಯ ಮುಮ್ (6-3-67). ಖಶ್ ಪ್ರತ್ಯಯ, ಮುಮಾಗಮ.

ಅಸತ್ ಆದುದರಿಂದ ಶೂನ್ಯವು ಕಾರಣವಾಗುವುದಿಲ್ಲ. (ಸರ್ಗ ೧೫. ಶ್ಲೋ ೨೮) ಅದೇ ಕಾರಣದಿಂದಲೇ ಶೂನ್ಯವು ಅಧಿಷ್ಠಾನವೂ ಆಗುವುದಿಲ್ಲ (ಸರ್ಗ ೧೫ಶ್ಲೋ. ೩೧) ಎಂದು ಹೇಳಿದುದು ಬ್ರಹ್ಮವಾದಿಯಾದ ನನಗೆ ಸಂಬಂಧಿಸುವುದಿಲ್ಲ. ನಾನು 'ಸತ್ಯಂ ಜ್ಞಾನಂ ಅನಂತಂ ಬ್ರಹ್ಮ' ಎಂಬ ಶ್ರುತಿಯಿಂದ ಜಗತ್ತಿನ ಜನ್ಮಾದಿಕಾರಣವಾದ ಬ್ರಹ್ಮವನ್ನು ಸತ್ (ಸತ್ಯ) ಎಂದು ಒಪ್ಪಿಕೊಳ್ಳುತ್ತೇನೆ ಎಂದರೆ ಉತ್ತರ—

ಅಸತ್ತ್ವಾದಿತ್ಯಸೌ ಹೇತುರಸಿದ್ಧೋ ಬ್ರಹ್ಮವಾದಿನಃ ।
ಮೇತಿಭಾಣ್ಯವಿಶೇಷತ್ವಾದೇತಯೋರ್ಬ್ರಹ್ಮಶೂನ್ಯಯೋಃ ॥೩೯॥

ಏತಯೋಃ ಬ್ರಹ್ಮಶೂನ್ಯಯೋಃ ಅವಿಶೇಷತ್ವಾತ್ ಅಸತ್ತ್ವಾತ್ ಇತಿ ಅಸೌ ಹೇತುಃ ಬ್ರಹ್ಮವಾದಿನಃ ಅಸಿದ್ಧಃ ಇತಿ ಮಾ ಭಾಣಿ.

ಏತಯೋಃ ಬ್ರಹ್ಮಶೂನ್ಯಯೋಃ= ಈ ಬ್ರಹ್ಮ ಮತ್ತು ಶೂನ್ಯಗಳೆರಡಕ್ಕೂ, ಅವಿಶೇಷತ್ವಾತ್=ವ್ಯತ್ಯಾಸವಿಲ್ಲದಿರುವುದರಿಂದ, (ವಿಶೇಷವಿಲ್ಲದಿರುವುದರಿಂದ) ಅಸತ್ತ್ವಾತ್ ಇತಿ ಅಸೌ ಹೇತುಃ = ಅಸತ್ ಆದುದರಿಂದ(ಇಲ್ಲದಿರುವುದು ಆದುದರಿಂದ)ಎಂಬ ಈ ಹೇತುವು, ಬ್ರಹ್ಮವಾದಿನಃ= ಬ್ರಹ್ಮವನ್ನು ಸತ್ (ಸತ್ಯ) ಎಂದು ಅಂಗೀಕರಿಸಿರುವ ಮಾಯಾವಾದಿಯಾದ ನನಗೆ, ಅಸಿದ್ಧಃ ಇತಿ=ಪಕ್ಷದಲ್ಲಿ ಹೇತುಸ್ವರೂಪದ ಅಸಿದ್ಧಿ (ಇಲ್ಲದಿರುವಿಕೆ) ಎಂಬ ದೋಷಗ್ರಸ್ತವಾದುದು ಎಂದು, ಮಾಭಾಣಿ= ಹೇಳಲ್ಪಡಬಾರದು.

ಬ್ರಹ್ಮವನ್ನು ಒಪ್ಪುವ ಮಾಯಾವಾದಿಯಾದ ನನಗೆ ಅಸತ್ತ್ವ-(ಅಸತ್ ಇಲ್ಲದ್ದು ಆದುದರಿಂದ), ಎಂದು ಬೌದ್ಧನಿಗೆ ಹೇಳಿದ ಹೇತುವು ಸಿದ್ಧಿಸುವುದಿಲ್ಲ ಎಂದು ಮಾಯಾವಾದಿಯಾದ ನೀನು ಹೇಳಕೂಡದು, ಏಕೆಂದರೆ ನೀವಿಬ್ಬರೂ ಒಪ್ಪಿಕೊಂಡಿರುವ ಬ್ರಹ್ಮಶೂನ್ಯಗಳೆಂಬ ಎರಡು

Rarest Archiver

ತತ್ತ್ವಗಳಿಗೂ ಏನೂ ಭೇದವಿಲ್ಲವಾದುದರಿಂದ ಶೂನ್ಯಕ್ಕೆ ಹೇಳಿದ ಅಸತ್ತ್ವ-ಇಲ್ಲದಿರುವಿಕೆ ಎಂಬ ಹೇತುವು ಮಾಯಾವಾದಿಯಾದ ನಿನ್ನ ನಿರ್ಗುಣ-ನಿರ್ಧರ್ಮಕ - ನಿರಾಕಾರ - ನಿರ್ವಿಶೇಷ - ಬ್ರಹ್ಮನಿಗೂ ಅರ್ಥಾತ್‌ಸಿದ್ಧಿಸುವ ಪ್ರಯುಕ್ತ ಹೇತುವು ಅಸಿದ್ಧ ಎನ್ನಲಾಗುವುದಿಲ್ಲ.

ಬ್ರಹ್ಮ ವದತೀತಿ ಬ್ರಹ್ಮವಾದೀ (ದಿನ್) ತಸ್ಯ, ಬ್ರಹ್ಮ ಚ ಶೂನ್ಯಂ ಚ ಬ್ರಹ್ಮಶೂನ್ಯೇ ತಯೋಃ;

ಮಾ+ಭಾಣಿ, ಅಭಾಣಿ ಅಭಾಣಿಷಾತಾಂ ಅಭಾಣಿಷತ ಭಣಶಬ್ದೇ ಸಕ. ಸೇಟ್. ಕರ್ಮಣಿ ಲುಙ್. ತ್ವಯಾ ಅಸಿದ್ಧಃ ಇತಿ ಮಾಭಾಣಿ, ಕರ್ಮಣಿ, ತ್ವಂ ಅಸಿದ್ಧಃ ಇತಿ ಮಾ ಭಾಣೀಃ (ಕರ್ತರಿ.) ನ ಮಾಙ್ ಯೋಗೇ (6–4–74) ಅಡಾಗಮನಿಷೇಧ.

ಬ್ರಹ್ಮನಿಗೆ ಮಾಯಾವಾದಿಯಾದ ನಾನು ಅಸತ್ತ್ವವನ್ನು ಹೇಳಲಿಲ್ಲ ವಲ್ಲ-ಆದ್ದರಿಂದ ಶೂನ್ಯವಾದಿಗೆ ಹೇಳಿದ ಅಸತ್ತ್ವಹೇತುವು ನನಗೆ ಅಸಿದ್ಧವೇ ಎಂದರೆ—

ಸೋಽಂಗೀಕರೋತಿ ಚೇತ್ ಸತ್ತ್ವಂ ಬ್ರಹ್ಮಣಃ ಸ್ಯಾದ್ವಿಶೇಷಿತಾ ।
ನ ಚೇತ್ ಪ್ರಾಪ್ತಂ ಪಾರಿಶೇಷ್ಯಾದಸತ್ತ್ವಂ ನ ನಿರಸ್ಯತು ॥ ೪೦ ॥

ಸಃ ಸತ್ತ್ವಂ ಅಂಗೀಕರೋತಿ ಚೇತ್ ಬ್ರಹ್ಮಣಃ ವಿಶೇಷಿತಾ ಸ್ಯಾತ್, ನ ಚೇತ್ ಪಾರಿಶೇಷ್ಯಾತ್ ಪ್ರಾಪ್ತಂ ಅಸತ್ತ್ವಂ ನ ನಿರಸ್ಯತು.

ಸಃ=ಆ ಮಾಯಾವಾದಿಯು, ಸತ್ತ್ವಂ ಅಂಗೀಕರೋತಿ ಚೇತ್= ಸತ್ತ್ವವನ್ನು (ಬ್ರಹ್ಮನಿಗೆ ಇರುವಿಕೆ ಎಂಬ ಧರ್ಮವನ್ನು) ಒಪ್ಪುತ್ತಾ-ನಾದರೆ, ಬ್ರಹ್ಮಣಃ ವಿಶೇಷಿತಾ ಸ್ಯಾತ್=ಬ್ರಹ್ಮನಿಗೆ ವಿಶೇಷವುಳ್ಳತನವು ಬಂದೀತು, ನ ಚೇತ್ = ಒಪ್ಪದಿದ್ದರೆ, ಪಾರಿಶೇಷ್ಯಾತ್ = ಪರಿಶೇಷ ಪ್ರಮಾಣದಿಂದ, ಪ್ರಾಪ್ತಂ ಅಸತ್ತ್ವಂ=ಬಂದೊದಗಿದ ಅಸತ್ತ್ವವನ್ನು, ನ ನಿರಸ್ಯತು=ನಿರಾಕರಿಸಿದಿರಲಿ.

ಆ ಮಾಯಾವಾದಿಯು ಪರಬ್ರಹ್ಮನು ಸತ್ (ಸತ್ತ್ವವೆಂಬ ಧರ್ಮ-ವುಳ್ಳವನು) ಎಂದು ಅಂಗೀಕರಿಸುತ್ತಾನಾದರೆ ಬ್ರಹ್ಮನಿಗೆ ವಿಶೇಷಿತ್ವವು

Rarest Archiver

(ಸತ್ತ್ವವೆಂಬ ಧರ್ಮವಿಶಿಷ್ಟತ್ವವು) ಇರಬೇಕಾಗುತ್ತದೆ. ಬ್ರಹ್ಮನು ಸತ್ ಎಂದು ಒಪ್ಪದಿದ್ದರೆ ಪರಿಶೇಷಪ್ರಮಾಣದಿಂದ ಎರಡು ಧರ್ಮಗಳಲ್ಲಿ ಒಂದು ಧರ್ಮವಿಲ್ಲವೆಂದರೆ ಮತ್ತೊಂದು ಧರ್ಮವು ಇರಲೇಬೇಕಾದುದರಿಂದ ಅಸತ್ತ್ವವು ಪ್ರಾಪ್ತವಾಯಿತು. ಅದನ್ನು ನಿರಾಕರಿಸಲು ಸಾಧ್ಯವಿಲ್ಲ. ಬ್ರಹ್ಮನು ಶೂನ್ಯವಿಲಕ್ಷಣನಾಗುವುದಕ್ಕಾಗಿ ಸತ್ತ್ವವನ್ನು ಒಪ್ಪಿದರೆ ನಿರ್ಧರ್ಮಕತ್ವಕ್ಕೆ ಭಂಗ, ಒಪ್ಪದಿದ್ದರೆ ಅಸತ್ತ್ವವು ಬಂದೀತು, ಹೇತುವಿಗೆ ಅಸಿದ್ಧಿಯಿಲ್ಲ. (ಪ್ರಸಕ್ತಪ್ರತಿಷೇಧೇ ಪರಿಶಿಷ್ಯಮಾಣೇ ಸಂಪ್ರತ್ಯಯಃ ಪರಿಶೇಷಃ-ಪ್ರಾಪ್ತವಾದವುಗಳನ್ನು ನಿಷೇಧಮಾಡಿದಾಗ ಉಳಿದ ಒಂದು ಧರ್ಮವು ಇದೆಯೆಂದು ತಿಳಿಯುವುದು ಪರಿಶೇಷ.)

ಪರಿಶೇಷ ಏವ ಪಾರಿಶೇಷ್ಯಂ ತಸ್ಮಾತ್ ; ಅನಂಗಂ ಅಂಗಂ ಸಂಪದ್ಯಮಾನಂ ಕರೋತಿ- ಅಂಗೀಕರೋತಿ.

ಕುರುತಃ — ಕುರ್ವಂತಿ ಇತ್ಯಾದಿ-ನಿರ್ + ಅಸ್ಯತು ಅಸ್ಯತಾತ್ ಅಸ್ಯತಾಂ ಅಸ್ಯಂತು. ಅಸು ಕ್ಷೇಪಣೇ. ಸಕ. ಸೇಟ್. ಪರ. ಲೋಟ್ ದಿವಾದಿ.

ಆಗಲಿ-ಬ್ರಹ್ಮನಲ್ಲಿ ಅಸತ್ತ್ವವನ್ನು ಒಪ್ಪಿದರೆ ದೋಷವೇನು ?—

ವಿಗೀತಂ ನ ವಿಚಾರ್ಯಂ ಸ್ಯಾನ್ನಭಾವ್ಯಂ ನ ಫಲಪ್ರದಂ |
ಶೂನ್ಯಂ ಬ್ರಹ್ಮಾದ್ಯಮದ್ವೈತಂ ವಿಧಿಧೀಗೋಚರೋ ನ ಯತ್ ||

ಯತ್ (ಪರತತ್ತ್ವಂ) ವಿಧಿಧೀಗೋಚರಃ ನ (ತತ್) ವಿಗೀತಂ ಅದ್ವೈತಂ ಶೂನ್ಯಂ ಬ್ರಹ್ಮಾದ್ಯಂ ವಿಚಾರ್ಯಂ ನ ಸ್ಯಾತ್, ಭಾವ್ಯಂ ನ, ಫಲಪ್ರದಂ ನ. || ೪೧ ||

ಯತ್=ಯಾವಕಾರಣದಿಂದ, (ಪರತತ್ತ್ವವು) ವಿಧಿಧೀಗೋಚರಃ ನ= ಇದೆ ಎಂಬ ಜ್ಞಾನಕ್ಕೆ ವಿಷಯವಲ್ಲವೋ (ತತ್=ಆದುದರಿಂದ) ವಿಗೀತಂ=ವಿವಾದವಿಷಯವಾದ, ಅದ್ವೈತಂ ಶೂನ್ಯಂ ಬ್ರಹ್ಮಾದ್ಯಂ= ಭೇದವಿಲ್ಲದ ಶೂನ್ಯರೂಪವಾದ ಬ್ರಹ್ಮಾದಿಪರತತ್ತ್ವವು, ವಿಚಾರ್ಯಂ ನ ಸ್ಯಾತ್ = ಶ್ರವಣಾದಿ ವಿಚಾರಯೋಗ್ಯವೇಗಲಾರದು; ಭಾವ್ಯಂ ನ =

Rarest Archive

ಉಪಾಸನೆ (ಧ್ಯಾನ) ಮಾಡಲು ಯೋಗ್ಯವಾಗಲಾರದು, ಫಲಪ್ರದಂ ನ = ಧರ್ಮ (ಪುಣ್ಯ) ಮೋಕ್ಷಾದಿ ಯಾವ ಪುರುಷಾರ್ಥವನ್ನೂ ಕೊಡಲಾರದು.

ಮಾಯಾವಾದಿಯು—ಬಟ್ಟೆ ಇದೆ, ಗಡಿಗೆ ಇದೆ ಎಂಬಂತೆ ಇದ್ದಾನೆ ಎಂಬ ವಿಧಿಬುದ್ಧಿಗೆ ಬ್ರಹ್ಮನು ವಿಷಯನಾಗುತ್ತಾನೆ ಎಂದು ಒಪ್ಪುವುದಿಲ್ಲ. ಆಗ ಸತ್ ಅಸತ್ ಎಂಬ ವಿವಾದಕ್ಕೆ ವಿಷಯನಾದ ಭೇದವಿಲ್ಲದ ಶೂನ್ಯವೆಂದು ಶೂನ್ಯವಾದಿಗಳು ಹೇಳುವ ಮಾಯಾವಾದಿಯ ಪರಮತತ್ತ್ವವು ಶ್ರವಣ ಮನನಾದಿವಿಚಾರಕ್ಕೆ ಯೋಗ್ಯವಾಗಲಾರದು. ಧ್ಯಾನಯೋಗ್ಯವಾಗಲಾರದು. ಧರ್ಮಾದಿಮೋಕ್ಷಾಂತವಾದ ಯಾವ ಪುರುಷಾರ್ಥವನ್ನೂ ಕೊಡಲಾರದು- ಮೊಲದಕೋಡು ಮುಂತಾದ ವಸ್ತುಗಳಂತೆ ಬ್ರಹ್ಮನು ಅಸತ್ ಆದರೆ ಅದರ ಶ್ರವಣ, ಧ್ಯಾನ ಯಾವುದೂ ಸಾಧ್ಯವಿಲ್ಲ. ಮೋಕ್ಷವನ್ನು ಬಯಸುವವರು ಆ ಬ್ರಹ್ಮವನ್ನು (ಶೂನ್ಯದಂತೆ) ವಿಜ್ಞಾನವಾದಗಳ ವಿಜ್ಞಾನದಂತೆ, ವೈಯ್ಯಾಕರಣರ ಸ್ಫೋಟದಂತ ಸರ್ವಥಾ ತಿರಸ್ಕರಿಸುತ್ತಾರೆ.

ವಿಚಾರಯಿತುಂ ಯೋಗ್ಯಂ, ಭಾವಯಿತುಂ ಯೋಗ್ಯಂ, ಫಲಂ ಪ್ರದದಾತೀತಿ, ಬ್ರಹ್ಮ ಆದ್ಯಂ ಯಸ್ಯ ತತ್, ನ ವಿದ್ಯತೇ ದ್ವೈತಂ ಯಸ್ಯ ತತ್, ವಿಧೇಃ ಧೀಃ, ವಿಧಿಧಿಯಃ ಗೋಚರಃ;

ನಮ್ಮ ಬ್ರಹ್ಮವು ಯಾವುದರಂತೆ ಶ್ರವಣಾದಿಗಳಿಗೆ ಯೋಗ್ಯವಾಗುವುದಿಲ್ಲ ? ದೃಷ್ಟಾಂತ ಹೇಳಿರಿ—'ಗಗನಕುಸುಮದಂತೆ' ಎಂದು ದೃಷ್ಟಾಂತ ಹೇಳುತ್ತೇನೆ—

ಖಪುಷ್ಪವದಖಂಡತ್ವಾದ್ ವ್ಯತಿರಿಕ್ತಂ ನಿದರ್ಶನಂ ।
ಪ್ರಮಾಣಾದಿವದಿತ್ಯೇವಮೂಹನೀಯಂ ಯಥೇಪ್ಸಿತಂ ॥ ೪೨ ॥

ಅಖಂಡತ್ವಾತ್ ಖಪುಷ್ಪವತ್ ಏವಂ ವ್ಯತಿರಿಕ್ತಂ ನಿದರ್ಶನಂ ಯಥೇಪ್ಸಿತಂ ಪ್ರಮಾಣಾದಿವತ್ ಇತಿ ಊಹನೀಯಂ.

ಅಖಂಡತ್ವಾತ್ = ವಿಶೇಷವಿಲ್ಲದ್ದರಿಂದ, ಖಪುಷ್ಪವತ್ = ಗಗನಕುಸುಮದಂತೆ (ಆಕಾಶದಹೂವಿನಂತೆ), ಏವಂ = ಹೀಗೆ, ವ್ಯತಿರಿಕ್ತಂ = ಇಲ್ಲಿ ಹೇಳಿದ ಸಾಧ್ಯಸಾಧನಗಳಿಲ್ಲದ, ನಿದರ್ಶನಂ = ದೃಷ್ಟಾಂತವು,

Rarest Archiver

ಯಥೇಪ್ಸಿತಂ = ನಿಮ್ಮ ನಮ್ಮ ಇಚ್ಛೆಯಂತೆ, ಪ್ರಮಾಣಾದಿವತ್ ಇತಿ = ಪ್ರಮಾಣಪ್ರಮೇಯಾದಿಗಳಂತೆ ಎಂದು, ಊಹನೀಯಂ = ತಿಳಿಯತಕ್ಕದ್ದು.

ಗಗನಕುಸುಮವು – 'ಗಗನಕುಸುಮವು' ಎಂಬ ಶಬ್ದದಿಂದ ವಾಚ್ಯವಾದರೂ ಅದು ಸತ್ತ್ವವಿಲ್ಲದುದು, ಆದುದರಿಂದ ವಿಧಿಜ್ಞಾನಕ್ಕೆ ವಿಷಯವಾಗುವುದಿಲ್ಲ. ಮಾಯಿಗಳ ಪರಬ್ರಹ್ಮನೂ ಅಸತ್, ಆಕಾಶಪುಷ್ಪವೂ ಅಸತ್, ನಿರ್ವಿಶೇಷವಾದುದರಿಂದ ಇದು ವಿಧಿಜ್ಞಾನವಿಷಯವಾಗುವುದಿಲ್ಲ. ಹೀಗೆಯೇ ಶೂನ್ಯವಾದಿಗಳ ಶೂನ್ಯ, ವಿಜ್ಞಾನವಾದಿಗಳ ವಿಜ್ಞಾನ, ವೈಯಾಕರಣರ ಸ್ಫೋಟ, ಕಾಲಕಾರಣವಾದಿ ನಾಸ್ತಿಕರ ಕಾಲ, ಇವೆಲ್ಲವೂ ನಿರ್ವಿಶೇಷವಾದುದರಿಂದ ವಿಧಿಜ್ಞಾನಕ್ಕೆ ವಿಷಯವಾಗುವುದಿಲ್ಲ. ಇದಕ್ಕೆ ಈ ಅನುಮಾನದಲ್ಲಿರುವ ಸಾಧ್ಯಸಾಧನಗಳಿಲ್ಲದ ಇಷ್ಟಬಂದ ಪ್ರಮಾಣ ಪ್ರಮೇಯಗಳನ್ನು ವ್ಯತಿರೇಕದೃಷ್ಟಾಂತವಾಗಿ ಹೇಳಬೇಕು. ಅನುಮಾನ ಪ್ರಯೋಗವು ಹೀಗಿದೆ—ವಿಗೀತಂ ಬ್ರಹ್ಮಾದ್ಯಂ ಶ್ರುತಿಮೀಮಾಂಸಾದಿಭಿಃ ವಿಚಾರ್ಯಂ ನ, ಶ್ರುತ್ಯಾದ್ಯವಿಷಯತ್ವಾತ್ ಖಪುಷ್ಪವತ್, ವಿಮತಂ ಬ್ರಹ್ಮಾದ್ಯಂ ಧ್ಯೇಯಂ ನ, ನಿರಾಕಾರತ್ವಾತ್ ಖಪುಷ್ಪವತ್, ವಿಮತಂ ಬ್ರಹ್ಮಾದ್ಯಂ ಪುರುಷಾರ್ಥಪ್ರದಂ ನ ಅಸತ್ತ್ವಾತ್ (ನಿರ್ಗುಣತ್ವಾತ್) ವಂಧ್ಯಾಪುತ್ರವತ್, ವಿವಾದವಿಷಯವಾದ ಬ್ರಹ್ಮವು ಶ್ರುತ್ಯಾದಿಗಳಿಗೆ ವಿಷಯವಲ್ಲದ್ದರಿಂದ ಖಪುಷ್ಪದಂತೆ ವಿಚಾರ್ಯವಲ್ಲ, ನಿರಾಕಾರವಾದ್ದರಿಂದ ಗಗನಕುಸುಮದಂತೆಯೇ ಧ್ಯಾನಿಸಲೂ ಯೋಗ್ಯವಲ್ಲ, ಅಸದ್ವಿಷಯವಾದ್ದರಿಂದ ವಂಧ್ಯಾಪುತ್ರ (ಬಂಜೆಯ ಮಗ) ನಂತೆ ಪುರುಷಾರ್ಥಪ್ರದವೂ ಅಲ್ಲ, ಯತ್ ವಿಚಾರ್ಯಂ ಭಾವ್ಯಂ ಫಲಪ್ರದಂ ವಾ ತತ್ ಸದೇವ ಸಾಕಾರಮೇವ ಸದ್ವಿಷಯ ಏವ (ಸಗುಣಮೇವ) ದೃಷ್ಟಂ ಪ್ರತ್ಯಕ್ಷವತ್, ದೇವತಾರೂಪ ಪ್ರಮೇಯವತ್, ಯಾವುದು ವಿಚಾರಮಾಡಲು ಯೋಗ್ಯವೋ ಧ್ಯಾನ ಮಾಡಲು ಯೋಗ್ಯವೋ, ಫಲವನ್ನು ಕೊಡಬಲ್ಲುದೋ ಅದು ಸತ್ತೇ ಆಗಿರುತ್ತದೆ. ಸಾಕಾರವೇ ಆಗಿರುತ್ತದೆ, ಸತ್ ಆದ ವಿಷಯವಾಗಿದ್ದು ಸಗುಣವೇ ಆಗಿರುತ್ತದೆ. ಪ್ರತ್ಯಕ್ಷಾದಿಗಳಂತೆ, ದೇವತೆಯಂತೆ ಎಂದು.

ಖಸ್ಯ ಪುಷ್ಪಂ, ಖಪುಷ್ಪೇಣ ತುಲ್ಯಂ, ಪ್ರಮಾಣಂ ಆದಿಃ ಯಸ್ಯ

Rarest Archiver

ತತ್, ಪ್ರಮಾಣಾದಿನಾ ತುಲ್ಯಂ, ಊಹಿತುಂ ಯೋಗ್ಯಂ ಊಹನೀಯಂ, ಈಪ್ಸಿತಂ ಅನತಿಕ್ರಮ್ಯ ಯಥೇಪ್ಸಿತಂ ||

ನಾರಾಯಣೋಽನಂತಗುಣಃ ಬ್ರಹ್ಮಾಖ್ಯೋ ವೇದವೇದಿತಃ (8) ಎಂಬಲ್ಲಿ ಬ್ರಹ್ಮವು ವೇದವೇದ್ಯವೆಂದು ಹೇಳಿದುದು ವೇದವು ಅಪ್ರಮಾಣವಾದುದರಿಂದ ಯುಕ್ತವಲ್ಲ ಎಂಬ ಆಕ್ಷೇಪಕ್ಕೆ ಉತ್ತರ—

ಆಮ್ನಾಯಾನಾಮಮಾನತ್ವೇ ಧರ್ಮಾದೇರಪ್ರಮಾಣತಾ |
ಧರ್ಮಾದ್ಯಭಾವೇ ನೋ ಮಾನಂ ಪ್ರತ್ಯಕ್ಷೈಕಪ್ರಮಾಣಿನಃ ||೪೩||

ಆಮ್ನಾಯಾನಾಮಮಾನತ್ವೇ ಧರ್ಮಾದೇರಪ್ರಮಾಣತಾ, ಪ್ರತ್ಯಕ್ಷೈಕಪ್ರಮಾಣಿನಃ ಧರ್ಮಾದ್ಯಭಾವೇ ನೋ ಮಾನಂ.

ಆಮ್ನಾಯಾನಾಂ ಅಮಾನತ್ವೇ = ವೇದಗಳಿಗೆ ಪ್ರಾಮಾಣ್ಯವಿಲ್ಲದಿದ್ದ ಪಕ್ಷದಲ್ಲಿ, ಧರ್ಮಾದೇಃ ಅಪ್ರಮಾಣತಾ = ಧರ್ಮಾದಿಗಳಿಗೆ ಪ್ರಮಾಣಶೂನ್ಯತ್ವವು (ಬಂದೀತು.) ಪ್ರತ್ಯಕ್ಷೈಕಪ್ರಮಾಣಿನಃ = ಪ್ರತ್ಯಕ್ಷವು ಒಂದೇ ಪ್ರಮಾಣವೆನ್ನುವ ಚಾರ್ವಾಕನಿಗೂ, ಧರ್ಮಾದ್ಯಭಾವೇ = ಧರ್ಮ, ಪರಲೋಕ ಮೊದಲಾದುವುಗಳ ಅಭಾವವಿಷಯದಲ್ಲಿ, ನೋ ಮಾನಂ = ಪ್ರಮಾಣವಿಲ್ಲ.

ಹಿಂದೆ ನಾರಾಯಣನು ಅನಂತಗುಣಗಳುಳ್ಳವನು ಎಂಬ ವಿಷಯದಲ್ಲಿ ಯಾರೂ ರಚಿಸದಿರುವ ನಿತ್ಯಗಳಾದ ವೇದಗಳೇ ಪ್ರಮಾಣಗಳೆಂದು ಹೇಳಿರುತ್ತೇವೆ. ಆ ವೇದಗಳನ್ನು ಪ್ರಮಾಣಗಳೆಂದು ಒಪ್ಪಿಕೊಳ್ಳದಿದ್ದರೆ; ಪ್ರತ್ಯಕ್ಷ ಪ್ರಮಾಣಕ್ಕೆ ಗೋಚರವಾಗದ, ಧರ್ಮ, ಈಶ್ವರ, ಪರಲೋಕ ಮುಂತಾದುವುಗಳ ವಿಷಯದಲ್ಲಿ ಪ್ರಮಾಣವೇ ಇಲ್ಲವೆಂದಾಗುವುದು. ಅನುಮಾನವು ಕಾಮಚಾರಿಯಾದುದರಿಂದ (ಇಷ್ಟಬಂದಂತೆ ಪ್ರಯೋಗಿಸಲು ಬರುವುದರಿಂದ) ಅನುಮಾನದಿಂದ ಧರ್ಮಾದಿಗಳ ಅಭಾವವನ್ನೂ ಸಾಧಿಸಬಹುದು. ಆದುದರಿಂದ ಧರ್ಮಾದಿಗಳನ್ನು ತಿಳಿಯಲು ವೇದ ಒಂದೇ ಸಾಧನ. ಪ್ರತ್ಯಕ್ಷ ಒಂದೇ ಪ್ರಮಾಣ, ಧರ್ಮಾದಿಗಳಿಲ್ಲ ಎನ್ನುವ ಚಾರ್ವಾಕನೂ ಪ್ರತ್ಯಕ್ಷ ಅನುಮಾನಗಳಿಗೆ ಗೋಚರವಾಗದ ಧರ್ಮಾದಿಗಳ ಅಭಾವವನ್ನೂ

Rarest Archive

ಆಗಮವನ್ನು ಒಪ್ಪದೇ ಸಾಧಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಆಗಮವನ್ನು ಪ್ರಮಾಣವೆಂದು ಒಪ್ಪಿಕೊಳ್ಳಲೇಬೇಕು.

ನ ಮಾನಾನಿ ಅಮಾನಾನಿ ತೇಷಾಂ ಭಾವಃ ತಸ್ಮಿನ್, ಧರ್ಮಃ ಆದಿಃ ಯಸ್ಯ ಸಃ ತಸ್ಯ, ನ ವಿದ್ಯತೇ ಪ್ರಮಾಣಂ ಯಸ್ಯ ಸಃ ತಸ್ಯ ಭಾವಃ, ಧರ್ಮಃ ಆದಿಃ ಯಸ್ಯ ಸಃ, ಧರ್ಮಾದೇಃ ಅಭಾವಃ ತಸ್ಮಿನ್, ಪ್ರತ್ಯಕ್ಷಂ ಏಕಂ ಪ್ರಮಾಣಂ ಅಸ್ಯ ಅಸ್ತೀತಿ ಪ್ರತ್ಯಕ್ಷೈಕಪ್ರಮಾಣೀ(-ಣಿನ್) ತಸ್ಯ.

ಧರ್ಮ ಅಧರ್ಮಾದಿಗಳ ಸಿದ್ಧಿಗೆ ವೇದವು ಬೇಡ ಪೌರುಷೇಯಗ್ರಂಥವೇ ಸಾಕು ಎಂದರೆ—

ನ ಪೌರುಷೇಯಂ ವಚನಂ ಪ್ರಾಮಾಣ್ಯೇನ ವಿನಿಶ್ಚಿತಂ ।
ಪೌರುಷೇಯತ್ವತೋ ಯದ್ವದ್ ವಾಕ್ಯಮುನ್ಮತ್ತಭಾಷಿತಂ ॥

ಪೌರುಷೇಯತ್ವತಃ ಉನ್ಮತ್ತಭಾಷಿತಂ ವಾಕ್ಯಂ ಯದ್ವತ್ (ತದ್ವತ್) ಪೌರುಷೇಯಂ ವಚನಂ ಪ್ರಾಮಾಣ್ಯೇನ ವಿನಿಶ್ಚಿತಂ ನ. ॥ ೪೪ ॥

ಪೌರುಷೇಯತ್ವತಃ = ಪುರುಷನಿಂದ ನಿರ್ಮಿಸಲ್ಪಟ್ಟಿರುವಕಾರಣದಿಂದ, ಉನ್ಮತ್ತಭಾಷಿತಂ ವಾಕ್ಯಂ ಯದ್ವತ್=ಹುಚ್ಚನು ಹೇಳಿದ ವಾಕ್ಯವು ಹೇಗೋ ಹಾಗೆ, ಪೌರುಷೇಯಂ ವಚನಂ = ಪುರುಷನು ರಚಿಸಿದ ಗ್ರಂಥವು, ಪ್ರಾಮಾಣ್ಯೇನ = ಪ್ರಾಮಾಣ್ಯವಿದೆಯೆಂದು, ವಿನಿಶ್ಚಿತಂ ನ = ನಿಶ್ಚಯಿಸಲ್ಪಟ್ಟದ್ದು ಅಲ್ಲ.

ವೇದವನ್ನು ಒಪ್ಪಿಕೊಳ್ಳದಿದ್ದರೂ ಆಪ್ತರಾದ ಬುದ್ಧಾದಿಗಳ ಮಾತಿನಿಂದ ಧರ್ಮಾದಿಗಳನ್ನು ತಿಳಿದುಕೊಳ್ಳುತ್ತೇವೆ ಎಂದು ಬೌದ್ಧನು ಹೇಳಿದರೆ ಅದಕ್ಕೆ ಉತ್ತರ—ಪ್ರಪಂಚದಲ್ಲಿ ಹುಚ್ಚನಮಾತು ಹುಚ್ಚುತನದ ಬಡಬಡಿಕೆಯಾದುದರಿಂದ ಪ್ರಮಾಣವಲ್ಲ ಎಂದು ಎಲ್ಲರೂ ತಿಳಿಯುತ್ತಾರೆ. ಅದರಂತೆ ಬುದ್ಧಾದಿಗಳ ಮಾತೂ ಮನುಷ್ಯರ ಮಾತು ಆದುದರಿಂದ ಪ್ರಮಾಣವಲ್ಲ. ಅವರು ಹುಚ್ಚರಲ್ಲ ಆಪ್ತರು ಎಂದು ನಿಶ್ಚಯಪಡಿಸಿಕೊಳ್ಳಲೂ ಸಾಧ್ಯವಿಲ್ಲ. ಅವರ ಜ್ಞಾನಾದಿವಿಷಯದಲ್ಲಿ ಸಂದೇಹವಿದ್ದೇ ಇರುತ್ತದೆ. ಹೀಗೆ ಪೌರುಷೇಯವಾಕ್ಯದಿಂದ ಧರ್ಮಾದಿಗಳನ್ನು ತಿಳಿಯಲು ಸಾಧ್ಯವಿಲ್ಲ. ಇಲ್ಲಿ

Rarest Archiver

ಅನುಮಾನಪ್ರಯೋಗ—ವಿಮತಂ ಬುದ್ಧಾದಿಪ್ರಣೀತಂ ವಾಕ್ಯಂ ಮಾನಂ ನ ಪೌರುಷೇಯವಾಕ್ಯತ್ವಾತ್ ಯದ್ಯತ್ ಪೌರುಷೇಯಂ ವಾಕ್ಯಂ ತತ್ತತ್ ಧರ್ಮಾದೌ ನ ಮಾನಂ ಯಥಾ ಉನ್ಮತ್ತವಾಕ್ಯಂ. (ಬುದ್ಧಾದಿರಚಿತ ವಾಕ್ಯಗಳೂ ಪುರುಷರಚಿತವಾಕ್ಯಗಳೇ ಆದುದರಿಂದ ಹುಚ್ಚನ ಮಾತಿನಂತೆ ಪ್ರಮಾಣಗಳಲ್ಲ.)

ಪುರುಷೇಣ ಕೃತಂ ಪೌರುಷೇಯಂ, ಪೌರುಷೇಯಸ್ಯ ಭಾವಃ ತಸ್ಮಾತ್, ಉನ್ಮತ್ತಸ್ಯ ಭಾಷಿತಂ.

ಪ್ರ—ಬುದ್ಧಾದಿಗಳು ಸರ್ವಜ್ಞರಾದುದರಿಂದ ಅವರ ಮಾತಿನಲ್ಲಿ ಅವಿಶ್ವಾಸಬರಲಾರದಷ್ಟೇ ? ಉ— ಉತ್ತರ ಹೇಳುತ್ತೇವೆ —

ವಿಮತಃ ಪುರುಷೋಽಜ್ಞಃ ಸ್ಯಾತ್ ಸ್ಯಾಚ್ಚಾಸೌ ವಿಪ್ರಲಂಭಕಃ ।
ಪುಂಸ್ತ್ವಾಚ್ಚೈತ್ರವದಿತ್ಯಸ್ತಾ ಸಾರ್ವಜ್ಞೇ ಕೇವಲಾನುಮಾ ॥ ೪೫

ವಿಮತಃ ಪುರುಷಃ ಅಜ್ಞಃ ಸ್ಯಾತ್ ಪುಂಸ್ತ್ವಾತ್ ಚೈತ್ರವತ್. ಅಸೌ ವಿಪ್ರಲಂಭಕಶ್ಚ ಸ್ಯಾತ್ ಇತಿ ಸಾರ್ವಜ್ಞೇ ಕೇವಲಾನುಮಾ ಅಸ್ತಾ.

ವಿಮತಃ ಪುರುಷಃ = ಸರ್ವಜ್ಞನೋ ಅಲ್ಲವೋ ಎಂದು ಸಂದೇಹ ವಿಷಯನಾದ ಬುದ್ಧಾದಿಮಾನವನು, ಅಜ್ಞಃಸ್ಯಾತ್ = ಅಜ್ಞಾನಿಯಾಗಿರಲೇ ಬೇಕು, (ಆಗಿರಬಹುದು) ಅಸೌ ವಿಪ್ರಲಂಭಕಃ ಸ್ಯಾತ್ ಇತಿ = ಇವನು ಮೋಸಗಾರನೂ ಆಗಿರಬಹುದು, ಎಂದು, ಸಾರ್ವಜ್ಞೇ = ಸರ್ವಜ್ಞತ್ವ ವಿಷಯದಲ್ಲಿ, ಕೇವಲಾನುಮಾ ಅಸ್ತಾ = ಶ್ರುತ್ಯಾದಿಸಹಾಯವಿಲ್ಲದ ಅನುಮಾನವು, ಖಂಡಿಸಲ್ಪಟ್ಟದ್ದಾಗಿದೆ.

ಈಗ ಬುದ್ಧನು ಸರ್ವಜ್ಞನಲ್ಲವೆಂದು ಸಾಧಿಸುತ್ತಾರೆ—ಸರ್ವಜ್ಞನು ಹೌದೋ ಅಲ್ಲವೋ ಎಂದು ವಿವಾದ ವಿಷಯನಾದ ಶೂನ್ಯವಾದಿಯಾದ ಬುದ್ಧನು ಮನುಷ್ಯನೇ ಆದುದರಿಂದ ಇತರ ಚೈತ್ರಾದಿಸಾಮಾನ್ಯಮನುಷ್ಯ ರಂತೆ ಅಜ್ಞಾನಿಯೂ ವಂಚಕನೂ ಆಗಿರಬಹುದು. ಹೀಗೆ ಬುದ್ಧನ ಸರ್ವಜ್ಞತ್ವವಿಷಯದಲ್ಲಿ ಶೂನ್ಯವಾದಿಯು ಹೇಳುವ ವೇದದ ಸಹಾಯವಿಲ್ಲದ ಅನುಮಾನವು ಪ್ರಮಾಣವಾಗಲಾರದು. ಬೌದ್ಧರ ಅನುಮಾನವು ಹೀಗಿದೆ—

Rarest Archiver

ಧರ್ಮಾದಯಃ ಕಸ್ಯಚಿತ್ ಪ್ರತ್ಯಕ್ಷಾಃ ವಸ್ತುತ್ವಾತ್ ಘಟವತ್, (ಮಡಿಕೆಯಂತೆ ಧರ್ಮಾದಿಗಳೂ ವಸ್ತುವಾದ್ದರಿಂದ ಯಾವನೋ ಒಬ್ಬನಿಗೆ [ಬುದ್ಧನಿಗೆ] ಪ್ರತ್ಯಕ್ಷವಾಗಿವೆ.)

ಈ ಬೌದ್ಧಾದಿಶಾಸ್ತ್ರಗಳಲ್ಲಿ ವಿಶ್ವಾಸವಿಟ್ಟು ಅದನ್ನು ಅನುಸರಿಸಿದವರಿಗೆ ಆಗುವ ದುಷ್ಫಲವನ್ನು ಕೇಳಿರಿ—

ದುಃಖಾಕರೋತಿಯದ್ದೈವಂ ದುಶ್ಶಾಸ್ತ್ರೇಷೂಗ್ರ ಆಗ್ರಹಃ |
ದುಃಖಾಕರೋಽತಿಘೋರಃ ಸ್ಯಾಲ್ಲೋಕೋಽತಸ್ತದ್ವತಾಂ ಧ್ರುವಃ ||

ಯತ್ ದುಶ್ಶಾಸ್ತ್ರೇಷು ಉಗ್ರಃ ಆಗ್ರಹಃ ದೈವಂ ದುಃಖಾ (ಖೀ) ಕರೋತಿ, ಅತಃ ತದ್ವತಾಂ ಅತಿಘೋರಃ ದುಃಖಾಕರಃ ಧ್ರುವಃ ಲೋಕಃ ಸ್ಯಾತ್. ೪೬

ಯತ್=ಯಾವಕಾರಣದಿಂದ, ದುಶ್ಶಾಸ್ತ್ರೇಷು=ದುಷ್ಟಶಾಸ್ತ್ರಗಳಲ್ಲಿ, ಉಗ್ರಃ=ಕಠಿನವಾದ, ಆಗ್ರಹಃ=ಹಠವು, ದೈವಂ= ಭಗವಂತನನ್ನು, ದುಃಖಾ (ಖೀ) ಕರೋತಿ=ವೇದಾದಿಸಚ್ಛಾಸ್ತ್ರಗಳಲ್ಲಿ ಹೇಳಿರುವ ಪ್ರಕಾರಕ್ಕಿಂತ ವ್ಯತ್ಯಾಸಪಡಿಸುತ್ತದೆ. ಅತಃ=ಆದ್ದರಿಂದ, ತದ್ವತಾಂ = ಅಂತಹ ಆಗ್ರಹವುಳ್ಳವರಿಗೆ, ಅತಿಘೋರಃ= ಅತ್ಯಂತಭಯಂಕರವಾದ, ದುಃಖಾಕರಃ= ಕಷ್ಟಗಳಿಗೆ ಗಣಿಯಾಗಿರುವ, ಧ್ರುವಃ= ಶಾಶ್ವತವಾದ, ಲೋಕಃ ಸ್ಯಾತ್= ಲೋಕವು ಆಗಿಯೇ ತೀರುತ್ತದೆ.

ದುಷ್ಟಶಾಸ್ತ್ರಗಳಲ್ಲಿ ಕೆಲವರಿಗೆ ಎಂದೂ ಕಡಿಮೆಯಾಗದ ಅತಿ ಕಠಿನವಾದ ಆಗ್ರಹವಿರುತ್ತದೆ. ಅವರು ತಮ್ಮ ಹಠದಿಂದ ವೇದಾದಿ ಆಗಮಗಳಿಂದ ಪ್ರತಿಪಾದ್ಯನಾದ ಭಗವಂತನನ್ನು ಬೇರೆ ರೀತಿಯಾಗಿ ಚಿಂತಿಸಿ ಉಪಾಸನೆ ಮಾಡುತ್ತಾರೆ. ಅವರು ಹಿಂತಿರುಗಿ ಬರಲಾಗದ ಭಯಂಕರ ದುಃಖವನ್ನುಂಟುಮಾಡುವ ಅಂಧತಮಸ ಎಂಬ ಮಹಾತಮಸ್ಸನ್ನು ಸೇರಿ ಅನಂತ ಕಾಲಪರ್ಯಂತ ದುಃಖಪಡುತ್ತಾರೆ.

ದುಷ್ಟಾನಿ ಚ ತಾನಿ ಶಾಸ್ತ್ರಾಣಿ ಚ ತೇಷು, ದುಃಖಸ್ಯ ಆಕರಃ ದುಃಖಾಕರಃ ಸಃ (ಆಗ್ರಹಃ) ಏಷಾಂ ಅಸ್ತೀತಿ ತದ್ವಂತಃ ತೇಷಾಂ; ದುಃಖಂ ಕರೋತಿ ದುಃಖಾಕರೋತಿ (ಪ್ರತಿಕೂಲಾಚರಣೇನ ಸ್ವಾಮಿನಂ ಪೀಡಯತಿ

Rarest Archiver

= ವಿರುದ್ಧಾಚರಣದಿಂದ ಯಜಮಾನನನ್ನು ಖಿನ್ನನನ್ನಾಗಿ ಮಾಡುತ್ತಾನೆ.) ದುಃಖಾತ್ ಪ್ರಾತಿಲೋಮ್ಯೇ (5-4-64) ಎಂಬ ಸೂತ್ರದಿಂದ ಡಾಚ್.

ಸಚ್ಛಾಸ್ತ್ರವನ್ನು ಕಲಿತವರಿಗೆ ಆಗುವ ಫಲವೇನು ?—

ಆಸ್ಮಾಕೇಽಪೇಕ್ಷಿತೇ ಪಕ್ಷೇ ಮೋಕ್ಷಂ ದದ್ಯಾದಧೋಕ್ಷಜಃ।
ಯತ್ರ ಸ್ವಾನಂದಿನಃ ಸಂತಃ ಸೇವಂತೇ ವಿಷಯಾನ್ ಬಹೂನ್ ॥೪೭॥

ಆಸ್ಮಾಕೇ ಪಕ್ಷೇ ಅಪೇಕ್ಷಿತೇ ಅಧೋಕ್ಷಜಃ 'ಯತ್ರ ಸಂತಃ ಸ್ವಾನಂದಿನಃ ಬಹೂನ್ ವಿಷಯಾನ್ ಸೇವಂತೇ' ತಂ ಮೋಕ್ಷಂ ದದ್ಯಾತ್.

ಆಸ್ಮಾಕೇ ಪಕ್ಷೇ = ನಮ್ಮಸಿದ್ಧಾಂತವು, ಅಪೇಕ್ಷಿತೇ ಸತಿ = ಪ್ರಮಾಣವೆಂದು ಒಪ್ಪಲ್ಪಟ್ಟಾಗ, ಅಧೋಕ್ಷಜಃ = ಶ್ರೀಮನ್ನಾರಾಯಣನು, ಯತ್ರ = ಯಾವ ಮೋಕ್ಷದಲ್ಲಿ, ಸಂತಃ = ಸಾತ್ತ್ವಿಕಚೇತನರು, ಸ್ವಾನಂದಿನಃ ಸಂತಃ = ಸ್ವರೂಪಾನಂದವುಳ್ಳವರಾಗಿ, ಬಹೂನ್ ವಿಷಯಾನ್ = ವಿಪುಲವಾದ ಶಬ್ದಸ್ಪರ್ಶಾದಿ ವಿಷಯಗಳನ್ನು, ಸೇವಂತೇ = ಸೇವಿ (ಅನುಭವಿ) ಸುತ್ತಾರೋ, (ತಂ) ಮೋಕ್ಷಂ ದದ್ಯಾತ್ = ಅಂತಹ ಮೋಕ್ಷವನ್ನು ಕೊಟ್ಟೇ ಕೊಡುತ್ತಾನೆ.

ನಮ್ಮ ದ್ವೈತಸಿದ್ಧಾಂತವನ್ನು ಪ್ರಮಾಣವೆಂದು ಅಂಗೀಕರಿಸುವುದಾದರೆ, ಪ್ರತ್ಯಕ್ಷಪ್ರಮಾಣಕ್ಕೆ ಗೋಚರವಾಗದ ಕೇವಲ ವೇದಪ್ರಮಾಣಕ್ಕೇ ವಿಷಯನಾಗುವ ಶ್ರೀಮನ್ನಾರಾಯಣನು ಪುರುಷಾರ್ಥಗಳಲ್ಲಿ ಉತ್ತಮವಾದ ಮೋಕ್ಷವನ್ನೇ ಕೊಡುವನು ಎಂದು ನಾವು ಸಮರ್ಥಿಸುತ್ತೇವೆ. ನಾವು ಹೇಳುವ ಮೋಕ್ಷದಲ್ಲಿ ಸಾತ್ತ್ವಿಕರಾದ ಚೇತನರು ಸ್ವರೂಪಾನಂದವನ್ನು ಅನುಭವಿಸುತ್ತಾ, ಅಪ್ರಾಕೃತಸ್ತ್ರೀಭೋಗಾದಿಗಳನ್ನು ಅಪ್ರಾಕೃತಶಬ್ದಸ್ಪರ್ಶಾದಿವಿಷಯಭೋಗಗಳನ್ನೂ ಅನುಭವಿಸುತ್ತಾ ಇರುತ್ತಾರೆ. ಇಂತಹ ಮೋಕ್ಷವನ್ನು ಶ್ರೀಹರಿಯೊಬ್ಬನೇ ಕೊಡಲು ಸಮರ್ಥನು. (ಪ್ರಪಂಚದ ಭೋಗವೆಲ್ಲವೂ ಸತ್ತ್ವರಜಸ್ಸುತಮಸ್ಸು ಎಂಬ ಮೂರು ಪ್ರಕೃತಿ ಗುಣಗಳಿಗೆ ಸಂಬಂಧಿಸಿರುತ್ತವೆ. ಆದುದರಿಂದ ಅದು ಪ್ರಾಕೃತ. ಅಪ್ರಾಕೃತವೆಂದರೆ ಪ್ರಕೃತಿಗುಣಸಂಬಂಧವಿಲ್ಲದ ಮುಕ್ತರಿಗೆ ಮಾತ್ರವೇ ದೊರಕುವ ವಿಷಯ.)

Rarest Archive

ಅಸ್ಮಾಕಂ ಅಯಂ ಆಸ್ಮಾಕಃ ತಸ್ಮಿನ್, ಅಧಃಕೃತಂ ಅಕ್ಷಜಂ ಯೇನ ಸಃ, ಸ್ವಶ್ಚಾಸೌ ಆನಂದಶ್ಚ, ಸ್ವಾನಂದಃ ಏಷಾಂ ಅಸ್ತೀತಿ ಸ್ವಾನಂದಿನಃ—(ನಂದಿನ್)

ದದ್ಯಾತ್ ದದ್ಯಾತಾಂ ದದ್ಯುಃ ಇತ್ಯಾದಿ. ಡುದಾಞ್ ದಾನೇ ವಿಧಿಲಿಙ್. ಸೇವತೇ ಸೇವೇತೇ ಸೇವಂತೇ ಷೇವೃ ಸೇವನೇ ಲಟ್.

ಮಾಯಾವಾದಿ–ಜೀವನು ನಿರ್ವಿಶೇಷಬ್ರಹ್ಮಸ್ವರೂಪನಾಗುವುದೇ ಮೋಕ್ಷ. ಅಲ್ಲಿ ಆನಂದಾನುಭವವಿದ್ದರೆ ಬ್ರಹ್ಮನು ನಿರ್ವಿಶೇಷನು ಎಂಬ ಸಿದ್ಧಾಂತಕ್ಕೆ ಭಂಗಬರುವುದಿಲ್ಲವೇ? ಉತ್ತರ—

ಸ್ವವ್ಯಾಹತ್ಯಾದಿನೋಪೇಕ್ಷ್ಯಾ ಮುಕ್ತಿರ್ಯಾ ನಿರ್ವಿಶೇಷಿ (ಷ) ತಾ ।
ಕದೇತ್ಯಾದ್ಯನುಯೋಗೇSಸ್ಯಾಃ ವಿಶೇಷಃ ಸ್ಯಾನ್ನನೂತ್ತರೇ ॥೪೮॥

ಯಾ ಮುಕ್ತಿಃ ನಿರ್ವಿಶೇಷಿತಾ (ಸಾ) ಸ್ವವ್ಯಾಹತ್ಯಾದಿನಾ ಉಪೇಕ್ಷ್ಯಾ ಕದಾ ಇತ್ಯಾದ್ಯನುಯೋಗೇ ಸತಿ (ಉತ್ತರೇ ಸತಿ) ಅಸ್ಯಾಃ ವಿಶೇಷಃ ಸ್ಯಾನ್ನನು.

ಯಾ ಮುಕ್ತಿಃ = ಯಾವ ಮೋಕ್ಷವು, ನಿರ್ವಿಶೇಷಿ(ಷ)ತಾ = ವಿಶೇಷವಿಲ್ಲದ ಬ್ರಹ್ಮಸ್ವರೂಪವಾದುದೋ, (ಸಾ = ಅದು), ಸ್ವವ್ಯಾಹತ್ಯಾದಿನಾ = ಸ್ವವ್ಯಾಹತಿಮುಂತಾದ ದೋಷದಿಂದ, ಉಪೇಕ್ಷ್ಯಾ = ಉಪೇಕ್ಷಿಸಲ್ಪಡತಕ್ಕದ್ದು, ಕದಾ ಇತ್ಯಾದ್ಯನುಯೋಗೇ ಸತಿ = ಯಾವಾಗ ಮೋಕ್ಷವು ಬರುತ್ತದೆ? ಇದೇ ಮೊದಲಾದ ಪ್ರಶ್ನೆಯು ಬಂದಾಗ, (ಉತ್ತರೇ ಸತಿ = ಉತ್ತರಕೊಟ್ಟಾಗ) ಅಸ್ಯಾಃ = ಈ ಮೋಕ್ಷಕ್ಕೆ, ವಿಶೇಷಃ ಸ್ಯಾನ್ನನು = ವಿಶೇಷವು ಬಂದೀತಷ್ಟೆ!

ಜೀವನು 'ಅಹಂ ಬ್ರಹ್ಮಾಸ್ಮಿ' ಎಂಬ ಉಪಾಸನೆಯನ್ನು ಮಾಡಿ ಯಾವ ವಿಶೇಷವೂ ಇಲ್ಲದ ಬ್ರಹ್ಮಸ್ವರೂಪಲಾಭವೆಂಬ ಮುಕ್ತಿಯನ್ನು ಹೊಂದುತ್ತಾನೆ ಎಂದು ಮಾಯಾವಾದಿಗಳು ಹೇಳುತ್ತಾರೆ. ಆದರೆ ಸ್ವವ್ಯಾಘಾತಮೊದಲಾದ ದೋಷಗಳು ಬರುವುದರಿಂದ ಆ ಮೋಕ್ಷಸ್ವರೂಪವು ದೋಷಪೂರ್ಣವಾಗಿದೆ. ಮೋಕ್ಷವು ಯಾವಾಗ ಬರುತ್ತದೆ? ಎಂದು ಪ್ರಶ್ನೆ

Rarest Archiver

ಮಾಡಿದಾಗ ಮಾಯಾವಾದಿಯು ಪ್ರತ್ಯುತ್ತರವನ್ನು ಕೊಟ್ಟರೆ ಅವನು ಹೇಳುವ ಮುಕ್ತಿಗೆ ವಿಶೇಷವು ಬಂದೇ ಬರುತ್ತದೆ. ಐಕ್ಯಜ್ಞಾನವು ಪರಿಪಕ್ವವಾದ ಕೂಡಲೇ ನಿರ್ವಿಶೇಷಬ್ರಹ್ಮಭಾವವೆಂಬ ಮುಕ್ತಿಯು ಬರುತ್ತದೆ ಎಂಬ ಮಾಯಾವಾದಿಯ ಉತ್ತರದಿಂದ ಅಭೇದಜ್ಞಾನದ ಪರಿಪಾಕದ ಉತ್ತರ ಕಾಲವಿಶೇಷಸಂಬಂಧ ಎಂಬ ವಿಶೇಷವು ಮುಕ್ತಿಗೂ ಅಭಿನ್ನನಾದ ಬ್ರಹ್ಮನಿಗೂ ಬರುತ್ತದೆಯಷ್ಟೆ! ಹೀಗೆ ಮುಕ್ತಿಯು ನಿರ್ವಿಶೇಷವಾದುದು ಎಂಬ ಮಾತು ಐಕ್ಯಜ್ಞಾನಪರಿಪಾಕದ ಉತ್ತರಕಾಲವಿಶೇಷಸಂಬಂಧವುಳ್ಳದ್ದು ಎಂಬ ಮಾತೂ ಪರಸ್ಪರ ವಿರುದ್ಧವಾದುದರಿಂದ ಸ್ವವ್ಯಾಹತಿಬರುತ್ತದೆ. ಉತ್ತರವನ್ನು ಹೇಳದಿದ್ದರೆ ಅನುಕ್ತಿ (ಮಾತಿಲ್ಲದಿರುವುದು) ಎಂಬ ದೋಷವು ಬರುತ್ತದೆ.

ಸ್ವವ್ಯಾಹತಿಃ ಆದಿಃ ಯಸ್ಯ ಸಃ, ಉಪೇಕ್ಷಿತುಂ ಯೋಗ್ಯಾ ಉಪೇಕ್ಷ್ಯಾ. ವಿಶೇಷಃ ಅಸ್ಯ ಅಸ್ತೀತಿ ವಿಶೇಷಿ ತಸ್ಯ ಭಾವಃ ವಿಶೇಷಿತಾ. ನಿರ್ಗತಾ ಚ ಸಾ ವಿಶೇಷಿತಾ ಚ ನಿರ್ವಿಶೇಷಿತಾ.

ನಿರ್ವಿಶೇಷಮೋಕ್ಷಪಕ್ಷದಲ್ಲಿ ಬೇರೊಂದು ದೋಷವನ್ನು ಹೇಳುತ್ತಾ ವೈಶೇಷಿಕಾದಿಗಳು ಹೇಳುವ ಮುಕ್ತನಿಗೆ ಬುದ್ಧ್ಯಾದಿಗಳು ಇಲ್ಲ ಎಂಬ ಪಕ್ಷವನ್ನೂ ನಿರಾಕರಿಸುತ್ತಾರೆ—

ಅಪಿ ಬುದ್ಧ್ಯಾದಿರಹಿತಃ ಪುರುಷಾರ್ಥೀ ನ ಸರ್ವಥಾ ।
ನಿಖಿಲಾನುಭವಾಭಾವಾತ್ ಪುತ್ತಲೀಕಾಪುರೋಗವತ್ ॥೪೯॥

ಬುದ್ಧ್ಯಾದಿರಹಿತಃ ಅಪಿ ನಿಖಿಲಾನುಭವಾಭಾವಾತ್ ಪುತ್ತಲೀಕಾ-ಪುರೋಗವತ್ ಸರ್ವಥಾ ಪುರುಷಾರ್ಥೀ ನ.

ಬುದ್ಧ್ಯಾದಿರಹಿತಃ ಅಪಿ = ಅಂತಃಕರಣ, ಚಕ್ಷುರಾದಿ ಇಂದ್ರಿಯಗಳು, ವಿಷಯಾನುಭವ ಇವುಗಳಿಲ್ಲದ ಮುಕ್ತನೂ ಕೂಡ, ನಿಖಿಲಾನುಭವಾಭಾವಾತ್ = ಹೊರಗಿನ ಮತ್ತು ಒಳಗಿನ ಯಾವ ಜ್ಞಾನವೂ ಇಲ್ಲದಿರುವುದರಿಂದ ಪುತ್ತಲೀಕಾಪುರೋಗವತ್ = ಪ್ರತಿಮೆ, ಗೊಂಬೆ ಮೊದಲಾದವುಗಳಂತೆ, ಸರ್ವಥಾ = ಎಲ್ಲ ರೀತಿಯಿಂದಲೂ, ಪುರುಷಾರ್ಥೀ ನ (ಸ್ಯಾತ್) = ಜೀವರಿಂದಅಪೇಕ್ಷಿಸಲ್ಪಡುವ ಪ್ರಯೋಜನವುಳ್ಳವನು ಆಗಲಾರನು.

Rarest Archiver

ವೈಶೇಷಿಕರು ಮುಕ್ತನಿಗೆ ಬುದ್ಧಿ, ಮನಸ್ಸು, ಕಣ್ಣು ಮೊದಲಾದ ಇಂದ್ರಿಯಗಳು ಯಾವುದೂ ಇಲ್ಲವೆಂದು ಹೇಳುತ್ತಾರೆ. ಇಂತಹ ಮೋಕ್ಷವನ್ನು ಯಾವನೂ ಅಪೇಕ್ಷಿಸಲಾರನು. ಇದು ಸರ್ವಥಾ ಪುರುಷಾರ್ಥವೂ ಆಗುವುದಿಲ್ಲ. ಯಾವ ಒಳಹೊರಗಿನ ವಸ್ತುಗಳ ವಿಷಯದಲ್ಲಿಯೂ ಯಾವ ತರಹದ ಜ್ಞಾನವೂ ಮುಕ್ತನಿಗೆ ಇಲ್ಲದೇ ಇದ್ದರೆ ಅವನು ಪ್ರತಿಮೆಯಂತೆ, ಮರದ ಗೊಂಬೆಯಂತೆ ಜಡವಾಗಿರಬೇಕಾಗುತ್ತದೆ. ಮರದ ಗೊಂಬೆಗೂ ಬುದ್ಧಿ ಮೊದಲಾದವು ಕಣ್ಣು ಮೊದಲಾದವೂ ಇಲ್ಲ; ಯಾವ ಪುರುಷಾ-ರ್ಥವೂ ಇಲ್ಲ. ಅದರಂತೆ ಮುಕ್ತನೂ ಇರಬೇಕಾಯಿತು.

ಬುದ್ಧಿಃ ಆದಿಃ ಯೇಷಾಂ ತೇ ಬುದ್ಧ್ಯಾದಯಃ, ಬುದ್ಧ್ಯಾದಿಭಿಃ ರಹಿತಃ, ಅರ್ಥ್ಯತೇ ಇತಿ ಅರ್ಥಃ, ಪುರುಷಾಣಾಂ ಅರ್ಥಃ ಪುರುಷಾರ್ಥಃ ಸಃ ಅಸ್ಯ ಅಸ್ತೀತಿ. ನಿಖಿಲಾಶ್ಚ ತೇ ಅನುಭವಾಶ್ಚ, ನಿಖಿಲಾನುಭವಾನಾಂ ಅಭಾವಃ, ತಸ್ಮಾತ್. ಪುತ್ತಲೀಕಾಃ ಪುರೋಗಾಃ ಯಸ್ಯ ಸಃ, ಪುತ್ತಲೀಕಾ-ಪುರೋಗೇಣ ತುಲ್ಯಂ.

ಪರಮಾತ್ಮನ ಸಾರೂಪ್ಯವನ್ನು ಹೊಂದಿದ ಮುಕ್ತನಿಗೆ ಬುದ್ಧ್ಯಾದಿಗಳು ಇಲ್ಲವೆನ್ನುವುದು ಅಯುಕ್ತ—

ಜ್ಞಾನಪ್ರಯತ್ನವಾಂಛಾವಾನೀಶೋ ನ ಹ್ಯಶುಭಂ ಭಜೇತ್ ।
ಸ್ವಸಾಮರ್ಥ್ಯೇನ ತೇನೈವ ತಂ ಚ ಕುರ್ಯಾತ್ ಸ ತಾದೃಶಂ ॥೫೦॥

ಜ್ಞಾನಪ್ರಯತ್ನವಾಂಛಾವಾನ್ ಈಶಃ ಅಶುಭಂ ನ ಭಜೇತ್ (ವ್ರಜೇತ್) ಹಿ. ತೇನ ಏವ ಸಃ ತಂ ಚ ತಾದೃಶಂ ಕುರ್ಯಾತ್.

ಜ್ಞಾನಪ್ರಯತ್ನವಾಂಛಾವಾನ್ = ಸರ್ವವಿಷಯಗಳ ಸರಿಯಾದ ಜ್ಞಾನ, ತಡೆಯಿಲ್ಲದ ಪ್ರಯತ್ನ, ಸರಿಯಾದ ಇಚ್ಛೆ, ಇವುಗಳುಳ್ಳ, ಈಶಃ = ಸಮರ್ಥನಾದ ಪರಮೇಶ್ವರನು, ಅಶುಭಂ ನ ಭ(ವ್ರ)ಜೇತ್ ಹಿ = ಅನಿಷ್ಟವನ್ನು ಹೊಂದಲಾರನಷ್ಟೆ. ತೇನ ಏವ = ಅಂತಹ ತನ್ನ ಶಕ್ತಿಯಿಂದಲೇ, ಸಃ = ಆ ಸರ್ವೇಶ್ವರನು, ತಂ ಚ = ತನ್ನನ್ನು ಉಪಾಸನೆ ಮಾಡುವ ಆ ಜೀವನನ್ನೂ, ತಾದೃಶಂ ಕುರ್ಯಾತ್ = ಅಂತಹಜ್ಞಾನಾದಿಗಳುಳ್ಳವನನ್ನಾಗಿ, ಮಾಡಿಯೇ ಮಾಡುತ್ತಾನೆ.

Rarest Archiver

ವೈಶೇಷಿಕರು ಮುಕ್ತನಿಗೆ ಜ್ಞಾನ, ಇಚ್ಛಾ, ಪ್ರಯತ್ನ ಎಂಬ ಯಾವ ವಿಶೇಷಗುಣವೂ ಇಲ್ಲ. ಬುದ್ಧಿ ಇಂದ್ರಿಯಾದಿಗಳೂ ಇಲ್ಲವೆಂದು ಹೇಳುವರು. ಅದು ಯುಕ್ತಿವಿರುದ್ಧವಾಗಿದೆ. ಅವರು ಜೀವೇಶ್ವರರಿಗೆ ಭೇದವನ್ನೇ ಹೇಳುವರು. ಆದರೆ 'ಈಶ್ವರನಿಗೆ ಸರ್ವಜ್ಞತ್ವ, ಸರಿಯಾದ ಇಚ್ಛೆ, ಕಾರ್ಯವನ್ನು ಸಾಧಿಸಿಯೇ ತೀರುವ ಪ್ರಯತ್ನ ಇವುಗಳಿವೆ. ಅವನು ತನ್ನ ಸ್ವರೂಪಶಕ್ತಿಯಿಂದಲೇ ದುಃಖ ಮೊದಲಾದ ಯಾವ ಅಮಂಗಳವನ್ನೂ ಹೊಂದುವುದಿಲ್ಲ. ಅವನಲ್ಲಿ ದುಃಖಾಭಾವರೂಪವಾದ ಸುಖವಲ್ಲದೆ ಭಾವರೂಪವಾದ ಸುಖವಿಲ್ಲವೆ'ನ್ನುವರು. ನಾವು 'ಅವನು ಯಾವಾಗಲೂ ಸುಖಪೂರ್ಣನೇ ಆಗಿರುತ್ತಾನೆ. ಅವನು ಸ್ವಂತಶಕ್ತಿಯಿಂದಲೇ ಈಶ್ವರನಾಗಿರುವನು. ಅವನು ತನ್ನನ್ನು ಉಪಾಸನೆ ಮಾಡಿ ತನ್ನಸಾರೂಪ್ಯವನ್ನು ಹೊಂದಿದ ಮುಕ್ತನನ್ನೂ ಸ್ವರೂಪಜ್ಞಾನೇಚ್ಛಾಕೃತಿಗಳುಳ್ಳವನನ್ನಾಗಿ, ನಿತ್ಯಸುಖಾನುಭವವುಳ್ಳವನನ್ನಾಗಿಯೂ ಮಾಡಿಯೇ ಮಾಡುತ್ತಾನೆ' ಎಂದು ಅಂಗೀಕರಿಸುತ್ತೇವೆ. ತಾರ್ಕಿಕರೂ ಯುಕ್ತಿಸಿದ್ಧವಾದ ಈ ವಿಷಯವನ್ನು ಅಂಗೀಕರಿಸಬೇಕಾಗುತ್ತದೆ. ಆದುದರಿಂದ ಮುಕ್ತನು ಬುದ್ಧ್ಯಾದಿಗಳಿಲ್ಲದವನು ಎನ್ನುವುದು ಯುಕ್ತಿವಿರುದ್ಧವಾಗುತ್ತದೆ.

ಜ್ಞಾನಂ ಚ ಪ್ರಯತ್ನಶ್ಚ ವಾಂಛಾ ಚ ಜ್ಞಾನಪ್ರಯತ್ನವಾಂಛಾಃ ತಾಃ ಅಸ್ಯ ಸಂತೀತಿ, ಸಮರ್ಥಸ್ಯ ಭಾವಃ, ಸ್ವಸ್ಯ ಸಾಮರ್ಥ್ಯಂ ತೇನ;

ಭಜೇತ್ ಭಜೇತಾಂ ಭಜೇಯುಃ ಭಜ ಸೇವಾಯಾಂ ವಿಧಿಲಿಜ್. ವ್ರಜೇತ್ ಎಂಬುದೂ ಹೀಗೆಯೇ, ವ್ರಜ ಗತೌ ವಿಧಿಲಿಜ್.

ಮುಕ್ತರಿಗೆ ಸುಖವನ್ನು ಒಪ್ಪಿದರೆ ದುಃಖವೂ ಬರಬೇಕಾದೀತು ಎಂಬ ಆಕ್ಷೇಪವು ಸರಿಯಲ್ಲ—

ದುಃಖವ್ಯಾಪ್ತಂ ಸುಖಂ ಬದ್ಧೇ ದೃಷ್ಟ್ವಾ ಮುಕ್ತೇ ನಿರಸ್ಯತಾ ।
ಸ್ವರೂಪಂ ಚ ನಿರಸ್ಯೇತ ಶೂನ್ಯವಾದೀ ತದಾ ಭವೇತ್ ॥ ೫೧ ॥

ಬದ್ಧೇ ದುಃಖವ್ಯಾಪ್ತಂ ಸುಖಂ ದೃಷ್ಟ್ವಾ ಮುಕ್ತೇ (ಸುಖಂ) ನಿರಸ್ಯತಾ ಸ್ವರೂಪಂ ಚ ನಿರಸ್ಯೇತ, ತದಾ ಶೂನ್ಯವಾದೀ ಭವೇತ್.

Rarest Archive

ಬದ್ಧೇ=ಸಂಸಾರಿಯಾದ ಜೀವನಲ್ಲಿ, ದುಃಖವ್ಯಾಪ್ತಂ=ದುಃಖವನ್ನು ಬಿಟ್ಟು ಇಲ್ಲದ,(ದುಃಖವನ್ನು ವ್ಯಾಪಿಸಿರುವ)ಸುಖಂ ದೃಷ್ಟ್ವಾ=ಆನಂದವನ್ನು ನೋಡಿ, ಮುಕ್ತೇ (ಸುಖಂ) ನಿರಸ್ಯತಾ=ಸಂಸಾರದಿಂದ ಬಿಡುಗಡೆಹೊಂದಿದ ಜೀವನಲ್ಲಿಯೂ ಸುಖವನ್ನು ನಿರಾಕರಿಸುವ ವೈಶೇಷಿಕನೆಂಬ ವಾದಿಯಿಂದ, ಸ್ವರೂಪಂ ಚ ನಿರಸ್ಯೇತ=ಮುಕ್ತಜೀವನ ಸ್ವರೂಪವೇ ನಿರಾಕರಿಸಲ್ಪಡಬೇಕಾದೀತು. ತದಾ=ಆಗ ಶೂನ್ಯವಾದೀ ಭವೇತ್=(ತಾರ್ಕಿಕನು) ಶೂನ್ಯವಾದಿಯಾದ ಬೌದ್ಧನಾದಾನು.

ಸಂಸಾರಿಯಾದ ಜೀವನಲ್ಲಿ ಸುಖವಿದೆ, ದುಃಖವೂ ಇದ್ದೇ ಇದೆ. ಹೀಗೆ ಸುಖವಿದ್ದಲ್ಲೆಲ್ಲಾ ದುಃಖವಿದೆ ಎಂದು ಸಂಸಾರಬಂಧವಿರುವ ಜೀವನಲ್ಲಿ ಸುಖದುಃಖಗಳಿಗೆ ವ್ಯಾಪ್ತಿಯನ್ನು, (ಅವೆರಡೂ ಒಂದನ್ನು ಬಿಟ್ಟು ಮತ್ತೊಂದು ಇರುವುದಿಲ್ಲ ಎಂಬ ಸಂಬಂಧವನ್ನು) ತಿಳಿದು, ಮುಕ್ತನಲ್ಲಿ ದುಃಖವಿಲ್ಲವೆಂದರೆ ಸುಖವೂ ಇರಲಾರದು, ಸುಖವಿದ್ದರೆ ದುಃಖವೂ ಇರಬೇಕಾದೀತೆಂದು ವಾದಿಸುವ ಆ ವಾದಿಯು ಮುಕ್ತಜೀವನಿಗೆ ಸ್ವರೂಪವೂ ಇಲ್ಲವೆಂದು ಹೇಳಬೇಕಾದೀತು. ಸಂಸಾರದಲ್ಲಿ ಸುಖವೂ ದುಃಖವೂ ಜೀವ ಸ್ವರೂಪವೂ ಕಂಡಿದೆ. ಮುಕ್ತರಲ್ಲಿ ದುಃಖವಿಲ್ಲದಿರುವಂತೆ ಸುಖವೂ ಇಲ್ಲ ವಾದರೆ ಸುಖದುಃಖಗಳ ಅವಿನಾಭಾವಸಂಬಂಧವುಳ್ಳ ಜೀವಸ್ವರೂಪವೂ ಇಲ್ಲ ವೆಂದು ತಾರ್ಕಿಕನೂ, ಅದ್ವೈತಿಯೂ ಹೇಳಬೇಕಾದೀತು. ಆಗ ಅವರಿಬ್ಬರೂ ಶೂನ್ಯವಾದಿಗಳೇ ಆದಾರು.

ದುಃಖೇನ ವ್ಯಾಪ್ತಂ ದುಃಖವ್ಯಾಪ್ತಂ, ತತ್; ಶೂನ್ಯಂ (ತತ್ತ್ವಂ) ವದತೀತಿ ಶೂನ್ಯವಾದೀ.

ಮುಕ್ತರಿಗೆ ಬುದ್ಧ್ಯಾದಿಗಳನ್ನು ಒಪ್ಪಿದರೆ ಬರುವ ಆಕ್ಷೇಪಕ್ಕೆ ಉತ್ತರ—

ನನು ವಿಪ್ರತಿಪನ್ನಸ್ಸ್ಯಾದೂರ್ಮಿವಾನ್ ದೇಹವತ್ತ್ವತಃ ।
ಚೈತ್ರೋ ಯಥೇತ್ಯುಪಾಧಿಃ ಸ್ಯಾತ್ತತ್ರ ಚಾಶುದ್ಧದೇಹಿತಾ ॥೫೨॥

ನನು ವಿಪ್ರತಿಪನ್ನಃ ದೇಹವತ್ತ್ವತಃ ಊರ್ಮಿವಾನ್ ಸ್ಯಾತ್ ಚೈತ್ರೋ ಯಥಾ; ಇತಿ, ತತ್ರ ಚ ಅಶುದ್ಧದೇಹಿತಾ ಉಪಾಧಿಃ ಸ್ಯಾತ್.

Rarest Archiver

ನನು ವಿಪ್ರತಿಪನ್ನಃ = ಹಾಗಾದರೆ ವಿವಾದವಿಷಯನಾದ ಮುಕ್ತ ಜೀವನು, ದೇಹವತ್ತ್ವತಃ = ದೇಹವುಳ್ಳತನದಿಂದ, ಊರ್ಮಿವಾನ್ ಸ್ಯಾತ್ = ದುಃಖಜನಕವಾದ ಊರ್ಮಿ ಎಂಬ ದೋಷವುಳ್ಳವನಾದಾನು, ಚೈತ್ರೋ ಯಥಾ = ಚೈತ್ರನೆಂಬ ಸಂಸಾರಿಜೀವನಂತೆ, ಇತಿ = ಹೀಗೆ ಶಂಕಿಸಿದರೆ, ತತ್ರ ಚ = ಆ ಅನುಮಾನದಲ್ಲಿ, ಅಶುದ್ಧದೇಹಿತಾ = ಅಶುದ್ಧದೇಹವುಳ್ಳತನವು, ಉಪಾಧಿಃ ಸ್ಯಾತ್ = ಉಪಾಧಿಯಾದೀತು.

ವೈಶೇಷಿಕನು ಹೀಗೆ ಆಕ್ಷೇಪಿಸುತ್ತಾನೆ—ಮುಕ್ತನಿಗೆ ಬುದ್ಧ್ಯಾದಿಗಳು ಇವೆಯೆಂದು ಅಂಗೀಕರಿಸಿದರೆ ಆ ಬುದ್ಧ್ಯಾದಿಗಳಿಗೆ ಆಶ್ರಯವಾದ ದೇಹವೂ ಇದೆಯೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ಹಾಗೆ ಒಪ್ಪಿಕೊಂಡರೆ ಮುಕ್ತನಿಗೆ ಆರು ಊರ್ಮಿಗಳೆಂಬ ದುಃಖ ಜನಕವಾದ ದೋಷಗಳೂ ಇವೆಯೆಂದು ಅಂಗೀಕರಿಸಬೇಕಾಗುತ್ತದೆ. ಊರ್ಮಿಗಳುಳ್ಳವನು ಮುಕ್ತನಾಗಲಾರನು. ಊರ್ಮಿಗಳಿಗೂ ಮುಕ್ತಿಗೂ ವಿರೋಧವಿದೆ. ಆದುದರಿಂದ ಮುಕ್ತನಿಗೆ ದೇಹವಿಲ್ಲವೆಂದೇ ಹೇಳಬೇಕಾಗುತ್ತದೆ. ಹಾಗೆ ದೇಹವಿಲ್ಲದಿದ್ದರೆ ಜ್ಞಾನೇಚ್ಛಾದಿಗಳೂ ಇರುವುದಿಲ್ಲ. ಆದ್ದರಿಂದ ನೀವು ಹಿಂದೆ ಹೇಳಿದ ಜ್ಞಾನೇಚ್ಛಾಕೃತಿಗಳು ಮುಕ್ತಜೀವನಿಗೆ ಯುಕ್ತವಾಗುವುದಿಲ್ಲ ಎಂದು ತಾರ್ಕಿಕನ ಆಕ್ಷೇಪ. ಈ ಆಕ್ಷೇಪವನ್ನು ವೇದಾಂತಿಗಳಾದ ನಾವು ಹೀಗೆ ಪರಿಹರಿಸುತ್ತೇವೆ. ತಾರ್ಕಿಕರೇ ! ನೀವು 'ವಿಪ್ರತಿಪನ್ನಃ ಊರ್ಮಿವಾನ್ ಸ್ಯಾತ್ ದೇಹವತ್ತ್ವಾತ್ ಚೈತ್ರೋ ಯಥಾ' ಎಂಬ ದೂಷಣಾನುಮಾನವನ್ನು ಹೇಳಬೇಕು. ಆದರೆ ಈ ಅನುಮಾನಕ್ಕೆ ಮೂಲಭೂತವಾದ ವ್ಯಾಪ್ತಿಯಲ್ಲಿ ಅಶುದ್ಧದೇಹಿತಾ—ಎಂಬ ಉಪಾಧಿಯು (ಸಾಧ್ಯವಾಗಿರುವ ಊರ್ಮಿಮತ್ತ್ವಕ್ಕೆ ಪ್ರಯೋಜಕವಾದ ಬೇರೊಂದು ಧರ್ಮವು) ಇದೆ. ಉಪಾಧಿಯೆಂದರೆ ಸಾಧ್ಯಕ್ಕೆ ವ್ಯಾಪಕವಾಗಿದ್ದು ಸಾಧನಕ್ಕೆ ಅವ್ಯಾಪಕವಾಗಿರುವ ಧರ್ಮ, ಪರ್ವತಃ ಧೂಮವಾನ್ ವಹ್ನೇಃ ಎಂಬಲ್ಲಿ (ಪರ್ವತವು ಹೊಗೆ ಉಳ್ಳದ್ದು ಬೆಂಕಿಯಿರುವುದರಿಂದ ಎಂಬ ಅನುಮಾನದಲ್ಲಿ) ಆರ್ದ್ರೇಂಧನಸಂಯೋಗವು (ಹಸಿಕಟ್ಟಿಗೆಯ ಸಂಬಂಧವು) ಉಪಾಧಿಯು. ಅಂದರೆ ಯಾವುದಾದರೊಂದು ಸ್ಥಳದಲ್ಲಿ ಕೇವಲ ಬೆಂಕಿ

Rarest Archive

ಯಿರುವುದರಿಂದ ಹೊಗೆ ಇರುವುದಿಲ್ಲ. ಹಸಿಕಟ್ಟಿಗೆಯ ಸಂಬಂಧ ದಿಂದ ಹೊಗೆ ಇರುತ್ತದೆ. ಈ ಆರ್ದ್ರೇಂಧನಸಂಯೋಗವು ಹೊಗೆ ಇದ್ದ ಸ್ಥಳದಲ್ಲೆಲ್ಲಾ ಇರುವುದರಿಂದ ಸಾಧ್ಯವಾದ ಧೂಮಕ್ಕೆ ವ್ಯಾಪಕ ವಾಯಿತು. ತಪ್ತಾಯೋಗೋಲಕದಲ್ಲಿ (ಕಾದ ಕಬ್ಬಿಣದ ಗುಂಡಿನಲ್ಲಿ) ಹೇತುವಾದ ವಹ್ನಿ ಇದೆ, ಆರ್ದ್ರೇಂಧನಸಂಯೋಗವೆಂಬ ಉಪಾಧಿ ಯಿಲ್ಲ. ಆದುದರಿಂದ ಉಪಾಧಿಯು ಸಾಧನಾವ್ಯಾಪಕವಾಯಿತು. ಹೀಗೆಯೇ ಅಶುದ್ಧದೇಹಿತ್ವವೆಂಬುದು ಆರು ಊರ್ಮಿಗಳುಳ್ಳ ಸಂಸಾರಿಗಳಲ್ಲಿ ಇರು ತ್ತದೆ. ಸಾಧ್ಯವ್ಯಾಪಕವಾಯಿತು. ಆನಂದಮಯ ದೇಹವುಳ್ಳ ಈಶ್ವರನಲ್ಲಿ (ಮುಕ್ತನಲ್ಲಿ) ಇಲ್ಲದಿರುವುದರಿಂದ ಸಾಧನಾವ್ಯಾಪಕವಾಯಿತು. ಹೇಗೆ ಉಪಾಧಿಸಹಿತವಾದ ವಹ್ನಿ ಹೇತುವಿನಿಂದ ಧೂಮವನ್ನು ಸಾಧಿಸಲು ಬರುವು ದಿಲ್ಲವೋ ಅದರಂತೆ ಉಪಾಧಿಸಹಿತವಾದ ದೇಹವತ್ತ್ವಹೇತುವಿನಿಂದಲೂ ಊರ್ಮಿಮತ್ತ್ವವನ್ನು ಸಾಧಿಸಲು ಬರುವುದಿಲ್ಲ. ಹೀಗೆ ತಾರ್ಕಿಕನು ಈ ಅನುಮಾನದಿಂದ ಮುಕ್ತನಿಗೆ ದೇಹವಿದ್ದರೆ ಷಡೂರ್ಮಿಗಳು ಇರಬೇಕಾಗು ತ್ತದೆ ಎಂದು ಸಾಧಿಸಲು ಬರುವುದಿಲ್ಲ. ವಹ್ನಿಯು ಧೂಮಕ್ಕೆ ವ್ಯಾಪಕವಾದ ಆರ್ದ್ರೇಂಧನಸಂಯೋಗಕ್ಕೆ ವ್ಯಭಿಚಾರಿಯಾದುದರಿಂದ (ಆರ್ದ್ರೇಂಧನ ಸಂ- ಯೋಗವಿಲ್ಲದಿದ್ದಲ್ಲಿ ಇರುವುದರಿಂದ) ಉಪಾಧಿಗೆ ವ್ಯಾಪ್ಯವಾದ ಧೂಮಕ್ಕೂ ವ್ಯಭಿಚಾರಿ (ಅಂದರೆ ಧೂಮವಿಲ್ಲದಿದ್ದಲ್ಲಿಇರುತ್ತದೆ) ಅದರಂತೆ,ದೇಹವತ್ತ್ವವು ಊರ್ಮಿಮತ್ತ್ವಕ್ಕೆ ವ್ಯಾಪಕವಾದ ಅಶುದ್ಧದೇಹಿತ್ವಕ್ಕೆ ಈಶ್ವರ ಮತ್ತು ಮುಕ್ತರಲ್ಲಿ ವ್ಯಭಿಚಾರಿಯಾಗಿರುವುದರಿಂದ ಊರ್ಮಿಮತ್ತ್ವಕ್ಕೂ ವ್ಯಭಿಚಾರಿಯಾಗುತ್ತದೆ. ಹೀಗೆ ಊರ್ಮಿಮತ್ತ್ವವಿಲ್ಲದಿದ್ದಲ್ಲಿ ಮುಕ್ತ- ಈಶ್ವರರಲ್ಲಿರುವ ದೇಹವತ್ತ್ವದಿಂದ ಊರ್ಮಿಮತ್ತ್ವವನ್ನು ಸಾಧಿಸಲು ಬರುವುದಿಲ್ಲ. ಹೀಗಾಗಿ ತಾರ್ಕಿಕನ ಇಷ್ಟವು ನೆರವೇರುವುದಿಲ್ಲ. ತಪ್ತ ಅಯೋಗೋಲಕದಲ್ಲಿ ಉಪಾಧಿಯಾದ ಆರ್ದ್ರೇಂಧನಸಂಯೋಗವು ಇಲ್ಲ ದಿರುವುದರಿಂದ ಧೂಮವೂ ಇಲ್ಲವೆಂದು ಸಿದ್ಧಿಸುವಂತೆ, ಮುಕ್ತನಲ್ಲಿ ಅಶುದ್ಧ ದೇಹಿತ್ವವಿಲ್ಲದಿರುವುದರಿಂದ ಊರ್ಮಿಮತ್ತ್ವವೂ ಇಲ್ಲವೆಂದೇ ಸಿದ್ಧಿಸುತ್ತದೆ. ಪರಮಾತ್ಮನ ದೇಹದಂತೆ ಮುಕ್ತರ ದೇಹವು ಅಪ್ರಾಕೃತ, ಶುದ್ಧ; ಸ್ವರೂಪ ಜ್ಞಾನ-ಆನಂದಮಯವಾದುದು. ಈ ವಿಷಯವು ಶ್ರುತಿಸ್ಮೃತಿಯುಕ್ತಿ

Rarest Archiver

ಗಳಿಂದ ಸಿದ್ಧಿಸುತ್ತದೆ ಎಂದು ಭಾವ. ಅನುಮಾನಪ್ರಯೋಗ–'ಮುಕ್ತಃ ಊರ್ಮಿಮಾನ್ ನ ಭವತಿ ಅಶುದ್ಧದೇಹರಹಿತತ್ವಾತ್ ಈಶ್ವರವತ್'– ಊರ್ಮಿಗಳು, (ಅಸ್ತಿ) ಜಾಯತೇ, ವರ್ಧತೇ, ವಿಪರಿಣಮತೇ, ಹ್ರಸತಿ, ಕ್ಷೀಯತೇ ನಶ್ಯತಿ– ಇದ್ದ ವಸ್ತುವು, ಹುಟ್ಟುತ್ತದೆ, ಬೆಳೆಯುತ್ತದೆ, ವ್ಯತ್ಯಾಸಹೊಂದುತ್ತದೆ, ಹ್ರಾಸಹೊಂದುತ್ತದೆ, ಕ್ಷೀಣಿಸುತ್ತದೆ, ನಾಶ ವಾಗುತ್ತದೆ—ಇವೇ ಷಡೂರ್ಮಿಗಳು. ಅಥವಾ ಅಶನಾಯಾ (ಹಸಿವು), ಪಿಪಾಸಾ (ಬಾಯಾರಿಕೆ) ರಾಗ, ದ್ವೇಷ, ಶೋಕ, ಮೋಹ ಇವು ಆರು ಊರ್ಮಿಗಳು.

ಊರ್ಮಯಃ ಅಸ್ಯ ಸಂತೀತಿ, ದೇಹಃ ಅಸ್ಯ ಅಸ್ತೀತಿ ದೇಹವಾನ್, ದೇಹವತಃ ಭಾವಃ ದೇಹವತ್ತ್ವಂ ತಸ್ಮಾತ್; ಅಶುದ್ಧಃ ದೇಹಃ ಅಸ್ಯ ಅಸ್ತೀತಿ, ಅಶುದ್ಧದೇಹಿನಃ ಭಾವಃ;

ಹೀಗೆ ದೇಹವತ್ತ್ವಾನುಮಾನಕ್ಕೆ ಉಪಾಧಿಯನ್ನು ಹೇಳಿ ಈಗ ವ್ಯಭಿಚಾರವನ್ನು ಹೇಳುತ್ತಾರೆ—

ಅನೈಕಾಂತಿಕತಾಹೇತೋರ್ದೇಹವತ್ತ್ವಾದಧೀಶಿತುಃ |
ಸೋಽದೇಹಶ್ಚೇದನಿಚ್ಛಾದಿರ್ಭವೇಚ್ಛಶವಿಷಾಣವತ್ || ೫೩ ||

ಅಧೀಶಿತುಃ ದೇಹವತ್ತ್ವಾತ್ ಹೇತೋಃ ಅನೈಕಾಂತಿಕತಾ. ಸಃ ಅದೇಹಶ್ಚೇತ್ ಶಶವಿಷಾಣವತ್ ಅನಿಚ್ಛಾದಿಃ ಭವೇತ್.

ಅಧೀಶಿತುಃ ದೇಹವತ್ತ್ವಾತ್ = ಪರಮೇಶ್ವರನಿಗೆ ದೇಹವಿರೋಣದ ರಿಂದ, ಹೇತೋಃ = ದೇಹವತ್ತ್ವ ಎಂಬಹೇತುವಿಗೆ, ಅನೈಕಾಂತಿಕತಾ = ಊರ್ಮಿಮತ್ತ್ವ ಎಂಬ ಸಾಧ್ಯವಿಲ್ಲದಿರುವಲ್ಲಿ ದೇಹವತ್ತ್ವಎಂಬ ಹೇತುವಿನ ಇರುವಿಕೆ ಎಂಬ ವ್ಯಭಿಚಾರವು ಬರುತ್ತದೆ. ಸಃ ಅದೇಹಶ್ಚೇತ್ = ಆ ಪರಮೇಶ್ವರನು ದೇಹವಿಲ್ಲದವನಾದರೆ, ಶಶವಿಷಾಣವತ್ = ಮೊಲದ ಕೊಂಬಿನಂತೆ, ಅನಿಚ್ಛಾದಿಃ ಭವೇತ್ = ಇಚಾ ದಿಗಳು ಇಲ್ಲದಿರುವವನು ಆದಾನು.

ಹಿಂದೆ ಹೇಳಿದ—ಮುಕ್ತನಿಗೆ ದೇಹವಿದ್ದರೆ ಷಡೂರ್ಮಿಗಳೂ ಇರ ಬೇಕಾದೀತು ಎಂಬ ಅನುಮಾನಕ್ಕೆ ವ್ಯಭಿಚಾರದೋಷವೂ ಬರುತ್ತದೆ.

Rarest Archiver

ವ್ಯಭಿಚಾರವೆಂದರೆ ಪಕ್ಷ ಸಪಕ್ಷ ವಿಪಕ್ಷಗಳಲ್ಲಿ ಹೇತುವು ಇರುವುದು. ದೇಹವತ್ತ್ವಎಂಬ ಹೇತುವು ಪಕ್ಷವಾಗಿರುವ ಜ್ಞಾನಾನಂದಮಯದೇಹವುಳ್ಳ ಮುಕ್ತನಲ್ಲಿ ಇದೆ, ಊರ್ಮಿಗಳುಳ್ಳವನೆಂದು ಅಂಗೀಕೃತನಾದ ದೃಷ್ಟಾಂತನಾದ ಸಂಸಾರಿಯಲ್ಲಿ ಇದೆ. ಊರ್ಮಿಮತ್ತ್ವವಿಲ್ಲದಿರುವ ಜ್ಞಾನಾನಂದಮಯಶರೀರವುಳ್ಳ ವಿಪಕ್ಷವಾದ ಈಶ್ವರನಲ್ಲಿದೆ. ಆದುದರಿಂದ ಹೇತುವು ವ್ಯಭಿಚಾರಿಯಾಯಿತು. ಈಶ್ವರನಿಗೆ ದೇಹವನ್ನು ಒಪ್ಪಿಕೊಂಡರೆ ತಾನೇ ವ್ಯಭಿಚಾರವು ಬರುತ್ತದೆ! ನಾವು ಈಶ್ವರನಿಗೆ ದೇಹವನ್ನೇ ಒಪ್ಪಿಕೊಳ್ಳುವುದಿಲ್ಲ ಎಂದರೆ, ಹಾಗಾದರೆ ನಿಮ್ಮ ಈಶ್ವರನು ಇಚ್ಛಾ, ಜ್ಞಾನ, ಪ್ರಯತ್ನ ಎಂಬ ಗುಣಗಳಿಲ್ಲದವನೂ ಆಗಬೇಕಾದೀತು. ಶಶವಿಷಾಣಕ್ಕೆ ದೇಹವಿಲ್ಲ, ಇಚ್ಛಾದಿಗಳೂ ಇಲ್ಲ, ಅದರಂತೆ—ವಿಮತಃ ಈಶ್ವರಃ ಇಚ್ಛಾದಿರಹಿತಃ ದೇಹರಹಿತತ್ವಾತ್ ಶಶವಿಷಾಣವತ್ ಎಂದು ನಮ್ಮ ಪ್ರತ್ಯನುಮಾನಪ್ರಯೋಗವು. ಅಥವಾ ಈಶ್ವರಃ ಯದ್ಯದೇಹಃ ಸ್ಯಾತ್ ತರ್ಹಿ ಇಚ್ಛಾದಿರಹಿತೋಽಪಿ ಸ್ಯಾತ್ ಶಶವಿಷಾಣವತ್ ಎಂದು ಆಪಾದನರೂಪವಾದ ದೂಷಣಾನುಮಾನವನ್ನೂ (ತರ್ಕವನ್ನು) ಇಟ್ಟುಕೊಳ್ಳಬಹುದು.

ನ ವಿದ್ಯತೇ ದೇಹಃ ಯಸ್ಯ ಸಃ, ಇಚ್ಛಾ ಆದಿಃ ಯಸ್ಯ ಸಃ, ನ ವಿದ್ಯತೇ ಇಚ್ಛಾದಿಃ ಯಸ್ಯ ಸಃ, ಶಶವಿಷಾಣೇನ ತುಲ್ಯಂ ಶಶವಿಷಾಣವತ್.

ಈಶ್ವರನು ತಿಳಿಯುವವನು (ಜ್ಞಾತೃ) ಆದುದರಿಂದ ಅವನಿಗೆ ಜ್ಞಾತೃ ಎಂಬ ಸ್ವರೂಪವಿರುವಾಗ ಅವನು ಶಶವಿಷಾಣದಂತೆ ಎಂದು ಹೇಗೆ ಹೇಳುತ್ತೀರಿ?—

ಜ್ಞಾತ್ರಾದಿರೂಪಮಸ್ಯ ಸ್ಯಾದ್ ವೈಲಕ್ಷಣ್ಯಾಯ ಚೇತ್ತತಃ ।
ತದೇವ ದೇಹಶಬ್ದೋಕ್ತಂ ನಹ್ಯಸೌ ಪ್ರಾಕೃತಾಕೃತಿಃ ॥೫೪॥

ಅಸ್ಯ ತತಃ ವೈಲಕ್ಷಣ್ಯಾಯ ಜ್ಞಾತ್ರಾದಿರೂಪಂ ಸ್ಯಾಚ್ಚೇತ್ ತದೇವ ದೇಹಶಬ್ದೋಕ್ತಂ ಅಸೌ ಪ್ರಾಕೃತಾಕೃತಿಃ ನ ಹಿ.

ಅಸ್ಯ = ಈ ಪರಮೇಶ್ವರನಿಗೆ, ತತಃ = ಶಶವಿಷಾಣಾದಿಗಳಿಗಿಂತ, ವೈಲಕ್ಷಣ್ಯಾಯ = ವ್ಯತ್ಯಾಸವು ಸಿದ್ಧಿಸುವುದಕ್ಕಾಗಿ, ಜ್ಞಾತ್ರಾದಿರೂಪಂ ಸ್ಯಾತ್ ಚೇತ್ = ಜ್ಞಾತಾ = ತಿಳಿಯುವವನು ಇತ್ಯಾದಿಸ್ವರೂಪವು ಇದೆ

Rarest Archiver

ಎಂದು ಒಪ್ಪಿಕೊಂಡರೆ, ತದೇವ = ಅದೇ, ದೇಹಶಬ್ದೋಕ್ತಂ = ದೇಹವೆಂಬ ಶಬ್ದದಿಂದ ಹೇಳಿಲ್ಪಟ್ಟದ್ದು, ಅಸೌ = ಈ ಈಶ್ವರನು, ಪ್ರಾಕೃತಾಕೃತಿಃ = ಪ್ರಾಕೃತದೇಹವುಳ್ಳವನು, ನ ಹಿ = ಅಲ್ಲವಷ್ಟೆ !

ಮೊಲದಕೊಂಬಿನಂತೆ ಈಶ್ವರನು ಅಲ್ಲವೆಂದು ಸಾಧಿಸಲು ತಾರ್ಕಿಕನು ಈಶ್ವರನಿಗೆ ಜ್ಞಾತೃ, ಏಷಿತೃ (ಇಚ್ಛಿಸುವವನು), ಪ್ರಯತಿತೃ (ಪ್ರಯತ್ನಿಸುವವನು), ಎಂಬ ಸ್ವರೂಪಗಳು ಇವೆ ಎಂದು ಹೇಳುವುದಾದರೆ ಆ ಸ್ವರೂಪಗಳೇ ಈಶ್ವರನ ದೇಹವೆಂದು ನಾವು ಒಪ್ಪಿರುತ್ತೇವೆ. ಆ ಪರಮಾತ್ಮನು ಸಂಸಾರಿಗಳಂತೆ ಪ್ರಾಕೃತವಾದ ಅಶುದ್ಧವಾದ ದೇಹವುಳ್ಳವನಲ್ಲವಷ್ಟೆ, ಅಪ್ರಾಕೃತದೇಹವನ್ನು ಪರವಾದಿಯೇ ಒಪ್ಪಿದ್ದರಿಂದ ಅವನು ಹೇಳಿದ ಅನುಮಾನದಲ್ಲಿ ದೋಷವು ಸ್ಥಿರವಾಯಿತು.

ಜ್ಞಾತೃ ಆದಿ ಯಸ್ಯ ತತ್, ಜ್ಞಾತ್ರಾದಿ ಇತಿ ರೂಪಂ. ವಿಲಕ್ಷಣಸ್ಯ ಭಾವಃ ವೈಲಕ್ಷಣ್ಯಂ, ದೇಹ ಇತಿ ಶಬ್ದಃ, ದೇಹಶಬ್ದೇನ ಉಕ್ತಂ, ಪ್ರಕೃತೇಃ ಇಯಂ ಪ್ರಾಕೃತೀ, ಪ್ರಾಕೃತೀ ಆಕೃತಿಃ ಯಸ್ಯ ಸಃ.

ಹೀಗೆ ಪರವಾದಿಯ ಅನುಮಾನದೂಷಣದ ಫಲವೇನು ?—

ಏವಂ ಸ್ವರೂಪದೇಹತ್ವಂ ಮುಕ್ತಸ್ಯಾಪ್ಯುರರೀಕೃತಂ ।
ನಾಽನಿಷ್ಟಭೋಗಸ್ತೇನ ಸ್ಯಾತ್ ಪ್ರಾಕೃತಕ್ಷೇತ್ರಸಂಭವಃ ॥೫೫॥

ಮುಕ್ತಸ್ಯಾಪಿ ಏವಂ ಸ್ವರೂಪದೇಹತ್ವಂ ಉರರೀಕೃತಂ ತೇನ ಪ್ರಾಕೃತಕ್ಷೇತ್ರಸಂಭವಃ ಅನಿಷ್ಟಭೋಗಃ ನ ಸ್ಯಾತ್.

ಮುಕ್ತಸ್ಯಾಪಿ = ಸಂಸಾರಬಂಧದಿಂದ ಬಿಡುಗಡೆಯನ್ನು ಪಡೆದ ಜೀವನಿಗೂ, ಏವಂ = ಹೀಗೆ, ಸ್ವರೂಪದೇಹತ್ವಂ = ಜ್ಞಾನಾನಂದಮಯವಾದ ದೇಹವುಳ್ಳತನವು, ಉರರೀಕೃತಂ = ಅಂಗೀಕರಿಸಲ್ಪಟ್ಟಿದೆ. ತೇನ = ಆ ಕಾರಣದಿಂದ, ಪ್ರಾಕೃತಕ್ಷೇತ್ರಸಂಭವಃ = ಪ್ರಕೃತಿಪರಿಣಾಮದಿಂದ ಉಂಟಾದ ದೇಹದಿಂದ ಸಂಭವಿಸುವ, ಅನಿಷ್ಟಭೋಗಃ ನ ಸ್ಯಾತ್ = ದುಃಖಾನುಭವವು ಆಗಲಾರದು.

ಹೀಗೆ ಪರಮೇಶ್ವರನಂತೆಯೇ ಮುಕ್ತಜೀವನಿಗೂ ಕೂಡ ಜ್ಞಾನಾನಂದಾತ್ಮಕವಾದ ಸ್ವರೂಪದೇಹವು ಇದೆಯೆಂದು ನಾವು ಅಂಗೀಕರಿಸುತ್ತೇವೆ.

Rarest Archiver

ಹೀಗೆ ಒಪ್ಪಿದಾಗ ಪ್ರಾಕೃತವಾದ ಅಶುದ್ಧದೇಹವಿರುವ ಅಮುಕ್ತಜೀವರಿಗೆ ಬರುವ ದುಃಖಾದ್ಯನಿಷ್ಟಗಳ ಅನುಭವವು ಮುಕ್ತಜೀವರಿಗೂ ಬರಲಿ ಎಂಬ ಆಪಾದನೆಯು ಯುಕ್ತವಾಗುವುದಿಲ್ಲ. ಮುಕ್ತನಿಗೆ ಅಪ್ರಾಕೃತದೇಹವಿರುವುದರಿಂದ ಸ್ವರೂಪಸುಖವನ್ನು ಮಾತ್ರವೇ ಅವನು ಅನುಭವಿಸುವನು. ಸಂಸಾರಿಯಂತೆ ದುಃಖಾನುಭವವನ್ನು ಮಾಡುವ ಪ್ರಸಕ್ತಿಯೇ ಇಲ್ಲ. ಹೀಗೆ ಮುಕ್ತನು ಸುಖಿಯಾದರೆ ದುಃಖಿಯೂ ಆಗಲಿ ಎಂಬ ಆಕ್ಷೇಪವು ಅಯುಕ್ತವಾಗುತ್ತದೆ.

ಸ್ವರೂಪಂ ದೇಹಃ ಯಸ್ಯ ಸಃ ತಸ್ಯ ಭಾವಃ, ಅನಿಷ್ಟಸ್ಯ ಭೋಗಃ, ಪ್ರಕೃತೇಃ ಇದಂ, ಪ್ರಾಕೃತಂ ಚ ತತ್ ಕ್ಷೇತ್ರಂ ಚ. ಪ್ರಾಕೃತಕ್ಷೇತ್ರಾತ್ ಸಂಭವಃ ಯಸ್ಯ.

ಮುಕ್ತನಿಗೆ ಸ್ವರೂಪದೇಹವಿದೆಯೆಂದು ಒಪ್ಪಿದರೆ, ದೇಹಕ್ಕೂ ಮುಕ್ತನಿಗೂ ಅಭೇದವಿದೆಎಂದು ಹೇಳಬೇಕು. ದೇಹವು ಅವಯವ ಸಮುದಾಯರೂಪವಾದುದರಿಂದ ಮುಕ್ತನು ಸಾವಯವನಾದನು. ಲೋಕದಲ್ಲಿ ಸಾವಯವ ವಸ್ತುವಿಗೆ ನಾಶವು ಕಂಡಿರುವುದರಿಂದ ಮುಕ್ತನಿಗೂ ನಾಶವು ಬರುವುದಿಲ್ಲವೇ ? ಎಂಬ ಆಕ್ಷೇಪ—

ವಿಮತೋ ನಾವಯವವಾನ್ ವಿನಾಶಿತ್ವಪ್ರಸಂಗತಃ ।
ಪಟವಚ್ಚೇದವಯವಾ ನಿರಸ್ಯಂತೇಽತ್ರ ಕೀದೃಶಾಃ ॥ ೫೬ ॥

ವಿಮತಃ ಅವಯವವಾನ್ ನ ವಿನಾಶಿತ್ವಪ್ರಸಂಗತಃ ಪಟವತ್ ಚೇತ್, ಅತ್ರ ಕೀದೃಶಾಃ ಅವಯವಾಃ ನಿರಸ್ಯಂತೇ?

ವಿಮತಃ = ಅವಯವಗಳುಳ್ಳವನೋ ಅಲ್ಲವೋ ಎಂದು ವಿವಾದ ವಿಷಯನಾದ ಮುಕ್ತಜೀವನು, ಅವಯವವಾನ್ ನ = ಅವಯವಗಳುಳ್ಳವನಲ್ಲ, ವಿನಾಶಿತ್ವಪ್ರಸಂಗತಃ = ನಾಶವಾಗುವ ಪ್ರಸಂಗವು ಬರುವುದರಿಂದ, ಪಟವತ್ ಚೇತ್ = ಬಟ್ಟೆಯಂತೆ ಎಂದು ಹೇಳುವುದಾದರೆ, ಅತ್ರ = ಈ ಮುಕ್ತಜೀವನಲ್ಲಿ, ಕೀದೃಶಾಃ ಅವಯವಾಃ = ಎಂತಹ ಅವಯವಗಳು, ನಿರಸ್ಯಂತೇ = ನಿರಾಕರಿಸಲ್ಪಡುತ್ತವೆ?

Rarest Archiver

ದೇಹವುಳ್ಳವನೋ ಅಲ್ಲವೋ ಎಂದು ವಿವಾದವಿಷಯನಾದ ಮುಕ್ತನು ಅನಿತ್ಯನೆಂದು ಆಗುವ ಪ್ರಸಂಗವು ಬರುವುದರಿಂದ ಲೋಕದಂತೆ ಅವಯವ ಸಮುದಾಯರೂಪವಾದ ದೇಹವುಳ್ಳವನಾಗುವುದಿಲ್ಲ. ಅದಕ್ಕೆ ವಿರುದ್ಧ ದೃಷ್ಟಾಂತವು ವಸ್ತ್ರವು. ವಸ್ತ್ರದಲ್ಲಿ ದಾರಗಳೆಂಬ ಅವಯವಗಳು ಇವೆ; ನಾಶವೂ ಇದೆ. ಅದರಂತೆ ಮುಕ್ತನಿಗೆ ನಾಶವಿಲ್ಲದ ಕಾರಣ ಅವಯವಗಳೂ ಇಲ್ಲ ಎಂದು ವಾದಿಯು ಶಂಕಿಸಿದರೆ ದ್ವೈತಿಗಳಾದ ನಾವು ಅವನನ್ನು ಕೇಳುತ್ತೇವೆ.

ಅವಯವಗಳು ಜಡ ಮತ್ತು ಜ್ಞಾನಾನಂದಾತ್ಮಕ ಎಂದು ಎರಡು ವಿಧ. ನೀನು ಮುಕ್ತನಿಂದ ಭಿನ್ನವಾದ ಜಡಾವಯವಗಳು ಇಲ್ಲವೆನ್ನು ವೆಯೋ ಅಥವಾ ಅಪ್ರಾಕೃತನಾದ ಮುಕ್ತನ ಅಭಿನ್ನಸ್ವರೂಪಗಳಾದ ಜ್ಞಾನಾನಂದಾತ್ಮಕ ಅವಯವಗಳು ಇಲ್ಲವೆನ್ನುವಿಯೋ? 'ವಿಮತಃ ಮುಕ್ತಃ ನಿರವಯವಃ ಅವಿನಾಶಿತ್ವಾತ್ ಪರಮಾಣುವತ್. ಯದಿ ಅವಯವೀ ಸ್ಯಾತ್ ತರ್ಹಿ ವಿನಾಶೀ ಸ್ಯಾತ್ ಯಥಾ ಪಟಃ ತಸ್ಮಾತ್ ನಿರವಯವ-ತ್ವಾತ್ ಮುಕ್ತಃ ಸಾವಯವದೇಹಾತ್ಮಕಃ ನ' ಎಂದು ಇಲ್ಲಿ ಪೂರ್ವಪಕ್ಷಿಯ ವಾದವು.

ಅವಯವಾಃ ಅಸ್ಯ ಸಂತೀತಿ, ವಿನಾಶಃ ಅಸ್ಯ ಅಸ್ತೀತಿ, ವಿನಾಶಿನಃ ಭಾವಃ, ವಿನಾಶಿತ್ವಸ್ಯ ಪ್ರಸಂಗಃ, ವಿನಾಶಿತ್ವಪ್ರಸಂಗಾತ್ ಇತಿ. ಪಟೇನ ತುಲ್ಯಂ.

ನಿರ್ + ಅಸ್ಯತೇ ಅಸ್ಯೇತೇ ಅಸ್ಯಂತೇ. ಅಸು– ಕ್ಷೇಪಣೇ ಕರ್ಮಣಿ; ಲಟ್.

ಪೂರ್ವಪಕ್ಷಿಯ ಅನುಮಾನದಲ್ಲಿ ಮುಕ್ತರಿಗೆ ಸ್ವರೂಪದೇಹಭಿನ್ನ ವಾದ ಜಡಾವಯವಗಳಿಲ್ಲ ಎಂದು ಸಾಧಿಸುತ್ತೇನೆ–ಎಂಬ ಮೊದಲನೇ ಪಕ್ಷ ವನ್ನು ನಿರಾಕರಿಸುತ್ತಾರೆ—

ಸಿದ್ಧಸಾಧನತಾಹೇತೋಃಸ್ತೇ ಭಿನ್ನಾಚ್ಛೇದಚಿನ್ಮಯಾಃ ।
ಆತ್ಮನೋ ಭೇದರಹಿತಾ ಏಷ್ಟವ್ಯಾ ಏವ ವಾದಿಭಿಃ ॥ ೫೭ ॥

Rarest Archiver

ಭಿನ್ನಾಃ ಅಚಿನ್ಮಯಾಃ ತೇ (ನಿರಸ್ಯಂತೇ) ಚೇತ್ ಹೇತೋಃ ಸಿದ್ಧ-ಸಾಧನತಾ, (ಅತಃ) ಆತ್ಮನಃ ಭೇದರಹಿತಾಃ ವಾದಿಭಿಃ ಏಷ್ಟವ್ಯಾ ಏವ.

ಭಿನ್ನಾಃ = ಮುಕ್ತಜೀವನಿಗಿಂತ ಬೇರೆಯಾದ, ಅಚಿನ್ಮಯಾಃ = ಜ್ಞಾನಸ್ವರೂಪವಲ್ಲದ, ತೇ = ಆ ಅವಯವಗಳು, (ನಿರಸ್ಯಂತೇ) ಚೇತ್ = ನಿರಾಕರಿಸಲ್ಪಡುವುದಾದರೆ, ಹೇತೋಃ = ವಿನಾಶಿತ್ವಹೇತುವಿಗೆ, ಸಿದ್ಧ-ಸಾಧನತಾ = ಸಿದ್ಧಸಾಧನತಾ ಎಂಬ ದೋಷವು ಬರುತ್ತದೆ. (ಅತಃ = ಆದುದರಿಂದ) ಆತ್ಮನಃ = ಮುಕ್ತಜೀವನಿಗಿಂತ, ಭೇದರಹಿತಾಃ = ಭೇದವಿಲ್ಲದ ಅವಯವಗಳು, ವಾದಿಭಿಃ = ವಾದಿಗಳಾದ ವೈಶೇಷಿಕರಿಂದ, ಏಷ್ಟವ್ಯಾ ಏವ = ಅಂಗೀಕರಿಸಲ್ಪಡಲೇಬೇಕು.

ಮುಕ್ತಾತ್ಮನ ಸ್ವರೂಪದೇಹಕ್ಕಿಂತ ಭಿನ್ನವಾದ ಜಡವಾದ ಅವಯವಗಳನ್ನು ವೈಶೇಷಿಕರು ನಿರಾಕರಿಸುವುದಾದರೆ, ವಿನಾಶಪ್ರಸಂಗವೆಂಬ ಹೇತುವಿಗೆ (ನಾಶವುಳ್ಳವನಾದಾನು ಎಂಬ ಹೇತುವಿಗೆ) ಸಿದ್ಧಸಾಧನತಾ ಬರುತ್ತದೆ. ಮುಕ್ತನಿಗೆ ಭಿನ್ನಾವಯವಗಳಿಲ್ಲವೆಂಬುದು ನಮಗೆ ಮೊದಲೇ ಸಿದ್ಧವಾಗಿದೆ. ಅನುಮಾನದಿಂದ ಸಾಧಿಸುವ ವಿಷಯವು ಮೊದಲೇ ಸಿದ್ಧವಾಗಿರಬಾರದು. ಮುಕ್ತರಿಗೆ ಭಿನ್ನಗಳೂ ಜಡಗಳೂ ಆದ ಅವಯವಗಳಿಲ್ಲವೆಂದು ಮೊದಲೇ ಸಾಧಿಸಲಾಗಿದೆ. ಅದನ್ನೇ ಮತ್ತೂ ಸಾಧಿಸಿದರೆ, ಚರ್ವಿತಚರ್ವಣ, ಪಿಷ್ಟಪೇಷಣದಂತೆ ಸಿದ್ಧಸಾಧನದೋಷವು. ಇನ್ನು ಜೀವಸ್ವರೂಪಗಳಾದ ಅವಯವಗಳೂ ಇಲ್ಲವೆಂದು ಸಾಧಿಸುತ್ತೇವೆ ಎಂಬ ಎರಡನೆಯ ಪಕ್ಷವೂ ಸರಿಹೊಂದುವುದಿಲ್ಲ. ಸ್ವರೂಪಗಳಾದ ಅವಯವಗಳೇ ಇಲ್ಲವೆಂದಾಗ ಮುಕ್ತಜೀವನೇ ಇಲ್ಲವೆಂದು ಆದಾನು, ಇನ್ನು ಕೊನೆಗೆ ಜೀವಾಭಿನ್ನನಾದ ಈಶ್ವರನೂ ಇಲ್ಲವೆಂದಾದಾನು. ಹೀಗೆ ಸ್ವರೂಪದೇಹವನ್ನೂ ಅದಕ್ಕಿಂತ ಅಭಿನ್ನವಾದ ಅವಯವಗಳನ್ನೂ ಒಪ್ಪಿಕೊಳ್ಳಲೇಬೇಕು.

ಸಾಧ್ಯತೇ ಅನೇನ ಇತಿ ಸಾಧನಂ, ಸಿದ್ಧಸ್ಯ ಸಾಧನಂ ತಸ್ಯ ಭಾವಃ, ಚಿತ ಏವ ಚಿನ್ಮಯಾಃ, ನ ಚಿನ್ಮಯಾಃ, ಭೇದೇನ ರಹಿತಾಃ.

ವೈಶೇಷಿಕರು ಆತ್ಮಸ್ವರೂಪಾಭಿನ್ನವಾದ ಅವಯವಗಳನ್ನು ಏಕೆ ಒಪ್ಪಿಕೊಳ್ಳಬೇಕು?—

Rarest Archiver

ಪರಮಾಣ್ವಾದಿದೇಶೇಷು ವ್ಯಾಪ್ತ್ಯೈ ವ್ಯಾಮಾದಿಕೇಷ್ವಪಿ ।
ಯಥಾತ್ಮನಃ ಪ್ರದೇಶಾಃ ಸ್ಯುಸ್ತೇಷಾಂ ನೋಽವಯವಾಸ್ತಥಾ ॥

ತೇಷಾಂ ಆತ್ಮನಃ ವ್ಯಾಪ್ತ್ಯೈ ಪರಮಾಣ್ವಾದಿದೇಶೇಷು ವ್ಯಾಮಾದಿಕೇಷು ಪ್ರದೇಶಾಃ ಯಥಾ ಸ್ಯುಃ ತಥಾ ನಃ ಅವಯವಾಃ. ॥ ೫೮ ॥

ತೇಷಾಂ = ಆ ವೈಶೇಷಿಕರ ಮತದಲ್ಲಿ, ಆತ್ಮನಃ = ಪರಮಾತ್ಮ ಅಥವಾ ಜೀವಾತ್ಮರ, ವ್ಯಾಪ್ತ್ಯೈ = ಎಲ್ಲಾಕಡೆ ವ್ಯಾಪಿಸಿರುವುದಕ್ಕಾಗಿ, ಪರಮಾಣ್ವಾದಿದೇಶೇಷು = ಪರಮಾಣುದ್ವ್ಯಣುಕ ತ್ರ್ಯಣುಕ ಮೊದಲಾದ ಅಲ್ಪದೇಶಗಳಲ್ಲಿ, ವ್ಯಾಮಾದಿಕೇಷು ಅಪಿ = ಮಾರು ಮುಂತಾದ ಮಹತ್ತಾದ ಪ್ರದೇಶಗಳಲ್ಲಿಯೂ, ಪ್ರದೇಶಾಃ ಯಥಾ ಸ್ಯುಃ = ಸ್ಥಳಗಳು ಹೇಗೆ ಆಗಿಯೇ ತೀರುವುವೋ, ತಥಾ = ಹಾಗೆಯೇ, ನಃ ಅವಯವಾಃ = ದ್ವೈತಿಗಳಾದ ನಮ್ಮ ಮತದಲ್ಲಿ ಮುಕ್ತರ ಸ್ವರೂಪದೇಹಕ್ಕಿಂತಭಿನ್ನವಲ್ಲದ ಅವಯವಗಳು (ಇದ್ದೇ ಇರುತ್ತವೆ.)

ವೈಶೇಷಿಕರು ಜೀವಾತ್ಮರು ಮತ್ತು ಪರಮಾತ್ಮನು ವಿಭು ಸರ್ವತ್ರ ವ್ಯಾಪ್ತ ಎಂದು ಅಂಗೀಕರಿಸುತ್ತಾರೆ. ಅವರ ಮತದಂತೆ ಪರಮಾಣು ದ್ವ್ಯಣುಕ ಮುಂತಾದ ಅಲ್ಪಸ್ಥಳಗಳಲ್ಲಿಯೂ, ಒಂದು ಮಾರು, ಪುರುಷ ಪ್ರಮಾಣ (ಒಂದು ಆಳು ಪ್ರಮಾಣ) ಮುಂತಾದ ಮಹತ್ತಾದ ಬಹಳ ಸ್ಥಳಗಳಲ್ಲಿಯೂ ಆತ್ಮನಿಗೆ ಪ್ರದೇಶಗಳನ್ನು ಅಂಗೀಕರಿಸಬೇಕು. ಹೀಗೆ ಅಲ್ಪ ಮಹತ್ ಸ್ಥಳಗಳಲ್ಲಿ ಆತ್ಮನು ಇಲ್ಲವೆಂದರೆ ಒಬ್ಬ ಆತ್ಮನಿಗೂ ವಿಭುತ್ವ (ಸರ್ವತ್ರವ್ಯಾಪ್ತಿಯು) ಸಿದ್ಧಿಸದೇ ಹೋಗುತ್ತದೆ. ಈ ಆತ್ಮಪ್ರದೇಶಗಳು ಆತ್ಮಾಭಿನ್ನಗಳೆಂದೇ ಅಂಗೀಕರಿಸಬೇಕು. ಅದರಂತೆ ನಮ್ಮ ಸಿದ್ಧಾಂತದಲ್ಲಿ ಮುಕ್ತಜೀವನಿಗೆ ಅವನಿಗಿಂತ ಅಭಿನ್ನವಾದ ವಿಶೇಷಬಲದಿಂದ ಭೇದ ವ್ಯವಹಾರ ವಿಷಯವಾದ ಆನಂದಜ್ಞಾನಾದಿಗುಣಗಳೂ, ಅಂತಹ ಜ್ಞಾನಾದ್ಯಭಿನ್ನವಾದ ಕೈಕಾಲು ಮುಂತಾದ ಅವಯವಗಳೂ ಸಂಭವಿಸಿಯೇ ತೀರುತ್ತವೆ ಎಂದು ಭಾವ. (ನಿತ್ಯನಾದ ಆತ್ಮನು ನಿತ್ಯವಾದ ಪರಮಾಣು ಮುಂತಾದ ಪ್ರದೇಶಗಳಲ್ಲಿ ವ್ಯಾಪ್ತನಾಗಿರುವಾಗ, ಆ ಆತ್ಮನಿಗೆ ನಿತ್ಯವಾದ ಪರಮಾಣ್ವಾದಿ ಆಕಾರವಿಶೇಷವು ಬರುತ್ತದೆಯೆಂದು ತಾರ್ಕಿಕರು ಒಪ್ಪಿ

Rarest Archiver

ಕೊಳ್ಳಬೇಕಾಗುತ್ತದೆ. ಆದರಂತೆ ಸಿದ್ಧಾಂತದಲ್ಲಿಯೂ ಮುಕ್ತಜೀವನಿಗೆ ನಿತ್ಯವಾದ ಸ್ವರೂಪವಾಗಿರುವ ಜ್ಞಾನಾನಂದಾತ್ಮಕವಾದ ಅವಯುವಗಳಿವೆ ಯೆಂದು ಒಪ್ಪಿಕೊಳ್ಳಲೇಬೇಕು ಎಂದು ತಾತ್ಪರ್ಯ.)

ಪರಮಾಣುಃ ಆದಿಃ ಯೇಷಾಂ ತೇ, ಪರಮಾಣ್ವಾದಯಶ್ಚ ತೇ ದೇಶಾಶ್ಚ ತೇಷು, ವ್ಯಾಮಃ ಆದಿಃ ಯೇಷಾಂ ತೇ ತೇಷು.

ಮುಕ್ತನಿಗೆ ಅವಯುವಗಳಿವೆಯೆಂದು ಸಾಧಿಸಿ, ಇಂದ್ರಿಯಗಳೂ ಇವೆ ಯೆಂದು ಸಾಧಿಸುತ್ತಾರೆ—

ಮುಕ್ತೋ ರೂಪಾದಿವಿತ್ ಸತ್ತ್ವಾಜ್ಜಡಾನ್ಯತ್ವೇ ಸತೀಶವತ್ ।
ದೃಷ್ಟಾಂತೋಽಸಾಧ್ಯವಿಕಲಸ್ತಸ್ಯ ಸರ್ವಜ್ಞತಾಗ್ರಹಾತ್ ॥

ಮುಕ್ತಃ ರೂಪಾದಿವಿತ್ ಜಡಾನ್ಯತ್ವೇ ಸತಿ ಸತ್ತ್ವಾತ್ ಈಶವತ್ ತಸ್ಯ ಸರ್ವಜ್ಞತಾಗ್ರಹಾತ್ ದೃಷ್ಟಾಂತಃ ಅಸಾಧ್ಯವಿಕಲಃ ॥ ೫೯ ॥

ಮುಕ್ತಃ ರೂಪಾದಿವಿತ್=ಮುಕ್ತಜೀವನು, ರೂಪಾದಿವಿತ್= ರೂಪಾದಿಸಾಕ್ಷಾತ್ಕಾರವುಳ್ಳವನು, ಜಡಾನ್ಯತ್ವೇ ಸತಿ ಸತ್ತ್ವಾತ್=ಜಡ ಕ್ಕಿಂತ ಭಿನ್ನನಾಗಿದ್ದು ಸತ್ತಾಇರೋಣದರಿಂದ, (ಸತ್ಪದಾರ್ಥ [ಚೇತನ]ವಾಗಿ ರುವುದರಿಂದ) ಈಶವತ್=ಪರಮಾತ್ಮನಂತೆ; ತಸ್ಯ=ಆ ಈಶ್ವರನಿಗೆ, ಸರ್ವಜ್ಞತಾಗ್ರಹಾತ್ = ಸರ್ವಜ್ಞತ್ವವನ್ನು ಅಂಗೀಕರಿಸಿರುವುದರಿಂದ, ದೃಷ್ಟಾಂತಃ=ಉದಾಹರಣವು, ಅಸಾಧ್ಯವಿಕಲಃ=ರೂಪಾದಿಜ್ಞಾನವೆಂಬ ಸಾಧ್ಯವಿಲ್ಲದಿರುವುದಲ್ಲ.

ಮುಕ್ತಜೀವನು ರೂಪರಸಮುಂತಾದ ವಸ್ತುಗಳ ಜ್ಞಾನವುಳ್ಳವನಾಗಿ ರುತ್ತಾನೆ, ಸ್ವರೂಪವಾಗಿರುವ ರೂಪರಸಗಂಧಾದಿವಿಷಯವುಳ್ಳವನೂ ಆಗಿರುತ್ತಾನೆ, ಏಕೆಂದರೆ ಮುಕ್ತನು ಜಡಭಿನ್ನನಾಗಿದ್ದು ಸತ್ತ್ವ ಎಂಬ ಧರ್ಮವುಳ್ಳವನಾದುದರಿಂದ; ಜಡಭಿನ್ನವಾದ ಸತ್‌ಪದಾರ್ಥವು ಚೇತನ ವಾಗಿದ್ದು ಅದಕ್ಕೆ ರೂಪಾದಿವಿಷಯಕಜ್ಞಾನವಿರಲೇ ಬೇಕು. ಇಲ್ಲವಾದರೆ ಅದು ಚೇತನವು ಹೇಗಾದೀತು ? ಮುಕ್ತಚೇತನನು ಸ್ವರೂಪಭಿನ್ನವಾದ ಪ್ರಾಕೃತ ರೂಪಾದಿಗಳುಳ್ಳವನೆಂದುಹೇಳಲು ಬಾರದಿರುವುದರಿಂದ ಅವನು

Rarest Archive

ಅಪ್ರಾಕೃತರೂಪರಸಗಂಧಾದಿಸ್ವರೂಪನೆಂದೂ ಹೇಳಬೇಕು. ಇಲ್ಲಿ ದೃಷ್ಟಾಂತವು—ಪರಮೇಶ್ವರನು. ದೃಷ್ಟಾಂತದಲ್ಲಿ ರೂಪಾದಿವಿಷಯಕಜ್ಞಾನ ವೆಂಬ ಸಾಧ್ಯವಿಲ್ಲ, ಆದುದರಿಂದ ದೃಷ್ಟಾಂತಕ್ಕೆ ಸಾಧ್ಯವೈಕಲ್ಯವೆಂಬ ದೋಷವು ಬಂದಿತು ಎಂದು ಹೇಳಬಾರದು. ಏಕೆಂದರೆ ಈಶ್ವರನನ್ನು ಒಪ್ಪಿರುವ ಎಲ್ಲರೂ ಅವನನ್ನು ಸರ್ವಜ್ಞನೆಂದು ಒಪ್ಪಿರುತ್ತಾರೆ. ಸರ್ವ ಪದಾರ್ಥಗಳಲ್ಲಿ ರೂಪಾದಿಗಳೂ ಸೇರಿದ್ದರಿಂದ, ರೂಪಾದಿಗಳ ಜ್ಞಾನವಿಲ್ಲ ದಿದ್ದರೆ ಈಶ್ವರನಿಗೆ ಸರ್ವಜ್ಞತ್ವವೇ ಕೂಡಲಾರದು. ಆದ್ದರಿಂದ-ಮುಕ್ತಃ ರೂಪಾದಿವಿತ್ ಜಡಾನ್ಯತ್ವೇ ಸತಿ ಸತ್ತ್ವಾತ್ ಈಶವತ್ ಎಂಬ ಅನುಮಾನವು ನಿರ್ದೋಷವಾಗಿದ್ದು ಈಶ್ವರನಂತೆ ಮುಕ್ತನಿಗೂ ಅಪ್ರಾಕೃತ ವಾದ (ಸ್ವರೂಪಭೂತವಾದ) ರೂಪಾದಿಗಳ ಜ್ಞಾನವಿರುವುದರಿಂದ, ಆ ಜ್ಞಾನಜನಕವಾದ ಸ್ವರೂಪಭೂತವಾದ ಚಕ್ಷುಸ್ಸು ಮೊದಲಾದ ಇಂದ್ರಿಯ ಗಳೂ ಇರಲೇಬೇಕು.

ರೂಪಂ ಆದಿ ಯಸ್ಯ ತತ್, ರೂಪಾದಿ ವೇತ್ತೀತಿ, ಸತಃ ಭಾವಃ ತಸ್ಮಾತ್, ಜಡಾತ್ ಅನ್ಯಃ ಜಡಾನ್ಯಸ್ಯ ಭಾವಃ ತಸ್ಮಿನ್, ಈಶೇನ ತುಲ್ಯಂ ಈಶವತ್, ಸಾಧ್ಯೇನ ವಿಕಲಃ, ಸಾಧ್ಯವಿಕಲಃ ನ ಭವತೀತಿ, ಸರ್ವಂ ಜಾನಾತೀತಿ, ಸರ್ವಜ್ಞಸ್ಯ ಭಾವಃ, ಸರ್ವಜ್ಞತಾಯಾಃ ಗ್ರಹಃ ತಸ್ಮಾತ್;

ಪರಮೇಶ್ವರನಿಗೆ ಸರ್ವಜ್ಞತ್ವವಿರುವುದರಿಂದ ರೂಪಾದಿ ಎಲ್ಲಾ ಪದಾರ್ಥಗಳ ಜ್ಞಾನವಿದ್ದರೂ, ಆ ರೂಪಾದಿಗಳ ಅನುಭವದಿಂದ ಉಂಟಾದ ಸುಖವಿರುವುದಿಲ್ಲ, ಸುಖವಿದೆಯೆಂದು ಒಪ್ಪಿದರೆ ದುಃಖವೂ ಬರಬೇಕಾಗು ತ್ತದೆ, ಈಶ್ವರನಿಗೆ ದುಃಖವನ್ನು ಯಾರೂ ಒಪ್ಪುವುದಿಲ್ಲವಾದುದರಿಂದ ಸುಖವನ್ನೂ ಒಪ್ಪಲು ಸಾಧ್ಯವಿಲ್ಲ. ನೀವಾದರೋ ಮುಕ್ತೋ ರೂಪಾದಿವಿತ್ ಮುಕ್ತನು ರೂಪಾದಿವಿಷಯಕಜ್ಞಾನವುಳ್ಳವನು, ಜಡಾನ್ಯತ್ವೇ ಸತಿ- ಸತ್ತ್ವಾತ್-ಜಡಭಿನ್ನನಾದ ಸದ್ರೂಪಚೇತನವಾದುದರಿಂದ ಎಂಬಲ್ಲಿ ಮುಕ್ತನಿಗೆ ರೂಪಾದಿಜ್ಞಾನದಿಂದ ಉಂಟಾದ ಸುಖಾನುಭವವಿದೆಯೆಂದು ಅಂಗೀಕರಿಸುತ್ತೀರಿ. ಹೀಗಾದಾಗ ದೃಷ್ಟಾಂತವಾದ ಪರಮೇಶ್ವರನಲ್ಲಿ ರೂಪಾದಿಜ್ಞಾನಜನ್ಯವಾದ ಸುಖ, ಮತ್ತು ಸುಖಾನುಭವವಿಲ್ಲದ್ದರಿಂದ ದೃಷ್ಟಾಂತದಲ್ಲಿ ಸಾಧ್ಯಾಂಶ ಬರಲಿಲ್ಲವಲ್ಲವೇ ? ಇದಕ್ಕೆ ಉತ್ತರ—

Rarest Archive

ಈಶ್ವರೋ ನ ಸುಖೀ ತೇನ ರೂಪಾದ್ಯನುಭವನ್ನಪಿ ।
ದುಃಖಪ್ರಸಂಗಾದಿತಿ ಮಾ ವಾದಿ ತದ್ವ್ಯಾಪ್ತಿದೂಷಣಾತ್ ॥೬೦॥

ಈಶ್ವರಃ ರೂಪಾದ್ಯನುಭವನ್ ಅಪಿ ತೇನ ಸುಖೀ ನ (ಸ್ಯಾತ್) ದುಃಖ ಪ್ರಸಂಗಾತ್ ಇತಿ ಮಾ ವಾದಿ, ತದ್ವ್ಯಾಪ್ತಿದೂಷಣಾತ್ ॥

ಈಶ್ವರಃ = ಪರಮೇಶ್ವರನು, ರೂಪಾದ್ಯನುಭವನ್ನಪಿ = ರೂಪಾದಿ ಸರ್ವಪದಾರ್ಥಗಳ ಅನುಭವವುಳ್ಳವನಾಗಿದ್ದರೂ, ತೇನ = ರೂಪಾದಿಗಳ ಅನುಭವದಿಂದ, ಸುಖೀ ನ (ಸ್ಯಾತ್) = ಸುಖಾನುಭವವುಳ್ಳವನಾಗಲಾರನು, ದುಃಖಪ್ರಸಂಗಾತ್ = ಸುಖಾನುಭವವಿದ್ದರೆ ದುಃಖಾನುಭವವು ಬರಬೇಕಾಗುವುದರಿಂದ, ಇತಿ ಮಾ ವಾದಿ = ಹೀಗೆ ಹೇಳಲ್ಪಡಬಾರದು, ತದ್ವ್ಯಾಪ್ತಿ ದೂಷಣಾತ್ = ಯಾವನು ಸುಖಿಯೋ ಅವನು ದುಃಖಿಯು. ಚೈತ್ರನಂತೆ ಎಂಬ ವ್ಯಾಪ್ತಿಯನ್ನು (ನಿಯಮವನ್ನು) ಹಿಂದೆಯೇ ಖಂಡಿಸಿರುವುದರಿಂದ 'ಈಶ್ವರನಿಗೆ ರೂಪಾದಿಸಮಸ್ತಪದಾರ್ಥಗಳ ಜ್ಞಾನವಿದ್ದರೂ ಆ ಜ್ಞಾನದಿಂದ ಉಂಟಾಗುವ ಸುಖಾನುಭವವು ಇರಲು ಸಾಧ್ಯವಿಲ್ಲ, ಏಕೆಂದರೆ ಸುಖವಿದ್ದರೆ ದುಃಖವೂ ಇರಬೇಕಾಗುತ್ತದೆ' ಎಂದು ತಾರ್ಕಿಕನು ಹೇಳಲು ಸಾಧ್ಯವಿಲ್ಲ. ಏಕೆಂದರೆ ಯಾವನು ಸುಖವುಳ್ಳವನೋ ಅವನು ದುಃಖವುಳ್ಳವನು ಚೈತ್ರನಂತೆ ಎಂಬ ವ್ಯಾಪ್ತಿಯನ್ನು ನಾವು ಹಿಂದೆಯೇ ಖಂಡಿಸಿರುತ್ತೇವೆ. ಹಿಂದೆ 'ಈಶ್ವರನು ಸುಖಾದಿಗಳುಳ್ಳವನಲ್ಲ, ದುಃಖಾದಿಗಳು ಇಲ್ಲದಿರುವುದರಿಂದ ಎಂದು ತಾರ್ಕಿಕನು ಆಶಂಕಿಸಿದಾಗ, ಹಾಗಾದರೆ, ಈಶ್ವರನು ಜ್ಞಾನಿಯೂ ಅಲ್ಲ ಭ್ರಾಂತಿಇಲ್ಲದ್ದರಿಂದ, ವ್ಯತಿರೇಕದಿಂದ ಚೈತ್ರನಂತೆ ಎಂದು ತಾರ್ಕಿಕನ ಅನುಮಾನಕ್ಕೆ ಸತ್ಪ್ರತಿಪಕ್ಷವೆಂಬ ದೋಷವನ್ನು ಹೇಳಿರುತ್ತೇವೆ. ಮತ್ತು 'ತಸ್ಯೈವ ಅಮಂದಮಾನಂದಂ ವದನ್ ನಾಶ್ರಾವ್ಯಸೌ ಕಥಂ (ಶ್ಲೋ. 18) ಎಂದು ಹಿಂದೆ ಬ್ರಹ್ಮನಿಗೆ ಆನಂದಂ ಬ್ರಹ್ಮಣೋ ವಿದ್ವಾನ್ ಎಂದು ಮುಂತಾಗಿ ಶ್ರುತಿಯೇ ಆನಂದವನ್ನು ಹೇಳುವುದರಿಂದ ಈಶಃ ಸೌಖ್ಯಾದಿಮಾನ್ ನ ಎಂಬ ಅನುಮಾನಕ್ಕೆ ಬಾಧದೋಷವನ್ನು ಹೇಳಿರುತ್ತೇವೆ. ಹೀಗೆ ಹಿಂದೆಯೇ ತಾರ್ಕಿಕರ ಅನುಮಾನವನ್ನು ನಾವು ಖಂಡಿಸಿರುವುದರಿಂದ ಪುನಃ ತಾರ್ಕಿಕನು ನಮ್ಮ ಅನುಮಾನಕ್ಕೆ ಅದೇ ಅನುಮಾನದ

Rarest Archiver

ವಿರೋಧವನ್ನು ಹೇಳಬಾರದು. ಆದುದರಿಂದ ಈಶ್ವರನಿಗೆ ಸುಖಾದ್ಯನುಭವವಿರುವುದರಿಂದ ಈಶ್ವರ–ದೃಷ್ಟಾಂತವನ್ನು ಸಾಧ್ಯವಿಕಲವೆಂದು ಹೇಳಬಾರದು ಎಂದು ತಾತ್ಪರ್ಯ.

ದುಃಖಸ್ಯ ಪ್ರಸಂಗಃ ತಸ್ಮಾತ್, ಸಾ ಚ ಸಾ ವ್ಯಾಪ್ತಿಶ್ಚ, ತದ್ವ್ಯಾಪ್ತೇಃ ದೂಷಣಂ ತಸ್ಮಾತ್. ಮಾ ವಾದಿ, ಅವಾದಿ ಅವಾದಿಷಾತಾಂ ಅವಾದಿಷತ ವದ–ವ್ಯಕ್ತಾಯಾಂ ವಾಚಿ, ಕರ್ಮಣಿ ಲುಙ್. ಮಾಙ್ (ಮಾ) ಯೋಗವಿರುವುದರಿಂದ ಅಡಾಗಮನಿಷೇಧ.

ಮುಕ್ತನಿಗೆ ರೂಪಾದಿಜ್ಞಾನವಿದೆ ಅವನು ಜಡಭಿನ್ನನಾಗಿದ್ದು ಸದ್ರೂಪಚೇತನನಾದುದರಿಂದ ಈಶ್ವರನಂತೆ ಎಂಬ ಅನುಮಾನದಿಂದ ಸರ್ವಜ್ಞನಾದ ಈಶ್ವರದೃಷ್ಟಾಂತದಿಂದ ಮುಕ್ತನಿಗೆ ರೂಪಾದಿಜ್ಞಾನವು ಇದೆ ಎಂದು ಸರ್ವಜ್ಞನಾದ ಈಶ್ವರನನ್ನು ಒಪ್ಪುವ ತಾರ್ಕಿಕರನ್ನು ಕುರಿತು ಸಮರ್ಥಿಸಬಹುದು. ಆದರೆ ಈಶ್ವರನನ್ನು ಒಪ್ಪದಿರುವ ಮೀಮಾಂಸಕರು ಮತ್ತು ಸಾಂಖ್ಯರನ್ನು ಕುರಿತು ಈ ದೃಷ್ಟಾಂತವು ಯುಕ್ತವಾಗುವುದಿಲ್ಲ ಎಂದರೆ ಉತ್ತರ—

ದೃಷ್ಟಾಂತೋ ಯಸ್ಯ ನೇಷ್ಟೋಽಯಂ ತಸ್ಯ ಸ್ಯಾದ್ವ್ಯತಿರೇಕವಾನ್ ।
ಶಿಲಾವದಿತ್ಯತಃ ಶುದ್ಧಚಿದ್ದೇಹೇಂದ್ರಿಯಭೋಗ್ಯಸೌ ॥ ೬೧ ॥

ಯಸ್ಯ ಅಯಂ ದೃಷ್ಟಾಂತಃ ನೇಷ್ಟಃ ತಸ್ಯ ಶಿಲಾವತ್ ಇತಿ ವ್ಯತಿರೇಕವಾನ್ ಸ್ಯಾತ್, ಅತಃ ಅಸೌ ಶುದ್ಧ ಚಿದ್ದೇಹೇಂದ್ರಿಯಭೋಗೀ ॥

ಯಸ್ಯ = ಈಶ್ವರನನ್ನು ಒಪ್ಪದಿರುವ ಯಾವ ಭಾಟ್ಟಾದಿಸಿದ್ಧಾಂತಿಗೆ, ಅಯಂ ದೃಷ್ಟಾಂತಃ ನೇಷ್ಟಃ = ಸರ್ವಜ್ಞನಾದ ಈಶ್ವರನ ದೃಷ್ಟಾಂತವು ಸಂಮತವಲ್ಲವೋ, ತಸ್ಯ = ಅವನಿಗೆ, ಶಿಲಾವತ್ ಇತಿ = ಕಲ್ಲುಬಂಡೆಯಂತೆ ಎಂದು, ವ್ಯತಿರೇಕವಾನ್ ಸ್ಯಾತ್. ಮೇಲಿನ ಅನುಮಾನದ ಸಾಧ್ಯದ ಅಭಾವ (ರೂಪಾದಿವಿಜ್ಞಾನಾಭಾವ) ಮತ್ತು ಸಾಧನದ ಅಭಾವ (ಜಡಾನ್ಯತ್ವಸಹಿತವಾದ ಸತ್ತ್ವದ ಅಭಾವ) ಇವುಗಳುಳ್ಳ ವ್ಯತಿರೇಕವ್ಯಾಪ್ತಿಯ ದೃಷ್ಟಾಂತವು, ಆಗಿಯೇ ಆಗುತ್ತದೆ. ಅತಃ = ಮುಕ್ತನಿಗೆ ದೇಹ ಇಂದ್ರಿ

Rarest Archiver

ಯಾದಿಗಳು ಇವೆ ಎಂಬ ವಿಷಯದಲ್ಲಿ ಸಾಧಕಪ್ರಮಾಣಗಳು ಇರುವುದರಿಂದಲೂ, ಬಾಧಕಪ್ರಮಾಣಗಳು ಇಲ್ಲದಿರುವುದರಿಂದಲೂ, ಅಸೌ=ಈ ಮುಕ್ತನು, ಶುದ್ಧಚಿದ್ದೇಹೇಂದ್ರಿಯಭೋಗೀ=ಅಪ್ರಾಕೃತವಾದ, ಜ್ಞಾನಾತ್ಮಕವಾದ ದೇಹ, ಇಂದ್ರಿಯ, ಮತ್ತು ಸುಖಾದಿಗಳ ಸ್ವರೂಪಾತ್ಮಕವಾದ ಅನುಭವವುಳ್ಳವನು.

ಮುಕ್ತಃ ರೂಪಾದಿವಿಜ್ಞಾನವಾನ್ ಜಡಾನ್ಯತ್ವೇ ಸತಿ ಸತ್ತ್ವಾತ್ ಈಶ್ವರವತ್, ಮುಕ್ತಚೇತನನು ರೂಪಾದಿವಿಷಯಕಜ್ಞಾನವುಳ್ಳವನು, ಜಡಭಿನ್ನನಾದ ಸದ್ರೂಪನಾದ ಚೇತನನಾದುದರಿಂದ ಈಶ್ವರನಂತೆ ಎಂಬ ಹಿಂದಿನ ಅನುಮಾನದಲ್ಲಿ ನಿರೀಶ್ವರವಾದಿಗಳಾದ ಭಾಟ್ಟಮೀಮಾಂಸಕಾದಿಗಳಿಗೆ ಈಶ್ವರದೃಷ್ಟಾಂತವು ಸರಿಹೊಂದುವುದಿಲ್ಲ ಎಂದಾದರೆ, ನಾವು ಆ ಅನುಮಾನಕ್ಕೆ ವ್ಯತಿರೇಕವ್ಯಾಪ್ತಿಯನ್ನು ಶಿಲಾದಿದೃಷ್ಟಾಂತದಿಂದ ಹೇಳಿ ಮುಕ್ತನಿಗೆ ರೂಪಾದಿಜ್ಞಾನವನ್ನು ಸಮರ್ಥಿಸುತ್ತೇವೆ. ಯಾವುದು ರೂಪಾದಿಜ್ಞಾನವುಳ್ಳದ್ದಲ್ಲವೋ ಅದು ಜಡಭಿನ್ನವಾದ ಸದ್ರೂಪ (ಚೇತನ) ಆಗುವುದಿಲ್ಲ, ಕಲ್ಲುಬಂಡೆಯಂತೆ ಎಂದು ಮುಕ್ತನಿಗೆ ರೂಪಾದಿಜ್ಞಾನವನ್ನು ಸಾಧಿಸುತ್ತೇವೆ. ಭಾಟ್ಟಾದಿಸಿದ್ಧಾಂತಿಗಳು ನಿರೀಶ್ವರರಾದರೂ ವೇದಪ್ರಾಮಾಣ್ಯವನ್ನು ಒಪ್ಪುತ್ತಾರಷ್ಟೆ ! 'ಯತ್ರಾನಂದಾಶ್ಚ ಮೋದಾಶ್ಚ ಮುದಃ ಪ್ರಮುದ ಆಸತೇ । ಕಾಮಸ್ಯ ಯತ್ರಾಪ್ತಾಃ ಕಾಮಾಃ ತತ್ರ ಮಾಮಮೃತಂ ಕೃಧಿ' ‖ 'ಸ ತತ್ರ ಪರ್ಯೇತಿ ಜಕ್ಷನ್ ಕ್ರೀಡನ್ ರಮಮಾಣಃ ಸ್ತ್ರೀಭಿರ್ವಾ ಯಾನೈರ್ವಾ ಜ್ಞಾತಿಭಿರ್ವಾ' ಇತ್ಯಾದಿಶ್ರುತಿಗಳಿಂದ ಮುಕ್ತನಿಗೆ ಆನಂದಜ್ಞಾನ, ರೂಪಾದಿಜ್ಞಾನಗಳು ಇವೆಯೆಂದು ತಿಳಿದು ಬರುತ್ತದೆ. ಆದುದರಿಂದ ಮುಕ್ತನು ಅಪ್ರಾಕೃತವಾದ ಜ್ಞಾನಾನಂದಸ್ವರೂಪವಾದ ದೇಹ ಇಂದ್ರಿಯಬುದ್ಧಿಗಳಿಂದ ಸ್ವರೂಪಾತ್ಮಕವಾದ ಆನಂದವನ್ನು ಅನುಭವಿಸುತ್ತಾನೆ ಎಂದು ಹೇಳಬೇಕು.

ವ್ಯತಿರೇಕಃ ಅಸ್ಯ ಅಸ್ತೀತಿ ವ್ಯತಿರೇಕವಾನ್; ಶಿಲಯಾ ತುಲ್ಯಂ ಶಿಲಾವತ್; ಶುದ್ಧಾ ಚ ಸಾ ಚಿತ್ ಚ ಶುದ್ಧಚಿತ್, ದೇಹಶ್ಚ ಇಂದ್ರಿಯಾಣಿ

Rarest Archiver

ಚ ಭೋಗಾಶ್ಚ ದೇಹೇಂದ್ರಿಯಭೋಗಾಃ,ಶುದ್ಧಚಿತ್ ಚ ತೇ ದೇಹೇಂದ್ರಿಯ ಭೋಗಾಶ್ಚ, ಶುದ್ಧಚಿದ್ದೇಹೇಹೇಂದ್ರಿಯಭೋಗಾಃ ಅಸ್ಯ ಸಂತೀತಿ.

ಹೀಗೆ ನಾವು ಹೇಳಿದ ರೀತಿಯಿಂದ ಮುಕ್ತನಿಗೆ ಅಪ್ರಾಕೃತವಾದ ದೇಹ ಇಂದ್ರಿಯಜ್ಞಾನ ಎಲ್ಲವೂ ಪ್ರಮಾಣಸಿದ್ಧವಾಗಿ ಇದ್ದರೂ ವಾದಿಗಳು ಇಂತಹ ಮೋಕ್ಷವನ್ನು ಒಪ್ಪದಿರುವುದು ಪ್ರಮಾಣಮೂಲಕವಲ್ಲ, ದ್ವೇಷ ಮೂಲಕವಾಗಿದೆ. ಇದಕ್ಕೆ ವಿರುದ್ಧವಾದ ಮೋಕ್ಷವನ್ನು ಒಪ್ಪುವುದೂ ದುರಾಗ್ರಹದಿಂದಲೇ ;—

ಸ್ವಾನಂದವಿಷಯೇ ಮೋಕ್ಷೇ ವೇದೋಕ್ತೇ ಯುಕ್ತಿಸಾಧಿತೇ ।
ದ್ವೇಷೋಽಯಂ ವಾದಿನಾಂ ಕಸ್ಮಾತ್ತದ್ವಿರುದ್ಧೇಽಥವಾಽಽಗ್ರಹಃ ॥

ಸ್ವಾನಂದವಿಷಯೇ ವೇದೋಕ್ತೇ ಯುಕ್ತಿಸಾಧಿತೇ ಮೋಕ್ಷೇ ವಾದಿನಾಂ ಅಯಂ ದ್ವೇಷಃ ಅಥವಾ ತದ್ವಿರುದ್ಧೇ ಆಗ್ರಹಃ ಕಸ್ಮಾತ್ ? ॥ ೬೨ ॥

ಸ್ವಾನಂದವಿಷಯೇ = ಜೀವನ ಸ್ವರೂಪಾನಂದವಿಷಯಕವಾದ, ವೇದೋಕ್ತೇ= ವೇದಗಳಿಂದ ಪ್ರತಿಪಾದ್ಯವಾದ, ಯುಕ್ತಿಸಾಧಿತೇ = ಹಿಂದೆ ಹೇಳಿದ ಅನೇಕಯುಕ್ತಿಗಳಿಂದ ಸಾಧಿಸಲ್ಪಟ್ಟ, ಮೋಕ್ಷೇ = ಜೀವನ ಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷದಲ್ಲಿ, ವಾದಿನಾಂ = ವಾದಿಗಳಿಗೆ, ಅಯಂ ದ್ವೇಷಃ= ಈ ದ್ವೇಷವು, ಅಥವಾ= ಪಕ್ಷಾಂತರದಲ್ಲಿ, ತದ್ವಿರುದ್ಧೇ=ನಾವು ಹೇಳಿದ ಮೋಕ್ಷಕ್ಕೆ ವಿರುದ್ಧವಾದ ನಿರ್ಗುಣನಿರ್ಧರ್ಮಕ ನಿರ್ವಿಶೇಷಬ್ರಹ್ಮಭಾವಪ್ರಾಪ್ತಿರೂಪವಾದ ಮೋಕ್ಷದಲ್ಲಿ, ಆಗ್ರಹಃ ಕಸ್ಮಾತ್ = ಹಠವು ಯಾವ ಕಾರಣದಿಂದ ?

'ಅಕ್ಷಣ್ವಂತಃ ಕರ್ಣವಂತಃ' ಮುಕ್ತರು ಕಣ್ಣು ಕಿವಿ ಮುಂತಾದ ಇಂದ್ರಿಯಸಹಿತರು ; 'ಸ ತತ್ರ ಪರ್ಯೇತಿ' ಮುಕ್ತನು ಮುಕ್ತಲೋಕದಲ್ಲಿ ಸಂಚರಿಸುತ್ತಾನೆ- 'ಯತ್ರಾನಂದಾಶ್ಚ ಮೋದಾಶ್ಚ'-ಮುಕ್ತವೈಕುಂಠದಲ್ಲಿ ಆನಂದಾದಿಗಳು ಇವೆ. ಇತ್ಯಾದಿ ವಚನಗಳಿಂದಲೂ, ಜ್ಞಾನಪ್ರಯತ್ನ ಇಚ್ಛೆಗಳುಳ್ಳ ಈಶ್ವರನು ತನ್ನ ಪ್ರಸಾದದಿಂದ ಮುಕ್ತನಾದ ಜೀವನನ್ನು ತನ್ನಂತೆಯೇ ನಿತ್ಯಜ್ಞಾನಪ್ರಯತ್ನಇಚ್ಛೆಗಳುಳ್ಳವನನ್ನಾಗಿ ಮಾಡಿಯೇ

Rarest Archives

ಮಾಡುತ್ತಾನೆ ಇತ್ಯಾದಿಯಾಗಿ ಹಿಂದೆ ಹೇಳಿದ ಯುಕ್ತಿಗಳಿಂದಲೂ ಸಿದ್ಧವಾದ ನಾವು ಹೇಳಿದ ಮೋಕ್ಷದಲ್ಲಿ ಇತರವಾದಿಗಳಿಗೆ ದ್ವೇಷವೇಕೆ ? ನಮ್ಮ ಸಿದ್ಧಾಂತಕ್ಕೆ ವಿರುದ್ಧವಾದ ಜೀವನು—'ನಿರ್ವಿಶೇಷ ನಿರ್ಗುಣ ನಿರ್ಧರ್ಮಕ ಬ್ರಹ್ಮಸ್ವರೂಪನಾಗುವುದು ಮೋಕ್ಷ' ಎಂದೇ ಹೇಳಬೇಕೆಂಬ ಹಠವೇಕೆ ? ನ್ಯಾಯವಾದುದನ್ನು ಬಿಟ್ಟು ಬೇರೆ ದಾರಿಯಲ್ಲಿ ಹೋಗುವುದಕ್ಕೆ ದ್ವೇಷ ಮತ್ತು ಆಗ್ರಹಗಳೇ ಕಾರಣಗಳು ಎಂದು ಭಾವ.

ಸ್ವಶ್ಚಾಸೌ ಆನಂದಶ್ಚ, ಸ್ವಾನಂದಃ ವಿಷಯಃ ಯಸ್ಮಿನ್ ಸಃ ತಸ್ಮಿನ್, ವೇದೇನ ಉಕ್ತಃ ತಸ್ಮಿನ್, ಯುಕ್ತಿಭಿಃ ಸಾಧಿತಃ ತಸ್ಮಿನ್, ತಸ್ಮಾತ್ ವಿರುದ್ಧಃ ತಸ್ಮಿನ್;

ಅಸ್ಮಾಕೇಽಪೇಕ್ಷಿತೇಪಕ್ಷೇ (೪೭) ಇತ್ಯಾದಿ ಶ್ಲೋಕಗಳಿಂದ ಸಾಧಿಸಿದ ಪ್ರಮೇಯೋಪನ್ಯಾಸವನ್ನು ಉಪಸಂಹರಿಸುತ್ತಾರೆ.—

ತತಃ ಸ್ವತಃಪ್ರಮಾಣೇನ ದೇವೋ ವೇದೇನ ವೇದಿತಃ ।
ವಿಷ್ಣುರ್ಮೋಕ್ಷಸ್ಯ (ಕ್ಷಾದಿ) ದಾತೇತಿ ವಿಶ್ವಂ ಭವತಿ ಶೋಭನಂ॥೬೩॥

ತತಃ ಸ್ವತಃ ಪ್ರಮಾಣೇನ ವೇದೇನ ವೇದಿತಃ ದೇವಃ ವಿಷ್ಣುಃ ಮೋಕ್ಷಸ್ಯ ದಾತಾ ಇತಿ ವಿಶ್ವಂ ಶೋಭನಂ ಭವತಿ.

ತತಃ=ಆದುದರಿಂದ, ಸ್ವತಃ ಪ್ರಮಾಣೇನ ವೇದೇನ ವೇದಿತಃ= ಇನ್ನೊಂದರ ಅಪೇಕ್ಷೆಇಲ್ಲದ ಪ್ರಮಾಣವಾದ ವೇದದಿಂದ, ತಿಳಿಸಲ್ಪಟ್ಟ, ದೇವಃ ವಿಷ್ಣುಃ=ನಿರಂತರ ಆನಂದಕ್ರೀಡಾದಿಗುಣವಿಶಿಷ್ಟನಾದ ಶ್ರೀಮನ್ನಾರಾಯಣನು, ಮೋಕ್ಷಸ್ಯ ದಾತಾ=ಮೋಕ್ಷವನ್ನು ಕೊಡುವವನು, ಇತಿ= ಹೀಗೆಂದು, ವಿಶ್ವಂ=ಆವರವರಿಗೆ ಅಪೇಕ್ಷಿತವಾದ ಮೋಕ್ಷಾದಿ ಎಲ್ಲಾ ಪ್ರಮೇಯವೂ, ಶೋಭನಂ ಭವತಿ=ಮಂಗಳಕರವಾಗುತ್ತದೆ.

ನಮ್ಮ ಸಿದ್ಧಾಂತಕ್ಕೆ ವಿರುದ್ಧವಾದ ಮತಗಳೆಲ್ಲವೂ ಪ್ರಮಾಣವಿರುದ್ಧಗಳಾದುದರಿಂದ ಅವುಗಳನ್ನು ಬಿಟ್ಟು ಸ್ವತಃಪ್ರಮಾಣವಾಗಿರುವ ವೇದಗಳಿಂದ 'ನಿರಂತರ ಆನಂದಜ್ಞಾನಬಲಕ್ರೀಡಾದಿಅನಂತಕಲ್ಯಾಣಗುಣಪೂರ್ಣ

Rarest Archiver

ನಾದ ಸರ್ವೋತ್ತಮನಾದ ಶ್ರೀಮನ್ನಾರಾಯಣನು ಮೋಕ್ಷಾದಿಪುರುಷಾರ್ಥ ಪ್ರದನು' ಎಂದು ಪ್ರತಿಪಾದಿತನಾಗಿದ್ದಾನೆ, ಎಂದು ಅಂಗೀಕರಿಸಿದರೆ ಎಲ್ಲಾ ಪ್ರಮೇಯವೂ ಮಂಗಳಮಯವಾಗುತ್ತದೆ. ಇದಕ್ಕೆ ಯಾವ ವಿರೋಧವೂ ಇಲ್ಲ, ಇದರಿಂದ ಯಾವ ಅನಿಷ್ಟವೂ ಬರುವುದಿಲ್ಲ.

'ತದಾ ತದಾನನಾಂಭೋಜಾತ್' (ಶ್ಲೋ. ೩) ಎಂಬಲ್ಲಿಂದ ಆರಂಭಿಸಿ ಈ ೬೩ ನೆಯ ಶ್ಲೋಕದವರೆಗೆ ಸಾಧಿಸಿದ ವಿಷಯವನ್ನು ಮುಗಿಸಿ, ಪ್ರಕೃತ ವಿಷಯವನ್ನು ಅನುಸರಿಸುತ್ತಾರೆ—

ಇತ್ಯಾದೀನ್ ದರ್ಶಯಂತ್ಯರ್ಥಾನ್ ವ್ಯಾಖ್ಯೋಪನ್ಯಾಸಸಂಯುತಾ ।
ತ್ರಿವಿಕ್ರಮಾರ್ಯೇಣ ತದಾ ವಿಶ್ವಾಭಿಜ್ಞಸ್ಯ ಶುಶ್ರುವೇ ॥ ೬೪ ॥

ಇತ್ಯಾದೀನ್ ಅರ್ಥಾನ್ ದರ್ಶಯಂತೀ ವಿಶ್ವಾಭಿಜ್ಞಸ್ಯ ಉಪನ್ಯಾಸ-ಸಂಯುತಾ ವ್ಯಾಖ್ಯಾ ತ್ರಿವಿಕ್ರಮಾರ್ಯೇಣ ತದಾ ಶುಶ್ರುವೇ.

ಇತ್ಯಾದೀನ್ = ಇವೇ ಮೊದಲಾಗಿ ಉಳ್ಳ, ಅರ್ಥಾನ್ = ಪ್ರಮೇಯ ಗಳನ್ನು, ದರ್ಶಯಂತೀ = ತಿಳಿಸುತ್ತಿರುವ, ವಿಶ್ವಾಭಿಜ್ಞಸ್ಯ = ಸರ್ವಜ್ಞ ರಾದ ಶ್ರೀಮಧ್ವಾಚಾರ್ಯರ, ಉಪನ್ಯಾಸಸಂಯುತಾ = ವಿಸ್ತಾರವಾದ ವಿಷಯಪ್ರತಿಪಾದನದಿಂದ ಸಹಿತವಾದ, ವ್ಯಾಖ್ಯಾ = ಪ್ರವಚನವು, ತ್ರಿವಿಕ್ರಮಾರ್ಯೇಣ = ತ್ರಿವಿಕ್ರಮಪಂಡಿತರಿಂದ, ತದಾ ಶುಶ್ರುವೇ = ಆಗ ಕೇಳಲ್ಪಟ್ಟಿತು.

ಪ್ರಧಾನವು ಸ್ವತಂತ್ರವಾಗಿ ಕಾರಣವಾಗಲಾರದು ಎಂಬಲ್ಲಿಂದ ಆರಂಭಿಸಿ ಪರಪಕ್ಷವನ್ನು ನಿರಾಕರಿಸಿ ತನ್ನ ಪಕ್ಷವನ್ನು ಸಾಧಿಸಿ, ಅನೇಕ ಪ್ರಮೇಯಗಳನ್ನು ಸರ್ವಜ್ಞರಾದ ಆಚಾರ್ಯರು ಉಪನ್ಯಾಸರೂಪದಿಂದ ಪ್ರಕಟಪಡಿಸಿದರು. ಅವರ ಉಪನ್ಯಾಸಸಹಿತವಾದ ಪ್ರವಚನವನ್ನು ಆಗ ತ್ರಿವಿಕ್ರಮಪಂಡಿತರು ಕೇಳಿದರು.

ಇತಿ ಆದಿಃ ಯೇಷಾಂ ತೇ ತಾನ್, ಉಪನ್ಯಾಸೇನ ಸಂಯುತಾ, ತ್ರಿವಿಕ್ರಮ ಇತಿ ಆರ್ಯಃ ತ್ರಿವಿಕ್ರಮಾರ್ಯಃ ತೇನ, ಅಭಿಜಾನಾತೀತಿ ಅಭಿಜ್ಞಃ, ವಿಶ್ವಸ್ಯ ಅಭಿಜ್ಞಃ ತಸ್ಯ;

Rarest Archiver

ಶುಶ್ರುವೇ ಶುಶ್ರುವಾತೇ ಶುಶ್ರುವಿರೇ, ಶುಶ್ರುವಿಷೇ ಶುಶ್ರುವಾಥೇ ಶುಶ್ರುವಿಢ್ವೇ, ಶುಶ್ರುವೇ ಶುಶ್ರುವಹೇ ಶುಶ್ರುಮಹೇ. ಶ್ರು ಶ್ರವಣೇ ಸಕರ್ಮಕ ಅನಿಟ್ ಕರ್ಮಣಿ ಲಿಟ್. ತ್ರಿವಿಕ್ರಮಾರ್ಯೈಃ ಉಪನ್ಯಾಸ ಸಂಯುತಾಂ ವ್ಯಾಖ್ಯಾಂ ಶುಶ್ರಾವ.

ಆಗ ತ್ರಿವಿಕ್ರಮಪಂಡಿತರು ಏನು ಮಾಡಿದರು ?—

ಅಥ ಪ್ರಾಯುಂಕ್ತ ವಿವಿಧಾನ್ ಬೋಧಚಾಪಗುಣೇರಿತಾನ್ ।
ವಿಪಕ್ಷಯುಕ್ತಾನ್ ವೀರ್ಯೇಣ ತೀಕ್ಷ್ಣಾಂಸ್ತರ್ಕಶರಾನಸೌ ॥

ಅಥ ಅಸೌ ವಿವಿಧಾನ್ ಬೋಧಚಾಪಗುಣೇರಿತಾನ್ ವಿಪಕ್ಷಯುಕ್ತಾನ್ ತೀಕ್ಷ್ಣಾನ್ ತರ್ಕಶರಾನ್ ವೀರ್ಯೇಣ ಪ್ರಾಯುಂಕ್ತ. ॥ ೬೫ ॥

ಅಥ = ಆಚಾರ್ಯರ ಉಪನ್ಯಾಸ ಮತ್ತು ಪ್ರವಚನವನ್ನು ಕೇಳಿದ ಮೇಲೆ, ಅಸೌ = ಈ ತ್ರಿವಿಕ್ರಮಪಂಡಿತಾಚಾರ್ಯರು, ವಿವಿಧಾನ್ = ನಾನಾಪ್ರಕಾರವಾದ, ಬೋಧಚಾಪಗುಣೇರಿತಾನ್ = ತನ್ನ ಜ್ಞಾನವೆಂಬ ಬಿಲ್ಲಿನ ನಾಣಿನಿಂದ ಪ್ರೇರಿತವಾದ, ವಿಪಕ್ಷಯುಕ್ತಾನ್ = ವಿರುದ್ಧಸಿದ್ಧಾಂತದಿಂದ ಕೂಡಿದ, ಹಕ್ಕಿಯಗರಿಗಳಿಂದ ಸಹಿತವಾದ, ತೀಕ್ಷ್ಣಾನ್ ತರ್ಕ-ಶರಾನ್ = ಹರಿತವಾದ ಅನುಮಾನಗಳೆಂಬ ಬಾಣಗಳನ್ನು ವೀರ್ಯೇಣ = ಅತಿಶಯವಾದ ಬುದ್ಧಿಶಕ್ತಿಯಿಂದ, ಪ್ರಾಯುಂಕ್ತ = ಪ್ರಯೋಗಿಸಿದರು.

ವೀರನಾದ ಯೋಧನು ತನ್ನಶಕ್ತಿಯನ್ನೆಲ್ಲಾ ಉಪಯೋಗಿಸಿ ಬಿಲ್ಲಿಗೆ ನಾಣನ್ನು ಬಿಗಿದು ಕಟ್ಟಿ, ವೇಗವರ್ಧಕವಾದ ಹಕ್ಕಿಗರಿಗಳಿಂದ ಕೂಡಿದ ನಾನಾವಿಧವಾದ ಬಾಣಗಳನ್ನು ಪ್ರತಿಯೋಧನ ಮೇಲೆ ಪ್ರಯೋಗಿಸುವಂತೆ, ಶ್ರೀಮಧ್ವಾಚಾರ್ಯರ ಉಪನ್ಯಾಸ ಮತ್ತು ಪ್ರವಚನಗಳನ್ನು ಕೇಳಿದ ಮೇಲೆ ತ್ರಿವಿಕ್ರಮಪಂಡಿತಾಚಾರ್ಯರು ತನ್ನ ಜ್ಞಾನವೆಂಬ ಬಿಲ್ಲಿನ ಗುಣಗಳಿಂದ ಪ್ರೇರಿತವಾದ ಆಚಾರ್ಯರ ಸಿದ್ಧಾಂತಕ್ಕೆ ವಿರುದ್ಧವಾದ ಸಿದ್ಧಾಂತದಿಂದ ಕೂಡಿದ ತೀಕ್ಷ್ಣವಾದ ಅನುಮಾನಬಾಣಗಳನ್ನು ತನ್ನ ಬುದ್ಧಿ ಸಾಮರ್ಥ್ಯದಿಂದ ಪ್ರಯೋಗಿಸಿದರು. ಬಳಿಕ ತ್ರಿವಿಕ್ರಮರು ತನ್ನ ಬುದ್ಧಿ ಸಾಮರ್ಥ್ಯದಿಂದ ಮಧ್ವಾಚಾರ್ಯರ ಸಿದ್ಧಾಂತವನ್ನು ಖಂಡಿಸಲು ಅನೇಕ ಅನುಮಾನಗಳನ್ನು ಪ್ರಯೋಗಿಸಿದರು. ಆ ಅನುಮಾನಗಳು ತ್ರಿವಿಕ್ರಮರ

Rarest Archiver

ಅಸಾಧಾರಣಜ್ಞಾನದ ಪ್ರತಿಭಾದಿಗುಣಗಳಿಂದ ಪ್ರಯೋಗಿಸಲ್ಪಟ್ಟ ವಿರುದ್ಧ ಸಿದ್ಧಾಂತವನ್ನು ಖಂಡಿಸಲು ಸಮರ್ಥವಾಗಿದ್ದುವು ಎಂದು ಭಾವ.

ಬೋಧ ಏವ ಚಾಪಃ, ಬೋಧಚಾಪಸ್ಯ ಗುಣಃ, ಬೋಧಚಾಪ-ಗುಣೇನ ಈರಿತಾಃ ತಾನ್; ವಿರುದ್ಧಃ ಪಕ್ಷಃ, ವಿಪಕ್ಷೇಣ ಯುಕ್ತಾಃ, ವೇಃ (ಪಕ್ಷಿಯ) ಪಕ್ಷಾಃ ವಿಪಕ್ಷೈಃ ಯುಕ್ತಾಃ ತಾನ್; ತರ್ಕಾ ಏವ ಶರಾಃ ತಾನ್;

ಪ್ರ+ಅಯುಂಕ್ತ ಅಯುಂಜಾತಾಂ ಅಯುಂಜತ, ಅಯುಂಕ್ಥಾಃ ಅಯುಂಜಾಥಾಂ ಅಯುಂಗ್ಧ್ವಂ, ಅಯುಂಜಿ ಅಯುಂಜ್ವಹಿ, ಅಯುಂಜ್ಮಹಿ ಯುಜಿರ್ ಯೋಗೇ ಸಕ. ಅನಿಟ್. ಆತ್ಮನೇ. ಲಜ್.

ಆಗ ಶ್ರೀಮಧ್ವಾಚಾರ್ಯರು ಏನು ಮಾಡಿದರು ?

ಚಿಚ್ಛೇದಾತುಚ್ಛಧಿಷಣಃ ತಾಂಸ್ತದಾತರ್ಕಸಾಯಕೈಃ ।
ಪ್ರಯುಕ್ತಮಾತ್ರಾನ್ ಪ್ರಹಸಂಲ್ಲೀಲಯಾತಿಶಯಾಲುಭಿಃ ॥

ಪ್ರಹಸನ್ ಅತುಚ್ಛಧಿಷಣಃ ಪ್ರಯುಕ್ತಮಾತ್ರಾನ್ ತಾನ್ ತದಾ ಅತಿಶಯಾಲುಭಿಃ ತರ್ಕಸಾಯಕೈಃ ಲೀಲಯಾ ಚಿಚ್ಛೇದ. ॥ ೬೬ ॥

ಪ್ರಹಸನ್ ಅತುಚ್ಛಧಿಷಣಃ = ನಗುತ್ತಿರುವ ಶ್ರೀಪೂರ್ಣಪ್ರಜ್ಞರು, ಪ್ರಯುಕ್ತಮಾತ್ರಾನ್ ತಾನ್=ಕೇವಲ ಪ್ರಯೋಗಿಸಲ್ಪಟ್ಟ, ಆ ತ್ರಿವಿಕ್ರಮರ ಅನುಮಾನ (ಬಾಣ)ಗಳನ್ನು, ತದಾ = ಆಗ, ಅತಿಶಯಾಲುಭಿಃ = (ತ್ರಿವಿಕ್ರಮರ)ಯುಕ್ತಿಬಾಣಗಳನ್ನು ಮೀರಿಸುವ, ತರ್ಕಸಾಯಕೈಃ = ಅನುಮಾನಗಳೆಂಬ ಬಾಣಗಳಿಂದ, ಲೀಲಯಾ ಚಿಚ್ಛೇದ=ಅನಾಯಾಸವಾಗಿ ಕತ್ತರಿಸಿದರು.

ಯೋಧನ ಬಾಣಗಳನ್ನು ಪ್ರಬಲನಾದಪ್ರತಿಯೋಧನು – ಕೂಡಲೇ ಖಂಡಿಸುತ್ತಾನೆ. ಅದರಂತೆ ತ್ರಿವಿಕ್ರಮರು ಅನುಮಾನಬಾಣಗಳನ್ನು ಪ್ರಯೋಗಿಸಿದಾಗ ಆಚಾರ್ಯರು ನಗುತ್ತಾ, ಪ್ರಯೋಗಿಸಿದ ಕೂಡಲೇ ತ್ರಿವಿಕ್ರಮರ ಯುಕ್ತಿಬಾಣಗಳನ್ನು ಮೀರಿಸುವ ಇನ್ನೂ ಹೆಚ್ಚು ಬಲವಾದ ಪ್ರತ್ಯನುಮಾನಬಾಣಗಳಿಂದ ಅನಾಯಾಸವಾಗಿ ಖಂಡಿಸಿದರು. ಪ್ರತಿ

Rarest Archiver

ವಾದಿಯು ಹೇಳಿದ ಕೂಡಲೇ ಖಂಡಿಸಿದ್ದರಿಂದ ಆಚಾರ್ಯರು ಅತಿಶಯ ಪ್ರತಿಭಾಶಕ್ತಿಸಂಪನ್ನರೆಂದೂ, ನಗುತ್ತಿದ್ದರು—ಎಂದು ಹೇಳಿದ್ದರಿಂದ ಆಚಾರ್ಯರಿಗೆ ಕೋಪ ಭಯ ಕಂಪಾದಿದೋಷಗಳು ಇಲ್ಲವೆಂದೂ ತಿಳಿದು ಬರುತ್ತದೆ.

ನ ತುಚ್ಛಾ, ಅತುಚ್ಛಾ ಧಿಷಣಾ ಯಸ್ಯ ಸಃ, ತರ್ಕಾ ಏವ ಸಾಯಕಾಃ ತೈಃ, ಪ್ರಯುಕ್ತಾ ಏವ ಪ್ರಯುಕ್ತಮಾತ್ರಾಃ, ಅತಿಶಯಿತುಂ ಶೀಲಂ ಏಷಾಂ ಇತಿ ಅತಿಶಯಾಲವಃ ತೈಃ ;

ಚಿಚ್ಛೇದ ಚಿಚ್ಛಿದತುಃ ಚಿಚ್ಛಿದುಃ, ಚಿಚ್ಛೇದಿಥ ಚಿಚ್ಛಿದಥುಃ ಚಿಚ್ಛಿದ, ಚಿಚ್ಛೇದ ಚಿಚ್ಛಿದಿವ ಚಿಚ್ಛಿದಿಮ; ಛಿದಿರ್ ದ್ವೈಧೀಕರಣೇ ಸಕ ಅನಿಟ್ ಪರ ಲಿಟ್.

ಆಗ ತ್ರಿವಿಕ್ರಮರ ವಾದ ವಿಕ್ರಮವು ಹೀಗಿತ್ತು—

ಅಧಾರ್ಯಾಣೀತರಜನ್ಯೈರನಿವರ್ತ್ಯಾನಿ (ವಾರ್ಯಾಣಿ) ಪೂರುಷೈಃ ।
ವಿಜಿಗೀಷುರ್ದ್ವಿಜಶ್ರೇಷ್ಠೋ ವೇದಾಸ್ತ್ರಾಣಿ ಪ್ರಯುಕ್ತವಾನ್ ॥೬೩॥

ವಿಜಿಗೀಷುಃ ದ್ವಿಜಶ್ರೇಷ್ಠಃ ಇತರಜನ್ಯೈಃ ಅಧಾರ್ಯಾಣಿ ಪೂರುಷೈಃ ಅನಿವರ್ತ್ಯಾನಿ ವೇದಾಸ್ತ್ರಾಣಿ ಪ್ರಯುಕ್ತವಾನ್.

ವಿಜಿಗೀಷುಃ ದ್ವಿಜಶ್ರೇಷ್ಠಃ = ಜಯಿಸುವ ಅಪೇಕ್ಷೆಯುಳ್ಳ ಬ್ರಾಹ್ಮಣೋತ್ತಮರಾದ ತ್ರಿವಿಕ್ರಮಪಂಡಿತರು, ಕ್ಷತ್ರಿಯೋತ್ತಮನು, ಇತರಜನ್ಯೈಃ ಅಧಾರ್ಯಾಣಿ = ಅಲ್ಪಬುದ್ಧಿಯುಳ್ಳವರಿಂದ, ಅಶಕ್ತರಾದ ಜನರಿಂದ, ತಿಳಿಯಲಾಗದ, ಸಹಿಸಲಾಗದ, ಅನಿವರ್ತ್ಯಾನಿ = ಬೇರೆ ಅರ್ಥವನ್ನು ಮಾಡಲು ಸಾಧ್ಯವಿಲ್ಲದ, ತಡೆಯಲಾಗದ, ವೇದಾಸ್ತ್ರಾಣಿ ಪ್ರಯುಕ್ತವಾನ್ = ವೇದವಾಕ್ಯಗಳೆಂಬ ವೇದೋಕ್ತವಾದ, ಅಸ್ತ್ರಗಳನ್ನು ಪ್ರಯೋಗಿಸಿದರು.

ಜಯಿಸುವ ಅಪೇಕ್ಷೆಯುಳ್ಳ ಮಹಾರಥಿಯಾದ ಕ್ಷತ್ರಿಯೋತ್ತಮನು ಬೇರೆಯವರಿಂದ ಹೊಂದಲೂ ಸಾಧ್ಯವಿಲ್ಲದ ಸಾಮಾನ್ಯಪ್ರತಿಭಟರಿಂದ ತಡೆಯಲಸಾಧ್ಯವಾದ ಬ್ರಹ್ಮಾಸ್ತ್ರ, ಪಾಶುಪತಾಸ್ತ್ರ ಮುಂತಾದ ಮಹಾ ಮಂತ್ರಾಸ್ತ್ರಗಳನ್ನು ಪ್ರಯೋಗಿಸುತ್ತಾನೆ. ಆದರಂತೆ ಜಯಾಭಿಲಾಷೆ

Rarest Archiver

ಯುಳ್ಳ ಬ್ರಾಹ್ಮಣಶ್ರೇಷ್ಠರಾದ ತ್ರಿವಿಕ್ರಮಪಂಡಿತರು ತ್ರಿವರ್ಣೇತರರಿಗೆ ಕೇಳಲು ಯೋಗ್ಯವಲ್ಲದ, ಸಾಮಾನ್ಯಜನರಿಂದ ನಿರಾಕರಿಸಲು ಅಶಕ್ಯವಾದ ಮೇಲ್ನೋಟದ ಅರ್ಥವನ್ನು ಪ್ರತಿಪಾದಿಸುವ (ತತ್ತ್ವಮಸಿ= ನೀನು ಬ್ರಹ್ಮನಾಗಿದ್ದೀ, ಅಹಂ ಬ್ರಹ್ಮಾಸ್ಮಿ=ಜೀವನಾದ ನಾನು ಬ್ರಹ್ಮನಾಗಿದ್ದೇನೆ ಇತ್ಯಾದಿ.) ವೇದಗಳೆಂಬ ಮಹಾಮಂತ್ರಾಸ್ತ್ರಗಳನ್ನು ಪ್ರಯೋಗಿಸಿದರು. ಶಸ್ತ್ರಯುದ್ಧದಲ್ಲಿ ಪರಾಜಿತನಾದ ಯೋಧನು ಅಸ್ತ್ರಯುದ್ಧವನ್ನು ಮಾಡುವಂತೆ ತರ್ಕದಲ್ಲಿ ಸೋತ ತ್ರಿವಿಕ್ರಮರು ವೇದವಾಕ್ಯಗಳನ್ನು ಉದಾಹರಿಸಿ ಆಚಾರ್ಯರ ಸಿದ್ಧಾಂತವನ್ನು ಪ್ರತಿಭಟಿಸಿದರು.

ಇತರೇ ಚ ತೇ ಜನಾಶ್ಚ ತೈಃ, ಧಾರಯಿತುಂ ಯೋಗ್ಯಾನಿ, ನ ಧಾರ್ಯಾಣಿ, ನಿವರ್ತಯಿತುಂ ಯೋಗ್ಯಾನಿ, ನ ನಿವರ್ತ್ಯಾನಿ, ವಿಜೇತುಂ ಇಚ್ಛುಃ ವಿಜಿಗೀಷುಃ, ದ್ವಿಜಾನಾಂ ಶ್ರೇಷ್ಠಃ, ವೇದಾ ಏವ ಅಸ್ತ್ರಾಣಿ :

ಆಚಾರ್ಯರು ತ್ರಿವಿಕ್ರಮರ ವೇದಾಸ್ತ್ರಗಳನ್ನು ಅವುಗಳಿಗಿಂತಲೂ ಬಲವತ್ತಾದ ವೇದಗಳೆಂಬ ಪ್ರತ್ಯಸ್ತ್ರಗಳಿಂದಲೇ ಖಂಡಿಸಿದರು—

ವಾಕ್ಯೈರತಿಬಲೀಯೋಭಿಃ ಪ್ರತ್ಯಸ್ತ್ರೈರಿವ ವೈದಿಕೈಃ ।
ಅರ್ಥಾಂತರಂ ಪ್ರಕಟಯಂಸ್ತಾನ್ಯಸೌ ಸನ್ನ್ಯವರ್ತಯತ್ ॥೬೮॥

ಅಸೌ ತಾನಿ ಅತಿಬಲೀಯೋಭಿಃ ಪ್ರತ್ಯಸ್ತ್ರೈಃ ಇವ ವೈದಿಕೈಃ ವಾಕ್ಯೈಃ ಅರ್ಥಾಂತರಂ ಪ್ರಕಟಯನ್ ಸನ್ನ್ಯವರ್ತಯತ್.

ಅಸೌ= ಈ ಶ್ರೀಮಧ್ವರು, ತಾನಿ=ತ್ರಿವಿಕ್ರಮರು ಪ್ರಯೋಗಿಸಿದ ವೇದವಾಕ್ಯಗಳನ್ನು, ಅತಿಬಲೀಯೋಭಿಃ ಪ್ರತ್ಯಸ್ತ್ರೈಃ ಇವ=ಅತಿಶಯಬಲಯುಕ್ತವಾದ ಪ್ರತಿಯಾದ ಅಸ್ತ್ರಗಳಿಂದಲೆಂಬಂತೆ, ವೈದಿಕೈಃ ವಾಕ್ಯೈಃ= ವೇದಸಂಬಂಧಿಯಾದ ವಾಕ್ಯಗಳಿಂದ, ಅರ್ಥಾಂತರಂ ಪ್ರಕಟಯನ್= ಬೇರೆ ಅರ್ಥವನ್ನು ಸ್ಫುಟಗೊಳಿಸುತ್ತಾ, ಸನ್ನ್ಯವರ್ತಯತ್=ಹಿಂತಿರುಗಿಸಿದರು (ಖಂಡಿಸಿದರು).

ಆಗ ಶ್ರೀಮಧ್ವರು ನಿರವಕಾಶವಾದ (ಬೇರೆ ಅರ್ಥ ಹೇಳುವುದಕ್ಕೆ ಅವಕಾಶವಿಲ್ಲದ) ಬಲಿಷ್ಠವಾದ ಅನೇಕ ವೇದವಾಕ್ಯಗಳನ್ನು ಉದಾಹರಿಸಿ

Rarest Archive

ಪ್ರತಿವಾದಿಯು ವೇದವಾಕ್ಯಗಳಿಗೆ ಬೇರೆ ಅರ್ಥವನ್ನು ಹೇಳಿದರು. ಪ್ರತಿಕೂಲವಾದ ಅಸ್ತ್ರಗಳಂತಿರುವ ವೇದವಾಕ್ಯಗಳಿಂದ ಪ್ರತಿವಾದಿಯು ಹೇಳಿದ ವೇದವಾಕ್ಯಗಳು ಅವನಿಗೆ ಅನುಕೂಲವಾದ ಅರ್ಥವನ್ನು ಹೇಳುವುದಿಲ್ಲವೆಂದು ಸಮರ್ಥಿಸಿದರು. ವೇದವಾಕ್ಯಗಳಿಗೆ ತ್ರಿವಿಕ್ರಮರು ಹೇಳಿದ ಅರ್ಥವು ಸರಿಯಲ್ಲವೆಂದು ಹೇಳಿ, ಖಂಡಿಸಲು ಅಸಾಧ್ಯವಾದ ಅರ್ಥಗಳನ್ನು ತಾವೇ ಹೇಳಿದರು.

ಅತಿಶಯೇನ ಬಲವಂತಿ ಅತಿಬಲೀಯಾಂಸಿ ತೈಃ, ಅನ್ಯಃ ಅರ್ಥಃ ಅರ್ಥಾಂತರಂ.

ಸಂ + ನಿ + ಅವರ್ತಯತ್ ಅವರ್ತಯತಾಂ ಅವರ್ತಯನ್ ; ವೃತು ವರ್ತನೇ ಣಿಜಂತದಲ್ಲಿ ಲಙ್.

ಕೊನೆಗೆ ಆಚಾರ್ಯರೇ ಗೆದ್ದರು, ತ್ರಿವಿಕ್ರಮಪಂಡಿತರು ಸೋತರು—

ಸಪ್ತಾಷ್ಟಾನಿ ದಿನಾನ್ಯೇವಂ ವಾದಂ ಕೃತ್ವಾ ಸಹಾಮುನಾ ।
ನಿರುತ್ತರಂ ತಂ ನಿಶ್ಚೋದ್ಯಂ ಚಕ್ರೇ ಚಕ್ರಾಯುಧಪ್ರಿಯಃ ॥ ೬೯ ॥

ಚಕ್ರಾಯುಧಪ್ರಿಯಃ ಅಮುನಾ ಸಹ ಏವಂ ಸಪ್ತಾಷ್ಟಾನಿ ದಿನಾನಿ ವಾದಂ ಕೃತ್ವಾ ತಂ ನಿರುತ್ತರಂ ನಿಶ್ಚೋದ್ಯಂ (ಚ) ಚಕ್ರೇ.

ಚಕ್ರಾಯುಧಪ್ರಿಯಃ = ಸುದರ್ಶನಚಕ್ರಧಾರಿಯಾದ ಶ್ರೀಮನ್ನಾರಾಯಣನಿಗೆ ಪ್ರಿಯರಾದ ಶ್ರೀಮಧ್ವರು, ಅಮುನಾ ಸಹ = ಈ ತ್ರಿವಿಕ್ರಮಪಂಡಿತರೊಡನೆ, ಏವಂ = ಈ ರೀತಿ, ಸಪ್ತಾಷ್ಟಾನಿ ದಿನಾನಿ = ಹದಿನೈದು ದಿವಸಗಳ ಕಾಲ, ವಾದಂ ಕೃತ್ವಾ = ವಾದವನ್ನು ಮಾಡಿ, ತಂ = ಅವರನ್ನು ನಿರುತ್ತರಂ = ಉತ್ತರವಿಲ್ಲದವರನ್ನಾಗಿಯೂ, ನಿಶ್ಚೋದ್ಯಂ = ಪ್ರಶ್ನೆ (ಆಕ್ಷೇಪ) ಇಲ್ಲದವರನ್ನಾಗಿಯೂ, ಚಕ್ರೇ = ಮಾಡಿದರು.

ವಿಷ್ಣುವಿಗೆ ಪರಮಪ್ರೇಮಾಸ್ಪದರಾದ ಆಚಾರ್ಯರೊಡನೆ ತ್ರಿವಿಕ್ರಮರು ಹದಿನೈದು ದಿನಗಳ ಕಾಲ ವಾದ ಮಾಡಿದರು. ಮುಂದೆ ತ್ರಿವಿಕ್ರಮರಿಗೆ ಆಚಾರ್ಯರ ಪ್ರಶ್ನೆಗಳಿಗೆ ಉತ್ತರಹೇಳಲೂ ಆಗಲಿಲ್ಲ. ಅವರಿಗೆ ಆಚಾರ್ಯರನ್ನು ಆಕ್ಷೇಪಿಸಲು, ಅಥವಾ ಪ್ರಶ್ನಿಸಲು ಯಾವ ವಿಷಯವೂ ಉಳಿಯಲಿಲ್ಲ.

Rarest Archiver

ಸಪ್ತ ಚ ಅಷ್ಟ ಚ ಸಪ್ತಾಷ್ಟ, ಸಪ್ತಾಷ್ಟ ಏಷಾಂ ಸಂತೀತಿ ಸಪ್ತಾಷ್ಟಾನಿ ಅರ್ಶಆದಿಗಣದಲ್ಲಿ ಈ ಶಬ್ದವನ್ನು ಪಾಠಮಾಡಿ ಅಚ್ ಪ್ರತ್ಯಯ ಮಾಡಿಕೊಳ್ಳಬಹುದು. ಅರ್ಶ ಆದಿಭ್ಯೋ ಅಚ್ (5-2-12). ಸಪ್ತ ವಾ ಅಷ್ಟ ವಾ ಎಂದು ವಿಗ್ರಹಮಾಡಿದರೆ ಏಳು ಅಥವಾ ಎಂಟು ಎಂದು ಅರ್ಥಬರುತ್ತದೆ. 15 ಎಂದು ಅರ್ಥವಾಗುವುದಿಲ್ಲ. ವಾದವು 15 ದಿನಗಳಲ್ಲಿ ನಡೆಯಿತೆಂದು ಪರಂಪರೆಯ ಐತಿಹ್ಯವಿದೆ. ಆದುದರಿಂದ ಬಹುವ್ರೀಹಿಮಾಡಿದಾಗ ಬಹುವ್ರೀಹೌ ಸಂಖ್ಯೇಯೇ ಡಚ್ – (5-4-73) ಈ ಸೂತ್ರದಿಂದ ಡಚ್ ಬರುತ್ತದೆ. ಆಗ ಏಳು ಅಥವಾ ಎಂಟು ಎಂದೇ ಅರ್ಥವಾಗುತ್ತದೆ. 15 ಎಂಬ ಅರ್ಥ ಬರುವುದಿಲ್ಲ. ಸಪ್ತಾಷ್ಟೌ ಚ ಎಂಬ ಪಾಠವಿದ್ದರೆ ಯಾವ ದೋಷವೂ ಇಲ್ಲ.

ನಿರ್ಗತಂ ಉತ್ತರಂ ಯಸ್ಮಾತ್ ಸಃ ತಂ, ನಿರ್ಗತಂ ಚೋದ್ಯಂ ಯಸ್ಮಾತ್ ಸಃ ತಂ, ಚಕ್ರಂ ಆಯುಧಂ ಯಸ್ಯ ಸಃ, ಚಕ್ರಾಯುಧಸ್ಯ ಪ್ರಿಯಃ.

ಸೋತ ಮೇಲೆ ತ್ರಿವಿಕ್ರಮರು ಆಚಾರ್ಯರ ಶಿಷ್ಯರಾದರು—

ಪ್ರಣಮ್ಯಾಚಷ್ಟ ಶಿಷ್ಯೋಽಸೌ ಕ್ಷಮ್ಯತಾಂ ನಾಥ ಚಾಪಲಂ ।
ಪದಪದ್ಮರಜೋದಾಸ್ಯಂ ಧ್ರುವಂ ಮೇ ದೀಯತಾಮಿತಿ ॥೭೦॥

ಶಿಷ್ಟಃ ಅಸೌ ಪ್ರಣಮ್ಯ 'ನಾಥ ! ಚಾಪಲಂ ಕ್ಷಮ್ಯತಾಂ, ಧ್ರುವಂ ಪದಪದ್ಮರಜೋದಾಸ್ಯಂ ಮೇ ದೀಯತಾಂ' ಇತಿ ಆಚಷ್ಟ.

ಶಿಷ್ಟಃ ಅಸೌ = ಸಾತ್ವಿಕಜೀವರಾದ ಈ ತ್ರಿವಿಕ್ರಮರು, ಪ್ರಣಮ್ಯ = ನಮಸ್ಕರಿಸಿ, 'ನಾಥ = ಸ್ವಾಮಿಯೇ ! (ಭವತಾ = ತಮ್ಮಿಂದ) ಚಾಪಲಂ ಕ್ಷಮ್ಯತಾಂ = ಚಪಲತೆಯು (ತುಂಟತನವು) ಕ್ಷಮಿಸಲ್ಪಡಲಿ; (ಭವತಾ = ತಮ್ಮಿಂದ) ಧ್ರುವಂ ಪದಪದ್ಮರಜೋದಾಸ್ಯಂ = ಶಾಶ್ವತವಾದ ಕಮಲದಂತಹ ತಮ್ಮ ಪಾದಗಳಧೂಳಿನ ಕಿಂಕರತನವು, ಮೇ ದೀಯತಾಂ = ನನಗೆ ಕೊಡಲ್ಪಡಲಿ.' ಇತಿ ಆಚಷ್ಟ = ಎಂದು ಹೇಳಿದರು.

ಸಾತ್ವಿಕಸ್ವಭಾವದ ಈ ತ್ರಿವಿಕ್ರಮಪಂಡಿತರು ಶ್ರೀಮಧ್ವಾಚಾರ್ಯರನ್ನು ನಮಸ್ಕರಿಸಿದರು. 'ಪ್ರಭೋ ! ಮಹಾತ್ಮರಾದ ತಮ್ಮ ಜೊತೆಗೆ

Rarest Archiver

ಮಾದಿಸಿ ಹುಡುಗಾಟಿಕೆಯನ್ನು ಮಾಡಿದ್ದೇನೆ. ನನ್ನನ್ನು ಕ್ಷಮಿಸಿರಿ. ತಮ್ಮ ಪಾದಕಮಲಗಳ ಧೂಳಿಯ ಸೇವಕತನವನ್ನು ನನಗೆ ಕೊಡಿರಿ' ಎಂದು ಹೇಳಿದರು. ತನ್ನ ತಪ್ಪನ್ನು ಕ್ಷಮಿಸಿ ತಮ್ಮ ದಾಸನನ್ನಾಗಿ ಶಿಷ್ಯನನ್ನಾಗಿ ಅಂಗೀಕರಿಸಿ ನನ್ನನ್ನು ಉದ್ಧರಿಸಿರಿ ಎಂದು ತ್ರಿವಿಕ್ರಮರು ಪ್ರಾರ್ಥಿಸಿದರು.

ಪದೇ ಪದ್ಮೇ ಇವ, ಪದಪದ್ಮಯೋಃ ರಜಃ, ದಾಸಸ್ಯ ಭಾವಃ ಧಾಸ್ಯಂ, ಪದಪದ್ಮರಜಸಃ ದಾಸ್ಯಂ ;

ಆ + ಅಚಷ್ಟ ಅಚಕ್ಷಾತಾಂ ಆಚಕ್ಷತ ಚಕ್ಷಿಙ್ ವ್ಯಕ್ತಾಯಾಂ ವಾಚಿ ಲಙ್. ಕ್ಷಮ್ಯತಾಂ ಕ್ಷಮ್ಯೇತಾಂ ಕ್ಷಮ್ಯಂತಾಂ, ಕ್ಷಮೂಷ್ ಸಹನೇ ಕರ್ಮಣಿ ಲೋಟ್. ದೀಯತಾಂ ದೀಯೇತಾಂ ದೀಯಂತಾಂ–ಡುದಾಞ್ ದಾನೇ ಕರ್ಮಣಿ ಲೋಟ್. ನಾಥ ! ಭವಾನ್ ಚಾಪಲಂ ಕ್ಷಮತಾಂ, ಭವಾನ್ ಪದಪದ್ಮರಜೋದಾಸ್ಯಂ ದದಾತು. (ಕರ್ತರಿ).

ಆಚಾರ್ಯರ ಮತ್ತು ತ್ರಿವಿಕ್ರಮಾರ್ಯಾದಿಗಳ ಮುಂದಿನ ಕಾರ್ಯಕ್ರಮ —

ವ್ಯಾಖ್ಯಾಂ ಭಾಷ್ಯಸ್ಯ ಭೂಯೋಧೀಃ ಶ್ರವಣಂ ಸೂರಿನಂದನಃ ।
ಸಂತಃ ಪ್ರೀತಿಮಸಂತೋಽನ್ಯಾಂ ಸಮಮಾರೇಭಿರೇ ತತಃ ||೭೧||

ತತಃ ಭೂಯೋಧೀಃ ಭಾಷ್ಯಸ್ಯ ವ್ಯಾಖ್ಯಾಂ, ಸೂರಿನಂದನಃ ಶ್ರವಣಂ ಸಂತಃ ಪ್ರೀತಿಂ ಅಸಂತಃ ಅನ್ಯಾಂ ಸಮಂ ಆರೇಭಿರೇ.

ತತಃ = ಅನಂತರ, ಭೂಯೋಧೀಃ = ಪೂರ್ಣಪ್ರಜ್ಞರು, ಭಾಷ್ಯಸ್ಯ ವ್ಯಾಖ್ಯಾಂ = ಬ್ರಹ್ಮಸೂತ್ರಭಾಷ್ಯದ ಪ್ರವಚನವನ್ನು, ಸೂರಿನಂದನಃ = ಸುಬ್ರಹ್ಮಣ್ಯಪಂಡಿತರ ಮಕ್ಕಳಾದ ತ್ರಿವಿಕ್ರಮಪಂಡಿತಾಚಾರ್ಯರು, ಶ್ರವಣಂ = ಶಾಸ್ತ್ರದ ಕೇಳುವಿಕೆಯನ್ನು, ಸಂತಃ ಪ್ರೀತಿಂ = ಸಜ್ಜನರು ಸಂತೋಷವನ್ನು, ಅಸಂತಃ ಅನ್ಯಾಂ = ದುರ್ಜನರು ಪ್ರೀತಿಗಿಂತ ಬೇರೆಯಾದ ದ್ವೇಷವನ್ನು, ಸಮಂ ಆರೇಭಿರೇ = ಒಟ್ಟಿಗೇ (ಏಕಕಾಲದಲ್ಲಿ) ಆರಂಭಿಸಿದರು.

ಅನಂತರ ಶ್ರೀಪೂರ್ಣಪ್ರಜ್ಞರು ತಮ್ಮ ಭಾಷ್ಯಪ್ರವಚನವನ್ನು,

Rarest Archiver

ತ್ರಿವಿಕ್ರಮರು ಆಚಾರ್ಯರಿಂದ ಭಾಷ್ಯದ ಶ್ರವಣವನ್ನು, ಸಜ್ಜನರು ಸಂತೋಷವನ್ನೂ, ದುರ್ಜನರು ಅಸಂತೋಷವನ್ನೂ ಏಕಕಾಲದಲ್ಲಿ ಮಾಡಲಾರಂಭಿಸಿದರು. ಅದ್ವೈತಿದಿಗ್ಗಜಪಂಡಿತರಾದ ತ್ರಿವಿಕ್ರಮರು ಆಚಾರ್ಯರಲ್ಲಿ ಭಾಷ್ಯಶ್ರವಣಮಾಡುವುದನ್ನು ನೋಡಿ ಸಾಧುಗಳಿಗೆ ಪ್ರೀತಿಯೂ ಅಸಾಧುಗಳಿಗೆ ದ್ವೇಷವೂ ಹುಟ್ಟಿತು. (ಪ್ರವಚನ-ಶ್ರವಣ ಪ್ರೀತಿ-ಅಪ್ರೀತಿ ಈ ನಾಲ್ಕುಕಾರ್ಯಗಳಿಗೆ ಸಮಕಾಲತ್ವವನ್ನು ಹೇಳಿದ್ದರಿಂದ ಅತಿಶಯೋಕ್ತಿ.)

ಭೂಯಸೀ ಧೀಃ ಯಸ್ಯ ಸಃ, ಸೂರೇಃ ನಂದನಃ, ನ ಸಂತಃ ;

ಆ + ರೇಭೇ ರೇಭಾತೇ ರೇಭಿರೇ, ರಭ ರಾಭಸ್ಯೇ ಆತ್ಮ ಲಿಟ್.

ತ್ರಿವಿಕ್ರಮಾರ್ಯರು ಆಚಾರ್ಯರ ಭಾಷ್ಯಕ್ಕೆ ಟೀಕೆಯನ್ನು ಬರೆಯುತ್ತಾ ಆಚಾರ್ಯರ ಗ್ರಂಥಗಳನ್ನು ಹೊಗಳಿದರು—

ಗುರ್ವಾಜ್ಞಾಗೌರವಾಟ್ಟೀಕಾಂ ಕುರ್ವನ್ ಭಾಷ್ಯಸ್ಯ ದುಷ್ಕರಾಂ ।
ಷಡರ್ಥವಿಕ್ರಮಾರ್ಯೋಽಸೌ ಮಹಾಚಾರ್ಯಮವೋಚತ ॥೭೨॥

ಗುರ್ವಾಜ್ಞಾಗೌರವಾತ್ ದುಷ್ಕರಾಂ ಭಾಷ್ಯಸ್ಯ ಟೀಕಾಂ ಕುರ್ವನ್ ಅಸೌ ಷಡರ್ಥವಿಕ್ರಮಾರ್ಯಃ ಮಹಾಚಾರ್ಯಂ ಅವೋಚತ.

ಗುರ್ವಾಜ್ಞಾಗೌರವಾತ್ = ಗುರುಗಳಾದ ಶ್ರೀಮಧ್ವರ ಅಪ್ಪಣೆಯ ಗೌರವದಿಂದ, ದುಷ್ಕರಾಂ = ಬೇರೆಯವರಿಂದ ಮಾಡಲಾಗದ, ಭಾಷ್ಯಸ್ಯ-ಟೀಕಾಂ ಕುರ್ವನ್ = ಸೂತ್ರಭಾಷ್ಯದ ವ್ಯಾಖ್ಯಾನವನ್ನು ಮಾಡುತ್ತಾ, ಅಸೌ ಷಡರ್ಥವಿಕ್ರಮಾರ್ಯಃ = ಈ ತ್ರಿವಿಕ್ರಮಪಂಡಿತಾಚಾರ್ಯರು, ಮಹಾಚಾರ್ಯಂ = ಜಗತ್‌ಪೂಜ್ಯರಾದ ಶ್ರೀಮಧ್ವಾಚಾರ್ಯರನ್ನು ಕುರಿತು, ಅವೋಚತ = ಹೇಳಿದರು.

ಶ್ರೀಮಧ್ವರು ತ್ರಿವಿಕ್ರಮರಿಗೆ—'ನೀನು ಭಾಷ್ಯಕ್ಕೆ ಟೀಕೆಯನ್ನು ಬರೆಯಬೇಕು' ಎಂದು ಅಪ್ಪಣೆ ಮಾಡಿದರು. ಆ ಅಪ್ಪಣೆಯ ಮೇಲಿನ ಗೌರವದಿಂದ ಗುರುಗಳ ಪರಮಾನುಗ್ರಹವಿಲ್ಲದೆ ಬರೆಯಲು ಅಸಾಧ್ಯವಾದ ಶ್ರೀಸೂತ್ರಭಾಷ್ಯದ ಟೀಕೆಯನ್ನು ತ್ರಿವಿಕ್ರಮರು ಬರೆಯಲಾರಂಭಿಸಿದರು. ಆಗ ಅವರು ಆಚಾರ್ಯರನ್ನು ಕುರಿತು ಹೀಗೆ ವಿಜ್ಞಾಪಿಸಿದರು.

Rarest Archiver

ಗುರೋಃ ಆಜ್ಞಾ, ಗುರ್ವಾಜ್ಞಾಯಾಂ ಗೌರವಂ ತಸ್ಮಾತ್, ದುಃಖೇನ ಕರ್ತುಂ ಶಕ್ಯಾ ದುಷ್ಕರಾ ತಾಂ, ಷಡರ್ಧಂ (ಆರರ ಅರ್ಧ ಮೂರು) ವಿಕ್ರಮಾಃ ಯಸ್ಯ, ಷಡರ್ಧವಿಕ್ರಮಃ ಇತಿ ಆರ್ಯಃ ಮಹಾಂಶ್ಚ ಅಸೌ ಆಚಾರ್ಯಶ್ಚ ;

ಅವೋಚತ ಅವೋಚೇತಾಂ ಅವೋಚಂತ, ಬ್ರೂಞ್ ವ್ಯಕ್ತಾಯಾಂ ವಾಚಿ ಆತ್ಮನೇ ಲುಙ್. ವಚ್ ಆದೇಶ.

ತ್ರಿವಿಕ್ರಮರ ಭಾಷ್ಯವರ್ಣನೆಯ ಮಾತು ಹೀಗಿತ್ತು —

ಕವೀಂದ್ರೈರ್ನ ಸಮಾಪ್ಯಂತೇ ಸಂಗೃಹ್ಯಾಪಿ ಯತೋಽನಿಶಂ ।
ನ್ಯಾಯರತ್ನಾನಿ ಭಾಷ್ಯಾಬ್ಧೇರಸ್ಯ ಗಾಂಭೀರ್ಯಮದ್ಭುತಂ ॥ ೭೩ ॥

ಕವೀಂದ್ರೈಃ ಯತಃ ಭಾಷ್ಯಾಬ್ಧೇಃ ನ್ಯಾಯರತ್ನಾನಿ ಅನಿಶಂ ಸಂಗೃಹ್ಯಾಪಿ ನ ಸಮಾಪ್ಯಂತೇ, ತತ್ ಅಸ್ಯ ಗಾಂಭೀರ್ಯಂ ಅದ್ಭುತಂ.

ಕವೀಂದ್ರೈಃ = ಜ್ಞಾನಿಶ್ರೇಷ್ಠರಿಂದ, ಯತಃ = ಯಾವ ಕಾರಣದಿಂದ. ಭಾಷ್ಯಾಬ್ಧೇಃ = ಭಾಷ್ಯವೆಂಬ ಸಮುದ್ರದ ದೆಸೆಯಿಂದ, ನ್ಯಾಯರತ್ನಾನಿ = ನ್ಯಾಯಗಳೆಂಬ ರತ್ನಗಳು, ಅನಿಶಂ ಸಂಗೃಹ್ಯಾಪಿ = ಎಡೆಬಿಡದೆ ಸಂಗ್ರಹಿಸಲ್ಪಟ್ಟರೂ, ನ ಸಮಾಪ್ಯಂತೇ = ಮುಗಿಸಲ್ಪಡುವುದಿಲ್ಲ. (ತತ್ = ಆದುದರಿಂದ) ಅಸ್ಯ = ಈ ಭಾಷ್ಯದ, ಗಾಂಭೀರ್ಯಂ = ಗಂಭೀರತೆಯು, ಆಳವು, ಅದ್ಭುತಂ = ಆಶ್ಚರ್ಯಕರವಾದುದು.

ಆಚಾರ್ಯರೇ ! ತಾವು ರಚಿಸಿದ ಭಾಷ್ಯವು ಗಂಭೀರವಾದ ಆಳವಾದ ಸಮುದ್ರದಂತೆ ಇದೆ. ಈ ಭಾಷ್ಯದಿಂದ ಜ್ಞಾನಿಶ್ರೇಷ್ಠರು ನಿತ್ಯವೂ ರತ್ನದಂತಿರುವ ಶ್ರುತಿಲಿಂಗಾದಿಗಳನ್ನು ಉಪಕ್ರಮ ಉಪಸಂಹಾರಾದಿಗಳನ್ನೂ, ನಿರವಕಾಶತ್ವಾದಿಗಳನ್ನೂ ಸಂಗ್ರಹಿಸಿದರೂ ಅವುಗಳನ್ನು ಕೊನೆಗಾಣುವುದಿಲ್ಲ. ಇಂತಹ ತಮ್ಮ ಭಾಷ್ಯದ ಗಾಂಭೀರ್ಯವು ಆಶ್ಚರ್ಯಕರವಾದುದು.

ಕವೀನಾಂ ಇಂದ್ರಾಃ ತೈಃ, ನ್ಯಾಯಾ ಏವ ರತ್ನಾನಿ, ಭಾಷ್ಯಂ ಏವ ಅಬ್ಧಿಃ ತಸ್ಮಾತ್.

Rarest Archive

ಸಮ್ + ಆಪ್ಯತೇ ಆಪ್ಯೇತೇ ಆಪ್ಯಂತೇ, ಆಪ್ಲೃ ವ್ಯಾಪ್ತೌ ಕರ್ಮಣಿ ಲಟ್. ಕವೀಂದ್ರಾಃ ನ್ಯಾಯರತ್ನಾನಿ ಸಂಗೃಹ್ಯಾಪಿ ನ ಸಮಾಪ್ನುವಂತಿ.

ದಶೋಪನಿಷದ್ಭಾಷ್ಯಗಳನ್ನು ವರ್ಣಿಸುತ್ತಾರೆ—

ದಶೋಪನಿಷದೋ ದೇವೀರ್ದೇವಾ ಇವ ಸಮಾಪ್ಸಿತಾಃ ।
ಯುಕ್ತಾಃ ಪ್ರಸಾದಯಂತ್ಯರ್ಥಾ ಏಷು ಭಾಷ್ಯಾಲಯೇಷ್ವಲಂ ॥೭೪॥

ಏಷು ಭಾಷ್ಯಾಲಯೇಷು ಯುಕ್ತಾಃ ಸಮಾಪ್ಸಿತಾಃ ಅರ್ಥಾಃ ದಶೋ-ಪನಿಷದಃ ದೇವಾಃ ದೇವೀಃ ಇವ ಅಲಂ ಪ್ರಸಾದಯಂತಿ.

ಏಷು ಭಾಷ್ಯಾಲಯೇಷು = ಈ ಉಪನಿಷದ್ಭಾಷ್ಯಗಳೆಂಬ ಮನೆಗಳಲ್ಲಿ ಯುಕ್ತಾಃ = ಯೋಗ್ಯವಾದ, ಒಟ್ಟುಸೇರಿದ, ಸಮಾಪ್ಸಿತಾಃ ಅರ್ಥಾಃ = ಅಪೇಕ್ಷಿತವಾದ ಅರ್ಥಗಳು, ದಶೋಪನಿಷದಃ = ಹತ್ತು ಉಪನಿಷತ್ತುಗಳನ್ನೂ, ದೇವಾಃ ದೇವೀಃ ಇವ = ದೇವತೆಗಳು, ದೇವಪತ್ನಿಯರನ್ನೋ ಪಾದಿಯಲ್ಲಿ, ಅಲಂ ಪ್ರಸಾದಯಂತಿ = ಚೆನ್ನಾಗಿ ಪ್ರಸನ್ನಗೊಳಿಸುತ್ತವೆ. (ವಿವರಿಸುತ್ತವೆ.) (ಸಂತೋಷಪಡಿಸುತ್ತಾರೆ.)

ಆಚಾರ್ಯರೇ! ತಾವು ರಚಿಸಿರುವ ಉಪನಿಷದ್ಭಾಷ್ಯಗಳು ಮನೆಗಳಂತಿವೆ. ಅಲ್ಲಿ ಸೇರಿರುವ ಅರ್ಥಗಳು (ಪ್ರಮೇಯವಿಶೇಷಗಳು) ಪ್ರಿಯೆಯರ ಮನೋವಲ್ಲಭರಾದ ದೇವತೆಗಳು ತಮ್ಮ ಮನೆಗಳಲ್ಲಿರುವ ದೇವತಾಸ್ತ್ರೀಯರನ್ನು ಸಂತೋಷಗೊಳಿಸುವಂತೆ ದಶೋಪನಿಷತ್ತುಗಳನ್ನು ಚೆನ್ನಾಗಿ ಪ್ರಸನ್ನಗೊಳಿಸುತ್ತವೆ. ದೇವತೆಗಳು ತಮ್ಮ ಪ್ರಿಯೆಯರಾದ ದೇವಿಯರನ್ನು ಪ್ರಿಯವಚನೋಪಚಾರಗಳಿಂದ ಆನಂದಗೊಳಿಸುವಂತೆ ಪ್ರಿಯ ಭಾಷ್ಯಾರ್ಥಗಳು ಉಪನಿಷತ್ತುಗಳೆಂಬ ಪ್ರಿಯೆಯರನ್ನು ಪ್ರಸಾದಪೂರ್ಣರನ್ನಾಗಿ ಮಾಡುತ್ತವೆ. ತಮ್ಮ ಭಾಷ್ಯಗಳಿಂದ ಉಪನಿಷತ್ತುಗಳ ಅರ್ಥವು ಮನಸ್ಸಿಗೆ ಸುಗ್ರಾಹ್ಯವಾಗುತ್ತದೆ.

ಭಾಷ್ಯಾಣಿ ಏವ ಆಲಯಾಃ ತೇಷು.

ಪ್ರ + ಸಾದಯಂತಿ, ಷದ್ಲೃ ವಿಶರಣಗತ್ಯವಸಾದನೇಷು, ಣಿಜಂತ ಲಟ್. ಸಾದಯತಿ ಸಾದಯತಃ ಸಾದಯಂತಿ.

Rarest Archiver

ಗೀತಾಭಾಷ್ಯ-ಗೀತಾತಾತ್ಪರ್ಯಗಳು ಹೀಗಿವೆ—

ಗೀತಾತಾತ್ಪರ್ಯಭಾಷ್ಯಾಭ್ಯಾಮಾಭ್ಯಾಂ ವಿಶ್ವಂ ಪ್ರಕಾಶ್ಯತೇ ।
ಗೋಗಣೈರಪ್ರತೀಕಾರ್ಯೈರರ್ಕೇಂದುಭ್ಯಾಮಿವಾಧಿಕಂ ॥ ೭೫ ॥

ಆಭ್ಯಾಂ ಗೀತಾತಾತ್ಪರ್ಯಭಾಷ್ಯಾಭ್ಯಾಂ ಅಪ್ರತೀಕಾರ್ಯೈಃ ಗೋಗಣೈಃ ವಿಶ್ವಂ ಅರ್ಕೇಂದುಭ್ಯಾಂ ಇವ ಅಧಿಕಂ ಪ್ರಕಾಶ್ಯತೇ.

ಆಭ್ಯಾಂ ಗೀತಾತಾತ್ಪರ್ಯಭಾಷಾಭ್ಯಾಂ = ಈ ಗೀತಾತಾತ್ಪರ್ಯ ಮತ್ತು ಗೀತಾಭಾಷ್ಯಗಳಿಂದ, ಅಪ್ರತೀಕಾರ್ಯೈಃ ಗೋಗಣೈಃ = ತಡೆಯಿಲ್ಲದ ಮಾತುಗಳ ಸಮೂಹಗಳಿಂದ (ಕಿರಣಸಮೂಹಗಳಿಂದ), ವಿಶ್ವಂ = ಎಲ್ಲಾ ಪ್ರಮೇಯವು; (ಪ್ರಪಂಚವು) ಅರ್ಕೇಂದುಭ್ಯಾಂ ಇವ = ಸೂರ್ಯಚಂದ್ರ ಇವರಿಬ್ಬರಿಂದಲೆಂಬಂತೆ, ಅಧಿಕಂ ಪ್ರಕಾಶ್ಯತೇ-ಹೆಚ್ಚಾಗಿ ಸ್ಪಷ್ಟಮಾಡಲ್ಪಡುತ್ತದೆ. (ಪ್ರಕಾಶಗೊಳಿಸಲ್ಪಡುತ್ತದೆ.)

ಸೂರ್ಯಚಂದ್ರರು ಯಾವ ತಡೆಯೂ ಇಲ್ಲದೆ ತಮ್ಮ ಕಿರಣಗಳಿಂದ ಪ್ರಪಂಚವನ್ನು ಬೆಳಗುತ್ತಾರೆ. ಅದರಂತೆ ತಾವು ರಚಿಸಿದ ಗೀತಾತಾತ್ಪರ್ಯ ಮತ್ತು ಗೀತಾಭಾಷ್ಯಗಳೆಂಬ ಎರಡು ಗ್ರಂಥಗಳಿಂದ ಎಲ್ಲಾ ಪ್ರಮೇಯಗಳೂ ಪ್ರಕಾಶಿತವಾಗಿವೆ. ದ್ವೈತಸಿದ್ಧಾಂತದ ತತ್ತ್ವಗಳೆಲ್ಲವೂ ಈ ಎರಡುಗ್ರಂಥಗಳಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿವೆ.

ತಾತ್ಪರ್ಯಂ ಚ ಭಾಷ್ಯಂ ಚ ಗೀತಾಯಾಃ ತಾತ್ಪರ್ಯ ಭಾಷ್ಯೇ, ತಾಭ್ಯಾಂ, ಗವಾಂ ಗಣಾಃ ತೈಃ, ನ ವಿದ್ಯತೇ ಪ್ರತೀಕಾರಃ ಯೇಷಾಂ ತೇ ತೈಃ, ಅರ್ಕಶ್ಚ ಇಂದುಶ್ಚ ಅರ್ಕೇಂದೂ ತಾಭ್ಯಾಂ;

ಪ್ರ+ಕಾಶ್ಯತೇ ಕಾಶ್ಯೇತೇ ಕಾಶ್ಯಂತೇ ಕಾಶೃ ದೀಪ್ತೌ ಕರ್ಮಣಿ ಲಟ್. ಗೀತಾತಾತ್ಪರ್ಯಭಾಷ್ಯೇ ಅರ್ಕೇಂದೂ ಇವ ವಿಶ್ವಂ ಪ್ರಕಾಶಯತಃ.

ಮಹಾಭಾರತತಾತ್ಪರ್ಯನಿರ್ಣಯವನ್ನು ವರ್ಣಿಸುತ್ತಾರೆ—

ಇತಿಹಾಸಪುರಾಣಾಬ್ಧೇಃ ಭವಚ್ಚಿತ್ತಾದ್ರಿಲೋಡಿತಾತ್ ।
ಜಾತಾಂ ಭಾರತತಾತ್ಪರ್ಯಸುಧಾಂ ಕಃ ಸನ್ನ ಸೇವತೇ ॥ ೭೬ ॥

Rarest Archiver

ಭವಚ್ಚಿತ್ತಾದ್ರಿಲೋಡಿತಾತ್ ಇತಿಹಾಸಪುರಾಣಾಬ್ಧೇಃ ಜಾತಾಂ ಭಾರತತಾತ್ಪರ್ಯಸುಧಾಂ ಕಃ ಸನ್ ನ ಸೇವತೇ ?

ಭವಚ್ಚಿತ್ತಾದ್ರಿಲೋಡಿತಾತ್ = ತಮ್ಮ ಮನಸ್ಸೆಂಬ ಮಂದರಪರ್ವತದಿಂದ ಕಡೆಯಲ್ಪಟ್ಟ, ಇತಿಹಾಸಪುರಾಣಾಬ್ಧೇಃ = ಮಹಾಭಾರತ, ರಾಮಾಯಣವೆಂಬ ಇತಿಹಾಸ, ಭಾಗವತ ಮುಂತಾದ ಪುರಾಣಗಳೆಂಬ ಕ್ಷೀರಸಮುದ್ರದಿಂದ, ಜಾತಾಂ ಭಾರತತಾತ್ಪರ್ಯಸುಧಾಂ = ಉತ್ಪನ್ನವಾದ ಮಹಾಭಾರತತಾತ್ಪರ್ಯನಿರ್ಣಯವೆಂಬ ಅಮೃತವನ್ನು, ಕಃ ಸನ್ = ಯಾವ ಸಜ್ಜನನು, ನ ಸೇವತೇ = ಸೇವಿಸುವುದಿಲ್ಲ ?

ಆಚಾರ್ಯರೇ! ತಾವು ತನ್ನ ಮನಸ್ಸೆಂಬ ಮಂದರಪರ್ವತದಿಂದ ಮಹಾಭಾರತ, ಮೂಲರಾಮಾಯಣಗಳೆಂಬ ಇತಿಹಾಸಗ್ರಂಥಗಳು, ಭಾಗವತ ಮುಂತಾದ ಪುರಾಣಗ್ರಂಥಗಳು– ಇವುಗಳೆಂಬ ಕ್ಷೀರಸಮುದ್ರವನ್ನು ಮಥನಮಾಡಿದಿರಿ, ವಿಮರ್ಶಿಸಿದಿರಿ. ಮಹಾಭಾರತತಾತ್ಪರ್ಯನಿರ್ಣಯವೆಂಬ ಅಮೃತದಂತಿರುವ ಗ್ರಂಥವನ್ನು ರಚಿಸಿದಿರಿ. ಸಮಸ್ತ ಇತಿಹಾಸಪುರಾಣಗಳ ಸಾರವಾದ ಈ ಗ್ರಂಥವನ್ನು ಪ್ರತಿಯೊಬ್ಬ ಸಜ್ಜನನೂ ಶ್ರವಣ, ಪಾರಾಯಣ, ಅರ್ಥಾನುಸಂಧಾನಗಳಿಂದ ಅವಶ್ಯವಾಗಿ ಸೇವಿಸುತ್ತಾನೆ.

ಇತಿಹಾಸಶ್ಚ ಪುರಾಣಾನಿ ಚ, ಇತಿಹಾಸಪುರಾಣಾನ್ಯೇವ ಅಬ್ಧಿಃ ತಸ್ಮಾತ್, ಭವತಃ ಚಿತ್ತಂ, ಭವಚ್ಚಿತ್ತಮೇವ ಅದ್ರಿಃ, ಭವಚಿತ್ತಾದ್ರಿಣಾ ಲೋಡಿತಃ ತಸ್ಮಾತ್, ಭಾರತಸ್ಯ ತಾತ್ಪರ್ಯಂ ಭಾರತತಾತ್ಪರ್ಯಮೇವ ಸುಧಾ ತಾಂ;

ಸೇವತೇ ಸೇವೇತೇ ಸೇವಂತೇ ಷೇವೃ (ಸೇವ್) ಸೇವನೇ ಲಟ್.

ಭಾಗವತತಾತ್ಪರ್ಯನಿರ್ಣಯವನ್ನು ವರ್ಣಿಸುತ್ತಾರೆ —

ಪುರಾಣಸ್ಥಾನಪಾಂಥಾನಾಮಭಾಷಾತ್ರಯವೇದಿನಾಂ ।
ಭವತಾ ಸುಸಖಾ ಚಕ್ರೇ ಶ್ರೀಭಾಗವತನಿರ್ಣಯಃ ॥ ೭೭ ॥

Rarest Archiver

ಅಭಾಷಾತ್ರಯವೇದಿನಾಂ ಪುರಾಣಸ್ಥಾನಪಾಂಥಾನಾಂ ಸುಸಖಾ-
ಶ್ರೀಭಾಗವತನಿರ್ಣಯಃ ಭವತಾ ಚಕ್ರೇ.

ಅಭಾಷಾತ್ರಯವೇದಿನಾಂ = ಗುಹ್ಯ, ದರ್ಶನ, ಸಮಾಧಿ ಎಂಬ ಮೂರು ಭಾಷೆಗಳನ್ನು ಅರಿಯದ, ಪುರಾಣಸ್ಥಾನಪಾಂಥಾನಾಂ = ಪುರಾಣಗಳೆಂಬ ಗ್ರಾಮನಗರಾದಿಗಳೆಂಬ ಸ್ಥಾನಗಳಲ್ಲಿ ದಾರಿಗರಾದವರಿಗೆ, ಸುಸಖಾ = ಒಳ್ಳೆಯ ಸ್ನೇಹಿತನಂತಿರುವ, ಶ್ರೀಭಾಗವತನಿರ್ಣಯಃ = ಶ್ರೀಭಾಗವತತಾತ್ಪರ್ಯನಿರ್ಣಯವೆಂಬ ಗ್ರಂಥವು, ಭವತಾ ಚಕ್ರೇ = ನಿಮ್ಮಿಂದ ಮಾಡಲ್ಪಟ್ಟಿತು.

ಗುಹ್ಯ, ದರ್ಶನ, ಸಮಾಧಿ ಎಂಬ ಮೂರು ಭಾಷೆಗಳನ್ನು ಅರಿಯದ ಪುರಾಣಗಳೆಂಬ ಸ್ಥಾನಗಳಲ್ಲಿ ದಾರಿಗರಾದವರಿಗೆ (ಪೌರಾಣಿಕರಿಗೆ) ಗೆಳೆಯನಂತಿರುವ ಶ್ರೀಭಾಗವತತಾತ್ಪರ್ಯನಿರ್ಣಯವೆಂಬ ಗ್ರಂಥವನ್ನು ತಾವು ಮಾಡಿದಿರಿ. ಇತಿಹಾಸ ಪುರಾಣಾರ್ಥಗಳನ್ನು ವಿಚಾರಮಾಡುವವರಿಗೆ ಪುರಾಣಗಳ ಅನೇಕ ಪ್ರಕರಣಾರ್ಥಗಳ ವಿಮರ್ಶಕರಿಗೆ ತಾವು ರಚಿಸಿರುವ ಈ ಗ್ರಂಥವು ದಾರಿನಡೆಯುವವರಿಗೆ ಸ್ನೇಹಿತನು ಸಿಕ್ಕಿದಂತೆ ಬಹಳ ಅನುಕೂಲವಾಯಿತು. ಈ ಗ್ರಂಥವು ಆಯಾದೇಶಭಾಷೆಗಳನ್ನು ತಿಳಿಯದ ಪಥಿಕನಿಗೆ ಎಲ್ಲಾ ಭಾಷೆಗಳನ್ನು ತಿಳಿದ ಸ್ನೇಹಿತನಂತಾಯಿತು.

ಪುರಾಣಾನಾಂ ಸ್ಥಾನಾನಿ ಪುರಾಣಸ್ಥಾನೇಷು ಪಾಂಥಾಃ ತೇಷಾಂ, ಭಾಷಾಣಾಂ ತ್ರಯಂ, ಭಾಷಾತ್ರಯಂ ವಿದಂತೀತಿ ಭಾಷಾತ್ರಯವೇದಿನಃ, ತೇ ನ ಭವಂತೀತಿ ಅಭಾಷಾತ್ರಯವೇದಿನಃ ತೇಷಾಂ, ಶೋಭನಶ್ಚಾಸೌ ಸಖಾ ಚ ಸುಸಖಾ, ನ ಪೂಜನಾತ್ (5-4-69) ಎಂದು ಸಮಾಸಾಂತ-ಟಚ್‌ಪ್ರತ್ಯಯನಿಷೇಧ. ಶ್ರೀಭಾಗವತಸ್ಯ ನಿರ್ಣಯಃ ಯಸ್ಮಿನ್ ಸಃ.

ಚಕ್ರೇ ಚಕ್ರಾತೇ ಚಕ್ರಿರೇ ಡುಕೃಞ್ ಕರಣೇ ಕರ್ಮಣಿ ಲಿಟ್. ಭವಾನ್ ಶ್ರೀಭಾಗವತನಿರ್ಣಯಂ ಸುಸಖಾಯಂ ಚಕಾರ.

ತಂತ್ರಸಾರಗ್ರಂಥದ ಮಹಿಮೆ ಹೀಗಿದೆ—

ಕಸ್ತಂತ್ರಸಾರಂ ಸಂಪ್ರಾಪ್ಯ ನ ಸ್ಯಾತ್ ಪರ್ಯಾಪ್ತವಾಂಛಿತಃ ।
ಅಮರ್ತ್ಯೈರಾಶ್ರಿತಚ್ಛಾಯಂ ಕಲ್ಪದ್ರುಮಮಿವೋತ್ತಮಂ ॥ ೭೮ ॥

Rarest Archiver

ಉತ್ತಮಂ ಅಮರ್ತ್ಯೈಃ ಆಶ್ರಿತಚ್ಛಾಯಂ ಕಲ್ಪದ್ರುಮಂ ಇವ ತಂತ್ರ–ಸಾರಂ ಸಂಪ್ರಾಪ್ಯ ಕಃ ಪರ್ಯಾಪ್ತವಾಂಛಿತಃ ನ ಸ್ಯಾತ್ ?

ಉತ್ತಮಂ = ಶ್ರೇಷ್ಠವಾದ, ಅಮರ್ತ್ಯೈಃ = ದೇವತೆಗಳಿಂದ, ಆಶ್ರಿತ–ಚ್ಛಾಯಂ = ಆಶ್ರಯಿಸಲ್ಪಟ್ಟನೆರಳುಳ್ಳ, ಅಂಗೀಕರಿಸಲ್ಪಟ್ಟ ವರ್ಣಗಳ ಸಾಲುಳ್ಳ ಅಥವಾ ಸಿದ್ಧಾಂತವುಳ್ಳ, ಕಲ್ಪದ್ರುಮಂ ಇವ = ಕಲ್ಪವೃಕ್ಷದಂತಿರುವ, ತಂತ್ರಸಾರಂ = ತಂತ್ರಗ್ರಂಥಗಳಲ್ಲಿ ಶ್ರೇಷ್ಠವಾದ ತಂತ್ರಸಾರವೆಂಬ ಗ್ರಂಥವನ್ನು, ಸಂಪ್ರಾಪ್ಯ = ಹೊಂದಿ, ಕಃ = ಯಾವನು, ಪರ್ಯಾಪ್ತವಾಂಛಿತಃ ನ ಸ್ಯಾತ್ = ಪೂರ್ಣವಾದ ಅಭಿಲಾಷೆಗಳುಳ್ಳವನು ಆಗಲಾರನು ?

ದೇವತೆಗಳು ಉತ್ತಮವಾದ ಕಲ್ಪವೃಕ್ಷದ ಛಾಯೆಯನ್ನು ಆಶ್ರಯಿಸಿ ತಮ್ಮ ಇಷ್ಟಾರ್ಥವನ್ನು ಪೂರೈಸಿಕೊಳ್ಳುತ್ತಾರೆ. ಅದರಂತೆ ದೇವತಾ ಸನ್ನಿಧಾನವುಳ್ಳ ಛಾಯೆಎಂಬ ಹೆಸರಿನ ಪಂಕ್ತಿಗಳುಳ್ಳ ಮತ್ತು ದೇವತೆಗಳಿಗೂ ಮಾನ್ಯವಾದ ಸಿದ್ಧಾಂತವುಳ್ಳ ತಂತ್ರಸಾರ ಎಂಬ ತಮ್ಮ ಗ್ರಂಥವನ್ನು ಪಡೆದ ಯಾವನು ತಾನೇ ತನ್ನ ಎಲ್ಲಾ ಇಷ್ಟಾರ್ಥಗಳನ್ನೂ ನೆರವೇರಿಸಿಕೊಳ್ಳಲಾರನು ? ಕಲ್ಪವೃಕ್ಷದಂತಿರುವ ತಂತ್ರಸಾರವು ಎಲ್ಲಾ ಇಷ್ಟಾರ್ಥಗಳನ್ನೂ ಕೈಗೂಡಿಸುತ್ತದೆ ಎಂದು ತಂತ್ರಸಾರಗ್ರಂಥವನ್ನು ಹೊಗಳಿದ್ದಾರೆ.

ತಂತ್ರೇಷು ಸಾರಃ ತಂ, ಪರ್ಯಾಪ್ತಾನಿ ವಾಂಛಿತಾನಿ ಯಸ್ಯ ಸಃ, ಆಶ್ರಿತಾ ಛಾಯಾ ಯಸ್ಯ ಸಃ, ಛಾಯಾ = ನೆರಳು, ಪಂಕ್ತಿ, ಸಿದ್ಧಾಂತ.

ಕಥಾಲಕ್ಷಣ ಮತ್ತು ಪ್ರಮಾಣಲಕ್ಷಣಗಳೆಂಬ ಎರಡು ಪ್ರಕರಣಗ್ರಂಥಗಳು ಹೀಗಿವೆ—

ಲೋಕಾನಾಮವಲೋಕಾಯ ಮಾರ್ಗಸ್ಯಾಸ್ಯ ವ್ಯಧಾದ್ ಭವಾನ್ ।
ಕರುಣಾಕರ ! ನೇತ್ರಾಭೇ ವಾದಸನ್ಮಾನಲಕ್ಷಣೇ ॥ ೭೯ ॥

ಕರುಣಾಕರ ! ಭವಾನ್ ಲೋಕಾನಾಂ ಅಸ್ಯ ಮಾರ್ಗಸ್ಯ ಅವ–ಲೋಕಾಯ ನೇತ್ರಾಭೇ ವಾದಸನ್ಮಾನಲಕ್ಷಣೇ ವ್ಯಧಾತ್.

Rarest Archive

ಕರುಣಾಕರ = ದಯಾಳುಗಳಾದ ಆಚಾರ್ಯರೇ ! ಭವಾನ್ = ತಾವು, ಲೋಕಾನಾಂ = ಸಜ್ಜನರಿಗೆ, ಅಸ್ಯ ಮಾರ್ಗಸ್ಯ = ಈ ವಾದ ಜಲ್ಪ ವಿತಂಡಾ ಎಂಬ ಮೂರುಕಥಾಮಾರ್ಗಗಳ, ಪ್ರತ್ಯಕ್ಷಅನುಮಾನಆಗಮ ಎಂಬ ಮೂರು ಪ್ರಮಾಣಮಾರ್ಗಗಳ, ಲೋಕದ ಈ ದಾರಿಯ, ಅವ-ಲೋಕಾಯ = ನೋಡುವುದಕ್ಕಾಗಿ, ನೇತ್ರಾಭೇ = ಎರಡುಕಣ್ಣುಗಳಂತಿರುವ, ವಾದಸನ್ಮಾನಲಕ್ಷಣೇ = ವಾದ ಮತ್ತು ಸತ್ಪ್ರಮಾಣಗಳ ಲಕ್ಷಣಗಳುಳ್ಳ ಕಥಾಲಕ್ಷಣ ಮತ್ತು ಪ್ರಮಾಣಲಕ್ಷಣಗಳೆಂಬ ಗ್ರಂಥಗಳನ್ನು, ವ್ಯಧಾತ್ = ರಚಿಸಿದ್ದೀರಿ.

ದಯಾರತ್ನಾಕರರಾದ ಶ್ರೀಮಧ್ವಗುರುರಾಜರೇ ! ಜನರಿಗೆ ಲೋಕದಲ್ಲಿ ದಾರಿಯನ್ನು ನೋಡಲು ಎರಡು ಕಣ್ಣುಗಳು ಬೇಕು. ಅದರಂತೆ ತಾವು ತತ್ವಮಾರ್ಗವನ್ನು ನೋಡಲು ಎರಡು ಕಣ್ಣುಗಳಂತಿರುವ ಕಥಾಲಕ್ಷಣ ಮತ್ತು ಪ್ರಮಾಣಲಕ್ಷಣ ಎಂಬ ಎರಡು ಗ್ರಂಥಗಳನ್ನು ರಚಿಸಿದ್ದೀರಿ, ಇವುಗಳಲ್ಲಿ ಕಥಾಲಕ್ಷಣವು ವಾದ, ಜಲ್ಪ, ವಿತಂಡಾ ಎಂಬ ಮೂರು ಕಥಾ (ವಿಚಾರಕ್ರಮ) ಮಾರ್ಗಗಳನ್ನೂ, ಪ್ರಮಾಣಲಕ್ಷಣವು ಪ್ರತ್ಯಕ್ಷ ಅನುಮಾನ ಆಗಮ ಎಂಬ ಮೂರು ಪ್ರಮಾಣಮಾರ್ಗಗಳನ್ನೂ ಸರಿಯಾಗಿ ತಿಳಿದುಕೊಳ್ಳಲು ಎರಡು ಕಣ್ಣುಗಳಂತಿವೆ.

ಕರುಣಾಯಾಃ ಆಕರಃ ತಸ್ಯ ಸಂಬುದ್ಧಿಃ, ನೇತ್ರಯೋಃ ಆಭಾ ಇವ ಆಭಾ ಯಯೋಸ್ತೇ.

ತತ್ವನಿರ್ಣಯಗ್ರಂಥವು ಶತ್ರುಗಳನ್ನು ಅಪಾರ್ಥರನ್ನಾಗಿ ಮಾಡಿದ ಪಾರ್ಥನಂತಿದೆ—

ಏಕಾಕೀ ಕಿಲ ಯಶ್ಚಕ್ರೇ ಪದಂ ಮೌಲಿಷು ವಿದ್ವಿಷಾಂ |
ತತ್ತ್ವನಿರ್ಣಯಪಾರ್ಥೋಽಯಂ ಕೇನ ನಾಮ ನ ಪೂಜ್ಯತೇ || ೬೦ ||

ಯಃ ಏಕಾಕೀ ವಿದ್ವಿಷಾಂ ಮೌಲಿಷು ಪದಂ ಚಕ್ರೇ ಕಿಲ ಅಯಂ ತತ್ವನಿರ್ಣಯಪಾರ್ಥಃ ಕೇನ ನಾಮ ನ ಪೂಜ್ಯತೇ ?

ಯಃ = ಯಾವನು, ಏಕಾಕೀ = ಒಬ್ಬಂಟಿಗನಾಗಿ, ವಿದ್ವಿಷಾಂ ಮೌಲಿಷು = ಶತ್ರುಗಳ ತಲೆಗಳ ಮೇಲೆ, ಪದಂ ಚಕ್ರೇ ಕಿಲ = ಕಾಲನ್ನು

Rarest Archiver

ಇಟ್ಟನೆಂದು ಸಮಾಚಾರವಿದೆಯೋ (ಅವಕಾಶವನ್ನು ಮಾಡಿಕೊಂಡನೋ) ಅಯಂ ತತ್ವನಿರ್ಣಯಪಾರ್ಥಃ = ಈ ವಿಷ್ಣುತತ್ತ್ವವಿನಿರ್ಣಯವೆಂಬ ಕುಂತೀಪುತ್ರನು, ಕೇನ ನಾಮ = ಯಾರಿಂದ ತಾನೇ, ನ ಪೂಜ್ಯತೇ = ಪೂಜಿಸಲ್ಪಡುವುದಿಲ್ಲ ?

ಕುಂತೀಪುತ್ರನಾದ ಅರ್ಜುನನು ಯಾರ ಸಹಾಯವೂ ಇಲ್ಲದೆ ಒಬ್ಬಂಟಿಗನಾಗಿ, ಅಜ್ಞಾತವಾಸದಲ್ಲಿರುವಾಗ ಉತ್ತರಗೋಗ್ರಹಣಕಾಲದಲ್ಲಿ ಶತ್ರುಗಳ ತಲೆಯನ್ನು ಮೆಟ್ಟಿದನು, ಅವರನ್ನು ಸೋಲಿಸಿದನು. ಹಾಗೆಯೇ ನಿವಾತಕವಚರು ಕಾಲಕೇಯರು ಎಂಬ ದಾನವರನ್ನೂ ತಾನೊಬ್ಬನೇ ಸೋಲಿಸಿದನು. ಹೀಗೆ ಮಹಾಪರಾಕ್ರಮಿಯೆಂದು ಪ್ರಸಿದ್ಧನಾದನು ; ಹಾಗೆಯೇ ತಾವು ರಚಿಸಿದ ವಿಷ್ಣುತತ್ತ್ವವಿನಿರ್ಣಯವೆಂಬ ಗ್ರಂಥವು ಇತರ ಗ್ರಂಥಗಳ ಸಹಾಯವಿಲ್ಲದೆ ಶ್ರೀಹರಿಯ ಸರ್ವೋತ್ತಮತ್ವವನ್ನು ತಿಳಿಸುತ್ತದೆ. ಪ್ರಪಂಚದ ಸತ್ಯತ್ವ ಮೊದಲಾದ ಪ್ರಮೇಯಗಳನ್ನು ತಿಳಿಸಿ, ಪರವಾದಿಗಳ ಸಿದ್ಧಾಂತವನ್ನು ಅಸಾಧಾರಣವಾದ ರೀತಿಯಿಂದ ಖಂಡಿಸುತ್ತದೆ. ಇಂತಹ ಪ್ರಕರಣರಾಜವೆಂದು ಪ್ರಶಂಸೆಗೆ ಪಾತ್ರವಾದ ವಿಷ್ಣುತತ್ವನಿರ್ಣಯವು ಯಾರ ಗೌರವಕ್ಕೆ ತಾನೇ ಪಾತ್ರವಾಗುವುದಿಲ್ಲ ?

ಅಸಹಾಯಃ ಏಕಃ ಏಕಾಕೀ, ಏಕಾದಾಕಿನಿಚ್ಚ ಅಸಹಾಯೇ (5–3–52) ಎಂಬ ಸೂತ್ರದಿಂದ 'ಆಕಿನಿಚ್' ಪ್ರತ್ಯಯ. ತತ್ತ್ವನಿರ್ಣಯ ಏವ ಪಾರ್ಥಃ.

ಪೂಜ್ಯತೇ ಪೂಜ್ಯೇತೇ ಪೂಜ್ಯಂತೇ ಇತ್ಯಾದಿ. ಪೂಜ ಪೂಜಾಯಾಂ ಕರ್ಮಣಿ ಲಟ್. ಕಃ ಇಮಂ ತತ್ವನಿರ್ಣಯಪಾರ್ಥಂ ನ ಪೂಜಯತಿ ? ಕರ್ತರಿ.

ತತ್ತ್ವೋದ್ಯೋತಮುಂತಾದ ಪ್ರಕರಣಗಳು ಪರಸಿದ್ಧಾಂತವೆಂಬ ಕಾಡಿಗೆ ಕಾಡ್ಗಿಚ್ಚಿನ ಕಿಡಿಗಳಂತಿವೆ—

ವಾದಾದಯಃ ಪ್ರಕರಣಸ್ಫುಲಿಂಗಾಸ್ತ್ವನವೋऽಸ್ಯಲಂ ।
ವಿಪಕ್ಷಕಕ್ಷಂ ಕ್ಷಿಣ್ವಂತಿ ಮಾರುತೇನ ತ್ವಯೇರಿತಾಃ ॥ ೮೧ ॥

Rarest Archiver

ಮಾರುತೇನ ತ್ವಯಾ ಈರಿತಾಃ ವಾದಾಯಃ ಪ್ರಕರಣಸ್ಫುಲಿಂಗಾಃ ಅಲಂ ತನವಃ ಅಪಿ ವಿಪಕ್ಷಕಕ್ಷಂ ಅಲಂ ಕ್ಷಿಣ್ವಂತಿ.

ಮಾರುತೇನ ತ್ವಯಾ = ಮುಖ್ಯಪ್ರಾಣರೇ ಆದ, (ವಾಯುವೇ ಆದ) ನಿಮ್ಮಿಂದ, ಈರಿತಾಃ=ಹೇಳಲ್ಪಟ್ಟ, ಪ್ರೇರಿಸಲ್ಪಟ್ಟ, ವಾದಾದಯಃ ಪ್ರಕರಣ-ಸ್ಫುಲಿಂಗಾಃ=ತತ್ತ್ವೋದ್ಯೋತ ಮೊದಲಾದ ಪ್ರಕರಣಗಳೆಂಬ ಬೆಂಕಿಕಿಡಿಗಳು, ಅಲಂತನವಃ ಅಪಿ=ಬಹಳ ಚಿಕ್ಕವುಗಳಾದರೂ, ವಿಪಕ್ಷಕಕ್ಷಂ = ಪರಸಿದ್ಧಾಂತ ವೆಂಬ ಒಣಕಾಡನ್ನು, ಅಲಂ ಕ್ಷಿಣ್ವಂತಿ= ಅತಿಶಯವಾಗಿ ಖಂಡಿಸುವುವು.

ಕಾಡ್ಗಿಚ್ಚಿನ ಕಿಡಿಗಳು ಚಿಕ್ಕವುಗಳಾದರೂ ಒಣಗಿದ ಅಕ್ಕಪಕ್ಕದ ಕಾಡುಗಳ ಮೇಲೆ ಗಾಳಿಯಿಂದ ಹಾರಿ ಬಿದ್ದು, ಗಾಳಿಯಿಂದ ಪ್ರಜ್ವಲಿತ ವಾಗಿ ಕಾಡುಗಳನ್ನೆಲ್ಲಾ ಸುಟ್ಟುಬಿಡುತ್ತವೆ; ಹಾಗೆಯೇ ವಾಯುದೇವರ ಅವತಾರರಾದ ನಿಮ್ಮಿಂದ ರಚಿಸಲ್ಪಷ್ಟ ಗಾತ್ರದಲ್ಲಿ ತುಂಬಾ ಚಿಕ್ಕವುಗಳಾಗಿ ಕಾಣಿಸುತ್ತಿರುವ ತತ್ತ್ವೋದ್ಯೋತ ಮುಂತಾದ ಪ್ರಕರಣಗಳು ವಿರುದ್ಧ ಸಿದ್ಧಾಂತಗಳನ್ನು ಅತಿಶಯವಾಗಿ ಖಂಡಿಸುತ್ತವೆ.

ವಾದಃ ಆದಿಃ ಯೇಷಾಂ ತೇ ವಾದಾದಯಃ, ಪ್ರಕರಣಾನ್ಯೇವ ಸ್ಫುಲಿಂಗಾಃ, ವಿಪಕ್ಷಃ ಏವ ಕಕ್ಷಃ.

ಕ್ಷಿಣೋತಿ ಕ್ಷಿಣುತಃ ಕ್ಷಿಣ್ವಂತಿ, ಕ್ಷಿಣೋಷಿ ಕ್ಷಿಣುಥಃ ಕ್ಷಿಣುಥ, ಕ್ಷಿಣೋಮಿ ಕ್ಷಿಣುವಃ ಕ್ಷಿಣ್ವಃ ಕ್ಷಿಣುಮಃ ಕ್ಷಿಣ್ಮಃ. ಕ್ಷಿಣು ಹಿಂಸಾಯಾಂ ಸಕ. ಸೇಟ್. (ಉಭ)-ಪರ.

ಅಣುಭಾಷ್ಯವು ಹೀಗಿದೆ—

ಅನಂತೋऽರ್ಥಃ ಪ್ರಕಟಿತಸ್ತ್ವಯಾಣೌ ಭಾಷ್ಯಸಂಗ್ರಹೇ |
ಅಹೋ ಆತ್ಮಪರಿಜ್ಞಪ್ತ್ಯೈ ಕೃಷ್ಣೇನೇವಾನನಾಂತರೇ || ೮೨ ||

ತ್ವಯಾ ಆತ್ಮಪರಿಜ್ಞಪ್ತ್ಯೈ ಅಣೌ ಭಾಷ್ಯಸಂಗ್ರಹೇ ಅನಂತಃ ಅರ್ಥಃ ಕೃಷ್ಣೇನ ಆನನಾಂತರೇ ಇವ ಪ್ರಕಟಿತಃ.

ತ್ವಯಾ = ನಿಮ್ಮಿಂದ, ಆತ್ಮಪರಿಜ್ಞಪ್ತ್ಯೈ = ತಮ್ಮ ಸ್ವರೂಪದ ತಿಳುವಳಿಕೆಗೋಸ್ಕರ (ಪರಮಾತ್ಮನ ಸ್ವರೂಪವನ್ನು ಸರಿಯಾಗಿ ತಿಳಿಸುವು

Rarest Archiver

ದಕ್ಕಾಗಿ) ಅಣೌ ಭಾಷ್ಯಸಂಗ್ರಹೇ = ಸಂಕ್ಷಿಪ್ತವಾದ, ಬ್ರಹ್ಮಸೂತ್ರಗಳ ಸಂಕ್ಷಿಪ್ತಭಾಷ್ಯರೂಪವಾದ ಅಣುವೇದಾಂತಭಾಷ್ಯದಲ್ಲಿ, ಅನಂತಃ = ಮಿತಿಯಿಲ್ಲದ, ಅರ್ಥಃ = ವಿಷಯುವು (ಪ್ರಮೇಯವು), ಕೃಷ್ಣೇನ = ಬಾಲ ಶ್ರೀಕೃಷ್ಣನಿಂದ, (ಆತ್ಮಪರಿಜ್ಞಪ್ತ್ಯೈ = ತಾಯಿಗೆ ತನ್ನ ಸ್ವರೂಪವನ್ನು ತಿಳಿಸುವುದಕ್ಕೋಸ್ಕರ, ಅನಂತಃ ಅರ್ಥಃ = ಮಿತಿಯಿಲ್ಲದ ಬ್ರಹ್ಮಾಂಡವೆಂಬ ವಸ್ತುವು, ಅಣೌ = ಚಿಕ್ಕದಾದ, ಆನನಾಂತರೇ ಇವ = ತನ್ನ ಬಾಯಿಯ ಒಳಗೆ ಎಂಬಂತೆ, ಪ್ರಕಟಿತಃ = ಸ್ಪಷ್ಟಗೊಳಿಸಲ್ಪಟ್ಟಿದೆ! ಅಹೋ = ಆಶ್ಚರ್ಯ.

ಪೂರ್ವದಲ್ಲಿ ಬಾಲರೂಪಿಯಾದ ಶ್ರೀಕೃಷ್ಣನು ತಾನು ಯಾರೆಂದು ತಾಯಿಯಾದ ಯಶೋದೆಗೆ ತಿಳಿಸಬೇಕೆಂದು ಬಯಸಿದನು. ಒಂದು ಬಾರಿ ಶ್ರೀಕೃಷ್ಣನು ಮಣ್ಣನ್ನು ತಿಂದನೆಂದು ಬಲರಾಮನು ತಾಯಿಗೆ ತಿಳಿಸಿದಾಗ ಯಶೋದೆಯು ಕೋಲನ್ನು ಹಿಡಿದು ಗದರಿಸುತ್ತಾ 'ನೀನೇಕೆ ಮಣ್ಣನ್ನು ತಿಂದೆ? ಬಾಯಿತೆರೆ' ಎಂದು ಗದರಿಸಿದಾಗ ಶ್ರೀಕೃಷ್ಣನು ತನ್ನ ಪುಟ್ಟ ಬಾಯನ್ನು ತೆರೆದು ಅದರೊಳಗೆ ಅನಂತವಾದ ಬ್ರಹ್ಮಾಂಡವೆಂಬ ವಸ್ತುವನ್ನೇ ತೋರಿಸಿ ಯಶೋದೆಯನ್ನು ಆಶ್ಚರ್ಯಚಕಿತಳನ್ನಾಗಿ ಮಾಡಿದನು. ಆಚಾರ್ಯರೇ! ಅದರಂತೆ ತಾವು ನಿಮ್ಮ ಸ್ವರೂಪವನ್ನು ಸ್ವಲ್ಪಮಟ್ಟಿಗಾದರೂ ತಿಳಿಸುವುದಕ್ಕಾಗಿ ಚಿಕ್ಕದಾದ ಅಣುಭಾಷ್ಯ ಗ್ರಂಥದಲ್ಲಿ ಸಮಸ್ತ ವೇದಾಂತಸೂತ್ರಗಳ ಸಾರವನ್ನು ಸಂಕ್ಷೇಪವಾಗಿ ಹೇಳಿದ್ದರೂ ಅದರಲ್ಲಿ ಅಮಿತವಾದ ಅನಂತ ಅರ್ಥವನ್ನು ಸೂತ್ರಗಳಲ್ಲಿ ಹೇಗೋ ಹಾಗೆ ಸೂಚ್ಯವಾಗಿ ಇಟ್ಟಿದ್ದೀರಿ. ವಿಚಾರಮಾಡುವಾಗ ಆ ಅರ್ಥಗಳೆಲ್ಲವೂ ಪ್ರಕಟವಾಗುವಂತೆ ಮಾಡಿದ್ದೀರಿ. ಚಿಕ್ಕಗ್ರಂಥವು ಬಹಳವಾದ ಅರ್ಥವನ್ನು ಕೊಡುವಂತೆ ರಚಿಸಿರುವ ತಮ್ಮ ಸಾಮರ್ಥ್ಯವು ಅತ್ಯಾಶ್ಚರ್ಯಕರವಾಗಿದೆ.

ನ ವಿದ್ಯತೇ ಅಂತಃ ಯಸ್ಯ ಸಃ, ಭಾಷ್ಯಂ ಚಾಸೌ ಸಂಗ್ರಹಶ್ಚ, ಆತ್ಮನಃ ಪರಿಜ್ಞಪ್ತಿಃ ತಸ್ಯೈ, ಆನನಸ್ಯ ಅಂತರಂ ತಸ್ಮಿನ್;

ಯಮಕಭಾರತದ ವರ್ಣನ —

ಭಗವಂಶ್ಚಿತ್ರಕವಿತಾಂ ಲೌಕಿಕೀಂ ದರ್ಶಯನ್ ಕಿಲ।
ಗೋಪ್ಯಂ ಭಾರತಸಂಕ್ಷೇಪಮಕೃಥಾ ವಿಶ್ವವಿಸ್ಮಯಂ ॥ ೬೩ ॥

Rarest Archiver

ಭಗವನ್ ! ಲೌಕಿಕೀಂ ಚಿತ್ರಕವಿತಾಂ ದರ್ಶಯನ್ (ತ್ವಂ) ಗೋಪ್ಯಂ ವಿಶ್ವವಿಸ್ಮಯಂ ಭಾರತಸಂಕ್ಷೇಪಂ ಅಕೃಥಾಃ ಕಿಲ.

ಭಗವನ್ ! =ಪೂಜ್ಯರಾದ ಆಚಾರ್ಯರೇ! ಲೌಕಿಕೀಂ=ಲೋಕದಲ್ಲಿ ಹೆಚ್ಚು ಪ್ರಸಿದ್ಧವಾದ, ಚಿತ್ರಕವಿತಾಂ=ಆಶ್ಚರ್ಯಕರವಾದ ಶಬ್ದಾಲಂಕಾರದ ಕಾವ್ಯವನ್ನು, ದರ್ಶಯನ್ (ತ್ವಂ)=ಗ್ರಂಥರೂಪದಲ್ಲಿ ತೋರಿಸುತ್ತಿರುವ ನೀವು, ಗೋಪ್ಯಂ=ಸಾಮಾನ್ಯರಿಗೆ ರಹಸ್ಯವಾಗಿರುವ, ವಿಶ್ವವಿಸ್ಮಯಂ=ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡುವ, ಭಾರತಸಂಕ್ಷೇಪಂ ಸಂಕ್ಷೇಪದಿಂದ ಭಾರತಕಥಾಪ್ರತಿಪಾದಕವಾದ ಯಮಕಭಾರತ ಎಂಬ ಗ್ರಂಥವನ್ನು, ಅಕೃಥಾಃಕಿಲ=ಮಾಡಿರುವಿರಷ್ಟೆ!

ಪರಮಪೂಜ್ಯರಾದ ಆಚಾರ್ಯರೇ! ಲೋಕದಲ್ಲಿ ರಚಿಸಲು ಕಷ್ಟಕರವಾದುದೆಂದೂ ಆದರೆ ಎಲ್ಲರಿಗೂ ಆನಂದಕರವಾದುದೆಂದೂ ಪ್ರಸಿದ್ಧಿಯಲ್ಲಿರುವ ಯಮಕವೆಂಬ ಶಬ್ದಾಲಂಕಾರಕಾವ್ಯವನ್ನು ತಾವು ರಚಿಸಿ ತಮ್ಮ ಲೌಕಿಕ ಕಾವ್ಯನಿರ್ಮಾಣಸಾಮರ್ಥ್ಯವನ್ನು ಸ್ವಲ್ಪ ತೋರಿಸಿದಿರಿ. ಆ ಕಾವ್ಯದಲ್ಲಿ ರಹಸ್ಯವಾದ ಭಾರತದ ಪ್ರಮೇಯಗಳನ್ನು ಅಡಗಿಸಿಟ್ಟು ಪ್ರಪಂಚಕ್ಕೆ ಆಶ್ಚರ್ಯಕರವಾದ ಭಾರತಕಥೆಯನ್ನು ಸಂಗ್ರಹಿಸಿ ಯಮಕಭಾರತವೆಂಬ ಗ್ರಂಥವನ್ನು ರಚಿಸಿದಿರಿ.

ಚಿತ್ರಾ ಚ ಸಾ ಕವಿತಾ ಚ ತಾಂ, ಗೋಪ್ತುಂ ಯೋಗ್ಯಃ ಗೋಪ್ಯಃ ತಂ, ಭಾರತಸ್ಯ ಸಂಕ್ಷೇಪಃ ಯಸ್ಮಿನ್ ಸಃ ತಂ, ವಿಶ್ವಸ್ಯ ವಿಸ್ಮಯಃ ಯಸ್ಮಾತ್ ಸಃ ತಂ.

ಅಕೃಥಾಃ ಅಕೃಷಾಥಾಂ ಅಕೃಢ್ವಂ 'ಕೃ' ಧಾತು. ಆತ್ಮ. ಲುಙ್.

ಸದಾಚಾರಸ್ಮೃತಿ, ಜಯಂತೀನಿರ್ಣಯ, ಮುಂತಾದಗ್ರಂಥಗಳು ರತ್ನಗಳಂತಿವೆ —

ನಾನಾ ಸುಭಾಷಿತಸ್ತೋತ್ರಗಾಥಾದಿಕೃತಿಸತ್ಕೃತೀಃ।
ತ್ವಯಿ ರತ್ನಾಕರೇ ರತ್ನಶ್ರೇಣೀರ್ವಾ ಗಣಯಂತಿ ಕೇ ॥ ೬೪ ॥

ರತ್ನಾಕರೇ ತ್ವಯಿ ರತ್ನಶ್ರೇಣೀಃ ವಾ ನಾನಾಸುಭಾಷಿತಸೋತ್ರ-ಗಾಥಾದಿಕೃತಿಸತ್ಕೃತೀಃ ಕೇ ಗಣಯಂತಿ ?

Rarest Archives

ರತ್ನಾಕರೇ ತ್ವಯಿ = ರತ್ನಗಳಿಗೆ ಆಶ್ರಯವಾದ ಸಮುದ್ರದಂತಿರುವ ನಿಮ್ಮಲ್ಲಿ, ರತ್ನಶ್ರೇಣೀಃ ಇವ = ರತ್ನಗಳ ಸಮೂಹಗಳಂತಿರುವ, ನಾನಾ ಸುಭಾಷಿತ = ಅನೇಕವಿಧವಾದ ಸುಭಾಷಿತಗಳು, ಸ್ತೋತ್ರ = ಸ್ತುತಿಗಳು, ಗಾಥಾದಿ = ಪದ್ಯಗಳು ಮೊದಲಾದ, ಕೃತಿಸತ್ಕೃತೀಃ = ರಚನಾರೂಪವಾದ ಸದ್ಗ್ರಂಥಗಳನ್ನು, ಕೇ ಗಣಯಂತಿ ? = ಯಾರು ಲೆಕ್ಕಮಾಡುತ್ತಾರೆ ?

ರತ್ನಗಳಿಗೆ ಗಣಿಯಾಗಿರುವ ಸಮುದ್ರದಲ್ಲಿರುವ ರತ್ನಗಳನ್ನು ಯಾರು ಲೆಕ್ಕಮಾಡಿಯಾರು ? ಅದರಂತೆಯೇ ತಾವು ರಚಿಸಿದ ಅನೇಕಸುಭಾಷಿತ ಗಳು ಸ್ತೋತ್ರಗಳು ಪದ್ಯಗಳು ಮೊದಲಾದ, ಸದಾಚಾರಸ್ಮೃತಿ, ಜಯಂತೀ ಕಲ್ಪ, ನಖಸ್ತುತಿ, ಕೃಷ್ಣಾಮೃತಮಹಾರ್ಣವ ಮೊದಲಾದ, ಅನೇಕ ಗ್ರಂಥ ಗಳನ್ನು ಯಾರಿಗೆ ಲೆಕ್ಕಮಾಡಲು ಸಾಧ್ಯ ? ರತ್ನಾಕರಸಮುದ್ರದಲ್ಲಿ ಅನೇಕರತ್ನಗಳು ಉದ್ಭವಿಸುವಂತೆ ತಮ್ಮಿಂದ ಅನೇಕ ಗ್ರಂಥರತ್ನಗಳು ಪ್ರಕಟವಾದುವು.

ಸುಭಾಷಿತಾನಿ ಚ ಸ್ತೋತ್ರಾಣಿ ಚ ಗಾಥಾಶ್ಚ, ನಾನಾ ಚ ತಾನಿ ಸುಭಾಷಿತಸ್ತೋತ್ರಗಾಥಾಶ್ಚ ನಾನಾಸುಭಾಷಿತಸ್ತೋತ್ರಗಾಥಾಃ ಆದಯಃ ಯಾಸಾಂ ತಾಃ, ನಾನಾ...ಗಾಥಾದಯಶ್ಚ ತಾಃ ಕೃತಯಶ್ಚ, ಸತ್ಯಶ್ಚ ತಾಃ ಕೃತಯಶ್ಚ, ನಾನಾ...ದಿಕೃತಯಶ್ಚ ತಾಃ ಸತ್ಕೃತಯಶ್ಚ ನಾನಾಸುಭಾಷಿತ-ಸ್ತೋತ್ರಗಾಥಾದಿಕೃತಿಸತ್ಕೃತಯಃ ತಾಃ ; ರತ್ನಾನಾಂ ಆಕರಃ ತಸ್ಮಿನ್, ರತ್ನಾನಾಂ ಶ್ರೇಣಯಃ ರತ್ನಶ್ರೇಣಯಃ ತಾಃ ;

ಗಣಯತಿ ಗಣಯತಃ ಗಣಯಂತಿ ; ಗಣ ಸಂಖ್ಯಾನೇ ಲಟ್.

ಆಚಾರ್ಯರೇ ! ತಮ್ಮ ಗ್ರಂಥಗಳು ಇಷ್ಟಾದರೂ ಕಡಿಮೆಯೆಂದು ಹೇಳುವವರು ಹಾಸ್ಯಾಸ್ಪದರು—

ಏಷು ದಭ್ರಮತೀನ್ ದಭ್ರಾನ್ ಹಸತ್ಯುಚ್ಚೈಃ ಸತಾಂ ಸಭಾ ।
ಚಿಂತಾಮಣೀಂಶ್ಚಿಂತಯಂತೀ ಮಿತಾನಪ್ಯಮಿತಾರ್ಥದಾನ್ ॥ ೮೫ ॥

ಮಿತಾನ್ ಅಪಿ ಅಮಿತಾರ್ಥದಾನ್ ಚಿಂತಾಮಣೀನ್ ಚಿಂತಯಂತೀ ಸತಾಂ ಸಭಾ ಏಷು ದಭ್ರಮತೀನ್ ದಭ್ರಾನ್ ಉಚ್ಚೈಃ ಹಸತಿ.

Rarest Archives

ಮಿತಾನ್ ಅಪಿ = ಪರಿಮಿತಸ್ವರೂಪದವುಗಳಾದರೂ(ಚಿಕ್ಕದಾದರೂ), ಅಮಿತಾರ್ಥದಾನ್ = ಪರಿಮಿತಿಇಲ್ಲದ ಪ್ರಯೋಜನಗಳನ್ನು ಕೊಡುವ, (ಪರಿಮಿತಶಬ್ದವುಳ್ಳವುಗಳಾದರೂ ಅಪರಿಮಿತ ಅರ್ಥಗಳನ್ನು ಕೊಡುವ), ಚಿಂತಾಮಣೀನ್ ಚಿಂತಯಂತೀ = ಚಿಂತಾಮಣಿ ಎಂಬ ದೇವರತ್ನಗಳನ್ನು ಸ್ಮರಿಸುತ್ತಿರುವ (ಚಿಂತಾಮಣಿ ಎಂಬ ದೇವರತ್ನಗಳನ್ನಾಗಿ ಈ ಗ್ರಂಥಗಳನ್ನು ತಿಳಿಯುತ್ತಿರುವ), ಸತಾಂ ಸಭಾ = ಸಜ್ಜನರ ಸಮೂಹವು, ಏಷು = ಈ ಗ್ರಂಥಗಳಲ್ಲಿ, ದಭ್ರಮತೀನ್ = ಅಲ್ಪ (ಸಣ್ಣ) ಗ್ರಂಥಗಳೆಂಬ ಭಾವನೆಯುಳ್ಳ. ದಭ್ರಾನ್ = ಅಲ್ಪಜನರನ್ನು, ಉಚ್ಚೈಃ ಹಸತಿ = ಗಟ್ಟಿಯಾಗಿ ಅಪಹಾಸ್ಯ ಮಾಡಿ ನಗುತ್ತದೆ.

ಆಚಾರ್ಯರೇ ! ತಾವು ರಚಿಸಿದ ಗ್ರಂಥಗಳು ಸಣ್ಣವುಗಳು ಎಂದು ಕೆಲವು ಅಲ್ಪಜನರು ಭಾವಿಸುತ್ತಾರೆ, ಹಾಗೆಯೇ ಹೇಳುತ್ತಾರೆ. ಆದರೆ ಚಿಂತಾಮಣಿ ಎಂಬ ದೇವಲೋಕದ ಮಣಿಯು ಚಿಕ್ಕದಾದರೂ ಅಪರಿಮಿತವಾದ ಪ್ರಯೋಜನವನ್ನುಂಟುಮಾಡುವಂತೆ ಈ ಗ್ರಂಥಗಳು ಶಬ್ದದಿಂದ ಪರಿಮಿತವಾದರೂ ಅಪರಿಮಿತವಾದ ಅರ್ಥವನ್ನು ಕೊಡುವುದರಿಂದ ಚಿಂತಾಮಣಿಯಂತೆ ಇವೆ ಎಂದು ಭಾವಿಸುತ್ತಿರುವ ಸಜ್ಜನರ ಸಭೆಯು ಈ ಅಲ್ಪಜನರನ್ನು 'ಇವರೆಂತಹ ಮೂರ್ಖರು ! ಇವರಿಗೆ ಈ ಅನೇಕಚಿಂತಾಮಣಿಗಳ ಬೆಲೆಯೇ ಗೊತ್ತಿಲ್ಲವಲ್ಲ' ಎಂದು ನಕ್ಕು ಅಪಹಾಸಮಾಡುತ್ತದೆ. (ಈ ಗ್ರಂಥಗಳು ಆಚಾರ್ಯರ (ಚಿಂತೆ) ಚಿಂತನೆಯಿಂದ ಆವಿರ್ಭವಿಸಿದ ಮಣಿಗಳು ಆದುದರಿಂದ ಚಿಂತಾಮಣಿಗಳು).

ದಭ್ರಾಃ ಇತಿ ಮತಿಃ ಯೇಷಾಂ ತೇ ತಾನ್, ನ ಮಿತಾಃ ಅಮಿತಾಃ, ಅಮಿತಾನ್ ಅರ್ಥಾನ್ ದದತೀತಿ ಅಮಿತಾರ್ಥದಾಃ ತಾನ್ ;

ಹಸತಿ ಹಸತಃ ಹಸಂತಿ ಇತ್ಯಾದಿ, ಹಸೇ ಹಸನೇ ಸಕ. ಲಟ್.

ತ್ರಿವಿಕ್ರಮಪಂಡಿತರೇ ! ನಮ್ಮ ಗ್ರಂಥಗಳನ್ನು ಇಷ್ಟೆಲ್ಲ ಹೊಗಳಲು ಕಾರಣವೇನು ?—

ಅಪರೋಽಪೀಷ್ಯತೇಽಸ್ಮಾಭಿರ್ಗ್ರಂಥೇಷ್ವೇತೇಷು ಸತ್ಸ್ವಪಿ ।
ಸತ್ಸ್ವಪೀಂದ್ರಾದಿಷು ಪುರಾ ತಾರಕಾರಿರಿವಾಮರೈಃ ॥ ೮೩ ॥

ಪುರಾ ಇಂದ್ರಾದಿಷು ಸತ್ಸು ಅಪಿ ಅಮರ್ತ್ಯೈಃ ತಾರಕಾರಿಃ ಇವ ಏತೇಷು ಗ್ರಂಥೇಷು ಸತ್ಸು ಅಪಿ ಅಸ್ಮಾಭಿಃ ಅಪರಃ (ಗ್ರಂಥಃ) ಅಪಿ ಇಷ್ಯತೇ.

ಪುರಾ = ಹಿಂದೆ, ಇಂದ್ರಾದಿಷು ಸತ್ಸು ಅಪಿ = ಇಂದ್ರಾದಿದೇವತೆಗಳು ಇದ್ದಾಗ್ಯೂ, ಅಮರ್ತ್ಯೈಃ = ದೇವತೆಗಳಿಂದ, ತಾರಕಾರಿಃ ಇವ = ತಾರಕಾಸುರನ ಸಂಹಾರಕನಾಗುವ ಸುಬ್ರಹ್ಮಣ್ಯನಂತೆ, ಏತೇಷು ಗ್ರಂಥೇಷು ಸತ್ಸು ಅಪಿ = ಈ ಗ್ರಂಥಗಳು ಇದ್ದರೂ, ಅಸ್ಮಾಭಿಃ ನಮ್ಮಿಂದ, ಅಪರಃ (ಗ್ರಂಥಃ) ಅಪಿ = ಮತ್ತೊಂದು ಗ್ರಂಥವೂ, ಇಷ್ಯತೇ = ಅಪೇಕ್ಷಿಸಲ್ಪಡುತ್ತದೆ.

ಹಿಂದೆ ದೇವತೆಗಳು ಇಂದ್ರಾದಿ ದೇವತೆಗಳಿದ್ದರೂ ಮಹಾದುಷ್ಟನಾದ ಒಬ್ಬ ತಾರಕಾಸುರನ ಸಂಹಾರಕ್ಕಾಗಿ ವಿಷ್ಣುಚಕ್ರಾವತಾರನಾದ ಸುಬ್ರಹ್ಮಣ್ಯನ ಅವತಾರವನ್ನೇ ಅಪೇಕ್ಷಿಸಿದರು. ಅದರಂತೆ, ಈಗ ತಾವು ರಚಿಸಿದ ಇಷ್ಟು ಗ್ರಂಥಗಳಿದ್ದರೂ ಸಮಸ್ತದುರ್ಮತಗಳೆಂಬ ಬಹಳ ತಾರಕಾಸುರರನ್ನು ತಿರಸ್ಕರಿಸಲು ಮತ್ತೊಂದು ಗ್ರಂಥವು ಬೇಕೆಂದು ಅಪೇಕ್ಷಿಸುತ್ತೇವೆ. ಮತ್ತೊಂದು ಗ್ರಂಥವನ್ನು ರಚಿಸಬೇಕೆಂದು ನಾವು ತಮ್ಮಲ್ಲಿ ಬೇಡುತ್ತೇವೆ. ಎಂದು ತ್ರಿವಿಕ್ರಮರು ಹೇಳಿದರು.

ಇಂದ್ರಃ ಆದಿಃ ಯೇಷಾಂ ತೇ ತೇಷು, ತಾರಕಸ್ಯ ಅರಿಃ ;

ಇಷ್ಯತೇ ಇಷ್ಯೇತೇ ಇಷ್ಯಂತೇ ಇತ್ಯಾದಿ. ಇಷ ಇಚ್ಛಾಯಾಂ ಸಕರ್ಮಕ ಸೇಟ್ ಕರ್ಮಣಿ ಲಟ್. ಅಮರಾಃ ತಾರಕಾರಿಂ ಇವ ವಯಂ ಅಪರಂ ಗ್ರಂಥಮಪಿ ಇಚ್ಛಾಮಃ (ಕರ್ತರಿ).

ಹೊಸ ಗ್ರಂಥವು ಏಕೆ ಬೇಕು ? ಹಿಂದಿನ ಗ್ರಂಥಗಳಲ್ಲಿಯೇ ಎಲ್ಲಾ ಪರಮತನಿರಾಸಕವಾದ ಯುಕ್ತಿಗಳಿಲ್ಲವೇ ? — ಎಂದು ಆಚಾರ್ಯರು ಕೇಳಿದಾಗ—

ಗ್ರಂಥೇಭ್ಯ ಏಭ್ಯೋSಗಾಧೇಭ್ಯೋSಯುಕ್ತಯೋ ನೋ ದುರುದ್ಧರಾಃ।
ಮನೋಮಾಂದ್ಯಾತ್ತತೋ ಗ್ರಂಥಂ ವ್ಯಕ್ತತರ್ಕತತಿಂ ಕುರು ॥ ೮೭ ॥

ಏಭ್ಯಃ ಅಗಾಧೇಭ್ಯಃ ಗ್ರಂಥೇಭ್ಯಃ ಯುಕ್ತಯಃ ಮನೋಮಾಂದ್ಯಾತ್ ನಃ ದುರುದ್ಧರಾಃ, ತತಃ ನಃ ವ್ಯಕ್ತತರ್ಕತತಿಂ ಗ್ರಂಥಂ ಕುರು.

Rarest Archive

ಏಭ್ಯಃ ಅಗಾಧೇಭ್ಯಃ ಗ್ರಂಥೇಭ್ಯಃ = ಈ ಗಂಭೀರವಾದ ಗ್ರಂಥಗಳ ಪೆಸೆಯಿಂದ, ಯುಕ್ತಯಃ = ಯುಕ್ತಿಗಳು, ಮನೋಮಾಂದ್ಯಾತ್ = ಬುದ್ಧಿಯ ಅಲ್ಪತನದಿಂದಾಗಿ, ನಃ ದುರುದ್ಧರಾಃ = ನಮಗೆ ಪ್ರತ್ಯೇಕಿಸಿ ತೆಗೆಯಲು ಅಶಕ್ಯಗಳು, ತತಃ = ಆದುದರಿಂದ, ನಃ = ನಮಗೆ, ವ್ಯಕ್ತತರ್ಕ-ತತಿಂ = ಸ್ಪಷ್ಟವಾದ ಯುಕ್ತಿಗಳ ಸಮೂಹವುಳ್ಳ, ಗ್ರಂಥಂ ಕುರು = ಗ್ರಂಥವನ್ನು ಮಾಡಿರಿ.

ಗುರುಗಳೇ ! ನಾವು ಮಂದಬುದ್ಧಿಯುವರು. ತಾವು ಈಗಾಗಲೇ ರಚಿಸಿರುವ ಪ್ರೌಢಗಂಭೀರವಾದ ಗ್ರಂಥಗಳಲ್ಲಿ ಇತರ ಮತನಿರಾಸಕವಾದ ಎಲ್ಲಾ ಯುಕ್ತಿಗಳೂ ಇರಬಹುದಾದರೂ ನಾವು ಅವುಗಳನ್ನು ಪ್ರತ್ಯೇಕಿಸಿ ತಿಳಿಯಲಾರೆವು. ಆದುದರಿಂದ ತಾವು ಯುಕ್ತಿಗಳನ್ನು ಸ್ಪಷ್ಟವಾಗಿ ತಿಳಿಸುವ ಉತ್ತಮವಾದ ಹೊಸದಾದ ಒಂದು ಗ್ರಂಥವನ್ನು ರಚಿಸಿ ಕೊಡಿರಿ ಎಂದು ತ್ರಿವಿಕ್ರಮಪಂಡಿತರು ಆಚಾರ್ಯರನ್ನು ಪ್ರಾರ್ಥಿಸಿದರು.

ನ ಗಾಧಾಃ ಅಗಾಧಾಃ ತೇಭ್ಯಃ, ದುಃಖೇನ ಉದ್ಧರ್ತುಂ ಶಕ್ಯಾಃ ದುರುದ್ಧರಾಃ, ಮಂದಸ್ಯ ಭಾವಃ ಮಾಂದ್ಯಂ, ಮನಸಃ ಮಾಂದ್ಯಂ ಮನೋಮಾಂದ್ಯಂ ತಸ್ಮಾತ್, ವ್ಯಕ್ತಾ ತರ್ಕಾಣಾಂ ತತಿಃ ಯಸ್ಮಿನ್ ಸಃ ತಂ.

ಕುರು ಕುರುತಾತ್ ಕುರುತಂ ಕುರುತ–ಕೃ ಧಾತು ಲೋಟ್.

ತ್ರಿವಿಕ್ರಮರ ಪ್ರಾರ್ಥನಾನುಸಾರ ಅನುವ್ಯಾಖ್ಯಾ ಎಂಬ ಗ್ರಂಥವನ್ನು ಆಚಾರ್ಯರು ರಚಿಸಿದರು—

ಇತ್ಯರ್ಥಿತೋ ವ್ಯಧಾನ್ಮಧ್ವಃ ಸೋಽನುವ್ಯಾಖ್ಯಾಂ ಸತಾಂ ಸುಧಾಂ ।
ದುರ್ವಾದಿಗರ್ವಾದ್ರಿಪವಿಂ ಮಾಯಿಧ್ವಾಂತರವಿದ್ಯುತಿಂ ॥ ೮೮ ॥

ಇತಿ ಅರ್ಥಿತಃ ಸಃ ಮಧ್ವಃ ಸತಾಂ ಸುಧಾಂ ದುರ್ವಾದಿಗರ್ವಾದ್ರಿ-ಪವಿಂ ಮಾಯಿಧ್ವಾಂತರವಿದ್ಯುತಿಂ ಅನುವ್ಯಾಖ್ಯಾಂ ವ್ಯಧಾತ್.

ಇತಿ ಅರ್ಥಿತಃ = ಈ ರೀತಿ ಪ್ರಾರ್ಥಿಸಲ್ಪಟ್ಟ, ಸಃ ಮಧ್ವಃ = ಆ ಮಧ್ವಾಚಾರ್ಯರು, ಸತಾಂ ಸುಧಾಂ = ಸಜ್ಜನರಿಗೆ ಅಮೃತದಂತಿರುವ,

Rarest Archiver

ದುರ್ವಾದಿಗರ್ವಾದ್ರಿಪವಿಂ = ದುಷ್ಟವಾದಿಗಳ ಅಹಂಕಾರವೆಂಬ ಬೆಟ್ಟಕ್ಕೆ ವಜ್ರಾಯುಧದಂತಿರುವ, ಮಾಯಿಧ್ವಾಂತರವಿದ್ಯುತಿಂ = ಮಾಯಾವಾದಿಗಳೆಂಬ ಕತ್ತಲೆಗೆ ಸೂರ್ಯನ ಕಾಂತಿಯಂತಿರುವ, ಅನುವ್ಯಾಖ್ಯಾಂ ವ್ಯಧಾತ್ = ಅನುವ್ಯಾಖ್ಯಾನವೆಂಬ ಗ್ರಂಥವನ್ನು ಮಾಡಿದರು.

ತ್ರಿವಿಕ್ರಮರು ಈ ರೀತಿ ಪ್ರಾರ್ಥಿಸಿದಾಗ ಶ್ರೀಮಧ್ವಾಚಾರ್ಯರು 'ಅನುವ್ಯಾಖ್ಯಾನ' ಎಂಬ ಗ್ರಂಥವನ್ನು ರಚಿಸಿದರು. ಅದು ಸಜ್ಜನರಿಗೆ ಅಮೃತದಂತಿತ್ತು. ದುಷ್ಟವಾದಿಗಳ ಅಹಂಕಾರಪರ್ವತವನ್ನು ವಜ್ರಾಯುಧದಂತೆ ಭೇದಿಸಲು ಸಮರ್ಥವಾಗಿತ್ತು. ಮಾಯಾವಾದಿಗಳೆಂಬ ಅಂಧಕಾರವನ್ನು ತೊಲಗಿಸುವ ಸೂರ್ಯನ ಪ್ರಖರಪ್ರಭೆಯಂತಿತ್ತು. ಬ್ರಹ್ಮಸೂತ್ರಗಳಲ್ಲಿ ಸೂಚಿತವಾದ ಪರಮತನಿರಾಸಕವಾದ ಯುಕ್ತಿಸಮೂಹಗಳಿಂದ ಭೂಷಿತವಾದ ಇಂತಹ ಉತ್ತಮಗ್ರಂಥವನ್ನು ಆಚಾರ್ಯರು ರಚಿಸಿದರು.

ಗರ್ವ ಏವ ಅದ್ರಿಃ, ಗರ್ವಾದ್ರೇಃ ಪವಿಃ, ದುರ್ವಾದಿನಾಂ ಗರ್ವಾದ್ರಿಪವಿಃ, ತಂ ; ಮಾಯಿನಃ ಏವ ಧ್ವಾಂತಾನಿ, ಮಾಯಿಧ್ವಾಂತಾನಾಂ ರವೇಃ, ದ್ಯುತಿರಿವ ದ್ಯುತಿಃ ಯಸ್ಯ ಸಃ ತಂ ;

ಅನುವ್ಯಾಖ್ಯಾನಗ್ರಂಥದ ಅದ್ಭುತವಾದ ರಚನಾಕೌಶಲವು ಹೀಗಿದೆ—

ಯುಗಪದ್ರಚಯನ್ನೇನಾಂ ಕದಾಚಿತ್ಸ ನಿರಂತರಂ ।
ಚತುರಶ್ಚತುರಶ್ಶಿಷ್ಯಾಂಲ್ಲೀಲಯಾಲೇಖಯತ್ ಖಲು ॥ ೪೯ ॥

ಕದಾಚಿತ್ ಏನಾಂ ಯುಗಪತ್ ರಚಯನ್ ಚತುರಃ ಸಃ ನಿರಂತರಂ ಚತುರಃ ಶಿಷ್ಯಾನ್ ಲೀಲಯಾ ಅಲೇಖಯತ್ ಖಲು.

ಕದಾಚಿತ್ = ಒಂದಾನೊಂದು ಸಮಯದಲ್ಲಿ, ಏನಾಂ = ಈ 'ಅನುವ್ಯಾಖ್ಯಾ' ಗ್ರಂಥವನ್ನು, ಯುಗಪತ್ = ಒಂದೇ ಸಮಯದಲ್ಲಿ, ರಚಯನ್ = ರಚಿಸುತ್ತಾ, ಚತುರಃ ಸಃ = ಪ್ರವೀಣರಾದ ಆ ಮಧ್ವರು, ನಿರಂತರಂ = ಎಡೆಬಿಡದೆ, ಚತುರಃ ಶಿಷ್ಯಾನ್ = ನಾಲ್ಕು ಮಂದಿ ಶಿಷ್ಯರನ್ನೂ, ಲೀಲಯಾ = ಅನಾಯಾಸವಾಗಿ, ಅಲೇಖಯತ್ = ಬರೆಸಿದರು, ಖಲು = ನಿಶ್ಚಯ.

ಶ್ರೀಮಧ್ವಾಚಾರ್ಯರು ಒಂದಾನೊಂದುಸಮಯದಲ್ಲಿ ಈ ಅನುವ್ಯಾಖ್ಯಾಗ್ರಂಥವನ್ನು ಒಂದೇ ಸಮಯದಲ್ಲಿ ನಿರ್ಮಾಣಮಾಡುತ್ತಾ

Rarest Archiver

ನಾಲ್ಕು ಮಂದಿ ಶಿಷ್ಯರನ್ನು ತನ್ನೆದುರು ಕುಳ್ಳಿರಿಸಿ ಸ್ವಲ್ಪವೂ ವಿಳಂಬವಿಲ್ಲದೆ ಅನಾಯಾಸವಾಗಿ ವಿನೋದದಿಂದ ಬರೆಸಿದರು. ಇದು ನಿಶ್ಚಯವು. (ಎಂದು ಕವಿಗಳು ಹೇಳುತ್ತಾರೆ.) ಬ್ರಹ್ಮಸೂತ್ರಗಳ ನಾಲ್ಕು ಅಧ್ಯಾಯಗಳಿಗೆ ನಾಲ್ಕು ಅಧ್ಯಾಯರೂಪವಾದ ಅನುವ್ಯಾಖ್ಯಾನವನ್ನು ನಾಲ್ಕು ಮಂದಿ ಶಿಷ್ಯರಿಂದ, ಒಬ್ಬೊಬ್ಬರಿಂದ ಒಂದೊಂದು ಅಧ್ಯಾಯವನ್ನಾಗಿ ಒಂದೇ ಸಮಯದಲ್ಲಿ ಬರೆಸಿದರು. ಇಂತಹ ಅಮಾನುಷವ್ಯಾಪಾರವನ್ನು ಮಾಡಿದ ಚತುರರಾದ ಆಚಾರ್ಯರು ಚತುರಾನನರೇ ಸರಿ.

ನಿರ್ಗತಂ ಅಂತರಂ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ ನಿರಂತರಂ. (ಕ್ರಿ. ವಿ.)

ಅಲೇಖಯತ್ ಅಲೇಖಯತಾಂ ಅಲೇಖಯನ್, ಅಲೇಖಯಃ ಅಲೇಖಯತಂ ಅಲೇಖಯತ, ಅಲೇಖಯಂ ಅಲೇಖಯಾವ ಅಲೇಖಯಾಮ. ಲಿಖ ಅಕ್ಷರವಿನ್ಯಾಸೇ ಣಿಜಂತ ಲಙ್. ಶಿಷ್ಯಾಃ ಏನಾಂ ಅಲಿಖನ್= ಶಿಷ್ಯರು ಅನುವ್ಯಾಖ್ಯೆಯನ್ನು ಬರೆದರು. ಅಣಿಜಂತ ಪ್ರಯೋಗ.

ಯುಕ್ತಾಯಾ ಯುಕ್ತಿಮಾಲಾಯಾಃ
ಪ್ರೋಕ್ತಾಯಾಸ್ತತ್ರಚಾತ್ಮನಾ ।
ವ್ಯಕ್ತಂ ಚಕ್ರೇ ವಿವರಣಂ ಕವೀಂದ್ರೈರೇಷ ದುಷ್ಕರಂ ॥ ೯೦ ॥

ಏಷಃ ತತ್ರ ಆತ್ಮನಾ ಪ್ರೋಕ್ತಾಯಾಃ ಯುಕ್ತಾಯಾಃ ಯುಕ್ತಿ-ಮಾಲಾಯಾಃ ಕವೀಂದ್ರೈಃ ದುಷ್ಕರಂ ವಿವರಣಂ ಚ ಚಕ್ರೇ.

ಏಷಃ= ಈ ಶ್ರೀಮಧ್ವರು, ತತ್ರ=ಆ ಅನುವ್ಯಾಖ್ಯಾನದಲ್ಲಿ, ಆತ್ಮನಾ-ಪ್ರೋಕ್ತಾಯಾಃ= ತನ್ನಿಂದ ಹೇಳಲ್ಪಟ್ಟ, ಯುಕ್ತಾಯಾಃ= ಹೊಂದಾಣಿಕೆಯುಳ್ಳ, (ಉಚಿತವಾದ) ಯುಕ್ತಿಮಾಲಾಯಾಃ = ಯುಕ್ತಿಗಳ ಸಮೂಹಕ್ಕೆ ಕವೀಂದ್ರೈಃ ದುಷ್ಕರಂ = ಪಂಡಿತಶ್ರೇಷ್ಠರಿಂದಲೂ ಮಾಡಲು ಸಾಧ್ಯವಿಲ್ಲದ, ವಿವರಣಂ= ಸ್ಪಷ್ಟೀಕರಣವನ್ನು, ವ್ಯಕ್ತಂ ಚಕ್ರೇ= ಸ್ಫುಟವಾಗಿ ಮಾಡಿದರು.

ಶ್ರೀಮಧ್ವಾಚಾರ್ಯರು ಅನುವ್ಯಾಖ್ಯಾನದಲ್ಲಿ ತಾನು ಹೇಳಿರುವ ಯೋಗ್ಯವಾದ ಯುಕ್ತಿಮಾಲಿಕೆಗಳಿಗೆ ಪಂಡಿತಶ್ರೇಷ್ಠರಿಂದಲೂ ಮಾಡಲು ಸಾಧ್ಯ

Rarest Archiver

ವಿಲ್ಲದ ವಿವರಣವನ್ನು ತಾನೇ ಸ್ಪಷ್ಟವಾಗಿ ಮಾಡಿದರು. ನ್ಯಾಯವಿವರಣ ಎಂಬ ಗ್ರಂಥವನ್ನು ಬರೆದರು.

ಯುಕ್ತೀನಾಂ ಮಾಲಾ ತಸ್ಯಾಃ,ಕವೀನಾಂ ಇಂದ್ರಾಃ ತೈಃ, ದುಃಖೇನ ಕರ್ತುಂ ಶಕ್ಯಂ ದುಷ್ಕರಂ.

ಹೀಗೆ ಆಚಾರ್ಯರು ಹೆಚ್ಚು ಪ್ರಸಿದ್ಧಿಯಲ್ಲಿರುವ ೩೭ ಗ್ರಂಥಗಳನ್ನು ಬರೆದರು — ೧) ತತ್ವಸಂಖ್ಯಾನಂ ೨) ತತ್ವವಿವೇಕಃ ೩) ಉಪಾಧಿ-ಖಂಡನಂ ೪) ಮಾಯಾವಾದಖಂಡನಂ ೫) ಮಿಥ್ಯಾತ್ವಾನುಮಾನಖಂಡನಂ ೬) ತತ್ತ್ವೋದ್ಯೋತಃ ೭) ವಿಷ್ಣುತತ್ವನಿರ್ಣಯಃ ೮) ಕರ್ಮನಿರ್ಣಯಃ ೯) ಕಥಾಲಕ್ಷಣಂ ೧೦) ಪ್ರಮಾಣಲಕ್ಷಣಂ (ಇವೇ ದಶಪ್ರಕರಣಗ್ರಂಥ ಗಳು.) ೧೧) ಈಶಾವಾಸ್ಯಭಾಷ್ಯಂ ೧೨) ತಲವಕಾರಭಾಷ್ಯಂ ೧೩) ಕಾಠಕಭಾಷ್ಯಂ ೧೪) ಷಟ್‌ಪ್ರಶ್ನಭಾಷ್ಯಂ ೧೫) ಆಥರ್ವಣಭಾಷ್ಯಂ ೧೬) ಮಾಂಡೂಕ್ಯಭಾಷ್ಯಂ ೧೭) ತೈತ್ತಿರೀಯಭಾಷ್ಯಂ ೧೮) ಐತರೇಯಭಾಷ್ಯಂ ೧೯) ಛಾಂದೋಗ್ಯಭಾಷ್ಯಂ ೨೦) ಬೃಹದಾರಣ್ಯಕಭಾಷ್ಯಂ (ಇವು ದಶೋಪನಿಷದ್ಭಾಷ್ಯಗಳು.) ೨೧) ಗೀತಾಭಾಷ್ಯಂ ೨೨) ಗೀತಾತಾತ್ಪರ್ಯಂ (ಗೀತಾಪ್ರಸ್ಥಾನದ ಗ್ರಂಥಗಳು) ೨೩) ಬ್ರಹ್ಮಸೂತ್ರಭಾಷ್ಯಂ ೨೪) ಅನು ಭಾಷ್ಯಂ (ಅನುವ್ಯಾಖ್ಯಾನಂ) ೨೫) ನ್ಯಾಯವಿವರಣಂ ೨೬) ಅಣು ಭಾಷ್ಯಂ (ಅಣುವೇದಾಂತಸಂಗ್ರಹ) (ಸೂತ್ರಪ್ರಸ್ಥಾನಗ್ರಂಥಗಳು.) ೨೭) ಋಗ್‌ಭಾಷ್ಯಂ (ವೇದ(ಋಕ್)ಪ್ರಸ್ಥಾನಗ್ರಂಥ) ೨೮) ಭಾಗವತತಾತ್ಪರ್ಯ ನಿರ್ಣಯಃ ೨೯) ಮಹಾಭಾರತತಾತ್ಪರ್ಯನಿರ್ಣಯಃ (ಪುರಾಣಪ್ರಸ್ಥಾನ) ೩೦) ತಂತ್ರಸಾರಃ (ಆಗಮಪ್ರಸ್ಥಾನ) ೩೧) ಸದಾಚಾರಸ್ಮೃತಿಃ ೩೨) ಕೃಷ್ಣಾಮೃತಮಹಾರ್ಣವಃ ೩೩) ಜಯಂತೀಕಲ್ಪಃ ೩೪) ಯತಿಪ್ರಣವ-ಕಲ್ಪಃ (ಧರ್ಮಶಾಸ್ತ್ರಪ್ರಸ್ಥಾನಂ) ೩೫) ನಖಸ್ತುತಿಃ ೩೬) ದ್ವಾದಶ-ಸ್ತೋತ್ರಂ (ಸ್ತೋತ್ರಪ್ರಸ್ಥಾನ) ೩೭) ಯಮಕಭಾರತಂ (ಕಾವ್ಯಪ್ರಸ್ಥಾನ) ಇವುಗಳಲ್ಲದೆ ನ್ಯಾಸಪದ್ಧತಿ, ತಿಥಿನಿರ್ಣಯ, ಕಂದುಕಸ್ತುತಿ, (ಸಂಗೀತ ಶಾಸ್ತ್ರದ ಗ್ರಂಥ,) ಮುಂತಾದ ಇನ್ನೂ ಅನೇಕ ಗ್ರಂಥಗಳನ್ನು ಆಚಾರ್ಯರು ಬರೆದಿದ್ದಾರೆಂದು ಪ್ರಸಿದ್ಧಿಯಿದೆ.

Rarest Archive

ವಿಷ್ಣುತೀರ್ಥರ ಮಹಿಮೆಯನ್ನು ವರ್ಣಿಸಲು ಅವರ ಪೂರ್ವಾಶ್ರಮದ ಚರಿತ್ರೆಯನ್ನು ಹೇಳುತ್ತಾರೆ—

ಮಧ್ವೇಂದೋರ್ನಿತ್ಯಸಂಬಂಧಾನ್ನಿಸ್ತಮಸ್ತಾಪಚೇತಸೋಃ ।
ವೈಕುಂಠಂ ಯಾತಯೋಃ ಪಿತ್ರೋರ್ಗೃಹೇಽಸ್ಯಾವರಜೋಽವಸತ್ ॥

ಮಧ್ವೇಂದೋಃ ನಿತ್ಯಸಂಬಂಧಾತ್ ನಿಸ್ತಮಸ್ತಾಪಚೇತಸೋಃ ಪಿತ್ರೋಃ ವೈಕುಂಠಂ ಯಾತಯೋಃ ಅಸ್ಯ ಅವರಜಃ ಗೃಹೇ ಅವಸತ್. ॥ ೯೧ ॥

ಮಧ್ವೇಂದೋಃ = ಮಧ್ವಾಚಾರ್ಯರೆಂಬ ಚಂದ್ರನ, ನಿತ್ಯಸಂಬಂಧಾತ್ = ಪ್ರತಿದಿನ ನೋಡುವುದು, ಅವರ ಮಾತನ್ನು ಕೇಳುವುದೇ ಮೊದಲಾದ ನಿರಂತರಸಂಬಂಧದಿಂದ, ನಿಸ್ತಮಃ = ನಾಶಹೊಂದಿದ ಅಜ್ಞಾನ ಮತ್ತು ಕತ್ತಲೆಯು, ತಾಪ = ಸಂತಾಪವುಳ್ಳ, ಚೇತಸೋಃ = ಮನಸ್ಸುಳ್ಳ, ಪಿತ್ರೋಃ = (ಆಚಾರ್ಯರ ಪೂರ್ವಾಶ್ರಮದ) ತಂದೆತಾಯಿಗಳು, ವೈಕುಂಠಂ ಯಾತಯೋಃ (ಸತೋಃ) = ವೈಕುಂಠಲೋಕಕ್ಕೆ ಹೋಗಲಾಗಿ (ಮೃತರಾದಾಗ) ಅಸ್ಯ ಅವರಜಃ = ಶ್ರೀಮಧ್ವಾಚಾರ್ಯರ ತಮ್ಮನು, ಗೃಹೇ ಅವಸತ್ = ಮನೆಯಲ್ಲಿ ವಾಸಮಾಡುತ್ತಿದ್ದನು.

ಶ್ರೀಮಧ್ವಾಚಾರ್ಯರ ತಂದೆತಾಯಿಗಳು ಪಾಜಕಕ್ಷೇತ್ರದ ತಮ್ಮ ಮನೆಯಲ್ಲಿ ವಾಸವಾಗಿದ್ದರು. ಅವರ ಅಜ್ಞಾನವೆಂಬ ಕತ್ತಲೆಯು, ತಾಪವೂ ಮಧ್ವರೆಂಬ ಚಂದ್ರನ ದರ್ಶನ, ಅವರ ವ್ಯಾಖ್ಯಾನದ ಶ್ರವಣ ಮೊದಲಾದವುಗಳಿಂದ ನಾಶವಾಗಿತ್ತು. ಒಳ್ಳೆಯ ಜ್ಞಾನವನ್ನು ಪಡೆದು ಆ ಮಾತಾಪಿತೃಗಳು ವೈಕುಂಠವಾಸಿಗಳಾದರು, ದೇಹತ್ಯಾಗ ಮಾಡಿದರು. ಆಗ ಅವರ ಕಿರಿಯ ಮಗನಾದ ಆಚಾರ್ಯರ ತಮ್ಮನು ತನ್ನ ತಂದೆಯ ಮನೆಯಲ್ಲಿಯೇ ವಾಸವಾಗಿದ್ದನು.

ಮಧ್ವ ಏವ ಇಂದುಃ ತಸ್ಯ, ನಿತ್ಯಂ ಸಂಬಂಧಃ ತಸ್ಮಾತ್, ತಮ ಏವ ತಾಪಃ, ನಿರ್ಗತಃ ತಮಸ್ತಾಪಃ ಯಯೋಸ್ತೇ, ನಿಸ್ತಮಸ್ತಾಪೇ ಚೇತಸೀ ಯಯೋಃತೌ ನಿಸ್ತಮಸ್ತಾಪಚೇತಸೌ ತಯೋಃ, ಮಾತಾ ಚ ಪಿತಾ ಚ ಪಿತರೌ ತಯೋಃ, ಅವರಸ್ಮಿನ್ (ಕಾಲೇ) ಜಾತಃ ಅವರಜಃ.

Rarest Archives

ಅವಸತ್ ಅವಸತಾಂ ಅವಸನ್ ಇತ್ಯಾದಿ–ವಸ ನಿವಾಸೇ ಅಕ. ಅನಿಟ್ ಪರ. ಲಙ್.

ವಿಧಿಭ್ರೂವಿಭ್ರಮಭ್ರಶ್ಯದ್ಧನಗೋಧಾನ್ಯಸಂಪದಾ ।
ನಿರ್ವೇದಿನಾ ವೇದವಿದಾ ತೇನಾಪೇ ವೇದವಾದಿರಾಟ್ ॥೯೨॥

ವಿಧಿಭ್ರೂವಿಭ್ರಮಭ್ರಶ್ಯದ್ಧನಗೋಧಾನ್ಯಸಂಪದಾ ನಿರ್ವೇದಿನಾ ವೇದವಿದಾ ತೇನ ವೇದವಾದಿರಾಟ್ ಆಪೇ.

ವಿಧಿಭ್ರೂವಿಭ್ರಮ = ದೈವದ ಹುಬ್ಬುಗಳ ವಿಲಾಸದಿಂದ, ಭ್ರಶ್ಯತ್ = ನಾಶವಾದ, ಧನ–ಗೋ–ಧಾನ್ಯ ಸಂಪದಾ = ಹಣ, ಹಸುಗಳು, ದವಸ ಧಾನ್ಯರೂಪವಾದ ಸಂಪತ್ತುಳ್ಳ, ನಿರ್ವೇದಿನಾ = ವಿರಕ್ತನಾದ, ವೇದವಿದಾ ತೇನ = ವೇದಜ್ಞನಾದ ಆ ಮಧ್ವಾಚಾರ್ಯರ ತಮ್ಮನಿಂದ, ವೇದವಾದಿರಾಟ್ = ವೇದವ್ಯಾಖ್ಯಾನಚಕ್ರವರ್ತಿಗಳಾದ ಶ್ರೀಮಧ್ವಾಚಾರ್ಯರು, ಆಪೇ = ಹೊಂದಲ್ಪಟ್ಟರು.

ವೇದಜ್ಞರಾದ ಆಚಾರ್ಯರ ತಮ್ಮಂದಿರು ದುರದೃಷ್ಟದ ವಿಲಾಸ ದಿಂದಾಗಿ, ಧನಸಂಪತ್ತು, ಗೋಸಂಪತ್ತು, ಧಾನ್ಯಸಂಪತ್ತು ಎಲ್ಲವನ್ನೂ ಕಳೆದುಕೊಂಡರು. ಅವರು ವಿರಕ್ತರಾಗಿ ವೇದಾರ್ಥೋಪದೇಶಮಾಡುವುದ ರಲ್ಲಿ ಅತಿ ಕುಶಲರಾದ ಆಚಾರ್ಯರ ಬಳಿಗೆ ಬಂದರು. ಸಂಪತ್ತು ನಷ್ಟ ವಾದಾಗ ವೈರಾಗ್ಯವುಂಟಾಯಿತು. ಪರಮಾತ್ಮನು ಯಾವನನ್ನು ಉದ್ಧ ರಿಸಲು ಇಚ್ಛಿಸುತ್ತಾನೋ ಅವನ ಸಂಪತ್ತನ್ನು ಅಪಹರಿಸುತ್ತಾನೆ. ಆಚಾರ್ಯರ ತಮ್ಮಂದಿರನ್ನೂ ಉದ್ಧರಿಸಲು ಶ್ರೀಹರಿಯು ದಾರಿದ್ರ್ಯವನ್ನಿತ್ತನು, ದುಃಖವನ್ನಿತ್ತನು.

ವಿಧೇಃ ಭ್ರೂಃ, ವಿಧಿಭ್ರುವಾಃ ವಿಭ್ರಮಃ ವಿಧಿಭ್ರೂವಿಭ್ರಮೇಣ ಭ್ರಶ್ಯಂತ್ಯಃ (ಧನಾನಿ ಚ ಗಾವಶ್ಚ ಧಾನ್ಯಾನಿ ಚ ಸಂಪದಶ್ಚ) ಧನಗೋಧಾನ್ಯಸಂಪದಃ ಯಸ್ಯ ಸಃ, ನಿರ್ವೇದಃ ಅಸ್ಯ ಅಸ್ತೀತಿ. ನಿರ್ವೇದೀ (ನ್)•ತೇನ, ವೇದಂ ವೇತ್ತೀತಿ ವೇದವಿತ್ ತೇನ, ವೇದಂ ವದಂತೀತಿ ವೇದವಾದಿನಃ, ವೇದವಾದಿನಾಂ ರಾಟ್ ;

Rarest Archiver

ಆಪೇ ಆಪಾತೇ ಆಪಿರೇ ಇತ್ಯಾದಿ. ಆಪ್‍ಲ್ಯ ವ್ಯಾಪ್ತೌ ಕರ್ಮಣಿ ಲಿಟ್. ನಿರ್ವೇದೀ ವೇದವಿತ್ ಸಃ ವೇದವಾದಿರಾಜಂ ಆಪ (ಕರ್ತರಿ).

ಪಾರಿವ್ರಾಜ್ಯಂ ಪ್ರಾರ್ಥಯಂತಂ ಪಾದಾನಮ್ರಮಿಮಂ ಮುಹುಃ ।
ಸಮಯಾಪೇಕ್ಷಯೋರ್ವೀಕ್ಷೋ ಗಮಯಾಮಾಸ ಧಾಮತಂ ॥೯೩॥

ಉರ್ವೀಕ್ಷಃ ಪಾರಿವ್ರಾಜ್ಯಂ ಪ್ರಾರ್ಥಯಂತಂ ಮುಹುಃ ಪಾದಾನಮ್ರಂ ತಂ ಇಮಂ ಸಮಯಾಪೇಕ್ಷಯಾ ಧಾಮ ಗಮಯಾಮಾಸ ।

ಉರ್ವೀಕ್ಷಃ= ಅತಿಶಯಜ್ಞಾನಸಂಪನ್ನರಾದ ಶ್ರೀಮಧ್ವಾಚಾರ್ಯರು ಪಾರಿವ್ರಾಜ್ಯಂ ಪ್ರಾರ್ಥಯಂತಂ = ಸನ್ಯಾಸವನ್ನು ಬೇಡುತ್ತಿರುವ, ಮುಹುಃ= ಮತ್ತೂ ಮತ್ತೂ, ಪಾದಾನಮ್ರಂ= ಪಾದಗಳಿಗೆ ನಮಸ್ಕಾರ ಮಾಡಿದ, ತಂ ಇಮಂ= ಆ ಈ ತಮ್ಮನನ್ನು, ಸಮಯಾಪೇಕ್ಷಯಾ= ಕಾಲದ ನಿರೀಕ್ಷೆಯಿಂದ, ಧಾಮ ಗಮಯಾಮಾಸ= ಮನೆಯನ್ನು ಕುರಿತು ಹೋಗುವಂತೆ ಮಾಡಿದರು.

ತನಗೆ ಸನ್ಯಾಸಾಶ್ರಮವನ್ನು ಕೊಡಬೇಕೆಂದು ಪ್ರಾರ್ಥಿಸುತ್ತಾ ಪುನಃ ಪುನಃ ತನ್ನ ಪಾದಗಳಿಗೆ ವಂದಿಸುತ್ತಿರುವ ಆ ತಮ್ಮನನ್ನು, ಸನ್ಯಾಸವನ್ನು ಕೊಡಲು ಯೋಗ್ಯವಾದ ಕಾಲದ ನಿರೀಕ್ಷಣೆಯಿಂದ —'ಈಗ ಮನೆಗೆ ಹೋಗಿ ಇರು' ಎಂದು ಆಚಾರ್ಯರು ಕಳುಹಿಸಿದರು. ಆಗ ಚಾತುರ್ಮಾಸ್ಯ ಕಾಲವಾದುದರಿಂದ ಸನ್ಯಾಸಕೊಡಲು ಯೋಗ್ಯವಲ್ಲದ್ದರಿಂದ ಮುಂದೆ ಯೋಗ್ಯಕಾಲದಲ್ಲಿ ಸನ್ಯಾಸಕೊಡುವೆನೆಂದು ತಮ್ಮನನ್ನು ಶ್ರೀಮಧ್ವರು ಮನೆಗೆ ಕಳುಹಿಸಿದರು ಎಂದು ಭಾವ.

ಪರಿವ್ರಾಜಃ ಭಾವಃ ಪಾರಿವ್ರಾಜ್ಯಂ ತತ್, ಪಾದಯೋಃ ಆನಮ್ರಃ ತಂ, ಸಮಯಸ್ಯ ಅಪೇಕ್ಷಾ ತಯಾ, ಉರುಃ ಈಕ್ಷಾ ಯಸ್ಯ ಸಃ ಉರ್ವೀಕ್ಷಃ.

ಗಮಯಾಮಾಸ+ಆಸತುಃ ಆಸುಃ ಇತ್ಯಾದಿ ಗಮ್‍ಲ್ಯ ಗತೌ ಣಿಜಂತ ಲಿಟ್. ಸಃ ಧಾಮ ಅಗಚ್ಛತ್ ಅಣಿಜಂತ.

ಮನೆಗೆ ಬಂದ ಆಚಾರ್ಯರ ತಮ್ಮಂದಿರು ಏನು ಮಾಡಿದರು ?—

Rarest Archiver

ನ ಜಘಾಸ ನ ಸುಷ್ವಾಪ ನ ಜಹಾಸ ಸ ಧೀರಧೀಃ ।
ಸಮಯಾರ್ಥೀ ಸ್ಮರನ್ ಜ್ಯೇಷ್ಠಂ ರಾಮಂ ರಾಮಾನುಜೋ ಯಥಾ ॥

ಜ್ಯೇಷ್ಠಂ ಸ್ಮರನ್ ಧೀರಧೀಃ ಸಃ ಸಮಯಾರ್ಥೀ ರಾಮಾನುಜಃ ಯಥಾ ನ ಜಘಾಸ, ನ ಸುಷ್ವಾಪ, ನ ಜಹಾಸ. ॥ ೯೪ ॥

ಜ್ಯೇಷ್ಠಂ ಸ್ಮರನ್ = ಅಣ್ಣಂದಿರಾದ ಶ್ರೀಮಧ್ವರನ್ನು ಸ್ಮರಿಸುತ್ತಾ ಇದ್ದ, ಧೀರಧೀಃ ಸಃ = ಸ್ಥಿರವಾದ ಬುದ್ಧಿಯುಳ್ಳ ಆ ಆಚಾರ್ಯಾನುಜರು, ಸಮಯಾರ್ಥೀ = ಸನ್ಯಾಸದ ಕಾಲವನ್ನು ನಿರೀಕ್ಷಿಸುವವರಾಗಿ, (ಸಮಯಾರ್ಥೀ = ರಾಮನು ಹಿಂತಿರುಗಿ ಬರುವ ಕಾಲವನ್ನು ನಿರೀಕ್ಷಿಸುತ್ತಿರುವ) ರಾಮಾನುಜಃ ಯಥಾ = ಶ್ರೀರಾಮನ ತಮ್ಮನಾದ ಭರತನಂತೆ, ನ ಜಘಾಸ = ಊಟಮಾಡಲಿಲ್ಲ, ನ ಸುಷ್ವಾಪ = ನಿದ್ರಿಸಲಿಲ್ಲ, ನ ಜಹಾಸ = ನಗಲಿಲ್ಲ.

ವನವಾಸದಲ್ಲಿರುವ ಶ್ರೀರಾಮನನ್ನು ಭರತನು ಅಯೋಧ್ಯೆಗೆ ಹಿಂತಿರುಗಿ ಬರುವಂತೆ ಒತ್ತಾಯಿಸಿದಾಗ ಶ್ರೀರಾಮನು 'ಹದಿನಾಲ್ಕು ವರ್ಷಗಳು ಕಳೆದನಂತರ ಅಯೋಧ್ಯೆಗೆ ಹಿಂದಿರುಗುವೆನು' ಎಂದನು. ಭರತನು ರಾಮನು ಬರುವ ಸಮಯವನ್ನು ನಿರೀಕ್ಷಿಸುತ್ತಾ ಊಟಮಾಡಲಿಲ್ಲ, ನಿದ್ರಿಸಲಿಲ್ಲ, ನಗಲಿಲ್ಲ. ಹಾಗೆಯೇ ಅಣ್ಣ ಶ್ರೀಮಧ್ವರು ಹೇಳಿದ ಸಮಯವನ್ನು ನಿರೀಕ್ಷಿಸುತ್ತಾ, ಅವರನ್ನೇ ಸ್ಮರಿಸುತ್ತಾ ಇದ್ದ ಆಚಾರ್ಯರ ತಮ್ಮಂದಿರು, ಊಟಮಾಡಲಿಲ್ಲ, ನಿದ್ರಿಸಲಿಲ್ಲ, ನಗಲಿಲ್ಲ. ಎಲ್ಲಾ ಸಾಧಾರಣವಿಷಯಭೋಗವನ್ನೂ ತೊರೆದು ಆಚಾರ್ಯರು ತನಗೆ ಸನ್ಯಾಸವನ್ನಿತ್ತು ಯಾವಾಗ ಅನುಗ್ರಹಿಸಿಯಾರೆಂದು ನಿರೀಕ್ಷಿಸುತ್ತಾ ಇದ್ದರು.

ಧೀರಾ ಧೀಃ ಯಸ್ಯ ಸಃ, ಸಮಯಂ ಅರ್ಥಯತೇ ಇತಿ ಸಮಯಾರ್ಥೀ (ನ್) ರಾಮಸ್ಯ ಅನುಜಃ.

ಜಘಾಸ ಜಕ್ಷತುಃ ಜಕ್ಷುಃ, ಜಘಸಿಥ ಜಕ್ಷಥುಃ ಜಕ್ಷ, ಜಘಾಸ ಜಘಸ ಜಕ್ಷಿವ ಜಕ್ಷಿಮ. ಅದ ಭಕ್ಷಣೇ ಸಕ. ಅನಿ. ಪರ. ಲಿಟ್ಯನ್ಯತರಸ್ಯಾಂ(೨-೪-೪೦) ಸೂತ್ರದಿಂದ ವಿಕಲ್ಪದಿಂದ ಘಸ್ಲೃ ಆದೇಶ. ಸುಷ್ವಾಪ ಸುಷುಪತುಃ ಸುಷುಪುಃ, ಸುಷ್ವಪಿಥ ಸುಷ್ವಪ್ಥ, ಸುಷುಪಥುಃ ಸುಷುಪ, ಸುಷ್ವಾಪ ಸುಷ್ವಪ, ಸುಷುಪಿವ ಸುಷುಪಿಮ. ಞಿಷ್ವಪ್ ಶಯೇ ಅಕ. ಅನಿ. ಪರ.

Rarest Archiver

ಆಚಾರ್ಯರು ಪಾಜಕಕ್ಷೇತ್ರಕ್ಕೆ ಬಂದರು—

ರಾಜ್ಯೇ ಕಥಂಚಿನ್ನಿಕ್ಷಿಪ್ಯ ರಾಜಾನಂ ವಿರಹಾರ್ದಿತಂ ।
ಅವತಾರಭುವಂ ಪ್ರಾಯಾದ್ಭಗವಾನ್ ಶರದತ್ಯಯೇ ॥ ೯೫ ॥

ವಿರಹಾರ್ದಿತಂ ರಾಜಾನಂ ಕಥಂಚಿತ್ ರಾಜ್ಯೇ ನಿಕ್ಷಿಪ್ಯ ಭಗವಾನ್ ಶರದತ್ಯಯೇ ಅವತಾರಭುವಂ ಪ್ರಾಯಾತ್.

ವಿರಹಾರ್ದಿತಂ = ವಿಯೋಗದಿಂದ ದುಃಖಗೊಂಡ, ರಾಜಾನಂ= ಜಯಸಿಂಹರಾಜನನ್ನು, ಕಥಂಚಿತ್=ಕಷ್ಟದಿಂದ, ರಾಜ್ಯೇ ನಿಕ್ಷಿಪ್ಯ= ಅವನ ರಾಜ್ಯದಲ್ಲಿ ಇರಿಸಿ, ಭಗವಾನ್ = ಶ್ರೀಮಧ್ವಾಚಾರ್ಯರು, ಶರದತ್ಯಯೇ=ಶರದೃತುವಿನ ಕೊನೆಯಲ್ಲಿ (ಕಾರ್ತಿಕಮಾಸವು ಮುಗಿದ ಮೇಲೆ) ಅವತಾರಭುವಂ ಪ್ರಾಯಾತ್=ತಾವು ಅವತರಿಸಿದ ಪಾಜಕಕ್ಷೇತ್ರಕ್ಕೆ ಹೋದರು.

ಶ್ರೀಮಧ್ವಾಚಾರ್ಯರು ಶರದೃತುವಿನಲ್ಲಿ ಕಾರ್ತಿಕಮಾಸದಲ್ಲಿ ಚಾತುರ್ಮಾಸ್ಯಕಾಲವು ಕಳೆದ ಮೇಲೆ, ತನ್ನ ವಿರಹದಿಂದ ದುಃಖಿತನಾದ ಜಯಸಿಂಹರಾಜನನ್ನು ಬಹಳ ಪ್ರಯತ್ನದಿಂದ ರಾಜ್ಯದಲ್ಲಿಯೇ ಕುಳ್ಳಿರಿಸಿ ತನ್ನ ಅವತಾರ ಸ್ಥಳವಾದ ಪಾಜಕಕ್ಷೇತ್ರಕ್ಕೆ ಬಂದರು.

ವಿರಹೇಣ ಅರ್ದಿತಃ ತಂ, ಅವತಾರಸ್ಯ ಭೂಃ ತಾಂ, ಶರದಃ ಅತ್ಯಯಃ ತಸ್ಮಿನ್.

ಅಲ್ಲಿ ತಮ್ಮನಿಗೆ ಸಂನ್ಯಾಸಾಶ್ರಮವನ್ನು ಕೊಟ್ಟರು—

ವಿಶುದ್ಧದ್ವಿಕುಲಂ ಶ್ರೌತಂ ಶುಚಿಂ ಕೃತಪಿತೃಕ್ರಿಯಂ ।
ವಿರಕ್ತಂ ವಿಷಯಾನ್ ಭುಕ್ತ್ವಾ ವ್ಯಧಾನ್ಮಧ್ವೋಽನುಜಂ ಯತಿಂ ॥

ವಿಶುದ್ಧದ್ವಿಕುಲಂ ಶ್ರೌತಂ ಶುಚಿಂ ಕೃತಪಿತೃಕ್ರಿಯಂ ವಿಷಯಾನ್ ಭುಕ್ತ್ವಾ ವಿರಕ್ತಂ ಅನುಜಂ ಮಧ್ವಃ ಯತಿಂ ವ್ಯಧಾತ್ । ॥ ೯೬ ॥

ವಿಶುದ್ಧದ್ವಿಕುಲಂ=ಪವಿತ್ರವಾದ ತಾಯಿ ತಂದೆಯರ ವಂಶವುಳ್ಳ, ಶ್ರೌತಂ = ವೈದಿಕವಂಶದ (ವೇದವೇದಾರ್ಥನಿಶ್ಚಯವುಳ್ಳ) ಶುಚಿಂ = ಮನಸ್ಸು, ಮಾತು ಮತ್ತು ದೇಹ ಇವುಗಳಿಂದ ಶುದ್ಧನಾದ, ಕೃತಪಿತೃಕ್ರಿಯಂ

= ಮಾತಾಪಿತೃಗಳ ಶ್ರಾದ್ಧವನ್ನು ಮಾಡಿದ, ಜೀವಚ್ಛ್ರಾದ್ಧವನ್ನು ಮಾಡಿದ, ವಿಷಯಾನ್ ಭುಕ್ತ್ವಾ=ಅನಿಷಿದ್ಧವಾದ ರೂಪಾದಿಗಳನ್ನು ಅನುಭವಿಸಿ, ವಿರಕ್ತಂ = ವೈರಾಗ್ಯಶಾಲಿಯಾಗಿರುವ, ಅನುಜಂ= ತಮ್ಮನನ್ನು, ಮಧ್ವಃ = ಶ್ರೀಮಧ್ವರು, ಯತಿಂ ವ್ಯಧಾತ್ = ಸನ್ಯಾಸಿಯನ್ನಾಗಿ ಮಾಡಿದರು.

ಸನ್ಯಾಸವನ್ನು ಸ್ವೀಕರಿಸುವವರ ತಾಯಿತಂದೆಯರ ವಂಶವು ಶುದ್ಧವಾಗಿರಬೇಕು. ವೇದ ಮತ್ತು ವೇದಾರ್ಥಗಳ ಯಥಾರ್ಥಜ್ಞಾನವಿರಬೇಕು. ಮನೋವಾಕ್ ದೇಹಗಳಿಂದ ಶುದ್ಧರಾಗಿರಬೇಕು. ತ್ರಿಕರಣಶುದ್ಧಿ ಇರಬೇಕು. ಮಾತಾಪಿತೃಗಳಿಗೆ ಕೊನೆಯ ಶ್ರಾದ್ಧವನ್ನೂ ಮುಗಿಸಿ ತಾನೂ ಬದುಕಿರುವಾಗಲೇ ತನಗೆ ಶ್ರಾದ್ಧವನ್ನು ಮಾಡಿಕೊಳ್ಳಬೇಕು. ವೈರಾಗ್ಯವಿರಬೇಕು. ಆಚಾರ್ಯರ ತಮ್ಮಂದಿರಲ್ಲಿ ಸನ್ಯಾಸಕ್ಕೆ ಬೇಕಾದ ಈ ಎಲ್ಲಾ ಗುಣಧರ್ಮಗಳೂ ಇದ್ದುವು. ಅವರು ಗೃಹಸ್ಥರಾಗಿ ವಿಷಯಸುಖವನ್ನು ಅನುಭವಿಸದೆ ಇದ್ದರೂ, ಧನಾದಿಗಳನ್ನು ಕಳೆದುಕೊಂಡು ವಿಷಯದುಃಖಾನುಭವವನ್ನು ಮಾಡಿದ್ದರು. ಇಂತಹ ತಮ್ಮನಿಗೆ ಆಚಾರ್ಯರು ಸನ್ಯಾಸಾಶ್ರಮವನ್ನು ಕೊಟ್ಟರು.

ವಿಶುದ್ಧೇ ದ್ವೇ ಕುಲೇ ಯಸ್ಯ ಸಃ ತಂ, ಶ್ರುತೇಃ ಅಯಂ ಶ್ರೌತಃ ತಂ, ಕೃತಾ ಪಿತ್ರೋಃ ಕ್ರಿಯಾ ಯೇನ ಸಃ ತಂ;

ಆಚಾರ್ಯರು ಅನುಜನಿಗೆ ಪ್ರಣವೋಪದೇಶ ಮಾಡಿದರು—

ರಹಸ್ಯತಿರಹಸ್ಯಂ ತದ್ ಬ್ರಹ್ಮ ಬ್ರಹ್ಮಸಮೋ ದದೌ ।
ಅಮುಷ್ಮೈ ಪಂಚತಪಸೋ ನ ವಿದುರ್ಯತ್ತಪಸ್ವಿನಃ ॥ ೬೭ ॥

ಪಂಚತಪಸಃ ತಪಸ್ವಿನಃ ಯತ್ ಬ್ರಹ್ಮ ನ ವಿದುಃ, ಬ್ರಹ್ಮಸಮಃ. (ಸಃ) ಅತಿರಹಸ್ಯಂ ತತ್ ರಹಸಿ ಅಮುಷ್ಮೈ ದದೌ.

ಪಂಚತಪಸಃ = ಪಂಚಾಗ್ನಿಮಧ್ಯದಲ್ಲಿ ತಪಸ್ಸನ್ನು ಮಾಡುತ್ತಿರುವ, ತಪಸ್ವಿನಃ = ಮುನಿಗಳು, ಯತ್ ಬ್ರಹ್ಮ ನ ವಿದುಃ = ಯಾವ ಓಂಕಾರವನ್ನು ತಿಳಿಯುವುದಿಲ್ಲವೋ, ಬ್ರಹ್ಮಸಮಃ ಸಃ = ಚತುರ್ಮುಖಬ್ರಹ್ಮನಿಗೆ

Rarest Archiver

ಸದೃಶರಾದ ಶ್ರೀಮಧ್ವರು, ಅತಿರಹಸ್ಯಂ ತತ್ = ಅತ್ಯಂತ ಗೋಪ್ಯವಾದ ಆ ಓಂಕಾರವನ್ನು, ರಹಸಿ = ಗುಟ್ಟಿನಲ್ಲಿ, ಅಮುಷ್ಮೈ = ಈ ತಮ್ಮನಿಗೆ, ದದೌ = ಕೊಟ್ಟರು.

ಕೆಲವು ಮುನಿಗಳು ನಾಲ್ಕು ದಿಕ್ಕಿನಲ್ಲಿ ಅಗ್ನಿಯನ್ನು ಉರಿಸಿ ಅವುಗಳ ಮಧ್ಯದಲ್ಲಿದ್ದು ಮೇಲೆ ಸೂರ್ಯನನ್ನು ದಿಟ್ಟಿಸಿ ನೋಡುತ್ತಾ ತಪಸ್ಸು ಮಾಡುತ್ತಾರೆ. ಇದೇ ಪಂಚಾಗ್ನಿ ತಪಸ್ಸು. ಇಂತಹ ಮಹಾತಪಸ್ವಿಗಳು ಅರಿಯದ ಓಂಕಾರರಹಸ್ಯವನ್ನು, ಚತುರ್ಮುಖಬ್ರಹ್ಮಸಮಾನರಾದ ಮಧ್ವಾಚಾರ್ಯರು ತನ್ನ ತಮ್ಮನಿಗೆ ರಹಸ್ಯದಲ್ಲಿ ಉಪದೇಶಿಸಿದರು.

ಬ್ರಹ್ಮಣಾ ಸಮಃ, ಪಂಚಸು ತಪಃ ಯೇಷಾಂ ತೇ, ತಪಃ ಏಷಾಂ ಅಸ್ತೀತಿ ತಪಸ್ವಿನಃ.

ಅವರಿಗೆ ವಿಷ್ಣುತೀರ್ಥರೆಂಬ ಹೆಸರನ್ನಿಟ್ಟರು—

ಪ್ರೇಮಾಮೃತಪ್ರಸನ್ನಾಸ್ಯಸ್ಮಿತಾಂಗಾಪಾಂಗಪೂರ್ವಕಂ ।
ಶ್ರೀವಿಷ್ಣುತೀರ್ಥನಾಮಾಸ್ಮೈ ಪ್ರೀತಿತೀರ್ಥಃಪ್ರದತ್ತವಾನ್ ॥

ಪ್ರೀತಿತೀರ್ಥಃ ಪ್ರೇಮಾಮೃತಪ್ರಸನ್ನಾಸ್ಯಸ್ಮಿತಾಂಗಾಪಾಂಗ-ಪೂರ್ವಕಂ ಅಸ್ಮೈ ಶ್ರೀವಿಷ್ಣುತೀರ್ಥನಾಮ ಪ್ರದತ್ತವಾನ್. ॥ ೯೮ ॥

ಪ್ರೀತಿತೀರ್ಥಃ = ಆನಂದತೀರ್ಥರು, ಪ್ರೇಮಾಮೃತ = ಪ್ರೀತಿಯೆಂಬ ಅಮೃತದಿಂದ, ಪ್ರಸನ್ನಾಸ್ಯ = ಸಂತೋಷದಿಂದ ಕೂಡಿದ ಮುಖವೂ, ಸ್ಮಿತಾಂಗ = ಮಂದಹಾಸವೆಂಬ ಸಹಕಾರಿಯಿಂದ ಕೂಡಿದ, ಅಪಾಂಗ-ಪೂರ್ವಕಂ = ಕಡೆಗಣ್ಣು ಇವೆರಡೂ ಮೊದಲಾಗಿ ಉಳ್ಳ ಹಾಗೆ, ಅಸ್ಮೈ = ಈ ತಮ್ಮನಿಗೆ, ಶ್ರೀವಿಷ್ಣುತೀರ್ಥನಾಮ = ಶ್ರೀವಿಷ್ಣುತೀರ್ಥರೆಂಬ ಹೆಸರನ್ನು, ಪ್ರದತ್ತವಾನ್ = ಕೊಟ್ಟರು.

ಆನಂದತೀರ್ಥರು ತಮ್ಮನಲ್ಲಿರುವ ಪ್ರೀತಿಯಿಂದ ಪ್ರಸನ್ನಮುಖರಾಗಿದ್ದರು. ಅವರು ಮುಗುಳುನಗುತ್ತಾ ಪ್ರೀತಿಪೂರ್ಣವಾದ ಕಡೆಗಣ್ಣಿನಿಂದ ತಮ್ಮನನ್ನು ನೋಡುತ್ತಾ ಅವರಿಗೆ ವಿಷ್ಣುತೀರ್ಥ ಎಂಬ ಯತ್ಯಾಶ್ರಮದ ಹೆಸರನ್ನಿಟ್ಟರು.

Rarest Archiver

ಪ್ರೇಮ ಏವ ಅಮೃತಂ, ಪ್ರೇಮಾಮೃತೇನ ಪ್ರಸನ್ನಂ, ಪ್ರೇಮಾಮೃತಪ್ರಸನ್ನಂ ಚ ತತ್ ಆಸ್ಯಂ ಚ, ಸ್ಮಿತಂ ಏವ ಅಂಗಂ ಯಸ್ಯ ಸಃ, ಸ್ಮಿತಾಂಗಶ್ಚಾಸೌ ಅಪಾಂಗಶ್ಚ, ಪ್ರೇಮಾಮೃತಪ್ರಸನ್ನಾಸ್ಯಂ ಚ ಸ್ಮಿತಾಂಗಾಪಾಂಗಶ್ಚ, ಪ್ರೇಮಾ....ಪಾಂಗೌ ಪೂರ್ವೌ ಯಸ್ಮಿನ್ ಕರ್ಮಣಿ ತದ್ಯಥಾಭವತಿ ತಥಾ; ಶ್ರೀವಿಷ್ಣುತೀರ್ಥ ಇತಿ ನಾಮ; ಪ್ರೀತಿಃ, (ಪ್ರೀತಿಕರಂ) ತೀರ್ಥಂ ಯಸ್ಯ ಸಃ;

ಶ್ರೀವಿಷ್ಣುತೀರ್ಥರ ಸನ್ಯಾಸಧರ್ಮಾಚರಣವು ಹೀಗಿತ್ತು —

ಶ್ರವಣೇನಾನುವಾದೇನ ಮನನೇನಾವ್ಯಥಾಕರೋತ್ ।
ಕಾಲಂ ವೇದಾಂತಶಾಸ್ತ್ರಸ್ಯ ವೇದಾಂತಗುರುಸೋದರಃ ॥೯೯॥

ವೇದಾಂತಗುರುಸೋದರಃ (ಸಃ) ವೇದಾಂತಶಾಸ್ತ್ರಸ್ಯ ಶ್ರವಣೇನ ಅನುವಾದೇನ ಮನನೇನ ಕಾಲಂ ಅವ್ಯಥಾ ಅಕರೋತ್.

ವೇದಾಂತಗುರುಸೋದರಃ (ಸಃ) = ವೇದಾಂತಾಚಾರ್ಯರಾದ ಶ್ರೀಮಧ್ವರ ತಮ್ಮಂದಿರಾದ ಆ ವಿಷ್ಣುತೀರ್ಥರು, ವೇದಾಂತಶಾಸ್ತ್ರಸ್ಯ = ಉಪನಿಷತ್ತು, ಗೀತಾ, ಬ್ರಹ್ಮಸೂತ್ರ ಇವುಗಳ ವ್ಯಾಖ್ಯಾನದ, ಶ್ರವಣೇನ = ಶ್ರವಣದಿಂದ (ಕೇಳುವಿಕೆಯಿಂದ), ಅನುವಾದೇನ = ಕೇಳಿದ್ದನ್ನು ಪುನಃ ಹೇಳುವುದರಿಂದ, ಮನನೇನ = ಯುಕ್ತಿಪೂರ್ವಕವಾಗಿ ಆ ವಿಷಯಗಳನ್ನು ಮನಸ್ಸಿನಲ್ಲಿ ಚಿಂತಿಸುವುದರಿಂದ, ಕಾಲಂ = ಸಮಯವನ್ನು, ಅವ್ಯಥಾ ಅಕರೋತ್ = ಸಫಲವಾಗಿ ಮಾಡಿಕೊಂಡರು.

ಶ್ರೀಮಧ್ವಾಚಾರ್ಯರ ತಮ್ಮಂದಿರಾದ ಆ ವಿಷ್ಣುತೀರ್ಥರು ಉಪನಿಷದ್ಭಾಷ್ಯಾದಿಗ್ರಂಥಗಳ ಶ್ರವಣ, ಕೇಳಿದ್ದನ್ನು ಪುನಃ ಹೇಳುವುದು, ಮನಸ್ಸಿನಲ್ಲಿ ಯುಕ್ತಿಗಳ ಅನುಸಂಧಾನ ಮಾಡುತ್ತಾ ಚಿಂತಿಸುವುದು ಇವುಗಳಿಂದ ತನ್ನ ಸಮಯವನ್ನು ಸ್ವಲ್ಪವೂ ಹಾಳುಮಾಡದೆ ಸಾರ್ಥಕಗೊಳಿಸಿದರು.

ವೇದಾಂತ ಇತಿ ಶಾಸ್ತ್ರಂ ತಸ್ಯ, ವೇದಾಂತಾನಾಂ, ಗುರುಃ ವೇದಾಂತ ಗುರೋಃ ಸೋದರಃ.

Rarest Archiver

ಅಕರೋತ್ ಅಕುರತಾಂ ಅಕುರ್ವನ್ ಕೃಧಾತು ಪರ. ಲಟ್

ತನ್ನ ಗುಣಗಳಿಂದ ಶ್ರೀವಿಷ್ಣುತೀರ್ಥರು ಆಚಾರ್ಯರ ದಯೆಯನ್ನು ಸಂಪಾದಿಸಿದರು—

ಸ ದಾಂತಿಭಕ್ತಿಮಾಧುರ್ಯಪರಿಚರ್ಯಾದಿಮೇದುರೈಃ |
ಮಹಾವಿಟಪಿನಂ ಚಕ್ರೇ ಗುರೋಃ ಸ್ವಸ್ಥಂ ಕೃಪಾಂಕುರಂ || ೧೦೦ ||

ಸಃ ಸ್ವಸ್ಥಂ ಗುರೋಃ ಕೃಪಾಂಕುರಂ ದಾಂತಿಭಕ್ತಿಮಾಧುರ್ಯಪರಿ–ಚರ್ಯಾದಿಮೇದುರೈಃ ಮಹಾವಿಟಪಿನಂ ಚಕ್ರೇ.

ಸಃ = ಆ ವಿಷ್ಣುತೀರ್ಥರು, ಸ್ವಸ್ಥಂ=ತನ್ನಲ್ಲಿರುವ, ಗುರೋಃ ಕೃಪಾಂ–ಕುರಂ = ಗುರುಗಳಾದ ಶ್ರೀಮಧ್ವಾಚಾರ್ಯರ ದಯೆಯೆಂಬ ಮೊಳಕೆಯನ್ನು, ದಾಂತಿ= ಇಂದ್ರಿಯನಿಗ್ರಹ, ಭಕ್ತಿ=ಗುರುವಿನಲ್ಲಿರುವ ಸ್ನೇಹ, ಮಾಧುರ್ಯ= ಮಾತುಮನಸ್ಸುಗಳಲ್ಲಿರುವ ಇಂಪು, ಪರಿಚರ್ಯಾ = ಸೇವೆ, ಆದಿ = ಮೊದಲಾಗಿ ಉಳ್ಳ, ಮೇದುರೈಃ = ಬೆಳೆಯಿಸುವ ಸಾಮಗ್ರಿಗಳಿಂದ, ಮಹಾವಿಟಪಿನಂ ಚಕ್ರೇ = ದೊಡ್ಡಮರವನ್ನಾಗಿ ಮಾಡಿದರು.

ರೈತನು ಹೊಲದಲ್ಲಿ ಬೀಜವನ್ನು ಬಿತ್ತಿ, ಮೊಳಕೆ ಬರಿಸಿ ನೀರು, ಗೊಬ್ಬರ, ಮೃದುವಾದ ಮಣ್ಣು, ಮುಂತಾದವುಗಳನ್ನು ಹಾಕಿ ದೊಡ್ಡಮರವನ್ನು ಬೆಳೆಸುತ್ತಾನೆ. ಅದರಂತೆ ಶ್ರೀವಿಷ್ಣುತೀರ್ಥರು ತನ್ನಲ್ಲಿ ಅಣ್ಣಂದಿರಾದ ಆನಂದತೀರ್ಥರು ಮಾಡಿದ ಕೃಪೆಯನ್ನು ಇಂದ್ರಿಯನಿಗ್ರಹ, ಭಕ್ತಿ, ಸವಿನುಡಿ, ಪ್ರಸನ್ನವಾದ ಮನಸ್ಸು, ಸೇವೆ ಇತ್ಯಾದಿಗಳಿಂದ ಹೆಚ್ಚು ಮಾಡಿದರು. ತನ್ನಲ್ಲಿ ಆಚಾರ್ಯರು ಪೂರ್ಣಾನುಗ್ರಹಮಾಡುವಂತೆ ಸಾಧನಮಾರ್ಗವನ್ನು ನಿರಂತರವಾಗಿ ಅನುಸರಿಸಿದರು, ಬೆಳೆಸಿದರು.

ದಾಂತಿಶ್ಚ ಭಕ್ತಿಶ್ಚ (ಮಧುರಸ್ಯ ಭಾವಃ ಮಾಧುರ್ಯಂ) ಮಾಧುರ್ಯಂ ಚ,ಪರಿಚರ್ಯಾ ಚ, ದಾಂತಿಭಕ್ತಿಮಾಧುರ್ಯಪರಿಚರ್ಯಾಃ ಆದಯಃ ಯೇಷಾಂ ತಾನಿ, ದಾಂತಿ....ಆದೀನಿ ಚ ತಾನಿ ಮೇದುರಾಣಿ ಚ ತೈಃ, ವಿಟಪಾಃ ಅಸ್ಯ ಸಂತೀತಿ ವಿಟಪೀ (ನ್) ಮಹಾಂಶ್ಚ ಅಸೌ ವಿಟಪೀ ಚ ತಂ, ಸ್ವಸ್ಮಿನ್ ತಿಷ್ಠತೀತಿ ಸ್ವಸ್ಥಃ ತಂ, ಕೃಪಾಯಾಃ ಅಂಕುರಃ ತಂ.

Rarest Archiver

ಶ್ರೀವಿಷ್ಣುತೀರ್ಥರ ಮಹಿಮೆಯ ವರ್ಣನೆಯನ್ನು ಆರಂಭಿಸುತ್ತಾರೆ—

ಅನಂತಮತಿಕಾರುಣ್ಯಕಲ್ಪದ್ರುಮವತೋ ಜನ್ಯೈಃ ।
ಅವರ್ಣ್ಯೋ ಮಹಿಮಾ ತಸ್ಯ ಲೌಲ್ಯಾತ್ ಸಂವರ್ಣ್ಯತೇ ಮನಾಕ್ ॥

ಅನಂತಮತಿಕಾರುಣ್ಯಕಲ್ಪದ್ರುಮವತಃ ಜನ್ಯೈಃ ಅವರ್ಣ್ಯಃ ತಸ್ಯ ಮಹಿಮಾ ಲೌಲ್ಯಾತ್ ಮನಾಕ್ ಸಂವರ್ಣ್ಯತೇ. ॥ ೧೦೧ ॥

ಅನಂತಮತಿ = ಶ್ರೀಪೂರ್ಣಪ್ರಜ್ಞರ, ಕಾರುಣ್ಯಕಲ್ಪದ್ರುಮವತಃ = ದಯೆಯೆಂಬ ಕಲ್ಪವೃಕ್ಷವುಳ್ಳ, ಜನ್ಯೈಃ ಅವರ್ಣ್ಯಃ = ಸಾಧಾರಣಜನರಿಂದ ವರ್ಣಿಸಲಸಾಧ್ಯವಾದ, ತಸ್ಯ ಮಹಿಮಾ = ಆ ವಿಷ್ಣುತೀರ್ಥರ ಮಾಹಾತ್ಮ್ಯೆಯು, ಲೌಲ್ಯಾತ್ = ಆಸೆಯಿಂದ, ಮನಾಕ್ ಸಂವರ್ಣ್ಯತೇ = ಸ್ವಲ್ಪವೇ ವರ್ಣಿಸಲ್ಪಡುತ್ತದೆ.

ಶ್ರೀಪೂರ್ಣಪ್ರಜ್ಞರ ಕೃಪೆಯೆಂಬ ಕಲ್ಪವೃಕ್ಷವೇ ಶ್ರೀವಿಷ್ಣುತೀರ್ಥರ ವಶವಾಗಿತ್ತು. ಇಂತಹ ಮಹಾನುಭಾವರ ಮಹಿಮೆಯನ್ನು ಸಾಧಾರಣರಿಗೆ ವರ್ಣಿಸಲು ಸಾಧ್ಯವಿಲ್ಲ. ಆದರೂ ನಾನೂ ವರ್ಣಿಸಬೇಕೆಂಬ ಚಪಲತೆಯಿಂದ ಉತ್ಕಂಠೆಯಿಂದ ಸ್ವಲ್ಪವಾಗಿಯೇ ವರ್ಣಿಸುತ್ತೇನೆ, ಎಂದು ಪಂಡಿತಾಚಾರ್ಯರು ಹೇಳುತ್ತಾರೆ.

ಅನಂತಾ ಮತಿಃ ಯಸ್ಯ ಸಃ, ಕರುಣೈವ ಕಾರುಣ್ಯಂ, ಅನಂತಮತೇಃ ಕಾರುಣ್ಯಂ, ಅನಂತಮತಿಕಾರುಣ್ಯಮೇವ ಕಲ್ಪದ್ರುಮಃ, ಅನಂತ-ಮತಿಕಾರುಣ್ಯಕಲ್ಪದ್ರುಮಃ ಅಸ್ಯ ಅಸ್ತೀತಿ ಅನಂತಮತಿಕಾರುಣ್ಯಕಲ್ಪದ್ರು-ಮವಾನ್ ತಸ್ಯ, ವರ್ಣಯಿತುಂ ಅಶಕ್ಯಃ ಅವರ್ಣ್ಯಃ, ಲೋಲಸ್ಯ ಭಾವಃ ಲೌಲ್ಯಂ ತಸ್ಮಾತ್.

ಸಂ + ವರ್ಣ್ಯತೇ ವರ್ಣ್ಯೇತೇ ವರ್ಣ್ಯಂತೇ— ವರ್ಣಧಾತು ಕರ್ಮಣಿ ಲಟ್. ಜನ್ಯೈಃ ಅವರ್ಣ್ಯಂ ತಸ್ಯ ಮಹಿಮಾನಂ ಅಹಂ ಲೌಲ್ಯಾತ್ ಮನಾಕ್ ಸಂವರ್ಣಯಾಮಿ ಕರ್ತರಿ.

ಶ್ರೀವಿಷ್ಣುತೀರ್ಥರು ಶ್ರೀಮಧ್ವಶಿಷ್ಯರಲ್ಲಿ ಮೊದಲನೆಯವರು—

Rarest Archiver

ಚತುರೋಽಸೌ ಪ್ರವಚನೇ ಮನುಸಂಸಿದ್ಧಿಮಾನ್ ಮನಃ ।
ಸಂಖ್ಯಾ ಮಾಂ (ಮಾ) ಪೂರಣೀ ಮಾಗಾನ್ಮಧ್ವದಾಸಮಿತಿ ವ್ಯಧಾತ್॥

ಪ್ರವಚನೇ ಚತುರಃ ಮನುಸಂಸಿದ್ಧಿಮಾನ್ ಅಸೌ ಮಧ್ವದಾಸಂ ಮಾಂ ಪೂರಣೀ ಸಂಖ್ಯಾ ಮಾಗಾತ್ ಇತಿ ಮನಃ ವ್ಯಧಾತ್. ॥ ೧೦೨ ॥

ಪ್ರವಚನೇ ಚತುರಃ = ಮಧ್ವಶಾಸ್ತ್ರವ್ಯಾಖ್ಯಾನದಲ್ಲಿ ಕುಶಲರಾದ, ಮನುಸಂಸಿದ್ಧಿಮಾನ್ ಅಸೌ = ಪ್ರಣವಾದಿಮಂತ್ರಗಳ (ಜಪದ) ಫಲಸಿದ್ಧಿಯುಳ್ಳ, ಈ ವಿಷ್ಣುತೀರ್ಥರು, ಮಧ್ವದಾಸಂ ಮಾಂ = ಮಧ್ವಾಚಾರ್ಯರ ಸೇವಕನಾದ ನನ್ನನ್ನು, ಪೂರಣೀ ಸಂಖ್ಯಾ=ಪೂರ್ಣಗೊಳಿಸುವ ಸಂಖ್ಯೆಯು, (ದ್ವಿತೀಯ = ಎರಡನೆಯವನು, ತೃತೀಯ = ಮೂರನೆಯವನು, ಇತ್ಯಾದಿ ಪೂರಣ ಪ್ರತ್ಯಯಾಂತಸಂಖ್ಯೆಯು) ಮಾಗಾತ್ = ಹೊಂದದಿರಲಿ, ಇತಿ ಮನಃ ವ್ಯಧ್ಯಾತ್ = ಎಂದು ಮನಸ್ಸನ್ನು ಮಾಡಿದರು (ನಿರ್ಧರಿಸಿದರು).

ಈ ವಿಷ್ಣುತೀರ್ಥರು ಶ್ರೀಮಧ್ವಶಾಸ್ತ್ರಪ್ರವಚನದಲ್ಲಿ ಅತ್ಯಂತ ಚತುರರಾಗಿದ್ದರು. ಅವರು ಪ್ರಣವ, ಅಷ್ಟಾಕ್ಷರೀ; ಕೃಷ್ಣಷಡಕ್ಷರೀ ಮುಂತಾದ ಮಂತ್ರಗಳನ್ನು ಜಪಿಸಿ ಆ ಮಂತ್ರಗಳ ಸಿದ್ಧಿಯನ್ನು ಪಡೆದು ಇಷ್ಟಾರ್ಥಗಳನ್ನು ಕೈಗೂಡಿಸಿಕೊಂಡಿದ್ದರು. ಅವರು—'ಈ ವಿಷ್ಣುತೀರ್ಥರು ಶ್ರೀಮಧ್ವಾಚಾರ್ಯರ ಶಿಷ್ಯರಲ್ಲಿ ದ್ವಿತೀಯ, ಅಥವಾ ತೃತೀಯ (ಎರಡನೆಯವನು, ಮೂರನೆಯವನು) ಇತ್ಯಾದಿಯಾಗಿ ಪೂರಣಪ್ರತ್ಯಯಾಂತಸಂಖ್ಯೆಯು ಶಬ್ದದಿಂದ ನನ್ನನ್ನು ವ್ಯವಹರಿಸಬಾರದು. 'ಪ್ರಥಮ' ಮೊದಲನೆಯವನು (ಶಿಷ್ಯಶ್ರೇಷ್ಠನು) ಎಂಬ ಶಬ್ದವೇ ನನಗಿರಬೇಕು ಎಂದು ನಿರ್ಧರಿಸಿದರು. (ಸಂಸ್ಕೃತಭಾಷೆಯಲ್ಲಿ ಎರಡನೆಯವನು ಎಂಬ ಅರ್ಥದಲ್ಲಿ ದ್ವಿತೀಯ ಎಂಬ ಶಬ್ದವನ್ನು ಪ್ರಯೋಗಿಸುತ್ತಾರೆ. ದ್ವಿಶಬ್ದಕ್ಕೆ ದ್ವೇಸ್ತೀಯಃ (ಪಾ. ಸೂ. 4 – 2 – 48) ಎಂಬ ಸೂತ್ರದಿಂದ ತೀಯಪ್ರತ್ಯಯವು ಬರುತ್ತದೆ. ಹೀಗೆಯೇ ತೃತೀಯ, ಚತುರ್ಥ, ಪಂಚಮ ಇತ್ಯಾದಿಶಬ್ದಗಳಿಗೆ, 'ದ್ವಯೋಃ ಪೂರಣಃ' ಎರಡನೆ ಸ್ಥಾನವನ್ನು ಭರ್ತಿಮಾಡುವವನು ಇತ್ಯಾದಿ ಅರ್ಥದಲ್ಲಿ ತೀಯ, ಮಟ್ ಮೊದಲಾದ ಪ್ರತ್ಯಯಗಳು ಬರುತ್ತವೆ. ಆದರೆ ಏಕ ಎಂಬ ಶಬ್ದಕ್ಕೆ ಒಂದನೇ ಸ್ಥಾನವನ್ನು ಭರ್ತಿಮಾಡುವವನು ಎಂಬ ಅರ್ಥದಲ್ಲಿ

Rarest Archiver

ಪೂರಣಪ್ರತ್ಯಯಬರುವುದಿಲ್ಲ. ಒಂದನೇಯವನು (ಶ್ರೇಷ್ಠ) ಎಂಬ ಅರ್ಥದಲ್ಲಿ 'ಪ್ರಥತೇ ಇತಿ ಪ್ರಥಮಃ', ಪ್ರಸಿದ್ಧನಾದವನು ಎಂಬ ಅರ್ಥದಲ್ಲಿ **ಪ್ರಥೇರಮಚ್** (ಉಣಾದಿ ೫-೬೮) ಎಂಬ ಸೂತ್ರದಿಂದ ಅಮಚ್ ಪ್ರತ್ಯಯ ಬಂದು ಪ್ರಥಮಃ ಎಂದು ಆಗುತ್ತದೆ. ಇಲ್ಲಿ ವಿಷ್ಣುತೀರ್ಥರೂ ನಾನು ಪ್ರಥಮನಾಗಬೇಕೆಂದು ನಿರ್ಧರಿಸಿದರು ಎಂದು ಭಾವ. ಸಂಖ್ಯಾರ್ಥಕ = Cardinals : ಸಂಖ್ಯೇಯಾರ್ಥಕ = Ordinals. ಏಕಃ ಪ್ರಥಮಃ ದ್ವೌ ದ್ವಿತೀಯಃ, ಇಲ್ಲಿ ಪ್ರಥಮಶಬ್ದವನ್ನು ಬಿಟ್ಟು ಉಳಿದ ಎಲ್ಲಾ ಸಂಖ್ಯೇಯವಾಚಕಶಬ್ದಗಳು ಪೂರಣಪ್ರತ್ಯಯಾಂತಗಳು. ಇಲ್ಲಿ ಪರ್ಯಾಯೋಕ್ತ ಮತ್ತು ಪ್ರಮಾಣ ಎಂಬ ಎರಡು ಅಲಂಕಾರಗಳು).

ಮನೋಃ ಸಂಸಿದ್ಧಿಃ, ಮನುಸಂಸಿದ್ಧಿಃ ಅಸ್ಯ ಅಸ್ತೀತಿ ಮನುಸಂಸಿದ್ಧಿಮಾನ್, ಮಧ್ವಸ್ಯ ದಾಸಃ ತಂ.

ಮಾಗಾತ್, ಅಗಾತ್ ಅಗಾತಾಂ ಅಗುಃ ಇಣ್ ಗತೌ ಲುಙ್, ಮಾಙ್, ಇದ್ದಾಗ ಅಡಾಗಮನಿಷೇಧ.

ವಿಷ್ಣುತೀರ್ಥರ ತೀರ್ಥಯಾತ್ರೆ—

ದಿಶಂ ಪ್ರಯಾತಂ (ಂತಂ) ಶಶಿನಶ್ಚರಂತಂ ಭುವ್ಯಶೋಧಯತ್ ।
ತೀರ್ಥಕಂ ವಿಷ್ಣುತೀರ್ಥಂ ಚ ವಿಷ್ಣುತೀರ್ಥಶ್ಚ ತೀರ್ಥಕಂ ॥ ೧೦೩ ॥

ಶಶಿನಃ ದಿಶಂ ಪ್ರಯಾತಂ ಭುವಿ ಚರಂತಂ ವಿಷ್ಣುತೀರ್ಥಂ ತೀರ್ಥಕಂ ಚ, ವಿಷ್ಣುತೀರ್ಥಃ ತೀರ್ಥಕಂ ಚ ಅಶೋಧಯತ್.

ಶಶಿನಃ ದಿಶಂ ಪ್ರಯಾತಂ (ಪ್ರಯಾಂತಂ) = ಚಂದ್ರನ ದಿಕ್ಕನ್ನು ಕುರಿತು (ಉತ್ತರದಿಕ್ಕಿಗೆ) ಹೋಗಿರುವ (ಹೋಗುತ್ತಿರುವ), ಭುವಿ ಚರಂತಂ = ಭೂಮಿಯಲ್ಲಿ ಸಂಚಾರಮಾಡುತ್ತಿರುವ, ವಿಷ್ಣುತೀರ್ಥಂ = ವಿಷ್ಣುತೀರ್ಥರನ್ನು, ತೀರ್ಥಕಂ ಚ = ಗಂಗಾದಿಪವಿತ್ರಜಲವೂ, ವಿಷ್ಣುತೀರ್ಥಃ ತೀರ್ಥಕಂ ಚ = ವಿಷ್ಣುತೀರ್ಥರು ಗಂಗಾದಿತೀರ್ಥಗಳ ಜಲವನ್ನೂ, ಅಶೋಧಯತ್ = ಪವಿತ್ರೀಕರಿಸಿದರು.

ವಿಷ್ಣುತೀರ್ಥರು ಭೂಸಂಚಾರಮಾಡುತ್ತಾ ಉತ್ತರದಿಕ್ಕಿನ ಯಾತ್ರೆಯನ್ನೂ ಮಾಡಿದರು. ಈ ಯಾತ್ರೆಗಳಲ್ಲೆಲ್ಲಾ ಶ್ರೀವಿಷ್ಣುತೀರ್ಥರನ್ನು

Rarest Archiver

ಗಂಗಾದಿತೀರ್ಥಗಳು ಪವಿತ್ರೀಕರಿಸಿದುವು. ವಿಷ್ಣುತೀರ್ಥರು ಗಂಗಾದಿ ತೀರ್ಥಗಳನ್ನು ಪವಿತ್ರೀಕರಿಸಿದರು. ಗಂಗಾದಿತೀರ್ಥಸ್ನಾನದಿಂದ ವಿಷ್ಣು ತೀರ್ಥರು ಪವಿತ್ರರಾದರು. ತನ್ನಲ್ಲಿರುವ ಶ್ರೀಹರಿಯ ಸನ್ನಿಧಾನದಿಂದ ವಿಷ್ಣುತೀರ್ಥರೂ ಗಂಗಾದಿತೀರ್ಥಗಳನ್ನು ಪವಿತ್ರೀಕರಿಸಿದರು ಎಂದು ಭಾವ. (ಅನ್ಯೋನ್ಯಾಲಂಕಾರಃ)

ತೀರ್ಥಸ್ಯ ಕಂ ; ಕಂ ಶಿರೋಽಂಬುನೋಃ—ಅಮರ. ಕಂ (ನಪುಂ) = ತಲೆ, ನೀರು.

ಅಶೋಧಯತ್ ಅಶೋಧಯತಾಂ ಅಶೋಧಯನ್ ಇತ್ಯಾದಿ. ಶುಧ ಶೌಚೇ ಅಕ. ಅನಿಟ್ ಪರ. ಣಿಜಂತ, ಸಕ. ಲಙ್.

ವಿಷ್ಣುತೀರ್ಥರ ತಪೋನಿಷ್ಠೆಯನ್ನು ಹನ್ನೊಂದು ಶ್ಲೋಕಗಳಿಂದ ವರ್ಣಿಸುತ್ತಾರೆ—

ಅಕಾಮಾನಾಮನೇಕೇಷಾಂ ಸಿದ್ಧಿಭೂಮಿಂ ತಪಸ್ವಿನಾಂ ।
ತಿರೋಹಿತಾತ್ಮಾ ಪ್ರಾಪಾಸೌ ಹರಿಶ್ಚಂದ್ರಮಹೀಧರಂ ॥ ೧೦೪ ॥

ಅಸೌ ಅಕಾಮಾನಾಂ ಅನೇಕೇಷಾಂ ತಪಸ್ವಿನಾಂ ಸಿದ್ಧಿಭೂಮಿಂ ಹರಿಶ್ಚಂದ್ರಮಹೀಧರಂ ತಿರೋಹಿತಾತ್ಮಾ ಸನ್ ಪ್ರಾಪ.

ಅಸೌ = ಈ ವಿಷ್ಣುತೀರ್ಥರು, ಅಕಾಮಾನಾಂ = ಫಲಾಪೇಕ್ಷೆಇಲ್ಲದ, ಅನೇಕೇಷಾಂ ತಪಸ್ವಿನಾಂ = ಅನೇಕಮುನಿಗಳ, ಸಿದ್ಧಿಭೂಮಿಂ = ತಪಸ್ಸಿದ್ಧಿಯ ಸ್ಥಳವಾದ, ಹರಿಶ್ಚಂದ್ರಮಹೀಧರಂ = ಹರಿಶ್ಚಂದ್ರಪರ್ವತವನ್ನು, ತಿರೋಹಿತಾತ್ಮಾ ಸನ್ ಪ್ರಾಪ = ಜನರಿಗೆ ತೋರದಸ್ವರೂಪವುಳ್ಳವರಾಗಿ ತಲುಪಿದರು.

ಅನೇಕ ಮಹಾಮುನಿಗಳು ನಿಷ್ಕಾಮರಾಗಿ ತಪಸ್ಸನ್ನು ಮಾಡಿ ಫಲವನ್ನು ಹೊಂದಿದ್ದ ಹರಿಶ್ಚಂದ್ರಪರ್ವತವನ್ನು (ಸಹ್ಯಪರ್ವತದ ಒಂದು ಶಿಖರವನ್ನು) ವಿಷ್ಣುತೀರ್ಥರೂ ಅದೃಶ್ಯರಾಗಿ ಸೇರಿದರು.

ನ ವಿದ್ಯತೇ ಕಾಮಃ ಯೇಷಾಂ ತೇ, ತೇಷಾಂ, ನ ಏಕೇ ಅನೇಕೇ ತೇಷಾಂ, ಸಿದ್ಧೇಃ ಭೂಮಿಃ ತಾಂ, ತಿರೋಹಿತಃ ಆತ್ಮಾ ಯಸ್ಯ ಸಃ, ಹರಿಶ್ಚಂದ್ರ ಇತಿ ಮಹೀಧರಃ ತಂ ;

Rarest Archiver

ದ್ವಂದ್ವದುಃಖಾನಲೇ ವೀರೋ ಮಾತ್ಸರ್ಯೇಣ ವಿಮತ್ಸರಃ ।
ತತ್ಯಾಜ ಮತ್ವಾ ತಸ್ಯಾಸಾವಶನಾದೀಂಧನಾಯಿತಂ ॥ ೧೦೫ ॥

ವೀರಃ ವಿಮತ್ಸರಃ ಅಸೌ ದ್ವಂದ್ವದುಃಖಾನಲೇ ಮಾತ್ಸರ್ಯೇಣ, ತಸ್ಯ ಅಶನಾದಿ ಇಂಧನಾಯಿತಂ ಮತ್ವಾ ತತ್ಯಾಜ.

ವೀರಃ = ಆರಂಭಿಸಿದಕಾರ್ಯವನ್ನು ಕೊನೆಗೊಳಿಸುವ ಸಾಮರ್ಥ್ಯವುಳ್ಳ, ವಿಮತ್ಸರಃ = ಹೊಟ್ಟೆಕಿಚ್ಚಿಲ್ಲದ, ಅಸೌ = ಈ ವಿಷ್ಣುತೀರ್ಥರು, ದ್ವಂದ್ವದುಃಖಾನಲೇ = ಶೀತ, ಉಷ್ಣ ಇವುಗಳಿಂದ ಉಂಟಾಗುವ ದುಃಖವೆಂಬ ಬೆಂಕಿಯ ವಿಷಯದಲ್ಲಿ, ಮಾತ್ಸರ್ಯೇಣ = ಅಸೂಯೆಯಿಂದ, ತಸ್ಯ = ಆ ಶೀತೋಷ್ಣಾದಿಗಳಿಗೆ, ಅಶನಾದಿ = ಊಟ, ನೀರುಕುಡಿಯುವುದು ಮುಂತಾದುದು. ಇಂಧನಾಯಿತಂ ಮತ್ವಾ = ಕಟ್ಟಿಗೆಯಂತಿರುವುದು ಎಂದು ತಿಳಿದು, ತತ್ಯಾಜ = ಬಿಟ್ಟರು.

ಶ್ರೀವಿಷ್ಣುತೀರ್ಥರು ತಾನು ಆರಂಭಿಸಿದ ಕಾರ್ಯವನ್ನು ಪೂರೈಸುವುದರಲ್ಲಿ ಸಮರ್ಥರು ಅವರಿಗೆ ಯಾರಲ್ಲಿಯೂ ಅಸೂಯೆಯಿರಲಿಲ್ಲ. ಆದರೂ, ಆಹಾರ ಪಾನೀಯ ಮುಂತಾದುವುಗಳು, ಬೆಂಕಿಯನ್ನು ಹೆಚ್ಚಿಸಲು ಕಟ್ಟಿಗೆಯು ಕಾರಣವಾಗುವಂತೆ, ಶೀತ ಉಷ್ಣ ಮುಂತಾದವುಗಳಿಂದ ಉಂಟಾಗುವ ದುಃಖವನ್ನು ಹೆಚ್ಚಿಸಲು ಕಾರಣವಾಗುತ್ತವೆ ಎಂದು ತಿಳಿದು, ಆಹಾರ ನೀರು ಮುಂತಾದುವುಗಳನ್ನು ದ್ವೇಷಿಸಿ ಅವುಗಳನ್ನು ಒಂದೊಂದಾಗಿ ಬಿಡುತ್ತಾ ಬಂದರು. ಉಪವಾಸವ್ರತವನ್ನು ಕೈಗೊಂಡು ಶೀತೋಷ್ಣಾದಿದ್ವಂದ್ವಗಳನ್ನು ಸಹಿಸಿ ಕಾಮಕ್ರೋಧಾದಿ ಅರಿಷಡ್ವರ್ಗಗಳನ್ನು ಜಯಿಸಿದರು.

ದ್ವಂದ್ವೇನ ದುಃಖಂ ದ್ವಂದ್ವದುಃಖಂ, ದ್ವಂದ್ವದುಃಖಂ ಏವ ಅನಲಃ ದ್ವಂದ್ವದುಃಖಾನಲಃ, ಮತ್ಸರ ಏವ ಮಾತ್ಸರ್ಯಂ ತೇನ, ವಿಗತಃ ಮತ್ಸರಃ ಯಸ್ಮಾತ್ ಸಃ, ಅಶನಂ ಆದಿಃ ಯಸ್ಯ ತತ್, ಇಂಧನವತ್ ಆಚರಿತಂ, ಇಂಧನಾಯಿತಂ.

ತತ್ಯಾಜ ತತ್ಯಜತುಃ ತತ್ಯಜುಃ, ತತ್ಯಕ್ಥ ತತ್ಯಜಥುಃ ತತ್ಯಜ, ತತ್ಯಾಜ ತತ್ಯಜ ತತ್ಯಜಿವ ತತ್ಯಜಿಮ. ತ್ಯಜ ಹಾನೌ ಸಕ. ಅನಿ ಪರ. ಲಿಟ್.

Rarest Archiver

ಭಕ್ತೈರನುಗಿರಂ ನೀತಂ ಪ್ರಾರ್ಥಿತೋ ಯತಿಶೇಖರಃ ।
ಪಂಚಗವ್ಯಂ ಪಪೌ ಕಿಂಚಿತ್ ಪಂಚಮೇ ಪಂಚಮೇ ದಿನೇ ॥ ೧೦೬ ॥

ಯತಿಶೇಖರಃ ಭಕ್ತೈರನುಗಿರಂ ನೀತಂ ಪಂಚಗವ್ಯಂ ಪ್ರಾರ್ಥಿತಃ ಪಂಚಮೇ ಪಂಚಮೇ ದಿನೇ ಕಿಂಚಿತ್ ಪಪೌ.

ಯತಿಶೇಖರಃ = ಸಂನ್ಯಾಸಿಶ್ರೇಷ್ಠರಾದ ಶ್ರೀವಿಷ್ಣುತೀರ್ಥರು, ಭಕ್ತೈಃ = ಭಕ್ತರಿಂದ, ಅನುಗಿರಂ = ಬೆಟ್ಟದ ಹತ್ತಿರ, ನೀತಂ = ಒಯ್ಯಲ್ಪಟ್ಟ, ಪಂಚಗವ್ಯಂ = ಪಂಚಗವ್ಯವನ್ನು, ಪ್ರಾರ್ಥಿತಃ = ಪ್ರಾರ್ಥಿಸಲ್ಪಟ್ಟವರಾಗಿ, ಪಂಚಮೇ ಪಂಚಮೇ ದಿನೇ = ಐದನೆಯ ಐದನೆಯ ದಿನದಲ್ಲಿ, ಕಿಂಚಿತ್ ಪಪೌ = ಸ್ವಲ್ಪ ಕುಡಿದರು

ಯತಿಶ್ರೇಷ್ಠರಾದ ಶ್ರೀವಿಷ್ಣುತೀರ್ಥರು ಭಕ್ತರಾದ ಶಿಷ್ಯರು ಪರ್ವತದ ಸಮೀಪಕ್ಕೆ ತಂದಿದ್ದ ಪಂಚಗವ್ಯವನ್ನು, ಐದುದಿನಗಳಿಗೊಮ್ಮೆ ಸ್ವಲ್ಪವೇ ಕುಡಿದರು.

ಗಿರೇಃ ಸಮೀಪಂ ಅನುಗಿರಂ ಗಿರೇಶ್ಚ ಸೇನಕಸ್ಯ (೫-೪-೧೧೨) ಟಚ್ ವಿಕಲ್ಪ ಅನುಗಿರಿ ಎಂದೂ ರೂಪವಿದೆ. ಯತೀನಾಂ ಶೇಖರಃ, ಪಂಚಾನಾಂ ಗವ್ಯಾನಾಂ ಸಮಾಹಾರಃ ಪಂಚಗವ್ಯಂ ತತ್ (ದ್ವಿ ವಿ). ಗೋಮೂತ್ರ, ಗೋಮಯ, ಹಾಲು, ಮೊಸರು, ತುಪ್ಪ–ಇವುಗಳಿಗೆ ದರ್ಭೆಯ ನೀರನ್ನು ಸೇರಿಸಿದರೆ 'ಪಂಚಗವ್ಯ'–ವಾಗುತ್ತದೆ.

ಪಪೌ ಪಪತುಃ ಪಪುಃ, ಪಪಿಥ ಪಪಾಥ ಪಪಥುಃ ಪಪ, ಪಪೌ ಪಪಿವ ಪಪಿಮ. ಪಾ ಪಾನೇ ಲಿಟ್.

ಸ ತ್ಯಜನ್ ಸಾಹಸೀ ತಚ್ಚ ತಪಸ್ತೇಪೇಽತಿತಾಪಸಂ ।
ಬಿಲ್ವಪರ್ಣೈಃ ಕ್ಷಿತೌ ಪನ್ನೈಸ್ತೃಪ್ತಿಮಾನ್ ಸಲಿಲೈರಪಿ ॥೧೦೭॥

ಸಾಹಸೀ ಸಃ ತತ್ ಚ ತ್ಯಜನ್ ಕ್ಷಿತೌ ಪನ್ನೈಃ ಬಿಲ್ವಪರ್ಣೈಃ ಸಲಿಲೈಃ ಅಪಿ ತೃಪ್ತಿಮಾನ್ ಸನ್ ಅತಿತಾಪಸಂ ತಪಃ ತೇಪೇ.

ಸಾಹಸೀ ಸಃ = ಬಹಳವಾದ ಕಷ್ಟಸಹನಶಕ್ತಿಯುಳ್ಳ, (ಇಂದ್ರಿಯ ನಿಗ್ರಹವುಳ್ಳ) ಆ ವಿಷ್ಣುತೀರ್ಥರು, ತತ್ ಚ ತ್ಯಜನ್ ಸನ್ = ಆ ಪಂಚ

Rarest Archiver

ಗವ್ಯವನ್ನೂ ಬಿಟ್ಟವರಾಗಿ, ಕ್ಷಿತೌ ಪನ್ನೈಃ ಬಿಲ್ವ ಪರ್ಣೈಃ = ನೆಲದ ಮೇಲೆ ಬಿದ್ದಿದ್ದ ಬಿಲ್ವದ ಎಲೆಗಳಿಂದ, ಸಲಿಲೈರಪಿ = ನೀರಿನಿಂದಲೂ, ತೃಪ್ತಿಮಾನ್ ಸನ್ = ತೃಪ್ತಿ ಉಳ್ಳವರಾಗಿ, ಅತಿತಾಪಸಂ, ತಪಃ ತೇಪೇ = ಮುನಿಗಳನ್ನು ಮೀರಿದ ತಪಸ್ಸನ್ನು ಮಾಡಿದರು.

ತಾಪಸೇಭ್ಯಃ ನಿಷ್ಕ್ರಾಂತಂ ಅತಿತಾಪಸಂ, ಬಿಲ್ವಸ್ಯ ಪರ್ಣಾನಿ ತೈಃ, ತೃಪ್ತಿಃ ಅಸ್ಯ ಅಸ್ತೀತಿ,

ತೇಪೇ ತೇಪಾತೇ ತೇಪಿರೆ, ತಪ ಐಶ್ವರ್ಯೇ (ಸಂತಾಪೇ) ಲಿಟ್.

ಯಥೇಷ್ಟಮಧ್ಯಾಸ್ತ ಶಿಲಾಂ ಯಮೀ ಸುನಿಯಮೀ ಸತಾಂ ।
ನಾಧ್ಯಾಸತೇ ಯಾಮೇಕಾಹಂ ದೈವಭಗ್ನಾಸ್ತಪಸ್ವಿನಃ ॥೧೦೮॥

ಯಮೀ ಸುನಿಯಮೀ (ಸಃ,) ದೈವಭಗ್ನಾಃ ತಪಸ್ವಿನಃ ಯಾಂ ಶಿಲಾಂ ಏಕಾಹಂ ನಾಧ್ಯಾಸತೇ ತಾಂ ಶಿಲಾಂ ಯಥೇಷ್ಟಂ ಅಧ್ಯಾಸ್ತ.

ಯಮೀ = ಮನೋನಿಗ್ರಹವುಳ್ಳ, ಸುನಿಯಮೀ = ಉತ್ತಮವಾದ ಶೌಚಾದಿನಿಯಮವುಳ್ಳ, ಸಃ = ಆ ವಿಷ್ಣುತೀರ್ಥಾಚಾರ್ಯರು, ದೈವ-ಭಗ್ನಾಃ = ಈಶ್ವರಾನುಗ್ರಹರಹಿತರಾದ, ತಪಸ್ವಿನಃ = ಮುನಿಗಳು, ಯಾಂ ಶಿಲಾಂ = ಯಾವ ಕಲ್ಲಿನ ಮೇಲೆ, ಏಕಾಹಂ = ಒಂದು ದಿನವೂ, ನಾಧ್ಯಾ-ಸತೇ = ಕುಳಿತುಕೊಳ್ಳುವುದಿಲ್ಲವೋ, ತಾಂ (ಶಿಲಾಂ) = ಆ ಕಲ್ಲಿನ ಮೇಲೆ, ಯಥೇಷ್ಟಂ = ಸ್ವೇಚ್ಛಾನುಸಾರವಾಗಿ, ಅಧ್ಯಾಸ್ತ = ಕುಳಿತುಕೊಂಡರು.

ಮನಸ್ಸನ್ನು ನಿಗ್ರಹಿಸಿ ಅತ್ಯಂತನಿಯಮವನ್ನು ಅನುಸರಿಸಿದ ಆ ವಿಷ್ಣುತೀರ್ಥರು ಈಶ್ವರಾನುಗ್ರಹವಿಲ್ಲದ ತಪಸ್ವಿಗಳು ಯಾವ ಕಲ್ಲಿನ ಮೇಲೆ ಒಂದು ದಿನವೂ ಕೂಡ ಕುಳಿತುಕೊಳ್ಳಲಾರರೋ ಅಂತಹ ಕಲ್ಲಿನ ಮೇಲೆ ಸ್ಥಿರಸುಖವಾದ ಆಸನದಲ್ಲಿ ಕುಳಿತರು. ಬೇರೆ ತಪಸ್ವಿಗಳು ಒಂದು ದಿನವೂ ನಿಲ್ಲಲೂ ಸಾಧ್ಯವಿಲ್ಲದಿರುವ ಶೀತಲವಾದ ಶಿಲಾತಲದ ಮೇಲೆ ಕುಳಿತು ಶ್ರೀವಿಷ್ಣುತೀರ್ಥರು ಬಹುಕಾಲ ತಪಸ್ಸನ್ನಾಚರಿಸಿದರು. (ಈ ಶ್ಲೋಕದಲ್ಲಿ ಯಮ, ನಿಯಮ, ಆಸನ ಎಂಬ ಮೂರು ಯೋಗಾಂಗಗಳನ್ನು ಹೇಳಿದಂತಾಯಿತು.)

Rarest Archiver

ಇಷ್ಟಂ ಅನತಿಕ್ರಮ್ಯ ಯಥೇಷ್ಟಂ, ಯಮಃ ಅಸ್ಯ ಅಸ್ತೀತಿ ಯಮೀ, ಶೋಭನಶ್ಚಾಸೌ ನಿಯಮಶ್ಚ, ಸುನಿಯಮಃ ಅಸ್ಯ ಅಸ್ತೀತಿ, ಏಕಂ ಚ ತತ್ ಅಹಶ್ಚ ಏಕಾಹಃ, ರಾಜಾಹಃಸಖಿಭ್ಯಃ ಟಚ್ (೫-೪-೯೧.) ಎಂದು ಟಚ್. ರಾತ್ರಾಹ್ನಾಹಾಃ ಪುಂಸಿ (೨-೪-೨೯) ಎಂದು ಪುಲ್ಲಿಂಗ. ದೈವೇನ ಭಗ್ನಾಃ.

ಅಧಿ+ಆಸ್ತ ಆಸಾತಾಂ ಆಸತ, ಆಸ್ಥಾಃ ಆಸಾಥಾಂ ಆಧ್ವಂ, ಆಸಿ ಆಸ್ವಹಿ ಆಸ್ಮಹಿ. ಆಸ ಉಪವೇಶನೇ ಅಕ. ಸೇಟ್ ಆತ್ಮ. ಲಙ್. ಅಧಿ+ಆಸತೇ, ಆಸ್ತೇ ಆಸಾತೇ ಆಸತೇ, ಆಸ್ಸೇ ಆಸಾಥೇ ಆಧ್ವೇ, ಆಸೇ ಆಸ್ವಹೇ ಆಸ್ಮಹೇ. ಆಸ ಧಾತು–ಲಟ್. ಶಿಲಾಂ ಅಧ್ಯಾಸ್ತ, ಎಂಬಲ್ಲಿಯೂ, ಏಕಾಹಂ ನಾಧ್ಯಾಸತೇ ಎಂಬಲ್ಲಿಯೂ ಅಧಿಶೀಙ್‌ಸ್ಥಾಸಾಂ ಕರ್ಮ (೧-೪-೪೬) ಎಂಬ ಸೂತ್ರದಿಂದ ಆಧಾರಕ್ಕೆ ಕರ್ಮಸಂಜ್ಞೆ, ಕರ್ಮಣಿ ದ್ವಿತೀಯಾ (೨-೩-೨) ಎಂದು ದ್ವಿತೀಯಾವಿಭಕ್ತಿ.

ಪವನಾಂಶಾನುಜೋ ಜಿತ್ವಾ ಪವನಂ ರೇಚಕಾದಿಭಿಃ ।
ವಿಷಯೇಭ್ಯೋ ಹೃಷೀಕಾಶ್ವಾನ್ ಮನೋಯಂತ್ರಾ ಸಮಾಹರತ್ ॥

ಪವನಾಂಶಾನುಜಃ ರೇಚಕಾದಿಭಿಃ ಪವನಂ ಜಿತ್ವಾ ಹೃಷೀಕಾಶ್ವಾನ್ ಮನೋಯಂತ್ರಾ ವಿಷಯೇಭ್ಯಃ ಸಮಾಹರತ್. ॥ ೧೯ ॥

ಪವನಾಂಶಾನುಜಃ = ವಾಯುದೇವರ ಅಂಶಾವತಾರರಾದ ಶ್ರೀಮಧ್ವಾಚಾರ್ಯರ ತಮ್ಮಂದಿರಾದ ಶ್ರೀವಿಷ್ಣುತೀರ್ಥರು, ರೇಚಕಾದಿಭಿಃ = ರೇಚಕಪ್ರಾಣಾಯಾಮ ಮೊದಲಾದುವುಗಳಿಂದ, ಪವನಂ ಜಿತ್ವಾ = ವಾಯುಜಯವನ್ನು ಮಾಡಿಕೊಂಡು, ಹೃಷೀಕಾಶ್ವಾನ್ = ಇಂದ್ರಿಯಗಳೆಂಬ ಕುದುರೆಗಳನ್ನು, ಮನೋಯಂತ್ರಾ = ಮನಸ್ಸೆಂಬ ಸಾರಥಿಯಿಂದ, ವಿಷಯೇಭ್ಯಃ = ಶಬ್ದಾದಿವಿಷಯಗಳ ದೆಸೆಯಿಂದ, ಸಮಾಹರತ್ = ಹಿಂದಿರುಗಿಸಿದರು.

ವಾಯುದೇವರ ಅವತಾರರಾದ ಶ್ರೀಮಧ್ವರ ತಮ್ಮಂದಿರಾದ ಶ್ರೀವಿಷ್ಣುತೀರ್ಥರು ರೇಚಕ, ಪೂರಕ, ಕುಂಭಕ ಎಂಬ ಮೂರು ಅಂಗಗಳುಳ್ಳ ಪ್ರಾಣಾಯಾಮಗಳಿಂದ ವಾಯುಜಯವನ್ನು ಸಂಪಾದಿಸಿದರು.

Rarest Archiver

ಮುಖ್ಯಪ್ರಾಣದೇವರ ಅನುಗ್ರಹವನ್ನೂ ಪಡೆದರು. ದಾರಿ ಬಿಟ್ಟು ಓಡುವ ಕುದುರೆಗಳನ್ನು ಸಮರ್ಥನಾದ ಸಾರಥಿಯು ಸರಿದಾರಿಗೆ ತರುವಂತೆ ಕಣ್ಣು ಮೊದಲಾದ ಕುದುರೆಗಳಂತಹ ಇಂದ್ರಿಯಗಳನ್ನು, ಸಾರಥಿಯಂತಿರುವ ಮನಸ್ಸಿನಿಂದ ರೂಪ ಶಬ್ದ ಮೊದಲಾದ ವಿಷಯಗಳ ಕಡೆಗೆ ಹೋಗದಂತೆ ತಡೆ ಹಿಡಿದರು; ಹಿಂದಿರುಗಿಸಿದರು. ಪ್ರಾಣಾಯಾಮ ಮತ್ತು ಪ್ರತ್ಯಾಹಾರ ಗಳೆಂಬ ಯೋಗಾಂಗಗಳನ್ನೂ ಸಾಧಿಸಿದರು. (ಇಲ್ಲಿ ಪವನಜಯವನ್ನು ಪವನವಂಶಾನುಜಃ ಎಂಬ ವಿಶೇಷಣವು ಸಮರ್ಥಿಸುವುದರಿಂದ ಕಾವ್ಯಲಿಂಗಾ ಲಂಕಾರ.)

ಪವನಸ್ಯ ಅಂಶಃ ಪವನಾಂಶಸ್ಯ ಅನುಜಃ, ರೇಚಕಃ ಆದಿಃ ಯೇಷಾಂ ತೇ ತೈಃ, ಹೃಷೀಕಾಣಿ ಏವ ಅಶ್ವಾಃ ತಾನ್, ಮನ ಏವ ಯಂತಾ ತೇನ ;

ಸಮ್ + ಆ + ಅಹರತ್ ಅಹರತಾಂ ಅಹರನ್ ಹೃಞ್ ಹರಣೇ ಸಕ. ಉಭ. ಅನಿ. ಲಙ್.

ಸ್ಮರನ್ ಮುರಾರೇರಾಕಾರಂ ದಧ್ಯಾವಧ್ಯಾತ್ಮಕೋವಿದಃ ।
ಸಮಾಧಿಮಾಧಿಶಮನಂ ಯೋಗಿ (ಗ)ಲಭ್ಯಂ ಸ ಲಬ್ಧವಾನ್ ॥

ಅಧ್ಯಾತ್ಮಕೋವಿದಃ ಸಃ ಮುರಾರೇಃ ಆಕಾರಂ ಸ್ಮರನ್ ದಧ್ಯೌ. ಯೋಗಿಲಭ್ಯಂ ಆಧಿಶಮನಂ ಸಮಾಧಿಂ ಲಬ್ಧವಾನ್. ॥ ೧೧೦ ॥

ಅಧ್ಯಾತ್ಮಕೋವಿದಃ ಸಃ = ಅಧ್ಯಾತ್ಮವಿದ್ಯೆಯಲ್ಲಿ ನಿಪುಣರಾದ ಆ ವಿಷ್ಣುತೀರ್ಥರು, ಮುರಾರೇಃ ಆಕಾರಂ ಸ್ಮರನ್ = ಶ್ರೀಮನ್ನಾರಾಯಣನ ಸ್ವರೂಪವನ್ನು ಚಿಂತಿಸುತ್ತಾ, ದಧ್ಯೌ = ಧ್ಯಾನಿಸಿದರು. ಯೋಗಿ = ಮನಸ್ಸಿನ ತಡೆಯುಳ್ಳವರಿಂದ (ಯೋಗ = ಭಗವಂತನಲ್ಲಿ ಮನಸ್ಸನ್ನು ಇಡು ವುದರಿಂದ) ಲಭ್ಯಂ = ಹೊಂದಲುಶಕ್ಯವಾದ, ಆಧಿಶಮನಂ = ಮಾನಸವ್ಯಥೆ ಯನ್ನು ನಿವಾರಿಸುವ, ಸಮಾಧಿಂ = ನಿರಂತರವಾಗಿ ಪರಮಾತ್ಮನಲ್ಲಿ ಮನಸ್ಸನ್ನು ನೆಲೆಗೊಳಿಸುವುದನ್ನು, ಲಬ್ಧವಾನ್ = ಪಡೆದರು.

ಪರಮಾತ್ಮಜೀವಾತ್ಮರ ಸಂಬಂಧ ಮುಂತಾದ ವೇದಾಂತಶಾಸ್ತ್ರ ವಿಚಾರದಲ್ಲಿ ಕುಶಲರಾದ ಆ ವಿಷ್ಣುತೀರ್ಥರು ಶ್ರೀಮನ್ನಾರಾಯಣನ ದಿವ್ಯ

Rarest Archiver

ಸ್ವರೂಪವನ್ನು ಚಿಂತಿಸುತ್ತಾ ಧ್ಯಾನಿಸಿದರು. ಸ್ಥಿರವಾದ ಮನಸ್ಸುಳ್ಳ ಯೋಗಿಗಳಿಗೆ ಮಾತ್ರವೇ ಪ್ರಯತ್ನಪೂರ್ವಕವಾದ ಮನಸ್ಸಿನ ಸ್ಥಿರೀಕರಣ ದಿಂದ ಬಹಳಕಾಲದ ನಂತರ ಪಡೆಯಲು ಸಾಧ್ಯವಾದ ಸಮಾಧಿಯನ್ನು (ಪರಮಾತ್ಮನಲ್ಲಿಯೇ ಮನಸ್ಸನ್ನು ನೆಲೆಗೊಳಿಸುವಿಕೆಯನ್ನು) ಪಡೆದರು. (ಇದರಿಂದ ಧಾರಣಾ, ಧ್ಯಾನ, ಸಂಪ್ರಜ್ಞಾತಸಮಾಧಿ ಎಂಬ ಮೂರು ಯೋಗಾಂಗಗಳನ್ನು ಹೇಳಿದಂತಾಯಿತು).

ಮುರಸ್ಯ ಅರಿಃ ತಸ್ಯ, ಆತ್ಮನಿ ಇತಿ, ಅಧ್ಯಾತ್ಮಂ ಕೋವಿದಃ, ಶಮಯತೀತಿ ಶಮನಃ ಆಧೇಃ ಶಮನಃ ತಂ, ಯೋಗಿಭಿಃ (ಯೋಗೇನ) ಲಭ್ಯಃ ತಂ.

ದಧ್ಯೌ ದಧ್ಯತುಃ ದಧ್ಯುಃ, ಧ್ಯೈ ಚಿಂತಾಯಾಂ ಸಕ. ಅನಿ- ಪರ. ಲಿಟ್.

ಮಾಕುಂದೇ ಸುಂದರೇ ರೂಪೇ ಸ್ವಾನಂದಾದಿಗುಣಾರ್ಣವೇ ।
ಸ್ವಾಶ್ಚರ್ಯರತ್ನೇ ಮಗ್ನಾತ್ಮಾ ನಾನ್ಯತ್ ಕಿಂಚಿದ್ ವಿವೇದ ಸಃ ॥

ಸ್ವಾನಂದಾದಿಗುಣಾರ್ಣವೇ ಸ್ವಾಶ್ಚರ್ಯರತ್ನೇ ಮಾಕುಂದೇ ಸುಂದರೇ ರೂಪೇ ಮಗ್ನಾತ್ಮಾ ಸಃ ಅನ್ಯತ್ ಕಿಂಚಿತ್ ನ ವಿವೇದ. ॥ ೧೧ ॥

ಸ್ವಾನಂದಾದಿ=ನಿರ್ದೋಷವಾದ ಆನಂದವೇ ಮೊದಲಾದ, ಗುಣಾರ್ಣವೇ =ಗುಣಗಳಿಗೆ ಸಮುದ್ರವಾದ, ಸ್ವಾಶ್ಚರ್ಯರತ್ನೇ=ಒಳ್ಳೆಯ ಆಶ್ಚರ್ಯ ಗಳಲ್ಲಿ ಶ್ರೇಷ್ಠವಾದ, ಮಾಕುಂದೇ=ಶ್ರೀಹರಿಯ, ಸುಂದರೇ ರೂಪೇ= ಮನೋಹರವಾದ ರೂಪದಲ್ಲಿ, ಮಗ್ನಾತ್ಮಾ ಸಃ=ಆಸಕ್ತವಾದ ಮನಸ್ಸುಳ್ಳ ಆ ವಿಷ್ಣುತೀರ್ಥರು, ಅನ್ಯತ್ ಕಿಂಚಿತ್ ನ ವಿವೇದ=ಬೇರೆ ಯಾವುದನ್ನೂ ತಿಳಿಯಲಿಲ್ಲ.

ಆ ವಿಷ್ಣುತೀರ್ಥರು ಸ್ವರೂಪಾನಂದ-ಜ್ಞಾನ-ಬಲಾದಿಗುಣಗಣಗಳಿಗೆ ಸಮುದ್ರವಾದ, ಆಶ್ಚರ್ಯಕರವಸ್ತುಗಳಲ್ಲಿ ಶ್ರೇಷ್ಠವಾದ, ಮನೋಹರವಾದ ಸಜ್ಜೀವರಿಗೆ ಮೋಕ್ಷಪ್ರದವಾದ ಪರಮಾತ್ಮನ ರೂಪದಲ್ಲಿ ತನ್ನ ಮನಸ್ಸನ್ನು ಮಗ್ನವನ್ನಾಗಿಸಿದರು. ಹರಿಯ ರೂಪದ ಧ್ಯಾನದಲ್ಲಿ ಲೀನರಾಗಿ ಬೇರೆ

Rarest Archiver

ಯಾವುದನ್ನೂ ತಿಳಿಯಲಿಲ್ಲ. ಇದು ಅಸಂಪ್ರಜ್ಞಾತಸಮಾಧಿ. ಹೀಗೆ ಶ್ರೀವಿಷ್ಣುತೀರ್ಥರು ಅಷ್ಟಾಂಗಯೋಗನಿಷ್ಠೆಯಲ್ಲಿ ಗರಿಷ್ಠರಾಗಿ ಯೋಗಿ ಪುಂಗವರೆನಿಸಿದರು.

ಮುಕುಂದಸ್ಯ ಇದಂ ಮೌಕುಂದಂ ತಸ್ಮಿನ್, ಶೋಭನಶ್ಚಾಸೌ ಆನಂದಶ್ಚ ಸ್ವಾನಂದಃ, ಸ್ವಾನಂದಃ ಆದಿಃ ಯೇಷಾಂ ತೇ, ಸ್ವಾನಂದಾದ-ಯಶ್ಚ ತೇ ಗುಣಾಶ್ಚ, ಸ್ವಾನಂದಾದಿಗುಣಾನಾಂ ಅರ್ಣವಃ ತಸ್ಮಿನ್; ಶೋಭನಾನಿ ಚ ತಾನಿ ಆಶ್ಚರ್ಯಾಣಿ ಚ ಸ್ವಾಶ್ಚರ್ಯಾಣಿ, ಸ್ವಾಶ್ಚರ್ಯೇಷು ರತ್ನಂ ತಸ್ಮಿನ್, ಮಗ್ನಃ ಆತ್ಮಾಯಸ್ಯ ಸಃ

ಕಾಮತ್ರಾಸವಿಹೀನಸ್ಯ ತಸ್ಯ ಸುಜ್ಞಾನಚಕ್ಷುಷಃ ।
ವಿನಾ ಕೈವಲ್ಯಸಾಮ್ರಾಜ್ಯಂ ನಾರ್ಘೋ ಯೋಗಮಣೇರಭೂತ್ ॥

ಕಾಮತ್ರಾಸವಿಹೀನಸ್ಯ ಸುಜ್ಞಾನಚಕ್ಷುಷಃ ತಸ್ಯ ಯೋಗಮಣೇಃ ಕೈವಲ್ಯಸಾಮ್ರಾಜ್ಯಂ ವಿನಾ ಅರ್ಘಃ ನಾಭೂತ್. ॥ ೧೧೨ ॥

ಕಾಮತ್ರಾಸ ವಿಹೀನಸ್ಯ = ಫಲದ ಅಪೇಕ್ಷೆಯೆಂಬ-ತ್ರಾಸದೋಷರಹಿತ ವಾದ, (ಕಾಮಸಂತಾಪರಹಿತರಾದ) ಸುಜ್ಞಾನ ಚಕ್ಷುಷಃ = ಅಪರೋಕ್ಷ ಜ್ಞಾನವೆಂಬ ರತ್ನದ ಕಣ್ಣು(ರಂಧ್ರವು)ಳ್ಳ, ಅಪರೋಕ್ಷಜ್ಞಾನವೆಂಬ ದಿವ್ಯ ದೃಷ್ಟಿಯುಳ್ಳ, ತಸ್ಯ ಯೋಗಮಣೇಃ = ಆ ವಿಷ್ಣುತೀರ್ಥರ ಅಸಂಪ್ರಜ್ಞಾತ ಸಮಾಧಿಯೆಂಬ ರತ್ನಕ್ಕೆ, ಆ ಯೋಗರತ್ನಸ್ವರೂಪರಾದ ವಿಷ್ಣುತೀರ್ಥರಿಗೆ, ಕೈವಲ್ಯಸಾಮ್ರಾಜ್ಯಂ ವಿನಾ = ಮೋಕ್ಷವೆಂಬ ಸಾಮ್ರಾಜ್ಯವನ್ನು ಬಿಟ್ಟು, (ಪ್ರತ್ಯೇಕವಾಗಿ ನಾಯಕಮಣಿಯಾಗಿ ನಿಲ್ಲುವಿಕೆಯೆಂಬ ವೈಭವವನ್ನು ಬಿಟ್ಟು) ಅರ್ಘಃ ನ ಅಭೂತ್ = ಬೆಲೆಯು ಇರಲಿಲ್ಲ.

ರತ್ನಗಳಲ್ಲಿ ತ್ರಾಸ (ಬೇರೊಂದರ ಪ್ರಕಾಶದಿಂದ ಮಂಕಾಗುವುದು) ಎಂಬ ದೋಷವಿರುತ್ತದೆ. ಆ ದೋಷವಿಲ್ಲದ ಒಳ್ಳೆಯ ಪ್ರಕಾಶಮಾನವಾದ ರಂಧ್ರವುಳ್ಳ ಉತ್ತಮವಾದ ರತ್ನಕ್ಕೆ ತಾನೊಂದೇ ಪ್ರತ್ಯೇಕವಾಗಿ ನಾಯಕ ಮಣಿಯು ಸಾಮ್ರಾಜ್ಯದಲ್ಲಿರುವುದೇ ಬೆಲೆಯಾಗಿರುತ್ತದೆ. ಅಂತಹ ರತ್ನಕ್ಕೆ ಸಾಮ್ರಾಜ್ಯವೇ ಬೆಲೆಯಾಗಿರುತ್ತದೆ. ಹಾಗೆಯೇ ಫಲಾಪೇಕ್ಷೆಯೆಂಬ

Rarest Archiver

ದೋಷವಿಲ್ಲದ ಉತ್ತಮಜ್ಞಾನವೆಂಬ ಪ್ರಕಾಶವುಳ್ಳ ಶ್ರೀವಿಷ್ಣುತೀರ್ಥರ ಅಸಂಪ್ರಜ್ಞಾತಸಮಾಧಿಯ ಸಾಕ್ಷಾತ್ಕಾರರತ್ನಕ್ಕೆ ಮೋಕ್ಷಸಾಮ್ರಾಜ್ಯವೇ ಹೊರತು ಮತ್ತಾವುದೂ ಬೆಲೆಯಾಗಿರಲು ಸಾಧ್ಯವಿರಲಿಲ್ಲ. ಶ್ರೀವಿಷ್ಣುತೀರ್ಥರು ಹರಿಯನ್ನು ಕಂಡು ಅವನ ಪರಮಪ್ರಸಾದದಿಂದ ಮೋಕ್ಷವನ್ನೇ ಪಡೆದರು ಎಂದು ಭಾವ.

ಕಾಮಃ ಏವ ತ್ರಾಸಃ ಕಾಮತ್ರಾಸೇನ ವಿಹೀನಃ ತಸ್ಯ, ಶೋಭನಂ ಚ ತತ್ ಜ್ಞಾನಂ ಚ, ಸುಜ್ಞಾನಮೇವ ಚಕ್ಷುಃ ಯಸ್ಯ ಸಃ, ಕೈವಲ್ಯಮೇವ ಸಾಮ್ರಾಜ್ಯಂ ತತ್, ಯೋಗ ಏವ ಮಣಿಃ ತಸ್ಯ.

ಮಧ್ವಾನುಜೇ ಮಧ್ವನಾಥೋ ಯಂ ಪ್ರಸಾದಂ ವ್ಯಧಾತ್ತದಾ ।
ಸ ಚಿತ್ತಾವಿಷಯತ್ವಾದ್ವಾ ಗೋಪ್ಯತ್ವಾದ್ವಾ ನ ವರ್ಣ್ಯತೇ ॥

ಮಧ್ವನಾಥಃ ಮಧ್ವಾನುಜೇ ತದಾ ಯಂ ಪ್ರಸಾದಂ ವ್ಯಧಾತ್ ಸಃ ಚಿತ್ತಾವಿಷಯತ್ವಾದ್ವಾ ಗೋಪ್ಯತ್ವಾದ್ವಾ ನ ವರ್ಣ್ಯತೇ. ॥ ೧೧೩ ॥

ಮಧ್ವನಾಥಃ = ಶ್ರೀಮಧ್ವರಿಗೆ ಸ್ವಾಮಿಯಾದ ಹರಿಯು, ಮಧ್ವಾನುಜೇ = ಶ್ರೀಮಧ್ವರ ತಮ್ಮಂದಿರಲ್ಲಿ, ತದಾ = ಆಗ, ಯಂ ಪ್ರಸಾದಂ = ಯಾವ ಅನುಗ್ರಹವನ್ನು, ವ್ಯಧಾತ್ = ಮಾಡಿದನೋ, ಸಃ = ಆ ಅನುಗ್ರಹವು, ಚಿತ್ತಾವಿಷಯತ್ವಾದ್ ವಾ = ಸಂಪೂರ್ಣವಾಗಿ ನಮ್ಮ ಮನಸ್ಸಿಗೆ ಗೋಚರವಾಗಿಲ್ಲವಾದುದರಿಂದಲೂ, ಗೋಪ್ಯತ್ವಾದ್ ವಾ = ರಹಸ್ಯವಾಗಿಡಬೇಕಾದ ವಿಷಯವಾಗಿರುವುದರಿಂದಲಾಗಲೀ, ನ ವರ್ಣ್ಯತೇ ವರ್ಣಿಸಲ್ಪಡುವುದಿಲ್ಲ.

ಶ್ರೀವಿಷ್ಣುತೀರ್ಥರಿಗೆ ಹರಿಯು ಒಲಿದು ಯಾವ ಅನುಗ್ರಹಮಾಡಿದನೆಂದು ನಾವು ಸಂಪೂರ್ಣವಾಗಿ ತಿಳಿಯದಿರುವುದರಿಂದಲೂ, ಮತ್ತು ತಿಳಿದಷ್ಟು ವಿಷಯವನ್ನೂ ಕೂಡ ಗೋಪ್ಯವಾದುದರಿಂದಲೂ, ವರ್ಣಿಸುವುದಿಲ್ಲ. ಅನುಗ್ರಹವನ್ನು ಹೊಂದುವವರು ಭಾವಿಚತುರ್ಮುಖರ ಅನುಜರು. ಅನುಗ್ರಾಹಕನು ಮಧ್ವವಲ್ಲಭನಾದ ಶ್ರೀಕೃಷ್ಣಪರಬ್ರಹ್ಮನು. ಈ ಈಶದಾಸರ ಅಂತರಂಗದ ಒಲವು ನೆಲವುಗಳನ್ನು ಪೂರ್ತಿಯಾಗಿ ಬಲ್ಲವರಾರು ?

Rarest Archiver

ಮಧ್ವಸ್ಯ ಅನುಜಃ ತಸ್ಮಿನ್, ಮಧ್ವಸ್ಯ ನಾಥಃ, ನ ವಿಷಯಃ ಅವಿಷಯಃ, ಚಿತ್ತಸ್ಯ ಅವಿಷಯಃ ಚಿತ್ತಾವಿಷಯಃ ತಸ್ಯ ಭಾವಃ ಚಿತ್ತಾವಿಷಯತ್ವಂ ತಸ್ಮಾತ್; ಗೋಪ್ಯಸ್ಯ ಭಾವಃ ಗೋಪ್ಯತ್ವಂ ತಸ್ಮಾತ್. ಅಹಂ ತಂ ಪ್ರಸಾದಂ ಗೋಪ್ಯತ್ವಾತ್ ನ ವರ್ಣಯಾಮಿ.

ಅಹೋ ಮಹಾಬೋಧಸೇವಾಮಹಿಮಾಸ್ಮಿನ್ ಯುಗೇ ಯತಃ ।
ಧನ್ಯೋಽಸೌ ಸಿದ್ಧಿಮಾಪೇಮಾಂ ಸೋಽಮರ್ತ್ಯೈರಿತ್ಯಲಾಲ್ಯತ ॥

ಯತಃ ಧನ್ಯಃ ಅಸೌ ಅಸ್ಮಿನ್ ಯುಗೇ ಇಮಾಂ ಸಿದ್ಧಿಂ ಆಪ (ಅತಃ) ಮಹಾಬೋಧಸೇವಾಮಹಿಮಾ ಅಹೋ ಇತಿ ಸಃ ಅಮರ್ತ್ಯೈಃ ಅಲಾಲ್ಯತ.

ಯತಃ = ಯಾವಕಾರಣದಿಂದ, ಧನ್ಯಃ = ಪುಣ್ಯಶಾಲಿಗಳಾದ, ಅಸೌ = ಈವಿಷ್ಣುತೀರ್ಥರು, ಅಸ್ಮಿನ್ ಯುಗೇ = ಈ ಕಲಿಯುಗದಲ್ಲಿ, ಇಮಾಂ ಸಿದ್ಧಿಂ = ಈ ತಪಸ್ಸಿದ್ಧಿಯನ್ನು, ಆಪ = ಹೊಂದಿದರೋ (ಅತಃ = ಈ ಕಾರಣದಿಂದ), ಮಹಾಬೋಧಸೇವಾಮಹಿಮಾ = ಶ್ರೀಪೂರ್ಣಪ್ರಜ್ಞರ ಸೇವೆಯ ಮಹಿಮೆಯು, ಅಹೋ ಇತಿ = ಆಶ್ಚರ್ಯ ಎಂದು, ಸಃ = ಆ ಮಹಿಮೆಯು, ಅಮರ್ತ್ಯೈಃ = ದೇವತೆಗಳಿಂದ, ಅಲಾಲ್ಯತ = ಗೌರವಿಸಲ್ಪಟ್ಟಿತು. ॥ ೧೧೪ ॥

'ಮಹಾಪುಣ್ಯಶಾಲಿಗಳಾದ ಶ್ರೀವಿಷ್ಣುತೀರ್ಥರು ಘೋರವಾದ ಈ ಕಲಿಯುಗದಲ್ಲಿಯೂ ಇಂತಹ ತಪಸ್ಸಿದ್ಧಿಯನ್ನು ಹೊಂದಿದರು. ಆದುದರಿಂದ ಆನಂದತೀರ್ಥರ ಸೇವೆಯ ಮಹಿಮೆಯು ಅತ್ಯಂತ ಆಶ್ಚರ್ಯಕರ' ಎಂದು ದೇವತೆಗಳೂ ಮಧ್ವಸೇವಾಮಹಿಮೆಯನ್ನು ಹೊಗಳಿದರು.

ಮಹಾನ್ ಬೋಧಃ ಯಸ್ಯ ಸಃ, ಮಹಾಬೋಧಸ್ಯ ಸೇವಾ, ಮಹಾಬೋಧಸೇವಾಯಾಃ ಮಹಿಮಾ ;

ಅಲಾಲ್ಯತ ಅಲಾಲ್ಯೇತಾಂ ಅಲಾಲ್ಯಂತ. ಲಲ ಈಪ್ಸಾಯಾಂ ಸಕ. ಸೇಟ್ ಆತ್ಮ. ಕರ್ಮಣಿ ಲಙ್. ಅಮರಾಃ ತಂ ಮಹಾಬೋಧಸೇವಾ-ಮಹಿಮಾನಂ ಆಲಾಲಯಂತ, ಕರ್ತರಿ.

ಇಂತಹ ವಿಷ್ಣುತೀರ್ಥರ ಶಿಷ್ಯರು ಅನಿರುದ್ಧತೀರ್ಥರು—

Rarest Archiver

ತೀವ್ರವ್ರತೋsತೀಂದ್ರಿಯವಿದ್ವಿದ್ಯಾಬ್ಧಿಸ್ತರ್ಕಪಂಡಿತಃ |
ಅನಿರುದ್ಧಪದಾಧಾರಃಪ್ರೇಷ್ಠಶ್ಶಿಷ್ಯಸ್ತಮಾಯಯೌ || ೧೧೩ ||

ತೀವ್ರವ್ರತಃ ಅತೀಂದ್ರಿಯವಿತ್ ವಿದ್ಯಾಬ್ಧಿಃ ತರ್ಕಪಂಡಿತಃ ಅನಿರುದ್ಧ-ಪದಾಧಾರಃ ಪ್ರೇಷ್ಠಃ ಶಿಷ್ಯಃ ತಂ ಆಯಯೌ.

ತೀವ್ರವ್ರತಃ=ಕಠಿನವಾದ ನಿಯಮವುಳ್ಳ, ಅತೀಂದ್ರಿಯವಿತ್=ಇಂದ್ರಿಯಗಳಿಗೆ ಮೀರಿದ ವಿಷಯಗಳನ್ನು ತಿಳಿದಿದ್ದ, ವಿದ್ಯಾಬ್ಧಿಃ=ವಿದ್ಯೆಗೆ ಸಮುದ್ರದಂತಿದ್ದ, ತರ್ಕಪಂಡಿತಃ=ತರ್ಕಶಾಸ್ತ್ರದ ವಿದ್ವಾಂಸರಾದ, ಅನಿ-ರುದ್ಧಪದಾಧಾರಃ=ಅನಿರುದ್ಧನ ಪಾದಗಳನ್ನು ಆಶ್ರಯಿಸಿದ್ದ, ಅನಿರುದ್ಧ ಎಂಬ ಹೆಸರಿಗೆ ಆಶ್ರಯರಾದ, ಪ್ರೇಷ್ಠಃ ಶಿಷ್ಯಃ=ಅತ್ಯಂತಪ್ರಿಯರಾದ ಶಿಷ್ಯರು, ತಂ ಆಯಯೌ=ಆ ವಿಷ್ಣುತೀರ್ಥರನ್ನು ಕುರಿತು ಬಂದರು.

ಆ ವಿಷ್ಣುತೀರ್ಥರಿಗೆ ಅನಿರುದ್ಧತೀರ್ಥರೆಂಬ ಹಿರಿಯ ಶಿಷ್ಯರಿದ್ದರು. ಅವರು ಕಠಿನವಾದ ನಿಯಮವುಳ್ಳವರು, ತ್ರಿಕಾಲಜ್ಞಾನಿಗಳು, ಇಂದ್ರಿಯಾತೀತ ವಿಷಯಗಳನ್ನು ತಿಳಿದವರು, ವಿದ್ಯಾಸಮುದ್ರರು, ತರ್ಕಶಾಸ್ತ್ರಪಂಡಿತರು, ಇಂತಹವರು ವಿಷ್ಣುತೀರ್ಥರ ಶಿಷ್ಯತ್ವವನ್ನು ವಹಿಸಿ ಅವರಿಗೆ ಬಹಳ ಅಚ್ಚುಮೆಚ್ಚಿನವರಾದರು.

ತೀವ್ರಂ ವ್ರತಂ ಯಸ್ಯ ಸಃ, ಇಂದ್ರಿಯಂ ಅತಿಕ್ರಾಂತಂ ಅತೀಂದ್ರಿಯಂ, ತತ್ ವೇತ್ತೀತಿ, ವಿದ್ಯಾಯಾಃ ಅಬ್ಧಿರಿವ, ತರ್ಕೇ ಪಂಡಿತಃ, ಅನಿರುದ್ಧ ಇತಿ ಪದಂ, ಅನಿರುದ್ಧಪದಸ್ಯ ಆಧಾರಃ, (ಅನಿರುದ್ಧಸ್ಯ ಪದೇ ಆಧಾರಃ ಯಸ್ಯ ಸಃ) ಅತಿಶಯೇನ ಪ್ರಿಯಃ ಪ್ರೇಷ್ಠಃ;

ತೇನ ಸಂಪ್ರಾರ್ಥಿತಂ ಪ್ರಾಪ್ತಂ ರೂಪ್ಯಪೀಠಮಿಮಂ ಪುನಃ |
ಕೃತ್ಸ್ನಜ್ಞಂ ಕೃಪಯಾ ಸ್ವೇಷುಸಂಪ್ರಾಪ್ತಂ ಮೇನಿರೇ ಪ್ರಜಾಃ ||

ತೇನ ಸಂಪ್ರಾರ್ಥಿತಂ ರೂಪ್ಯಪೀಠಂ ಪ್ರಾಪ್ತಂ ಇಮಂ ಪ್ರಜಾಃ ಸ್ವೇಷು ಕೃಪಯಾ ಪುನಃ ಸಂಪ್ರಾಪ್ತಂ ಕೃತ್ಸ್ನಜ್ಞಂ ಮೇನಿರೇ. || ೧೧೪ ||

ತೇನ ಸಂಪ್ರಾರ್ಥಿತಂ=ಆ ಅನಿರುದ್ಧತೀರ್ಥರಿಂದ ಬಹಳವಾಗಿ ಬೇಡಿ ಕೊಳ್ಳಲ್ಪಟ್ಟ, ರೂಪ್ಯಪೀಠಂ ಪ್ರಾಪ್ತಂ ಇಮಂ=ಉಡುಪಿಗೆ ಬಂದಿದ್ದ

Rarest Archiver

ಈ ವಿಷ್ಣುತೀರ್ಥರನ್ನು, ಪ್ರಜಾಃ = ಜನರು, ಸ್ವೇಷು ಕೃಪಯಾ ಪುನಃ ಸಂಪ್ರಾಪ್ತಂ = ತಮ್ಮಲ್ಲಿ ದಯೆಯಿಂದ ತಿರುಗಿ ಬಂದ, ಕೃತ್ಸ್ನಜ್ಞಂ = ಶ್ರೀಮಧ್ವರನ್ನಾಗಿ, ಮೇನಿರೇ = ತಿಳಿದರು.

ಆ ಅನಿರುದ್ಧತೀರ್ಥರು ವಿಷ್ಣುತೀರ್ಥರನ್ನು ಉಡುಪಿಗೆ ಬರಬೇಕೆಂದು ಬೇಡಿಕೊಂಡರು. ಅದರಂತೆ ವಿಷ್ಣುತೀರ್ಥರು ಉಡುಪಿಗೆ ಬಂದಾಗ ಜನರು ಅವರನ್ನು ಕಂಡು ಹೋಲಿಕೆಯಿಂದ ಶ್ರೀಮಧ್ವರೇ ತಮ್ಮಲ್ಲಿ ದಯೆಯಿಟ್ಟು ಮರಳಿ ಉಡುಪಿಗೆ ಬಂದಿದ್ದಾರೆಂದು ತಿಳಿದುಕೊಂಡರು. (ಇದರಿಂದ ವಿಷ್ಣುತೀರ್ಥರು ಸುಬ್ರಹ್ಮಣ್ಯದಲ್ಲಿ ತಪಸ್ಸುಮಾಡುತ್ತಾ ಇದ್ದು ಉಡುಪಿಗೆ ಬಹಳ ಅಪರೂಪವಾಗಿ ಬರುತ್ತಿದ್ದರೆಂದೂ, ಆಚಾರ್ಯರಿಗೂ ಅವರ ತಮ್ಮಂದಿರಾದ ವಿಷ್ಣುತೀರ್ಥರಿಗೂ ಬಹಳ ಹೆಚ್ಚಾದ ರೂಪಸಾಮ್ಯವಿದ್ದಿತೆಂದೂ, ಆಚಾರ್ಯರು ಬದರೀಪ್ರಯಾಣಮಾಡಿದ ನಂತರ ವಿಷ್ಣುತೀರ್ಥರು ಒಂದು ಬಾರಿ ಉಡುಪಿಗೆ ಬಂದಿದ್ದರೆಂದೂ ಸೂಚಿತವಾಗುತ್ತದೆ).

ಶ್ರೀವಿಷ್ಣುತೀರ್ಥರ ಕಿರಿಯ ಶಿಷ್ಯರು ಬಾದರಾಯಣತೀರ್ಥರು—

ಕವೀಂದ್ರತಿಲಕೋ ವಿದ್ವಚ್ಛೇಖರಸ್ತಾಪಸಾಗ್ರಣೀಃ ।
ಮಧ್ವಕೇಲೀ ಶುಕೋಽಸ್ಯಾಭೂಚ್ಛಿಷ್ಯೋ ವ್ಯಾಸಪದಾಶ್ರಯಃ ॥

ಅಸ್ಯ ಕವೀಂದ್ರತಿಲಕಃ ವಿದ್ವಚ್ಛೇಖರಃ ತಾಪಸಾಗ್ರಣೀಃ ಮಧ್ವಕೇಲೀ ಶುಕಃ ವ್ಯಾಸಪದಾಶ್ರಯಃ ಶಿಷ್ಯಃ ಅಭೂತ್. ॥ ೧೧೭ ॥

ಅಸ್ಯ = ಈ ವಿಷ್ಣುತೀರ್ಥರಿಗೆ, ಕವೀಂದ್ರತಿಲಕಃ = ಕವಿಶ್ರೇಷ್ಠರಿಗೂ ತಿಲಕಪ್ರಾಯರಾದ, ವಿದ್ವಚ್ಛೇಖರಃ = ಪಂಡಿತಶ್ರೇಷ್ಠರಾದ, ತಾಪಸಾಗ್ರಣೀಃ = ತಪಸ್ವಿಗಳಲ್ಲಿ ಅಗ್ರಗಣ್ಯರಾದ, ಮಧ್ವಕೇಲೀಶುಕಃ = ಶ್ರೀಮಧ್ವಾಚಾರ್ಯರಿಗೆ ಆಟದ ಗಿಳಿಯಂತಿರುವ, ವ್ಯಾಸ ಪದಾಶ್ರಯಃ = ವ್ಯಾಸ ಎಂಬ ಹೆಸರಿಗೆ ಆಶ್ರಯರಾದ, (ವೇದವ್ಯಾಸರ ಪಾದಾವಲಂಬಿಗಳಾದ) ಶಿಷ್ಯಃ ಅಭೂತ್ = (ಬಾದರಾಯಣತೀರ್ಥರೆಂಬ) ಶಿಷ್ಯರೂ ಇದ್ದರು.

ಆ ವಿಷ್ಣುತೀರ್ಥರಿಗೆ ಬಾದರಾಯಣತೀರ್ಥರೆಂಬ ಮುನಿಶ್ರೇಷ್ಠರೂ ಶಿಷ್ಯರಾಗಿದ್ದರು. ಇವರು ಉತ್ತಮಕವಿಗಳು, ಶ್ರೇಷ್ಠ ಪಂಡಿತರು, ಶ್ರೀಮಧ್ವಾ

Rarest Archiver

ಚಾರ್ಯರಿಗೆ ಆಟದ ಗಿಣಿಯಂತೆ ಪ್ರೀತಿಪಾತ್ರರೂ ಆಗಿದ್ದರು. (ಗೃಹಸ್ಥರು ತಮ್ಮ ಮೊಮ್ಮಕ್ಕಳ ಜತೆಗೆ ವಿನೋದದಿಂದ ಇರುವಂತೆ ಆಚಾರ್ಯರು ತಮ್ಮ ಪ್ರಶಿಷ್ಯರಾದ ಬಾದರಾಯಣತೀರ್ಥರೊಡನೆ ವಿನೋದದಿಂದ ಮಾತ ನಾಡುತ್ತಿದ್ದರೆಂದೂ, ಮತ್ತು ಬಾದರಾಯಣತೀರ್ಥರೂ ಕೂಡ ತನ್ನ ಬುದ್ಧಿ ಚಮತ್ಕಾರ ಸರಸಸಂಭಾಷಣಾದಿಗಳಿಂದ ಆಚಾರ್ಯರನ್ನು ಒಲಿಸಿ ಕೊಂಡಿದ್ದ ರೆಂದೂ ಸೂಚಿತವಾಗುತ್ತದೆ).

ಕವೀನಾಂ ಇಂದ್ರಾಃ, ಕವೀಂದ್ರಾಣಾಂ ತಿಲಕಃ, ವಿದುಷಾಂ ಶೇಖರಃ, ತಾಪಸೇಷು ಅಗ್ರಣೀಃ, ಮಧ್ವಸ್ಯ ಕೇಲ್ಯಾಃ ಶುಕಃ, ವ್ಯಾಸ ಇತಿ ಪದಸ್ಯ ಆಶ್ರಯಃ.

ಈ ವಿಷ್ಣುತೀರ್ಥರ ಅನುಗ್ರಹದಿಂದಲೇ ಈ ಬಾದರಾಯಣತೀರ್ಥರಲ್ಲಿ ಅಂತಹ ಮಹತ್ತ್ವವು ಬಂದಿತು—

ಅಸೌ ದಾಸ್ಯಂ ಧ್ರುವಂ ಯಾತಂ (ಯಾಂತಂ)
ಮಹಾಂತಂ ಮಹತಾಮಪಿ ।
ವ್ಯಧಾದನುಗ್ರಹಂ ಕುರ್ವನ್ ಸಾಮರ್ಥ್ಯೈಃ ಕೌತುಕಂ ನೃಣಾಂ ॥

ಸಾಮರ್ಥ್ಯೈಃ ನೃಣಾಂ ಕೌತುಕಂ ಕುರ್ವನ್ ಅಸೌ ಧ್ರುವಂ ದಾಸ್ಯಂ ಯಾತಂ ಅನುಗ್ರಹಂ ಕುರ್ವನ್ ಮಹತಾಮಪಿ ಮಹಾಂತಂ ವ್ಯಧಾತ್.

ಸಾಮರ್ಥ್ಯೈಃ ನೃಣಾಂ ಕೌತುಕಂ ಕುರ್ವನ್ ಅಸೌ = ತನ್ನ ಶಕ್ತಿ ಗಳಿಂದ ಮನುಷ್ಯರಿಗೆ ಆಶ್ಚರ್ಯವನ್ನುಂಟುಮಾಡುತ್ತಿರುವ, ಈ ವಿಷ್ಣು ತೀರ್ಥರು, ಧ್ರುವಂ ದಾಸ್ಯಂ ಯಾತಂ = ನಿಶ್ಚಯವಾಗಿಯೂ ತನ್ನ ಸೇವಕ ತನವನ್ನು ಹೊಂದಿದ, ಈ ಬಾದರಾಯಣತೀರ್ಥರನ್ನು, ಅನುಗ್ರಹಂ ಕುರ್ವನ್ = ಅನುಗ್ರಹಮಾಡುತ್ತಾ, ಮಹತಾಂ ಅಪಿ ಮಹಾಂತಂ ವ್ಯಧಾತ್ = ಮಹಾತ್ಮರಿಗಿಂತಲೂ ಮಹಾತ್ಮರನ್ನಾಗಿ ಮಾಡಿದರು. ॥೧೧೮॥

ಈ ವಿಷ್ಣುತೀರ್ಥಾಚಾರ್ಯರು ತನ್ನ ಅಲೌಕಿಕಶಕ್ತಿಗಳಿಂದ ಜನರಿಗೆ ಆಶ್ಚರ್ಯವನ್ನು ಉಂಟುಮಾಡಿದ್ದರು. ಅಂತಹ ಮಹಾನುಭಾವರು ಅನನ್ಯ

Rarest Archiver

ಭಾವದಿಂದ ತನ್ನಲ್ಲಿ ಶಿಷ್ಯತ್ವವನ್ನು ವಹಿಸಿದ್ದ ಈ ಬಾದರಾಯಣತೀರ್ಥರನ್ನು ಶ್ರೇಷ್ಠರಲ್ಲಿಯೂ ಶ್ರೇಷ್ಠರನ್ನಾಗಿ ಮಾಡಿದರು.

ದಾಸಸ್ಯ ಭಾವಃ ದಾಸ್ಯಂ, ಸಮರ್ಥಸ್ಯ ಭಾವಾಃ ಸಾಮರ್ಥ್ಯಾನಿ, ತೈಃ.

ಆರುರೋಹ ದುರಾರೋಹಂ ಸ ಪರೈಃ ಪ್ರೀತಿಕೃದ್ಧರೇಃ ।
ಮಹಾಂತಂ ಮಹಿಮಾನಂ ಚ ಮಹೀಧ್ರಂ ಚ ಗುಹಪ್ರಿಯಂ ॥

ಹರೇಃ ಪ್ರೀತಿಕೃತ್ ಸಃ ಪರೈಃ ದುರಾರೋಹಂ ಮಹಾಂತಂ ಮಹಿಮಾನಂ ಚ ಗುಹಪ್ರಿಯಂ ಮಹೀಧ್ರಂ ಚ ಆರುರೋಹ. ॥ ೧೧೯ ॥

ಹರೇಃ ಪ್ರೀತಿಕೃತ್ ಸಃ = ಶ್ರೀಮನ್ನಾರಾಯಣನಿಗೆ ಸಂತೋಷವನ್ನು ಉಂಟುಮಾಡುವ ಆ ವಿಷ್ಣುತೀರ್ಥರು, ಪರೈಃ ದುರಾರೋಹಂ = ಬೇರೆಯವರಿಂದ ಪಡೆಯಲು ಸಾಧ್ಯವಿಲ್ಲದ, ಮತ್ತು ಏರಲು ಅಶಕ್ಯವಾದ, ಮಹಾಂತಂ = ಹೆಚ್ಚಾದ ಮತ್ತು ದೊಡ್ಡದಾದ, ಮಹಿಮಾನಂ ಚ = ಮಾಹಾತ್ಮ್ಯವನ್ನೂ, ಗುಹಪ್ರಿಯಂ ಮಹೀಧ್ರಂ ಚ = ಸುಬ್ರಹ್ಮಣ್ಯನಿಗೆ ಇಷ್ಟವಾದ ಕುಮಾರಪರ್ವತವನ್ನೂ, ಆರುರೋಹ = ಹತ್ತಿದರು.

ಹೀಗೆ ಆ ವಿಷ್ಣುತೀರ್ಥರು ತಮ್ಮ ಭಕ್ತಿಯಿಂದ ಶ್ರೀಹರಿಗೆ ಸಂತೋಷವನ್ನುಂಟುಮಾಡುತ್ತಾ ಇತರರಿಗೆ ಪಡೆಯಲು ಅಸಾಧ್ಯವಾದ ಮಹಿಮೆಯ ಶಿಖರವನ್ನು ಏರಿದರು, ಮತ್ತು ಸುಬ್ರಹ್ಮಣ್ಯನಿಗೆ ಇಷ್ಟವಾದ ಸಹ್ಯಪರ್ವತದ ಒಂದು ಭಾಗವಾದ ಕುಮಾರಪರ್ವತದ ಶಿಖರವನ್ನೂ ಏರಿದರು.

ದುಃಖೇನ ಆರೋಢುಂ ಶಕ್ಯಃ ದುರಾರೋಹಃ ತಂ, ಪ್ರೀತಿಂ ಕರೋತೀತಿ ಪ್ರೀತಿಕೃತ್; ಮಹೀಂ ಧರತೀತಿ ಮಹೀಧ್ರಃ ತಂ, ಗುಹಸ್ಯ ಪ್ರಿಯಃ ತಂ;

ಆ + ರುರೋಹ ರುರುಹತುಃ ರುರುಹುಃ, ರುರೋಹಿಥ ರುರುಹಥುಃ ರುರುಹ, ರುರೋಹ ರುರುಹಿವ ರುರುಹಿಮ. ರುಹ ಬೀಜಜನ್ಮನಿ ಪ್ರಾದುರ್ಭಾವೇ ಚ. ಅಕ. ಅನಿ. ಪರ. ಲಿಟ್ ಆಙ್ ಉಪಸರ್ಗಬಂದಾಗ ಸಕ.

ಇನ್ನು ಮುಂದೆ ೭ ಶ್ಲೋಕಗಳಿಂದ ಶ್ರೀಪದ್ಮನಾಭತೀರ್ಥರ ಮಹಿಮೆಯ ವರ್ಣನೆ—

Rarest Archive

ಆಕೃಷ್ಟೋsಸ್ಯ ಗುಣೈರ್ವ್ಯಾಪ್ತೈರ್ಯೋ
ಗೋದಾಯಾ ಉಪಾಯಯೌ ।
ಸ ಪದ್ಮನಾಭತೀರ್ಥಾಖ್ಯಃ ಶಿಷ್ಯೋsನ್ಯೋsಭೂತ್ ಸುಚೇತಸಃ ॥

ವ್ಯಾಪ್ತೈಃ ಅಸ್ಯ ಗುಣೈಃ ಆಕೃಷ್ಟಃ ಯಃ ಗೋದಾಯಾಃ ಉಪಾಯಯೌ ಸಃ ಪದ್ಮನಾಭತೀರ್ಥಾಖ್ಯಃ ಸುಚೇತಸಃ ಅನ್ಯಃ ಶಿಷ್ಯಃ ಅಭೂತ್.

ವ್ಯಾಪ್ತೈಃ ಅಸ್ಯ ಗುಣೈಃ = ಪ್ರಪಂಚದಲ್ಲೆಲ್ಲಾ ವ್ಯಾಪಿಸಿದ ಈ ಮಧ್ವಾಚಾರ್ಯರ ಗುಣಗಳಿಂದ, ಆಕೃಷ್ಟಃ ಯಃ = ಸೆಳೆಯಲ್ಪಟ್ಟ ಯಾವ ಪಂಡಿತೋತ್ತಮರು, ಗೋದಾಯಾಃ ಉಪಾಯಯೌ = ಗೋದಾವರೀ ತೀರದಿಂದ ಬಂದರೋ, ಸಃ ಪದ್ಮನಾಭತೀರ್ಥಾಖ್ಯಃ = ಅಂತಹ ಪದ್ಮನಾಭತೀರ್ಥರೆಂಬ ಹೆಸರುಳ್ಳವರು, ಸುಚೇತಸಃ = ಶ್ರೀಪೂರ್ಣಪ್ರಜ್ಞರಿಗೆ, ಅನ್ಯಃ ಶಿಷ್ಯಃ ಅಭೂತ್ = ಮತ್ತೊಬ್ಬ ಶಿಷ್ಯರಾದರು. ॥ ೧೨೦ ॥

ಸರ್ವತ್ರ ವ್ಯಾಪಿಸಿರುವ ಶ್ರೀಮಧ್ವಾಚಾರ್ಯರ ಗುಣಗಳಿಂದ ಆಕೃಷ್ಟರಾಗಿ ಪಂಡಿತಶ್ರೇಷ್ಠರಾದ ಶೋಭನಭಟ್ಟರೆಂಬವರು ಗೋದಾವರೀತೀರದಿಂದ ಪೂರ್ವದಲ್ಲಿಯೇ ಆಚಾರ್ಯರ ಬಳಿಗೆ ಬಂದಿದ್ದರು. ಅವರು ಪದ್ಮನಾಭತೀರ್ಥರೆಂಬ ಹೆಸರಿನಿಂದ ಆಚಾರ್ಯರ ಶಿಷ್ಯರಾದರು.

ಪದ್ಮನಾಭತೀರ್ಥ ಇತಿ ಆಖ್ಯಾ ಯಸ್ಯ ಸಃ, ಸು ಶೋಭನಂ ಚೇತಃ ಯಸ್ಯ ಸಃ ಸುಚೇತಾಃ ತಸ್ಯ.

ಶ್ರೀಪದ್ಮನಾಭತೀರ್ಥರ ಗುಣಾತಿಶಯವು—

ಶ್ರುತ್ಯಾ ಮತ್ಯಾ ಸದಾ ಭಕ್ತ್ಯಾ ವಿರಕ್ತ್ಯಾ ನಿತ್ಯಸೇವಯಾ ।
ತಸ್ಮೈ ಪ್ರಸನ್ನಃ ಪ್ರಾಜ್ಯೇಕ್ಷಃ ಸದ್ಯೋ ವಿದ್ಯಾಂ ದದೌ ಶುಭಾಂ ॥

ಶ್ರುತ್ಯಾ ಮತ್ಯಾ ಸದಾ ಭಕ್ತ್ಯಾ ವಿರಕ್ತ್ಯಾ ನಿತ್ಯಸೇವಯಾ ಪ್ರಸನ್ನಃ ಪ್ರಾಜ್ಯೇಕ್ಷಃ ತಸ್ಮೈ ಸದ್ಯಃ ಶುಭಾಂ ವಿದ್ಯಾಂ ದದೌ. ॥ ೧೨೧ ॥

ಶ್ರುತ್ಯಾ = ವೇದಾಂತಶಾಸ್ತ್ರಶ್ರವಣದಿಂದ, ಮತ್ಯಾ = ಮನನದಿಂದ, ಸದಾ ಭಕ್ತ್ಯಾ = ಯಾವಾಗಲೂ ಮಾಡುತ್ತಿರುವ ಭಕ್ತಿಯಿಂದ, ವಿರಕ್ತ್ಯಾ = ವೈರಾಗ್ಯದಿಂದ, ನಿತ್ಯಸೇವಯಾ = ನಿರಂತರಸೇವೆಯಿಂದ, ಪ್ರಸನ್ನಃ

Rarest Archiver

ಪ್ರಾಜ್ಯೇಕ್ಷಃ = ಆನಂದಪೂರ್ಣರಾದ ಶ್ರೀಪೂರ್ಣಪ್ರಜ್ಞರು, ತಸ್ಮೈ = ಅವರಿಗೆ, ಸದ್ಯಃ = ಕೂಡಲೇ, ಶುಭಾಂ ವಿದ್ಯಾಂ = ಮಂಗಳಕರವಾದ ವೇದಾಂತವಿದ್ಯೆಯನ್ನು, ದದೌ = ಕೊಟ್ಟರು.

ಶ್ರೀಪದ್ಮನಾಭತೀರ್ಥರು ನಿರಂತರವಾಗಿ ವೇದಾಂತಶಾಸ್ತ್ರದ ಶ್ರವಣ ಮತ್ತು ಮನನಗಳನ್ನು ಮಾಡುತ್ತಿದ್ದರು. ಆಚಾರ್ಯರಲ್ಲಿ ಸರ್ವದಾ ಭಕ್ತಿ ಮಾಡುತ್ತಿದ್ದರು. ವೈರಾಗ್ಯಶಾಲಿಗಳಾಗಿದ್ದರು. ನಿರಂತರವಾಗಿ ಆಚಾರ್ಯ ರನ್ನು ಸೇವಿಸುತ್ತಿದ್ದರು. ಇವುಗಳಿಂದ ಶ್ರೀಪೂರ್ಣಪ್ರಜ್ಞರು ಪ್ರಸನ್ನ ರಾದರು. ಅವರಿಗೆ ಕೂಡಲೇ ಮಂಗಳಕರವಾದ ವೇದಾಂತವಿದ್ಯೆಯನ್ನು ಉಪದೇಶಿಸಿದರು. ಸರ್ವಶ್ರೇಷ್ಠವಾದ ಪರಬ್ರಹ್ಮತತ್ತ್ವವನ್ನು ಸಾಕ್ಷಾತ್ಕರಿಸು ವಂತೆ ಅನುಗ್ರಹಿಸಿದರು.

ನಿತ್ಯಾ ಚ ಸಾ ಸೇವಾ ಚ ನಿತ್ಯಸೇವಾ ತಯಾ, ಪ್ರಾಜ್ಯಾ ಈಕ್ಷಾ ಯಸ್ಯ ಸಃ ;

ಆ ಪದ್ಮನಾಭತೀರ್ಥರ ಪಾಂಡಿತ್ಯವು ಪರಮಾದ್ಭುತವಾಗಿತ್ತು —

ವೇದಾಂತಾಬ್ಧಿಂ ನ ಯೋ ಜಾತು ಜಹೌ ವಿದ್ವತ್ತಿಮಿಂಗಿಲಃ ।
ಯುಕ್ತಿಪ್ರವಾಹಸಂರಂಭಾತ್ ಪರಶಾಸ್ತ್ರನದೀಚರಃ ॥ ೧೨೨ ॥

ಯುಕ್ತಿಪ್ರವಾಹಸಂರಂಭಾತ್ ಪರಶಾಸ್ತ್ರನದೀಚರಃ ಯಃ ವಿದ್ವತ್ತಿ-ಮಿಂಗಿಲಃ ವೇದಾಂತಾಬ್ಧಿಂ ಜಾತು ನ ಜಹೌ.

ಯುಕ್ತಿಪ್ರವಾಹಸಂರಂಭಾತ್ = ವೈಶೇಷಿಕರ ಯುಕ್ತಿಗಳೆಂಬ ಪ್ರವಾಹ ದಲ್ಲಿ ಕೋಪದಿಂದ, ಪರಶಾಸ್ತ್ರನದೀಚರಃ = ವೈಶೇಷಿಕಾದಿ ಇತರಶಾಸ್ತ್ರ ಗಳೆಂಬನದಿಗಳಲ್ಲಿ ಸಂಚರಿಸುವ, ಯಃ ವಿದ್ವತ್ತಿಮಿಂಗಿಲಃ = ಯಾವ ಪದ್ಮನಾಭತೀರ್ಥರೆಂಬ ವಿದ್ವಾಂಸನೆಂಬ ತಿಮಿಂಗಿಲಮೀನು, ವೇದಾಂತಾಬ್ಧಿಂ = ವೇದಾಂತಶಾಸ್ತ್ರವೆಂಬ ಸಮುದ್ರವನ್ನು, ಜಾತು ನ ಜಹೌ = ಎಂದೂ ಬಿಡಲಿಲ್ಲ.

ತಿಮಿಂಗಿಲವೆಂಬ ದೊಡ್ಡದಾದ ಮಹಾಮೀನವು ಸಮುದ್ರದಲ್ಲಿಯೇ ಯಾವಾಗಲೂ ವಾಸವಾಗಿದ್ದರೂ ನದೀಪ್ರವಾಹದ ವೇಗದ ಸೆಳೆತದಿಂದ

Rarest Archiver

ನದಿಗೆ ನುಗ್ಗಿದರೂ, ತಿರುಗಿ ಸಮುದ್ರದಲ್ಲಿಯೇ ಸಂಚರಿಸುತ್ತದೆ, ಅದರಂತೆ ಶ್ರೀಪದ್ಮನಾಭತೀರ್ಥರು ವೈಶೇಷಿಕಾದಿಶಾಸ್ತ್ರಗಳ ಯುಕ್ತಿಗಳನ್ನು ಖಂಡಿಸುವ ಸಲುವಾಗಿ ಆ ಶಾಸ್ತ್ರಗಳ ಒಳಹೊಕ್ಕು ಗಾಢವಾಗಿ ಪರಿಶೀಲಿಸುತ್ತಿದ್ದರು. ಆದರೆ ಪುನಃ ವೇದಾಂತಸಮುದ್ರದಲ್ಲಿ ಮಗ್ನರಾಗಿ ಅಧ್ಯಾತ್ಮವಿಚಾರವನ್ನೇ ಯಾವಾಗಲೂ ಮಾಡುತ್ತಿದ್ದರು. (ತಿಮಿಂಗಿಲ–ದೊಡ್ಡಮೀನನ್ನು ನುಂಗುವ ಅದಕ್ಕಿಂತಲೂ ದೊಡ್ಡಮೀನು. ತಿಮಿರ್ನಾಮ ಮಹಾಮತ್ಸ್ಯಃ ತದ್ಗಿಲಸ್ತು ತಿಮಿಂಗಿಲಃ | ತಿಮಿಂಗಿಲಗಿಲೋಽಪ್ಯಸ್ತಿ ತದ್ಗಿಲೋಽಪ್ಯಸ್ತಿ ರಾಘವ ||)

ವೇದಾಂತ ಏವ ಅಬ್ಧಿಃ ತಂ, ತಿಮಿಂ ಗಿಲತೀತಿ ತಿಮಿಂಗಿಲಃ, ಗಿಲೇಽಗಿಲಸ್ಯ (ವಾ. 3979) ಪೂರ್ವಪದಕ್ಕೆ ಮುಮ್ ಆಗಮ. ವಿದ್ವಾನ್ ಏವ ತಿಮಿಂಗಿಲಃ, ಯುಕ್ತೀನಾಂ ಪ್ರವಾಹಾಃ (ಯುಕ್ತಯ ಏವ ಪ್ರವಾಹಾಃ), ಯುಕ್ತಿಪ್ರವಾಹೇಷು ಸಂರಂಭಃ ತಸ್ಮಾತ್, ಪರೇಷಾಂ ಶಾಸ್ತ್ರಾಣಿ, ಪರಶಾಸ್ತ್ರಾಣಿ ಏವ ನದ್ಯಃ, ಚರತೀತಿ ಚರಃ ಪರಶಾಸ್ತ್ರನದೀಷು ಚರಃ;

ಜಹೌ ಜಹತುಃ ಜಹುಃ, ಜಹಿಥ ಜಹಾಥ ಜಹಥುಃ ಜಹ, ಜಹೌ ಜಹಿವ ಜಹಿಮ. ಓಹಾಕ್ ತ್ಯಾಗೇ ಸಕ. ಅನಿ. ಪರ. ಲಿಟ್.

ಶ್ರೀಪದ್ಮನಾಭತೀರ್ಥರು ಮಾಯಾವಾದಿಗಳನ್ನು ಗೆದ್ದರು—

ವ್ಯಾಖ್ಯಾಪ್ರಣಾದಮಾತ್ರೇಣ ವೀರಂಮನ್ಯಾನ್ ಸ್ವಮಂಡಲೇ |
ಮಾಯಾವಿಗ್ರಾಮಸಿಂಹಾನ್ ಯೋ ವಾದಿಸಿಂಹೋ ನಿರಾಕರೋತ್ ||

ಯಃ ವಾದಿಸಿಂಹಃ ಸ್ವಮಂಡಲೇ ವೀರಂಮನ್ಯಾನ್ ಮಾಯಾವಿಗ್ರಾಮಸಿಂಹಾನ್ ವ್ಯಾಖ್ಯಾಪ್ರಣಾದಮಾತ್ರೇಣ ನಿರಾಕರೋತ್ ||೧೨೩||

ಯಃ ವಾದಿಸಿಂಹಃ = ಯಾವ ವಾದಿಗಳಾದ ಪದ್ಮನಾಭತೀರ್ಥರೆಂಬ ಸಿಂಹವು, ಸ್ವಮಂಡಲೇ = ತಮ್ಮವರ ಗುಂಪಿನಲ್ಲಿ, ವೀರಂಮನ್ಯಾನ್ = ನಾವೇ ಜಯಶಾಲಿಗಳೆಂದು ತಿಳಿದಿರುವ, ಮಾಯಾವಿಗ್ರಾಮಸಿಂಹಾನ್ = ಮಾಯಾವಾದಿಗಳೆಂಬ ನಾಯಿಗಳನ್ನು, ವ್ಯಾಖ್ಯಾಪ್ರಣಾದಮಾತ್ರೇಣ = ಶಾಸ್ತ್ರವ್ಯಾಖ್ಯಾನದ ಧ್ವನಿಯಿಂದಲೇ, ನಿರಾಕರೋತ್ = ಓಡಿಸಿದರು.

ಯಾವ ಪದ್ಮನಾಭತೀರ್ಥರೆಂಬ ಸಿಂಹವು ತಮ್ಮ ಜಾತಿಯವರ ಗುಂಪಿನಲ್ಲಿ ನಾವೇ ವೀರರು ಜಯಶಾಲಿಗಳೆಂದು ಹಿಗ್ಗುತ್ತಿದ್ದ ಮಾಯಾವಾದಿ

Rarest Archiver

ಗಳೆಂಬ ನಾಯಿಗಳನ್ನು ತಮ್ಮ ಶಾಸ್ತ್ರವ್ಯಾಖ್ಯಾನವೆಂಬ ಗರ್ಜನ ಮಾತ್ರ ದಿಂದಲೇ ದೂರಕ್ಕೆ ಓಡಿಸಿದರು. ಸಿಂಹವು ತಮ್ಮ ಗುಂಪಿನಲ್ಲಿ ತಾವೇ ಪರಾಕ್ರಮಿಗಳೆಂದು ಹಿಗ್ಗುವ ನಾಯಿಗಳನ್ನು ಗರ್ಜನಮಾತ್ರದಿಂದ ಹೇಗೆ ಜಯಿಸುತ್ತದೆಯೋ, ಆದರಂತೆಯೇ ಶ್ರೀಪದ್ಮನಾಭತೀರ್ಥರು ತಾವೇ ಪಂಡಿತರೆಂದು ತಮ್ಮ ಸಮಾಜದಲ್ಲಿ ಹೊಗಳಿಕೊಳ್ಳುತ್ತಿರುವ ಮಾಯಾವಾದಿ ಗಳನ್ನು ತಮ್ಮ ವ್ಯಾಖ್ಯಾನಮಾತ್ರದಿಂದ ಜಯಿಸಿದರು.

ವ್ಯಾಖ್ಯಾಯಾಃ ಪ್ರಣಾದಃ, ವ್ಯಾಖ್ಯಾಪ್ರಣಾದ ಏವ ವ್ಯಾಖ್ಯಾ ಪ್ರಣಾದಮಾತ್ರಂ ತೇನ, ಆತ್ಮಾನಂ ವೀರಂ ಮನ್ಯಂತೇ ಇತಿ ವೀರಂಮನ್ಯಾಃ ತಾನ್, ಸ್ವೇಷಾಂ ಮಂಡಲಂ ತಸ್ಮಿನ್,

ಮತ್ತದುರ್ವಾದಿಮಾತಂಗತರ್ಕಮಸ್ತಕದಾರಣೇ ।
ಪಂಚಾಸ್ಯೋ ಯೋಽಭವದ್ ವ್ಯಕ್ತಂ ಚತುರಾಸ್ಯೋಽಪಿ ಕೇವಲಂ ॥

ಯಃ ಕೇವಲಂ ಚತುರಾಸ್ಯೋಽಪಿ ಮತ್ತದುರ್ವಾದಿಮಾತಂಗತರ್ಕ-ಮಸ್ತಕದಾರಣೇ ವ್ಯಕ್ತಂ ಪಂಚಾಸ್ಯಃ ಅಭವತ್ ; ॥ ೧೨೪ ॥

ಯಃ = ಯಾವ ಪದ್ಮನಾಭತೀರ್ಥರು, ಕೇವಲಂ = ಮುಖ್ಯವಾಗಿ, ಚತುರಾಸ್ಯಃ ಅಪಿ = ನಾಲ್ಕು ಮುಖವುಳ್ಳವರಾಗಿದ್ದರೂ (ಚೆನ್ನಾಗಿ ಮಾತಾ ಡುವ ಕುಶಲವಾದ ಬಾಯಿಉಳ್ಳವರಾಗಿದ್ದರೂ) ಮತ್ತದುರ್ವಾದಿ-ಮಾತಂಗ = ವಿದ್ಯಾಗರ್ವದಿಂದ ಕೂಡಿದ್ದ (ಕೊಬ್ಬಿದ) ದುಷ್ಟವಾದಿಗಳೆಂಬ ಆನೆಗಳ, ತರ್ಕಮಸ್ತಕ = ಯುಕ್ತಿಗಳೆಂಬ ಶಿರಸ್ಸುಗಳ, ದಾರಣೇ = ಸೀಳು ವಿಕೆಯಲ್ಲಿ, ವ್ಯಕ್ತಂ = ಸ್ಪಷ್ಟವಾಗಿ, ಪಂಚಾಸ್ಯಃ = ಐದುಮುಖವುಳ್ಳವರು, ಸಿಂಹವು, ಅಭವತ್ = ಆದರು.

ಯಾವ ಶ್ರೀಪದ್ಮನಾಭತೀರ್ಥರು ಚತುರಾಸ್ಯರಾಗಿದ್ದರೂ, (ನಾಲ್ಕು ಮುಖವುಳ್ಳವರಾಗಿದ್ದರೂ) ಮದಿಸಿದ ದುರ್ವಾದಿಗಳೆಂಬ ಆನೆಗಳ ಕುಯುಕ್ತಿ ಗಳೆಂಬ ಕುಂಭಸ್ಥಳಗಳನ್ನು ಸೀಳುವುದರಲ್ಲಿ ಪಂಚಾಸ್ಯರು (ಐದು ಮುಖ ವುಳ್ಳವರು) ಆಗಿದ್ದರು, ಎಂದು ವಿರೋಧಕಾಣುವಂತೆ ವರ್ಣಿಸಿದ್ದಾರೆ. ಆದರೆ ಶ್ರೀಪದ್ಮನಾಭತೀರ್ಥರು ಚತುರಾಸ್ಯರು ಅಂದರೆ ಚೆನ್ನಾಗಿ ಮಾತ

Rarest Archives

ನಾಡುವ ಕುಶಲವದನರಾಗಿದ್ದರು, ದುರ್ವಾದಿಗಜಗಳ ಯುಕ್ತಿಗಳೆಂಬ ಮಸ್ತಕಗಳನ್ನು ಸೀಳುವುದರಲ್ಲಿ ಪಂಚಾಸ್ಯರು ಅಂದರೆ ಸಿಂಹದಂತೆ ಇದ್ದರು (ಮತ್ತು ವಿಸ್ತಾರವಾದ ಮಾತುಗಾರಿಕೆ ಉಳ್ಳವರೂ ಆಗಿದ್ದರು) ಎಂದು ವಿರೋಧಪರಿಹಾರ. ಇಲ್ಲಿ ವಿರೋಧಾಭಾಸಾಲಂಕಾರ. ಆಗಿನಕಾಲದಲ್ಲಿ ವಿದ್ಯಾಮದಭರಿತರಾದ ದುರ್ವಾದಿಗಳು ಕುಯುಕ್ತಿಗಳಿಂದ ತತ್ತ್ವವಾದವನ್ನು ಖಂಡಿಸುತ್ತಿದ್ದರು, ಕುಶಲರಾದ ಶ್ರೀಪದ್ಮನಾಭತೀರ್ಥರು ಸಿಂಹವು ಆನೆಗಳ ತಲೆಗಳನ್ನು ಸೀಳುವಂತೆ ಅವರ ಕುಯುಕ್ತಿಗಳನ್ನು ಖಂಡಿಸುತ್ತಿದ್ದರು ಎಂದು ಭಾವ.

ದುರ್ವಾದಃ ಏಷಾಂ ಅಸ್ತೀತಿ ದುರ್ವಾದಿನಃ, ದುರ್ವಾದಿನಃ ಏವ ಮಾತಂಗಾಃ, ಮತ್ತಾಶ್ಚ ತೇ ದುರ್ವಾದಿಮಾತಂಗಾಶ್ಚ, ತರ್ಕಾ ಏವ ಮಸ್ತಕಾನಿ, ಮತ್ತದುರ್ವಾದಿಮಾತಂಗಾನಾಂ ತರ್ಕಮಸ್ತಕಾನಿ, ಮತ್ತ-ದುರ್ವಾದಿತರ್ಕಮಸ್ತಕಾನಾಂ ದಾರಣಂ ತಸ್ಮಿನ್ ; ಪಂಚ ಆಸ್ಯಾನಿ ಯಸ್ಯ ಸಃ, ಚತ್ವಾರಿ ಆಸ್ಯಾನಿ ಯಸ್ಯ ಸಃ, ಚತುರಂ ಆಸ್ಯಂ ಯಸ್ಯ ಸಃ.

ಅವರು ರಚಿಸಿದ ಗ್ರಂಥಗಳಲ್ಲಿ ಒಂದು ಸನ್ನ್ಯಾಯರತ್ನಾವಲಿ—

ಸನ್ನ್ಯಾಯರತ್ನಾವಲಿರಪ್ಯುದಪಾದಿ ಯತಃ ಶುಭಾ ।
ಟೀಕಾಪರಾನುವ್ಯಾಖ್ಯಾಯಾಃ ಅನರ್ಘಾ ಬೋಧಸಾಗರಾತ್ ॥

ಬೋಧಸಾಗರಾತ್ ಯತಃ ಪರಾನುವ್ಯಾಖ್ಯಾಯಾಃ (ಪರಾ) ಶುಭಾ ಅನರ್ಘಾ ಸನ್ನ್ಯಾಯರತ್ನಾವಲಿಃ ಟೀಕಾ ಅಪಿ ಉದಪಾದಿ. ॥ ೧೫ ॥

ಬೋಧಸಾಗರಾತ್ ಯತಃ = ಜ್ಞಾನಸಮುದ್ರರಾದ ಯಾವ ಶ್ರೀಪದ್ಮನಾಭತೀರ್ಥರ ದೆಸೆಯಿಂದ, ಪರಾನುವ್ಯಾಖ್ಯಾಯಾಃ = ಶ್ರೇಷ್ಠವಾದ ಅನುವ್ಯಾಖ್ಯಾ (ನ) ಗ್ರಂಥಕ್ಕೆ, ಪರಾ = ಉತ್ತಮವಾದ, ಶುಭಾ = ಮಂಗಳಕರವಾದ, ಅನರ್ಘಾ = ಅಮೂಲ್ಯವಾದ, ಸನ್ನ್ಯಾಯರತ್ನಾವಲಿಃ ಟೀಕಾ ಅಪಿ = ಸನ್ನ್ಯಾಯರತ್ನಾವಲಿ ಎಂಬ ಟೀಕಾ ಗ್ರಂಥವೂ ಕೂಡ, ಉದಪಾದಿ = ಹುಟ್ಟಿತು.

ಸಮುದ್ರದಿಂದ ಉತ್ತಮವೂ ಮಂಗಳಕರವೂ ಅಮೂಲ್ಯವೂ ಆದ ಮುತ್ತು ಮುಂತಾದ ರತ್ನಗಳ ಸಮೂಹವು ಸಾಲುಸಾಲಾಗಿ ಹುಟ್ಟಿ

Rarest Archiver

ಬರುತ್ತದೆ. ಅದರಂತೆ ಜ್ಞಾನಸಮುದ್ರರಾದ ಶ್ರೀಪದ್ಮನಾಭತೀರ್ಥರಿಂದ ಶ್ರೇಷ್ಠವಾದ ಅನುವ್ಯಾಖ್ಯಾನಗ್ರಂಥದ, ಉತ್ತಮವೂ ಮಂಗಳಕರವೂ, ಅಮೂಲ್ಯವೂ ಆದ ಸನ್ನ್ಯಾಯರತ್ನಾವಳಿ ಎಂಬ ಟೀಕಾಗ್ರಂಥವೂ ಆವಿರ್ಭವಿಸಿತು.

ನ್ಯಾಯಾ ಏವ ರತ್ನಾನಿ, ಸಂತಿ / ಚ ತಾನಿ ನ್ಯಾಯರತ್ನಾನಿ ಚ, ಸನ್ನ್ಯಾಯರತ್ನಾನಾಂ ಆವಲಿಃ(ಯಸ್ಮಿನ್ ಸಃ) ಪರಾ ಚ ಸಾ ಅನುವ್ಯಾಖ್ಯಾ ಚ ತಸ್ಯಾಃ ನ ವಿದ್ಯತೇ ಅರ್ಘಃ ಯಸ್ಯಾಃ ಸಾ, ಬೋಧಸ್ಯ ಸಾಗರಃ ತಸ್ಮಾತ್.

ಉತ್ + ಅಪಾದಿ ಅಪತ್ಸಾತಾಂ ಅಪತ್ಸತ; ಪದ ಗತೌ ಅಕ. ಅನಿಟ್. ಆತ್ಮ. ಲುಙ್.

ಶ್ರೀಪದ್ಮನಾಭತೀರ್ಥರ ವೇದಪ್ರವಚನ—

ವೇದಪ್ರವಚನಾಚಾರ್ಯಶಿಷ್ಯೋಽಸಾವಿತಿ ಪೂಜಿತಃ ।
ಸಭ್ಯೈಃ ಸಭಾಯಾಂ ಯೋ ವೇದಂ ವ್ಯಾಚಖ್ಯೌ ವೇದಸಾರವಿತ್ ॥

'ಅಸೌ ವೇದಪ್ರವಚನಾಚಾರ್ಯಶಿಷ್ಯಃ' ಇತಿ ಪೂಜಿತಃ ಸಭ್ಯೈಃ ವೇದಸಾರವಿತ್ ಯಃ ಸಭಾಯಾಂ ವೇದಂ ವ್ಯಾಚಖ್ಯೌ. ॥ ೧೨೬ ॥

'ಅಸೌ = ಇವರು, ವೇದಪ್ರವಚನಾಚಾರ್ಯಶಿಷ್ಯಃ = ವೇದವ್ಯಾಖ್ಯಾನಮಾಡುವ ಶ್ರೀಆನಂದತೀರ್ಥಾಚಾರ್ಯರ ಶಿಷ್ಯರು' ಇತಿಪೂಜಿತಃ = ಹೀಗೆಂದು ಸಂಮಾನಿತರಾದ, ಸಭ್ಯೈಃ = ಸಭಾಮರ್ಯಾದೆಯನ್ನು ಬಲ್ಲ (ಶಿಷ್ಟರಾದ), ವೇದಸಾರವಿತ್ = ವೇದದ ಮುಖ್ಯ ತಾತ್ಪರ್ಯಾರ್ಥವನ್ನು ತಿಳಿದಿರುವ, ಯಃ = ಯಾವ ಪದ್ಮನಾಭತೀರ್ಥರು, ಸಭಾಯಾಂ = ಸಭೆಯಲ್ಲಿ ವೇದಂ ವ್ಯಾಚಖ್ಯೌ = ವೇದವ್ಯಾಖ್ಯಾನವನ್ನು ಮಾಡಿದರೋ, (ಸಃ ಸುಚೇತಸಃ ಅನ್ಯಃ ಶಿಷ್ಯೋಽಭೂತ್ = ಇಂತಹವರು ಶ್ರೀಪೂರ್ಣಪ್ರಜ್ಞರಿಗೆ ಮತ್ತೊಬ್ಬಶಿಷ್ಯರಾಗಿದ್ದರು, ಎಂದು ೧೨೦ನೆಯ ಶ್ಲೋಕದಿಂದ ಈ ಪದಗಳನ್ನು ಸೇರಿಸಿಕೊಂಡು ೧೨೨ ರಿಂದ ೧೨೫ನೆಯ ಶ್ಲೋಕದವರೆಗೆ ಅನ್ವಯ ಮಾಡಿಕೊಳ್ಳಬೇಕು).

Rarest Archiver

'ಇವರು ವೇದವನ್ನು ಪ್ರವಚನಮಾಡುವ ಶ್ರೀಮಧ್ವಭಗವತ್ಪಾದರ ಶಿಷ್ಯರು' ಎಂದು ಶ್ರೀಪದ್ಮನಾಭತೀರ್ಥರನ್ನು ಸಭೆಗಳಲ್ಲಿ ವಿದ್ವಾಂಸರು ಗೌರವಿಸುತ್ತಿದ್ದರು. ಇಂತಹ ಪದ್ಮನಾಭತೀರ್ಥರು ಸಭೆಗಳಲ್ಲಿ ಬಹಳಚೆನ್ನಾಗಿ ವೇದಪ್ರವಚನವನ್ನು ಮಾಡುತ್ತಿದ್ದರು. ಈ ಪದ್ಮನಾಭತೀರ್ಥರು ವಿಷ್ಣುತೀರ್ಥರಂತೆಯೇ ಆಚಾರ್ಯರ ಮುಖ್ಯಶಿಷ್ಯರು. ಇವರಿಗೆ ಆಚಾರ್ಯರು ಬ್ರಹ್ಮವಿದ್ಯೋಪದೇಶವನ್ನು ಮಾಡಿದರು ಎಂದು ತಾತ್ಪರ್ಯ.

ವೇದಾನಾಂ ಪ್ರವಚನಂ ವೇದಪ್ರವಚನೇ ಆಚಾರ್ಯಃ ವೇದಪ್ರವಚನಾಚಾರ್ಯಸ್ಯ ಶಿಷ್ಯಃ, ಸಭಾಯಾಃ ಯೋಗ್ಯಃ ಸಭ್ಯಃ, ವೇದಸ್ಯ ಸಾರಂ ವೇತ್ತೀತಿ.

ವಿ+ಆಚಖ್ಯೌ ಆಚಖ್ಯತುಃ ಆಚಖ್ಯುಃ ಚಕ್ಷಿಙ್ ವ್ಯಕ್ತಾಯಾಂ ವಾಚಿ ಸಕ. ಸೇಟ್. ಆತ್ಮನೇಪದಿ. ಚಕ್ಷಿಙಃ ಖ್ಯಾಞ್ (2-4-54) ಎಂದು ಖ್ಯಾಞ್ ಆದೇಶ. ಪರ. ಲಿಟ್.

ಆಚಾರ್ಯರಿಗೆ ಇವರಿಬ್ಬರಲ್ಲದೆ ಇನ್ನೂ ಅನೇಕಮಂದಿ ಶಿಷ್ಯರಿದ್ದರು—

ಅನಯೋಃ ಪ್ರಥಮೋ ಶಿಷ್ಯಾಶ್ಚರಮೋ ಚಾಭವನ್ನಿಹ ।
ಅನಂತಬೋಧಸ್ಯಾನೇಕೇ ಯತೀಂದ್ರಾ ಬಹುದೇಶಜಾಃ ॥ ೧೨೭ ॥

ಇಹ ಅನಂತಬೋಧಸ್ಯ ಅನಯೋಃ ಪ್ರಥಮೋ ಚರಮೋ ಚ ಅನೇಕೇ ಬಹುದೇಶಜಾಃ ಯತೀಂದ್ರಾಃ ಶಿಷ್ಯಾಃ ಅಭವನ್.

ಇಹ = ಈ ಭರತಭೂಮಿಯಲ್ಲಿ, ಅನಂತಬೋಧಸ್ಯ = ಶ್ರೀಪೂರ್ಣಪ್ರಜ್ಞರಿಗೆ, ಅನಯೋಃ (ಸಕಾಶಾತ್) = ಈ ವಿಷ್ಣುತೀರ್ಥರು ಮತ್ತು ಪದ್ಮನಾಭತೀರ್ಥರಿಗಿಂತ, ಪ್ರಥಮೋ ಚರಮೋ ಚ = ಮೊದಲಿನವರೂ ಮತ್ತು ಅನಂತರದವರೂ ಆದ, ಅನೇಕೇ = ಬಹಳಮಂದಿ, ಬಹುದೇಶಜಾಃ = ಅನೇಕ ದೇಶಗಳಲ್ಲಿ ಹುಟ್ಟಿದ, ಯತೀಂದ್ರಾಃ = ಸನ್ಯಾಸಿಶ್ರೇಷ್ಠರು, ಶಿಷ್ಯಾಃ ಅಭವನ್ = ಶಿಷ್ಯರಾಗಿದ್ದರು.

ಈ ಭಾರತದೇಶದಲ್ಲಿ ಶ್ರೀಪೂರ್ಣಪ್ರಜ್ಞಾಚಾರ್ಯರಿಗೆ ವಿಷ್ಣುತೀರ್ಥರು ಮತ್ತು ಪದ್ಮನಾಭತೀರ್ಥರಿಗಿಂತ ಮೊದಲಿನವರೂ ಅನಂತರದವರೂ ಆದ

Rarest Archiver

ಅನೇಕಮಂದಿ ನಾನಾದೇಶದಲ್ಲಿ ಜನಿಸಿದ ಸನ್ಯಾಸಿಶ್ರೇಷ್ಠರು ಶಿಷ್ಯರಾಗಿದ್ದರು.

ಅನಂತಃ ಬೋಧಃ ಯಸ್ಯ ಸಃ, ಯತೀನಾಂ ಇಂದ್ರಾಃ, ಬಹುಷು ದೇಶೇಷು ಜಾತಾಃ, 'ಪ್ರಥಮೋ ಚರಮೋ' ಎಂಬಲ್ಲಿ ಪ್ರಥಮಚರಮತಯಾಲ್ಪಾರ್ಧಕತಿಪಯನೇಮಾಶ್ಚ ಎಂಬ ಸೂತ್ರದಿಂದ (೧-೧-೩೩) ಪ್ರಥಮಾ ಬಹುವಚನದಲ್ಲಿ ಇವೆರಡು ಶಬ್ದಗಳಿಗೆ ಸರ್ವನಾಮಶಬ್ದದಂತೆಯೂರೂಪ.

ಉಳಿದ ಶಿಷ್ಯರ ಹೆಸರುಗಳು ಮತ್ತು ಸಂಕ್ಷಿಪ್ತವಾಗಿ ಮಹಿಮೆಗಳು—

ವಶೀಕೃತಹೃಷೀಕಾಶ್ಚ ಜನನಾದ್ಯುಪಮರ್ದಿನಃ ।
ನರಸಿಂಹಪದಾಧಾರಾ ಅಭ್ಯಸ್ತೋಪೇಂದ್ರನಾಮಕಾಃ ॥ ೧೨೮ ॥

ವಶೀಕೃತಹೃಷೀಕಾಃ ಜನನಾದ್ಯುಪಮರ್ದಿನಃ ನರಸಿಂಹಪದಾಧಾರಾಃ ಅಭ್ಯಸ್ತೋಪೇಂದ್ರನಾಮಕಾಃ (ಅನೇಕೇ ಯತೀಂದ್ರಾಃ ಶಿಷ್ಯಾಃ ಅಭವನ್).

ವಶೀಕೃತಹೃಷೀಕಾಃ = ಸ್ವಾಧೀನಮಾಡಿಕೊಳ್ಳಲ್ಪಟ್ಟ ಇಂದ್ರಿಯಗಳುಳ್ಳ ಶ್ರೀಹೃಷೀಕೇಶತೀರ್ಥರು, ಜನನಾದ್ಯುಪಮರ್ದಿನಃ = ಜನನ ಮರಣಾದಿಗಳನ್ನು ನಾಶಗೊಳಿಸಿಕೊಂಡಿರುವ (ಮತ್ತು ನಾಶಪಡಿಸುವ) ಜನಾರ್ದನತೀರ್ಥರು, ನರಸಿಂಹಪದಾಧಾರಾಃ = ನರಸಿಂಹ ಎಂಬ ಹೆಸರಿಗೆ ಆಶ್ರಯರಾದ ಮತ್ತು ನರಸಿಂಹದೇವರ ಪಾದವೇ ಆಶ್ರಯವಾಗಿ ಉಳ್ಳ, ನರಸಿಂಹತೀರ್ಥರು, ಚ = ಮತ್ತು, ಅಭ್ಯಸ್ತೋಪೇಂದ್ರನಾಮಕಾಃ = ಉಪೇಂದ್ರ ಎಂಬ ಹೆಸರುಳ್ಳ, ಮತ್ತು ಯಾವಾಗಲೂ ಇಂದ್ರನಿಗಿಂತಲೂ ಉತ್ತಮನಾದ ಉಪೇಂದ್ರನೆಂಬ ಹೆಸರಿನ ಶ್ರೀಹರಿಯನ್ನು ಸ್ಮರಿಸುವ ಉಪೇಂದ್ರತೀರ್ಥರು ಇಂತಹ ಅನೇಕ ಯತೀಂದ್ರರು ಆಚಾರ್ಯರ ಶಿಷ್ಯರಾಗಿದ್ದರು.

ಆ ಶಿಷ್ಯರ ಹೆಸರುಗಳು ಹೀಗಿವೆ—ಜಿತೇಂದ್ರಿಯರಾದ ಹೃಷೀಕೇಶತೀರ್ಥರು, ಜನನ-ಮರಣಗಳನ್ನು (ನಿವಾರಿಸುವ ಮತ್ತು) ನಿವಾರಿಸಿಕೊಂಡಿರುವ ಜನಾರ್ದನತೀರ್ಥರು, ನರಸಿಂಹನ ಉಪಾಸಕರಾದ ನರಸಿಂಹತೀರ್ಥರು, ಯಾವಾಗಲೂ ಉಪೇಂದ್ರಸ್ಮರಣೆ ಮಾಡುತ್ತಿರುವ ಉಪೇಂದ್ರ

Rarest Archiver

ತೀರ್ಥರು ಇವರು ಆಚಾರ್ಯರ ಶಿಷ್ಯರು. ಈ ಶ್ಲೋಕದಲ್ಲಿ ಪಲಿಮಾರು ಮಠದ ಹೃಷೀಕೇಶತೀರ್ಥರು ಮತ್ತು ಅದಮಾರು ಮಠದ ನರಸಿಂಹ ತೀರ್ಥರು (ದ್ವಂದ್ವಮಠ) ಕೃಷ್ಣಾಪುರಮಠದ ಜನಾರ್ದನತೀರ್ಥರು. ಪುತ್ತಿಗೆ ಮಠದ ಉಪೇಂದ್ರತೀರ್ಥರು (ದ್ವಂದ್ವಮಠ) ಹೀಗೆ ನಾಲ್ಕುಮಂದಿ ಯತಿ ವರ್ಯರನ್ನು ವರ್ಣಿಸಿದಂತಾಯಿತು.

ಅವಶಾನಿ ವಶಾನಿ ಸಂಪದ್ಯಮಾನಿ ಕೃತಾನಿ, ವಶೀಕೃತಾನಿ ಹೃಷೀ-ಕಾಣಿ ಯೈಃ ತೇ, ಜನನಂ ಆದಿಃ ಯೇಷಾಂ ತಾನಿ, ಜನನಾದೀನಿ ಉಪ-ಮರ್ದಿತುಂ ಶೀಲಂ ಏಷಾಂ ಇತಿ ಜನನಾದ್ಯುಪಮರ್ದಿನಃ (-ರ್ದಿನ್) ನರಸಿಂಹಸ್ಯ ಪದಂ (ನರಸಿಂಹ ಇತಿ ಪದಂ) ಆಧಾರಃ ಯೇಷಾಂ ತೇ, ಅಭ್ಯಸ್ತಂ ಉಪೇಂದ್ರ ಇತಿ ನಾಮ ಯೈಃ (ಯೇಷಾಂ) ತೇ. ಇಲ್ಲಿ ಪದಗಳ ನಿರ್ವಚನದಿಂದ ಯತಿಗಳ ಹೆಸರುಗಳನ್ನು, ಅವರ ಗುಣಗಳನ್ನೂ ಕವಿ ವರ್ಯರು ಬಹಳ ಚಮತ್ಕಾರವಾಗಿ ನಿರೂಪಿಸಿದ್ದಾರೆ. ನರಸಿಂಹಪದಾ-ಧಾರಾಃ, ಎಂಬ ಪದಕ್ಕೆ ಭಾವಪ್ರಕಾಶಿಕೆಯಲ್ಲಿ ನರಹರಿತೀರ್ಥಾಃ ಎಂದು ಅರ್ಥವನ್ನು ಕೊಟ್ಟಿದ್ದಾರೆ. ಅದಮಾರು ಮಠದ ಮೂಲ ಯತಿಗಳೇ ನರಹರಿತೀರ್ಥರು, ಅವರೇ ಮುಂದೆ ಪದ್ಮನಾಭತೀರ್ಥರ ನಂತರ ಗಟ್ಟದ ಮೇಲಿನ ಯತಿಗಳ ಪರಂಪರೆಗೆ ಸೇರಿದರೆಂದು ಅಭಿಪ್ರಾಯವು ತೋರ ಬಹುದು. ಆದರೆ ಉಡುಪಿಯ ಅಷ್ಟಮಠದ ಮೂಲಯತಿಗಳ ವೃಂದಾವನ ಗಳಾವುವೂ ಉಪಲಬ್ಧವಿಲ್ಲ. ನರಹರಿತೀರ್ಥರ ವೃಂದಾವನವು ಹಂಪೆಯಲ್ಲಿ ತುಂಗಭದ್ರಾನದಿಯ ನಡುವೆ ಇದೆ. ಅದನ್ನು ವಿಶೇಷವಾಗಿ ಗುರುತಿಸಿ ಪೂಜೆ ಮಾಡದೆ ಇರುವುದನ್ನು ಗಮನಿಸಿದಾಗ, ಅದಮಾರು ಮಠದ ಮೂಲಯತಿ ಗಳು ಅವರಲ್ಲ ಎಂದು ತೋರುತ್ತದೆ. ಅದಮಾರು ಮಠದ ಮೂಲಯತಿ ಗಳಿಗೆ ನರಹರಿತೀರ್ಥರೆಂಬ ಹೆಸರು ಬಳಕೆಯಲ್ಲಿ ಬಾರದಿರಲು ಸುಮಧ್ವವಿಜಯದ ನರಸಿಂಹಪದಾಧಾರಾಃ ಎಂಬ ಉಲ್ಲೇಖವು ಎಲ್ಲರ ಮನ ದಲ್ಲಿಯೂ ಆಳವಾಗಿ ಬೇರೂರಿರುವುದೇ ಕಾರಣವಾಗಿರಬಹುದು.

ಉಳಿದ ಮೂರುಮಂದಿ ಶಿಷ್ಯರು—

ಅದೀರ್ಘಾನ್ಯಾಭಿಧಾನಾ ಯೇ ಶ್ರೀಮದ್ರಾಮಪದಾಶ್ರಯಾಃ ।
ಅಪ್ರತ್ಯಕ್ಷಗುಣೋದ್ರಿಕ್ತಾ ಭಕ್ತಿವೈರಾಗ್ಯಸಾಗರಾಃ ॥ ೧೨೯ ॥

Rarest Archiver

ಯೇ ಅದೀರ್ಘಾನ್ಯಾಭಿಧಾನಾಃ ಶ್ರೀಮದ್ರಾಮಪದಾಶ್ರಯಾಃ ಅಪ್ರತ್ಯಕ್ಷಗುಣೋದ್ರಿಕ್ತಾಃ ಭಕ್ತಿವೈರಾಗ್ಯಸಾಗರಾಃ ಅನೇಕೇ ಯತೀಂದ್ರಾಃ ಅನಂತಬೋಧಸ್ಯಶಿಷ್ಯಾಃ ಅಭವನ್.

ಯೇ = ಯಾರು, ಅದೀರ್ಘಾನ್ಯ = ದೀರ್ಘವಲ್ಲದ ಲೌಕಿಕವ್ಯವಹಾರವುಳ್ಳ, ಮತ್ತು ದೀರ್ಘ ಎಂಬುದಕ್ಕಿಂತ ಬೇರೆಯಾದ, ಅನ್ಯ = ವಾಮನ ಎಂಬ, ಅಭಿಧಾನಾಃ = ಹೆಸರುಳ್ಳ, ವಾಮನತೀರ್ಥರು, ಶ್ರೀಮದ್ರಾಮ–ಪದಾಶ್ರಯಾಃ = ಶ್ರೀರಾಮ ಎಂಬ ಹೆಸರಿಗೆ ಆಶ್ರಯರಾದ, ಶ್ರೀರಾಮನ ಪಾದವೇ ಆಶ್ರಯವಾಗಿ ಉಳ್ಳ ರಾಮತೀರ್ಥರು, ಅಪ್ರತ್ಯಕ್ಷಗುಣ = ಕಣ್ಣಿಗೆ ಕಾಣದ ವಸ್ತುವನ್ನು ಗ್ರಹಿಸುವ ಅಪರೋಕ್ಷಜ್ಞಾನವೆಂಬ ಗುಣದಿಂದ, (ಭೂತಭವಿಷ್ಯತ್ಕಾಲದ ಜ್ಞಾನವೆಂಬ ಗುಣದಿಂದ) ಉದ್ರಿಕ್ತಾಃ = ತುಂಬಿದ (ಅಭಿವೃದ್ಧಿಗೊಂಡ) ಅಧೋಕ್ಷಜತೀರ್ಥರು, ಭಕ್ತಿವೈರಾಗ್ಯಸಾಗರಾಃ = ಭಕ್ತಿ ಮತ್ತು ವೈರಾಗ್ಯಗಳಿಗೆ ಸಮುದ್ರದಂತಿರುವ ಇವರೆಲ್ಲರೂ ಆಚಾರ್ಯರ ಶಿಷ್ಯರು.

ವಾಮನನ ನಾಮಸ್ಮರಣೆಮಾಡುವ ಲೌಕಿಕವ್ಯವಹಾರವನ್ನು ಮೊಟಕುಗೊಳಿಸಿರುವ ವಾಮನತೀರ್ಥರು, ಸಂಪತ್ಪ್ರದನಾದ ರಾಮನ ಪಾದವನ್ನು ಆಶ್ರಯಿಸಿದ ರಾಮತೀರ್ಥರು, ಅಪರೋಕ್ಷಜ್ಞಾನ, ತ್ರಿಕಾಲ ಜ್ಞಾನಾದಿರಹಸ್ಯಗುಣಭರಿತರಾದ ಅಧೋಕ್ಷಜತೀರ್ಥರು, ಇವರೆಲ್ಲರೂ ಭಗವಂತನಲ್ಲಿ ರಕ್ತಿ (ಭಕ್ತಿ), ಸಂಸಾರದಲ್ಲಿ ವಿರಕ್ತಿ ಇತ್ಯಾದಿಗುಣಸಾಗರರಾಗಿದ್ದರು. ವಾಮನತೀರ್ಥರು ಶೀರೂರು ಮಠ–ಇದಕ್ಕೆ ದ್ವಂದ್ವಮಠ ಸುಬ್ರಹ್ಮಣ್ಯಮಠಕ್ಕೂ ಮೂಲಪುರುಷರಾದ ವಿಷ್ಣುತೀರ್ಥರ ಮಠ. ರಾಮತೀರ್ಥರು ಕಾಣೂರು ಮಠದ ಮೂಲಪುರುಷರು. ಇವರಿಗೆ ದ್ವಂದ್ವಮಠ ಅಧೋಕ್ಷಜತೀರ್ಥರ ಪೇಜಾವರಮಠ. ಹೀಗೆ ಆಚಾರ್ಯರ ಎಂಟು ಮಂದಿ ಪ್ರಧಾನಶಿಷ್ಯರನ್ನೂ ವರ್ಣಿಸಿದಂತಾಯಿತು. ಈ ಯತಿಗಳ ಹೆಸರುಗಳು ಕೇವಲರೂಢನಾಮಗಳಲ್ಲ ಅನ್ವರ್ಥಗಳಾಗಿವೆ ಎಂದೂ ಒಬ್ಬರಿಗೆ ಹೇಳಿದ ಗುಣಗಳು ಮತ್ತೊಬ್ಬರಲ್ಲಿಯೂ ಇದ್ದುವೆಂದೂ ಸೂಚಿತವಾಗಿದೆ.

ಅನ್ಯಚ್ಚ ತತ್ ಅಭಿಧಾನಂ ಚ, ದೀರ್ಘಃ ನ ಭವತೀತಿ ಅದೀರ್ಘಃ

Rarest Archiver

(ವಾಮನಃ) ಅದೀರ್ಘ ಇತಿ ಅನ್ಯಾಭಿಧಾನಂ ಯೇಷಾಂ ತೇ, ಶ್ರೀಮದ್ರಾಮ ಇತಿ ಪದಸ್ಯ ಆಶ್ರಯಾಃ, ನ ಪ್ರತ್ಯಕ್ಷಾಃ, ಅಪ್ರತ್ಯಕ್ಷಾಃ ಯೇ ಗುಣಾಃ ತೈಃ ಉದ್ರಿಕ್ತಾಃ, ಭಕ್ತಿಶ್ಚ ವೈರಾಗ್ಯಂ ಚ, ಭಕ್ತಿವೈರಾಗ್ಯಾಭ್ಯಾಂ ಸಾಗರಾಃ.

ಅವರೆಲ್ಲರೂ ಮತ್ತೂ ಹೇಗಿದ್ದರು—

ಪಾದೈಃ ಪುನಂತಃ ಪೃಥಿವೀಂ ದರ್ಶಯಂತೋ ಹರೇಃ ಪದಂ ।
ಧೂತದುಸ್ಸಮಯಧ್ವಾಂತಾ ಆದಿತ್ಯಾ ಇವ ಗಾಂ ಗತಾಃ ॥ ೧೩೦ ॥

ಪಾದೈಃ ಪೃಥಿವೀಂ ಪುನಂತಃ ಹರೇಃ ಪದಂ ದರ್ಶಯಂತಃ ಧೂತ-ದುಸ್ಸಮಯಧ್ವಾಂತಾಃ ಗಾಂ ಗತಾಃ ಆದಿತ್ಯಾಃ ಇವ (ಅನೇಕೇ ಶಿಷ್ಯಾಃ ಅಭವನ್).

(ಇಲ್ಲಿಂದ ೧೩೨ ನೆಯ ಶ್ಲೋಕದವರೆಗೆ ಏಕಾನ್ವಯವು) ಪಾದೈಃ ಪೃಥಿವೀಂ ಪುನಂತಃ = ಕಾಲುಗಳಿಂದ, (ಕಿರಣಗಳಿಂದ) ಭೂಮಿಯನ್ನು ಪವಿತ್ರಗೊಳಿಸುತ್ತಿರುವ, ಹರೇಃ ಪದಂ ದರ್ಶಯಂತಃ = ವಿಷ್ಣುವಿನ ಸ್ವರೂಪವನ್ನು, ಆಕಾಶವನ್ನು ತೋರಿಸುವ, ಬೆಳಗಿಸುವ, ಧೂತದುಸ್ಸಮಯಧ್ವಾಂತಾಃ = ನಿವಾರಿಸಲ್ಪಟ್ಟ ದುಷ್ಟಶಾಸ್ತ್ರಗಳೆಂಬ ಕತ್ತಲೆಯುಳ್ಳ, (ದುಃಖಕರಸಮಯವುಳ್ಳ ಕತ್ತಲೆಯನ್ನು ನಿವಾರಿಸುವ) ಗಾಂ ಗತಾಃ ಆದಿತ್ಯಾಃ ಇವ = ಭೂಮಿಯನ್ನು ಸೇರಿರುವ ಸೂರ್ಯರಂತಿರುವ ಶಿಷ್ಯರು ಇದ್ದರು.

ಸೂರ್ಯನು ತನ್ನ ಕಿರಣಗಳಿಂದ ಭೂಮಿಯನ್ನು ಪವಿತ್ರಗೊಳಿಸುತ್ತಾ ವಿಷ್ಣುಪದ ಎಂಬ ಹೆಸರುಳ್ಳ ಆಕಾಶವನ್ನು ಬೆಳಗುತ್ತಾ ಕಗ್ಗತ್ತಲೆಯನ್ನು ಹೋಗಲಾಡಿಸುತ್ತಾ ಇರುತ್ತಾನೆ. ಇಂತಹ ಅನೇಕಸೂರ್ಯರಂತೆ ಆಚಾರ್ಯರ ಈ ಶಿಷ್ಯರೂ ತಮ್ಮ ಪಾದಗಳಿಂದ (ಸಂಚಾರದಿಂದ) ಭೂಮಿಯನ್ನು ಪವಿತ್ರಗೊಳಿಸುತ್ತಾ, ಶ್ರೀಮನ್ನಾರಾಯಣನ ಸ್ವರೂಪವನ್ನು ಶಾಸ್ತ್ರಪ್ರವಚನ ಉಪದೇಶಗಳಿಂದ ಭಕ್ತರಿಗೆ ತಿಳಿಸುತ್ತಾ, ದುಷ್ಟಶಾಸ್ತ್ರಗಳನ್ನು ನಿರಾಕರಿಸುತ್ತಾ ಶೋಭಿಸುತ್ತಿದ್ದರು.

ದುಸ್ಸಮಯಾ ಏವ ಧ್ವಾಂತಾನಿ, ಧೂತಾನಿ ದುಸ್ಸಮಯಧ್ವಾಂತಾನಿ ಯೈಃ ತೇ ;

Rarest Archiver

ಮೋಕ್ಷಶಾಸ್ತ್ರಾಮೃತಾಂಭೋಧಿಸೇವಯಾ ನಿತ್ಯನಿರ್ವೃತಾಃ |
ಚಕ್ರಿಚಾರುತರಾರ್ಚಾಸು ಚಕ್ರಿಣಶ್ಚರಣಾರ್ಚಕಾಃ || ೧೩೧ ||

ಮೋಕ್ಷಶಾಸ್ತ್ರಾಮೃತಾಂಭೋಧಿಸೇವಯಾ ನಿತ್ಯನಿರ್ವೃತಾಃ ಚಕ್ರಿ-ಚಾರುತರಾರ್ಚಾಸು ಚಕ್ರಿಣಃ ಚರಣಾರ್ಚಕಾಃ.

ಮೋಕ್ಷಶಾಸ್ತ್ರಾಮೃತಾಂಭೋಧಿ = ಮೋಕ್ಷಪ್ರದವಾದ ಶ್ರೀಮಧ್ವ ಶಾಸ್ತ್ರವೆಂಬ ಅಮೃತಸಮುದ್ರದ, ಸೇವಯಾ = ನಿತ್ಯಾಭ್ಯಾಸದಿಂದ, ನಿತ್ಯ-ನಿರ್ವೃತಾಃ = ಯಾವಾಗಲೂ ಆನಂದಿತರಾದ, ಚಕ್ರಿಚಾರುತರಾರ್ಚಾಸು = ಶ್ರೀಹರಿಯ ಮನೋಹರವಾದ ಪ್ರತಿಮೆಗಳಲ್ಲಿ, ಚಕ್ರಿಣಃ = ಶ್ರೀವಿಷ್ಣುವಿನ, ಚರಣಾರ್ಚಕಾಃ = ಪಾದವನ್ನು ಪೂಜಿಸುವ.

ಆ ಶಿಷ್ಯರು ಮೋಕ್ಷಪ್ರದವಾದ ಶ್ರೀಮಧ್ವಶಾಸ್ತ್ರವೆಂಬ ಅಮೃತಸಮುದ್ರವನ್ನು ಯಾವಾಗಲೂ ಸೇವಿಸುತ್ತಿದ್ದರು, ಶಾಸ್ತ್ರದ ಶ್ರವಣಮನನ, ಮತ್ತು ಶ್ರೀಹರಿಯ ಧ್ಯಾನವನ್ನು ಮಾಡುತ್ತಾ ಆನಂದದಿಂದಿದ್ದರು. ಶ್ರೀಹರಿಯ ಸುಂದರಪ್ರತಿಮೆಗಳಲ್ಲಿ ಆ ಪರಮಾತ್ಮನ ಅಲೌಕಿಕಸ್ವರೂಪವನ್ನೇ ಪೂಜಿಸುತ್ತಿದ್ದರು. ಇಂತಹ ಅನೇಕಶ್ರೀಮಧ್ವಶಿಷ್ಯರು ಭೂಮಿಯನ್ನು ಅಲಂಕರಿಸಿದ್ದರು.

ಮೋಕ್ಷಸಾಧನಂ ಶಾಸ್ತ್ರಂ, ಮೋಕ್ಷಶಾಸ್ತ್ರಂ ಏವ ಅಮೃತಾಂಭೋಧಿಃ, ಮೋಕ್ಷಶಾಸ್ತ್ರಾಮೃತಾಂಭೋಧೇಃ ಸೇವಾ ತಯಾ, ನಿತ್ಯಂ ನಿರ್ವೃತಾಃ, ಅತಿಶಯೇನ ಚಾರವಃ, ಚಾರುತರಾಶ್ಚ ತಾಃ ಅರ್ಚಾಶ್ಚ, ಚಕ್ರಿಣಃ ಚಾರು-ತರಾರ್ಚಾಃ ತಾಸು, ಚರಣಯೋಃ ಅರ್ಚಕಾಃ.

ಶ್ರೀಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ ಈ ಒಂಭತ್ತುಮಂದಿ ಯತಿಗಳಿಗೂ ಅನೇಕಶಿಷ್ಯಪ್ರಶಿಷ್ಯರಿದ್ದರು—

ಮಧ್ವಪ್ರಶಿಷ್ಯಾ ಬಹವಃ ಶಿಷ್ಯಾ ಯೇಷಾಂ ಮುಹುಸ್ತಥಾ |
ಅಲಂಚಕ್ರುರಲಂ ಪೃಥ್ವೀಂ ಸರ್ವೇ ಸದ್ಗುಣಭೂಷಣಾಃ || ೧೩೨ ||

ಸದ್ಗುಣಭೂಷಣಾಃ ಬಹವಃ ಮಧ್ವಪ್ರಶಿಷ್ಯಾಃ ತಥಾ ಯೇಷಾಂ ಶಿಷ್ಯಾಃ ಮುಹುಃ ತೇ ಸರ್ವೇ ಪೃಥ್ವೀಂ ಅಲಂ ಅಲಂಚಕ್ರುಃ.

Rarest Archiver

ಸದ್ಗುಣಭೂಷಣಾಃ = ಒಳ್ಳೆಯಗುಣಗಳೇ ಅಲಂಕಾರವಾಗಿ ಉಳ್ಳ, ಬಹವಃ ಮಧ್ವಪ್ರಶಿಷ್ಯಾಃ = ಬಹಳ ಮಂದಿಮಧ್ವಾಚಾರ್ಯರ ಶಿಷ್ಯರ ಶಿಷ್ಯರು, ತಥಾ = ಹಾಗೆಯೇ, ಯೇಷಾಂ ಶಿಷ್ಯಾಃ = ಯಾವ ಪ್ರಶಿಷ್ಯರ ಶಿಷ್ಯರೂ, ಮುಹುಃ = ಯಾವಾಗಲೂ, ತೇ ಸರ್ವೇ = ಅವರೆಲ್ಲರೂ, ಪೃಥ್ವೀಂ = ಭೂಮಿಯನ್ನು, ಅಲಂ = ಅತಿಶಯವಾಗಿ, ಅಲಂಚಕ್ರುಃ = ಅಲಂಕರಿಸಿದರು.

ಹೀಗೆ ಅಚಾರ್ಯರಿಗೆ ಸದ್ಗುಣಾಭರಣರಾದ ಬಹಳಮಂದಿ ಪ್ರಶಿಷ್ಯ ಯತಿಗಳೂ, ಅವರ ಶಿಷ್ಯರಾದ ಯತಿಗಳೂ ಇದ್ದರು. ಇವರೆಲ್ಲರೂ ಯಾವಾಗಲೂ ಭೂಮಂಡಲಕ್ಕೆ ಅತಿಶಯವಾಗಿ ಭೂಷಣರಾಗಿದ್ದರು.

ಮಧ್ವಸ್ಯಪ್ರಶಿಷ್ಯಾಃ, ಸಂತಶ್ಚ ತೇ ಗುಣಾಶ್ಚ, ಸದ್ಗುಣಾ ಏವ ಭೂಷಣಾನಿ ಯೇಷಾಂ ತೇ ;

ಆ ಶಿಷ್ಯರುಗಳೆಲ್ಲರೂ ಇಂತಹ ಗುಣಶಾಲಿಗಳಾಗಿದ್ದರು—

ಸದಾ ಸಕಲಸಚ್ಛಾಸ್ತ್ರವ್ಯಾಖ್ಯಾಸೌಖ್ಯಾಮೃತಾಬ್ಧಿಗಾಃ |
ಸರ್ವೇ ದುರ್ವಾದಿದುರ್ವಾದಕಾಂಡಖಂಡನಮಂಡನಾಃ ||

ಸರ್ವೇ ಸದಾ ಸಕಲಸಚ್ಛಾಸ್ತ್ರವ್ಯಾಖ್ಯಾಸೌಖ್ಯಾಮೃತಾಬ್ಧಿಗಾಃ ದುರ್ವಾದಿದುರ್ವಾದಕಾಂಡಖಂಡನಮಂಡನಾಃ (ಆಸನ್). || ೧೩೩ ||

ಸರ್ವೇ = ಎಲ್ಲರೂ, ಸದಾ = ಯಾವಾಗಲೂ, ಸಕಲಸಚ್ಛಾಸ್ತ್ರ = ಎಲ್ಲಾ, ನಿರ್ದೋಷಮಧ್ವಶಾಸ್ತ್ರದ, ವ್ಯಾಖ್ಯಾಸೌಖ್ಯ = ಪ್ರವಚನದಿಂದ ಉಂಟಾದ ಆನಂದವೆಂಬ, ಅಮೃತಾಬ್ಧಿಗಾಃ = ಅಮೃತಸಮುದ್ರದಲ್ಲಿ ಮಗ್ನರೂ, ದುರ್ವಾದಿದುರ್ವಾದ = ದುಷ್ಟವಾದಿಗಳ ದುಷ್ಟವಾದಗಳೆಂಬ, ಕಾಂಡಖಂಡನ = ಮರದ ಕಾಂಡಗಳನ್ನು ತುಂಡರಿಸುವುದೇ, ಮಂಡನಾಃ = ಅಲಂಕಾರವಾಗಿ ಉಳ್ಳವರೂ ಆಗಿದ್ದರು.

ಆ ಶ್ರೀಮಧ್ವಶಿಷ್ಯ, ಪ್ರಶಿಷ್ಯರೆಲ್ಲರೂ, ಅವರ ಶಿಷ್ಯರೂ ಯಾವಾಗಲೂ ಸಚ್ಛಾಸ್ತ್ರಪ್ರವಚನ ಮಾಡುತ್ತಾ, ಆನಂದಾಮೃತಸಾಗರದಲ್ಲಿ ಮಗ್ನರಾಗಿದ್ದರು. ಕೆಟ್ಟ ಮರಗಳ ಕಾಂಡಗಳನ್ನೇ ಕಡಿಯುವಂತೆ ಅಸಚ್ಛಾಸ್ತ್ರಗಳನ್ನು

Rarest Archiver

ಖಂಡಿಸುತ್ತಿದ್ದರು. ಇದೇ ಅವರಿಗೆ ಭೂಷಣವಾಗಿತ್ತು. ಯಥಾರ್ಥಜ್ಞಾನವನ್ನು ಸಂಪಾದಿಸುತ್ತಾ ಶಿಷ್ಯರಿಗೆ ಉಪದೇಶಿಸುತ್ತಾ ಅನ್ಯಥಾಜ್ಞಾನವನ್ನು ನಿರಾಕರಿಸುತ್ತಿದ್ದರು ಎಂದು ಭಾವ.

ಸಂತಿ ಚ ತಾನಿ ಶಾಸ್ತ್ರಾಣಿ ಚ, ಸಕಲಾನಿ ಚ ತಾನಿ ಸಚ್ಛಾಸ್ತ್ರಾಣಿ ಚ, ಸಕಲಸಚ್ಛಾಸ್ತ್ರಾಣಾಂ ವ್ಯಾಖ್ಯಾ, ಸಕಲಸಚ್ಛಾಸ್ತ್ರವ್ಯಾಖ್ಯಯಾ ಸೌಖ್ಯಂ, ಸಕಲ....ಸೌಖ್ಯಮೇವ ಅಮೃತಾಬ್ಧಿಃ, ಸಕಲ....ಅಮೃತಾಬ್ಧಿಂ ಗಚ್ಛಂತೀತಿ; ದುರ್ವಾದಿನಾಂ ದುರ್ವಾದಾಃ, ದುರ್ವಾದಿದುರ್ವಾದಾ ಏವ ಕಾಂಡಾಃ ದುರ್ವಾದಿದುರ್ವಾದಕಾಂಡಾನಾಂ ಖಂಡನಂ, ದುರ್ವಾದಿ....ಖಂಡನಂ ಏವ ಮಂಡನಂ ಯೇಷಾಂ ತೇ.

ಭೂರಿಭಕ್ತಿಭರಾಃ ಕೇಚಿದಪ್ಯಲ್ಪಶ್ರುತಸಂಪದಃ ।
ಅಪ್ಯಲ್ಪಬೋಧಾ ಅಪರೇ ಬಹುಶ್ರುತಮಹಾಗುಣಾಃ ॥ ೧೩೪ ॥

ಕೇಚಿತ್ ಅಲ್ಪಶ್ರುತಸಂಪದಃ ಅಪಿ ಭೂರಿಭಕ್ತಿಭರಾಃ, ಅಪರೇ ಅಲ್ಪಬೋಧಾ ಅಪಿ ಬಹುಶ್ರುತಮಹಾಗುಣಾಃ (ಆಸನ್).

ಕೇಚಿತ್ = ಕೆಲವರು, ಅಲ್ಪಶ್ರುತಸಂಪದಃ ಅಪಿ = ಸ್ವಲ್ಪವಾದ ಶಾಸ್ತ್ರಶ್ರವಣದ ಸಂಪತ್ತು ಉಳ್ಳವರಾದರೂ, ಭೂರಿಭಕ್ತಿಭರಾಃ = ಅಧಿಕವಾದ ಭಕ್ತಿಯುಳ್ಳವರು, ಅಪರೇ = ಮತ್ತೆ ಕೆಲವರು, ಅಲ್ಪಬೋಧಾಃ ಅಪಿ = ಸ್ವಲ್ಪವಾದ ಜ್ಞಾನಉಳ್ಳವರಾದರೂ, ಬಹುಶ್ರುತಮಹಾಗುಣಾಃ = ಬಹಳವಾದ ಶ್ರವಣವೆಂಬ ಮಹತ್ತಾದ ಗುಣವುಳ್ಳವರು.

ಈ ಮಧ್ವಶಿಷ್ಯರಲ್ಲಿ ಕೆಲವರು ಸ್ವಲ್ಪವೇ ಶಾಸ್ತ್ರಶ್ರವಣಮಾಡಿದ್ದರೂ ಅಧಿಕವಾದ ಹರಿಗುರುಭಕ್ತಿಉಳ್ಳವರಾಗಿದ್ದರು. ಮತ್ತೆ ಕೆಲವರು ಬುದ್ಧಿಶಕ್ತಿಕಡಿಮೆ ಇದ್ದರೂ ಹೆಚ್ಚಾದ ಶಾಸ್ತ್ರಶ್ರವಣವೆಂಬ ಮಹಾಗುಣವುಳ್ಳವರಾಗಿದ್ದರು ಶಾಸ್ತ್ರಾಭ್ಯಾಸವನ್ನು ಹೆಚ್ಚು ಮಾಡದಿದ್ದರೂ ಕೆಲವರು ಅತಿಶಯಭಕ್ತಿಭರಿತರು, ಮತ್ತೆ ಕೆಲವರು ಸ್ವಲ್ಪವೇ ಬುದ್ಧಿಯುಳ್ಳವರಾದರೂ ಹೆಚ್ಚು ಬಾರಿ ಶಾಸ್ತ್ರಶ್ರವಣಮಾಡಿದವರಾಗಿದ್ದರು ಎಂದು ಭಾವ.

ಭಕ್ತೇಃ ಭರಃ, ಭೂರಿಃ ಭಕ್ತಿಭರಃ ಯೇಷಾಂ ತೇ, ಶ್ರುತಂ ಇತಿ ಸಂಪತ್, ಅಲ್ಪಾ ಶ್ರುತಸಂಪತ್ ಯೇಷಾಂ ತೇ, ಅಲ್ಪಃ ಬೋಧಃ ಯೇಷಾಂ

Rarest Archiver

ತೇ ಬಹುಚ ತತ್ ಶ್ರುತಂ ಚ, ಬಹುಶ್ರುತೇನ ಮಹಾನ್ ಗುಣಃ ಯೇಷಾಂ ತೇ;

ಆಚಾರ್ಯರ ಗೃಹಸ್ಥಶಿಷ್ಯರು—

ಬಹವೋ ಗೃಹಿಣೋऽಪ್ಯಸ್ಮಾತ್ ಸಮಗ್ರಾನುಗ್ರಹಂ ಯಯುಃ ।
ದೀಪ್ತಾ ಯತ್ರಾಗ್ನಯ ಇವ ತ್ರಯೋ ಲಿಕುಚಶೇಖರಾಃ ॥ ೧೩೪ ॥

ಅಸ್ಮಾತ್ ಬಹವಃ ಗೃಹಿಣಃ ಅಪಿ ಸಮಗ್ರಾನುಗ್ರಹಂ ಯಯುಃ, ಯತ್ರ ದೀಪ್ತಾಃ ತ್ರಯಃ ಅಗ್ನಯಃ ಇವ (ದೀಪ್ತಾಃ ತ್ರಯಃ) ಲಿಕುಚ-ಶೇಖರಾಃ ಸಂತಿ.

ಅಸ್ಮಾತ್ = ಈ ಮಧ್ವಗುರುಗಳಿಂದ, ಬಹವಃ ಗೃಹಿಣಃ ಅಪಿ= ಬಹಳಮಂದಿ ಗೃಹಸ್ಥರೂ, ಸಮಗ್ರಾನುಗ್ರಹಂ ಯಯುಃ= ಸಂಪೂರ್ಣವಾದ ಅನುಗ್ರಹವನ್ನು ಹೊಂದಿದರು, ಯತ್ರ = ಯಾವ ಗೃಹಸ್ಥಶಿಷ್ಯರಲ್ಲಿ, ದೀಪ್ತಾಃ ತ್ರಯಃ ಅಗ್ನಯಃ ಇವ= ಪ್ರಕಾಶಮಾನವಾದ ಮೂರು ಅಗ್ನಿಗಳಂತೆ, (ಪ್ರಕಾಶಮಾನರಾದ ಮೂರುಮಂದಿ) ಲಿಕುಚಶೇಖರಾಃ= ಲಿಕುಚ ವಂಶಶ್ರೇಷ್ಠರಾದವರು (ಸಂತಿ= ಇದ್ದಾರೆ).

ಶ್ರೀಮಧ್ವಾಚಾರ್ಯರಿಂದ ಅನೇಕಮಂದಿ ಗೃಹಸ್ಥಾಶ್ರಮಿಗಳೂ ಸಂಪೂರ್ಣವಾದ ಅನುಗ್ರಹವನ್ನು ಹೊಂದಿದ್ದರು. ಈ ಗೃಹಸ್ಥಶಿಷ್ಯರಲ್ಲಿ ಲಿಕುಚ(ಪೆಜತ್ತಾಯ)ವಂಶದಲ್ಲಿ ಹುಟ್ಟಿದ ತ್ರಿವಿಕ್ರಮಪಂಡಿತಾಚಾರ್ಯರು, ಅವರ ತಮ್ಮ ಶಂಕರಾಚಾರ್ಯರು, ಅವರವಂಶದ ಮತ್ತೊಬ್ಬಶಂಕರಾ—ಚಾರ್ಯರು ಹೀಗೆ ಈ ಮೂರು ಮಂದಿ—ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ ಎಂಬ ಅಗ್ನಿತ್ರಯದಂತೆ ಪ್ರಕಾಶಮಾನರಾಗಿದ್ದರು.

ಸಮಗ್ರಶ್ಚ ಅಸೌ ಅನುಗ್ರಹಶ್ಚ ತಂ, ಲಿಕುಚಾನಾಂ ಶೇಖರಾಃ.

ಈ ಗೃಹಸ್ಥಶಿಷ್ಯಶ್ರೇಷ್ಠರ ಗುಣಗಳು ಹೀಗಿದ್ದುವು—

ಮಾಧ್ವಂ ನಿಯೋಗಂ ಯೇ ಪ್ರಾಯೋ ನಾತ್ಯಜನ್ ವಿದುಷಾಂ ವರಾಃ।
ಶಿಷ್ಯಕ್ಷೇತ್ರೇಷು ಸದ್ವಿದ್ಯಾಬೀಜಾವಾಪೈಕದೀಕ್ಷಿತಾಃ ॥ ೧೩೫ ॥

Rarest Archiver

ಶಿಷ್ಯಕ್ಷೇತ್ರೇಷು ಸದ್ವಿದ್ಯಾಬೀಜಾವಾಪೈಕದೀಕ್ಷಿತಾಃ ವಿದುಷಾಂ ವರಾಃ ಯೇ ಪ್ರಾಯಃ ಮಾಧ್ವಂ ನಿಯೋಗಂ ನಾತ್ಯಜನ್.

ಶಿಷ್ಯಕ್ಷೇತ್ರೇಷು = ಶಿಷ್ಯರೆಂಬ ಉತ್ತಮವಾದ ಭೂಮಿಯಲ್ಲಿ (ಹೊಲ ಗದ್ದೆಗಳಲ್ಲಿ) ಸದ್ವಿದ್ಯಾಬೀಜ = ಸಚ್ಛಾಸ್ತ್ರಗಳೆಂಬ ಬೀಜಗಳ, ಆವಾಪ = ಬಿತ್ತುವುದರಲ್ಲಿ, ಏಕದೀಕ್ಷಿತಾಃ = ಮುಖ್ಯವಾದ ದೀಕ್ಷೆಹೊಂದಿರುವ, ವಿದುಷಾಂ ವರಾಃ ಯೇ = ಪಂಡಿತಶ್ರೇಷ್ಠರಾದ ಯಾವ ಲಿಕುಚವಂಶದ ಮೂವರು, ಪ್ರಾಯಃ = ಬಹಳಮಟ್ಟಿಗೆ, ಮಾಧ್ವಂ ನಿಯೋಗಂ=ಶ್ರೀಮಧ್ವಾಚಾರ್ಯರ ಅಪ್ಪಣೆಯನ್ನು, ನಾತ್ಯಜನ್ = ಬಿಡಲಿಲ್ಲ.

ಗೃಹಸ್ಥಶಿಷ್ಯರಾದ ಈ ಮೂವರು ಪಂಡಿತಶ್ರೇಷ್ಠರು. ಶಿಷ್ಯರೆಂಬ ಉತ್ತಮವಾದ ಭೂಮಿಯಲ್ಲಿ ವೇದಾಂತವಿದ್ಯೆಯ ಬೀಜವನ್ನು ಬಿತ್ತುವ ವಿಷಯದಲ್ಲಿ ಹೆಚ್ಚಾದ ದೀಕ್ಷೆಯನ್ನು ವಹಿಸಿದ್ದರು. ಇವರು ಶ್ರೀಮಧ್ವಾಚಾರ್ಯರ ವೈಷ್ಣವಸಂಪ್ರದಾಯಾನುಸರಣದ ಆಜ್ಞೆಯನ್ನು ಮೀರಿ ನಡೆಯಲೇ ಇಲ್ಲ ಎಂಬಂತೆ ಇದ್ದರು. ಆಚಾರ್ಯರ ಆಜ್ಞೆಯನ್ನು ತಪ್ಪದೆ ಅನುಸರಿಸುತ್ತಾ ಶಿಷ್ಯರಿಗೆ ಸಚ್ಛಾಸ್ತ್ರೋಪದೇಶವನ್ನು ಎಡೆಬಿಡದೆ ಮಾಡುತ್ತಾ ಇದ್ದರು ಎಂದು ಭಾವ.

ಮಧ್ವಸ್ಯ ಅಯಂ, ಮಾಧ್ವಃ ತಂ, ಶಿಷ್ಯಾ ಏವ ಕ್ಷೇತ್ರಾಣಿ ತೇಷು, ಸತೀ ಚ ಸಾ ವಿದ್ಯಾ ಚ, ಸದ್ವಿದ್ಯಾಯಾಃ ಬೀಜಾನಿ, ಸದ್ವಿದ್ಯಾಬೀಜಾನಾಂ ಆವಾಪಃ, ಸದ್ವಿದ್ಯಾಬೀಜಾವಾಪೇ ಕೇವಲಂ ದೀಕ್ಷಿತಾಃ ಸದ್ವಿದ್ಯಾಬೀಜಾವಾಪೈಕದೀಕ್ಷಿತಾಃ.

ಆಚಾರ್ಯರಿಗೆ ಕೆಲವು ಗ್ರಾಮಾಧಿಪತಿಗಳೂ ಶಿಷ್ಯರಿದ್ದರು—

ಗ್ರಾಮಣ್ಯೋ ಬ್ರಾಹ್ಮಣಾಗ್ರಣ್ಯಃ ಪ್ರಾಪುಃ ಪೂರ್ಣೇಕ್ಷಶಿಷ್ಯತಾಂ ।
ಯೇಷಾಂ ಸದ್ಗುಪ್ತಿಮಾತ್ರೇಣ ಭವೇತ್ ಕಿಲ ಪರಂ ಪದಂ ॥ ೧೩೭ ॥

ಯೇಷಾಂ ಸದ್ಗುಪ್ತಿಮಾತ್ರೇಣ. ಪರಂ ಪದಂ ಭವೇತ್ ಕಿಲ (ಏತಾದೃಶಾಃ) ಗ್ರಾಮಣ್ಯಃ ಬ್ರಾಹ್ಮಣಾಗ್ರಣ್ಯಃ ಪೂರ್ಣೇಕ್ಷಶಿಷ್ಯತಾಂ ಪ್ರಾಪುಃ.

Rarest Archiver

ಯೇಷಾಂ = ಯಾವ ಗ್ರಾಮದ ಮುಖಂಡರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಿಗೆ, ಸದ್ಗುಪ್ತಿಮಾತ್ರೇಣ = ಸಜ್ಜನರ ರಕ್ಷಣೆಯಿಂದಲೇ, ಪರಂ ಪದಂ ಭವೇತ್ ಕಿಲ=ಶ್ರೇಷ್ಠವಾದ ಮೋಕ್ಷಸ್ಥಾನವು ಆಗಿಯೇ ತೀರುತ್ತದೆಯಷ್ಟೆ, (ಏತಾದೃಶಾಃ = ಇಂತಹ) ಗ್ರಾಮಣ್ಯಃ= ಮುಖಂಡರಾದ, ಬ್ರಾಹ್ಮಣಾಗ್ರಣ್ಯಃ=ಬ್ರಾಹ್ಮಣರೇ ಶ್ರೇಷ್ಠರಾಗಿ ಉಳ್ಳ ಕ್ಷತ್ರಿಯ, ವೈಶ್ಯ, ಶೂದ್ರರೂ, ಪೂರ್ಣೇಕ್ಷಶಿಷ್ಯತಾಂ = ಪೂರ್ಣಪ್ರಜ್ಞರ ಶಿಷ್ಯತ್ವವನ್ನು, ಪ್ರಾಪುಃ = ಹೊಂದಿದರು.

ಹಳ್ಳಿಗಳಲ್ಲಿ ಮುಖ್ಯಸ್ಥರಾದ ಬ್ರಾಹ್ಮಣಾದಿವರ್ಣದವರೂ ದುರ್ಜನರನ್ನು ದಂಡಿಸಿ ಸಜ್ಜನರನ್ನು ಕಾಪಾಡುವುದರಿಂದ ಮುಂದೆ ಒಳ್ಳೆಯ ಜ್ಞಾನವನ್ನು ಸಂಪಾದಿಸಿ ಮುಕ್ತಿಯನ್ನು ಪಡೆಯುವರು. ಅಂತಹ ಗ್ರಾಮಮುಖ್ಯಸ್ಥರಾದ ಬ್ರಾಹ್ಮಣಾದಿವರ್ಣದವರೂ ಶ್ರೀಪೂರ್ಣಪ್ರಜ್ಞರ ಶಿಷ್ಯರಾಗಿದ್ದರು.

ಬ್ರಾಹ್ಮಣಾಃ ಅಗ್ರಣ್ಯಃ ಯೇಷಾಂ ತೇ; ಪೂರ್ಣಾ ಈಕ್ಷಾ ಯಸ್ಯ ಸಃ, ಶಿಷ್ಯಸ್ಯ ಭಾವಃ ಶಿಷ್ಯತಾ, ಪೂರ್ಣೇಕ್ಷಸ್ಯ ಶಿಷ್ಯತಾ ತಾಂ, ಸತಾಂ ಗುಪ್ತಿಃ, ಸದ್ಗುಪ್ತಿರೇವ ಸದ್ಗುಪ್ತಿಮಾತ್ರಂ ತೇನ.

ತನ್ನಲ್ಲಿ ನಂಬಿಕೆ ಇಟ್ಟವರಿಗೆಲ್ಲಾ ಆಚಾರ್ಯರು ಅನುಗ್ರಹಮಾಡಿದ್ದರು—

ಶುಶ್ರೂಷಾಪಕ್ಷಪಾತಾದ್ಯೈಃ ಕೇಭ್ಯಶ್ಚಿತ್ ಕೇವಲಂ ದದೌ ।
ರಾಮಪ್ರಿಯೋ ರಾಮ ಇವ ಸ್ವಾಂ ಗತಿಂ ಯೋಗಿದುರ್ಲಭಾಂ ॥

ರಾಮಪ್ರಿಯಃ ಕೇಭ್ಯಶ್ಚಿತ್ ಕೇವಲಂ ಶುಶ್ರೂಷಾಪಕ್ಷಪಾತಾದ್ಯೈಃ ಯೋಗಿದುರ್ಲಭಾಂ ಸ್ವಾಂ ಗತಿಂ ರಾಮಃ ಇವ ದದೌ. ॥ ೧೩೮ ॥

ರಾಮಪ್ರಿಯಃ = ಶ್ರೀರಾಮನಿಗೆ ಪ್ರಿಯರಾದ ಆಚಾರ್ಯರು, ಕೇಭ್ಯಶ್ಚಿತ್ = ಕೆಲವರಿಗೆ, ಕೇವಲಂ=ಮುಖ್ಯವಾಗಿ, - ಶುಶ್ರೂಷಾಪಕ್ಷಪಾತಾದ್ಯೈಃ = ಹರಿಗುರುಸೇವೆ, ವೈಷ್ಣವಸಿದ್ಧಾಂತದೀಕ್ಷೆ ಮೊದಲಾದುವುಗಳಿಂದಲೇ, ಯೋಗಿದುರ್ಲಭಾಂ = ಭಗವಂತನ ಅನುಗ್ರಹವಿಲ್ಲದ ಯೋಗಿಗಳಿಂದ ಹೊಂದಲು ಸಾಧ್ಯವಿಲ್ಲದ, ಸ್ವಾಂ ಗತಿಂ = ಅವರವರು ಪಡೆಯಲು ಯೋಗ್ಯ

Rarest Archiver

ವಾದ ಮೋಕ್ಷವನ್ನು (ಮೋಕ್ಷಮಾರ್ಗವನ್ನು), ರಾಮಃ ಇವ = ದಾಶರಥಿ ರಾಮನಂತೆ, ದದೌ = ಕೊಟ್ಟರು.

ಶ್ರೀರಾಮಭಕ್ತರಾದ ಶ್ರೀಮಧ್ವಾಚಾರ್ಯರು, ಹರಿಗುರುಗಳನ್ನು ಎಡೆಬಿಡದೆ ಸೇವಿಸುವುದು, ಭಕ್ತಿಯಿಂದ ವ್ರತ, ಏಕಾದಶ್ಯುಪವಾಸಾದಿಗಳನ್ನು ಮಾಡುವುದು, ಸಚ್ಛಾಸ್ತ್ರನಿಷ್ಠೆ ಮೊದಲಾದ ಗುಣಗಳಿಂದ ಪ್ರಸನ್ನರಾಗಿ, ಶ್ರೀರಾಮಚಂದ್ರನಂತೆ ಯೋಗಿಗಳಿಗೂ ದುರ್ಲಭವಾದ ತನ್ನ ಅಧೀನವಾದ ಮೋಕ್ಷವನ್ನು ಕೊಟ್ಟರು. ಶ್ರೀರಾಮಚಂದ್ರನು ಪರಂಧಾಮಕ್ಕೆ ಹೋಗುವಾಗ **'ಸಮಾಯಾತ ಸಮಾಯಾತ ಯೇ ಯೇ ಮೋಕ್ಷಪದೇಚ್ಛವಃ'** ಮೋಕ್ಷಸ್ಥಾನವನ್ನು ಇಚ್ಛಿಸುವವರೆಲ್ಲರೂ ಬನ್ನಿರಿ ಬನ್ನಿರಿ ಎಂದು ಡಂಗುರಸಾರಿಸಿ ಕರೆದಾಗ, ಮೋಕ್ಷಯೋಗ್ಯರಾದವರೆಲ್ಲಾ ಬಂದರು. **'ಖಗಾ ಮೃಗಾಸ್ತೃಣಾದಯಃ'** ಎಂಬಂತೆ ಪಶುಪಕ್ಷಿಮೊದಲಾದವುಗಳಿಗೂ ಹರಿಯು ಯೋಗ್ಯಗತಿಯನ್ನು ಕರುಣಿಸಿದನು. ಅದರಂತೆ ಶ್ರೀಮಧ್ವರೂ ಕೂಡ ಅಲ್ಪಸಾಧನಸಂಪನ್ನರಿಗೂ ತನ್ನ ಸಾಮರ್ಥ್ಯದಿಂದ ಉತ್ತಮಗತಿಯನ್ನು ಕೊಟ್ಟರು. 'ವಿದ್ಯುತ್‌ಪತಿರ್ವಾಯುರೇವ ನಯೇದ್ ಬ್ರಹ್ಮ ನ ಚಾಪರಃ' ಭಾರತೀಪತಿಯಾದ ವಾಯುದೇವರೇ ದೇವರ ಸಮೀಪಕ್ಕೆ ಯೋಗ್ಯಜೀವರನ್ನು ಒಯ್ಯಲು ಸಮರ್ಥರು ಎಂಬ ವಚನದಂತೆ ಆಚಾರ್ಯರು ಮೋಕ್ಷಪ್ರದಾನವನ್ನುಮಾಡಿ ತಾನು ಮುಖ್ಯಪ್ರಾಣಾವತಾರನೆಂದು ಭಕ್ತರಿಗೆ ತಿಳಿಯಪಡಿಸಿದರು.

ಶುಶ್ರೂಷಾ ಚ ಪಕ್ಷಪಾತಶ್ಚ, ಶುಶ್ರೂಷಾಪಕ್ಷಪಾತೌ ಆದ್ಯೌ ಯೇಷಾಂ ತೇ ತೈಃ, ರಾಮಸ್ಯ ಪ್ರಿಯಃ, (ರಾಮಃ ಪ್ರಿಯಃ ಯಸ್ಯ ಸಃ) ಯೋಗಿಭಿಃ ದುರ್ಲಭಾ ತಾಂ.

ಆಚಾರ್ಯರ ಪಾದಗಳನ್ನು ಯೋಗ್ಯಜೀವರು ಎಂದೂ ಬಿಡಲಾರರು—

ಶಿಷ್ಯಪ್ರಶಿಷ್ಯಾತಿಶಯಾ ಈದೃಶಾ ಯದ್ದಯೋದಯಾತ್ ।
ಕೋ ನೇಚ್ಛೇತ್ ಸುಲಭಂ ಭಕ್ತ್ಯಾ ತತ್ಪಾದಸುರಪಾದಪಂ ॥ ೧೩೯ ॥

ಯದ್ದಯೋದಯಾತ್ ಶಿಷ್ಯಪ್ರಶಿಷ್ಯಾತಿಶಯಾಃ ಈದೃಶಾಃ ಭಕ್ತ್ಯಾ ಸುಲಭಂ ತತ್ಪಾದಸುರಪಾದಪಂ ಕೋ ನೇಚ್ಛೇತ್.

Rarest Archiver

ಯದ್ದಯೋದಯಾತ್ = ಯಾವ ಶ್ರೀಮಧ್ವಾಚಾರ್ಯರ ಕರುಣೆಯು ಉದಯದಿಂದ, ಶಿಷ್ಯಪ್ರಶಿಷ್ಯಾತಿಶಯಾಃ = ಶಿಷ್ಯಪ್ರಶಿಷ್ಯರ ಸಾಮರ್ಥ್ಯಗಳು, ಈದೃಶಾಃ = ಹೀಗೆ ಇರುವುವೋ, ಭಕ್ತ್ಯಾ ಸುಲಭಂ = ಭಕ್ತಿಯಿಂದ ಅನಾಯಾಸವಾಗಿ ದೊರಕುವ, ತತ್ಪಾದಸುರಪಾದಪಂ = ಆಚಾರ್ಯರ ಪಾದ ಗಳೆಂಬ ಕಲ್ಪವೃಕ್ಷವನ್ನು, ಕಃ ನೇಚ್ಛೇತ್ = ಯಾವನು ಇಚ್ಛಿಸಲಾರನು ?

ಶ್ರೀಮಧ್ವಾಚಾರ್ಯರ ಶಿಷ್ಯಪ್ರಶಿಷ್ಯಾದಿಗಳು ಅವರ ಅನುಗ್ರಹದಿಂದ ಇಂತಹ ಸಾಮರ್ಥ್ಯವಿಶೇಷಗಳನ್ನು ಪಡೆದಿರುತ್ತಾರೆ. ಅನನ್ಯಭಕ್ತಿಯಿಂದ ಸೇವಿಸುವ ಜನರಿಗೆ ಕಲ್ಪವೃಕ್ಷದಂತೆ ಇಷ್ಟಾರ್ಥವನ್ನು ನೀಡುವ ಇಂತಹ ಅವರ ಪಾದಕಮಲವನ್ನು ಯಾವನು ಬಿಡಲು ಇಚ್ಛಿಸಿಯಾನು ? ಯೋಗ್ಯರಾದ ಎಲ್ಲರೂ ಆಚಾರ್ಯರ ಪಾದಕಮಲಗಳನ್ನು ಸೇವಿಸಲು ಯಾವಾಗಲೂ ಉತ್ಕಂಠಿತರಾಗಿರುತ್ತಾರೆ ಎಂದು ಭಾವ.

ಶಿಷ್ಯಾಶ್ಚ ಪ್ರಶಿಷ್ಯಾಶ್ಚ, ಶಿಷ್ಯಪ್ರಶಿಷ್ಯಾಣಾಂ ಅತಿಶಯಾಃ, ಯಸ್ಯ ದಯಾ ಯದ್ದಯಾ, ಯದ್ದಯಾಯಾಃ ಉದಯಃ ಯದ್ದಯೋದಯಃ ತಸ್ಮಾತ್; ತಸ್ಯ ಪಾದೌ, ತತ್ಪಾದೌ ಏವ ಸುರಾಣಾಂ ಪಾದಪಃ ತಂ.

ಇಚ್ಛೇತ್ ಇಚ್ಛೇತಾಂ ಇಚ್ಛೇಯುಃ, ಇಷ ಇಚ್ಛಾಯಾಂ ಸಕ. ಪರ. ಸೇಟ್. ವಿಧಿಲಿಙ್.

ಹೀಗೆ ಭಕ್ತರನ್ನು ಅನುಗ್ರಹಿಸುವ ಆಚಾರ್ಯರು ಒಂದು ಬಾರಿ ಕಣ್ವತೀರ್ಥದಲ್ಲಿ ಚಾತುರ್ಮಾಸ್ಯ ದೀಕ್ಷಿತರಾಗಿ ವಾಸಮಾಡಿದರು—

ಇತ್ಥಂ ಸದ್ಭಿಃ ಸದ್ಭಿರರ್ಚ್ಯೋ ಧರಾಯಾಂ
ಚಕ್ರೇ ವಾಸಂ ಶೇಷಶಯ್ಯೇ ಶಯಾನೇ ।
ಗ್ರಾಮೇ ವಾತ್ಯೈಃ ಪಾವಿತೇ ಕಾಣ್ವತೀರ್ಥೈ-
ರ್ಭಕ್ತಪ್ರೀತ್ಯಾ ಸನ್ಮತೇಽನೂನಬೋಧಃ ॥ ೧೪೦ ॥

ಧರಾಯಾಂ ಇತ್ಥಂ ಸದ್ಭಿಃ ಸದ್ಭಿಃ ಅರ್ಚ್ಯಃ ಅನೂನಬೋಧಃ ಶೇಷ-ಶಯ್ಯೇ ಶಯಾನೇ ಕಾಣ್ವತೀರ್ಥೈಃ ವಾತ್ಯೈಃ ಪಾವಿತೇ ಗ್ರಾಮೇ ಸನ್ಮತೇ ಭಕ್ತಪ್ರೀತ್ಯಾ ವಾಸಂ ಚಕ್ರೇ.

Rarest Archiver

ಧರಾಯಾಂ = ಭೂಮಿಯಲ್ಲಿ, ಇತ್ಥಂ ಸದ್ಭಿಃ ಸದ್ಭಿಃ = ಹೀಗೆ ಇರುವ ಸಜ್ಜನರಿಂದ, ಅರ್ಚ್ಯಃ ಅನೂನಬೋಧಃ = ಪೂಜಿಸಲು ಅರ್ಹರಾದ ಶ್ರೀಪೂರ್ಣಪ್ರಜ್ಞಾಚಾರ್ಯರು, ಶೇಷಶಯ್ಯೇ ಶಯಾನೇ = ಶೇಷನೇ ಹಾಸಿಗೆಯಾಗಿ ಉಳ್ಳ ಶ್ರೀಮನ್ನಾರಾಯಣನು ಮಲಗಿರುವಾಗ, (ಶಯನೈಕಾದಶಿಯಿಂದ ಆರಂಭಿಸಿ ಚಾತುರ್ಮಾಸ್ಯದ ನಾಲ್ಕು ತಿಂಗಳು ಪೂರ್ತಿ) ಕಾಣ್ವ-ತೀರ್ಥ್ಯೈಃ = ಕಣ್ವತೀರ್ಥದಿಂದ ಬರುತ್ತಿರುವ, ವಾತೈಃ = ಗಾಳಿಗಳಿಂದ, ಪಾವಿತೇ = ಪವಿತ್ರವಾಗಿರುವ, ಗ್ರಾಮೇ = ಏಕವಾಟ (ತಾಂತ್ಯ)ವೆಂಬ ಹಳ್ಳಿಯಲ್ಲಿ, ಸನ್ಮಠೇ = ಮಂಗಳಕರವಾದ ಮಠದಲ್ಲಿ, ಭಕ್ತಪ್ರೀತ್ಯಾ = ಭಕ್ತರ ಮೇಲಿನ ಪ್ರೀತಿಯಿಂದ, ವಾಸಂ ಚಕ್ರೇ = ವಾಸಮಾಡಿದರು.

ಹೀಗೆ ಸಜ್ಜನರು ಪೂರ್ಣಪ್ರಜ್ಞರನ್ನು ಭಕ್ತಿಯಿಂದ ಪೂಜಿಸುತ್ತಿದ್ದರು. ಆಗ ಕಣ್ವತೀರ್ಥದ ಗಾಳಿಗಳಿಂದ ಪವಿತ್ರವಾದ ತಾಂತ್ಯವೆಂಬ ಗ್ರಾಮದಲ್ಲಿ ಮಂಗಳಕರವಾದ ಮಠದಲ್ಲಿ ಆಚಾರ್ಯರು ಭಕ್ತರ ಪ್ರಾರ್ಥನೆಯಂತೆ ಚಾತುರ್ಮಾಸ್ಯವ್ರತದೀಕ್ಷೆಯನ್ನು ಕೈಗೊಂಡು ಅಲ್ಲಿಯೇ ವಾಸಮಾಡಿದರು.

ಶೇಷಃ ಶಯ್ಯಾ ಯಸ್ಯ ಸಃ ತಸ್ಮಿನ್, ಕಣ್ವತೀರ್ಥಸ್ಯ ಇಮೇ ಕಾಣ್ವ-ತೀರ್ಥಾಃ ತೈಃ, ಸಂಶ್ಚಾಸೌ ಮಠಶ್ಚ ಸನ್ಮಠಃ ತಸ್ಮಿನ್, ನ ಊನಃ, ಅನೂನಃ ಬೋಧಃ ಯಸ್ಯ ಸಃ.

ಇಲ್ಲಿ ಶಾಲಿನೀವೃತ್ತ, ಲಕ್ಷಣ—ಶಾಲಿನ್ಯುಕ್ತಾ ಮ್ತೌ ತಗೌ ಗೋಽಬ್ಧಿ-ಲೋಕೈಃ.

ಶ್ರೀಮಧ್ವಾಚಾರ್ಯರನ್ನು ನೋಡಿದವರ ಸೇವಕರ ಸೇವೆಮಾಡುವುದೂ ಬಹಳ ಪುಣ್ಯಕರ, ಅದೃಷ್ಟವಿದ್ದವರಿಗೆ ಮಾತ್ರ ಲಭ್ಯ—

ಸ್ವಾನಂದತೀರ್ಥಭಗವದ್ವದನೇಂದುಬಿಂಬಂ
ವಿದ್ಯಾಸುಧಾವಿತತಕಾಂತಿ ಸುಕಾಂತಿಕಾಂತಂ ।
ಯೈಃ ಪ್ರೈಕ್ಷ್ಯತಾತ್ರ ಭವತಾಪಶಮಾಯ ಭಕ್ತ್ಯೈಃ
ತದ್ದಾಸದಾಸ್ಯಮಪಿ ಕಿಂ ನ ದದಾತಿ ಪುಂಸಃ ॥ ೧೪೧ ॥

ಇತಿ ಶ್ರೀಮತ್ಕವಿಕುಲತಿಲಕತ್ರಿವಿಕ್ರಮಪಂಡಿತಾಚಾರ್ಯಸುತ-

Rarest Archiver

ನಾರಾಯಣಪಂಡಿತಾಚಾರ್ಯವಿರಚಿತೇ
ಶ್ರೀಸುಮಧ್ವವಿಜಯೇ ಮಹಾಕಾವ್ಯೇ ಆನಂದಾಂಕೇ
ವಾದಿನಿಗ್ರಹಗ್ರಂಥನಿರ್ಮಾಣಶಿಷ್ಯಸಂಪತ್ತಿವರ್ಣನಾತ್ಮಕಃ
ಪಂಚದಶಃ ಸರ್ಗಃ||

ಅತ್ರ ಯೈಃ ಭಕ್ತೈಃ ಭವತಾಪಶಮಾಯ ವಿದ್ಯಾಸುಧಾವಿತತಕಾಂತಿ ಸುಕಾಂತಿಕಾಂತಂ ಸ್ವಾನಂದತೀರ್ಥಭಗವದ್ವದನೇಂದುಬಿಂಬಂ ಪ್ರೈಕ್ಷ್ಯತ ತದ್ದಾಸದಾಸ್ಯಮಪಿ ಪುಂಸಃ ಕಿಂ ನ ದದಾತಿ ?

ಅತ್ರ= ಈ ಲೋಕದಲ್ಲಿ, ಯೈಃ ಭಕ್ತೈಃ= ಯಾವಭಕ್ತರಿಂದ, ಭವತಾಪಶಮಾಯ = ಸಂಸಾರದ ಕಷ್ಟವನ್ನು ನಿವಾರಿಸುವ ಸಲುವಾಗಿ, ವಿದ್ಯಾಸುಧಾವಿತತಕಾಂತಿ = ವಿದ್ಯೆಯೆಂಬ ಅಮೃತದ ಹರಡಿದ ಕಾಂತಿ ಯುಳ್ಳ, ಸುಕಾಂತಿಕಾಂತಂ= ಉತ್ತಮವಾದ ಕಾಂತಿಯಿಂದ ಮನೋಹರ ವಾದ, ಸ್ವಾನಂದತೀರ್ಥಭಗವದ್ವದನೇಂದುಬಿಂಬಂ = ಶ್ರೀಮತ್ ಆನಂದ ತೀರ್ಥಭಗವತ್ಪಾದರ ಮುಖಚಂದ್ರಮಂಡಲವು, ಪ್ರೈಕ್ಷ್ಯತ= ನೋಡಲ್ಪ ಟ್ಟಿತೋ, ತದ್ದಾಸದಾಸ್ಯಂ ಅಪಿ= ಆಚಾರ್ಯರ ಮುಖವನ್ನು ನೋಡಿದವರ ಸೇವಕರ ಸೇವಕತನವೂ, ಪುಂಸಃ= ಮಾನವನಿಗೆ, ಕಿಂ ನ ದದಾತಿ= ಏನು ತಾನೇ ಕೊಡುವುದಿಲ್ಲ ?

ಶ್ರೀಮದಾನಂದತೀರ್ಥಭಗವತ್ಪಾದರ ಮುಖಚಂದ್ರಬಿಂಬವು ವಿದ್ಯೆ ಯೆಂಬ ಅಮೃತದ ಕಾಂತಿಯನ್ನು ಸುತ್ತಲೂ ಹರಡುತ್ತಾ ಇರುತ್ತದೆ. ಸ್ವಾಭಾವಿಕವಾದ ಶ್ರೇಷ್ಠವಾದ ಕಾಂತಿಯಿಂದ ಮನೋಹರವಾಗಿದೆ. ಸಂಸಾರತಾಪಪರಿಹಾರಕ್ಕೋಸ್ಕರ ಆಚಾರ್ಯರ ಇಂತಹ ಮುಖವನ್ನು ಯಾರು ನೋಡಿರುತ್ತಾರೋ ಅಂತಹವರ ಸೇವಕರ ಸೇವೆಯೂ ಕೂಡ ಸಾತ್ವಿಕಜೀವರಿಗೆ ಯಾವ ಅಭೀಷ್ಟವನ್ನು ತಾನೇ ಕೊಡಲಾರದು ? ಆಚಾರ್ಯರನ್ನು ನೋಡಿರುವವರ ದಾಸಾನುದಾಸನಾಗಿರುವವನೂ ಕೂಡ ಅವರ ಅನುಗ್ರಹದಿಂದ ಇಷ್ಟಾರ್ಥವನ್ನು ಪಡೆಯುವನೆಂದ ಮೇಲೆ ಶ್ರೀಮಧ್ವಾ ಚಾರ್ಯರ ಸಾಕ್ಷಾದ್ಭಕ್ತರ ಪುಣ್ಯಕ್ಕೆ ಮಿತಿಯೇ ಇಲ್ಲ ಎಂದು ಭಾವ.

Rarest Archiver

ಶೋಭನಶ್ಚಾಸೌ ಆನಂದತೀರ್ಥಶ್ಚ, ಸ್ವಾನಂದತೀರ್ಥ ಇತಿ ಭಗವಾನ್, ವದನಂ ಇಂದುರಿವ, ವದನೇಂದೋಃ ಬಿಂಬಂ, ಸ್ವಾನಂದತೀರ್ಥಭಗವತಃ ವದನೇಂದುಬಿಂಬಂ, ತತ್ ; ಸುಧಯಾ ವಿತತಾ, ಸುಧಾವಿತತಾ ಚ ಸಾ ಕಾಂತಿಶ್ಚ, ವಿದ್ಯೈವ ಸುಧಾವಿತತಕಾಂತಿಃ ಯಸ್ಯ ತತ್, ಸುಶೋಭನಾ ಚ ಸಾ ಕಾಂತಿಶ್ಚ, ಸುಕಾಂತ್ಯಾ ಕಾಂತಂ ತತ್; ಭವಸ್ಯ ತಾಪಾಃ, ಭವತಾಪಾನಾಂ ಶಮಃ ಭವತಾಪಶಮಃ ತಸ್ಮೈ; ದಾಸಸ್ಯ ಭಾವಃ ದಾಸ್ಯಂ, ತೇಷಾಂ ದಾಸಾಃ ತದ್ದಾಸಾಃ, ತದ್ದಾಸಾನಾಂ ದಾಸ್ಯಂ ತತ್ ;

ಪ್ರ+ಐಕ್ಷ್ಯತ ಐಕ್ಷ್ಯೇತಾಂ ಐಕ್ಷ್ಯಂತ, ಈಕ್ಷ ದರ್ಶನೇ ಕರ್ಮಣಿ ಲಙ್. ದದಾತಿ ದತ್ತಃ ದದತಿ, ದದಾಸಿ ದತ್ಥಃ ದತ್ಥ, ದದಾಮಿ ದದ್ವಃ ದದ್ಮಃ. ಡುದಾಞ್ ದಾನೇ ಪರ. ಲಟ್. ಯೇ ಭಕ್ತಾಃ ಆನಂದತೀರ್ಥಭಗವದ್ವದನೇಂದುಬಿಂಬಂ ಪ್ರೈಕ್ಷಂತ—ಕರ್ತರಿ.

ವಸಂತತಿಲಕವೃತ್ತ—ಉಕ್ತಂ ವಸಂತತಿಲಕಂ ತಭಜಾಜಗೌಗಃ—

ಇಲ್ಲಿಗೆ ಶ್ರೀಸುಮಧ್ವವಿಜಯಮಹಾಕಾವ್ಯದಲ್ಲಿ ವಾದಿವಿಜಯ ಗ್ರಂಥನಿರ್ಮಾಣ-ಶಿಷ್ಯಸಂಪತ್ತು ಇವುಗಳನ್ನು ವರ್ಣಿಸುವ ೧೫ನೆಯ ಸರ್ಗದ ಆಚಾರ್ಯಸಾಣೂರು ಭೀಮಭಟ್ಟ ನಿಂದ ರಚಿತವಾದ ಕರ್ನಾಟಕಭಾಷಾನುವಾದವು ಸಮಾಪ್ತವಾಯಿತು.

Rarest Archiver

ಶ್ರೀಃ

ಶ್ರೀಸುಮಧ್ವವಿಜಯಮಹಾಕಾವ್ಯಂ

ಹದಿನಾರನೆಯ ಸರ್ಗದ ಕಥಾಸಾರಾಂಶ

ಒಂದಾನೊಂದು ದಿನ ಆಚಾರ್ಯರ ಭಕ್ತನಾದ ಒಬ್ಬ ಪಂಡಿತನು ಗುರುಮಹಿಮೆಯನ್ನು ಸಜ್ಜನರಿಗೆ ಹೀಗೆ ಹೇಳಲಾರಂಭಿಸಿದನು.

ಆಚಾರ್ಯರು ತನ್ನ ಸಂಚಾರಕ್ರಮದಿಂದ ಗೋಮತೀನದೀತೀರಕ್ಕೆ ಬಂದಾಗ ವೇದದ್ವೇಷಿಯಾದ ಒಬ್ಬ ಶೂದ್ರರಾಜನು ಆಚಾರ್ಯರನ್ನು ಭೇಟಿಯಾಗಿ ಈ ರೀತಿ ಮಾತನಾಡಿದನು—'ಆಚಾರ್ಯರೇ! ನಿಮ್ಮ ವೇದದಲ್ಲಿ ಯಾವುದಾದರೂ ಬೀಜವನ್ನು ಕೈಯಲ್ಲಿ ಹಿಡಿದು ಕೊಂಡು ಮಂತ್ರವನ್ನು ಜಪಿಸಿದರೆ ಮೊಳಕೆ ಮೊದಲಾದುದು ಹುಟ್ಟುತ್ತದೆ' ಎಂದು ಹೇಳಿದೆ. ಈಗ ಯಾರಾದರೂ ಹಾಗೆ ಮಾಡುವವರು ಇಲ್ಲವೇ ಇಲ್ಲವಲ್ಲ! ಆದ್ದರಿಂದ ನಿಮ್ಮ ಈ ವೇದವಾಕ್ಯವೂ ಇದರಂತೆ ಎಲ್ಲಾ ವೇದವೂ ಹುಚ್ಚರ ವಾಕ್ಯದಂತೆ ಅಪ್ರಮಾಣವು' ಎಂದನು. ಆಚಾರ್ಯರು 'ಯೋಗ್ಯನಾದ ಮಾನವನು ಜಪಿಸಿದರೆ ಫಲವು ಆಗಿಯೇ ಆಗುತ್ತದೆ' ಎಂದಾಗ ಆ ರಾಜನು 'ಕತ್ತೆಯ ಕೊಂಬಿನಂತೆ ನಿಮ್ಮ ಯೋಗ್ಯಮಾನವನು; ಇಲ್ಲವೇ ಇಲ್ಲ' ಎಂದಾಗ ಆಚಾರ್ಯರು ಹೆಸರುಕಾಳನ್ನು ತರಿಸಿ ಕೈಯಲ್ಲಿ ಮಂತ್ರಜಪವನ್ನು ಮಾಡಿ ಮೊಳಕೆ, ಹೂವು, ಕಾಳು ಬರಿಸಿ ತೋರಿಸಿದರು. ಆ ರಾಜನನ್ನು ಮೂಕವಿಸ್ಮಿತನನ್ನಾಗಿ ಮಾಡಿದರು.

ಒಂದುದಿನ ರಾತ್ರಿ ಆಚಾರ್ಯರು ಶಿಷ್ಯರಿಗೆ ಪಾಠ ಹೇಳುತ್ತಿದ್ದಾಗ ದೀಪವು ಆರಿಹೋಯಿತು. ಕೂಡಲೇ ಆಚಾರ್ಯರು ತನ್ನ ಕಾಲಿನ ಹೆಬ್ಬೆಟ್ಟನ್ನು ಮುಂದೆ ಚಾಚಿ ಅದರ ಬೆಳಕಿನಿಂದಲೇ ಶಿಷ್ಯರಿಂದ ಓದಿಸಿ ತಾನು ಪ್ರವಚನವನ್ನು ಮುಂದುವರಿಸಿದರು.

Rarest Archives

ಕರ್ಣಾಟಕ ಪ್ರಾಂತದ ಚಿಕ್ಕಮಗಳೂರು ಜಿಲ್ಲೆಯ ಕಳಸ ಎಂಬ ಗ್ರಾಮದ ಹತ್ತಿರ ಭದ್ರಾನದಿಯು ಪ್ರವಾಹವೇಗವನ್ನು ತಡೆದು ಜನರಿಗೆ ಸ್ನಾನ, ಬಟ್ಟೆಒಗೆಯುವುದು ಮುಂತಾದ ಅನುಕೂಲಮಾಡುವುದಕ್ಕಾಗಿ ಸಾವಿರಾರು ಜನರು ಸೇರಿ ಒಂದು ದೊಡ್ಡ ಬಂಡೆಯನ್ನು ದೂರದಿಂದ ನದಿಯ ಕಡೆಗೆ ಸಾಗಿಸುತ್ತಿದ್ದರು. ಆದರೆ ಮಧ್ಯದಾರಿಯಲ್ಲಿ ಸೋತು ಆ ಕೆಲಸವನ್ನು ನಿಲ್ಲಿಸಿದರು. ಆಗ ಅಲ್ಲಿ ಸಂಚಾರದಲ್ಲಿದ್ದ ಆಚಾರ್ಯರು ತಾವೊಬ್ಬರೇ ಆ ಕಲ್ಲನ್ನು ಒಯ್ದು ಸರಿಯಾದ ಜಾಗದಲ್ಲಿ ಅದನ್ನು ಇಟ್ಟರು. ಈಗಲೂ ಕೂಡ ಅಂಬುತೀರ್ಥದಲ್ಲಿರುವ ಆ ಕಲ್ಲನ್ನು ನೋಡಬಹುದು ಅದರ ಮೇಲೆ 'ಮಧ್ವೇನೈಕೇನ ಹಸ್ತೇನ ಹ್ಯಾನೀಯ ಸ್ಥಾಪಿತಾ ಶಿಲಾ' ಶ್ರೀಮಧ್ವರು ಒಂದೇ ಕೈಯಿಂದ ತಂದು ಸ್ಥಾಪಿಸಿದ ಶಿಲೆ ಎಂದು ಬರೆದಿರುವುದನ್ನು ಓದ ಬಹುದು.

ಮತ್ತೊಂದು ಸಮಯ ಸೂರ್ಯಗ್ರಹಣ ಪುಣ್ಯಕಾಲದಲ್ಲಿ ಆಚಾರ್ಯರು, ಶಿಷ್ಯರು ಮತ್ತು ಏಕಪಾಟಗ್ರಾಮದ ಜನರ ಜತೆಗೆ ಮೊದಲು ಕಣ್ವತೀರ್ಥ ದಲ್ಲಿ ಸ್ನಾನಮಾಡಿ ಅನಂತರ ಸಮುದ್ರಸ್ನಾನಕ್ಕಾಗಿ ಸಮುದ್ರದ ದಡಕ್ಕೆ ಬಂದರು. ಆಚಾರ್ಯರು ಅಲ್ಲಿ ಸಮುದ್ರತೀರದ ಮರಳಿನ ಮೇಲೆ ಕುಳಿತು ಬಹಳಹೊತ್ತು ಐತರೇಯಸೂಕ್ತವನ್ನು ವ್ಯಾಖ್ಯಾನಮಾಡಿದರು. ಅನೇಕ ಇತರ ಜನರೂ ಅಲ್ಲಿಗೆ ಬಂದು ಪ್ರವಚನವನ್ನು ಕೇಳಿ ಆಚಾರ್ಯರಿಗೆ ವಂದಿಸಿ ಗ್ರಹಣಕಾಲದಲ್ಲಿ ಸಮುದ್ರದಲ್ಲಿ ಮಿಂದು ಕೃತಾರ್ಥರಾದರು. ಸ್ನಾನಮಾಡು ವಾಗ ಅಲೆಗಳ ಸೆಳೆತ ಹೊಡೆತಗಳಿಂದ ಜನರು ಮುಳುಗುತ್ತಿದ್ದರು–ಬೀಳು ತ್ತಿದ್ದರು. ಆಚಾರ್ಯರೂ ಮುಳುಗಿದರು, ಬಿದ್ದರು. ದುರ್ಜನರು ಕೆಲವರು 'ಜಗತ್ತನ್ನೆಲ್ಲಾ ಜಯಿಸಿದ ಜಗದ್ಗುರುಗಳು ಈ ಅಲ್ಪಅಲೆಗಳ ಹೊಡೆತದಿಂದ ಬೀಳುತ್ತಿದ್ದಾರೆ ಹಹಹಾ' ಎಂದು ಅಪಹಾಸ್ಯ ಮಾಡಿದರು. ಆಚಾರ್ಯರು ಈ ಮಾತನ್ನು ಲಕ್ಷಿಸದೆ ತನ್ನ ಕಡೆಗಣ್ಣಿನಿಂದ ಸಮುದ್ರವನ್ನು ನೋಡಿದಾಗ ಸಮುದ್ರವು ಅಲೆಗಳ ಆರ್ಭಟವನ್ನು ನಿಲ್ಲಿಸಿ ಸಾಧಾರಣ ಕೆರೆ ಯಂತೆ ನಿಶ್ಚಲವಾಯಿತು. ಇಂತಹ ಅದ್ಭುತಶಕ್ತಿಯನ್ನು ಕಣ್ಣಾರೆ ಕಂಡರೂ ದುರ್ಜನರು ತಮ್ಮ ಸ್ವಭಾವವನ್ನು ಅನುಸರಿಸಿ ದ್ವೇಷವನ್ನೇ ಮಾಡಿದರು.

Rarest Archiver

ಒಂದುದಿನ ಕೆಲವು ಜನರು ಆಚಾರ್ಯರ ಬಲಪರೀಕ್ಷೆಗಾಗಿ ಗಂಡವಾಟರೆಂಬ ಇಬ್ಬರು ಜಟ್ಟಿ ಸಹೋದರರನ್ನು ಸೇವೆಯ ನೆಪದಿಂದ ಕಳುಹಿಸಿದರು. ಮಹಾಬಲಶಾಲಿಗಳಾದ ಅವರಿಬ್ಬರೂ ಆಚಾರ್ಯರ ಕಂಠವನ್ನು ಹಿಸುಕಿದರು—ಆಚಾರ್ಯರಿಗೆ ಏನೂ ಆಗಲಿಲ್ಲ. ಆದರೆ ಕೊನೆಗೆ ಜಟ್ಟಿಗಳೇ ಸೋತು ನೆಲದ ಮೇಲೆ ಬಿದ್ದರು. ಸೋತು ಬೆವರಿದರೂ ಮತ್ತೂ ಬಲಗರ್ವದಿಂದ ಹೆಮ್ಮೆ ಪಡುತ್ತಿದ್ದ ಅವರಿಗೆ ಆಚಾರ್ಯರು—ನೆಲದ ಮೇಲೆ ಇಟ್ಟ ತನ್ನ ಬೆರಳನ್ನು ಎತ್ತಲು ಆಜ್ಞೆಮಾಡಿದರು. ಆದರೆ ಅವರಿಬ್ಬರಿಗೂ ಆ ಬೆರಳನ್ನು ಅಲ್ಲಾಡಿಸಲೂ ಆಗಲಿಲ್ಲ. ಮತ್ತೊಂದು ದಿನ ಆಚಾರ್ಯರು ಒಬ್ಬ ಚಿಕ್ಕ ಬ್ರಹ್ಮಚಾರಿಯ ಹೆಗಲ ಮೇಲೆ ಕುಳಿತು ನರಸಿಂಹದೇವಾಲಯಕ್ಕೆ ಪ್ರದಕ್ಷಿಣೆ ಬಂದರು. ಹೀಗೆ ತನಗೆ ಲಘಿಮಾದಿ ಅಷ್ಟಸಿದ್ಧಿಗಳೂ ಕರಗತವಾಗಿದ್ದುವು ಎಂಬ ವಿಷಯವನ್ನು ಆಚಾರ್ಯರು ಸ್ವಲ್ಪಮಟ್ಟಿಗೆ ತೋರಿಸಿದರು. ಪೂರ್ವವಾಟನೆಂಬ ಬಲಶಾಲಿಯಾದ ಬ್ರಾಹ್ಮಣನು ಆಚಾರ್ಯರ ಕತ್ತನ್ನು ಎರಡೂ ಕೈಗಳಿಂದ ಒತ್ತಿದರೂ ಅವರ ಪ್ರವಚನದ ಧ್ವನಿಯನ್ನು ತಗ್ಗಿಸಲು ಆಗಲಿಲ್ಲ. ನೆಲದ ಮೇಲಿಟ್ಟ ಆಚಾರ್ಯರ ಬೆರಳನ್ನು ಎತ್ತಲೂ ಅವನಿಗೆ ಆಗಲಿಲ್ಲ. ಹೀಗೆಯೇ ಇನ್ನೂ ಅನೇಕಮಂದಿ ಬಲಿಷ್ಠ ಜಟ್ಟಿಗಳು ಆಚಾರ್ಯರ ಬಲವನ್ನು ಪರೀಕ್ಷಿಸಿ ಸೋತರು, ಆಶ್ಚರ್ಯಪಟ್ಟರು. ಈ ಆಚಾರ್ಯರು ಭೀಮಸೇನನೇ ಸರಿ ಎಂದು ಪ್ರಾಮಾಣಿಕವಾದ (ಊಹೆಯನ್ನೇ) ಅನುಮಾನವನ್ನೇ ಮಾಡಿದರು.

ಕೆಲವು ಬಲಶಾಲಿಗಳು ಚಿಮುಟಗೆಯಿಂದ ಆಚಾರ್ಯರ ಕೂದಲನ್ನು ಕೀಳಲು ಯತ್ನಿಸಿದರು, ಒಂದು ಕೂದಲನ್ನೂ ಕೀಳಲಾಗಲಿಲ್ಲ. ಮೂಗಿನ ತುದಿಗೆ ಬಲವಾಗಿ ಗುದ್ದಿದಾಗ ಆಚಾರ್ಯರಿಗೆ ನೋವಾಗಲಿಲ್ಲ. ಮುಖವು ಪ್ರಸನ್ನವಾಗಿಯೇ ಇತ್ತು. ಅವರ ದೇಹಬಲವು ಹೀಗೆ ಅಸಾಧಾರಣವಾಗಿತ್ತು. ಅವರು ಮುಖ್ಯಪ್ರಾಣನ ಅವತಾರರೇ ಆದರೂ ಸಾಮಾನ್ಯ ಜನರಂತೆ ನಟಿಸಿದರು-ಸಾಮಾನ್ಯ ಜನರೊಡನೆ ವ್ಯವಹರಿಸಿದರು. ಹಿಂದೆ ದ್ವಾಪರಯುಗದಲ್ಲಿ ಆಚಾರ್ಯರು ಭೀಮಸೇನನಾಗಿದ್ದಾಗ ಪಾರಂತೀ ಎಂಬಲ್ಲಿ ಪಂಚರೂಪಿಯಾದ ವಿಷ್ಣುವನ್ನು ದೇವಾಲಯದಲ್ಲಿ ಪೂಜಿಸಿದ್ದರು. ಆ ದೇವಾಲಯದಲ್ಲಿ ಪೂಜಾದಿಗಳಿಲ್ಲದ್ದನ್ನು ನೋಡಿ ಆಚಾರ್ಯರು ಗ್ರಾಮದವರನ್ನು ಕರೆಸಿ ಅರ್ಧದಿವಸದಲ್ಲಿ ಪೂಜಾ, ಭೂತಬಲಿ ಇತ್ಯಾದಿಗಳೆಲ್ಲವನ್ನೂ

Rarest Archiver

ಮಾಡಿಸಿದರು. ಮುಂದೆ ಸರಿದಂತರ (ಇಡೆತುದೆ) ಎಂಬ ಗ್ರಾಮಕ್ಕೆ ಬಂದು ಅಲ್ಲಿಯ ಜನರ ಪ್ರಾರ್ಥನೆಯಂತೆ ಒಣಗಿದ ಕೆರೆಯು ತುಂಬುವಷ್ಟು ಮಾತ್ರ ಮಳೆ ಬರಿಸಿದರು. ಆಚಾರ್ಯರ ಇಂತಹ ಅಮಾನುಷಕಾರ್ಯ ಗಳನ್ನು ಸಹಿಸದ ದುರ್ಜನರು ಅವರನ್ನು ಹೊಡೆದು ಕೊಲ್ಲಲು ಗ್ರಾಮಾಧಿ ಪತಿಯಾದ ಶೂದ್ರನೊಬ್ಬನನ್ನು ಪ್ರೇರಿಸಿದರು. ಅವನು ದೊಣ್ಣೆಗಳನ್ನು ಹಿಡಿದ ನೂರಾರು ಜನರಜೊತೆಗೆ ಆಚಾರ್ಯರನ್ನು ಹೊಡೆಯಲು ಬಂದು ಸೂರ್ಯನಂತೆ ತೇಜಸ್ವಿಗಳಾದ ಆಚಾರ್ಯರನ್ನು ನೋಡಿ ಬೆಪ್ಪಾಗಿ ತಪ್ಪಾ ಯಿತೆಂದು ಅಡ್ಡಬಿದ್ದು ಕ್ಷಮೆ ಕೇಳಿದನು. ಅಲ್ಲಿಂದ ಆಚಾರ್ಯರು ವೈದ್ಯ ನಾಥೇಶ್ವರ ಎಂಬ ಹೆಸರಿನ ಧನ್ವಂತರಿರೂಪಿಯಾದ ಹರಿಯ ದೇವಾಲಯ ವಿರುವ ಕೊಕ್ಕಡ ಗ್ರಾಮಕ್ಕೆ ಹೋಗುತ್ತಾ ಒಬ್ಬ ಭಕ್ತನಿಗಾಗಿ ಕೃಷ್ಣಾಮೃತ ಮಹಾರ್ಣವವೆಂಬ ಗ್ರಂಥವನ್ನು ರಚಿಸಿದರು. ಅಲ್ಲಿಂದ ಉಜಿರೆ ಎಂಬಲ್ಲಿಗೆ ಹೋಗಿ ಅಲ್ಲಿ ತನ್ನನ್ನು ಪರೀಕ್ಷಿಸಲು ಬಂದ ಪಂಡಿತರನ್ನು ಕುರಿತು ಅವರು ಕೇಳಿದ ಬ್ರಾಹ್ಮಣಭಾಗಕ್ಕೆ ಅರ್ಥ ಹೇಳಿದರು. ಅರ್ಥವು ಸರಿಯಲ್ಲವೆಂದ ಅವರು 'ನೀವೇ ಅರ್ಥಹೇಳಿರಿ' ಎಂದು ಆಚಾರ್ಯರು ಹೇಳಿದಾಗ, ಅರ್ಥ ಹೇಳಲಾಗದೆ ಅಲ್ಲಿಂದ ಹೊರಟುಹೋಗಿ ಪುನಃ ಬಂದು ಆ ಬ್ರಾಹ್ಮಣಭಾಗದ ಮಹಾನಾಮ್ನೀ ಎಂಬ ಋಕ್ಕುಗಳಿಗೆ ಅರ್ಥವನ್ನು ಹೇಳಿರಿ ಎಂದು ಆಚಾರ್ಯ ರನ್ನು ಕೇಳಿದರು. ಆಚಾರ್ಯರು ಅದರ ಅರ್ಥವನ್ನು ವಿವರಿಸಿ ಮಂತ್ರಗಳ ಜೋಡಣೆಯನ್ನು ತಿಳಿಸಿ — ತಾನು ಹೇಳಿದ ವಿಷಯವು ಶಾಶ್ವತವಾಗಿ ಭಕ್ತರಿಗೆ ತಿಳಿಯಲು ಅನುಕೂಲಿಸುವಂತೆ 'ಕರ್ಮನಿರ್ಣಯ' ಎಂಬ ಗ್ರಂಥ ವನ್ನು ರಚಿಸಿದರು.

ದಯಾಳುಗಳಾದ ಆಚಾರ್ಯರು ಬಡವರ ಮನೆಯಲ್ಲಿ ತಯಾರಿಸಿದ ಸ್ವಲ್ಪವೇ ಅನ್ನವನ್ನು ಬಹುಪಟ್ಟು ಹೆಚ್ಚಿಸುತ್ತಿದ್ದರು. ಧನಿಕರು ತಯಾರಿಸಿದ ಮೂವತ್ತು ಜನರಿಗೆ ಸಾಕಾಗುವ ಅನ್ನಾದಿ ಪದಾರ್ಥಗಳನ್ನು ತಾವೊಬ್ಬರೇ ಸ್ವೀಕರಿಸುತ್ತಿದ್ದರು. ಮುಖ್ಯಪ್ರಾಣಾವತಾರರಾದ ಅವರಿಗೆ ಇದೊಂದು ಹುಲ್ಲುಕಡ್ಡಿ ಎತ್ತುವ ಕಾರ್ಯಕ್ಕೆ ಸಮಾನವಾಗಿತ್ತು.

ಮಹಾತ್ಮರಾದ ಆಚಾರ್ಯರ ಚರಿತ್ರೆಯನ್ನು ದೇವತೆಗಳು ಪದ್ಯರೂಪ ದಿಂದ ರಚಿಸಿ ತಮ್ಮ ಸಭೆಗಳಲ್ಲಿ ಸಂಗೀತಶಾಸ್ತ್ರಕ್ಕೆ ಅನುಗುಣವಾಗಿ ಗಂಧರ್ವ

Rarest Archiver

ರಿಂದ ಹಾಡಿಸಿದರು. ತಾವು ತಲೆಬಾಗಿ ಕೈಮುಗಿದು ಭಕ್ತಿಯಿಂದ ಕೇಳಿದರು. ಋಷಿಗಂಧರ್ವರೊಡನೆ ಆಚಾರ್ಯರನ್ನು ನೋಡಲು ಐತರೇಯೋಪನಿಷತ್ತನ್ನು ಪ್ರವಚನಮಾಡುತ್ತಿರುವ ಅವರ ಬಳಿಗೆ ಹೋದರು. ಅವರನ್ನು ನೋಡಿ ವಂದಿಸಿ ಧನ್ಯರಾಗಿ ಹೀಗೆ ಸ್ತುತಿಸಿದರು—

ಶ್ರೀಮಧ್ವಾಚಾರ್ಯರೇ! ದುಶ್ಶಾಸ್ತ್ರವೆಂಬ ಕತ್ತಲೆಯನ್ನು ನೀವು ನಿಮ್ಮ ಮಾತೆಂಬ ಕಿರಣಸಮೂಹದಿಂದ ಕಳೆದಿರಿ. ಮುಕುಂದನ ಗುಣಗಣ ಮಣಿಗಳ ಪ್ರಕಾಶವನ್ನು ಸಜ್ಜನರಿಗೆ ಒದಗಿಸಿದಿರಿ. ನಿಮ್ಮ ಗುಣಗಳಿಂದ ಹದಿನಾಲ್ಕುಲೋಕಗಳನ್ನೂ ಜಯಿಸಿದಿರಿ. ದಯೆಯಿಂದ ನಮ್ಮನ್ನೂ ಕಾಪಾಡಿರಿ. ಸಜ್ಜನರಿಗಾಗಿ ಹನುಮಂತ, ಭೀಮಸೇನ, ಮಧ್ವರೂಪದಿಂದ ಅವತರಿಸಿದ ಮುಖ್ಯಪ್ರಾಣಾಭಿನ್ನರಾದ ಶ್ರೀಮಧ್ವಗುರುವರ್ಯರೇ! ನಿಮಗೆ ನಮಸ್ಕಾರ. ನಮಗೆ ಸುಜ್ಞಾನವೆಂಬ ಸುಲೋಚನವನ್ನು ಕೊಡಿರಿ. ನಿಮಗೆ ಜಯವಾಗಲಿ — **'ಶ್ರೀಮಧ್ವಗುರುರಾಜಃ ವಿಜಯತಾಂ'** ಎಂದು ಹೇಳುತ್ತಾ ದೇವತೆಗಳು ಆಚಾರ್ಯರ ವಿಜಯಮಹೋತ್ಸವವನ್ನು ಗೌರವಿಸಿ ಎಲ್ಲರೂ ನೋಡುತ್ತಿರುವಾಗ ಅವರ ಮೇಲೆ ತುಳಸೀ, ಮಲ್ಲಿಗೆ, ಜಾಜಿ ಮುಂತಾದ ಹೂವುಗಳ ಮಳೆಯನ್ನೇ ಸುರಿಸಿದರು.

ಶ್ರೀಸುಮಧ್ವವಿಜಯಮಹಾಕಾವ್ಯಂ

ಹದಿನಾರನೆಯ ಸರ್ಗ

ಒಬ್ಬ ಪಂಡಿತನು ಶ್ರೀಮಧ್ವಾಚಾರ್ಯರ ಮಹಿಮೆಯನ್ನು ಸಜ್ಜನರಿಗೆ ಹೇಳಲಾರಂಭಿಸಿದನು—

ಸಾಧುಭ್ಯೋ ಮಧುಮಥನಾಂಘ್ರಿಭಕ್ತಿಭಾಗ್ಭ್ಯಃ
ಶ್ರೌತೇಭ್ಯೋ ವಿತತಮತೇರ್ಮಹಾನುಭಾವಂ ।
ವೇದಾಂತಂ ಸ್ವಯಮಿವ ಬಂಧಮೋಕ್ಷಮೂಲಂ
ವ್ಯಾಚಷ್ಟ ಸ್ಫುಟಮಥ ಕೋऽಪಿ ಕೋವಿದೋऽತ್ರ ॥ ೧ ॥

ಅಥ ಅತ್ರ ಕೋऽಪಿ ಕೋವಿದಃ ಸ್ವಯಂ ಮಧುಮಥನಾಂಘ್ರಿಭಕ್ತಿ-ಭಾಗ್ಭ್ಯಃ ಶ್ರೌತೇಭ್ಯಃ ಸಾಧುಭ್ಯಃ ವಿತತಮತೇಃ ಬಂಧಮೋಕ್ಷಮೂಲಂ ಮಹಾನುಭಾವಂ ಸ್ಫುಟಂ ವೇದಾಂತಂ ಇವ ವ್ಯಾಚಷ್ಟ.

ಅಥ = ಅನಂತರ, ಅತ್ರ = ಈ ಆಚಾರ್ಯರ ಶಿಷ್ಯರಲ್ಲಿ, ಕೋऽಪಿ ಕೋವಿದಃ = ಯಾವನೋ ಒಬ್ಬ ವಿದ್ವಾಂಸನಾದ ಶಿಷ್ಯನು, ಸ್ವಯಂ = ಸ್ವಭಾವದಿಂದಲೇ, ಮಧುಮಥನಾಂಘ್ರಿಭಕ್ತಿಭಾಗ್ಭ್ಯಃ = ಶ್ರೀಮನ್ನಾರಾಯಣನ ಪಾದಗಳಲ್ಲಿ ಭಕ್ತಿಯನ್ನು ಹೊಂದಿರುವ, ಶ್ರೌತೇಭ್ಯಃ ಸಾಧುಭ್ಯಃ = ವೇದನಿಷ್ಠರಾದ ಸಜ್ಜನರಿಗೆ, ವಿತತಮತೇಃ = ಶ್ರೀಪೂರ್ಣಪ್ರಜ್ಞಾಚಾರ್ಯರ, ಬಂಧಮೋಕ್ಷಮೂಲಂ = ಸಂಸಾರಬಂಧನದ ಬಿಡುಗಡೆಗೆ ಕಾರಣವಾದ, ಮಹಾನುಭಾವಂ = ಅತಿಶಯಮಾಹಾತ್ಮ್ಯವನ್ನು, ಸ್ಫುಟಂ = ಸ್ಪಷ್ಟವಾಗಿ, ವೇದಾಂತಂ ಇವ = ವೇದಾಂತಶಾಸ್ತ್ರವನ್ನೆಂಬಂತೆ, ಸ್ಫುಟಂ = ವಿಶದವಾಗಿ, ವ್ಯಾಚಷ್ಟ = ಹೇಳಿದನು.

ಒಂದುಸ್ಥಳದಲ್ಲಿ ಸ್ವತಃ ಪರಮಾತ್ಮನ ಭಕ್ತರಾದ ವೇದಜ್ಞರಾದ ಸಜ್ಜನರು ಸೇರಿದ್ದರು. ಅವರಲ್ಲಿ ಆಚಾರ್ಯರ ಶಿಷ್ಯನಾದ ಒಬ್ಬ ಪಂಡಿತನು ಸಂಸಾರಬಂಧಮೋಚಕವಾದ ವೇದಾಂತಶಾಸ್ತ್ರವನ್ನೆಂಬಂತೆ ಶ್ರೀಮಧ್ವಾಚಾರ್ಯರ ಮಹಿಮೆಯನ್ನು ಸ್ಪಷ್ಟವಾಗಿ ವಿವರಿಸಿ ಹೇಳಿದನು. ಗುರುಗಳು ಶಿಷ್ಯರಿಗೆ ಮೋಕ್ಷಸಾಧಕವಾದ ವೇದಾಂತವನ್ನು ಉಪದೇಶಿಸುವಂತೆ ಶ್ರೀಮಧ್ವರ ಮಹಿಮೆಯನ್ನು ಸಾತ್ತ್ವಿಕಜನತೆಗೆ ವಿದ್ವಾಂಸನೊಬ್ಬನು ಉಪದೇಶಿಸಿದನು ಎಂದು ಭಾವ.

ಮಥ್ನಾತೀತಿ ಮಥನಃ, ಮಧೋಃ ಮಥನಃ, ಮಧುಮಥನಸ್ಯ ಅಂಘ್ರೀ, ಮಧುಮಥನಾಂಘ್ರ್ಯೋಃ ಭಕ್ತಿಃ, ಮಧುಮಥನಾಂಘ್ರಿಭಕ್ತಿಂ ಭಜಂತೀತಿ ಮಧುಮಥನಾಂಘ್ರಿಭಕ್ತಿಭಾಜಃ ತೇಭ್ಯಃ, ಶ್ರುತೇಃ ಇಮೇ, ತೇಭ್ಯಃ, ವಿತತಾ ಮತಿಃ ಯಸ್ಯ ಸಃ ತಸ್ಯ, ಮಹಾಂಶ್ಚ ಅಸೌ ಅನುಭಾವಶ್ಚ ತಂ, ಬಂಧಾತ್ ಮೋಕ್ಷಃ ಬಂಧಮೋಕ್ಷಸ್ಯ ಮೂಲಂ ತತ್; ಪ್ರಹರ್ಷಿಣೀವೃತ್ತಂ ಮ್ನೌ ಜ್ರೌ ಗಸ್ತ್ರಿದಶಯತಿಃ ಪ್ರಹರ್ಷಿಣೀಯಂ—ಲಕ್ಷಣ.

ಒಬ್ಬ ಶೂದ್ರರಾಜನು ಆಚಾರ್ಯರನ್ನು ಆಕ್ಷೇಪಿಸಿದನು—

Rarest Archiver

ಗೋಮತ್ಯಾಸ್ತಟನಿಕಟೇಽಚ್ಛಕೀರ್ತಿಚಂದ್ರಂ
ವಿಶ್ವಜ್ಞಂ ಕ್ಷಿತಿಪತಿರಂತ್ಯವರ್ಣಜನ್ಮಾ ।
ವಿದ್ವೇಷ್ಟಾ ಶ್ರುತಿಗುಣಸಾಧಕಂ ಶ್ರುತೀನಾಂ
ವಾಚಾಲೋ ವಚನಮುವಾಚ ವಾಗ್ಮಿವರ್ಯಂ || ೨ ||

ಗೋಮತ್ಯಾಃ ತಟನಿಕಟೇ ಶ್ರುತೀನಾಂ ವಿದ್ವೇಷ್ಟಾ ವಾಚಾಲಃ ಅಂತ್ಯವರ್ಣಜನ್ಮಾ ಕ್ಷಿತಿಪತಿಃ ಅಚ್ಛಕೀರ್ತಿಚಂದ್ರಂ ಶ್ರುತಿಗುಣಸಾಧಕಂ ವಾಗ್ಮಿವರ್ಯಂ ವಿಶ್ವಜ್ಞಂ ವಚನಂ ಉವಾಚ.

ಗೋಮತ್ಯಾಃ ತಟನಿಕಟೇ = ಗೋಮತೀನದಿಯ ಸಮೀಪದಲ್ಲಿರುವ, ಶ್ರುತೀನಾಂ ವಿದ್ವೇಷ್ಟಾ = ವೇದಗಳ ದ್ವೇಷಿಯಾದ, ವಾಚಾಲಃ = ಕೆಟ್ಟದ್ದಾಗಿ ಬಹಳಮಾತಾಡುವ, ಅಂತ್ಯವರ್ಣಜನ್ಮಾ ಕ್ಷಿತಿಪತಿಃ = ಶೂದ್ರಜಾತಿಯ ರಾಜನು, ಅಚ್ಛಕೀರ್ತಿಚಂದ್ರಂ = ಪರಿಶುದ್ಧವಾದ ಕೀರ್ತಿಯಿಂದ ಚಂದ್ರನಂತಿರುವ, ಶ್ರುತಿಗುಣಸಾಧಕಂ = ವೇದಗಳ ಪ್ರಾಮಾಣ್ಯಮೊದಲಾದ ಗುಣಗಳನ್ನು ಸಾಧಿಸುವ, ವಾಗ್ಮಿವರ್ಯಂ ವಿಶ್ವಜ್ಞಂ = ಪ್ರಶಸ್ತವಾಗಿ ಮಾತಾಡುವವರಲ್ಲಿ ಶ್ರೇಷ್ಠರಾದ ಶ್ರೀಪೂರ್ಣಪ್ರಜ್ಞರನ್ನು ಕುರಿತು, ವಚನಂ ಉವಾಚ = ಮಾತನ್ನು ಹೇಳಿದನು.

ಗೋಮತೀನದಿಯ ಸಮೀಪದಲ್ಲಿ ವೇದದ್ವೇಷಿಯೂ, ಕೆಟ್ಟಮಾತನ್ನಾಡುವವನೂ, ಶೂದ್ರಜಾತಿಯವನೂ ಆದ ಒಬ್ಬ ಅರಸನಿದ್ದನು. ನಿರ್ಮಲ ಕೀರ್ತಿಯಿಂದ ಚಂದ್ರನಂತೆ ಪ್ರಕಾಶಿಸುತ್ತಾ ವೇದಪ್ರಾಮಾಣ್ಯವನ್ನು ಸಾಧಿಸುತ್ತಾ, ಯುಕ್ತಿಯುಕ್ತವಾದ ಒಳ್ಳೆಯ ಮಾತನ್ನಾಡುವ ಶ್ರೀಮಧ್ವಾಚಾರ್ಯರನ್ನು ಕುರಿತು ಆ ರಾಜನು ಇಂತೆಂದನು.

ತಟಸ್ಯ ನಿಕಟಂ ತಸ್ಮಿನ್, ಅಚ್ಛಾ ಚ ಸಾ ಕೀರ್ತಿಶ್ಚ, ಅಚ್ಛಕೀರ್ತ್ಯಾ ಚಂದ್ರ ಇವ, ತಂ; ವಿಶ್ವಂ ಜಾನಾತಿ ಇತಿ ತಂ, ಕ್ಷಿತೇಃ ಪತಿಃ, ಅಂತ್ಯೇ ವರ್ಣೇ ಜನ್ಮ ಯಸ್ಯ ಸಃ, ಶ್ರುತೀನಾಂ ಗುಣಾಃ, ಶ್ರುತಿಗುಣಾನ್ ಸಾಧಯತೀತಿ; ಕುತ್ಸಿತಂ ಬಹು ಭಾಷತೇ ಇತಿ ವಾಚಾಲಃ ಆಲಜಾಟಚೌ ಬಹುಭಾಷಿಣಿ (೫-೨-೧೨೫) ಆಲಚ್‌ಪ್ರತ್ಯಯ, ಪ್ರಶಸ್ತಾ ವಾಕ್ ಅಸ್ಯ ಇತಿ ವಾಗ್ಮೀ(ಗ್ಮಿನ್) ವಾಚೋಗ್ಮಿನಿಃ (೫-೨-೧೨೪).

Rarest Archiver

ಉನ್ಮತ್ತಪ್ರಲಪಿತವನ್ನ ತದ್ಧಿ ಮಾನಂ
ಯದ್ವಾಕ್ಯಂ ವ್ಯಭಿಚರತಿ ಕ್ವಚಿತ್ ಫಲೇऽತ್ರ ।
ದೃಷ್ಟಾಂತೋ ಭವತಿ ತದಪ್ರಮಾಣತಾಯಾಂ
ಸರ್ವೇಷಾಂ ಶ್ರುತಿವಚಸಾಂ ಚ ಸರ್ವಥೇತಿ ॥ ೩ ॥

ಅತ್ರ ಯತ್ ವಾಕ್ಯಂ ಫಲೇ ವ್ಯಭಿಚರತಿ ತತ್ ಉನ್ಮತ್ತಪ್ರಲಪಿತವತ್ ಮಾನಂ ನ ಹಿ. ತತ್ ಸರ್ವೇಷಾಂ ಶ್ರುತಿವಚಸಾಂ ಚ ಅಪ್ರಮಾಣತಾಯಾಂ ದೃಷ್ಟಾಂತಃ ಸರ್ವಥಾ ಭವತಿ.

ಅತ್ರ = ಈ ವೇದದಲ್ಲಿ, ಯತ್ ವಾಕ್ಯಂ = ಯಾವ ವೇದವಾಕ್ಯವು, ಕ್ವಚಿತ್ ಫಲೇ = ಯಾವುದಾದರೊಂದು ಪ್ರಯೋಜನವಿಷಯದಲ್ಲಿ, ವ್ಯಭಿಚರತಿ = ಸುಳ್ಳಾಗುತ್ತದೆಯೋ, (ವ್ಯತ್ಯಾಸಹೊಂದುತ್ತದೆಯೋ) ತತ್ = ಆ ಮಾತು, ಉನ್ಮತ್ತಪ್ರಲಪಿತವತ್ = ಹುಚ್ಚನ ಮಾತಿನಂತೆ, ಮಾನಂ ನಹಿ = ಪ್ರಮಾಣವಲ್ಲವೆಂದು ಪ್ರಸಿದ್ಧವಾಗಿದೆಯಷ್ಟೆ, ತತ್ = ಆ ಸುಳ್ಳುಮಾತು, ಸರ್ವೇಷಾಂ ಶ್ರುತಿವಚಸಾಂ ಚ = ಎಲ್ಲಾ ವೇದವಾಕ್ಯಗಳಿಗೂ, ಅಪ್ರಮಾಣತಾಯಾಂ = ಅಪ್ರಾಮಾಣ್ಯವಿಷಯದಲ್ಲಿ, ದೃಷ್ಟಾಂತಃ = ಉದಾಹರಣವು, ಸರ್ವಥಾ ಭವತಿ ಇತಿ = ಎಲ್ಲಾ ರೀತಿಯಿಂದಲೂ ಆಗುತ್ತದೆ ಎಂದು (ಹೇಳಿದನು).

ನಿಮ್ಮ ವೇದದಲ್ಲಿ "ಯಾವುದಾದರೊಂದು ಧಾನ್ಯದ ಬೀಜವನ್ನು ಕೈಯಲ್ಲಿ ಹಿಡಿದುಕೊಂಡು— 'ಯಾ ಓಷಧೀಃ ಪೂರ್ವಜಾತಾಃ ದೇವೇಭ್ಯಃ ತ್ರಿಯುಗಂ ಪುರಾ' ಎಂಬ ಓಷಧೀಸೂಕ್ತವನ್ನು ಜಪಿಸಿದರೆ ಕೂಡಲೇ ಆ ಬೀಜದಲ್ಲಿ ಮೊಳಕೆ ಬಂದು, ಹೂವು ಇತ್ಯಾದಿ ಎಲ್ಲವೂ ಆಗುತ್ತದೆ" ಎಂದು ಹೇಳಿದೆ. ಆದರೆ ಈಗ ಹಾಗೆ ಮಾಡಿದರೆ ಫಲಸಿದ್ಧಿಯಾಗುವುದು ಎಲ್ಲಿಯೂ ಕಂಡಿಲ್ಲ. ಯಾವ ವಾಕ್ಯವು ಒಂದು ಫಲವಿಷಯದಲ್ಲಿ ಸುಳ್ಳಾಗಿರುತ್ತದೆಯೋ ಅದು ಹುಚ್ಚನ, ಅಥವಾ ಕುಡುಕನ ಮಾತಿನಂತೆ ಪ್ರಮಾಣವಾಗುವುದಿಲ್ಲ, ನಂಬಲು ಯೋಗ್ಯವಾಗುವುದಿಲ್ಲ. ಆ ಅಪ್ರಮಾಣವಾದ ವೇದವಾಕ್ಯದ ದೃಷ್ಟಾಂತದಿಂದ ಎಲ್ಲಾ ವೇದವೂ ಅಪ್ರಮಾಣವೆಂದು ಸಾಧಿಸಲು ಬರುತ್ತದೆಯಷ್ಟೆ ?—ಎಂದು ಆ ರಾಜನು ಕೇಳಿದನು. ಯಾ ಓಷಧೀಃ ಇತ್ಯಾದಿ

Rarest Archiver

ವೇದವಾಕ್ಯಂ ನ ಪ್ರಮಾಣಂ ಫಲವ್ಯಭಿಚಾರಿತ್ವಾತ್ ಉನ್ಮತ್ತವಾಕ್ಯವತ್. (ಯಾ ಓಷಧೀಃ ಇತ್ಯಾದಿ ವೇದವಾಕ್ಯವು ಫಲಸಿದ್ಧಿಯನ್ನುಂಟು ಮಾಡುವುದಿಲ್ಲವಾದ್ದರಿಂದ ಉನ್ಮತ್ತನ ಮಾತಿನಂತೆ ಅಪ್ರಮಾಣವು) ; ವಿಪ್ರತಿಪನ್ನಂ ಸರ್ವಂ ವೇದವಾಕ್ಯಂ ಅಪ್ರಮಾಣಂ ವೇದತ್ವಾತ್ ಯಾ ಓಷಧೀಃ ಇತ್ಯಾದಿ ವೇದವಾಕ್ಯವತ್ (ಪ್ರಮಾಣವೋ ಅಪ್ರಮಾಣವೋ ಎಂದು ನಮಗೂ ನಿಮಗೂ ಚರ್ಚೆಗೆ ವಿಷಯವಾದ ಎಲ್ಲಾ ವೇದವಾಕ್ಯವೂ, ಯಾ ಓಷಧೀಃ ಇತ್ಯಾದಿವೇದವಾಕ್ಯದಂತೆಯೇ ವೇದವಾಕ್ಯವಾದುದರಿಂದ ಅಪ್ರಮಾಣವು.)

ಉನ್ಮತ್ತಸ್ಯ ಪ್ರಲಪಿತಂ,—ಲಪಿತೇನ ತುಲ್ಯಂ, ಶ್ರುತೀನಾಂ ವಚಾಂಸಿ, ತೇಷಾಂ;

ವಿ + ಅಭಿ + ಚರತಿ ಚರತಃ ಚರಂತಿ, ಚರ ಗತಿಭಕ್ಷಣಯೋಃ ಲಟ್.

ಆಚಾರ್ಯರಿಗೂ ಆ ರಾಜನಿಗೂ ಮುಂದೆ ಮಾತು ಬೆಳೆಯಿತು—

ವೇದೋಕ್ತಂ ಫಲಮಲಮಾಪ್ಯತೇಽಧಿಕಾರಾ-
ದಿತ್ಯುಕ್ತೋಽತನುಮನಸಾಭ್ಯಧತ್ತ ಧೂರ್ತಃ ।
ಯೋಗ್ಯತ್ವೇ ಸತಿ ನ ಹಿ ದೃಶ್ಯತೇಽಧಿಕಾರೀ
ನಾತಃ ಸ್ಯಾತ್ ಸ ಖರವಿಷಾಣವತ್ ಸದೇತಿ ॥ ೪ ॥

ಅಧಿಕಾರಾತ್ ವೇದೋಕ್ತಂ ಫಲಂ ಅಲಂ ಆಪ್ಯತೇ ಇತಿ ಅತನುಮನಸಾ ಉಕ್ತಃ ಧೂರ್ತಃ 'ಹಿ ಅಧಿಕಾರೀ ಯೋಗ್ಯತ್ವೇ ಸತಿ ನ ದೃಶ್ಯತೇ ಅತಃ ಸಃ ಖರವಿಷಾಣವತ್ ಸದಾ ನ ಸ್ಯಾತ್' ಇತಿ. (ಉವಾಚ).

ಅಧಿಕಾರಾತ್ = ವೇದದಲ್ಲಿ ಹೇಳಿರುವ ಮಂತ್ರ, ಕರ್ಮದ ಫಲವನ್ನು ಪಡೆಯುವ ಯೋಗ್ಯತೆ ಇರುವುದರಿಂದಲೂ, ವೇದದಲ್ಲಿ ಹೇಳಿದಂತೆ ಅನುಷ್ಠಾನಮಾಡುವುದರಿಂದಲೂ, ವೇದೋಕ್ತಂ ಫಲಂ = ವೇದಗಳಲ್ಲಿ ಹೇಳಿದ ಮಂತ್ರ, ಯಜ್ಞಾದಿಗಳ ಪ್ರಯೋಜನವು, ಅಲಂ ಆಪ್ಯತೇ = ಸರಿಯಾಗಿಯೇ ಹೊಂದಲ್ಪಡುತ್ತದೆ, ಇತಿ ಅತನುಮನಸಾ ಉಕ್ತಃ = ಹೀಗೆಂದು ಶ್ರೀಪೂರ್ಣಪ್ರಜ್ಞರಿಂದ ಹೇಳಲ್ಪಟ್ಟ, ಧೂರ್ತಃ = ವಂಚಕನಾದ ಆ ರಾಜನು, ಹಿ = ಯಾವ ಕಾರಣದಿಂದ, ಅಧಿಕಾರೀ = ಫಲವನ್ನು ಹೊಂದು

Rarest Archiver

ವವನು, ಯೋಗ್ಯತ್ವೇ ಸತಿ = ನೋಡಲು ಸಾಧ್ಯತೆ ಇದ್ದರೂ, ನ ದೃಶ್ಯತೇ = ನೋಡಲ್ಪಡುವುದಿಲ್ಲ; ಅತಃ = ಆದುದರಿಂದ, ಸಃ = ಆ ಅಧಿಕಾರಿಯು, ಖರವಿಷಾಣವತ್ = ಕತ್ತೆಯ ಕೊಂಬಿನಂತೆ, ಸದಾ ನ ಸ್ಯಾತ್ ಇತಿ = ಯಾವಾಗಲೂ ಇರಲಾರನು ಎಂದು (ಹೇಳಿದನು).

ಆಗ ಶ್ರೀಪೂರ್ಣಪ್ರಜ್ಞಾಚಾರ್ಯರು—'ವೇದದಲ್ಲಿ ಹೇಳಿದ ಮಂತ್ರ, ಯಾಗಾದಿ ವಿಧಿವಿಧಾನಗಳ ಫಲವನ್ನು ಪಡೆಯಬೇಕಾದರೆ ಮೊಟ್ಟ ಮೊದಲು ಆ ಫಲವನ್ನು ಪಡೆಯುವ ಯೋಗ್ಯತೆ ಇರಬೇಕು, ಮತ್ತು ವೇದದಲ್ಲಿ ಹೇಳಿದಂತೆ ನ್ಯೂನಾತಿರೇಕಗಳಿಲ್ಲದೆ ಆ ವಿಧಿಗಳನ್ನು ನಡೆಸಬೇಕು. ಹೀಗೆ ಮಾಡಿದರೆ ಆ ಯೋಗ್ಯ ಅಧಿಕಾರಿಯು ಅವಶ್ಯವಾಗಿ ಫಲವನ್ನು ಪಡೆಯುತ್ತಾನೆ', ಎಂದರು. ಆಗ ಆ ಮೋಸಗಾರನೂ ಮೂರ್ಖನೂ ಆದ ರಾಜನು—'ನೀವು ಹೇಳುವ ಅಧಿಕಾರಿಯು, ಮನುಷ್ಯನೇ ಆಗಿದ್ದು ನೋಡಲು ಯೋಗ್ಯನಾಗಿದ್ದರೂ, ನೋಡಲು ಸಿಗದಿರುವುದರಿಂದ ಅವನು ಕತ್ತೆಯ ಕೊಂಬಿನಂತೆ ಇಲ್ಲವೇ ಇಲ್ಲ'—ಎಂದನು. 'ವೇದದಲ್ಲಿ ಹೇಳಿದ ಆಯಾ ಮಂತ್ರ, ಯಾಗ ಮುಂತಾದುವುಗಳ ಫಲವನ್ನು ಪಡೆಯಬೇಕಾದರೆ ಆ ಮನುಷ್ಯನಲ್ಲಿ ಭಕ್ತಿ, ಜ್ಞಾನ, ಜಾತಿ, ವಿಧಿವಿಧಾನಗಳನ್ನು ಚಾಚೂತಪ್ಪದೆ ಅನುಸರಿಸುವಿಕೆ ಮೊದಲಾದ ಯೋಗ್ಯತೆ ಇರಬೇಕು. ಅಂತಹ ಯೋಗ್ಯತೆಯುಳ್ಳವನನ್ನು ನೀನು ನೋಡದೆ ಇದ್ದ ಮಾತ್ರಕ್ಕೆ ವೇದವಾಕ್ಯವನ್ನೇ ಸುಳ್ಳು ಎನ್ನಲು ಸಾಧ್ಯವಿಲ್ಲ'—ಎಂದು ಆಚಾರ್ಯರು ಹೇಳಿದಾಗ, ಆ ರಾಜನು —'ಅಂತಹ ಯೋಗ್ಯತೆಯುಳ್ಳವನು ಈ ಲೋಕದಲ್ಲಿಯೇ ಕಾಣಸಿಗಬೇಕಾದ ಮನುಷ್ಯನೇ ತಾನೇ! ಅಂತಹವನನ್ನು ತೋರಿಸಿರಿ. ಅದು ಸಾಧ್ಯವಿಲ್ಲವಾದರೆ 'ಕತ್ತೆಯ ಕೋಡು'-ಎಂಬ ಅಸತ್‌ವಸ್ತುವಿನಂತೆ ಆ ಅಧಿಕಾರಿಯೂ ಇಲ್ಲವೇ ಇಲ್ಲ. ನಿಮ್ಮ ಎಲ್ಲಾ ವೇದವೂ ಸುಳ್ಳಿನಕಂತೆ;' ಎಂದು ಆ ರಾಜನು ನಗೆಯಾಡಿದನು. ಅಪಹಾಸ್ಯಮಾಡಿ ನಕ್ಕನು.

ವೇದೇ ಉಕ್ತಂ, ನ ತನು, ಅತನು ಮನಃ ಯಸ್ಯ ತೇನ, ಖರಸ್ಯ ವಿಷಾಣಂ, ಖರವಿಷಾಣೇನ ತುಲ್ಯಂ, ಅಧಿಕಾರೀ ನ ದೃಶ್ಯತೇ-ಕರ್ಮಣಿ. ವಯಂ ಅಧಿಕಾರಿಣಂ ನ ಪಶ್ಯಾಮಃ-ಕರ್ತರಿ.

Rarest Archiver

ಶ್ರೀಮಧ್ವಗುರುಗಳು ವೇದಮಂತ್ರಗಳ ಜಪದ ಫಲವನ್ನು ಕೂಡಲೇ ಪ್ರತ್ಯಕ್ಷವಾಗಿ ತೋರಿಸಿದರು—

ಆಕ್ಷೇಪಂ ತಮಸಹಮಾನ ಉಚ್ಚಮಾನಃ
ಸದ್ಯೋಽಸೌ ನಿಜಕರಪಲ್ಲವದ್ವಯೇನ ।
ಆದಾಯ ವ್ಯತನುತ ಬೀಜಮೋಷಧೀನಾಂ
ಸೂಕ್ತೇನಾಂಕುರದಲಪುಷ್ಪಬೀಜಸೃಷ್ಟಿಂ ॥ ೫ ॥

ತಂ ಆಕ್ಷೇಪಂ ಅಸಹಮಾನಃ ಉಚ್ಚಮಾನಃ ಅಸೌ ಓಷಧೀನಾಂ ಬೀಜಂ ನಿಜಕರಪಲ್ಲವದ್ವಯೇನ ಆದಾಯ ಸೂಕ್ತೇನ ಸದ್ಯಃ ಅಂಕುರದಲ-ಪುಷ್ಪಬೀಜಸೃಷ್ಟಿಂ ವ್ಯತನುತ.

ತಂ ಆಕ್ಷೇಪಂ = ಆ ರಾಜನು ಮಾಡಿದ ವೇದಪ್ರಾಮಾಣ್ಯದ ತಿರಸ್ಕಾರವನ್ನು, ಅಸಹಮಾನಃ = ಸಹಿಸದಿರುವ, ಉಚ್ಚಮಾನಃ ಅಸೌ = ಹೆಚ್ಚಾದ ವೇದಪ್ರಾಮಾಣ್ಯದ ಅಭಿಮಾನವುಳ್ಳ ಈ ಮಧ್ವರು, ಓಷಧೀನಾಂ ಬೀಜಂ = ಹೆಸರು ಬೀಜವನ್ನು, ನಿಜಕರಪಲ್ಲವದ್ವಯೇನ ಆದಾಯ = ತಮ್ಮ ಚಿಗುರಿನಂತಹ ಎರಡು ಕೈಗಳಿಂದ ತೆಗೆದುಕೊಂಡು, ಸೂಕ್ತೇನ = 'ಯಾಓಷಧೀಃ' ಎಂಬ ಓಷಧಿಸೂಕ್ತದ ಮಂತ್ರಜಪದಿಂದ, ಸದ್ಯಃ = ಕೂಡಲೇ, ಅಂಕುರ-ದಲ-ಪುಷ್ಪ-ಬೀಜಸೃಷ್ಟಿಂ = ಮೊಳಕೆ, ಎಲೆ, ಹೂವು, ಕಾಳು ಇವುಗಳ ಉತ್ಪತ್ತಿಯನ್ನು, ವ್ಯತನುತ = ಮಾಡಿದರು.

ಆಚಾರ್ಯರು ವೇದಪ್ರಾಮಾಣ್ಯವಿಷಯದಲ್ಲಿ ಬಹಳ ಹೆಚ್ಚಾದ ಅಭಿಮಾನವುಳ್ಳವರು. ಅವರು ಆ ಧೂರ್ತನಾದ ಶೂದ್ರರಾಜನು ಮಾಡಿದ ವೇದಪ್ರಾಮಾಣ್ಯತಿರಸ್ಕಾರವನ್ನು ಸಹಿಸಲಿಲ್ಲ. ವೇದಮಂತ್ರಗಳ ಸಿದ್ಧಿಯುಳ್ಳ ಆಚಾರ್ಯರು ಕೂಡಲೇ ತನ್ನ ಚಿಗುರೆಲೆಯಂತೆ ಕೋಮಲವಾದ ಎರಡು ಕೈಗಳ ಬೊಗಸೆಯಿಂದ ಹೆಸರುಕಾಳನ್ನು ಹಿಡಿದುಕೊಂಡು 'ಯಾ ಓಷಧೀಃ ಪೂರ್ವಜಾತಾಃ–' ಇತ್ಯಾದಿ ಓಷಧೀಸೂಕ್ತಮಂತ್ರವನ್ನು ಜಪಿಸಿ, ಬಿತ್ತಿದರು, ಕೂಡಲೇ ಮೊಳಕೆ, ಚಿಗುರೆಲೆ, ಎಲೆ, ಹೂವು, ಕಾಳುಗಳು ಎಲ್ಲವೂ ಉಂಟಾದುವು. ಹೀಗೆ ಆಚಾರ್ಯರು ವೇದಮಂತ್ರದ ಪ್ರಭಾವವನ್ನು ಪ್ರತ್ಯಕ್ಷವಾಗಿ ತೋರಿಸಿದರು.

Rarest Archiver

ಉಚ್ಚಃ ಮಾನಃ ಯಸ್ಯ; ಕರೌ ಪಲ್ಲವೌ ಇವ, ನಿಜೌ ಚ ತೌ ಕರ-ಪಲ್ಲವೌ ಚ, ನಿಜಕರಪಲ್ಲವಯೋಃ ದ್ವಯಂ ತೇನ, ಅಂಕುರಶ್ಚ, ದಲಂ ಚ ಪುಷ್ಪಂ ಚ ಬೀಜಂ ಚ, ಅಂಕುರದಲಪುಷ್ಪಬೀಜಾನಾಂ ಸೃಷ್ಟಿಃ ತಾಂ,

ವಿ+ಅತನುತ ಅತನ್ವಾತಾಂ ಅತನ್ವತ. ತನು ವಿಸ್ತಾರೇ ಆತ್ಮ. ಲಙ್.

ಆಚಾರ್ಯರ ಮತ್ತೊಂದು ಮಹಿಮೆ —

ವ್ಯಾಖ್ಯಾತಾ ನಿಶಿ ಸ ಕದಾಚನ ಪ್ರದೀಪೇ
ಸಂಶಾಂತೇ ಪುನರಪಿ ವಾಚಯಾಂಬಭೂವ ।
ಶಿಷ್ಯಾನ್ ಸ್ವಾನ್ ಪುರುಕರುಣಾಂಬುಧಿರ್ನಿಜಾಂಘ್ರೇ-
ರಂಗುಷ್ಠಸ್ಫುಟನಖರಾಂತರೋಚಿಷೈವ ॥ ೬ ॥

ಕದಾಚನ ನಿಶಿ ವ್ಯಾಖ್ಯಾತಾ ಸಃ ಪ್ರದೀಪೇ ಸಂಶಾಂತೇ ನಿಜಾಂಘ್ರೇಃ ಅಂಗುಷ್ಠಸ್ಫುಟನಖರಾಂತರೋಚಿಷಾ ಏವ ಪುನಃ ಅಪಿ ಸ್ವಾನ್ ಶಿಷ್ಯಾನ್ ಪುರುಕರುಣಾಂಬುಧಿಃ ವಾಚಯಾಂಬಭೂವ.

ಕದಾಚನ ನಿಶಿ = ಒಂದಾನೊಂದು ಸಮಯದಲ್ಲಿ ರಾತ್ರಿಯಲ್ಲಿ, ವ್ಯಾಖ್ಯಾತಾ ಸಃ = ಪ್ರವಚನಮಾಡುತ್ತಿರುವ ಆ ಮಧ್ವಾಚಾರ್ಯರು, ಪ್ರದೀಪೇ ಸಂಶಾಂತೇ ಸತಿ = ದೀಪವು ಆರಿಹೋಗಲಾಗಿ, ನಿಜಾಂಘ್ರೇಃ = ತನ್ನ ಪಾದದ, ಅಂಗುಷ್ಠ – ಸ್ಫುಟನಖರಾಂತ– ರೋಚಿಷಾ ಏವ = ಹೆಬ್ಬೆರಳಿನ ಸ್ಪಷ್ಟವಾದ ಉಗುರಿನ ಕೊನೆಯ ಕಾಂತಿಯಿಂದಲೇ, ಪುನರಪಿ = ಮತ್ತೂ ಕೂಡ, ಪುರುಕರುಣಾಂಬುಧಿಃ ಸನ್ = ಅತಿಶಯವಾದ ಕರುಣಾ ಸಮುದ್ರರಾಗಿ, ವಾಚಯಾಂಬಭೂವ = ಓದಿಸಿದರು.

ಆಚಾರ್ಯರು ಒಂದಾನೊಂದು ಸಮಯದಲ್ಲಿ ರಾತ್ರಿಯಲ್ಲಿ ಶಿಷ್ಯರಿಗೆ ಪ್ರವಚನಮಾಡುತ್ತಿದ್ದರು. ಶಿಷ್ಯರು ದೀಪದ ಬೆಳಕಿನಲ್ಲಿ ಓದುತ್ತಿದ್ದರು. ಆಗ ಅಕಸ್ಮಾತ್ತಾಗಿ ದೀಪವು ಆರಿಹೋಯಿತು. ಅರ್ಧದಲ್ಲಿಯೇ ಪಾಠವು ನಿಂತು ಹೋಯಿತೆಂದು ಶಿಷ್ಯರು ನಿರಾಶರಾದರು. ಆದರೆ ಪರಮದಯಾ ಸಮುದ್ರರಾದ ಆಚಾರ್ಯರು ತನ್ನ ಕಾಲನ್ನು ಮುಂದೆ ಚಾಚಿ ಅದರ ಹೆಬ್ಬೆಟ್ಟಿನ ಉಗುರಿನಿಂದ ಅದ್ಭುತವಾದ ಬೆಳಕನ್ನು ಚಿಮ್ಮುವಂತೆ ಮಾಡಿ ಆ ಬೆಳಕಿ

Rarest Archiver

ನಲ್ಲಿಯೇ ಶಿಷ್ಯರಿಂದ ಓದಿಸಿದರು-ತಾವು ಪ್ರವಚನಮಾಡಿದರು. ಆಚಾರ್ಯರು ತೇಜಶ್ಶರೀರಗಳಾದ ದೇವತೆಯೇ ಸರಿ.

ಪುರುಶ್ಚ ಸಾ ಕರುಣಾ ಚ, ಪುರುಕರುಣಾಯಾಃ ಅಂಬುಧಿರಿವ, ನಿಜಶ್ಚಾಸೌ ಅಂಘ್ರಿಶ್ಚ, ನಖರಸ್ಯ ಅಂತಃ, ಸ್ಫುಟಶ್ಚಾಸೌ ನಖರಾಂತಶ್ಚ, ಅಂಗುಷ್ಠಸ್ಯ ಸ್ಫುಟನಖರಾಂತಃ, ಅಂಗುಷ್ಠಸ್ಫುಟನಖರಾಂತಸ್ಯ ರೋಚಿಃ ತೇನ;

ವಾಚಯಾಂ ಬಭೂವ, ... ಬಭೂವತುಃ .... ಬಭೂವುಃ, ವಚ ಪರಿಭಾಷಣೇ ಣಿಜಂತ ಲಿಟ್.

ಆಚಾರ್ಯರ ಮಹಿಮೆಯು ಮತ್ತೂ ಮುಂದುವರೆದಿದೆ—

ತೀರ್ಥಾರ್ಥಂ ಪೃಥುತರವಪ್ರಪಾತಿವಾರಾಂ
ಧಾರಾಣಾಂ ರಯಸಹನಕ್ಷಮಾಂ ಮಹೇಕ್ಷಃ।
ಆನೀತಾಂ ದಶಶತಪುಂಭಿರತ್ಯಶಕ್ತ್ಯಾ
ಪ್ರೇಕ್ಷ್ಯೋಚೇ ವಿಪುಲಶಿಲಾಂ ಕ್ವಚಿತ್ಸಮುಕ್ತಾಂ ॥ ೭ ॥

ಸಃ ಮಹೇಕ್ಷಃ ಕ್ವಚಿತ್ ತೀರ್ಥಾರ್ಥಂ ದಶಶತಪುಂಭಿಃ ಆನೀತಾಂ ಅತ್ಯಶಕ್ತ್ಯಾ ಮುಕ್ತಾಂ ಪೃಥುತರವಪ್ರಪಾತಿವಾರಾಂ ಧಾರಾಣಾಂ ರಯಸಹನಕ್ಷಮಾಂ ವಿಪುಲಶಿಲಾಂ ಪ್ರೇಕ್ಷ್ಯ ಊಚೇ.

ಸಃ ಮಹೇಕ್ಷಃ = ಆ ಪೂರ್ಣಪ್ರಜ್ಞಾಚಾರ್ಯರು, ಕ್ವಚಿತ್ = ಒಂದಾನೊಂದು ಸ್ಥಳದಲ್ಲಿ, ತೀರ್ಥಾರ್ಥಂ = ತೀರ್ಥಕ್ಕೋಸ್ಕರ, (ನದೀ ತೀರದಲ್ಲಿ ಸ್ನಾನಮಾಡಲು ಆಧಾರವಾಗಿಡಲು) ದಶಶತಪುಂಭಿಃ ಆನೀತಾಂ = ಸಾವಿರಜನರಿಂದ ತರಲ್ಪಟ್ಟ, ಅತ್ಯಶಕ್ತ್ಯಾ ಮುಕ್ತಾಂ = ಬಹಳವಾಗಿ ಸೋತುಹೋದುದರಿಂದ, ಮಧ್ಯದಲ್ಲಿ ಬಿಡಲ್ಪಟ್ಟಿರುವ, ಪೃಥುತರವಪ್ರಪಾತಿವಾರಾಂ = ಅತ್ಯಂತ ಎತ್ತರವಾದ ದಡದಿಂದ ಬೀಳುವ ನೀರಿನ, ರಯಸಹನಕ್ಷಮಾಂ = ವೇಗವನ್ನು ತಡೆಯಲು ಯೋಗ್ಯವಾದ, ವಿಪುಲಶಿಲಾಂ = ದೊಡ್ಡಬಂಡೆಕಲ್ಲನ್ನು, ಪ್ರೇಕ್ಷ್ಯ ಊಚೇ = ನೋಡಿ ಹೇಳಿದರು.

ಒಂದು ಸ್ಥಳದಲ್ಲಿ ಭದ್ರಾನದಿಯು ಕಡಿದಾದ ಸ್ಥಳದಿಂದ ಕೆಳಗೆ ಧುಮುಕುತ್ತಿತ್ತು. ಅಲ್ಲಿ ಸ್ನಾನಾದಿಗಳನ್ನು ಮಾಡಲು ಅನುಕೂಲಕ್ಕಾಗಿ

Rarest Archive

ನೀರಿನ ಪ್ರವಾಹವನ್ನು ತಡೆಯಲು ಸಮರ್ಥವಾದ ಒಂದು ದೊಡ್ಡ ಬಂಡೆ ಕಲ್ಲನ್ನು ಸಾವಿರಜನರು ಬಹಳ ಪ್ರಯಾಸದಿಂದ ನದೀತೀರಕ್ಕೆ ತರುತ್ತಿದ್ದರು. ಆದರೆ ನದೀತೀರವು ಇನ್ನೂ ದೂರವಿರುವಾಗಲೇ ಆ ಜನರಿಗೆ ತುಂಬಾ ಆಯಾಸವಾಯಿತು. ಮುಂದೆ ಕಲ್ಲನ್ನು ಸಾಗಿಸುವ ಶಕ್ತಿಯೇ ಇರಲಿಲ್ಲ. ಅವರು ಆ ಬಂಡೆಯನ್ನು ಅಲ್ಲೇ ಬಿಟ್ಟರು. ಇದನ್ನು ನೋಡಿ ಆಚಾರ್ಯರು ಇಂತೆಂದರು.

ತೀರ್ಥಾಯ ಇತಿ ತೀರ್ಥಾರ್ಥಂ, ಅತಿಶಯೇನ ಪೃಥು, ಪೃಥುತರಂ ಚ ತತ್ ವಪ್ರಂ ಚ, ಪತಿತುಂ ಶೀಲಂ ಏಷಾಂ ಪಾತೀನಿ, ಪೃಥುತರವಪ್ರಾತ್ ಪಾತೀನಿ, ಪೃಥುತರವಪ್ರಪಾತೀನಿ ಚ ತಾನಿ ವಾರಿ ಚ ತೇಷಾಂ, (ವಾರ್– ವಾಃ ವಾರೀ ವಾರಿ–,) ರಯಸ್ಯ ಸಹನಂ, ರಯಸಹನೇ ಕ್ಷಮಾ ತಾಂ, ಮಹತೀ ಈಕ್ಷಾ ಯಸ್ಯ ಸಃ, ದಶಗುಣಿತಂ ಚ ತತ್ ಶತಂ ಚ, ದಶಶತಂ ಚ ತೇ ಪುಮಾಂಸಶ್ಚ ತೈಃ, ಶಕ್ತೇರಭಾವಃ, ಅತಿಶಯೇನ ಅಶಕ್ತಿಃ ತಯಾ, ವಿಪುಲಾ ಚ ಸಾ ಶಿಲಾ ಚ ತಾಂ;

ಆಚಾರ್ಯರಿಗೂ ಆ ಜನರಿಗೂ ಹೀಗೆ ಸಂಭಾಷಣೆ ನಡೆಯಿತು—

ಲೋಕಾನಾಮುಪಕೃತಯೇ ಕುತಃ ಶಿಲೇಯಂ
ನಿನ್ಯೇ ನೋ ಇತಿ ಜನತಾ ಜಗಾದ ತತ್ರ ।
ನೇತಾರೋ ಯತಿವರ ಮಾನವಾ ನಹೀಮಾಂ
ಭೀಮಶ್ಚೇದಿಹ ಯತತೇ ನಯೇನ್ನ ವೇತಿ ॥ ೮ ॥

'ಲೋಕಾನಾಂ ಉಪಕೃತಯೇ ಇಯಂ ಶಿಲಾ ಕುತಃ ನೋ ನಿನ್ಯೇ' ? ಇತಿ, ತತ್ರ ಜನತಾ 'ಯತಿವರ! ಇಮಾಂ ನೇತಾರಃ ಮಾನವಾ ನಹಿ. ಭೀಮಃ ಇಹ ಯತತೇ ಚೇತ್ ನಯೇತ್ ವಾ ನ ವಾ' ಇತಿ ಜಗಾದ.

'ಲೋಕಾನಾಂ ಉಪಕೃತಯೇ = ಜನರ ಉಪಕಾರಕ್ಕಾಗಿ, ಇಯಂ ಶಿಲಾ = ಈ ಬಂಡೆಯು, ಕುತಃ ನೋ ನಿನ್ಯೇ = ಏತಕ್ಕೆ ಒಯ್ಯಲ್ಪಡಲಿಲ್ಲ ?' ಇತಿ (ಊಚೇ) = ಹೀಗೆಂದು (ಆಚಾರ್ಯರು ಹೇಳಿದರು). ತತ್ರ ಜನತಾ = ಆಗ ಅಲ್ಲಿರುವ ಜನರ ಸಮೂಹವು, 'ಯತಿವರ ! = ಸಂನ್ಯಾಸಿಶ್ರೇಷ್ಠರೇ!

Rarest Archive

ಇಮಾಂ ನೇತಾರಃ = ಈ ಬಂಡೆಯನ್ನು, ಒಯ್ಯುವವರು, ಮಾನವಾಃ ನಹಿ = ಮನುಷ್ಯರಲ್ಲ, ಭೀಮಃ ಇಹ ಯತತೇ ಚೇತ್ = ಭೀಮಸೇನನು ಈ ಬಂಡೆಯನ್ನು ಒಯ್ಯುವ ವಿಷಯದಲ್ಲಿ ಪ್ರಯತ್ನಿಸಿದರೆ, ನಯೇತ್ ವಾ (ನ ನಯೇತ್ ವಾ) = ಒಯ್ಯಲು ಸಮರ್ಥನಾದಾನೋ, ಅಥವಾ ಒಯ್ಯಲಾರನೋ; (ನಮಗೆ ತಿಳಿಯದು) ಇತಿ ಜಗಾದ = ಹೀಗೆಂದು ಹೇಳಿತು.

'ಎಲೈ ಜನರೇ ! ನೀವು ಜನರ ಉಪಕಾರಕ್ಕಾಗಿ ಈ ಬಂಡೆಕಲ್ಲನ್ನು ಇಲ್ಲಿಯವರೆಗೆ ತಂದು ಏತಕ್ಕೆ ಇಲ್ಲಿಯೇ ಇಟ್ಟಿರಿ ? ಮುಂದಕ್ಕೆ ಏಕೆ ತೆಗೆದುಕೊಂಡು ಹೋಗಲಿಲ್ಲ ?' ಎಂದು ಆಚಾರ್ಯರು ಕೇಳಿದರು. ಆಗ ಆ ಜನರು—'ಯತಿಶ್ರೇಷ್ಠರೇ ! ಈ ದೊಡ್ಡಗಾತ್ರದ ಬಂಡೆಕಲ್ಲನ್ನು ತೆಗೆದುಕೊಂಡುಹೋಗುವವರು ಮನುಷ್ಯರಲ್ಲಿ ಈಗ ಇಲ್ಲ. ಭೀಮಸೇನನಿದ್ದರೆ ಈ ವಿಷಯದಲ್ಲಿ ಪ್ರಯತ್ನಿಸುತ್ತಿದ್ದನು. ಆದರೆ ಅವನಿಗೂ ತೆಗೆದುಕೊಂಡು ಹೋಗಲು ಆಗುತ್ತಿತ್ತೋ ಇಲ್ಲವೋ ! ನಮಗೆ ಸಂಶಯವೇ ಇದೆ.' ಎಂದು ಹೇಳಿದರು.

ಜನಾನಾಂ ಸಮೂಹಃ ಜನತಾ; ಯತೀನಾಂ ವರಃ ತಸ್ಯ ಸಂಬುದ್ಧಿಃ.

ನಿನ್ಯೇ ನಿನ್ಯಾತೇ ನಿನ್ಯಿರೇ ಇತ್ಯಾದಿ. 'ನೀ' ಧಾತು, ಕರ್ಮಣಿ. ಯೂಯಂ ಕುತಃ ಇಮಾಂ ಶಿಲಾಂ ನ ಅನಯತ ? (ನಿನ್ಯಿಢ್ವೇ) ಕರ್ತರಿ. ನಯೇತ್ ನಯೇತಾಂ ನಯೇಯುಃ—ನೀಧಾತು ವಿಧಿಲಿಙ್ ಪರ.

ಆಚಾರ್ಯರು ಒಬ್ಬರೇ ಒಂದುಕೈಯಿಂದ ಆ ಬಂಡೆಕಲ್ಲನ್ನು ಒಯ್ದು ಸರಿಯಾದ ಸ್ಥಳದಲ್ಲಿಟ್ಟರು—

> ನಿನ್ಯೇ ತಾಂ ಗಿರಿಮಿವ ವಾನರೀಕೃತಾತ್ಮಾ
> ಲೀಲಾವತ್ಕರಕಮಲೇನ ಸೋsಮಲೇನ ।
> ತತ್ರಾಪಿ ನ್ಯಧಿತ ತಯಾsಸ್ಯ ಸೂಚ್ಯತೇsಲಂ
> ತತ್ತುಂಗಾಂ ನನು ನಿಕಷಾsಧುನಾsಪಿ ಕರ್ಮ ॥ ೯ ॥

ಸಃ ಅಮಲೇನ ಲೀಲಾವತ್ಕರಕಮಲೇನ ತಾಂ ವಾನರೀಕೃತಾತ್ಮಾ ಗಿರಿಂ ಇವ ನಿನ್ಯೇ; ಅಪಿ ತತ್ರ ನ್ಯಧಿತ; ತಯಾ ಅಸ್ಯ ತತ್ ಕರ್ಮ ತುಂಗಾಂ ನಿಕಷಾ ಅಧುನಾಪಿ ಅಲಂ ಸೂಚ್ಯತೇ ನನು ?

Rarest Archiver

ಸಃ = ಆ ಮಧ್ವಾಚಾರ್ಯರು, ಅಮಲೇನ = ನಿರ್ದೋಷವಾದ, ಲೀಲಾವತ್ಕರಕಮಲೇನ = ಆಯಾಸವಿಲ್ಲದ ಮತ್ತು ವಿಲಾಸಸಹಿತವಾದ ತಾವರೆಯಂತಹ ಕೈಯಿಂದ, ತಾಂ = ಆ ಬಂಡೆಯನ್ನು, ವಾನರೀಕೃತಾತ್ಮಾ = ಹನುಮಂತನೆಂಬ ಕಪಿಯಾಗಿ ಮಾಡಲ್ಪಟ್ಟ ಸ್ವರೂಪವುಳ್ಳ ತಾನು, ಗಿರಿಂ ಇವ = ಗಂಧಮಾದನಪರ್ವತವನ್ನೆಂಬಂತೆ, ನಿನ್ಯೇ = ಒಯ್ದರು; ಅಪಿ ತತ್ರ ನ್ಯಧಿತ = ಮತ್ತು ಅಲ್ಲಿ ಇಟ್ಟರು. ತಯಾ = ಆ ಬಂಡೆಕಲ್ಲಿನಿಂದ, ಅಸ್ಯ ತತ್ಕರ್ಮ = ಈ ಆಚಾರ್ಯರ ಆ ಮಹಾಕಾರ್ಯವು, ತುಂಗಾಂ ನಿಕಷಾ = ತುಂಗಾನದಿಯ ಹತ್ತಿರ, (ತುಂಗಾನದಿಯ ಹತ್ತಿರದವಳಾದ ಭದ್ರಾನದಿಯ ಹತ್ತಿರ) ಅಧುನಾಪಿ = ಈಗಲೂ ಕೂಡ, ಅಲಂ ಸೂಚ್ಯತೇ ನನು = ಚೆನ್ನಾಗಿ ಸೂಚಿಸಲ್ಪಡುತ್ತದೆಯಷ್ಟೆ !

ಹಿಂದೆ ಶ್ರೀಮಧ್ವಾಚಾರ್ಯರು ತಾನೇ ಹನುಮಂತರೂಪವನ್ನು ತಾಳಿ ಒಂದೇ ಕೈಯಿಂದ ಗಂಧಮಾದನಪರ್ವತವನ್ನು ತಂದಿದ್ದರು. ಈಗ ಅವರೇ ಕೋಮಲವಾದ ತನ್ನ ಒಂದೇ ಕರಕಮಲದಿಂದ, ಅನಾಯಾಸವಾಗಿ ಆಟ ವಾಡುವಂತೆ ಆ ಶಿಲೆಯನ್ನು ತೆಗೆದುಕೊಂಡು ಹೋದರು. ಅದನ್ನು ಇಡ ಬೇಕಾದ ಸ್ಥಳದಲ್ಲಿಟ್ಟರು. ಆಚಾರ್ಯರ ಈ ಅದ್ಭುತವ್ಯಾಪಾರವನ್ನು ಅದೇ ಬಂಡೆಕಲ್ಲು ತುಂಗಾನದಿಯ ತಂಗಿಯಾದ ಭದ್ರಾನದಿಯ ಹತ್ತಿರ (ಕಲಶವೆಂಬ ಊರಿನ ಬಳಿ) ಈಗಲೂ ಚೆನ್ನಾಗಿ ಸೂಚಿಸುತ್ತದೆ. ಇದು ನಿಶ್ಚಯವು.

ಅವಾನರಃ ವಾನರಃ ಸಂಪದ್ಯಮಾನಃ ಕೃತಃ, ವಾನರೀಕೃತಃ ಆತ್ಮಾ ಯಸ್ಯ ಸಃ; ಲೀಲಾ ಅಸ್ಯ ಅಸ್ತೀತಿ, ಕರಃ ಕಮಲಂ ಇವ, ಲೀಲಾವಚ್ಚ ತತ್ ಕರಕಮಲಂ ಚ ತೇನ;

ನಿ + ಅಧಿತ ಅಧಿಷಾತಾಂ ಅಧಿಷತ, ಅಧಿಥಾಃ ಅಧಿಷಾಥಾಂ ಅಧಿಢ್ವಂ, ಅಧಿಷಿ ಅಧಿಷ್ವಹಿ ಅಧಿಷ್ಮಹಿ. ಡುಧಾಞ್ ಧಾರಣಪೋಷಣಯೋಃ ಆತ್ಮ. ಲುಙ್. ಸೂಚ್ಯತೇ ಸೂಚ್ಯೇತೇ ಸೂಚ್ಯಂತೇ ಸೂಚ ಪೈಶುನ್ಯೇ ಚುರಾದಿ. ಸಕ. ಕರ್ಮಣಿ ಲಟ್. ತಯಾ ಅಸ್ಯ ತತ್ಕರ್ಮ ಸೂಚ್ಯತೇ. ಕರ್ಮಣಿ; ಸಾ ಅಸ್ಯ ತತ್ಕರ್ಮ ಸೂಚಯತಿ—ಕರ್ತರಿ.

ಈಗ ಆಚಾರ್ಯರ ಮತ್ತೊಂದು ಮಹಿಮೆಯನ್ನು ಕೇಳಿರಿ—

Rarest Archiver

ಸಂಘಾತೈರಧಿಕಘನೈರಲಂಕೃತಾಧ್ವಾ-
ಶಿಷ್ಯಾಣಾಂ ಯತಮನಸಾಮುತೇತರೇಷಾಂ ।
ಯತ್ರಾಮಾ ವಸತಿ ತಿಥಾವಿನೇನ ಚಂದ್ರ-
ಸ್ತತ್ರಾಸೌ ಸಕಲಮತಿಃ ಸಸಾರ ಸಿಂಧುಂ ॥ ೧೦ ॥

ಅಸೌ ಸಕಲಮತಿಃ ಯತ್ರ ತಿಥೌ ಚಂದ್ರಃ ಇನೇನ ಅಮಾ ವಸತಿ ತತ್ರ ಯತಮನಸಾಂ ಉತ ಇತರೇಷಾಂ ಶಿಷ್ಯಾಣಾಂ ಅಧಿಕಘ(ಥ)ನೈಃ ಸಂಘಾತೈಃ ಅಲಂಕೃತಾಧ್ವಾ ಸಿಂಧುಂ ಸಸಾರ.

ಅಸೌ ಸಕಲಮತಿಃ = ಈ ಪೂರ್ಣಪ್ರಜ್ಞಾಚಾರ್ಯರು, ಯತ್ರ ತಿಥೌ ಯಾವ ತಿಥಿಯಲ್ಲಿ, ಚಂದ್ರಃ ಇನೇನ ಅಮಾ ವಸತಿ = ಚಂದ್ರನು ಸೂರ್ಯನಿಂದ ಸಹಿತನಾಗಿ ಇರುತ್ತಾನೋ, ತತ್ರ = ಆ ಅಮಾವಾಸ್ಯಾತಿಥಿಯಲ್ಲಿ, ಯತಮನಸಾಂ = ಮನೋನಿಗ್ರಹವುಳ್ಳ ಯತಿಗಳ, ಉತ ಇತರೇಷಾಂ = ಮತ್ತು ಬೇರಗೃಹಸ್ಥರಾದ, ಶಿಷ್ಯಾಣಾಂ = ಶಿಷ್ಯರ, ಅಧಿಕಘ(ಥ)ನೈಃ = ಬಹಳ ಒತ್ತಾದ, (ಹೇಳಲಾಗದ) ಸಂಘಾತೈಃ = ಸಮೂಹಗಳಿಂದ, ಅಲಂ-ಕೃತಾಧ್ವಾ = ಅಲಂಕಾರಮಾಡಲ್ಪಟ್ಟ ದಾರಿಯುಳ್ಳವರಾಗಿ, ಸಿಂಧುಂ ಸಸಾರ = ಸಮುದ್ರವನ್ನು ಕುರಿತು ಹೋದರು.

ಒಂದು ಅಮಾವಾಸ್ಯಾ(ಗ್ರಹಣದ)ತಿಥಿಯ ದಿನ ಆಚಾರ್ಯರು ಸಂನ್ಯಾಸಿ ಮತ್ತು ಗೃಹಸ್ಥಶಿಷ್ಯರಿಂದ ಕೂಡಿಕೊಂಡು, ಸಮುದ್ರದ ಕಡೆಗೆ ಸ್ನಾನಕ್ಕಾಗಿ ಹೊರಟರು. ಜನರು ಹೇಳಲಾಗದಷ್ಟು ಒತ್ತೊತ್ತಾಗಿ ಗುಂಪು ಗುಂಪಾಗಿ ಸಮುದ್ರದ ಕಡೆಗೆ ಹೋಗುತ್ತಿರುವಾಗ ಆಚಾರ್ಯರು ಆ ದಾರಿಯನ್ನು ಅಲಂಕರಿಸುತ್ತಾ ತಾವೂ ಸಮುದ್ರದ ಕಡೆಗೆ ಸಾಗಿದರು. (ಇಲ್ಲಿ ಮಹಾಕಾವ್ಯಾಂಗವಾದ ಸಮುದ್ರವರ್ಣನೆಯನ್ನು ಮಾಡಿದಂತಾಗಿದೆ.)

ಅಧಿಕಂ ಘನಾಃ ತೈಃ, (ಅಧಿ (ಅಧಿಕಂ) ಕಥನಂ ಯೇಷಾಂ ತೇ ತೈಃ) ಅಲಂಕೃತಃ ಅಧ್ವಾ ಯೇನ ಸಃ, ಯತಂ ಮನಃ ಯೇಷಾಂ ತೇ ತೇಷಾಂ, ಸಕಲಾ ಮತಿಃ ಯಸ್ಯ ಸಃ; ಅಮಾ ಸಹ ಸಮೀಪೇ ಚ—**ಕೋಶ.**

ವಸತಿ ವಸತಃ ವಸಂತಿ, ವಸ ನಿವಾಸೇ ಲಟ್ ; ಸಸಾರ ಸಸ್ರತುಃ

Rarest Archiver

ಸಸ್ರುಃ, ಸಸರ್ಥ ಸಸ್ರಥುಃ ಸಸ್ರ, ಸಸಾರ ಸಸರ ಸಸೃವ ಸಸೃಮ ಸೃಗತೌ. ಅಕ. ಅನಿಟ್. ಪರ. ಲಟ್.

ಆ ಊರಿನ ಜನರೆಲ್ಲರೂ ಅಲ್ಲಿಗೆ ಬಂದಿದ್ದರು—

ಆರ್ದ್ರಾಂಗಾಃ ಸಪದಿ ನಿಮಜ್ಜನಾತ್ ಸರಸ್ಯಾಂ
ಕಣ್ವಸ್ಯ ದ್ವಿಜಋಷಭಸ್ಯ ವಲ್ಲಭಾಯಾಂ ।
ತತ್ರಾಯನ್ ಖರಕಿರಣೋಪರಾಗಹೇತೋಃ
ಗ್ರಾಮೀಣಾ ಅಪಿ ಸಕಲಾಃ ಸಬಾಲವೃದ್ಧಾಃ ॥ ೧೧ ॥

ತತ್ರ ಸಬಾಲವೃದ್ಧಾಃ ಸಕಲಾಃ ಗ್ರಾಮೀಣಾ ಅಪಿ ಖರಕಿರಣೋ-ಪರಾಗಹೇತೋಃ ದ್ವಿಜಋಷಭಸ್ಯ ಕಣ್ವಸ್ಯ ವಲ್ಲಭಾಯಾಂ ಸರಸ್ಯಾಂ ಸಪದಿ ನಿಮಜ್ಜನಾತ್ ಆರ್ದ್ರಾಂಗಾಃ ಆಯನ್.

ತತ್ರ = ಆ ಸಮಯದಲ್ಲಿ, ಸಬಾಲವೃದ್ಧಾಃ ಸಕಲಾಃ ಗ್ರಾಮೀಣಾಃ ಅಪಿ = ಹುಡುಗರು ಮತ್ತು ಮುದುಕರಿಂದ ಸಹಿತರಾದ ಎಲ್ಲಾ ಏಕವಾಟ ಗ್ರಾಮದ ಜನರೂ, ಖರಕಿರಣೋಪರಾಗಹೇತೋಃ = ಸೂರ್ಯಗ್ರಹಣದ ಕಾರಣದಿಂದ, ದ್ವಿಜಋಷಭಸ್ಯ ಕಣ್ವಸ್ಯ = ಬ್ರಾಹ್ಮಣಶ್ರೇಷ್ಠರಾದ ಕಣ್ವ ಋಷಿಗಳಿಗೆ, ವಲ್ಲಭಾಯಾಂ ಸರಸ್ಯಾಂ = ಪ್ರಿಯವಾದ ಸರೋವರದಲ್ಲಿ, ಸಪದಿ = ಕೂಡಲೇ, ನಿಮಜ್ಜನಾತ್ = ಮುಳುಗಿ ಸ್ನಾನಮಾಡಿದ್ದರಿಂದ, ಆರ್ದ್ರಾಂಗಾಃ ಆಯನ್ = ಒದ್ದೆಯಾದ ಮೈಉಳ್ಳವರಾಗಿ ಬಂದರು.

ಅಂದು ಸೂರ್ಯಗ್ರಹಣ. ಮೊದಲು ಒಂದು ಬಾರಿ ಶುದ್ಧಜಲದಲ್ಲಿ ಅವಗಾಹನ ಸ್ನಾನಮಾಡಿ ಅನಂತರ ಗ್ರಹಣದ ಸಮುದ್ರಸ್ನಾನ ಮಾಡ ಬೇಕೆಂಬ ಸಂಪ್ರದಾಯದಂತೆ ಆದಿನ ಹುಡುಗರು ಮುದುಕರು ಆದಿಯಾಗಿ ಎಲ್ಲಾ ಜನರೂ ಕಣ್ವತೀರ್ಥದಲ್ಲಿ ಅವಗಾಹನ ಸ್ನಾನ ಮಾಡಿ ಒದ್ದೆಯಾದ ಮೈಯಿಂದಲೇ ಸಮುದ್ರಸ್ನಾನಕ್ಕಾಗಿ ಅಲ್ಲಿಗೆ ಬಂದರು.

ಆರ್ದ್ರಾಣಿ ಅಂಗಾನಿ ಯೇಷಾಂ ತೇ, ದ್ವಿಜಃ ಋಷಭ ಇವ ದ್ವಿಜ-ಋಷಭಃ ತಸ್ಯ, ಖರಾಃ ಕಿರಣಾಃ, ಯಸ್ಯ ಸಃ, ಖರಕಿರಣಸ್ಯ ಉಪರಾಗಃ, ಖರಕಿರಣೋಪರಾಗ ಏವ ಹೇತುಃ ತಸ್ಮಾತ್; ಬಾಲೈಃ ವೃದ್ಧೈಶ್ಚ ಸಹಿತಾಃ ಸಬಾಲವೃದ್ಧಾಃ ;

Rarest Archive

ಐತ್ ಐತಾಂ ಆಯನ್, ಐಃ ಐತಂ ಐತ, ಆಯಂ ಐವ ಐಮ.
ಇಣ್ ಗತೌ. ಅದಾದಿ, ಸಕ. ಲಙ್.

ಆಗ ಆಚಾರ್ಯರನ್ನು ಕಂಡು ಸಜ್ಜನರಿಗೆ ಆನಂದ, ದುರ್ಜನರಿಗೆ ದುಃಖವುಂಟಾಯಿತು—

ಸರ್ವಜ್ಞಂ ಸಪರಿಜನಂ ಸಮೀಕ್ಷಮಾಣಾಃ
ಫುಲ್ಲಾಕ್ಷಾಃ ಸ್ಮಿತವದನಾಃ ಶುಭಾ ನನಂದುಃ ।
ದೌರ್ಮುಖ್ಯಂ ದಧತ ಉತಾಪರೇ ನಿನಿಂದುಃ
ನಾಶ್ಚರ್ಯಂ ದ್ವಯಮಪಿ ತತ್ ಸ್ವಭಾವತಂತ್ರಂ ॥ ೧೨ ॥

ಸಪರಿಜನಂ ಸರ್ವಜ್ಞಂ ಸಮೀಕ್ಷಮಾಣಾಃ ಸ್ಮಿತವದನಾಃ ಫುಲ್ಲಾಕ್ಷಾಃ ಶುಭಾಃ ನನಂದುಃ; ಉತ ಅಪರೇ ದೌರ್ಮುಖ್ಯಂ ದಧತಃ ನಿನಿಂದುಃ. ಸ್ವಭಾವ-ತಂತ್ರಂ ತತ್ ದ್ವಯಂ ಅಪಿ ಆಶ್ಚರ್ಯಂ ನ.

ಸಪರಿಜನಂ ಸರ್ವಜ್ಞಂ = ಪರಿವಾರಸಹಿತರಾದ ಶ್ರೀಪೂರ್ಣಪ್ರಜ್ಞಾ-ಚಾರ್ಯರನ್ನು, ಸಮೀಕ್ಷಮಾಣಾಃ = ನೋಡುತ್ತಿರುವ, ಸ್ಮಿತವದನಾಃ = ಮುಗುಳ್ನಗೆಯ ಮುಖವುಳ್ಳ, ಫುಲ್ಲಾಕ್ಷಾಃ = ಅರಳಿದ ಕಣ್ಣುಗಳುಳ್ಳ, ಶುಭಾಃ ನನಂದುಃ = ಸಜ್ಜನರು ಆನಂದಿತರಾದರು ಉತ ಅಪರೇ = ಮತ್ತು ಇತರ ದುಷ್ಟಜನರು, ದೌರ್ಮುಖ್ಯಂ ದಧತಃ = ಸಿಂಡರಿಸಿದ ಮುಖದವರಾಗಿ, ನಿನಿಂದುಃ = ತೆಗಳಿದರು, ಸ್ವಭಾವತಂತ್ರಂ = ಸ್ವಭಾವಾಧೀನವಾದ, ತತ್ ದ್ವಯಂ ಅಪಿ = ಅದೆರಡೂ, ಆಶ್ಚರ್ಯಂ ನ = ಆಶ್ಚರ್ಯಕರವಲ್ಲ.

ಪರಿವಾರಸಮೇತರಾಗಿ ಬಂದಿರುವ ಗುರುಗಳನ್ನು, ಕಣ್ಣುಗಳನ್ನು ಅರಳಿಸಿ ನಗುಮುಖದಿಂದ ನೋಡಿ ಸಜ್ಜನರು ಆನಂದಪಟ್ಟರು. ದುರ್ಜನರು ಸೊಟ್ಟ ಮುಖ ಮಾಡಿಕೊಂಡು ನಿಂದಿಸಿದರು. ಈ ಎರಡೂ ಆಶ್ಚರ್ಯಕರ ವಲ್ಲ. ಏಕೆಂದರೆ ಅವೆರಡೂ ಅವರವರ ಸ್ವಭಾವಾನುಸಾರವಾಗಿ ನಡಿಯು ತಕ್ಕ ಕಾರ್ಯಗಳು.

ಪರಿಜನೈಃ ಸಹಿತಃ ತಂ, ಫುಲ್ಲೇ ಅಕ್ಷಿಣೀ ಯೇಷಾಂ ತೇ, ಸ್ಮಿತಂ ವದನಂ ಯೇಷಾಂ ತೇ, ದುಷ್ಟಂ ಮುಖಂ ಯೇಷಾಂ ತೇ ದುರ್ಮುಖಾಃ, ತೇಷಾಂ ಭಾವಃ ದೌರ್ಮುಖ್ಯಂ, ತತ್, ಸ್ವಭಾವಸ್ಯ ತಂತ್ರಂ.

Rarest Archiver

ನಿನಿಂದ ನಿನಿಂದತುಃ ನಿನಿಂದುಃ ಣಿದಿ ಕುತ್ಸಾಯಾಂ ಸಕ. ಲಿಟ್.

ಆಚಾರ್ಯರನ್ನು ನಿಂದಿಸಬೇಡಿರಿ ಎಂದು ಘೋರರೂಪದ ಸಮುದ್ರ ರಾಜನು ಗದರಿಸಿದನು—

ಮಾ ಮೈನಂ ಭುವನಗುರುಂ ವಿನಿಂದತೇತ್ಥಂ
ನಿರ್ಭರ್ತ್ಸ್ಯಾಭ್ಯಪತದಿವೋತ್ತರಂಗಹಸ್ತಃ ।
ಸಂಕ್ಷೋಭೀ ಘನಘನಘೋಷಘೋರವೇಷಃ
ಸಂರಂಭೀ ಖಲದಮನಾಯ ಸಿಂಧುರಾಜಃ ॥ ೧೩ ॥

ಉತ್ತರಂಗಹಸ್ತಃ ಸಂಕ್ಷೋಭೀ ಘನಘನಘೋಷಘೋರವೇಷಃ ಸಂರಂಭೀ ಸಿಂಧುರಾಜಃ ಭುವನಗುರುಂ ಏನಂ ಮಾ ಮಾ ವಿನಿಂದತ ಇತ್ಥಂ ನಿರ್ಭರ್ತ್ಸ್ಯ ಖಲದಮನಾಯ ಅಭ್ಯಪತತ್ ಇವ.

ಉತ್ತರಂಗಹಸ್ತಃ=ಎತ್ತರವಾದ ಅಲೆಗಳೆಂಬ ಕೈಗಳುಳ್ಳ, ಸಂಕ್ಷೋಭೀ =ವಿಶೇಷವಾದ ಚಲನೆಯೆಂಬ ಕ್ಷೋಭೆಯುಳ್ಳ, ಘನಘನಘೋಷ=ಬಹಳ ಎತ್ತರವಾದ ಧ್ವನಿಯಿಂದ, ಘೋರವೇಷಃ=ಭಯಂಕರವಾದ ಆಕೃತಿಯುಳ್ಳ, ಸಂರಂಭೀ=ಕೋಪವುಳ್ಳ, ಸಿಂಧುರಾಜಃ=ನದಿಗಳಿಗೆ ಒಡೆಯನಾದ ಸಮುದ್ರನು, (ಸಮುದ್ರನೆಂಬ ರಾಜನು) ಭುವನಗುರುಂ ಏನಂ=ಪ್ರಪಂಚಕ್ಕೆ ಗುರುಗಳಾದ ಈ ಮಧ್ವಾಚಾರ್ಯರನ್ನು, ಮಾ ಮಾ ವಿನಿಂದತ =ನಿಂದಿಸಬೇಡಿ, (ನಿಂದಿಸಬೇಡಿ) ಇತ್ಥಂ ನಿರ್ಭರ್ತ್ಸ್ಯ=ಈ ರೀತಿ ಗದರಿಸಿ, ಖಲದಮನಾಯ=ದುರ್ಜನರ ದಂಡನೆಗಾಗಿ, ಅಭ್ಯಪತತ್ ಇವ=ಮೇಲಿದ್ದು ಬಂದನೋ ಎಂಬಂತ್ತಿತ್ತು.

ಆಗ ಸಮುದ್ರದ ತೆರೆಗಳು ಎತ್ತರವಾಗಿ ಮೇಲಕ್ಕೆ ಬರುತ್ತಿದ್ದುವು. ಸಮುದ್ರವು ಕ್ಷೋಭೆ ಹೊಂದಿ ಗಟ್ಟಿಯಾಗಿ ಭೋರ್ಗರೆಯುತ್ತಾ ಭಯಂಕರ ರೂಪವನ್ನು ತಾಳಿ ತುಂಬಾ ಕೋಪಗೊಂಡಂತೆ ಕಾಣುತ್ತಿದ್ದಿತು. ಜಗದ್ಗುರುಗಳಾದ ಶ್ರೀಮಧ್ವಾಚಾರ್ಯರನ್ನು ನಿಂದಿಸಬೇಡಿ, ತೆಗಳಬೇಡಿ ಎಂದು ಹೆದರಿಸುತ್ತಾ ದುರ್ಜನರನ್ನು ದಂಡಿಸಲು ಮುಂದೆ ಎದ್ದು ಮುಂದೆ ಬರುವಂತೆ ಕಾಣಿಸುತ್ತಿದ್ದಿತು. ಒಬ್ಬ ರಾಜನು ಮಹಾಪುರುಷರನ್ನು ನಿಂದಿಸುವ ದುರ್ಜನರನ್ನು ಕಂಡು ಕೋಪದಿಂದ ಗರ್ಜಿಸುತ್ತಾ, ಭಯಂಕರವಾದ

Rarest Archiver

ಮುಖವನ್ನು ತಾಳಿ, ಕಾಲುಗಳಿಂದ ಒದ್ದು, ಕೈಗಳಿಂದ ಬಡಿಯಲು ಎದುರಿಗೆ ಬರುವಂತೆ ಸಮುದ್ರದ ಸನ್ನಿವೇಶವು ಇದ್ದಿತು ಎಂದು ಭಾವ.

ಭುವನಾನಾಂ ಗುರುಃ ತಂ, ಉದ್ಗತಾಃ ತರಂಗಾಃ, ಉತ್ತರಂಗಾಃ ಏವ ಹಸ್ತಾಃ ಯಸ್ಯ ಸಃ, ಸಂಕ್ಷೋಭಃ ಅಸ್ಯ ಅಸ್ತೀತಿ, ಅತಿಶಯೇನ ಘನಃ ಘನಘನಃ, ಘನಘನಶ್ಚಾಸೌ ಘೋಷಶ್ಚ, ಘನಘನಘೋಷೇಣ ಘೋರಃ ವೇಷಃ ಯಸ್ಯ ಸಃ, ಸಂರಂಭಃ ಅಸ್ಯ ಅಸ್ತೀತಿ (–ಭಿನ್) ಖಲಾನಾಂ ದಮನಂ ತಸ್ಮೈ, ಸಿಂಧೂನಾಂ ರಾಜಾ ;

ವಿ+ನಿಂದತ ನಿಂದ ನಿಂದತಾತ್ ನಿಂದತಂ ನಿಂದತ; ಣಿದಿ (ನಿಂದ್) ಕುತ್ಸಾಯಾಂ ಲೋಟ್ ಮ. ಪು. ಬಹು. ಅಭಿ ಅಪತತ್ ಅಪತತಾಂ ಅಪತನ್ ಪತ್ಲೃ ಗತೌ ಲಙ್.

ಸಮುದ್ರದ ಶಾಂತಸಜ್ಜನರೂಪವು ಹೀಗಿದ್ದಿತು—

ಸಂಮೋದಾತ್ತರಲತರೋ ದ್ರುತಾಭಿಗಾಮೀ
ಗಂಭೀರಸ್ವನನುತಿಮಾನ್ ಸುಫೇನಹಾಸಃ ।
ವೀಚ್ಯಂಗೈರಧಿಕತರೈರಿಹಾಧಿವೇಲಂ
ಮಧ್ವಾಯ ಪ್ರಣತಿಮಿವ ವ್ಯಧಾತ್ ಸಮುದ್ರಃ ॥ ೧೪ ॥

ಇಹ ಸಂಮೋದಾತ್ ತರಲತರಃ ದ್ರುತಾಭಿಗಾಮೀ, ಗಂಭೀರಸ್ವನ-ನುತಿಮಾನ್ ಸುಫೇನಹಾಸಃ ಸಮುದ್ರಃ ಅಧಿಕತರೈಃ (ತ್ರೈಃ) ವೀಚ್ಯಂಗೈಃ ಅಧಿವೇಲಂ ಮಧ್ವಾಯ ಪ್ರಣತಿಂ ವ್ಯಧಾತ್ ಇವ.

ಇಹ ಸಂಮೋದಾತ್ = ಆಚಾರ್ಯರು ಬರುವ ಸಮಯದಲ್ಲಿ ಸಂತೋಷ ದಿಂದ, ತರಲತರಃ = ಅತ್ಯಂತ ಚಂಚಲವಾದ, ದ್ರುತಾಭಿಗಾಮೀ = ಬೇಗನೆ ಎದುರಾಗಿ ಬರುತ್ತಿರುವ, ಗಂಭೀರಸ್ವನನುತಿಮಾನ್ = ಗಂಭೀರವಾದ ಧ್ವನಿಯೆಂಬ (ಧ್ವನಿಯಿಂದ ಮಾಡುವ) ಸ್ತೋತ್ರವುಳ್ಳ, ಸುಫೇನಹಾಸಃ = ಒಳ್ಳೆಯ ನೊರೆಯೆಂಬ (ನೊರೆಯಂತಿರುವ) ನಗುವುಳ್ಳ, ಸಮುದ್ರಃ = ಸಮುದ್ರನು, (ಅಂಜಲಿಬದ್ಧನಾದ ಸಜ್ಜನನು) ಅಧಿಕತರೈಃ(ತ್ರೈಃ) = ಬಹಳ ಎತ್ತರವಾದ (ಬಹಳ ವ್ಯಾಪಿಸಿರುವ) ವೀಚ್ಯಂಗೈಃ = ಅಲೆಗಳೆಂಬ ಅಂಗ

Rarest Archiver

ಗಳಿಂದ (ಅಲೆಗಳಂತಿರುವ ಅಂಗಗಳಿಂದ) ಅಧಿವೇಲಂ=ದಡದಲ್ಲಿ (ಸಮೀಪ ದಲ್ಲಿ) ಮಧ್ವಾಯ=ಶ್ರೀಪೂರ್ಣಪ್ರಜ್ಞರಿಗೆ, ಪ್ರಣತಿಂ=ನಮಸ್ಕಾರವನ್ನು, ವ್ಯಧಾತ್ ಇವ=ಮಾಡಿದನೋ ಎಂಬಂತಿತ್ತು.

ಒಬ್ಬ ಸಜ್ಜನನು ಬಹಳಕಾಲದ ನಂತರ ತನ್ನ ಮನೆಗೆ ಬಂದ, ಗುರು ಗಳನ್ನು ಬಹಳ ಸಂತೋಷದಿಂದ ಉತ್ಸಾಹದಿಂದ ಎದುರಾಗಿ ಹೋಗಿ ಸ್ವಾಗತಿಸಿ ಅಂಜಲಿಬದ್ಧನಾಗಿ ಸಾಷ್ಟಾಂಗನಮಸ್ಕಾರಮಾಡಿ ಮಂದಹಾಸದ ಆನಂದದಿಂದ, ಉಚ್ಚಕಂಠದಿಂದ ಸ್ತೋತ್ರಮಾಡಿ ಸೇವಿಸುತ್ತಾನೆ. ಹಾಗೆಯೇ ಸಮುದ್ರರಾಜನೂ ಕೂಡ ಸಂತೋಷದಿಂದ ಅತಿಚಂಚಲವಾಗಿ ಬೇಗನೆ ಎದುರುಗೊಂಡು ಗಂಭೀರಘೋಷವೆಂಬ ಸ್ತೋತ್ರವುಳ್ಳದ್ದಾಗಿ, ಉತ್ತಮವಾದ ನೊರೆಗಳೆಂಬ ನಗುವುಳ್ಳದ್ದಾಗಿ, ಕೈಕಾಲು ಮುಂತಾದ ಅವಯವಗಳಂತಿರುವ ದೊಡ್ಡ ಹರಡಿದ ಅಲೆಗಳಿಂದ ದಡದಲ್ಲಿ ಶ್ರೀಮಧ್ವಾಚಾರ್ಯರಿಗೆ ನಮಸ್ಕಾರ ಮಾಡುತ್ತಾನೋ ಎಂಬಂತಿತ್ತು. ಭಕ್ತನು ಗುರುಗಳನ್ನು ಎದುರುಗೊಂಡು ಕೈಮುಗಿದು ಹೊಗಳಿ ವಂದಿಸುವಂತೆ ಸಮುದ್ರವು ವಂದಿಸಿತು ಎಂದು ಭಾವ.

ಅತಿಶಯೇನ ತರಲಃ ತರಲತರಃ, ದ್ರುತಂ ಅಭಿಗಂತುಂ ಶೀಲಂ ಅಸ್ಯೇತಿ ದ್ರುತಾಭಿಗಾಮೀ, ಗಂಭೀರಶ್ಚಾಸೌ ಸ್ವನಶ್ಚ ಗಂಭೀರಸ್ವನ ಏವ ನುತಿಃ (ಗಂಭೀರಸ್ವನೇನ ನುತಿಃ) ಗಂಭೀರಸ್ವನನುತಿಃ ಅಸ್ಯ ಅಸ್ತೀತಿ; (ಸು) ಶೋಭನಶ್ಚಾಸೌ ಫೇನಶ್ಚ, ಸುಫೇನ ಏವ (ಸುಫೇನವತ್) ಹಾಸಃ ಯಸ್ಯ ಸಃ, ವೀಚಯಃ ಏವ (ವೀಚಿವತ್) ಅಂಗಾನಿ ತೈಃ, ಅತಿಶಯೇನ ಅಧಿಕಾನಿ; (ಅಧಿಕಂ ತತಾನಿ) ತೈಃ, ವೇಲಾಯಾಂ ಇತಿ ಅಧಿವೇಲಂ;

ಆಚಾರ್ಯರಿಗೂ ಸಮುದ್ರರಾಜನಿಗೂ ಗುರುಶಿಷ್ಯಭಾವವಿದ್ದಂತೆಯೇ ಕೆಲವಂಶದಲ್ಲಿ ಹಾಗೆಯೇ ಅವಿಶೇಷವೂ ವಿಶೇಷವೂ ಇದೆ—

ಗೋಲೀಲಾಸ್ವತಿಶಯಿನಾವಗಾಧಭಾವಾ-
ನ್ಯೋಲ್ಲಂಘ್ಯೌ ವಿವಿಧಗುಣಪ್ರಕಾಶರತ್ನೌ ।
ಮಧ್ವಾಬ್ಧೀ ಪರಮಮತೇಃ ಪ್ರಿಯಂ ಜನಾನಾಂ
ಲಾವಣ್ಯಂ ನ ತು ಜಲಧೇರಯಂ ವಿಶೇಷಃ ॥ ೧೫ ॥

Rarest Archive

ಮಧ್ವಾಬ್ಧೀ ಗೋಲೀಲಾಸು ಅತಿಶಯಿನೌ ಅಗಾಧಭಾವಾತ್ ನೋಲ್ಲಂಘ್ಯೌ ವಿವಿಧಗುಣಪ್ರಕಾಶರತ್ನೌ ; ಪರಮಮತೇಃ ಲಾವಣ್ಯಂ ಜನಾನಾಂ ಪ್ರಿಯಂ, ಜಲಧೇಃ ಲಾವಣ್ಯಂ ತು ನ, ಅಯಂ ವಿಶೇಷಃ.

ಮಧ್ವಾಬ್ಧೀ=ಶ್ರೀಮಧ್ವಾಚಾರ್ಯರು ಮತ್ತು ಸಮುದ್ರ ಇವರಿಬ್ಬರೂ, ಗೋಲೀಲಾಸು=ಮಾತುಗಳ ಮತ್ತು ನೀರಿನ ವಿಲಾಸಗಳಲ್ಲಿ, ಅತಿಶಯಿನೌ = ಅತಿಶಯವುಳ್ಳವರು, ಅಗಾಧಭಾವಾತ್ = ಗಾಂಭೀರ್ಯದಿಂದ ಮತ್ತು ಆಳವಾಗಿರುವಿಕೆಯಿಂದ, ನೋಲ್ಲಂಘ್ಯೌ = ಮೀರಲಾಗದವರು, ಮತ್ತು ದಾಟಲಾಗದವರು; ವಿವಿಧಗುಣಪ್ರಕಾಶರತ್ನೌ = ನಾನಾಬಗೆಯ ಭಕ್ತ್ಯಾದಿಗಳುಳ್ಳ, ಪ್ರಕಾಶರತ್ನೌ=ಜ್ಞಾನವೆಂಬ ರತ್ನವುಳ್ಳವರು, (ಶ್ರೀಮಧ್ವರು) ನಾನಾಬಗೆಯ ಗುಣಗಳಿಂದ ಹೊಳೆಯುವ ರತ್ನವುಳ್ಳದ್ದು ಸಮುದ್ರವು; ಆದರೆ, ಪರಮಮತೇಃ=ಶ್ರೀಪೂರ್ಣಪ್ರಜ್ಞರ, ಲಾವಣ್ಯಂ=ಕಾಂತಿವಿಶೇಷವೆಂಬ ಲಾವಣ್ಯವು, ಜನಾನಾಂ ಪ್ರಿಯಂ= ಜನರಿಗೆ ಇಷ್ಟವಾದುದು, ಜಲಧೇಃ ಲಾವಣ್ಯಂತು ನ=ಸಮುದ್ರದ ಉಪ್ಪಾಗಿರುವಿಕೆಯೆಂಬ ಲಾವಣ್ಯವಾದರೋ ಪ್ರಿಯವಲ್ಲ, ಅಯಂ ವಿಶೇಷಃ= ಇದೇ ವ್ಯತ್ಯಾಸವು.

ಶ್ರೀಮಧ್ವಾಚಾರ್ಯರು ವಾಗ್ವಿಲಾಸದಲ್ಲಿ ಎಲ್ಲರನ್ನೂ ಮೀರಿಸುವರು. ಬಹಳ ಗಂಭೀರರಾದುದರಿಂದ ಯಾರಿಗೂ ಅವರನ್ನು ಮೀರಿಸಲು ಸಾಧ್ಯವಿಲ್ಲ. ಅನೇಕಬಗೆಯ ಭಕ್ತ್ಯಾದಿಗುಣಗಳಿಂದ ವಿರಾಜಿಸುವ ಜ್ಞಾನವೆಂಬ ರತ್ನವುಳ್ಳವರು. ಈ ಸಮುದ್ರವೂ ಕೂಡ ಅಪಾರಜಲದಿಂದ ಕೂಡಿರುವಿಕೆಯೆಂಬ ಗೋಲೀಲೆಯ ವಿಷಯದಲ್ಲಿ ಎಲ್ಲವನ್ನೂ ಮೀರಿಸಿದೆ. ಬಹಳ ಆಳವಾಗಿರುವುದರಿಂದ ದಾಟಲು ಸಾಧ್ಯವಿಲ್ಲದ್ದು. ಅಲ್ಲಿ ನಾನಾಬಗೆಯ ಗುಣಗಳಿಂದ ಪ್ರಕಾಶಿಸುವ ರತ್ನಗಳಿವೆ. ಆದರೆ ಆಚಾರ್ಯರ ಕಾಂತಿವಿಶೇಷಭರಿತವಾದ ಸೌಂದರ್ಯವು ಎಲ್ಲರಿಗೂ ಪ್ರಿಯವಾದುದು. ಆದರೆ ಸಮುದ್ರದ ಉಪ್ಪಾದ ನೀರುಳ್ಳತನವೆಂಬ 'ಲಾವಣ್ಯವು' ಯಾರಿಗೂ ಇಷ್ಟವಾಗುವುದಿಲ್ಲ. (ವ್ಯತಿರೇಕಾಲಂಕಾರ) ಸಮುದ್ರಕ್ಕಿಂತ ಆಚಾರ್ಯರೇ ಉತ್ತಮರು ಎಂದು ಭಾವ.

Rarest Archiver

ಗವಾಂ ಲೀಲಾಃ ತಾಸು, ಅತಿಶಯಃ ಅನಯೋ ಅಸ್ತೀತಿ ಅತಿಶಯಿನೌ ಅಗಾಧ ಇತಿ ಭಾವಃ ತಸ್ಮಾತ್, ಉಲ್ಲಂಘಿತುಂ ಶಕ್ಯೌ ಉಲ್ಲಂಘ್ಯೌ, ವಿವಿಧಾಃ ಗುಣಾಃ ಯಸ್ಯ ಸಃ, ವಿವಿಧಗುಣಶ್ಚಾಸೌ ಪ್ರಕಾಶಶ್ಚ, ವಿವಿಧಗುಣಪ್ರಕಾಶ ಏವ ರತ್ನಂ ಯಸ್ಯ, ವಿವಿಧಾಃ ಗುಣಾಃ ಪ್ರಕಾಶಶ್ಚ ಯೇಷಾಂ ತಾನಿ, ವಿವಿಧ ಗುಣಪ್ರಕಾಶಾನಿ ರತ್ನಾನಿ ಯಸ್ಯ ಸಃ, ವಿವಿಧಗುಣಪ್ರಕಾಶರತ್ನಶ್ಚ ವಿವಿಧಗುಣ-ಪ್ರಕಾಶರತ್ನಶ್ಚ ವಿವಿಧಗುಣಪ್ರಕಾಶರತ್ನೌ, ಮಧ್ವಶ್ಚ ಅಬ್ಧಿಶ್ಚ ಮಧ್ವಾಬ್ಧೀ' ಪರಮಾ ಮತಿಃ ಯಸ್ಯ ಸಃ; ಗೋ = ಮಾತು. ನೀರು. ಲಾವಣ್ಯ = ಉಪ್ಪಾಗಿರುವಿಕೆ, ಕಾಂತಿವಿಶೇಷ.

ಗ್ರಹಣಸ್ಪರ್ಶಕ್ಕೆ ಮೊದಲು ಆಚಾರ್ಯರು ಶಿಷ್ಯರಿಗೆ ತತ್ತ್ವೋಪದೇಶವನ್ನು ಮಾಡಿದರು—

ಅಂಭೋಧೇಸ್ತ್ವರಿತತರೋರ್ಮಿಪಾಣಿಮೃಷ್ಟೇ
ಸ್ವಚ್ಛೇऽಸೌ ವಿಕಟತಟಾಸನೇ ನಿಷಣ್ಣಃ ।
ವ್ಯಾಚಖ್ಯಾವತಿಚಿರಮೈತರೇಯಶಾಖಾ
ಸೂಕ್ತಾನಿ ಪ್ರಭುರತಿಸುಂದರಪ್ರಕಾರಂ ॥ ೧೬ ॥

ಪ್ರಭುಃ ಅಸೌ ಅಂಭೋಧೇಃ ತ್ವರಿತತರೋರ್ಮಿಪಾಣಿಮೃಷ್ಟೇ ಸ್ವಚ್ಛೇ ವಿಕಟತಟಾಸನೇ ನಿಷಣ್ಣಃ ಐತರೇಯಶಾಖಾಸೂಕ್ತಾನಿ ಅತಿಸುಂದರಪ್ರಕಾರಂ ಅತಿಚಿರಂ ವ್ಯಾಚಖ್ಯೌ.

ಪ್ರಭುಃ ಅಸೌ = ಸಮರ್ಥರಾದ ಈ ಮಧ್ವಾಚಾರ್ಯರು, ಅಂಭೋಧೇಃ = ಸಮುದ್ರದ, ತ್ವರಿತತರೋರ್ಮಿಪಾಣಿಮೃಷ್ಟೇ = ಹೆಚ್ಚುವೇಗವುಳ್ಳ ಅಲೆಗಳೆಂಬ ಕೈಗಳಿಂದ ಶುದ್ಧಿಗೊಳಿಸಲ್ಪಟ್ಟ, ಸ್ವಚ್ಛೇ = ನಿರ್ಮಲವಾದ, ವಿಕಟತಟಾಸನೇ = ವಿಶಾಲವಾದ ಸುಂದರವಾದ ದಡವೆಂಬ ಆಸನದಲ್ಲಿ, ನಿಷಣ್ಣಃ = ಕುಳಿತವರಾಗಿ, ಐತರೇಯಶಾಖಾಸೂಕ್ತಾನಿ = ಋಗ್ವೇದದ ಐತರೇಯಶಾಖೆಯ ಸೂಕ್ತಗಳನ್ನು, ಅತಿಸುಂದರಪ್ರಕಾರಂ = ಬಹಳ ಒಳ್ಳೆಯ ರೀತಿಯುಳ್ಳ ಹಾಗೆ, ಅತಿಚಿರಂ ವ್ಯಾಚಖ್ಯೌ = ಬಹಳಹೊತ್ತು ವ್ಯಾಖ್ಯಾನಮಾಡಿದರು.

Rarest Archiver

ಸಮರ್ಥರಾದ ಶ್ರೀಮಧ್ವಾಚಾರ್ಯರು ಬೇಗ ಬೇಗನೆ ಬರುತ್ತಿರುವ ಸಮುದ್ರದ ಅಲೆಗಳೆಂಬ ಕೈಗಳಿಂದ ತೊಳೆದು ಶುದ್ಧಗೊಳಿಸಲ್ಪಟ್ಟ ಸಮುದ್ರದ ನಿರ್ಮಲವಾದ ಸುಂದರವಾದ ದಡವೆಂಬ ಆಸನದಲ್ಲಿ ಕುಳಿತವರಾಗಿ ಕಿವಿಗೆ ಇಂಪಾಗುವಂತೆ ಬಹಳ ಸ್ಪಷ್ಟವಾಗಿ ಋಗ್ವೇದದ ಐತರೇಯಶಾಖೆಯ ಸೂಕ್ತಗಳ ವ್ಯಾಖ್ಯಾನವನ್ನು ಮಾಡಿದರು. ಗುರುಗಳು ಪ್ರವಚನಮಾಡಲು ಬರುತ್ತಾರೆಂದು ತಿಳಿದ ಕೂಡಲೇ ಶಿಷ್ಯನು ತನ್ನ ಕೈಯಿಂದ ಆಸನವನ್ನು ಸಿದ್ಧ ಮತ್ತು ಶುದ್ಧಿಗೊಳಿಸಿ ಆಚಾರ್ಯರಿಗೆ ಪ್ರವಚನಮಾಡಲು ಅಣಿಮಾಡಿ ಕೊಡುವಂತೆ ಸಮುದ್ರನೂ ಆಚಾರ್ಯರ ಶಿಷ್ಯವೃತ್ತಿಯನ್ನು ಮಾಡಿದನು ಎಂಬ ಅರ್ಥವು ಧ್ವನಿತವಾಗುತ್ತದೆ.

ಅತ್ಯಂತಂ ತ್ವರಿತಾಃ ತ್ವರಿತತರಾಃ, ತ್ವರಿತತರಾಶ್ಚ ತಾಃ ಊರ್ಮಯಶ್ಚ, ತ್ವರಿತತರೋರ್ಮಯ ಏವ ಪಾಣಯಃ, ತ್ವರಿತತರೋರ್ಮಿಪಾಣಿಭಿಃ ಮೃಷ್ಟಂ ತಸ್ಮಿನ್, ವಿಕಟಂ ಚ ತತ್ ತಟಂ ಚ, ವಿಕಟತಟಮೇವ ಆಸನಂ ತಸ್ಮಿನ್; ಐತರೇಯೀ ಚ ಸಾ ಶಾಖಾ ಚ, ಐತರೇಯಶಾಖಾಯಾಃ ಸೂಕ್ತಾನಿ, ತಾನಿ; ಅತಿಸುಂದರಃ ಪ್ರಕಾರಃ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ.

ಆಗ ಅಲ್ಲಿ ನೆರೆದಿದ್ದ ಜನರು ಪ್ರವಚನವನ್ನು ಕೇಳುವುದಕ್ಕಾಗಿ ಸುತ್ತಲೂ ಸೇರಿದರು—

ಗಾಂಭೀರ್ಯಾತ್ ಸ್ವನಮಧರೀಕರೋತಿ ಸಿಂಧೋಃ
ಶ್ರಾವ್ಯತ್ವಂ ವಹತಿ ತಥಾಪ್ಯಹೋ ಸ್ವನೋಽಸ್ಯ ।
ಪೂರ್ಣೇಂದುಪ್ರಭವದನಃ ಕ ಏಷ ಧನ್ಯಃ
ಮತ್ವೇತ್ಥಂ ಜನಜಲಧಿಸ್ತಮಾಶು ಪರ್ಯೈತ್ || ೧೭ ||

ಅಸ್ಯ ಸ್ವನಃ ಗಾಂಭೀರ್ಯಾತ್ ಸಿಂಧೋಃ ಸ್ವನಂ ಅಧರೀಕರೋತಿ, ತಥಾಪಿ ಶ್ರಾವ್ಯತ್ವಂ ವಹತಿ ಅಹೋ. ಪೂರ್ಣೇಂದುಪ್ರಭವದನಃ ಧನ್ಯಃ ಏಷ ಕಃ ಇತ್ಥಂ ಮತ್ವಾ ಜನಜಲಧಿಃ ತಂ ಆಶು ಪರ್ಯೈತ್.

ಅಸ್ಯ ಸ್ವನಃ=ಇವರ ಧ್ವನಿಯು, ಗಾಂಭೀರ್ಯಾತ್=ಗಂಭೀರತೆಯಿಂದ, ಸಿಂಧೋಃ ಸ್ವನಂ=ಸಮುದ್ರದ ಧ್ವನಿಯನ್ನು, ಅಧರೀಕರೋತಿ

Rarest Archiver

= ತಿರಸ್ಕರಿಸುತ್ತಿದೆ. (ಕಡಿಮೆಮಾಡುತ್ತಿದೆ.) ತಥಾಪಿ ಶ್ರಾವ್ಯತ್ವಂ ವಹತಿ = ಹಾಗಿದ್ದರೂ ಕೇಳಲು ಅರ್ಹತೆಯನ್ನು ಹೊಂದಿದೆ. ಅಹೋ = ಆಶ್ಚರ್ಯ. ಪೂರ್ಣೇಂದುಪ್ರಭವದನಃ = ಪೂರ್ಣಚಂದ್ರನಂತಹ ಕಾಂತಿವುಳ್ಳ ಮುಖವುಳ್ಳ, ಧನ್ಯಃ ಏಷಃ ಕಃ = ಪುಣ್ಯವಂತರಾದ ಇವರು ಯಾರು? ಇತ್ಥಂ ಮತ್ವಾ = ಈ ರೀತಿ ತಿಳಿದು, ಜನಜಲಧಿಃ = ಜನರೆಂಬ ಸಾಗರವು, ತಂ ಆಶು ಪರ್ಯೈತ್ = ಅವರನ್ನು ಬೇಗನೆ ಸುತ್ತುವರಿಯಿತು.

'ಈ ಮಹನೀಯರ ಸ್ವರವು ಗಂಭೀರತೆಯಿಂದ ಸಮುದ್ರದ ಸ್ವರವನ್ನೂ ಧಿಕ್ಕರಿಸುತ್ತಿದೆ, ಕಡಿಮೆಮಾಡುತ್ತಿದೆ. ಹಾಗಿದ್ದರೂ ಕೇಳಲು ಇಂಪಾಗಿದೆ. ಪೂರ್ಣಚಂದ್ರನಂತಹ ಮುಖಕಾಂತಿಯುಳ್ಳ ಈ ಪುಣ್ಯವಂತರು ಯಾರಿರಬಹುದು?'. ಈ ರೀತಿ ಆಲೋಚಿಸುತ್ತಾ ಜನಸಾಗರವು ಅವರನ್ನು ಸುತ್ತುವರಿಯಿತು. ಸಮುದ್ರದಂತೆ ಅಪಾರವಾದ ಜನರ ಸಮೂಹವು ಅವರ ಸುತ್ತಲೂ ಸೇರಿತು. ಜಲಸಾಗರವು ಅವರಿಗಿಂತ ಕಡಿಮೆಯಾಗಿ ಅವರ ಶಿಷ್ಯತ್ವವನ್ನು ವಹಿಸಿದರೆ, ಜನಸಾಗರವು ಅವರ ಪ್ರವಚನವನ್ನು ಕೇಳಲು ಹತ್ತಿರ ಬಂದಿತು.

ಗಂಭೀರಸ್ಯ ಭಾವಃ ಗಾಂಭೀರ್ಯಂ ತಸ್ಮಾತ್, ಶ್ರೋತುಂ ಯೋಗ್ಯಂ ಶ್ರಾವ್ಯಂ, ತಸ್ಯ ಭಾವಃ ಶ್ರಾವ್ಯತ್ವಂ; ಪೂರ್ಣಶ್ಚಾಸೌ ಇಂದುಶ್ಚ, ಪೂರ್ಣೇಂದೋಃ ಪ್ರಭಾ ಇವ ಪ್ರಭಾ ಯಸ್ಯ ತತ್, ಪೂರ್ಣೇಂದುಪ್ರಭಂ ವದನಂ ಯಸ್ಯ ಸಃ, ಜನಾ ಏವ ಜಲಧಿಃ, ಅನಧರಂ ಅಧರಂ ಸಂಪದ್ಯಮಾನಂ ಕರೋತಿ ಅಧರೀಕರೋತಿ.

ಆಚಾರ್ಯರ ಉಪನ್ಯಾಸವನ್ನು ಕೇಳಿ ಆ ಜನರು ಆಚಾರ್ಯನಿಂದಕರನ್ನು ನಿಂದಿಸಿದರು—

ವೇದಾನಾಂ ಸಮುಚಿತಭಾವವಾದದಕ್ಷಂ
ಯೇ ವೇದದ್ವಿಷಮೂಚಿರೇ ಮಹೇಷ್ವಾರ್ಸ್ಯಾಃ ।
ಧಿಕ್ ಧಿಕ್ ತಾನಿತಿ ಜನತಾ ಜಗಾದ ತತ್ರ
ಸ್ವಾಶ್ಚರ್ಯಾತ್ ಕಿಲ ಕಲಿತಾಂಜಲಿರ್ನಮಂತೀ ॥ ೧೮ ॥

Rarest Archive

ಮಹೇರ್ಷ್ಯಾಃ ಯೇ ವೇದಾನಾಂ ಸಮುಚಿತಭಾವವಾದದಕ್ಷಂ ಇಮಂ ವೇದದ್ವಿಷಂ ಊಚಿರೇ ತಾನ್ 'ಧಿಕ್ ಧಿಕ್' ಇತಿ ತತ್ರ ಜನತಾ ಸ್ವಾಶ್ಚ-ರ್ಯಾತ್ ಕಲಿತಾಂಜಲಿಃ ನಮಂತೀ (ಗಾಢಂ) ಜಗಾದ ಕಿಲ.

ಮಹೇರ್ಷ್ಯಾಃ ಯೇ = ಹೆಚ್ಚಾದ ಅಸೂಯೆಯುಳ್ಳ ಯಾರು, ವೇದಾನಾಂ ಸಮುಚಿತಭಾವವಾದದಕ್ಷಂ ಇಮಂ = ವೇದಗಳ ಯೋಗ್ಯವಾದ ಅಭಿಪ್ರಾಯವನ್ನು ಹೇಳುವುದರಲ್ಲಿ ಸಮರ್ಥರಾದ ಈ ಮಧ್ವಾಚಾರ್ಯರನ್ನು, ವೇದದ್ವಿಷಂ ಊಚಿರೇ = ವೇದದ್ವೇಷಿಗಳನ್ನಾಗಿ ಹೇಳಿದರೋ, ತಾನ್ ಧಿಕ್ ಧಿಕ್ = ಅವರಿಗೆ ಧಿಕ್ಕಾರ, ಧಿಕ್ಕಾರ. ಇತಿ = ಹೀಗೆಂದು, ತತ್ರ = ಅಲ್ಲಿದ್ದ, ಜನತಾ = ಜನರ ಸಮೂಹವು, ಸ್ವಾಶ್ಚರ್ಯಾತ್ = ಅತ್ಯಂತ ಆಶ್ಚರ್ಯದಿಂದ, ಕಲಿತಾಂಜಲಿಃ = ಕೈಜೋಡಿಸಿದ್ದಾಗಿ, ನಮಂತೀ = ನಮಸ್ಕಾರಮಾಡುತ್ತಾ, (ಗಾಢಂ = ಅತಿಶಯವಾಗಿ) ಜಗಾದ ಕಿಲ = ಹೇಳಿತಷ್ಟೆ !

'ಈ ಮಧ್ವಾಚಾರ್ಯರು ವೇದಗಳಿಗೆ ಯೋಗ್ಯವಾದ ಅಭಿಪ್ರಾಯವನ್ನು ವಿವರಿಸುವುದರಲ್ಲಿ ಅತ್ಯಂತಕುಶಲರಾಗಿದ್ದಾರೆ. ಕೆಲವು ಮಂದಿ ದುರ್ಜನರು ಇಂತಹವರನ್ನು ಅಸೂಯೆಯಿಂದ ವೇದದ್ವೇಷಿಗಳೆಂದು ನಿಂದಿಸುತ್ತಿದ್ದಾರೆ. ಅಂತಹ ನೀಚರಿಗೆ ಧಿಕ್ಕಾರವಿರಲಿ, ಅವರು ಅತ್ಯಂತ ಹೀನರು' ಎಂದು ಆ ಸಮುದ್ರತೀರದಲ್ಲಿ ಸೇರಿದ್ದ ಜನರು ಆಶ್ಚರ್ಯದಿಂದ ಶ್ರೀಮಧ್ವಾಚಾರ್ಯರಿಗೆ ಕೈಮುಗಿದು ನಮಸ್ಕಾರಮಾಡುತ್ತಾ ಹೇಳಿದರು.

ಸಮುಚಿತಶ್ಚಾಸೌ ಭಾವಶ್ಚ, ಸಮುಚಿತಭಾವಸ್ಯ ವಾದಃ, ಸಮು-ಚಿತಭಾವವಾದೇ ದಕ್ಷಃ ತಂ, ವೇದಂ ದ್ವೇಷ್ಟೀತಿ ವೇದದ್ವಿಟ್ ತಂ, ಮಹತೀ ಈರ್ಷ್ಯಾ ಯಸ್ಯ ಸಃ ತಂ, ತಾನ್ ಧಿಕ್ ಎಂಬಲ್ಲಿ ಧಿಕ್ ಉಪರ್ಯಾದಿಷು-ತ್ರಿಷು ಎಂಬ ವಚನದಿಂದ ದ್ವಿತೀಯಾ; (ಸು) ಅತೀವ ಆಶ್ಚರ್ಯಂ ಸ್ವಾಶ್ಚರ್ಯಂ ತಸ್ಮಾತ್, ಕಲಿತಃ ಅಂಜಲಿಃ ಯಸ್ಯಾಃ ಸಾ;

ಆಚಾರ್ಯರೊಡನೆ ಜನರೆಲ್ಲರೂ ಸಮುದ್ರಸ್ನಾನ ಮಾಡಿದರು—

ಸನ್ನಾವಂ (ಸನ್ನಾನಂ) ವಿಪುಲಹೃದೇ ವಿಧಾಯ ಭಕ್ತ್ಯಾ ಬಿಭ್ರಾಣಾಶ್ಚರಣರಜೋsಸ್ಯ ದೇವಸೇವ್ಯಂ (ಜಃ ಸುರೇಂದ್ರಸೇವ್ಯಂ) ।

Rarest Archiver

ತತ್ಸ್ನಾನಾದಧಿಕಶುಚೌ ನದಾಧಿರಾಜೇ
ಸಸ್ನುಸ್ತೇ ದ್ವಿಜನಿಕರಾಃ ಪ್ರಶಸ್ತಕಾಲೇ || ೧೯ ||

ತೇ ದ್ವಿಜನಿಕರಾಃ ವಿಪುಲಹೃದೇ ಭಕ್ತ್ಯಾ ಸನ್ನಾಮಂ (ಸನ್ಮಾನಂ) ವಿಧಾಯ ಅಸ್ಯ ದೇವಸೇವ್ಯಂ (ಸುರೇಂದ್ರಸೇವ್ಯಂ) ಚರಣರಜಃ ಬಿಭ್ರಾಣಾಃ ತತ್ಸ್ನಾನಾತ್ ಅಧಿಕಶುಚೌ ನದಾಧಿರಾಜೇ ಪ್ರಶಸ್ತಕಾಲೇ ಸಸ್ನುಃ.

ತೇ ದ್ವಿಜನಿಕರಾಃ = ಆ ಬ್ರಾಹ್ಮಣರ ಸಮೂಹಗಳು, ವಿಪುಲಹೃದೇ = ಶ್ರೀಪೂರ್ಣಪ್ರಜ್ಞಾಚಾರ್ಯರಿಗೆ, ಭಕ್ತ್ಯಾ = ಅತಿಶಯಪ್ರೇಮದಿಂದ, ಸನ್ನಾಮಂ = ನಮಸ್ಕಾರವನ್ನು, (ಸನ್ಮಾನಂ = ಗೌರವವನ್ನು), ವಿಧಾಯ = ಮಾಡಿ, ಅಸ್ಯ = ಈ ಮಧ್ವರ, ದೇವಸೇವ್ಯಂ = ದೇವತೆಗಳಿಂದಲೂ ಸೇವಿಸಲು ಯೋಗ್ಯವಾದ, (ಸುರೇಂದ್ರಸೇವ್ಯಂ = ದೇವಶ್ರೇಷ್ಠರಿಂದ ಸೇವಿಸಲು ಯೋಗ್ಯವಾದ) ಚರಣರಜಃ = ಪಾದಧೂಳಿಯನ್ನು, ಬಿಭ್ರಾಣಾಃ = ಧರಿಸಿದವರಾಗಿ, ತತ್ಸ್ನಾನಾತ್ = ಆಚಾರ್ಯರ ಸ್ನಾನದಿಂದ, ಅಧಿಕಶುಚೌ = ಹೆಚ್ಚು ಪವಿತ್ರವಾದ, ನದಾಧಿರಾಜೇ = ನದೀನದಗಳ ಪತಿಯಾದ ಸಮುದ್ರನಲ್ಲಿ, ಪ್ರಶಸ್ತಕಾಲೇ = ಸ್ನಾನಯೋಗ್ಯವಾದ ಗ್ರಹಣಸಮಯದಲ್ಲಿ ಸಸ್ನುಃ = ಸ್ನಾನಮಾಡಿದರು.

ಆ ಬ್ರಾಹ್ಮಣರು ಗುಂಪು ಗುಂಪಾಗಿ ಬಂದು ಶ್ರೀಮಧ್ವಾಚಾರ್ಯರನ್ನು, ಭಕ್ತಿಯಿಂದ ನಮಿಸಿ ಗೌರವಿಸಿದರು. ರುದ್ರಾದಿದೇವತೆಗಳಿಂದಲೂ ಸೇವಿತವಾದ ಅವರ ಪಾದಧೂಳಿಯನ್ನು ಶಿರಸ್ಸಿನಲ್ಲಿ ಧರಿಸಿದರು. ಆಚಾರ್ಯರ ಸ್ನಾನದಿಂದ ಮತ್ತಷ್ಟು ಪವಿತ್ರವಾದ ಸಮಸ್ತಪುಣ್ಯನದಿಗಳಿಗೂ ಆಶ್ರಯವಾದ ಸಮುದ್ರದಲ್ಲಿ ಆ ಗ್ರಹಣಪುಣ್ಯಕಾಲದಲ್ಲಿ ಸ್ನಾನಮಾಡಿದರು. ಮೊದಲೇ ಪುಣ್ಯತೀರ್ಥವಾದ ಸಮುದ್ರವು ಜೀವೋತ್ತಮರ ಸ್ನಾನದಿಂದ ಮತ್ತಷ್ಟು ಪವಿತ್ರವಾಯಿತು. ಆಗ ಅದರಲ್ಲಿ ಜನರೆಲ್ಲರೂ ಸ್ನಾನಮಾಡಿದರು ಎಂದು ಭಾವ.

ಸಂಶ್ಚ ಅಸೌ ನಾಮಶ್ಚ (ಸನ್ ಚ ಅಸೌ ಮಾನಶ್ಚ ತಂ) ವಿಪುಲಂ ಹೃತ್ ಯಸ್ಯ ತಸ್ಮೈ, ದೇವೈಃ (ಸುರಾಣಾಂ ಇಂದ್ರಾಃ ತೈಃ) ಸೇವ್ಯಂ, ತಸ್ಯ ಸ್ನಾನಂ ತಸ್ಮಾತ್, ಅಧಿಕಂ ಶುಚಿಃ ತಸ್ಮಿನ್, ನದ್ಯಶ್ಚ ನದಾಶ್ಚ,

Rarest Archive

(ನದಾಃ) ನದಾನಾಂ ಅಧಿರಾಜಃ ತಸ್ಮಿನ್. ದ್ವಿಜಾನಾಂ ನಿಕರಾಃ, ಪ್ರಶಸ್ತಶ್ಚಾಸೌ ಕಾಲಶ್ಚ ತಸ್ಮಿನ್.

ಆಗ ಜನರ ಸ್ನಾನದ ಸಂಭ್ರಮವು ಹೀಗಿತ್ತು—

ಕಲ್ಲೋಲೈಃ ಕರಿಕರ್ಸೈರಿವಾನಿವಾರ್ಯೈ-
ರುಲ್ಲೋಲೈರ್ಜನನಿಕರಾನ್ನಿಪಾತಯದ್ಭಿಃ ।
ಆಕ್ರಾಂತಾಃ ಪ್ರಬಲತರೈಶ್ಚ ಲೋಠ್ಯಮಾನಾ
ಹಾಸ್ಯತ್ವಂ ಪ್ರಯಯುರುದನ್ವತೀಹ ನೈಕೇ ॥ ೨೦ ॥

ಇಹ ಉದನ್ವತಿ ನೈಕೇ ಉಲ್ಲೋಲೈಃ ಅನಿವಾರ್ಯೈಃ ಜನನಿಕರಾನ್ ನಿಪಾತಯದ್ಭಿಃ ಪ್ರಬಲತರೈಃ ಕರಿನಿಕರೈಃ ಇವ ಕಲ್ಲೋಲೈಃ ಆಕ್ರಾಂತಾಃ ಚ ಲೋಠ್ಯಮಾನಾಃ ಹಾಸ್ಯತ್ವಂ ಪ್ರಯಯುಃ.

ಇಹ ಉದನ್ವತಿ = ಈ ಸಮುದ್ರದಲ್ಲಿ, ನೈಕೇ = ಬಹಳ ಮಂದಿ, ಉಲ್ಲೋಲೈಃ = ಅತ್ಯಂತ ಚಂಚಲಗಳಾದ, ಅನಿವಾರ್ಯೈಃ = ತಡೆಯಲು ಸಾಧ್ಯವಿಲ್ಲದ, ಜನನಿಕರಾನ್ ನಿಪಾತಯದ್ಭಿಃ = ಜನರ ಸಮೂಹಗಳನ್ನು ಬೀಳಿಸುತ್ತಿರುವ, ಪ್ರಬಲತರೈಃ ಕರಿನಿಕರೈಃ ಇವ = ಅತ್ಯಂತಬಲಶಾಲಿಗಳಾದ ಆನೆಗಳ ಹಿಂಡುಗಳಿಂದಲೆಂಬಂತೆ, ಕಲ್ಲೋಲೈಃ = ದೊಡ್ಡ ಅಲೆಗಳಿಂದ, ಆಕ್ರಾಂತಾಃ = ಆಕ್ರಮಿಸಲ್ಪಟ್ಟ(ಮುಳುಗಿಸಲ್ಪಟ್ಟ)ವರಾಗಿ, ಚ ಲೋಠ್ಯಮಾನಾಃ = ಮತ್ತು ಹೊರಳಾಡಿಸಲ್ಪಟ್ಟವರಾಗಿ, ಹಾಸ್ಯತ್ವಂ ಪ್ರಯಯುಃ = ಹಾಸ್ಯಾಸ್ಪದತೆಯನ್ನು ಹೊಂದಿದರು.

ಭೋರ್ಗರೆಯುತ್ತಿರುವ ಪಶ್ಚಿಮಮಹಾಸಮುದ್ರದಲ್ಲಿ ತಡೆಯಲು ಅಸಾಧ್ಯವಾದ ದೊಡ್ಡ ಅಲೆಗಳು ಎತ್ತರ ಎತ್ತರವಾಗಿ ದಡದ ಕಡೆಗೆ ಬರುತ್ತಿದ್ದುವು. ಆನೆಗಳ ಹಿಂಡುಗಳಂತಿರುವ ಆ ಅಲೆಗಳು ಸ್ನಾನಕ್ಕಾಗಿ ಸಮುದ್ರದ ಒಳಗೆ ಸ್ವಲ್ಪದೂರ ಹೋಗಿ ನಿಂತಿರುವ ಜನರನ್ನು ತಮ್ಮ ವೇಗದಿಂದ ಕೆಡವಿ ಬಿಡುತ್ತಿದ್ದುವು. ಕೆಲವರು ಅಲೆಗಳ ಹೊಡೆತದಿಂದ ಕಾಲು ತಪ್ಪಿ ಉರುಳಾಡುತ್ತಾ ಸಮುದ್ರದಲ್ಲಿ ಸ್ವಲ್ಪದೂರ ಸೆಳೆಯಲ್ಪಡುತ್ತಿದ್ದರು. ಅವರನ್ನು ನೋಡಿ ಮತ್ತೆ ಕೆಲವರು ಅಪಹಾಸ ಮಾಡಿ ನಗುತ್ತಿದ್ದರು.

Rarest Archiver

ಕಲ್ಲೋಲ=ದೊಡ್ಡ ಅಲೆ. ಮಹತ್ಕಲ್ಲೋಲಕಲ್ಲೋಲೌ-ಅವರಃ ಕರಿಣಾಂ ನಿಕರಾಃ ತೈಃ, ಉದ್ಗತಾಶ್ಚ ತೇ ಲೋಲಾಶ್ಚ ಉಲ್ಲೋಲಾಃ ತೈಃ, ಜನಾನಾಂ ನಿಕರಾಃ ತಾನ್, ಹಸಿತುಂ ಯೋಗ್ಯಾಃ ಹಾಸ್ಯಾಃ, ಹಾಸ್ಯಾನಾಂ ಭಾವಃ ಹಾಸ್ಯತ್ವಂ, ತತ್;

ಸಮುದ್ರಸ್ನಾನಮಾಡುತ್ತಿರುವ ಆಚಾರ್ಯರನ್ನು ದುರ್ಜನರು ಅಪಹಾಸ ಮಾಡಿದರು—

ಮಜ್ಜಂತಂ ಪೃಥುಲಹರೀನಿಗೂಢಮೂರ್ತಿಂ
ಸಂಪೂರ್ಣಪ್ರಮತಿಮಸಜ್ಜನೋ ಜಹಾಸ ।
ಯೋ ಲೋಕತ್ರಯವಿಜಯೀ ಗುರುಃ ಪ್ರಸಿದ್ಧಃ
ಸೋಽಯಂ ಹಾ ಪತತಿ ಲಘೂರ್ಮಿಲೀಲಯೇತಿ ॥ ೨೧ ॥

ಯಃ ಲೋಕತ್ರಯವಿಜಯೀ ಗುರುಃ (ಇತಿ) ಪ್ರಸಿದ್ಧಃ ಸೋಽಯಂ ಲಘೂರ್ಮಿಲೀಲಯಾ ಪತತಿ ಹಾ ಇತಿ ಅಸಜ್ಜನಃ ಮಜ್ಜಂತಂ ಪೃಥುಲಹರೀ ನಿಗೂಢಮೂರ್ತಿಂ ಸಂಪೂರ್ಣಪ್ರಮತಿಂ ಜಹಾಸ.

ಯಃ=ಯಾರು, ಲೋಕತ್ರಯವಿಜಯೀ=ಮೂರು ಲೋಕಗಳನ್ನು ಜಯಿಸಿದ, ಗುರುಃ (ಇತಿ) ಪ್ರಸಿದ್ಧಃ=ಗುರುಗಳೆಂದು ಪ್ರಸಿದ್ಧರಾಗಿರುವರೋ, ಸೋಽಯಂ=ಅಂತಹ ಈ ಗುರುಗಳು, ಲಘೂರ್ಮಿಲೀಲಯಾ=ಚಿಕ್ಕ ಅಲೆಗಳ ಚೇಷ್ಟೆಯಿಂದ, ಪತತಿ ಹಾ=ಬೀಳುತ್ತಿದ್ದಾರೆ, ಅಯ್ಯೋ ಪಾಪ !, ಇತಿ ಅಸಜ್ಜನಃ=ಹೀಗೆಂದು ದುರ್ಜನರು, ಮಜ್ಜಂತಂ=ಸಮುದ್ರದಲ್ಲಿ ಮುಳುಗುತ್ತಿರುವ, ಪೃಥುಲಹರೀನಿಗೂಢಮೂರ್ತಿಂ=ದೊಡ್ಡ ಅಲೆಗಳಿಂದ ಅಡಗಿದ ದೇಹವುಳ್ಳ, ಸಂಪೂರ್ಣಪ್ರಮತಿಂ ಜಹಾಸ=ಶ್ರೀಪೂರ್ಣಪ್ರಜ್ಞಾಚಾರ್ಯರನ್ನು ಅಪಹಾಸಮಾಡಿದರು.

'ಮೂರುಲೋಕಗಳನ್ನೇ ಜಯಿಸಿದವರೆಂದು ಪ್ರಸಿದ್ಧರಾದ ಈ ಗುರುಗಳು ಚಿಕ್ಕಮಕ್ಕಳಂತೆ ಚಿಕ್ಕಅಲೆಗಳು ಮಾಡಿದ ಚೇಷ್ಟೆಗಳಿಂದ ಚಿಕ್ಕಹೊಡೆತಗಳಿಂದ ಮುಳುಗಿ ಹೋಗುತ್ತಿದ್ದಾರೆ. ಉರುಳಿ ಬೀಳುತ್ತಿದ್ದಾರೆ; ಅಯ್ಯೋ ಪಾಪ !' ಎಂದು ಸ್ನಾನಮಾಡುವಾಗ ದೊಡ್ಡಅಲೆಗಳಲ್ಲಿ ಮುಳುಗಿದದೇಹವುಳ್ಳ ಶ್ರೀಮಧ್ವಾಚಾರ್ಯರನ್ನು ಅಪಹಾಸ ಮಾಡಿದರು.

Rarest Archiver

ಪೃಥವಶ್ಚ ತಾಃ ಲಹರ್ಯಶ್ಚ, ಪೃಥುಲಹರೀಭಿಃ ನಿಗೂಢಾ ಮೂರ್ತಿಃ ಯಸ್ಯ ಸಃ, ಸಂಪೂರ್ಣಾ ಪ್ರಮತಿಃ ಯಸ್ಯ ಸಃ ತಂ, ನ ಸನ್ ಅಸನ್-ಅಸಂಶ್ಚಾಸೌ ಜನಶ್ಚ ; ಲೋಕಾನಾಂ ತ್ರಯಂ, ವಿಜಯಃ ಅಸ್ಯ ಅಸ್ತೀತಿ ವಿಜಯಿೀ ಲೋಕತ್ರಯಸ್ಯ ವಿಜಯಿೀ, ಲಘವಶ್ಚ ತಾಃ ಊರ್ಮಯಶ್ಚ, ಲಘೂರ್ಮೀಣಾಂ ಲೀಲಾ ತಯಾ.

ಮಹಾಪುರುಷರಾದ ಆಚಾರ್ಯರು ಆ ನೀಚವಚನಗಳನ್ನು ಲೆಕ್ಕಿಸಲಿಲ್ಲ—

ನೀಚಾನಾಮವಚವಚಾಂಸ್ಯಜೀಗಣನ್ನೋ
ದಭ್ರಾಣಾಂ ಕ್ಷುಭಿತಕರಾಣ್ಯದಭ್ರಸಂಖ್ಯಃ ।
ಕ್ರೋಷ್ಟೂನಾಂ ಶ್ವಕಲಕಲಪ್ರದಂ ವಿರಾವಂ
ಪಂಚಾಸ್ಯೋ ನ ಹಿ ಗಣಯೇದುದಾರವೀರ್ಯಃ ॥ ೨೨ ॥

ಅದಭ್ರಸಂಖ್ಯಃ ದಭ್ರಾಣಾಂ ಕ್ಷುಭಿತಕರಾಣಿ ನೀಚಾನಾಂ ಅವಚ-ವಚಾಂಸಿ ನ ಅಜೀಗಣತ್; ಶ್ವಕಲಕಲಪ್ರದಂ ಕ್ರೋಷ್ಟೂನಾಂ ವಿರಾವಂ ಉದಾರವೀರ್ಯಃ ಪಂಚಾಸ್ಯಃ ನ ಗಣಯೇತ್ ಹಿ.

ಅದಭ್ರಸಂಖ್ಯಃ = ಶ್ರೀಪೂರ್ಣಪ್ರಜ್ಞಾಚಾರ್ಯರು, ದಭ್ರಾಣಾಂ = ಅಲ್ಪಜನರಿಗೆ, ಕ್ಷುಭಿತಕರಾಣಿ = ಕ್ಷೋಭೆಯನ್ನುಂಟುಮಾಡುವ, ನೀಚಾನಾಂ = ದುರ್ಜನರ, ಅವಚವಚಾಂಸಿ = ಹೇಳಲು ಅಯೋಗ್ಯವಾದ ಮಾತುಗಳನ್ನು, ನ ಅಜೀಗಣತ್ = ಲೆಕ್ಕಿಸಲಿಲ್ಲ, ಶ್ವಕಲಕಲಪ್ರದಂ = ನಾಯಿಗಳಿಗೆ ಗಲಭೆಯನ್ನುಂಟುಮಾಡುವ (ಬೊಗಳುವುದಕ್ಕೆ ಕಾರಣವಾದ) ಕ್ರೋಷ್ಟೂನಾಂ = ನರಿಗಳ, ವಿರಾವಂ = ಕೂಗನ್ನು, ಉದಾರವೀರ್ಯಃ = ಗಂಭೀರಪರಾಕ್ರಮವುಳ್ಳ, ಪಂಚಾಸ್ಯಃ = ಸಿಂಹವು, ನ ಗಣಯೇತ್ ಹಿ = ಲೆಕ್ಕಿಸಲಾರದಷ್ಟೆ !

ಶ್ರೀಪೂರ್ಣಪ್ರಜ್ಞಾಚಾರ್ಯರು ಅಲ್ಪಜನರ ಮನಸ್ಸಿಗೆ ಕೋಪತಾಪಗಳನ್ನುಂಟುಮಾಡಲು ಸಮರ್ಥವಾದ ನೀಚರ ಆ ಅಯೋಗ್ಯವಾದ ಮಾತುಗಳನ್ನು ಗಣನೆಗೇ ತೆಗೆದು ಕೊಳ್ಳಲಿಲ್ಲ. ಅಧಿಕ ಗಂಭೀರಪರಾಕ್ರಮವುಳ್ಳ

Rarest Archiver

ಸಿಂಹವು ನಾಯಿಗಳ ಕೋಲಾಹಲಕ್ಕೆ ಕಾರಣವಾದ ನರಿಗಳ ಕೂಗನ್ನು ಲೆಕ್ಕಿಸುವುದಿಲ್ಲವಷ್ಟೆ! ಎಲ್ಲಾದರೂ ನರಿಗಳು ಕೂಗಿದರೆ ನಾಯಿಗಳು ಗುಂಪು ಗುಂಪಾಗಿ ಸೇರಿ ಕೂಗಲಾರಂಭಿಸುತ್ತವೆ. ಆದರೆ ಸಿಂಹವು ನರಿಯ ಕೂಗನ್ನು ಲೆಕ್ಕಿಸುವುದಿಲ್ಲ. ಮತ್ತೊಂದು ಸಿಂಹ ಅಥವಾ ಆನೆಯ ಕೂಗನ್ನು ಮಾತ್ರವೇ ಪರಿಗಣಿಸುತ್ತದೆ. ಅದರಂತೆ ಆಚಾರ್ಯರು ಪಂಡಿತರಾದ ಪ್ರತಿವಾದಿಗಳ ಮಾತನ್ನು ಮಾತ್ರವೇ ಮನಸ್ಸಿಗೆ ತಂದುಕೊಳ್ಳುತ್ತಿದ್ದರು. ಈ ನೀಚರ ಮಾತನ್ನು ಲೆಕ್ಕಿಸಲಿಲ್ಲ.

ವಕ್ತುಂ ಅಯೋಗ್ಯಾನಿ, ಅವಚಾನಿ ಚ ತಾನಿ ವಚಾಂಸಿ ಚ ತಾನಿ; ಕ್ಷುಭಿತಸ್ಯ ಕರಾಣಿ, ಶುನಾಂ ಕಲಕಲಸ್ಯ ಪ್ರದಃ ತಂ, ಪಂಚಾಸ್ಯಃ= ಸಿಂಹ, ಸಿಂಹೋ ಮೃಗೇಂದ್ರಃ ಪಂಚಾಸ್ಯಃ –**ಅಮರ.** ಉದಾರಂ ವೀರ್ಯಂ ಯಸ್ಯ ಸಃ.

ಅಜೀಗಣತ್ ಅಜೀಗಣತಾಂ ಅಜೀಗಣನ್ ಇತ್ಯಾದಿ. ಗಣ ಸಂಖ್ಯಾನೇ ಚುರಾದಿ–ಲುಙ್. ಈ ಚ ಗಣಃ (7–4–97) ಈತ್ವ.

ಆದರೂ ಸ್ವಲ್ಪಮಾತ್ರ ತನ್ನ ಮಹಿಮೆಯನ್ನು ತೋರಿಸಿದರು —

ಜನ್ಮಸ್ಥಿತ್ಯವಸಿತಿದಾಯಿನಂ ಕಟಾಕ್ಷಂ
ಲೋಕಾನಾಮಘಟಯದಂಬುಧೌ ಬೃಹದ್ಧೀಃ ।
ಆಕ್ರಾಂತೋಽಧಿಕಗುರುಣಾ ಸ ತೇನ ತಾವನ್–
ಮುಂಚನ್ ಸಂಚಲನಮಭೂತ್ತಟಾಕದೇಶ್ಯಃ ॥ ೨೩ ॥

ಬೃಹದ್ಧೀಃ ಲೋಕಾನಾಂ ಜನ್ಮಸ್ಥಿತ್ಯವಸಿತಿದಾಯಿನಂ ಕಟಾಕ್ಷಂ ಅಂಬುಧೌ ಅಘಟಯತ್, ತಾವತ್ ಅಧಿಕಗುರುಣಾ ತೇನ ಆಕ್ರಾಂತಃ ಸಃ ಸಂಚಲನಂ ಮುಂಚನ್ ತಟಾಕದೇಶ್ಯಃ ಅಭೂತ್.

ಬೃಹದ್ಧೀಃ = ಶ್ರೀಪೂರ್ಣಪ್ರಜ್ಞಾಚಾರ್ಯರು, ಲೋಕಾನಾಂ = ಎಲ್ಲಾ ಲೋಕಗಳಿಗೂ (ಜನರಿಗೂ) ಜನ್ಮಸ್ಥಿತ್ಯವಸಿತಿದಾಯಿನಂ = ಉತ್ಪತ್ತಿ, ಪಾಲನೆ ಮತ್ತು ನಾಶಗಳನ್ನು ಕೊಡುವ, ಕಟಾಕ್ಷಂ = ಕಡೆಗಣ್ಣಿನ ನೋಟ ವನ್ನು, ಅಂಬುಧೌ ಅಘಟಯತ್ = ಸಮುದ್ರದ ಮೇಲೆ ಯೋಜಿಸಿದರು.

Rarest Archiver

ತಾವತ್ = ಅಷ್ಟರಲ್ಲಿ, ಅಧಿಕಗುರುಣಾ ತೇನ = ಅತ್ಯಂತ ಸಮರ್ಥವಾದ ಆ ನೋಟದಿಂದ, ಆಕ್ರಾಂತಃ ಸಃ = ಆಕ್ರಮಿಸಲ್ಪಟ್ಟ ಆ ಸಮುದ್ರವು, ಸಂಚಲನಂ ಮುಂಚನ್ = ಅಲೆಗಳ ಏರಿಳಿತಗಳನ್ನು ಬಿಡುತ್ತಾ, ತಟಾಕದೇಶ್ಯಃ ಅಭೂತ್ = ಕೆರೆಯಂತೆ ಆಯಿತು.

ಶ್ರೀಪೂರ್ಣಪ್ರಜ್ಞಾಚಾರ್ಯರು ಸಮಸ್ತಲೋಕಗಳಿಗೂ, ಜನರಿಗೂ ಉತ್ಪತ್ತಿ ಸ್ಥಿತಿ ಸಂಹಾರಗಳನ್ನು ಮಾಡಲು ಸಮರ್ಥವಾದ ತನ್ನ ಕಡೆಗಣ್ಣಿನ ನೋಟವನ್ನು ಸಮುದ್ರದ ಕಡೆಗೆ ಬೀರಿದರು. ಆಗ ಅವರ ನೋಟದಿಂದ ಹೆದರಿದ ಸಮುದ್ರವು ಅಲೆಗಳ ಆರ್ಭಟವನ್ನು, ಏರಿಳಿತಗಳನ್ನೂ ಬಿಟ್ಟು ಕೆರೆಯಂತೆ ನಿಶ್ಚಲವಾಯಿತು.

ಜನ್ಮ ಚ ಸ್ಥಿತಿಶ್ಚ ಅವಸಿತಿಶ್ಚ, ಜನ್ಮಸ್ಥಿತ್ಯವಸಿತೀಃ ದದಾತೀತಿ, ... ದಾಯಿೞ (ಯಿನ್) ತಂ, ಬೃಹತೀ ಧೀಃ ಯಸ್ಯ ಸಃ, ಅಧಿಕಂ ಗುರುಃ ತೇನ, ಈಷದಸಮಾಪ್ತಃ ತಟಾಕಃ ತಟಾಕದೇಶ್ಯಃ, ಈಷದಸಮಾಪ್ತೌ ಕಲ್ಪಪ್‌ದೇಶ್ಯದೇಶೀಯರಃ (5-3-67) ದೇಶ್ಯಪ್ರತ್ಯಯ.

ಅಘಟಯತ್ ಅಘಟಯತಾಂ ಅಘಟಯನ್-ಘಟ ಚೇಷ್ಟಾಯಾಂ ಣಿಜಂತ ಲಙ್.

ಇಷ್ಟು ಮಹಿಮೆಯನ್ನು ಕಂಡರೂ ದುರ್ಜನರು ದ್ವೇಷಿಸುವುದನ್ನು ಬಿಡಲಿಲ್ಲ—

ಇತ್ಯಾದ್ಯೈರಪಿ ಚರಿತೈರನನ್ಯಸಾಧ್ಯೈ-
ರ್ನಸ್ಥೇಷ್ಠಾಂ ಬಹುಮತಿಮಾಪ ದುರ್ಜನೋಽಸ್ಮಿನ್ ।
ವಿದ್ವೇಷಂ ವ್ಯಧಿತ ಪುನರ್ನಿರಸ್ತಭಾಗ್ಯೇ
ತಸ್ಮಿನ್ ದುರ್ಮನಸಿ ತದೇವ ಶೋಭನಂ ಸ್ಯಾತ್ ॥ ೨೪ ॥

ದುರ್ಜನಃ ಇತ್ಯಾದ್ಯೈಃ ಅನನ್ಯಸಾಧ್ಯೈಃ ಚರಿತೈಃ ಅಪಿ ಅಸ್ಮಿನ್ ಸ್ಥೇಷ್ಠಾಂ ಬಹುಮತಿಂ ನಾಪ. ಪುನಃ ವಿದ್ವೇಷಂ ವ್ಯಧಿತ. ನಿರಸ್ತಭಾಗ್ಯೇ ದುರ್ಮನಸಿ ತಸ್ಮಿನ್ ತದೇವ ಶೋಭನಂ ಸ್ಯಾತ್.

ದುರ್ಜನಃ = ದುಷ್ಟಜನರು, ಇತ್ಯಾದ್ಯೈಃ = ಇದೇ ಮೊದಲಾಗಿ ಉಳ್ಳ, ಅನನ್ಯಸಾಧ್ಯೈಃ = ಬೇರೆಯವರಿಂದ ಸಾಧಿಸಲು ಆಗದ, ಚರಿತೈಃ

ಅಪಿ = ಕಾರ್ಯಗಳಿಂದಲೂ, ಅಸ್ಮಿನ್ = ಈ ಶ್ರೀಮಧ್ವರಲ್ಲಿ, ಸ್ಥೇಷ್ಠಾಂ ಬಹುಮತಿಂ = ಅತ್ಯಂತಸ್ಥಿರವಾದ ಮಹತ್ತ್ವಬುದ್ಧಿಯನ್ನು, ನಾಪ = ಹೊಂದಲಿಲ್ಲ. ಪುನಃ ವಿದ್ವೇಷಂ ವ್ಯಧಿತ = ಮತ್ತೂ ದ್ವೇಷವನ್ನು ಮಾಡಿದರು. ನಿರಸ್ತಭಾಗ್ಯೇ = ಅದೃಷ್ಟಹೀನರಾದ, ದುರ್ಮನಸಿ ತಸ್ಮಿನ್ = ದುಷ್ಟಬುದ್ಧಿಯುಳ್ಳ ಆ ದುರ್ಜನರಲ್ಲಿ, ತದೇವ = ಅದೇ, ಶೋಭನಂ ಸ್ಯಾತ್ = ಉಚಿತವಾಗಿದೆಯಷ್ಟೆ !

ಇದೇ ಮೊದಲಾದ ಇತರರು ಯಾರಿಂದಲೂ ಮಾಡಲು ಅಸಾಧ್ಯಗಳಾದ ಮಹಿಮೆಗಳನ್ನು ಆಚಾರ್ಯರು ತೋರಿಸಿದರು. ಆದರೂ ನಿತ್ಯದುಃಖಾನುಭವಯೋಗ್ಯರಾದ ದುರ್ಜನರು ತತ್ಕಾಲದಲ್ಲಿ ಸ್ವಲ್ಪ ಗೌರವವನ್ನು ತೋರಿದರೂ ಅತ್ಯಂತಸ್ಥಿರವಾದ ಭಕ್ತಿಯನ್ನು ಹೊಂದಲಿಲ್ಲ. ಅನಂತರ ಪುನಃ ದ್ವೇಷವನ್ನೇ ಮಾಡಲಾರಂಭಿಸಿದರು. ಆನಂದಭಾಗ್ಯಹೀನರಾದ ಆ ದುರ್ಜನರಿಗೆ ಹೀಗೆ ಮಹಾತ್ಮರನ್ನು ದ್ವೇಷಿಸುವುದೇ ಯುಕ್ತವಾಗಿದೆ. ನಿತ್ಯದುಃಖಾನುಭವಯೋಗ್ಯರಾದವರಿಗೆ ಶ್ರೀಹರಿಯು ಮತ್ತು ಶ್ರೀಗುರುಗಳ ದ್ವೇಷವು ಸ್ವಭಾವಸಿದ್ಧವೇ ಆಗಿದೆ.

ಅನ್ಯೈಃ ಸಾಧ್ಯಾನಿ, ಅನ್ಯಸಾಧ್ಯಾನಿ ನ ಭವಂತೀತಿ ತೈಃ, ಅತಿಶಯೇನ ಸ್ಥಿರಾ ಸ್ಥೇಷ್ಠಾ, ತಾಂ; ನಿರಸ್ತಂ ಭಾಗ್ಯಂ ಯಸ್ಮಾತ್ ಸಃ, ದುರ್ಗತಂ ಮನಃ ಯಸ್ಯ ಸಃ ತಸ್ಮಿನ್,

ಆಚಾರ್ಯರ ಮಹಿಮೆಗಳಲ್ಲಿ ಮತ್ತೊಂದು—

ಸಂಪ್ರಾಪ್ತಂ ಸಹ ಸಹಜೇನ ಗಂಡವಾಟಂ
ಸ್ವೌಜಸ್ಸಂಪ್ರಕಟನ ಆದಿಶದ್ವಿಶಂಕಂ ।
ಶುಶ್ರೂಷಾಮಯಮುಚಿತೋ ವಿಧಾತುಮೀಷ-
ಲ್ಲೋಕಾನಾಮಿತಿ ವಚಸಾ ಪರೀಕ್ಷಕಾಣಾಂ ॥ ೨೫ ॥

(ಸಃ) ಸಹಜೇನ ಸಹ ಸಂಪ್ರಾಪ್ತಂ ಗಂಡವಾಟಂ 'ಅಯಂ ಈಷತ್ ಶುಶ್ರೂಷಾಂ ವಿಧಾತುಂ ಉಚಿತಃ' ಇತಿ ಪರೀಕ್ಷಕಾಣಾಂ ಲೋಕಾನಾಂ ವಚಸಾ ವಿಶಂಕಂ ಸ್ವೌಜಸ್ಸಂಪ್ರಕಟನೇ ಆದಿಶತ್.

Rarest Archiver

(ಸಃ = ಆ ಮಧ್ವಾಚಾರ್ಯರು) ಸಹಜೇನ ಸಹ = ಸಹೋದರನೊಡನೆ, ಸಂಪ್ರಾಪ್ತಂ ಗಂಡವಾಟಂ = ಬಂದಿದ್ದ ಕೊಡಿಪಾಡಿತ್ತಾಯನೆಂಬ ಬ್ರಾಹ್ಮಣ ಜಟ್ಟಿಯನ್ನು, 'ಅಯಂ = ಇವನು, ಈಷತ್ ಶುಶ್ರೂಷಾಂ = ಸ್ವಲ್ಪ ಸೇವೆಯನ್ನು, ವಿಧಾತುಂ ಉಚಿತಃ ಇತಿ = ಮಾಡಲು ಯೋಗ್ಯನೆಂದು', ಪರೀಕ್ಷಕಾಣಾಂ ಲೋಕಾನಾಂ = ವಿಮರ್ಶಕರಾದ ಜನರ, ವಚಸಾ = ಮಾತಿನಿಂದ, ವಿಶಂಕಂ = ನಿಸ್ಸಂದೇಹವಾಗಿ, ಸ್ವೌಜಸ್ಸಂಪ್ರಕಟನೇ = ತಮ್ಮ(ಮಲ್ಲರ) ಬಲವನ್ನು ಪ್ರಕಟಿಸುವ ವಿಷಯದಲ್ಲಿ, ಆದಿಶತ್ = ಅಪ್ಪಣೆಮಾಡಿದರು.

'ಆಚಾರ್ಯರು ದೇಹಬಲದಲ್ಲಿ ಎಲ್ಲರನ್ನೂ ಮೀರಿಸಿದವರು' ಎಂಬ ವಿಷಯವನ್ನು ಪರೀಕ್ಷಿಸಬೇಕೆಂದು ಕೆಲವರು ನಿರ್ಧರಿಸಿದರು. 'ಗಂಡವಾಟ (ಕೊಡಿಪ್ಪಾಡಿತ್ತಾಯ) ಎಂಬ ಬ್ರಾಹ್ಮಣಮಲ್ಲನು ಅವನ ತಮ್ಮನು ಇಬ್ಬರೂ ಈ ಆಚಾರ್ಯರ ಬಲಪರೀಕ್ಷೆಯ ಸೇವೆಯನ್ನು ಸ್ವಲ್ಪಮಟ್ಟಿಗಾದರೂ ಮಾಡಲು ಸಮರ್ಥರು' ಎಂದು ಕೆಲವು ಕುತೂಹಲಿಗಳು ಹೇಳಿದಾಗ ಆಚಾರ್ಯರು ಅವರಿಬ್ಬರಿಗೂ ನೀವು ನಿಮ್ಮ ದೇಹಬಲವನ್ನು ಯಾವ ಸಂಕೋಚವೂ ಇಲ್ಲದೆ ಪ್ರಕಟಗೊಳಿಸಿರಿ, ಎಂದು ಅಪ್ಪಣೆ ಮಾಡಿದರು.

ಸಹ ಜಾಯತೇ ಇತಿ ಸಹಜಃ ತೇನ, ಸ್ವಸ್ಯ ಓಜಃ, ಸ್ವೌಜಸಃ ಸಂಪ್ರಕಟನಂ ತಸ್ಮಿನ್; ವಿಗತಾ ಶಂಕಾ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ;

ಆ ಗಂಡವಾಟನೆಂಬ ಜಟ್ಟಿಯ ಬಲವು ಹೀಗಿತ್ತು—

ಶ್ರೀಕಾಂತೇಶ್ವರಸದನೇಽನಯತ್ ಕಿಲೈಕೋ
ಯಸ್ತ್ರಿಂಶನ್ನರವರನೀತಕೇತುಯಷ್ಟಿಂ ।
ಆಹತ್ಯಾಗುರುಗದಯೈವ ನಾರಿಕೇಲಾ-
ದ್ಯೋ ಲೇಭೇ ತರಲತರಾತ್ ಫಲಾನಿ ಕಾಮಂ ॥ ೨೬ ॥

ಯಃ ಶ್ರೀಕಾಂತೇಶ್ವರಸದನೇ ತ್ರಿಂಶನ್ನರವರನೀತಕೇತುಯಷ್ಟಿಂ ಏಕಃ ಆನಯತ್ ಕಿಲ, ಯಃ ಅಗುರುಗದಯಾ ಏವ ಆಹತ್ಯ ತರಲತರಾತ್ ನಾರಿಕೇಲಾತ್ ಫಲಾನಿ ಕಾಮಂ ಲೇಭೇ.

ಯಃ = ಯಾವ ಗಂಡವಾಟನು (ಕೊಡಿಪಾಡಿತ್ತಾಯನು), ಶ್ರೀಕಾಂತೇಶ್ವರಸದನೇ = ಶ್ರೀಕಾಂತೇಶ್ವರದೇವಾಲಯದಲ್ಲಿ, ತ್ರಿಂಶನ್ನರವರನೀತಕೇತುಯಷ್ಟಿಂ = ಮೂವತ್ತು ಮನುಷ್ಯಶ್ರೇಷ್ಠರಿಂದ (ಬಲಿಷ್ಠಮನುಷ್ಯರಿಂದ) ಒಯ್ಯಲ್ಪಟ್ಟ ಧ್ವಜಸ್ತಂಭವನ್ನು, ಏಕಃ ಅನಯತ್ ಕಿಲ = ಒಬ್ಬನೇ ಒಯ್ದನಷ್ಟೆ !, ಯಃ = ಯಾವನು, ಅಗುರುಗದಯಾ ಏವ = ಭಾರವಿಲ್ಲದ ದೊಣ್ಣೆಯಿಂದಲೇ, ಆಹತ್ಯಾ = ಹೊಡೆತದಿಂದ, ತರಲತರಾತ್ = ಬಹಳವಾಗಿ ಅಲ್ಲಾಡುವ, ನಾರಿಕೇಲಾತ್ = ತೆಂಗಿನಮರದಿಂದ, ಫಲಾನಿ = ತೆಂಗಿನಕಾಯಿಗಳನ್ನು, ಕಾಮಂ ಲೇಭೇ = ಯಥೇಚ್ಛವಾಗಿ ಪಡೆದನೋ;

ಈ ಗಂಡವಾಟನು ಶ್ರೀಕಾಂತೇಶ್ವರ ಎಂಬ ದೇವಾಲಯದಲ್ಲಿ ಮೂವತ್ತು ಬಲಿಷ್ಠರಾದ ಯುವಕರು ತಂದಿರುವ ಧ್ವಜಸ್ತಂಭವನ್ನು ಒಬ್ಬನೇ ಎತ್ತಿ ತೆಗೆದು ಕೊಂಡುಹೋಗಿದ್ದನು, ಇವನು ಹಗುರವಾದ ಚಿಕ್ಕಗದೆಯಿಂದ ತೆಂಗಿನಮರವನ್ನು ಬಡಿದು ಅಲ್ಲಾಡಿಸಿ ಅದರಿಂದ ಬೇಕಾದಷ್ಟು ತೆಂಗಿನ ಕಾಯಿಗಳನ್ನು ಕೆಡವಿದ್ದನು.

ಶ್ರೀಕಾಂತೇಶ್ವರಸ್ಯ ಸದನಂ ತಸ್ಮಿನ್, ನರೇಷು ವರಾಃ ತ್ರಿಂಶಚ್ಚ ತೇ ನರವರಾಶ್ಚ ಕೇತೋಃ ಯಷ್ಟಿಃ, ತ್ರಿಂಶನ್ನರವರೈಃ ನೀತಾ ಚ ಸಾ ಕೇತುಯಷ್ಟಿಶ್ಚ ತ್ರಿಂಶನ್ನರವರನೀತಕೇತುಯಷ್ಟಿಃ ತಾಂ, ನ ಗುರುಃ ಅಗುರುಶ್ಚ ಸಾ ಗದಾ ಚ ತಯಾ.

ಇಂತಹ ಜಟ್ಟಿ ಮತ್ತು ಅವನ ತಮ್ಮನು ಆಚಾರ್ಯರ ಬಲವನ್ನು ಪರೀಕ್ಷಿಸಿದ ರೀತಿ—

ಏತಾದೃಗ್ಬಲವಿಭವಃ ಸ ತಸ್ಯ ಕಂಠಂ
ತಜ್ಜ್ಯೇಷ್ಠೋsಪ್ಯಭಿತ ಉಭೌ ಸಮಂ ಗೃಹೀತ್ವಾ ।
ನಿಷ್ಪೇಷ್ಟುಂ ಪರಮವಾಪತುಃ ಪ್ರಯತ್ನಂ
ಸಂಘರ್ಷಾತ್ ಕ್ರಮಪರಿವರ್ಧಮಾನತೈಕ್ಷ್ಣ್ಯಂ ॥ ೨೭ ॥

ಏತಾದೃಗ್‌ಬಲವಿಭವಃ ಸಃ ತಜ್ಜ್ಯೇಷ್ಠಃ ಅಪಿ ಉಭೌ ಸಂಘರ್ಷಾತ್ ಕ್ರಮಪರಿವರ್ಧಮಾನತೈಕ್ಷ್ಣ್ಯಂ ತಸ್ಯ ಕಂಠಂ ಅಭಿತಃ ಸಮಂ ಗೃಹೀತ್ವಾ ನಿಷ್ಪೇಷ್ಟುಂ ಪರಮಂ ಪ್ರಯತ್ನಂ ಅವಾಪತುಃ.

Rarest Archiver

ಏತಾದೃಗ್‌ಬಲವಿಭವಃ = ಇಂತಹ ದೇಹಸಾಮರ್ಥ್ಯಸಂಪತ್ತುಳ್ಳ, ಸಃ = ಆ ಗಂಡವಾಟನು, ತಜ್ಜ್ಯೇಷ್ಠಃ ಅಪಿ ಉಭೌ = ಅವನ ಅಣ್ಣನೂ ಇಬ್ಬರೂ, ಸಂಘರ್ಷಾತ್ = ಕೈಗಳಿಂದ ಹಿಸುಕುವುದರಿಂದ, ಕ್ರಮಪರಿವರ್ಧಮಾನತೈಕ್ಷ್ಣ್ಯಂ = ಕ್ರಮಕ್ರಮವಾಗಿ ಹೆಚ್ಚುತ್ತಿರುವ ಕಠಿನತೆಯುಳ್ಳ, ತಸ್ಯ ಕಂಠಂ = ಆ ಮಧ್ವಾಚಾರ್ಯರ ಕುತ್ತಿಗೆಯನ್ನು, ಅಭಿತಃ = ಸುತ್ತಲೂ, ಸಮಂ ಗೃಹೀತ್ವಾ = ಒಟ್ಟಿಗೇ ಒಂದೇ ಸಲ ಹಿಡಿದುಕೊಂಡು, ನಿಷ್ಪೇಷ್ಟುಂ ಹಿಸುಕುವುದಕ್ಕೆ, ಪರಮಂ ಪ್ರಯತ್ನಂ ಅವಾಪತುಃ = ಹೆಚ್ಚಾದ ಪ್ರಯತ್ನವನ್ನು ಹೊಂದಿದರು.

ಇಂತಹ ದೇಹಬಲಸಮೃದ್ಧಿಯುಳ್ಳ ಆ ಗಂಡವಾಟನೂ ಅವನ ಅಣ್ಣನೂ ಕೂಡಿ ಇಬ್ಬರೂ ಎರಡು ಕಡೆಯಿಂದ ಎರಡೂಕೈಗಳಿಂದ ಆಚಾರ್ಯರ ಕಂಠ, ಕುತ್ತಿಗೆಗಳನ್ನು ಬಿಗಿಯಾಗಿ ಹಿಡಿದು ಉಸಿರುಕಟ್ಟಿಸಬೇಕೆಂದು ಪ್ರಯತ್ನ ಪಟ್ಟರು. ಆದರೆ ಹಾಗೆ ಹಿಸುಕಿದಾಗ ಆಚಾರ್ಯರ ಕಂಠವು ಮತ್ತಷ್ಟು ಕಠಿನವಾಯಿತು. ಮರ್ದನಮಾಡುತ್ತಿದ್ದಂತೆ ಘಟ್ಟಿಘಟ್ಟಿಯಾಗುತ್ತಾ ಬಂತು. ಅವರಿಬ್ಬರೂ ಪೂರ್ಣಬಲವನ್ನು ಹಾಕಿ ಆಚಾರ್ಯರ ಸ್ವರಭಂಗ ಮಾಡಲು ಮತ್ತು ಶ್ವಾಸಬಂಧಮಾಡಲು ಪ್ರಯತ್ನಿಸುತ್ತಿದ್ದರು.

ಬಲಸ್ಯ ವಿಭವಃ ಏತಾದೃಕ್ ಬಲವಿಭವಃ ಯಸ್ಯ ಸಃ, ತಸ್ಯ ಜ್ಯೇಷ್ಠಃ, ತೀಕ್ಷ್ಣಸ್ಯ ಭಾವಃ ತೈಕ್ಷ್ಣ್ಯಂ, ಕ್ರಮೇಣ ಪರಿವರ್ಧಮಾನಂ ತೈಕ್ಷ್ಣ್ಯಂ, ಯಸ್ಯ ಸಃ ತಂ.

ಅವರಿಬ್ಬರೂ ಸೋತು ನೆಲಕ್ಕೆ ಬಿದ್ದರು—

ಆಸ್ವಿನ್ನಾವಲಸತರೌ ಗುರೋರ್ನಿಯೋಗಾ-
ಚ್ಛ್ವತ್ರಾಗ್ರ್ಯಾನಿಲಮಹಿತೌ ಚ ತಾವುಭಾಭ್ಯಾಂ ।
ಮುಕ್ತ್ವಾಯಃಕಠಿನತರತ್ವಚಂ ಶಿರೋಧಿಂ
ಪರ್ಯಾಯಸ್ಫುಟವಚನಾಂ ನಿಪೇತತುಃ ಕೌ ॥ ೨೮ ॥

ಆಸ್ವಿನ್ನೌ ಗುರೋಃ ನಿಯೋಗಾತ್ ಉಭಾಭ್ಯಾಂ ಛತ್ರಾಗ್ರ್ಯಾನಿಲಮಹಿತೌ ಚ ಅಲಸತರೌ ತೌ ಅಯಃಕಠಿನತರತ್ವಚಂ ಪರ್ಯಾಯಸ್ಫುಟವಚನಾಂ ಶಿರೋಧಿಂ ಮುಕ್ತ್ವಾ ಕೌ ನಿಪೇತತುಃ.

Rarest Archiver

ಆಸ್ವಿನ್ನೌ = ಚೆನ್ನಾಗಿ ಬೆವರಿದ, ಗುರೋಃ ನಿಯೋಗಾತ್ = ಶ್ರೀಮಧ್ವಾಚಾರ್ಯರ ಅಪ್ಪಣೆಯಿಂದ, ಉಭಾಭ್ಯಾಂ = ಇಬ್ಬರು ಶಿಷ್ಯರಿಂದ, ಛತ್ರಾಗ್ರ್ಯ-ಅನಿಲ-ಮಹಿತೌ = ಶ್ರೇಷ್ಠವಾದ ಕೊಡೆಯ ಗಾಳಿಯಿಂದ ಸೇವಿಸಲ್ಪಟ್ಟ, ಚ ಅಲಸತರೌ = ಮತ್ತು ತುಂಬಾ ಆಯಾಸಪಟ್ಟಿರುವ, ತೌ = ಗಂಡವಾಟ ಮತ್ತು ಅವನ ಅಣ್ಣನು, ಅಯಃಕಠಿನತರತ್ವಚಂ = ಕಬ್ಬಿಣದಂತೆ ಗಟ್ಟಿಯಾದ ಚರ್ಮವುಳ್ಳ, ಪರ್ಯಾಯಸ್ಫುಟವಚನಾಂ = ಕ್ರಮದಿಂದ ಸ್ಪಷ್ಟವಾದ ಮಾತುಳ್ಳ, ಶಿರೋಧಿಂ = ಕತ್ತನ್ನು, ಮುಕ್ತ್ವಾ = ಬಿಟ್ಟು, ಕೌ = ನೆಲದ ಮೇಲೆ, ನಿಪೇತತುಃ = ಬಿದ್ದರು.

ಶ್ರೀಮಧ್ವಗುರುಗಳ ಅಪ್ಪಣೆಯಿಂದ ಇಬ್ಬರು ಶಿಷ್ಯರು ತಾಳೆಗರಿಯ ದೊಡ್ಡ ಛತ್ರಿಯನ್ನೇ ಬೀಸಣಿಗೆಯಂತೆ ಮಾಡಿಕೊಂಡು ಗಾಳಿ ಬೀಸುತ್ತಿದ್ದರು. ಆದರೂ ಆ ಮಲ್ಲರಿಬ್ಬರೂ ಬೆವರಿದರು, ಆಯಾಸಪಟ್ಟರು. ಕಬ್ಬಿಣದಂತೆ ಗಟ್ಟಿಯಾದ ವಾಸ್ತವವಾಗಿ ಕಬ್ಬಿಣಕ್ಕಿಂತಲೂ ಗಟ್ಟಿಯಾದ ಚರ್ಮವುಳ್ಳ, ಕುತ್ತಿಗೆಯನ್ನು ಹಿಸುಕುವಾಗ ಅವರಿಬ್ಬರೂ ತುಂಬಾ ಆಯಾಸಪಟ್ಟರು. ಆದರೆ ಆಚಾರ್ಯರ ಕಂಠಧ್ವನಿಯು ಮಾತ್ರ ಕ್ರಮ ಕ್ರಮವಾಗಿ ಹೆಚ್ಚು ಹೆಚ್ಚು ಸ್ಪಷ್ಟವೇ ಆಗುತ್ತಿತ್ತು. ಕೊನೆಗೆ ಜಟ್ಟಿಗಳಿಬ್ಬರೂ ಆಚಾರ್ಯರ ಕುತ್ತಿಗೆಯನ್ನು ಬಿಟ್ಟು ಭೂಮಿಯಲ್ಲಿ ಉರುಳಿ ಬಿದ್ದರು.

ಅತಿಶಯೇನ ಅಲಸೌ ಅಲಸತರೌ, ಛತ್ರೇಷು ಅಗ್ರ್ಯೇ, ಛತ್ರಾಗ್ರ್ಯಯೋಃ ಅನಿಲಃ, ಛತ್ರಾಗ್ರ್ಯಾನಿಲೇನ ಮಹಿತೌ, ಅಯೋವತ್ (ಅಯಸಃ) (ಅತಿಶಯೇನ ಕಠಿನಾ) ಕಠಿನತರಾ ಚ ಸಾ ಶಿರೋಧಿಶ್ಚ ತಾಂ; ಪರ್ಯಾಯೇಣ ಸ್ಫುಟಂ ವಚನಂ ಯಸ್ಯಾಂ ಸಾ; ತಾಂ; ಕುಃ = ಭೂಮಿ, ಗೋತ್ರಾ. ಕುಃ ಪೃಥಿವೀ ಪೃಥ್ವೀ–ಅಮರ.

ಮಲ್ಲರು ಮರಳಿಯತ್ನ ಮಾಡಿದರೂ ಒಳಲಿ ಬೆಂಡಾದರು—

ಆಶ್ವಸ್ತೌ ಶುಚಿಹೃದಿಮಾವನೂನಪಾನಾ-
ವುದ್ಧರ್ತುಂ ಸಮುಗಡದಂಗುಲೀಂ ಧರಾಸ್ಥಾಂ |

Rarest Archiver

ಸಂಗೃಹ್ಯ ಪ್ರಸಭರಸಾದಪಿ ಪ್ರಯತ್ನೌ (ತಿಪ್ರಯತ್ನೌ)
ಸಾಮರ್ಥ್ಯಂ ಯಯತುರಿಮೌ ನ ಕಂಪನೇಽಸ್ಯಾಃ || ೨೯ ||

ಶುಚಿಹೃತ್ ಆಶ್ವಸ್ತೌ ಅನೂನಮಾನೌ ಇಮೌ ಧರಾಸ್ಥಾಂ ಅಂಗುಲೀಂ ಉದ್ಧರ್ತುಂ ಸಮಗದತ್; ಪ್ರಸಭರಸಾತ್ ಸಂಗೃಹ್ಯ ಪ್ರಯತ್ನೌ ಅಪಿ (ಅತಿಪ್ರಯತ್ನೌ) ಇಮೌ ಅಸ್ಯಾಃ ಕಂಪನೇ ಸಾಮರ್ಥ್ಯಂ ನ ಯಯತುಃ.

ಶುಚಿಹೃತ್ = ಶುದ್ಧಾಂತಃಕರಣರಾದ ಶ್ರೀಪೂರ್ಣಪ್ರಜ್ಞಾಚಾರ್ಯರು, ಆಶ್ವಸ್ತೌ = ಆಯಾಸಪರಿಹಾರಮಾಡಿಕೊಂಡಿರುವ, ಅನೂನಮಾನೌ ಇಮೌ = ತಾವು ಬಲಶಾಲಿಗಳೆಂಬ ಅಭಿಮಾನಕಡಿಮೆಯಾಗದಿರುವ ಈ ಗಂಡಮಾಟಸಹೋದರರನ್ನು, ಧರಾಸ್ಥಾಂ ಅಂಗುಲೀಂ = ನೆಲದಲ್ಲಿರುವ ತಮ್ಮ ಬೆರಳನ್ನು, ಉದ್ಧರ್ತುಂ ಸಮಗದತ್ = ಮೇಲಕ್ಕೆತ್ತಲು ಹೇಳಿದರು. ಪ್ರಸಭರಸಾತ್ = ಅತ್ಯಂತ ಬಲಾತ್ಕಾರದಿಂದ, ಸಂಗೃಹ್ಯ = ಬೆರಳನ್ನು ಹಿಡಿದು, ಪ್ರಯತ್ನೌ (ಅತಿಪ್ರಯತ್ನೌ) ಅಪಿ = ಪ್ರಯತ್ನಮಾಡಿದವರಾದರೂ, (ಅತ್ಯಂತಪ್ರಯತ್ನವುಳ್ಳವರಾದರೂ), ಇಮೌ = ಇವರಿಬ್ಬರು, ಅಸ್ಯಾಃ ಕಂಪನೇ = ಈ ಬೆರಳಿನ ಅಲ್ಲಾಡಿಸುವಿಕೆಯಲ್ಲಿ, ಸಾಮರ್ಥ್ಯಂ=ಶಕ್ತಿಯನ್ನು, ನ ಯಯತುಃ = ಹೊಂದಲಿಲ್ಲ.

ಹೀಗೆ ಕೆಳಗೆ ಬಿದ್ದ ಗಂಡಮಾಟಸಹೋದರರು ಆಯಾಸವನ್ನು ಪರಿಹರಿಸಿಕೊಂಡರು. ಆದರೂ ನಾವು ಆಚಾರ್ಯರಿಗಿಂತ ಕಡಿಮೆ ಬಲಶಾಲಿಗಳಲ್ಲ ಎಂಬ ದುರಭಿಮಾನಸರ್ಪವು ಅವರಲ್ಲಿ ಮತ್ತೆ ಹೆಡೆಯಾಡುತ್ತಿತ್ತು. ಆಗ ಶ್ರೀಮಧ್ವಾಚಾರ್ಯರು ತಮ್ಮ ಬೆರಳನ್ನು ನೆಲದ ಮೇಲಿಟ್ಟು 'ಇದನ್ನು ಎತ್ತಿರಿ' ಎಂದು ಹೇಳಿದರು. ಇಬ್ಬರೂ ತಮ್ಮ ಬಲವನ್ನೆಲ್ಲಾ ಉಪಯೋಗಿಸಿ ಪ್ರಯತ್ನಿಸಿದರು. ಆ ಬೆರಳನ್ನು ಅಲ್ಲಾಡಿಸಲೂ ಸಾಧ್ಯವಾಗಲಿಲ್ಲ.

ಶುಚಿ ಹೃತ್ ಯಸ್ಯ ಸಃ, ನ ಊನಃ, ಅನೂನಃ ಮಾನಃ ಯಯೋಸ್ತೌ, ಧರಾಯಾಂ ತಿಷ್ಠತಿ ಇತಿ ಧರಾಸ್ಥಾಂ ತಾಂ; ಪ್ರಸಭಸ್ಯ ರಸಃ ತಸ್ಮಾತ್,

Rarest Archiver

ಆಚಾರ್ಯರ ಮತ್ತೊಂದು ಮಹಿಮೆ—

ನಿರ್ಯತ್ನಂ ವಟುಮಧಿರುಹ್ಯ ಮಂದಹಾಸೀ
ಸ ಪ್ರಾಯಾದಿಹ ಪರಿತೋ ನೃಸಿಂಹಗೇಹಂ ।
ಐಶ್ವರ್ಯೈರಿತಿ ಲಘಿಮಾದಿಕೈರುಪೇತೋ
ಮಧ್ವೋಽಭೂತ್ ತ್ರಿಭುವನಚಿತ್ರರತ್ನರಾಜಃ ॥ ೩೦ ॥

ಸಃ ಇಹ ನಿರ್ಯತ್ನಂ ವಟುಂ ಅಧಿರುಹ್ಯ ಮಂದಹಾಸೀ ಸನ್ ನೃಸಿಂಹಗೇಹಂ ಪರಿತಃ ಪ್ರಾಯಾತ್; ಇತಿ ಲಘಿಮಾದಿಕೈಃ ಐಶ್ವರ್ಯೈಃ ಉಪೇತಃ ಮಧ್ವಃ ತ್ರಿಭುವನಚಿತ್ರರತ್ನರಾಜಃ ಅಭೂತ್.

ಸಃ = ಆ ಮಧ್ವಾಚಾರ್ಯರು; ಇಹ = ಈ ತೌಳವದೇಶದಲ್ಲಿ, ನಿರ್ಯತ್ನಂ = ಪ್ರಯತ್ನವಿಲ್ಲದ, ವಟುಂ ಅಧಿರುಹ್ಯ = ಪುಟ್ಟ ಬ್ರಹ್ಮಚಾರಿಯನ್ನು ಹತ್ತಿಕೊಂಡು, ನೃಸಿಂಹಗೇಹಂ ಪರಿತಃ = ನರಸಿಂಹದೇವಾಲಯದ ಸುತ್ತಲೂ, ಪ್ರಾಯಾತ್ = ಪ್ರದಕ್ಷಿಣೆಯಾಗಿ ಬಂದರು; ಇತಿ = ಈರೀತಿ, ಲಘಿಮಾದಿಕೈಃ ಐಶ್ವರ್ಯೈಃ ಉಪೇತಃ = ಲಘಿಮಾ (ಅತ್ಯಂತ ಹಗುರವಾಗುವಿಕೆ) ಮೊದಲಾದ ಐಶ್ವರ್ಯಗಳಿಂದ ಕೂಡಿದ, ಮಧ್ವಃ = ಶ್ರೀಮಧ್ವಾಚಾರ್ಯರು, ತ್ರಿಭುವನ-ಚಿತ್ರರತ್ನರಾಜಃ ಅಭೂತ್ = ಮೂರು ಲೋಕಗಳ ಶ್ರೇಷ್ಠ ಆಶ್ಚರ್ಯಗಳಲ್ಲಿ ಶ್ರೇಷ್ಠರು ಆದರು.

ಒಂದು ಬಾರಿ ಶ್ರೀಮಧ್ವಾಚಾರ್ಯರು ತೌಳವದೇಶದ ಒಂದು ನರಸಿಂಹ ದೇವಾಲಯದಲ್ಲಿ ತಂಗಿದ್ದರು. ಆಗ ಅಲ್ಲಿದ್ದ ಜನರ ಗುಂಪಿನಲ್ಲಿದ್ದ ಒಬ್ಬ ಚಿಕ್ಕ ಬ್ರಹ್ಮಚಾರಿಯನ್ನು ಕರೆದು ಅವನ ಹೆಗಲಿನ ಮೇಲೆ ಆಚಾರ್ಯರು ಹತ್ತಿಕುಳಿತರು. ಅನಂತರ ಅವನಿಗೂ ಆಯಾಸವಾಗದಂತೆ, ಅವನ ಪ್ರಯತ್ನವೇನೂ ಇಲ್ಲದಿದ್ದಾಗ, ಆ ನರಸಿಂಹದೇವರ ದೇವಾಲಯದ ಸುತ್ತಲೂ ಮಂದಹಾಸಮಾಡುತ್ತಾ ಪ್ರದಕ್ಷಿಣೆ ಬಂದರು. ಹೀಗೆ ಶ್ರೀಮಧ್ವಾಚಾರ್ಯರು ಅಣಿಮಾ, ಮಹಿಮಾ, ಲಘಿಮಾ ಮುಂತಾದ ಅಷ್ಟೈಶ್ವರ್ಯಗಳಿಂದ ಕೂಡಿದವರಾಗಿ ಮೂರು ಲೋಕಗಳಲ್ಲಿಯೂ ಶ್ರೇಷ್ಠವಾದ ಆಶ್ಚರ್ಯಕರ ವಸ್ತುಗಳಲ್ಲಿಯೂ ಶ್ರೇಷ್ಠರೆನಿಸಿದರು.

Rarest Archiver

ವಿಶೇಷಾರ್ಥ :— ಅಣಿಮಾ, ಮಹಿಮಾ, ಲಘಿಮಾ, ಗರಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವ ಇವು ಅಷ್ಟಸಿದ್ಧಿಗಳು. ೧) ಅಣಿಮಾ =ಅತ್ಯಂತ ಚಿಕ್ಕರೂಪವನ್ನು ಸ್ವೀಕರಿಸುವುದು. ೨) ಮಹಿಮಾ=ಬಹಳ ದೊಡ್ಡರೂಪವನ್ನು ಸ್ವೀಕರಿಸುವುದು. ೩) ಗರಿಮಾ=ಬಹಳ ಭಾರವಾಗುವುದು. ೪) ಲಘಿಮಾ=ತುಂಬಾ ಹಗುರವಾಗುವುದು. ೫) ಪ್ರಾಪ್ತಿಃ= ತನಗೆ ಇಷ್ಟಬಂದ ವಸ್ತುವನ್ನು ಹೊಂದುವುದು. ೬) ಪ್ರಾಕಾಮ್ಯಂ=ತನ್ನ ಇಚ್ಛೆಗೆ ತಡೆಯಿಲ್ಲದಿರುವುದು. ೭) ಈಶಿತ್ವಂ=ಎಲ್ಲರನ್ನೂ ತಾನು ಹೇಳಿದಂತೆ ನಡೆಸುವುದು. ೮) ವಶಿತ್ವಂ=ಮನಸ್ಸು ಚಂಚಲವಾಗದಿರುವುದು.

ನಿರ್ಗತಃ ಯತ್ನಃ ಯಸ್ಮಾತ್ ಸಃ ತಂ, ಮಂದಃ ಹಾಸಃ ಅಸ್ಯ ಅಸ್ತೀತಿ, ನೃಸಿಂಹಸ್ಯ ಗೇಹಂ ತತ್, ಈಶ್ವರಸ್ಯ ಭಾವಾಃ ಐಶ್ವರ್ಯಾಣಿ, ತೈಃ, ಲಘೋಃ ಭಾವಃ, ಲಘಿಮಾ, ಆದಿಃ ಯೇಷಾಂ ತಾನಿ, ತ್ರಯಾಣಾಂ ಭುವನಾನಾಂ ಸಮಾಹಾರಃ, ತ್ರಿಭುವನಂ, ತ್ರಿಭುವನೇ ಚಿತ್ರಾಣಿ, ತ್ರಿಭುವನಚಿತ್ರೇಷು ರತ್ನಾನಿ, ತ್ರಿಭುವನಚಿತ್ರರತ್ನಾನಾಂ ರಾಜಾ;

ಮತ್ತೊಬ್ಬ ಮಹಾಮಲ್ಲನ ಪರಾಜಯ—

ಪಂಚಾಶನ್ನರಪನರೋಪನೀತಮಾತ್ರಾಂ
ಯೋ ವಾರ್ಕ್ಷೀಂ ಗೃಹಮಧಿರೋಹಿಣೀಂ ನಿನಾಯ।
ಸ ವ್ಯಾಖ್ಯಾಸ್ವರದಮನಾಯ ಪೂರ್ವವಾಟೋ
ನಿರ್ದೇಶಾದ್ ವ್ಯಥಿತ ಗುರೋರ್ಗಲಪ್ರವೇಷಮ್ ॥ ೩೧ ॥

ಯಃ ಪೂರ್ವವಾಟಃ ಪಂಚಾಶನ್ನರಪನರೋಪನೀತಮಾತ್ರಾಂ ವಾರ್ಕ್ಷೀಂ ಅಧಿರೋಹಿಣೀಂ ಗೃಹಂ ನಿನಾಯ; ಸಃ ಗುರೋಃ ನಿರ್ದೇಶಾತ್ ವ್ಯಾಖ್ಯಾ-ಸ್ವರದಮನಾಯ ಗಲಪ್ರವೇಷಂ ವ್ಯಥಿತ.

ಯಃ ಪೂರ್ವವಾಟಃ=ಯಾವ ಮೂಡೆಂಬಾಡಿತ್ತಾಯ ಎಂಬುವನು, ಪಂಚಾಶತ್=ಐವತ್ತು ಮಂದಿ, ನರಪನರ=ರಾಜಭಟರಿಂದ, ಉಪನೀತ-ಮಾತ್ರಾಂ=ಕೇವಲತರಲ್ಪಟ್ಟ, ವಾರ್ಕ್ಷೀಂ ಅಧಿರೋಹಿಣೀಂ=ಮರದ ಏಣಿಯನ್ನು, ಗೃಹಂ ನಿನಾಯ=ತನ್ನ ಮನೆಗೆ ಒಯ್ದನೋ, ಸಃ=ಅವನು,

Rarest Archiver

ಗುರೋಃ ನಿರ್ದೇಶಾತ್ = ಗುರುಗಳಾದ ಶ್ರೀಮಧ್ವರ ಅಪ್ಪಣೆಯಿಂದ, ವ್ಯಾಖ್ಯಾಸ್ವರದಮನಾಯ = ಪ್ರವಚನದ ಧ್ವನಿಯನ್ನು ಕುಗ್ಗಿಸುವುದಕ್ಕಾಗಿ, ಗಲಪ್ರವೇಷಂ = ಕುತ್ತಿಗೆಯ ಹಿಸುಕುವಿಕೆಯನ್ನು, ವ್ಯಧಿತ = ಮಾಡಿದನು.

ಪೂರ್ವವಾಟ (ಮೂಡೆಂಬಾಡಿತ್ತಾಯ) ಎಂಬ ಮತ್ತೊಬ್ಬ ಮಹಾ ಮಲ್ಲನಿದ್ದನು. ಅವನು ಐವತ್ತು ಮಂದಿ ರಾಜಭಟರು ಕೇವಲ ಹೊತ್ತು ತಂದಿರುವ ಮರದ ಭಾರಿ ಏಣಿಯನ್ನು ತಾನೊಬ್ಬನೇ ತನ್ನ ಮನೆಗೆ ತೆಗೆದು ಕೊಂಡು ಹೋಗಿದ್ದನು. ಇಂತಹ ಮಹಾಬಲಿಷ್ಠನಾದ ಪೂರ್ವವಾಟನು ಆಚಾರ್ಯರ ಅಪ್ಪಣೆಯಿಂದ ಪಾಠ ಹೇಳುವಾಗ ಅವರ ಕಂಠಧ್ವನಿಯನ್ನು ಕುಗ್ಗಿಸುವುದಕ್ಕಾಗಿ ಅವರ ಕುತ್ತಿಗೆಯನ್ನು ಹಿಸುಕಿದನು- ಬಿಗಿಹಿಡಿದನು.

ನರಾನ್ ಪಾತೀತಿ ನರಪಃ, ನರಪಸ್ಯ ನರಾಃ ಪಂಚಾಶಚ್ಚತೇ ನರಪಸ್ಯ ನರಾಶ್ಚ, ಪಂಚಾಶನ್ನರಪನರೈಃ ಉಪನೀತಾ ಮಾತ್ರಾ (ಪರಿ-ಮಾಣಂ) ಯಸ್ಯಾಃ ಸಾ ತಾಂ, ವೃಕ್ಷಸ್ಯ ಇಯಂ ವಾರ್ಕ್ಷೀ ತಾಂ' ವ್ಯಾಖ್ಯಾಯಾಃ ಸ್ವರಃ, ವ್ಯಾಖ್ಯಾಸ್ವರಸ್ಯ ದಮನಂ ತಸ್ಮೈ, ಗಲಸ್ಯ ಪ್ರವೇಷಃ ತಂ;

ಆ ಪೂರ್ವವಾಟನ ಸೋಲು ಈ ರೀತಿಯಾಯಿತು —

ಸ್ವಿನ್ನೇಽಪ್ಯಸ್ಮಿನ್ನಪಿ ಯತಮಾನ ಆಗ್ರಹೋಗ್ರೇ
ಪ್ರಾಚ್ಯಾತ್ ತತ್ಪ್ರವಚನನಿಸ್ವನೋಽತಿರೇಜೇ
ಉದ್ಧರ್ತುಂ ವಿಪುಲಹೃದಂಗುಲಿಂ ಚ ನಾಲಂ
ಸೋಽಭೂದಿತ್ಯಜನಿ ಕುತೂಹಲಂ ಜನಾನಾಂ ॥ ೩೨ ॥

ಅಗ್ರಹೋಗ್ರೇ ಸ್ವಿನ್ನೇ ಅಸ್ಮಿನ್ ಯತಮಾನೇ ತತ್ಪ್ರವಚನನಿಸ್ವನಃ ಪ್ರಾಚ್ಯಾತ್ ಅಪಿ ಅತಿರೇಜೇ. ಸಃ ವಿಪುಲಹೃದಂಗುಲಿಂ ಉದ್ಧರ್ತುಂ ಚ ಅಲಂ ನ ಅಭೂತ್ ಇತಿ ಜನಾನಾಂ ಕುತೂಹಲಂ ಅಜನಿ.

ಆಗ್ರಹೋಗ್ರೇ = ಹಠದಿಂದ ಕಠಿನನಾದ, ಸ್ವಿನ್ನೇ ಅಸ್ಮಿನ್ = ಬೆವರಿದ ಈ ಮೂಡೆಂಬಾಡಿತ್ತಾಯನು, ಯತಮಾನೇ ಸತಿ = (ಮತ್ತೂ) ಪ್ರಯತ್ನ ಮಾಡುತ್ತಿರಲು, ತತ್‌ಪ್ರವಚನನಿಸ್ವನಃ = ಆ ಮಧ್ವಾಚಾರ್ಯರ ವ್ಯಾಖ್ಯಾನದ ಧ್ವನಿಯು, ಪ್ರಾಚ್ಯಾತ್ ಅಪಿ = ಹಿಂದಿನ ಧ್ವನಿಗಿಂತಲೂ, ಅತಿರೇಜೇ =

ಹೆಚ್ಚಾಗಿ ವಿರಾಜಿಸಿತು. ಸಃ=ಅವನು, ವಿಪುಲಹೃದಂಗುಲಿಂ ಉದ್ಧರ್ತುಂ ಚ = ಶ್ರೀಮಧ್ವಾಚಾರ್ಯರ ಬೆರಳನ್ನು ಎತ್ತುವುದಕ್ಕೂ, ಅಲಂ ನ ಅಭೂತ್ = ಸಮರ್ಥನಾಗಲಿಲ್ಲ. ಇತಿ = ಹೀಗೆಂದು, ಜನಾನಾಂ ಕುತೂಹಲಂ ಅಭೂತ್ = ಜನರಿಗೆ ಕೌತುಕವುಂಟಾಯಿತು.

ಹೀಗೆ ಮಧ್ವಾಚಾರ್ಯರ ಕತ್ತನ್ನು ಬಿಗಿಯಾಗಿ ಹಿಡಿದು ಒತ್ತಿ ಒತ್ತಿ ಹಿಸುಕುತ್ತಿರುವ ಮೂಡೆಂಬಾಡಿತ್ತಾಯನ ಶರೀರವು ಆಯಾಸದಿಂದ ಬೆವರಿತು. ಆದರೂ ಹೇಗಾದರೂ ಮಾಡಿ ಆಚಾರ್ಯರ ಧ್ವನಿಯನ್ನು ತಗ್ಗಿಸ ಬೇಕು, ಬದಲಾಯಿಸಬೇಕು ಎಂದು ಹಠದಿಂದ ಅವನು ಮತ್ತೂ ಮತ್ತೂ ಬಹಳವಾಗಿ ಪ್ರಯತ್ನಿಸಿದನು. ಆದರೆ ಮಧ್ವಗುರುಗಳ ಧ್ವನಿಯು ಮೊದಲು ಇದ್ದುದಕ್ಕಿಂತ ಹೆಚ್ಚಾಯಿತು. ಅನಂತರ ಆಚಾರ್ಯರು ತಮ್ಮ ಬೆರಳನ್ನು ನೆಲದ ಮೇಲಿಟ್ಟು ಅದನ್ನು ಎತ್ತುವಂತೆ ಹೇಳಿದರು. ಆದರೆ ಅದನ್ನು ಎತ್ತಲೂ ಅವನಿಗಾಗಲಿಲ್ಲ. ಇದರಿಂದ ಅಲ್ಲಿದ್ದ ಜನರು ಆಶ್ಚರ್ಯಪಟ್ಟರು.

ಆಗ್ರಹೇಣ ಉಗ್ರಃ ತಸ್ಮಿನ್, ತಸ್ಯ ಪ್ರವಚನಂ, ತತ್ಪ್ರವಚನಸ್ಯ ನಿಸ್ವನಃ, ವಿಪುಲಂ ಹೃತ್ ಯಸ್ಯ ಸಃ, ವಿಪುಲಹೃದಃ ಅಂಗುಲಿಃ ತಾಂ;

ಬೇರೆ ಜಟ್ಟಿಗಳು ಮಾಡಿದ ಬಲಪರೀಕ್ಷೆಯಲ್ಲಿಯೂ ಬಲಭೀಮನ ಅವತಾರರಾದ ಆಚಾರ್ಯರೇ ಪ್ರಬಲರಾದರು —

ಪರ್ಯೈಕ್ಷಿ ಪ್ರಭುರಿತರೈಃ ಶಿವಾಗ್ನಿಪೂರ್ವೈಃ
ನೋಪೈಕ್ಷಿ ಪ್ರಬಲತರೈಸ್ತಥಾಪ್ರಯತ್ನೈಃ ।
ನಾವೈಕ್ಷಿ ಕ್ವಚಿದಪಿ ಶಕ್ತ್ಯಪೂರ್ತಿರಸ್ಮಿನ್
ಉತ್ಪ್ರೈಕ್ಷಿ ಸ್ವಯಮಪಿ ಭೀಮ ಇತ್ಯವಶ್ಯಂ ॥ ೩೩ ॥

ಪ್ರಭುಃ ಇತರೈಃ ಶಿವಾಗ್ನಿಪೂರ್ವೈಃ ಪರ್ಯೈಕ್ಷಿ; ತಥಾಪ್ರಯತ್ನೈಃ ಪ್ರಬಲತರೈಃ ನ ಉಪೈಕ್ಷಿ, ಅಸ್ಮಿನ್ ಕ್ವಚಿದಪಿ ಶಕ್ತ್ಯಪೂರ್ತಿಃ ನಾವೈಕ್ಷಿ. ಸ್ವಯಂ ಅಪಿ ಅವಶ್ಯಂ ಭೀಮಃ ಇತಿ ಉತ್ಪ್ರೈಕ್ಷಿ.

ಪ್ರಭುಃ = ಸಮರ್ಥರಾದ ಶ್ರೀಮಧ್ವಾಚಾರ್ಯರು, ಇತರೈಃ = ಬೇರೆ ಯುವರಾದ, ಶಿವ, ಅಗ್ನಿ ಪೂರ್ವೈಃ = ಶಿವ (ಶಿಬಿತ್ತಾಯ,) ಅಗ್ನಿ (ಅಗ್ನಿ

Rarest Archiver

ತ್ರಾತ್ರಯ) ಇವರೇ ಮೊದಲಾಗಿ ಉಳ್ಳ ವಾಸುದೇವ, ಉಗ್ರ, ಆಮೋಘ ಮೊದಲಾದ ಬ್ರಾಹ್ಮಣ ಜಟ್ಟಿಗಳಿಂದ, ಪರ್ಯೈಕ್ಷಿ= ಪರೀಕ್ಷಿಸಲ್ಪಟ್ಟರು. ತಥಾಪ್ರಯತ್ನೈಃ= ಅಂತಹ ಪ್ರಯತ್ನವುಳ್ಳ, ಪ್ರಬಲತರೈಃ= ಮೊದಲಿನವರಿಗಿಂತಲೂ ಹೆಚ್ಚು ಬಲಶಾಲಿಗಳಾದವರಿಂದ, ನ ಉಪೈಕ್ಷಿ = ಉದಾಸೀನ ಮಾಡಲ್ಪಡಲಿಲ್ಲ. ಅಸ್ಮಿನ್ = ಈ ಶ್ರೀಮಧ್ವಾಚಾರ್ಯರಲ್ಲಿ, ಕ್ವಚಿತ್ ಅಪಿ = ಯಾವ ವಿಷಯದಲ್ಲಿಯೂ ಕೂಡ, ಶಕ್ತ್ಯಪೂರ್ತಿಃ = ಸಾಮರ್ಥ್ಯದ ನ್ಯೂನತೆಯು, ನ ಅನ್ವೈಕ್ಷಿ = ನೋಡಲ್ಪಡಲಿಲ್ಲ. ಸ್ವಯಂ ಅಪಿ = ತಮ್ಮಿಂದಲೂ ಕೂಡ, 'ಅವಶ್ಯಂ (ಅಯಂ) ಭೀಮಃ ಇತಿ'= ಖಂಡಿತವಾಗಿಯೂ ಈ ಮಧ್ವಾಚಾರ್ಯರು ಭೀಮಸೇನನೆಂದು, ಉತ್ಪ್ರೈಕ್ಷಿ= ಊಹಿಸಲ್ಪಟ್ಟರು.

ಬಲಶಾಲಿಗಳಾದ ಶಿವತ್ರಾಯ (ಶಿವ) ಅಗ್ನಿತ್ರಾಯ (ಅಗ್ನಿ) ವಾಸುದೇವ, ಉಗ್ರ, ಆಮೋಘ ಮೊದಲಾದ ಹಿಂದಿನವರಿಗಿಂತಲೂ ಬಲಿಷ್ಠರಾದ ಇತರ ಮಹಾಮಲ್ಲರೂ ಆಚಾರ್ಯರ ಬಲವನ್ನು ಪರೀಕ್ಷಿಸಿ ಸೋತರು. ಹಿಂದಿನವರಂತೆಯೇ ಪ್ರಯತ್ನಮಾಡಿದ ಅವರು ಆಚಾರ್ಯರ ಬಲಪರೀಕ್ಷೆಯಲ್ಲಿ ಸ್ವಲ್ಪವೂ ಉದಾಸೀನ ಮಾಡಲಿಲ್ಲ. ಆದರೆ ಯಾವ ವಿಷಯದಲ್ಲಿಯೂ ಆಚಾರ್ಯರಲ್ಲಿ ಸ್ವಲ್ಪವೇ ಅಸಾಮರ್ಥ್ಯವಾದರೂ ಕಂಡುಬರಲಿಲ್ಲ. 'ಇಷ್ಟೊಂದು ಬಲಶಾಲಿಗಳಾದ ಇವರು ನಿಜವಾಗಿಯೂ ದ್ವಾಪರಯುಗದ ಭೀಮಸೇನದೇವರೇ ಆಗಿರಬೇಕು' ಎಂದು ಅವರೆಲ್ಲರೂ ಸರಿಯಾಗಿಯೇ ಊಹಿಸಿದರು.

ಶಿವಶ್ಚ ಅಗ್ನಿಶ್ಚ, ಶಿವಾಗ್ನೀ ಪೂರ್ವೌ ಯೇಷಾಂ ತೇ, ತೈಃ, . ಅತಿಶಯೇನ ಪ್ರಬಲಾಃ ಪ್ರಬಲತರಾಃ ತೈಃ, ತಥಾ ಪ್ರಯತ್ನಃ ಯೇಷಾಂ ತೈಃ, ಪೂರ್ತೇರಭಾವಃ ಅಪೂರ್ತಿ, ಶಕ್ತೇಃ ಅಪೂರ್ತಿಃ;

ಐಕ್ಷಿ ಐಕ್ಷಿಷಾತಾಂ ಐಕ್ಷಿಷತ. ಐಕ್ಷಿಷ್ಠಾಃ ಐಕ್ಷಿಷಾಥಾಂ ಐಕ್ಷಿಢ್ವಂ, ಐಕ್ಷಿಷಿ ಐಕ್ಷಿಷ್ವಹಿ ಐಕ್ಷಿಷ್ಮಹಿ. ಈಕ್ಷ ದರ್ಶನೇ ಕರ್ಮಣಿ ಲುಙ್. ಪರಿ, ಉಪ, ಅವ, ಉತ್ ಈ ನಾಲ್ಕು ಉಪಸರ್ಗಗಳು ಇಲ್ಲಿ ಬಂದಿವೆ. ನಾಲ್ಕು ಲುಙ್

Rarest Archiver

ರೂಪಗಳು. ಶಿವಾಗ್ನಿಪೂರ್ವಾಃ ಪ್ರಭುಂ ಪರ್ಯೈಕ್ಷಿಷತ ಇತ್ಯಾದಿ ಕರ್ತರಿ ಪ್ರಯೋಗಗಳು.

ಇನ್ನೂ ಅನೇಕ ಬಗೆಯ ಬಲಪರೀಕ್ಷೆಗಳಿಂದಲೂ ಆಚಾರ್ಯರು ವಜ್ರ ಕಾಯರೆಂದು ಜನರು ನಿಶ್ಚಯಿಸಿದರು—

ಲೇಖಿನ್ಯಾ ಮುಹುರಪಿನಹ್ಯ ಕೃಷ್ಯಮಾಣಂ
ನಾಸ್ಯೈಕಂ ತನುರುಹಮಸ್ಯ ತೂದಪಾಟಿ ।
ನಾಸಾಗ್ರೇ ಮೃದುನಿ ಕೃತೈಶ್ಚ ಮುಷ್ಟಿಘಾತೈ-
ರ್ನಾಸ್ಯೇಂದೋರತಿಬಲಿಭಿಃ ಪ್ರಸನ್ನತಾಸಿ ॥ ೩೪ ॥

ಅತಿಬಲಿಭಿಃ ಲೇಖಿನ್ಯಾ ಮುಹುಃ ಅಪಿನಹ್ಯ ಕೃಷ್ಯಮಾಣಂ ಅಪಿ ಅಸ್ಯ ಏಕಂ ತನುರುಹಂ ನ ತು ಉದಪಾಟಿ, ಮೃದುನಿ ನಾಸಾಗ್ರೇ ಕೃತೈಃ ಮುಷ್ಟಿಘಾತೈಶ್ಚ ಆಸ್ಯೇಂದೋಃ ಪ್ರಸನ್ನತಾ ನಾಸಿ.

ಅತಿಬಲಿಭಿಃ = ಅತ್ಯಂತ ಬಲಿಷ್ಠರಾದ ಮನುಷ್ಯರಿಂದ, ಲೇಖಿನ್ಯಾ = ಕೂದಲನ್ನು ಕೀಳುವ ಚಿಮುಟಿಯಿಂದ, ಮುಹುಃ = ಮತ್ತೂ ಮತ್ತೂ, ಅಪಿನಹ್ಯ = ಬಿಗಿಯಾಗಿ ಹಿಡಿದು, ಕೃಷ್ಯಮಾಣಂ ಅಪಿ = ಎಳೆಯಲ್ಪಟ್ಟರೂ, ಅಸ್ಯ ಏಕಂ ತನುರುಹಂ = ಈ ಮಧ್ವಾಚಾರ್ಯರ ಒಂದು ಕೂದಲು (ರೋಮವು), ನ ತು ಉದಪಾಟಿ = ಕೀಳಲ್ಪಡಲಿಲ್ಲ. ಮೃದುನಿ ನಾಸಾಗ್ರೇ ಕೋಮಲವಾದ ಮೂಗಿನ ತುದಿಯಲ್ಲಿ, ಕೃತೈಃ ಮುಷ್ಟಿಘಾತೈಃ = ಮಾಡಲ್ಪಟ್ಟ ಮುಷ್ಟಿಯ ಹೊಡೆತಗಳಿಂದಲೂ (ಗುದ್ದುಗಳಿಂದಲೂ), ಆಸ್ಯೇಂದೋಃ ಪ್ರಸನ್ನತಾ = ಚಂದ್ರನಂತಿರುವ ಮುಖದ ಸಂತೋಷದಿಂದಿರುವಿಕೆಯು, ನ ಆಸಿ = ತಿರಸ್ಕರಿಸಲ್ಪಡಲಿಲ್ಲ.

ಅತಿಬಲಿಷ್ಠರಾದ ಯುವಕರು ಚಿಮುಟದಿಂದ ಬಲವಾಗಿ ಅದುಮಿ ಹಿಡಿದು, ಅನೇಕ ಬಾರಿ ಬಲವಾಗಿ ಎಳೆದರೂ ಆಚಾರ್ಯರ ಒಂದು ಕೂದಲು, ಒಂದು ರೋಮವೂ ಕೂಡ ಕಿತ್ತುಬರಲಿಲ್ಲ. ಕೋಮಲವಾದ ಶ್ರೀಮಧ್ವರ ಮೂಗಿನ ತುದಿಗೆ ಅತಿಬಲಿಷ್ಠರಾದವರು ಬಲವಾಗಿ ಎಷ್ಟುಬಾರಿ ಗುದ್ದಿದರೂ ಮುಖಚಂದ್ರನ ಪ್ರಸನ್ನತೆಯು ಸ್ವಲ್ಪವೂ ಕಡಿಮೆಯಾಗಲಿಲ್ಲ.

Rarest Archiver

ತನೌ ರೋಹತೀತಿ ತನುರುಹಂ, ನಾಸಾಯಾಃ ಅಗ್ರಂ ತಸ್ಮಿನ್. ಮುಷ್ಟಿಭಿಃ ಘಾತಾಃ ತೈಃ, ಆಸ್ಯಂ ಇಂದುರಿವ ತಸ್ಯ. ಅತಿಬಲಂ ಏಷಾಂ ಅಸ್ತೀತಿ ಅತಿಬಲಿನಃ ತೈಃ; ಪಟ ಗತೌ, ಸಕ. ಸೇಟ್, ಪರಸ್ಮೈ, ಣಿಜಂತ, ಕರ್ಮಣಿ ಲುಜ್,

ಉತ್ + ಅಪಾಟಿ ಅಪಾಟಿಷಾತಾಂ ಅಪಾಟಿಷತ. ಕರ್ತರಿ—ಅತಿ ಬಲಿನಃ ಅಸ್ಯ ಏಕಂ ತನುರುಹಂ ಅಪಿ ನ ಉದಪೀಪಟನ್(ಉದಪಾಟಯನ್), ಅಸು—ಕ್ಷೇಪಣೇ, ಕರ್ಮಣಿ, ಲುಜ್. ಆಸಿ ಆಸಿಷಾತಾಂ ಆಸಿಷತ. ಅತಿ ಬಲಿನಃ ಆಸ್ಯೇಂದೋಃ ಪ್ರಸನ್ನತಾಂ ನಾಸ್ಥನ್, ಕರ್ತರಿ.

ಹೀಗೆ ದುರ್ಬಲರೊಡನೆ ಆಚಾರ್ಯರು ವಿಹರಿಸಿದರು—

ಪಂಚಾಸ್ಯಃ ಶ್ವಭಿರಿವ ಹೀ (ವೈ) ವಿಹೀನಸಾರೈ
ರಂಭೋಧಿರ್ನಗಸರಿತಾಂ ಜಲೈರಿವಾಲ್ಪೈಃ ।
ಖದ್ಯೋತೈರಿವ ತರಣಿರ್ವಿಡಂಬಯನ್ ನೄನ್
ಪ್ರತ್ಯರ್ಥಿಸ್ವಸಮುನರೈರ್ವ್ಯವಾಹರತ್ ಸಃ ॥ ॥ ೩೫ ॥

ನೄನ್ ವಿಡಂಬಯನ್ ಸಃ ಪಂಚಾಸ್ಯಃ ವಿಹೀನಸಾರೈಃ ಶ್ವಭಿಃ ಇವ ಹೀ ಅಂಭೋಧಿಃ ಅಲ್ಪೈಃ ನಗಸರಿತಾಂ ಜಲೈಃ ಇವ ತರಣಿಃ ಖದ್ಯೋತೈಃ ಇವ ಪ್ರತ್ಯರ್ಥಿಸ್ವಸಮುನರೈಃ ವ್ಯವಾಹರತ್.

ನೄನ್ ವಿಡಂಬಯನ್ ಸಃ = ಮನುಷ್ಯರನ್ನು ಅನುಕರಿಸುವ ಆ ಶ್ರೀಮಧ್ವಾಚಾರ್ಯರು, ಪಂಚಾಸ್ಯಃ= ಸಿಂಹವು, ವಿಹೀನಸಾರೈಃ ಶ್ವಭಿರಿವ =ಅಲ್ಪಬಲವುಳ್ಳ ನೀಚವಾದ ನಾಯಿಗಳಿಂದ ಕೂಡಿಕೊಂಡು ಎಂಬಂತೆ, ಹೀ = ಆಶ್ಚರ್ಯವು, (ವೈ = ನಿಶ್ಚಯವು) ಅಂಭೋಧಿಃ = ಸಮುದ್ರವು, ಅಲ್ಪೈಃ ನಗಸರಿತಾಂ ಜಲೈಃ ಇವ = ಸ್ವಲ್ಪವಾದ ಬೆಟ್ಟದ ನದಿಗಳ ನೀರಿನಿಂದ ಎಂಬಂತೆ, ತರಣಿಃ ಖದ್ಯೋತೈಃ ಇವ = ಸೂರ್ಯನು ಮಿಂಚುಹುಳುಗಳಿಂದ ಎಂಬಂತೆ, ಪ್ರತ್ಯರ್ಥಿ–ಸ್ವ–ಸಮುನರೈಃ = ಶತ್ರುಗಳು, ತನ್ನವರು, ಮತ್ತು ಮಧ್ಯಸ್ಥರೂ ಆದ ಮನುಷ್ಯರಿಂದ ಕೂಡಿಕೊಂಡು, ವ್ಯವಾಹರತ್ = ವ್ಯವಹರಿಸಿದರು.

Rarest Archiver

ಸಿಂಹವು ನಾಯಿಗಳೊಡನೆ, ಸಮುದ್ರವು ಬೆಟ್ಟದ ಚಿಕ್ಕ ತೊರೆಗಳೊಡನೆ, ಸೂರ್ಯನು ಮಿಂಚುಹುಳಗಳೊಡನೆ ವ್ಯವಹರಿಸುವಂತೆ ಆಚಾರ್ಯರು ತಾವು ವಾಯುದೇವರ ಅವತಾರರಾದರೂ ಸಾಮಾನ್ಯಮನುಷ್ಯರಂತೆಯೇ ವ್ಯವಹರಿಸುತ್ತಿದ್ದರು. ಸಿಂಹವು ದುರ್ಬಲವಾದ ನಾಯಿಗಳನ್ನು ಓಡಿಸುವಂತೆ, ಆಚಾರ್ಯರು ದುರ್ವಾದಿಗಳನ್ನು ಖಂಡಿಸುತ್ತಿದ್ದರು. ಸಮುದ್ರವು ಗಿರಿನದಿಗಳ ನೀರನ್ನು ತನ್ನಲ್ಲಿ ತುಂಬಿಸಿಕೊಳ್ಳುವಂತೆ ಸಾತ್ತ್ವಿಕಭಕ್ತರಿಗೆ ಆಶ್ರಯವನ್ನು ಕೊಡುತ್ತಿದ್ದರು. ಸೂರ್ಯನು ತನ್ನ ಪ್ರಕಾಶದಿಂದ ಮಿಂಚುಹುಳಗಳನ್ನು ಕಾಂತಿಹೀನವನ್ನಾಗಿ ಮಾಡುವಂತೆ ಶತ್ರುಮಿತ್ರರಲ್ಲದ ಉದಾಸೀನರನ್ನು ದುರ್ಬಲರನ್ನಾಗಿಯೇ ಇಡುತ್ತಿದ್ದರು. ಅವರನ್ನು ಉದಾಸೀನರನ್ನಾಗಿಯೇ ಇಡುತ್ತಿದ್ದರು.

ಹೀ = ಆಶ್ಚರ್ಯದ್ಯೋತಕ, ಅಹೋ ಹೀ ಚ ವಿಸ್ಮಯೇ—ಅಮರ. ವಿಹೀನಃ ಸಾರಃ ಯೇಷಾಂ ತೇ ತೈಃ, ನಗಸ್ಯ ಸರಿತಃ ತಾಸಾಂ ಪ್ರತ್ಯರ್ಥಿನಶ್ಚ ಸ್ವೇ ಚ ಸಮಾಶ್ಚ ಪ್ರತ್ಯರ್ಥಿಸ್ವಸಮಾಃ ತೇ ಚ ತೇ ನರಾಶ್ಚ ತೈಃ.

ಆಚಾರ್ಯರ ಇನ್ನೊಂದು ಮಹಿಮೆಯನ್ನು ಪ್ರಾರಂಭಿಸುತ್ತಾರೆ—

ಪಾರಂತೀಸುರಸದನಂ ವಿಶಾಲಸಂವಿ-
ತ್ಸಂಪ್ರಾಪ್ತಃ ಖಲುಸುಚಿರಾನ್ನಿವೇದ್ಯಹೀನಂ ।
ಗ್ರಾಮ್ಯಾಗ್ರ್ಯಕ್ಷಿತಿಪತಿಭಿರ್ದಿನಾರ್ಧಮಾತ್ರಾತ್-
ತದ್ಭೂತೀರ್ವ್ಯಧಿತ ಸಭೂತಬಲ್ಯನಲ್ಪಾಃ ॥ ೩೬ ॥

ವಿಶಾಲಸಂವಿತ್ ಸುಚಿರಾತ್ ನಿವೇದ್ಯಹೀನಂ ಪಾರಂತೀಸುರಸದನಂ ಸಂಪ್ರಾಪ್ತಃ ಗ್ರಾಮ್ಯಾಗ್ರ್ಯಕ್ಷಿತಿಪತಿಭಿಃ ದಿನಾರ್ಧಮಾತ್ರಾತ್ ಸಭೂತಬಲಿ ಅನಲ್ಪಾಃ ತದ್ಭೂತೀಃ ವ್ಯಧಿತ ಖಲು.

ವಿಶಾಲಸಂವಿತ್ = ಶ್ರೀಪೂರ್ಣಪ್ರಜ್ಞಾಚಾರ್ಯರು, ಸುಚಿರಾತ್ ನಿವೇದ್ಯಹೀನಂ = ಬಹಳಕಾಲದಿಂದ ನೈವೇದ್ಯಸಮರ್ಪಣ ಮೊದಲಾದಪೂಜಾವಿಧಾನಗಳಿಲ್ಲದ, ಪಾರಂತೀಸುರಸದನಂ = ಪಾರಂತೀ (ಕೇವುಡದೇವ) ದೇವಾಲಯವನ್ನು, ಸಂಪ್ರಾಪ್ತಃ = ಹೊಂದಿದವರಾಗಿ, ಗ್ರಾಮ್ಯಾಗ್ರ್ಯ-

Rarest Archiver

ಕ್ಷಿತಿಪತಿಭಿಃ= ಗ್ರಾಮದ ಮುಖ್ಯಸ್ಥರು ಮತ್ತು ರಾಜ ಇವರಿಂದ, ದಿನಾರ್ಧ-ಮಾತ್ರಾತ್= ಅರ್ಧದಿನದಲ್ಲಿಯೇ, ಸಭೂತಬಲಿ = ಭೂತಬಲಿಸಹಿತವಾಗಿ, ಅನಲ್ಪಾಃ ತದ್ಭೂತೀಃ= ಹೆಚ್ಚಾದ ಆ ದೇವಾಲಯದ ಪೂಜಾದಿವೈಭವಗಳನ್ನು, ವ್ಯಧಿತ = ಮಾಡಿದರು (ನಡೆಸಿದರು).

ಶ್ರೀಮಧ್ವಾಚಾರ್ಯರು ಪಾರಂತೀ (ಕೆವುಡದೇಲ) ಎಂಬ ದೇವಾಲಯಕ್ಕೆ ಬಂದರು. ಅಲ್ಲಿ ಬಹುಕಾಲದಿಂದ ನೈವೇದ್ಯಪೂಜಾದಿಗಳು ನಿಂತು ಹೋಗಿದ್ದುವು. ಆಚಾರ್ಯರು ಅಲ್ಲಿಯ ಗ್ರಾಮಮುಖಂಡರನ್ನೂ ಅಲ್ಲಿಯ ರಾಜನನ್ನೂ ಕರೆಸಿ, ಅವರೊಡನೆ ಕೂಡಿಕೊಂಡು ಅರ್ಧದಿನದಲ್ಲಿಯೇ ಪೂಜೆ, ನೈವೇದ್ಯ ಭೂತಬಲಿ, ರಥೋತ್ಸವ ಮೊದಲಾದ ಎಲ್ಲಾ ವೈಭವಗಳನ್ನೂ ನಡೆಸಿದರು. ಆ ದೇವಸ್ಥಾನದ ಜೀರ್ಣೋದ್ಧಾರ, ಬ್ರಹ್ಮಕಲಶಮಹೋತ್ಸ-ವಾದಿಗಳು ನಡೆಸುವಂತೆ ಮಾಡಿ, ಆ ದೇವಾಲಯದ ವೈಭವಾದಿಗಳನ್ನು ಹೆಚ್ಚಿಸಿದರು.

ಸುರಾಣಾಂ ಸದನಂ, ಪಾರಂತೀ ಇತಿ ಸುರಸದನಂ ತತ್, ವಿಶಾಲಾ ಸಂವಿತ್ ಯಸ್ಯ ಸಃ, ನಿವೇದ್ಯೇನ ಹೀನಂ, ತತ್, ಗ್ರಾಮೇಷು ಭವಾಃ, ಗ್ರಾಮ್ಯೇಷು ಅಗ್ರ್ಯಾಃ, ಕ್ಷಿತೇಃ ಪತಿಃ, ಗ್ರಾಮ್ಯಾಗ್ರ್ಯಾಶ್ಚ ಕ್ಷಿತಿಪತಿಶ್ಚ ಗ್ರಾಮ್ಯಾಗ್ರ್ಯಕ್ಷಿತಿಪತಯಃ ತೈಃ, ದಿನಸ್ಯ ಅರ್ಧಂ, ದಿನಾರ್ಧಂ ಏವ ದಿನಾರ್ಧ-ಮಾತ್ರಂ ತಸ್ಮಾತ್, ಭೂತೇಭ್ಯಃ ಬಲಿಃ. ಭೂತಬಲಿನಾ ಸಹಿತಂ ಯಥಾ ಭವತಿ ತಥಾ, ನ ಅಲ್ಪಾಃ, ತಾಃ, ತಸ್ಯ ಭೂತಯಃ ತಾಃ.

ಆ ದೇವಾಲಯವನ್ನು ಅಷ್ಟು ಬೇಗನೆ ಜೀರ್ಣೋದ್ಧಾರ ಮಾಡಿಸಲು ಕಾರಣವೇನು ?—

ಭೀಮತ್ವೇ ಸಹ ಸಹಜೈಃ ಪ್ರತಿಷ್ಠಿತಃ ಪ್ರಾಕ್
ಪಂಚಾತ್ಮಾ ಮುರರಿಪುರಂಚಿತೋ ಯದತ್ರ ।
ಪಾಂಚಾಲ್ಯಾ ಬಲಿಸಲಿಲಂ ಸಮಂ ದದತ್ಯಾ
ಸೋಽಸ್ಮಾರ್ಷೀತ್ ತಮಿಮಮಥ ಪ್ರಪೂಜ್ಯಪೂಜ್ಯಃ ॥ ೩೭ ॥

ಪ್ರಾಕ್ ಭೀಮತ್ವೇ ಸಹಜೈಃ ಸಹ ಅತ್ರ ಪ್ರತಿಷ್ಠಿತಃ ಪಂಚಾತ್ಮಾ ಮುರರಿಪುಃ ಬಲಿಸಲಿಲಂ ದದತ್ಯಾ ಪಾಂಚಾಲ್ಯಾ ಸಮಂ ಯತ್ ಅಂಚಿತಃ (ತತ್) ಪ್ರಪೂಜ್ಯಪೂಜ್ಯಃ ಸಃ ಅಥ ತಂ ಇಮಂ ಅಸ್ಮಾರ್ಷೀತ್.

Rarest Archiver

ಪ್ರಾಕ್ = ಹಿಂದೆ ದ್ವಾಪರಯುಗದಲ್ಲಿ, ಭೀಮಾತ್ಮೇ = ತನ್ನ ಭೀಮಸೇನ ರೂಪದಲ್ಲಿ, ಸಹಜೈಃ ಸಹ = ಸಹೋದರರೊಡನೆ, ಅತ್ರ ಪ್ರತಿಷ್ಠಿತಃ = ಈ ಪಾರಂತೀ ದೇವಾಲಯದಲ್ಲಿ ಪ್ರತಿಷ್ಠೆ ಮಾಡಲ್ಪಟ್ಟ, ಪಂಚಾತ್ಮಾ ಮುರರಿಪುಃ = ಐದುರೂಪಗಳುಳ್ಳ ಶ್ರೀಮನ್ನಾರಾಯಣನು, ಬಲಿಸಲಿಲಂ ದದತ್ಯಾ ಪಾಂಚಾಲ್ಯಾ ಸಮಂ = ಭೂತಬಲಿಗೆ ನೀರನ್ನು ಕೊಡುತ್ತಿದ್ದ ದ್ರೌಪದೀ ದೇವಿಯವರಿಂದ ಕೂಡಿಕೊಂಡು, ಯತ್ ಅಂಚಿತಃ = ಯಾವ ಕಾರಣದಿಂದ ಪೂಜಿಸಲ್ಪಟ್ಟಿದ್ದನೋ, (ತತ್ = ಆದ್ದರಿಂದ) ಪ್ರಪೂಜ್ಯಪೂಜ್ಯಃ ಸಃ = ಪರಮಪೂಜ್ಯರಾದ ರುದ್ರಾದಿಗಳಿಂದಲೂ ಪೂಜ್ಯರಾದ ಆಚಾರ್ಯರು, ಅಥ ತಂ ಇಮಂ = ಅನಂತರ ಆ ಈ ವಿಷ್ಣುವನ್ನು, ಅಸ್ಮಾರ್ಷೀತ್ = ಸ್ಮರಿಸಿದರು.

ಪರಮಪೂಜ್ಯರಾದ ರುದ್ರಾದಿಗಳಿಗೂ ಪೂಜ್ಯರಾದ ಆಚಾರ್ಯರು ಹಿಂದೆ ದ್ವಾಪರಯುಗದಲ್ಲಿ ತಾನು ಭೀಮಸೇನರೂಪದಿಂದ ಇದ್ದಾಗ ಧರ್ಮರಾಜನೇ ಮೊದಲಾದ ತನ್ನ ಸಹೋದರರೊಡನೆ ಈ ಪಾರಂತೀ ದೇವಾಲಯಕ್ಕೆ ಬಂದು ಅನಿರುದ್ಧಪ್ರದ್ಯುಮ್ನಾದಿಐದುರೂಪವುಳ್ಳ ಶ್ರೀಕೃಷ್ಣನ ಐದುಪ್ರತಿಮೆಗಳನ್ನು ಪ್ರತಿಷ್ಠೆ ಮಾಡಿದ್ದರು. ಆಗ ಭೂತಬಲಿಯ ಸಮಯದಲ್ಲಿ ದ್ರೌಪದೀದೇವಿಯು ಅವರ ಕೈಗೆ ನೀರನ್ನು ಹಾಕುತ್ತಿದ್ದಳು. ಈಗ ಅದೇ ಪಾರಂತೀ ದೇವಾಲಯದ ಜೀರ್ಣೋದ್ಧಾರಸಮಯದಲ್ಲಿ ಆಚಾರ್ಯರು ತಾವು ಪ್ರತಿಷ್ಠೆ ಮಾಡಿದ ಶ್ರೀಹರಿಯನ್ನು ಸ್ಮರಿಸಿದರು. ವನವಾಸಸಮಯದಲ್ಲಿ ಐದುಮಂದಿ ಪಾಂಡವರು ಐದುರೂಪವುಳ್ಳ ಕೃಷ್ಣನ ಐದು ಪ್ರತಿಮೆಗಳನ್ನು ಆ ಸ್ಥಳದಲ್ಲಿ ಪ್ರತಿಷ್ಠೆ ಮಾಡಿದ್ದರು. ಭೂತಬಲಿಯನ್ನು ಕೊಟ್ಟಮೇಲೆ, ಆ ಬಲಿಯಮೇಲೆ ನೀರನ್ನು ಹಾಕಲು. ದ್ರೌಪದೀದೇವಿಯವರು ಅವರ ಕೈಗೆ ನೀರನ್ನು ಸುರಿಯುತ್ತಿದ್ದರು. ಹೀಗೆ ತನ್ನ ಹಿಂದಿನ ಅವತಾರದಲ್ಲಿ ಪೂಜಿತನಾದ ಹರಿಯ ಪೂಜೆಯನ್ನು ಆಚಾರ್ಯರು ಪುನಃ ಊರ್ಜಿತಗೊಳಿಸಿದರು.

ಪಂಚ ಆತ್ಮಾನಃ ಯಸ್ಯ ಸಃ, ಮುರಸ್ಯ ರಿಪುಃ, ಬಲೇಃ ಸಲಿಲಂ ತತ್; ಪ್ರಕರ್ಷೇಣ ಪೂಜ್ಯಾಃ, ಪ್ರಪೂಜ್ಯೈಃ ಪೂಜ್ಯಃ.

ಅಸ್ಮಾರ್ಷೀತ್ ಅಸ್ಮಾರ್ಷ್ಟಾಂ ಅಸ್ಮಾರ್ಷುಃ, ಅಸ್ಮಾರ್ಷೀಃ ಅಸ್ಮಾರ್ಷ್ಟಂ ಅಸ್ಮಾರ್ಷ್ಟ, ಅಸ್ಮಾರ್ಷಂ ಅಸ್ಮಾರ್ಷ್ವ ಅಸ್ಮಾರ್ಷ್ಮ. ಸ್ಮೃ ಚಿಂತಾಯಾಂ ಅನಿ ಪರ. ಲುಙ್.

Rarest Archiver

ಆಚಾರ್ಯರ ಮತ್ತೊಂದು ಮಹಿಮೆ—

ಆಯಾಸ್ಯನ್ ಕಿಲ ಸರಿದಂತರಾಖ್ಯದೇಶಂ
ಗ್ರೀಷ್ಮೇ ನಿರ್ಜಲಮಿಹಶುಶ್ರುವಾಂಸ್ತಟಾಕಂ ।
ತತ್ಕಾಲೇ ಪರಮಭಿವರ್ಷಯನ್ ಘನೌಘಂ
ತತ್ಪೂರ್ತ್ಯೈ ವ್ಯಧಿತ ಕುತೂಹಲಂ ಜನಾನಾಂ ॥ ೩೮ ॥

ಗ್ರೀಷ್ಮೇ ಸರಿದಂತರಾಖ್ಯದೇಶಂ ಆಯಾಸ್ಯನ್ ಇಹ ತಟಾಕಂ ನಿರ್ಜಲಂ ಶುಶ್ರುವಾನ್ ಸಃ ತತ್ಕಾಲೇ ಪರಂ ತತ್ಪೂರ್ತ್ಯೈ ಘನೌಘಂ ಅಭಿ-ವರ್ಷಯನ್ ಜನಾನಾಂ ಕುತೂಹಲಂ ವ್ಯಧಿತ ಕಿಲ.

ಗ್ರೀಷ್ಮೇ ಸರಿದಂತರಾಖ್ಯದೇಶಂ ಆಯಾಸ್ಯನ್=ಬೇಸಿಗೆ ಕಾಲದಲ್ಲಿ ಇಡೆತುದೆ ಎಂಬ ಪ್ರದೇಶಕ್ಕೆ ಬರುವವರಾದ, ಇಹ=ಆ ಗ್ರಾಮದಲ್ಲಿ, ತಟಾಕಂ ನಿರ್ಜಲಂ ಶುಶ್ರುವಾನ್ (ಸಃ)=ಕೆರೆಯನ್ನು ನೀರಿಲ್ಲದ್ದನ್ನಾಗಿ ಕೇಳಿದಂತಹ ಆ ಶ್ರೀಮಧ್ವಾಚಾರ್ಯರು, ತತ್ಕಾಲೇ=ಆ ಬೇಸಿಗೆಕಾಲದಲ್ಲಿ, ಪರಂ ತತ್ಪೂರ್ತ್ಯೈ = ಕೇವಲ ಆ ಕೆರೆತುಂಬುವುದಕ್ಕಾಗಿ ಮಾತ್ರ, ಘನೌಘಂ ಅಭಿವರ್ಷಯನ್=ಮೋಡಗಳ ಸಮೂಹವನ್ನು ಮಳೆಸುರಿಸುವಂತೆ ಮಾಡುತ್ತಾ, ಜನಾನಾಂ ಕುತೂಹಲಂ ವ್ಯಧಿತ=ಜನರಿಗೆ ಆಶ್ಚರ್ಯವನ್ನುಂಟುಮಾಡಿದರು.

ಆಚಾರ್ಯರು ಬೇಸಿಗೆಯಲ್ಲಿ ಇಡೆತುದೆ ಎಂಬ ಗ್ರಾಮದ ಕಡೆಗೆ ಬರುವವರಿದ್ದರು. ಆಗ ಆ ಗ್ರಾಮದ ಕೆರೆಯು ಬತ್ತಿಹೋಗಿದೆ ಎಂಬ ಸಮಾಚಾರವನ್ನು ಕೇಳಿದ ಆಚಾರ್ಯರು ತನ್ನ ಪ್ರಭಾವದಿಂದ ಮೋಡಗಳನ್ನು ತರಿಸಿ ಆ ಕೆರೆತುಂಬುವಷ್ಟುಮಾತ್ರ ಮಳೆ ಬರಿಸಿದರು. ಆ ಕಾಲದಲ್ಲಿ ಆ ಕೆರೆತುಂಬುವಷ್ಟುಮಾತ್ರ ಮಳೆ ಬರಿಸಿದ್ದನ್ನು ಕಂಡು ಜನರು ತುಂಬಾ ಆಶ್ಚರ್ಯಪಟ್ಟರು.

ಸರಿದಂತರಂ ಇತಿ ಆಖ್ಯಾ ಯಸ್ಯ ಸಃ, ಸರಿದಂತರಾಖ್ಯಶ್ಚಾಸೌ ದೇಶಶ್ಚ ತಂ, ನಿರ್ಗತಂ ಜಲಂ ಯಸ್ಮಾತ್ ಸಃ ತಂ, ಸ ಚಾಸೌ ಕಾಲಶ್ಚ ತತ್ಕಾಲಃ ತಸ್ಮಿನ್, ಘನಾನಾಂ ಓಘಃ ತಂ ತಸ್ಯ ಪೂರ್ತಿಃ ತಸ್ಯೈ;

Rarest Archiver

ಆಚಾರ್ಯರನ್ನು ಹೊಡೆಯಲು ಬಂದ ಗ್ರಾಮಾಧಿಪತಿಯು ಆಚಾರ್ಯರಿಗೆ ಅಡ್ಡಬಿದ್ದನು —

ದುರ್ಮಂತ್ರೈಃ ಖಲಪಟಲೈಃ ಪ್ರಚೋದ್ಯಮಾನೋ
ಗ್ರಾಮೇಶೋ ವೃಷಲಪತಿಃ ಪ್ರಹರ್ತುಮೇನಂ ।
ಸಂಪ್ರಾಪ್ತಸ್ತತ ಉತ ಯಾಂತಮೀಕ್ಷಮಾಣಃ
ಪ್ರೋದ್ಯಂತಂ ರವಿಮಿವ ವಿಸ್ಮಿತೋ ನನಾಮ ॥ ೩೯ ॥

ಖಲಪಟಲೈಃ ದುರ್ಮಂತ್ರೈಃ ಏನಂ ಪ್ರಹರ್ತುಂ ಪ್ರಚೋದ್ಯಮಾನಃ ಗ್ರಾಮೇಶಃ ವೃಷಲಪತಿಃ ಸಂಪ್ರಾಪ್ತಃ ತತಃ ಉತ ಯಾಂತಂ ಪ್ರೋದ್ಯಂತಂ ರವಿಂ ಇವ ಈಕ್ಷಮಾಣಃ ವಿಸ್ಮಿತಃ ನನಾಮ.

ಖಲಪಟಲೈಃ = ದುಷ್ಟರ ಸಮೂಹಗಳಿಂದ, ದುರ್ಮಂತ್ರೈಃ = ಕೆಟ್ಟ ಮಂತ್ರಾಲೋಚನೆಗಳಿಂದ, ಏನಂ ಪ್ರಹರ್ತುಂ ಪ್ರಚೋದ್ಯಮಾನಃ = ಈ ಮಧ್ವಾಚಾರ್ಯರನ್ನು ಹೊಡೆಯುವುದಕ್ಕೆ (ಕೊಲ್ಲಲು) ಪ್ರೇರಿಸಲ್ಪಟ್ಟ, ಗ್ರಾಮೇಶಃ ವೃಷಲಪತಿಃ = ಗ್ರಾಮದ ಮುಖಂಡನಾದ ಶೂದ್ರರ ಪ್ರಭುವು, ಸಂಪ್ರಾಪ್ತಃ = ಬಂದವನಾಗಿ, ತತಃ ಉತ = ಅಲ್ಲಿಂದಲೂ, ಯಾಂತಂ = ಹೋಗುತ್ತಿರುವ, ಪ್ರೋದ್ಯಂತಂ ರವಿಂ ಇವ = ಉದಯಿಸುತ್ತಿರುವ ಸೂರ್ಯನನ್ನು ಎಂಬಂತೆ ಆಚಾರ್ಯರನ್ನು, ಈಕ್ಷಮಾಣಃ = ನೋಡುತ್ತಿರುವವನಾಗಿ, ವಿಸ್ಮಿತಃ ನನಾಮ = ಆಶ್ಚರ್ಯಪಟ್ಟು ನಮಸ್ಕರಿಸಿದನು.

ಕೆಲವು ದುಷ್ಟರ ಗುಂಪುಗಳು ದುರಾಲೋಚನೆಮಾಡಿ ಶ್ರೀಮಧ್ವಾಚಾರ್ಯರನ್ನು ಹೊಡೆದು ಕೊಲ್ಲಲು ಒಬ್ಬ ಶೂದ್ರರ ಅಧಿಪತಿಯಾದ ಗ್ರಾಮಮುಖ್ಯಸ್ಥನನ್ನು ಪ್ರೇರಿಸಿದರು. ಅವನು ಇಡೆತುದೆಗ್ರಾಮದಿಂದ ಬೇರೆ ಊರಿಗೆ ಆಚಾರ್ಯರು ಪರಿವಾರಸಮೇತರಾಗಿ ಹೋಗುತ್ತಿರುವಾಗ ಅವರನ್ನು ಹೊಡೆಯಲು ನೂರಾರುಜನ ಭಂಟರ ಜೊತೆಗೆ ದೊಣ್ಣೆಗಳಿಂದ ಸಜ್ಜಾಗಿ ಎದುರಿಗೆ ಬಂದನು. ಆದರೆ ಅವನಿಗೆ ಆಚಾರ್ಯರನ್ನು ನೋಡಿದಾಗ 'ಇವರು ಮಾನವರಲ್ಲ, ಉದಯಿಸುತ್ತಿರುವ ಸೂರ್ಯನೇ ಸರಿ' ಎಂಬ ಭಾವನೆ ಉಂಟಾಯಿತು. ಆಚಾರ್ಯರ ತೇಜಸ್ಸನ್ನು ಕಂಡಾಗ ಅವನಿಗೆ ವೈರಭಾವವು

Rarest Archiver

ಹೋಗಿ ವೈತ್ರಭಾವವುಂಟಾಗಿ ಅವನು ಭಕ್ತಿವಿನಯಗಳಿಂದ ಆಚಾರ್ಯರ ಅಡಿಗೆ ಎರಗಿ ಹೊರಟುಹೋದನು.

ದುಷ್ಟಾಶ್ಚ ತೇ ಮಂತ್ರಾಶ್ಚ ತೈಃ, ಖಲಾನಾಂ ಪಟಲಾನಿ ತೈಃ, ಪಟಲ = ಚಿಕ್ಕಗುಂಪು; ಪಟಲಂ ಪೇಟಲಂ ಚಕ್ರಂ-ಹಲಕೋಶ. ಗ್ರಾಮಸ್ಯ ಈಶಃ, ವೃಷಲಾನಾಂ ಪತಿಃ;

ಶ್ರೀಕೃಷ್ಣಾಮೃತಮಹಾರ್ಣವವೆಂಬ ಗ್ರಂಥನಿರ್ಮಾಣದಿಂದ ಗುರು ಮಧ್ವರು ಮಾಡಿದ ಮಹೋಪಕಾರ —

ಕ್ಷೇತ್ರಾಗ್ರ್ಯಂ ತ್ರಿಭುವನವೈದ್ಯನಾಥನಾಥಂ
ಪ್ರಸ್ಥಾಯ ಪ್ರಚುರತರಾಂತರಃ ಪ್ರಭಾವೀ ।
ಶ್ರೀಕೃಷ್ಣಾಮೃತಪರಮಾರ್ಣವಾಭಿಧಾನಂ
ಚಕ್ರೇ ಸದ್ವಚನತತಿಂ ಸ್ವಭಕ್ತಭೂತ್ಯೈ ॥ ೪೦ ॥

ಪ್ರಭಾವೀ, ಪ್ರಚುರತರಾಂತರಃ ತ್ರಿಭುವನವೈದ್ಯನಾಥನಾಥಂ ಕ್ಷೇತ್ರಾಗ್ರ್ಯಂ ಪ್ರಸ್ಥಾಯ ಶ್ರೀಕೃಷ್ಣಾಮೃತಪರಮಾರ್ಣವಾಭಿಧಾನಂ ಸದ್ವಚನತತಿಂ ಸ್ವಭಕ್ತಭೂತ್ಯೈ ಚಕ್ರೇ.

ಪ್ರಭಾವೀ ಪ್ರಚುರತರಾಂತರಃ = ಸಾಮರ್ಥ್ಯಶಾಲಿಗಳಾದ ಶ್ರೀಪೂರ್ಣಪ್ರಜ್ಞಾಚಾರ್ಯರು, ತ್ರಿಭುವನವೈದ್ಯನಾಥನಾಥಂ = ಮೂರುಲೋಕದ ವೈದ್ಯರಿಗೆ ಸ್ವಾಮಿಯಾದ ಧನ್ವಂತರಿಯೇ ಸ್ವಾಮಿಯಾಗಿಉಳ್ಳ, ಕ್ಷೇತ್ರಾಗ್ರ್ಯಂ = ಕೊಕ್ಕಡವೆಂಬ ಶ್ರೇಷ್ಠವಾದ ಗ್ರಾಮವನ್ನು ಕುರಿತು, ಪ್ರಸ್ಥಾಯ = ಹೊರಟು, ಶ್ರೀಕೃಷ್ಣಾಮೃತಪರಮಾರ್ಣವಾಭಿಧಾನಂ = ಶ್ರೀಕೃಷ್ಣಾಮೃತಮಹಾರ್ಣವವೆಂಬ ಹೆಸರುಳ್ಳ, ಸದ್ವಚನತತಿಂ = ಒಳ್ಳೆಯಪುರಾಣವಚನಗಳ ಸಮೂಹವೆಂಬ ಗ್ರಂಥವನ್ನು, ಸ್ವಭಕ್ತಭೂತ್ಯೈ = ತಮ್ಮ ಭಕ್ತನಾದ ಇಡೆಪಾಡಿತ್ತಾಯ ಎಂಬುವನ ಶ್ರೇಯಸ್ಸಿಗೋಸ್ಕರ, ಚಕ್ರೇ = ಮಾಡಿದರು.

ಸಮರ್ಥರಾದ ಶ್ರೀಮಧ್ವಾಚಾರ್ಯರು ಕೊಕ್ಕಡವೆಂಬ ಶ್ರೇಷ್ಠವಾದ ಕ್ಷೇತ್ರಕ್ಕೆ ಹೊರಟರು. ಮೂರು ಲೋಕಗಳಲ್ಲಿರುವ ಧನ್ವಂತರಿರೂಪಿಯಾದ ಪರಮಾತ್ಮನು ಆ ಕ್ಷೇತ್ರದಲ್ಲಿರುವ ವೈದ್ಯನಾಥೇಶ್ವರ ಎಂಬ ಹೆಸರಿನ ರುದ್ರ

Rarest Archiver

ದೇವರಲ್ಲಿ ಸನ್ನಿಹಿತನಾಗಿರುತ್ತಾನೆ. ಆ ಧನ್ವಂತರಿಯೇ ಆ ಗ್ರಾಮದ ದೇವತೆ. ಆ ಕ್ಷೇತ್ರದಲ್ಲಿ ತಮ್ಮ ಭಕ್ತನಾದ ಒಬ್ಬ ಬ್ರಾಹ್ಮಣನಿಗೆ ಜ್ಞಾನಸಂಪತ್ತಿಗಾಗಿ ಕೃಷ್ಣಾಮೃತಮಹಾರ್ಣವವೆಂಬ ಪುರಾಣವಚನಸಂಗ್ರಹರೂಪವಾದ ಗ್ರಂಥ ವನ್ನು ಆಚಾರ್ಯರು ಮಾಡಿದರು.

ಕ್ಷೇತ್ರೇಷು ಅಗ್ರ್ಯಂ ಕ್ಷೇತ್ರಾಗ್ರ್ಯಂ ತತ್; ತ್ರಯಾಣಾಂ ಭುವನಾನಾಂ ಸಮಾಹಾರಃ ತ್ರಿಭುವನಂ, ತ್ರಿಭುವನೇ ವೈದ್ಯಾಃ, ತ್ರಿಭುವನವೈದ್ಯಾನಾಂ ನಾಥಃ ನಾಥಃ ಯಸ್ಯ ತತ್, ಪ್ರಚುರತರಂ ಅಂತರಂ ಯಸ್ಯ ಸಃ, ಪ್ರಭಾವಃ ಅಸ್ಯ ಅಸ್ತೀತಿ ಪ್ರಭಾವೀ, ಪರಮಶ್ಚಾಸೌ ಅರ್ಣವಶ್ಚ ಪರಮಾರ್ಣವಃ, ಶ್ರೀಕೃಷ್ಣಾಮೃತಂ ಇತಿ ಪರಮಾರ್ಣವಃ, ಶ್ರೀಕೃಷ್ಣಾಮೃತಪರಮಾರ್ಣವಃ ಇತಿ ಅಭಿಧಾನಂ ಯಸ್ಯ ಸಃ. ಸತಾಂ ವಚನಾನಾಂ ತತಿಃ ಯಸ್ಮಿನ್ ಸಃ, ತಂ, ಸ್ವಸ್ಯ ಭಕ್ತಸ್ಯ ಭೂತಿಃ ತಸ್ಯೈ.

ಮತ್ತೊಂದು ಗ್ರಾಮದಲ್ಲಿ ನಡೆದ ವಾದವಿವಾದವನ್ನು ವರ್ಣಿಸುತ್ತಾರೆ—

ಸ ಗ್ರಾಮಂ ಪರಮಭಿಯಾತ ಉಚ್ಚಭೂತಿಂ
ವಿದ್ವಾಂಸಃ ಕ್ವ ಕುಹರಕೂಪದರ್ದುರಾಭಾಃ ।
ಇತ್ಯೂಚೇ ಮದಮತಿಮಾನಿನೋಽಖಿಲಜ್ಞಂ-
ಮನ್ಯಸ್ಯ ಕ್ಷಪಯಿತುಮೇವ ತಜ್ಜನಸ್ಯ ॥ ೪೩ ॥

ಉಚ್ಚಭೂತಿಂ ಪರಂ ಗ್ರಾಮಂ ಅಭಿಯಾತಃ ಸಃ ಅತಿಮಾನಿನಃ ಅಖಿಲಜ್ಞಂಮನ್ಯಸ್ಯ ತಜ್ಜನಸ್ಯ ಮದಂ ಕ್ಷಪಯಿತುಮೇವ ಕುಹರಕೂಪ-ದರ್ದುರಾಭಾಃ ವಿದ್ವಾಂಸಃ ಕ್ವ ಇತಿ ಊಚೇ.

ಉಚ್ಚಭೂತಿಂ ಪರಂ ಗ್ರಾಮಂ ಅಭಿಯಾತಃ ಸಃ = ಉಜೇರ್ಯ (ಉಜ್ರೆ)ಎಂಬ ಮತ್ತೊಂದು ಗ್ರಾಮಕ್ಕೆ ಹೋದ, ಆ ಶ್ರೀಮಧ್ವಾಚಾರ್ಯರು, ಅತಿಮಾನಿನಃ = ಹೆಚ್ಚು ಪಾಂಡಿತ್ಯದ ಅಹಂಕಾರವುಳ್ಳ, ಅಖಿಲಜ್ಞಂಮನ್ಯಸ್ಯ = ತಾವು ಸರ್ವಜ್ಞರು ಎಂದು ತಿಳಿದಿರುವ, ತಜ್ಜನಸ್ಯ = ಆ ಗ್ರಾಮದ ಜನರ, ಮದಂ ಕ್ಷಪಯಿತುಂ ಏವ = ಅಹಂಕಾರವನ್ನು ನಾಶಗೊಳಿಸುವುದ-ಕ್ಕಾಗಿಯೇ, ಕುಹರಕೂಪದರ್ದುರಾಭಾಃ = ಆಳವಾದ ಭಾವಿಯ ಕಪ್ಪೆ

Rarest Archive

ಗಳಂತಹ, ವಿದ್ವಾಂಸಃ ಕ್ವ = ಪಂಡಿತರು ಎಲ್ಲಿದ್ದಾರೆ ? ಇತ್ಯೂಚೇ = ಎಂದು ಹೇಳಿದರು

ಶ್ರೀಮಧ್ವಾಚಾರ್ಯರು ಉಚ್ಚಭೂತಿ (ಉಜ್ರೆ) ಎಂಬ ಮತ್ತೊಂದು ಗ್ರಾಮಕ್ಕೆ ಹೋದರು. ಅಲ್ಲಿ ಅನೇಕಮಂದಿ ತಾವೇ ಸರ್ವಜ್ಞರೆಂದು ತಿಳಿದು ಕೊಂಡ ಪಂಡಿತರಿದ್ದರು. ಆಚಾರ್ಯರು ಅವರ ಅಹಂಕಾರವನ್ನು ಮುರಿಯಲು ' ಕೂಪಮಂಡೂಕ '(ಭಾವಿಯೊಳಗಿರುವಕಪ್ಪೆ)ದಂತಿರುವ ಇಲ್ಲಿಯ ವಿದ್ವಾಂಸರೆಲ್ಲಿ ? ಅವರೇಕೆ ನನ್ನೊಡನೆ ವಾದಕ್ಕೆ ಬರುವುದಿಲ್ಲ ?" ಎಂದು ಕೇಳಿದರು.

ಕುಹರಶ್ಚಾಸೌ ಕೂಪಶ್ಚ ಕುಹರಕೂಪಸ್ಯ ದರ್ದುರಾಃ, ಕುಹರ-ಕೂಪದರ್ದುರಾಣಾಂ ಆಭೇವ ಆಭಾ ಯೇಷಾಂ ತೇ, ಅತ್ಯಂತಂ ಮಾನಃ ಅಸ್ಯ ಅಸ್ತೀತಿ ಅತಿಮಾನೀ ತಸ್ಯ, ಅಖಿಲಂ ಜಾನಾತೀತಿ ಅಖಿಲಜ್ಞಃ, ಆತ್ಮಾನಂ ಅಖಿಲಜ್ಞಂ ಮನ್ಯತೇ ಇತಿ ಅಖಿಲಜ್ಞಂಮನ್ಯಃ ತಸ್ಯ, ತಸ್ಯ ಜನಃ ತಜ್ಜನಃ ತಸ್ಯ;

ಉಜಿರೆಯ ಪಂಡಿತರು ಮಾಡಿದ ಪ್ರಶ್ನೆ—

ಸರ್ವಜ್ಞೋಽಪ್ಯಯಮಧಿಕಂ ನ ಯಜ್ಞಭಂಗೀಂ
ಸಂವಿತ್ತೇ ಯತಿರಿತಿ ಬದ್ಧನಿಶ್ಚಯೋಽಸೌ ।
ಆಭಾಂತಂ ಪರಿಷದಿ ಮತ್ಸರಾದಪೃಚ್ಛತ್
ಕರ್ಮಾರ್ಥಶ್ರುತಿಗಹನಾರ್ಥಖಂಡಭಾವಂ ॥ ॥ ೪೨ ॥

ಸರ್ವಜ್ಞಃ ಅಪಿ ಯತಿಃ ಅಯಂ ಯಜ್ಞಭಂಗೀಂ ಅಧಿಕಂ ನ ಸಂವಿತ್ತೇ, ಇತಿ ಬದ್ಧನಿಶ್ಚಯಃ ಅಸೌ ಪರಿಷದಿ ಆಭಾಂತಂ ಕರ್ಮಾರ್ಥಶ್ರುತಿಗಹನಾರ್ಥ-ಖಂಡಭಾವಂ ಮತ್ಸರಾತ್ ಅಪೃಚ್ಛತ್.

ಸರ್ವಜ್ಞಃ ಅಪಿ = ಎಲ್ಲವನ್ನೂ ಬಲ್ಲವರಾದರೂ, ಯತಿಃ ಅಯಂ = ಸನ್ಯಾಸಿಯಾದ ಈ ಮಧ್ವಾಚಾರ್ಯರು, ಯಜ್ಞಭಂಗೀಂ = ಯಜ್ಞದ ರೀತಿಯನ್ನು, ಅಧಿಕಂ ನ ಸಂವಿತ್ತೇ = ಹೆಚ್ಚಾಗಿ ತಿಳಿಯುವುದಿಲ್ಲ, ಇತಿ ಬದ್ಧ-ನಿಶ್ಚಯಃ ಅಸೌ = ಹೀಗೆಂದು ಸ್ಥಿರವಾದ ನಿಶ್ಚಯವುಳ್ಳ ಆ ಗ್ರಾಮದ

Rarest Archiver

ಪಂಡಿತವರ್ಗವು, ಪರಿಷದಿ ಆಭ್ರಾಂತಂ = ಸಭೆಯಲ್ಲಿ ಪ್ರಕಾಶಿಸುವ, ಶ್ರೀಮಧ್ವಾಚಾರ್ಯರನ್ನು ಕುರಿತು, ಕರ್ಮಾರ್ಥಶ್ರುತಿ = ಯಜ್ಞಗಳ ಅರ್ಥವನ್ನು ತಿಳಿಸುವ ವೇದದ, ಗಹನಾರ್ಥ = ಗೂಢವಾದ ಅರ್ಥವುಳ್ಳ, ಖಂಡಭಾವಂ = ಬ್ರಾಹ್ಮಣಮಂತ್ರಭಾಗದ ಅಭಿಪ್ರಾಯವನ್ನು, ಮತ್ಸರಾತ್ ಅಪೃಚ್ಛತ್ = ಹೊಟ್ಟೆಕಿಚ್ಚಿನಿಂದ ಕೇಳಿದರು.

'ಈ ಮಧ್ವಾಚಾರ್ಯರು ಸರ್ವಜ್ಞರೇನೋ ಹೌದು. ಆದರೆ ಸನ್ಯಾಸಿಗಳಾದ್ದರಿಂದ ಯಜ್ಞ ಮಾಡುವ ಅಧಿಕಾರವಿಲ್ಲದಕಾರಣ ಯಜ್ಞದ ಕ್ರಮವನ್ನು ಹೆಚ್ಚಾಗಿ ತಿಳಿದಿರಲಾರರು'. ಹೀಗೆ ಆಲೋಚಿಸಿ ಆ ಗ್ರಾಮದ ವಿದ್ವಾಂಸರು ಶ್ರೀಮಧ್ವಾಚಾರ್ಯರನ್ನು ಹೇಗಾದರೂ ಸೋಲಿಸಬೇಕೆಂದು ನಿಶ್ಚಯಿಸಿದರು. ಸಭೆಯಲ್ಲಿ ವಿರಾಜಿಸುವ ಅವರನ್ನು ಕರ್ಮಾರ್ಥವನ್ನು ಬೋಧಿಸುವ 'ಛಂದಸಾಂ ವೈ ಷಷ್ಠೇನಾಹ್ನಾಪ್ತಾನಾಂ ರಸೋಽತ್ಯನೇದತ್' ಇತ್ಯಾದಿಬ್ರಾಹ್ಮಣ ಭಾಗಕ್ಕೆ ಅರ್ಥವನ್ನು ಹೇಳಿರಿ ಎಂದು ಪ್ರಶ್ನೆಮಾಡಿದರು.

ಬದ್ಧಃ ನಿಶ್ಚಯಃ ಯೇನ ಸಃ, ಕರ್ಮ ಅರ್ಥಃ ಯಸ್ಯಾಂ ಸಾ, ಕರ್ಮಾರ್ಥಾ ಚ ಸಾ ಶ್ರುತಿಶ್ಚ, ಗಹನಶ್ಚಾಸೌ ಅರ್ಥಶ್ಚ, ಕರ್ಮಾರ್ಥಶ್ರುತೇಃ ಗಹನಾರ್ಥಃ ಯಸ್ಮಿನ್ ಸಃ, ಕರ್ಮಾರ್ಥಶ್ರುತಿಗಹನಾರ್ಥಶ್ಚಾಸೌ ಖಂಡಶ್ಚ ತಸ್ಯ ಭಾವಃ ತಂ.

ಆಚಾರ್ಯರ ಉತ್ತರವನ್ನು ವಿವರಿಸುತ್ತಾರೆ—

ಛಂದೋಭ್ಯಶ್ಚ್ಯುತರಸಸಂಗ್ರಹಪ್ರವೀಣಾನ್
ಷಷ್ಠೇಽಹ್ನಿ ಪ್ರತಿವಿಹಿತಾನ್ ಪ್ರಜಾಧಿಪೇನ ।
ನಾರಾಶಂಸ್ಯಚರಮಚಾರುಮಂತ್ರಭೇದಾ
ನೂಚೇಽಸೌ ತಮಭಿದಧದ್ವಿಸಂಶಯಾಂಶಃ ॥ ೪೩ ॥

ವಿಸಂಶಯಾಂಶಃ ಅಸೌ ತಂ ಅಭಿದಧತ್ ಛಂದೋಭ್ಯಃ ಚ್ಯುತರಸಸಂಗ್ರಹಪ್ರವೀಣಾನ್ ಪ್ರಜಾಧಿಪೇನ ಷಷ್ಠೇ ಅಹ್ನಿ ಪ್ರತಿವಿಹಿತಾನ್ ನಾರಾಶಂಸ್ಯಚರಮಚಾರುಮಂತ್ರಭೇದಾನ್ ಊಚೇ.

Rarest Archiver

ವಿಸಂಶಯಾಂಶಃ ಅಸೌ=ಸಂಶಯಲೇಶವೂ ಇಲ್ಲದ ಈ ಮಧ್ವಾಚಾರ್ಯರು, ತಂ ಅಭಿದಧತ್=ಆ ಮಂತ್ರಭಾಗದ ಅರ್ಥವನ್ನು ಹೇಳುತ್ತಾ, ಛಂದೋಭ್ಯಃ=ವೇದಗಳಿಂದ, ಚ್ಯುತರಸಸಂಗ್ರಹಪ್ರವೀಣಾನ್=ಹುಟ್ಟಿದ ಸಾರಭಾಗದ ಶೇಖರಣೆಯಲ್ಲಿ ಸಮರ್ಥವಾದ, ಪ್ರಜಾಧಿಪೇನ=ಬ್ರಹ್ಮನಿಂದ, ಷಷ್ಠೇ ಅಹ್ನಿ=ಆರನೆಯ ದಿನದಲ್ಲಿ, ಪ್ರತಿವಿಹಿತಾನ್=ವಿನಿಯೋಗಿಸಲ್ಪಟ್ಟ, ನಾರಾಶಂಸೀ ಅಚರಮುಚ್ಚಾರುಮಂತ್ರಭೇದಾನ್=ನಾರಾಶಂಸೀ ಎಂಬ ಮೊದಲನೆಯ ಮಂತ್ರವುಳ್ಳ, ಮನೋಹರವಾದ ಮಂತ್ರವಿಶೇಷಗಳನ್ನು, ಊಚೇ=ಹೇಳಿದರು.

ಶ್ರೀಮಧ್ವಾಚಾರ್ಯರು ಸಂಶಯಲೇಶರಹಿತರು. ವೇದಗಳ ಸಾರಭಾಗದ ಸಂಗ್ರಹರೂಪವಾದ ಸೋಮರಸದ ಶೇಖರಣೆಗೆ ವಿನಿಯುಕ್ತವಾದ, ಬ್ರಹ್ಮದೇವರು ಯಜ್ಞದ ಆರನೆಯ ದಿನ ಹೇಳಬೇಕೆಂದು ವಿಧಿಸಿರುವ ನಾರಾಶಂಸೀ ಇತ್ಯಾದಿಮಂತ್ರಗಳನ್ನು ಆಚಾರ್ಯರು ಹೇಳಿದರು. ಆ ಆ ಪಂಡಿತರ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಹೇಳಿದರು ಮಂತ್ರಗಳ ಅರ್ಥವನ್ನು ವಿವರಿಸಿದರು. ತತ್ರ ನೀವೀವ ನರ್ದೀತ್ ಸ ಹಿ ತಾಸಾಂ-ನ್ಯೂಂಖಃ, ನೀವೀ=ವಸ್ತ್ರವು ಚೆನ್ನಾಗಿ ಒಗೆದು ಉಟ್ಟುಕೊಳ್ಳುವಾಗ ಹೇಗೆ ಸದ್ದುಮಾಡುತ್ತದೆಯೊ ಅದೇ ರೀತಿ ನಾರಾಶಂಸೀ ಮಂತ್ರಗಳ ನ್ಯೂಂಖವು (ಸಾಮಯುಕ್ತವಾದಓಂಕಾರದ ಸದ್ದು) ಎಂದು ಇತ್ಯಾದಿಯಾಗಿ ಅರ್ಥವನ್ನು ಹೇಳಿದರು.

ಅಲ್ಲಿ ಈ ರೀತಿ ವಾದವಿವಾದವು ನಡೆಯಿತು—

ಪಾಂಡಿತ್ಯಂ ಪರಮಮವೇಕ್ಷ್ಯ ತಸ್ಯ ತಾದೃಕ್
ಸಂಘರ್ಷ(ಷಾತ್)ಕ್ಷುಭಿತಮನಾ ವಿಪಕ್ಷಸಂಘಃ ।
ನಾರ್ಥಃ ಸ್ಯಾದಯಮಿತಿ ವರ್ಣಯನ್ನಥ ತ್ವಂ
ತಂ ಬ್ರೂಹೀತ್ಯುರುಮತಿನೋದ್ರವದ್ ದ್ರಾಕ್ ॥ ೪೪ ॥

ತಸ್ಯ ತಾದೃಕ್ ಪರಮಂ ಪಾಂಡಿತ್ಯಂ ಅವೇಕ್ಷ್ಯ ಸಂಘರ್ಷಕ್ಷುಭಿತ-ಮನಾಃ ವಿಪಕ್ಷಸಂಘಃ 'ಅಯಂ ಅರ್ಥಃ ನ ಸ್ಯಾತ್' ಇತಿ ವರ್ಣಯನ್, 'ಅಥ ತ್ವಂ ತಂ ಬ್ರೂಹಿ' ಇತಿ ಉರುಮತಿನಾ ಈರಿತಃ ದ್ರಾಕ್ ಅದ್ರವತ್.

Rarest Archive

ತಸ್ಯ = ಆ ಮಧ್ವಾಚಾರ್ಯರ, ತಾದೃಕ್ ಪರಮಂ ಪಾಂಡಿತ್ಯಂ = ಅಂತಹ ಉತ್ತಮವಾದ ಶಾಸ್ತ್ರಗಳ ವಿಶೇಷಜ್ಞಾನವನ್ನು, ಅವೇಕ್ಷ್ಯ = ನೋಡಿ, ಸಂಘ(ರ್ಷ)ಷ್ಟಾತ್ = ವಾದವಿವಾದಗಳಿಂದ, ಕ್ಷುಭಿತಮನಾಃ = ಕಲಕಿದ (ಗಲಿಬಿಲಿಗೊಂಡ) ಮನಸ್ಸುಳ್ಳ, ವಿಪಕ್ಷಸಂಘಃ = ಪ್ರತಿವಾದಿಗಳ ಗುಂಪು, ಅಯಂ ಅರ್ಥಃ ನ ಸ್ಯಾತ್ = ಈ ಅರ್ಥವು ಆಗಲಾರದು, ಇತಿ ವರ್ಣಯನ್ = ಎಂದು ಹೇಳುತ್ತಾ, ಅಥ = ಹಾಗಾದರೆ, 'ತ್ವಂ ತಂ ಬ್ರೂಹಿ' = '(ಪ್ರತಿಪಕ್ಷಿಗಳ ಸಮೂಹವೇ) ನೀನು ಆ ಅರ್ಥವನ್ನು ಹೇಳು', ಇತಿ ಉರುಮತಿನಾ ಈರಿತಃ ಸನ್ = ಹೀಗೆಂದು ಶ್ರೀಪೂರ್ಣಪ್ರಜ್ಞರಿಂದ ಹೇಳಲ್ಪಟ್ಟದ್ದಾಗಿ, ದ್ರಾಕ್ ಅದ್ರವತ್ = ಬೇಗನೆ ಓಡಿತು.

ಆ ಪ್ರತಿವಾದಿಗಳು ಶ್ರೀಮಧ್ವಾಚಾರ್ಯರ ಅಂತಹ ಪಾಂಡಿತ್ಯವನ್ನು ನೋಡಿದರು ಹೀಗಿದ್ದರೂ ವಾದವಿವಾದಗಳ ಒತ್ತಡದಿಂದ ಅವರ ಮನಸ್ಸು ವಿಕ್ಷಿಪ್ತವಾಗಿತ್ತು. ಆದುದರಿಂದ ಅವರು 'ಆಚಾರ್ಯರೇ! ನೀವು ಹೇಳಿದ ಅರ್ಥವು ಸರಿಯಲ್ಲ' ಎಂದು ಹೇಳಿದರು. ಆಗ ಆಚಾರ್ಯರು 'ಹಾಗಾದರೆ ನೀವೇ ಅದರ ಸರಿಯಾದ ಅರ್ಥವನ್ನು ಹೇಳಿರಿ' ಎಂದಾಗ ಪ್ರತಿವಾದಿಗಳ ಗುಂಪು ಅಲ್ಲಿ ನಿಲ್ಲದೆ ಓಡಿಹೋಯಿತು.

ಸಂಘರ್ಷೇಣ ಕ್ಷುಭಿತಂ ಮನಃ ಯಸ್ಯ ಸಃ, ವಿಪಕ್ಷಾಣಾಂ ಸಂಘಃ, ಉರುಃ ಮತಿಃ ಯಸ್ಯ ಸಃ.

ಬ್ರೂಹಿ ಬ್ರೂತಾತ್, ಬ್ರೂತಂ ಬ್ರೂತ; ಬ್ರೂಞ್ ವ್ಯಕ್ತಾಯಾಂ ವಾಚಿ ಲೋಟ್ ಮ. ಪು. ಏಕವಚನ. ಅದ್ರವತ್ ಅದ್ರವತಾಂ ಅದ್ರವನ್, ದ್ರು ಗತೌ ಪರ. ಲಙ್.

ತಿರುಗಿ ಆ ಜನರು ಬಂದು ಪ್ರಶ್ನಿಸಿದರು, ಆಚಾರ್ಯರು– 'ಕರ್ಮ ನಿರ್ಣಯ'ಗ್ರಂಥವನ್ನು ರಚಿಸಿದರು—

ಸೋಽಪೃಚ್ಛತ್ತಮಥ ಮಹಾಹ್ವಯೋಪಸರ್ಗಾ
ಯತ್ರೋಕ್ತಾ ಮನುಚರಣೋಪಸೃಜ್ಯರೂಪಾಃ ।
ತಸ್ಯಾರ್ಥಂ ವಚನಚಯಸ್ಯ ತಂ ಬ್ರುವಾಣಃ
ಸ್ಥೈರ್ಯಾರ್ಥಂ ಸಪದಿ ಸ ಲೇಖಯಾಂಬಭೂವ ॥ ೪೫ ॥

Rarest Archiver

ಅಥ ಸಃ ತಂ ಅರ್ಥಂ ಅಪೃಚ್ಛತ್–ಯತ್ರ ಮಹಾಹ್ವಯೋಪಸರ್ಗಾಃ ಮನುಚರಣೋಪಸೃಜ್ಯರೂಪಾಃ ಉಕ್ತಾಃ, ಸಃ ತಸ್ಯ ವಚನಚಯಸ್ಯ ತಂ ಅರ್ಥಂ ಬ್ರುವಾಣಃ (ಸನ್) ಸ್ಥೈರ್ಯಾರ್ಥಂ ಸಪದಿ ಲೇಖಯಾಂಬಭೂವ.

ಅಥ ಸಃ=ಅನಂತರ ಆ ಪ್ರತಿವಾದಿಗಳ ಗುಂಪು, ತಂ=ಆ ಮಧ್ವಾಚಾರ್ಯರನ್ನು ಕುರಿತು, ಅಪೃಚ್ಛತ್ = ಕೇಳಿತು. ತಂ ಅರ್ಥಂ = ಆ ಮಂತ್ರಖಂಡದ ಅರ್ಥವನ್ನು, ಯತ್ರ=ಯಾವ ಬ್ರಾಹ್ಮಣಮಂತ್ರಭಾಗದಲ್ಲಿ, ಮಹಾಹ್ವಯೋಪಸರ್ಗಾಃ = ಮಹಾನಾಮ್ನೀ ಎಂಬ ಹೆಸರುಳ್ಳ ವಿದಾ ಮಘವನ್ ಇತ್ಯಾದಿ ಋಕ್ಕುಗಳ ಐದು ಅವಯವಗಳು, ಮನು-ಚರಣೋಪಸೃಜ್ಯರೂಪಾಃ=ಮಂತ್ರಗಳ ಪಾದಗಳೊಡನೆ ಸೇರಿಸತಕ್ಕ ರೂಪವುಳ್ಳವುಗಳಾಗಿ, ಉಕ್ತಾಃ = ಹೇಳಲ್ಪಟ್ಟಿವೆಯೋ; (ಆ ಮಂತ್ರಖಂಡದ ಅರ್ಥವನ್ನು ಕೇಳಿತು.) ಸಃ=ಆ ಮಧ್ವಾಚಾರ್ಯರು, ತಸ್ಯ ವಚನ-ಚಯಸ್ಯ=ಆ ಮಹಾನಾಮ್ನೀಋಕ್ಕುಗಳ ಸಮುದಾಯದ, ತಂ ಅರ್ಥಂ ಬ್ರುವಾಣಃ ಸನ್=ಆ ಅರ್ಥವನ್ನು ಹೇಳುವವರಾಗಿ, ಸ್ಥೈರ್ಯಾರ್ಥಂ= ಶಾಶ್ವತವಾಗಿ ಲೋಕದಲ್ಲಿ ನಿಲ್ಲುವುದಕ್ಕಾಗಿ, ಸಪದಿ ಲೇಖಯಾಂಬಭೂವ =ಕೂಡಲೇ ಬರೆಸಿದರು.

(ಆ ಮಹಾನಾಮ್ನೀ ಎಂಬ ಋಕ್ಕುಗಳಿಗೆ ಪ್ರಚೇತನ, ಪ್ರಚೇತಯ, ಆಯಾಹಿ ಪಿಬ ಮತ್ಸ್ವ, ಕ್ರತುಚ್ಛಂದ ಋತಂ ಬೃಹತ್, ಸುಮ್ನ ಆಧೇಹಿ ನೋ ವಸೋ' ಎಂದು ಐದು ಅವಯವಗಳು. ಉಪಸೃಜ್ಯ ಎಂದರೆ ಸೇರಿಸಬೇಕಾದ ಭಾಗಗಳು ಹೇಳಲ್ಪಟ್ಟಿವೆ). ಆ ಪ್ರತಿವಾದಿಗಳು ತಿರುಗಿ ಬಂದು ಆ ಮಹಾನಾಮ್ನಿ ಮಂತ್ರಭಾಗದ ಜೋಡಣೆ ಮತ್ತು ಅರ್ಥವನ್ನು ಕೇಳಿದರು. ಹಿಂದೆ ಹೇಳಿದ ಆ ಉಪಸರ್ಗಗಳನ್ನು ಮಂತ್ರಗಳಿಗೆ ಸೇರಿಸಿದರೆ ಆಗುವ ರೂಪಗಳು ಇವು – ೧) ಅಧತ್ತಾನ್ಯಂ ಜಠರೇ ಪ್ರೇಮರಿಚ್ಯತ ಪ್ರಚೇತನ, ೨) ಧಾತಾ ರಾಧಸ್ತುವತೇ ಕಾಮ್ಯಂ ವಸು–ಪ್ರಚೇತಯ, ೩) ಅಸ್ಮಾಕಂ ಬೋಧಿಚೋದಿತಾ ಆಯಾಹಿ ಪಿಬ ಮತ್ಸ್ವ, ೪) ತಂ ತ್ವಾ ಪರಿಷ್ವಜಾಮಹೇ–ಕ್ರತುಛಂದ ಋತಂ ಬೃಹತ್ ೫) ಯಾ ತೇ ರಾತಿರ್ದದಿರ್ವಸು–ಸುಮ್ನ ಆಧೇಹಿ ನೋ ವಸೋ. ಶ್ರೀಮಧ್ವಾಚಾರ್ಯರು

Rarest Archiver

ಹೀಗೆ ಸೇರಿಸಬೇಕೆಂದು ತಿಳಿಸಿ ಆ ಮಹಾನಾಮ್ನೀಋಕ್ಕುಗಳ ಅರ್ಥವನ್ನು ಹೇಳಿ ಲೋಕದಲ್ಲಿ ಇದು ಸ್ಥಿರವಾಗಿ ಇರುವುದಕ್ಕಾಗಿ ಕರ್ಮನಿರ್ಣಯ ಎಂಬ ಗ್ರಂಥವನ್ನು ತಾನು ಬಾಯಿಯಿಂದ ಹೇಳುತ್ತಾ ಶಿಷ್ಯರಿಂದ ಕೂಡಲೇ ಬರೆಸಿದರು.

ಮಹಾನ್ ಆಹ್ವಯಃ ಯಾಸು ತಾಃ ಮಹಾಹ್ವಯಾಃ, ಮಹಾಹ್ವಯಾನಾಂ ಉಪಸರ್ಗಾಃ, ಮನೂನಾಂ ಚರಣಾಃ, ಮನುಚರಣೈಃ ಉಪಸೃಜ್ಯಂ ರೂಪಂ ಯಾಸಾಂ ತಾಃ; ವಚನಸ್ಯ ಚಯಃ ತಸ್ಯ, ಸ್ಥಿರಸ್ಯ ಭಾವಃ ಸ್ಥೈರ್ಯಂ, ಸ್ಥೈರ್ಯಾಯ ಇತಿ ಸ್ಥೈರ್ಯಾರ್ಥಂ;

ಲೇಖಯಾಂ – ಬಭೂವ – ಬಭೂವತುಃ – ಬಭೂವುಃ – ಲಿಖ ಅಕ್ಷರವಿನ್ಯಾಸೇ ಣಿಜಂತ ಲಿಟ್.

ಇಂತಹ ಸಂದರ್ಭಗಳಲ್ಲಿ ಜನರು ಆಚಾರ್ಯರನ್ನು ಅಸೂಯೆಯಿಂದ ವ್ಯರ್ಥವಾಗಿ ನಿಂದಿಸಿದ್ದರಿಂದ ಆಚಾರ್ಯರಿಗೇನೂ ಹಾನಿಯಿಲ್ಲ—

ಸಂಪೂರ್ಣಂ ಶಶಿನಮಿವೋದಿತಂ ಕೃಶಃ ಶ್ವಾ
ಚುಕ್ಷೋಭಾಶುಭನಿಕರೋ ನಿರೀಕ್ಷ್ಯ ಮಧ್ವಂ ।
ಪ್ರತ್ಯರ್ಥೀ ಸ್ವಯಮಿತಿ ದೂರವೋ(ದೂರತೋ)ಽಭಿಧಾವನ್
ಕಿಂ ತೇನ ಕ್ಷತಮಮೃತಾಕರಸ್ಯ ತಸ್ಯ ॥ ೪೬ ॥

ಅಶುಭನಿಕರಃ ಮಧ್ವಂ ನಿರೀಕ್ಷ್ಯ ಸಂಪೂರ್ಣಂ ಉದಿತಂ ಶಶಿನಂ (ನಿರೀಕ್ಷ್ಯ) ಸ್ವಯಂ ಪ್ರತ್ಯರ್ಥೀ ಇತಿ ದೂರವಃ (ತಃ) ಅಭಿಧಾವನ್ ಕೃಶಃ ಶ್ವಾ ಇವ ಚುಕ್ಷೋಭ. ಅಮೃತಾಕರಸ್ಯ ತಸ್ಯ ತೇನ ಕಿಂ ಕ್ಷತಂ ?.

ಅಶುಭನಿಕರಃ = ದುರ್ಜನರ ಸಮೂಹವು, ಮಧ್ವಂ ನಿರೀಕ್ಷ್ಯ = ಶ್ರೀಮಧ್ವರನ್ನು ನೋಡಿ, ಸಂಪೂರ್ಣಂ ಉದಿತಂ ಶಶಿನಂ (ನಿರೀಕ್ಷ್ಯ) = ಹದಿನಾರು ಕಲೆಗಳಿಂದ ಪೂರ್ಣನಾದ ಉದಯಿಸಿದ ಚಂದ್ರನನ್ನು ನೋಡಿ, ಸ್ವಯಂ ಪ್ರತ್ಯರ್ಥೀ ಇತಿ = ತಾನೇ ಶತ್ರುವೆಂದು, ದೂರವಃ (ತಃ) = ಕೆಟ್ಟ ಶಬ್ದವುಳ್ಳದ್ದಾಗಿ, (ದೂರದಿಂದ), ಅಭಿಧಾವನ್ = ಎದುರಾಗಿ ಓಡುತ್ತಿರುವ, ಕೃಶಃ = ಬಲಹೀನವಾದ, ಶ್ವಾ ಇವ = ನಾಯಿಯಂತೆ, ಚುಕ್ಷೋಭ =

Rarest Archiver

ವ್ಯಥೆಗೊಂಡಿತು. ಅಮೃತಾಕರಸ್ಯ = ಮೋಕ್ಷವನ್ನೀಯುವ, ಅಮೃತಕ್ಕೆ ಆಶ್ರಯನಾದ, ತಸ್ಯ= ಆ ಮಧ್ವಾಚಾರ್ಯರಿಗೆ, ಚಂದ್ರನಿಗೆ, ತೇನ= ಆ ದುಷ್ಟರ ಗುಂಪಿನಿಂದ, (ದುಷ್ಟರ ಗದ್ದಲದಿಂದ), ಕಿಂ ಕ್ಷತಂ = ಏನು ಹಾನಿಯು ?

ಆ ಮಧ್ವಾಚಾರ್ಯರನ್ನು ನೋಡಿ ಅಮಂಗಳಸ್ವರೂಪರಾದ ದುಷ್ಟ ಜನರು ತಾವು ಅವರ ಪ್ರತಿವಾದಿಗಳೆಂದು ಎದುರಾಗಿ ಬಂದು ಕೂಗುತ್ತಾ ಗದ್ದಲಮಾಡಿ ಸೋತು ವ್ಯಥೆಪಟ್ಟರು. ಆಕಾಶದಲ್ಲಿ ಹುಣ್ಣಿಮೆಯದಿನ ಷೋಡಶಕಲಾಪರಿಪೂರ್ಣನಾದ ಚಂದ್ರನು ಉದಯಿಸಿ ಮೇಲಕ್ಕೆ ಬರುತ್ತಿರು ವುದನ್ನು ನೋಡಿ ದುರ್ಬಲವಾದ ನಾಯಿಯು ತಾನೇ ಆ ಚಂದ್ರನಿಗೆ ಪ್ರತಿಭಟನೆಂದು ಭಾವಿಸಿ ಕೂಗುತ್ತಾ ಎದುರಾಗಿ ಬಂದು ಕೆಟ್ಟಧ್ವನಿಯಿಂದ ಬೊಗಳಿ ದೂರಕ್ಕೆ ಓಡಿಹೋಗುತ್ತದೆ. ಅದರಂತೆ ಆ ಜನರು ತಾವೇ ಗದ್ದಲ ಮಾಡಿ ಕೂಗಿಕೊಂಡರು. ಚಂದ್ರನಿಗೆ ನಾಯಿಯ ಕೂಗಿನಿಂದ ಏನೂ ಹಾನಿಯಿಲ್ಲ. ದುರ್ಜನರ ನಿಂದೆಯಿಂದ ಮೋಕ್ಷಕ್ಕೆ ಖನಿಯಾದ, ಮೋಕ್ಷ ಪ್ರದರಾದ ಮಧ್ವಾಚಾರ್ಯರಿಗೆ ಯಾವ ಹಾನಿಯೂ ಆಗಲಿಲ್ಲ. ಆದರೆ ಆ ದುರ್ಜನರಿಗೆ ಮಹಾತ್ಮರ ತಿರಸ್ಕಾರದಿಂದ ಹಾನಿಯುಂಟಾಯಿತು.

ನ ಶುಭಾಃ ಅಶುಭಾಃ, ಅಶುಭಾನಾಂ ನಿಕರಃ, ದುಷ್ಟಃ ರವಃ ಯಸ್ಯ ಸಃ ದೂರವಃ (ದುರ್ + ರವ ಎಂದಿರುವಾಗ 'ರೋರಿ' 8-3-14 ಎಂಬ ಸೂತ್ರದಿಂದ ರೇಫಲೋಪ, 'ಢ್ರಲೋಪೇ....' ಪೂರ್ವಸ್ಯ ದೀರ್ಘೋಽಣಃ 6-3-111 ಎಂಬ ಸೂತ್ರದಿಂದ ದೀರ್ಘ.)

ಚುಕ್ಷೋಭ ಚುಕ್ಷುಭತುಃ ಚುಕ್ಷುಭುಃ. ಕ್ಷುಭ ಸಂಚಲನೇ ಲಿಟ್.

ಬಡವರನ್ನೂ ಶ್ರೀಮಂತರನ್ನೂ ಆಚಾರ್ಯರು ಯಥಾಯೋಗ್ಯವಾಗಿ ಅನುಗ್ರಹಿಸಿದರು —

ನಿಃಸ್ವಾನಾಂ ಕತಿಪಯಭುಕ್ತಿಯುಕ್ತಭಕ್ತಂ
ಭಕ್ತಾನಾಂ ವ್ಯಥಿತ ಚಿತಾಂಗುರ್ಣಾಂ ದಯಾಲುಃ ।
ಭುಂಕ್ತೇ ಸ್ಮ ತ್ರಿದಶನರೋಪಭೋಜ್ಯಮನ್ನಂ
ಸಂಪ್ರೀತ್ಯೈ ಸ ಧನವತಾಂ ಬೃಹತ್ಪ್ರಬೋಧಃ ॥ ೪೭ ॥

Rarest Archive

(i) Jesus Christ is said to have performed a similar miracle. See New Testament

ಹದಿನಾರನೇಸರ್ಗ

ದಯಾಲು ಸಃ ಬೃಹತ್ಪ್ರಬೋಧಃ ನಿಃಸ್ವಾನಾಂ ಭಕ್ತಾನಾಂ ಕತಿಪಯಭುಕ್ತಿಯುಕ್ತಭಕ್ತಂ ಚತುರ್ಗುಣಂ ವ್ಯಧಿತ. ಧನವತಾಂ ಸಂಪ್ರೀತ್ಯೈ ತ್ರಿದಶನರೋಪಭೋಜ್ಯಂ ಅನ್ನಂ ಭುಂಕ್ತೇ ಸ್ಮ

ದಯಾಲುಃ ಸಃ ಬೃಹತ್ಪ್ರಬೋಧಃ = ಕರುಣಾಶಾಲಿಗಳಾದ ಆ ಪೂರ್ಣಪ್ರಜ್ಞಾಚಾರ್ಯರು, ನಿಃಸ್ವಾನಾಂ ಭಕ್ತಾನಾಂ = ಬಡವರಾದ ಭಕ್ತರ, ಕತಿಪಯಭುಕ್ತಿಯುಕ್ತಭಕ್ತಂ = ಕೆಲವರ ಭೋಜನಕ್ಕೆ ಸಾಕಾಗುವ ಅನ್ನವನ್ನು, ಚತುರ್ಗುಣಂ ವ್ಯಧಿತ = ನಾಲ್ಕುಡಿಯಾಗಿ ಮಾಡಿದರು. ಧನವತಾಂ (i) ಸಂಪ್ರೀತ್ಯೈ = ಶ್ರೀಮಂತರ ಸಂತೋಷಕ್ಕಾಗಿ ತ್ರಿದಶನರೋಪಭೋಜ್ಯಂ ಅನ್ನಂ-ಮೂವತ್ತು ಮನುಷ್ಯರಿಗೆ ಊಟಮಾಡಲು ಸಾಕಾಗುವ ಅನ್ನವನ್ನು, ಭುಂಕ್ತೇ ಸ್ಮ = ಭೋಜನಮಾಡುತ್ತಿದ್ದರು.

ದಯಾಳುಗಳಾದ ಶ್ರೀಮಧ್ವಾಚಾರ್ಯರು ಬಡವರಾದ ಭಕ್ತಜನರ ಮನೆಯಲ್ಲಿ ಸಿದ್ಧಪಡಿಸಿದ ಸ್ವಲ್ಪಜನರಿಗೆ ಮಾತ್ರವೇ ಊಟಕ್ಕೆ ಸಾಕಾಗುವ ಅನ್ನವನ್ನು ಒಂದನ್ನು ನಾಲ್ಕುಡಿಯಾಗಿ ಮಾಡುತ್ತಿದ್ದರು. (ಐದು ಜನರಿಗೆ ಸಾಕಾಗುವ ಅನ್ನವನ್ನು ಇಪ್ಪತ್ತು ಜನರಿಗೆ ಸಾಕಾಗುವಷ್ಟು ಮಾಡುತ್ತಿದ್ದರು). ಹಾಗೆಯೇ ಶ್ರೀಮಂತರ ಮನೆಗಳಲ್ಲಿ ಮೂವತ್ತು ಜನರಿಗೆ ಸಾಕಾಗುವ ಅನ್ನವನ್ನು ತಾವೊಬ್ಬರೇ ಭೋಜನಮಾಡುತ್ತಿದ್ದರು. ಹೀಗೆ ಬಡವರನ್ನೂ ಶ್ರೀಮಂತರನ್ನೂ ಸಂತೋಷಪಡಿಸುತ್ತಿದ್ದರು.

ನಿರ್ಗತಂ ಸ್ವಂ ಯೇಭ್ಯಃ ತೇ ತೇಷಾಂ, ಕತಿಪಯಾನಾಂ ಭುಕ್ತಿಃ, ಕತಿಪಯಭುಕ್ತ್ಯೈ ಯುಕ್ತಂ, ತಚ್ಚ ತತ್ ಭಕ್ತಂ ಚ, ಚತ್ವಾರಃ ಗುಣಾಃ ಯಸ್ಯ ತತ್. ತ್ರಿಗುಣಿತಾಃ ದಶ ತ್ರಿದಶ (ತ್ರಿಂಶತ್ = ಮೂವತ್ತು). ತ್ರಿದಶ ಚ ತೇ ನರಾಶ್ಚ, ತ್ರಿದಶನರೈಃ ಉಪಭೋಜ್ಯಂ ತತ್, ಧನಂ ಏಷಾಂ ಅಸ್ತೀತಿ ಧನವಂತಃ ತೇಷಾಂ.

ಭುಂಕ್ತೇ ಭುಂಜಾತೇ ಭುಂಜತೇ, ಭುಂಕ್ಷೇ ಭುಂಜಾಥೇ ಭುಂಗ್ಧ್ವೇ, ಭುಂಜೇ ಭುಂಜ್ವಹೇ ಭುಂಜ್ಮಹೇ. ಭುಜ-ಪಾಲನಾಭ್ಯವಹಾರಯೋಃ, ಲಟ್ 'ಭುಜೋಽನವನೇ' 1-3-66 ಈ ಸೂತ್ರದಿಂದ ಆತ್ಮನೇಪದ. 'ಲಟ್

Rarest Archiver

ಸ್ಮೇ' (3-2-118) ಎಂಬ ಸೂತ್ರದಿಂದ ಸ್ಮಶಬ್ದ ಯೋಗವಿದ್ದಾಗ ಭೂತ ಕಾಲದ ಅರ್ಥ.

ಹೀಗೆ ಆಚಾರ್ಯರ ಶಿಷ್ಯರು ಮಧ್ವಮಹಿಮೋಪನ್ಯಾಸವನ್ನು ಮುಗಿಸುತ್ತಾರೆ—

ವೃಷ್ಟ್ಯಾದೇಃ ಸ ನಿಯಮನಾದಿ ಚಕ್ರೇ ಏತ-
ಚ್ಚಿತ್ರಂ ಕಿಂ ಭುವನನಿಯಾಮಕೇ ಸಮೀರೇ ।
ಅಪ್ಯೇವಂ ಭುವನಗುರೋಃ ಕೃತಾನುವಾದಃ
ಕೃತ್ಯೇಷು ಪ್ರವರ ಇತೀಹ ವರ್ಣಯಾಮಃ ॥ ೪೮ ॥

ಸಃ ವೃಷ್ಟ್ಯಾದೇಃ ನಿಯಮನಾದಿ ಚಕ್ರೇ. ಏತತ್ ಭುವನನಿಯಾಮಕೇ ಸಮೀರೇ ಕಿಂ ಚಿತ್ರಂ ? ಏವಮಪಿ, ಭುವನಗುರೋಃ ಕೃತಾನುವಾದಃ ಕೃತ್ಯೇಷು ಪ್ರವರಃ ಇತಿ ಇಹ ವರ್ಣಯಾಮಃ.

ಸಃ = ಆ ಮಧ್ವಾಚಾರ್ಯರು, ವೃಷ್ಟ್ಯಾದೇಃ = ಮಳೆ ಮೊದಲಾದವುಗಳ, ನಿಯಮನಾದಿ = ತಡೆಯುವುದು ಇತ್ಯಾದಿಯನ್ನು, ಚಕ್ರೇ = ಮಾಡಿದರು. ಏತತ್ = ಇದು, ಭುವನನಿಯಾಮಕೇ ಸಮೀರೇ = ಸಕಲ ಲೋಕಗಳನ್ನೂ ಪ್ರೇರಿಸುವ ಮುಖ್ಯಪ್ರಾಣರೂಪರಾದ ಶ್ರೀಮಧ್ವಾಚಾರ್ಯರಲ್ಲಿ, ಕಿಂ ಚಿತ್ರಂ = ಏನು ಆಶ್ಚರ್ಯ ? ಏವಮಪಿ = ಹೀಗಿದ್ದರೂ, ಭುವನಗುರೋಃ = ಸಮಸ್ತಲೋಕಗಳ ಗುರುಗಳಾದ ಶ್ರೀಮಧ್ವಾಚಾರ್ಯರ, ಕೃತ = ಚರಿತ್ರೆಗಳ, ಅನುವಾದಃ = ಕಥನವು, ಕೃತ್ಯೇಷು ಪ್ರವರಃ ಇತಿ = ಕಾರ್ಯಗಳಲ್ಲಿ ಶ್ರೇಷ್ಠವೆಂದು, ಇಹ ವರ್ಣಯಾಮಃ = ಇಲ್ಲಿ ವರ್ಣಿಸುತ್ತೇವೆ.

ಆಚಾರ್ಯರು ಬತ್ತಿದ ಕೆರೆಯು ಮಾತ್ರ ತುಂಬುವಷ್ಟು ಮಳೆ ಬರಿಸಿದರು. ಕೊಲ್ಲಲು ಬಂದ ಶೂದ್ರರಾಜನ ಬುದ್ಧಿಯನ್ನು ಬದಲಾಯಿಸಿದರು. ಅನ್ನವನ್ನು ವೃದ್ಧಿಗೊಳಿಸಿದರು, ತಾವೊಬ್ಬರೇ ಬಹಳ ಜನರಿಗೆ ಬೇಕಾಗುವ ಅನ್ನವನ್ನು ಭೋಜನಮಾಡಿದರು. ಈ ಚರಿತ್ರೆಗಳೆಲ್ಲ ಲೋಕನಿಯಾಮಕರಾದ ಮುಖ್ಯಪ್ರಾಣದೇವರ ಸಾಕ್ಷಾತ್ ಅವತಾರರಾದ ಆಚಾರ್ಯರಲ್ಲಿ ಸ್ವಲ್ಪವೂ ಆಶ್ಚರ್ಯಕರಗಳಲ್ಲ. ಆದರೂ ಈ ತ್ರೈಲೋಕ್ಯಾಚಾರ್ಯರ ಚರಿತ್ರೆಯನ್ನು ಹೇಳುವುದು ಇತರ ಎಲ್ಲಾ ಕಾರ್ಯಗಳಿಗಿಂತಲೂ ಶ್ರೇಷ್ಠವಾದುದೆಂದು

Rarest Archiver

ಇಲ್ಲಿ ನಾವು ಸ್ವಲ್ಪಮಟ್ಟಿಗೆ ವರ್ಣಿಸುತ್ತಿದ್ದೇವೆ. ಭಕ್ತರಿಗೆ ಹರಿಗುರುಸ್ತೋತ್ರಕ್ಕಿಂತ ಮುಖ್ಯವಾದ ಕಾರ್ಯವು ಮತ್ತಾವುದೂ ಇಲ್ಲ.

ವೃಷ್ಟಿಃ ಆದಿಃ ಯಸ್ಯ ಸಃ ತಸ್ಯ; ನಿಯಮನಂ ಆದಿ ಯಸ್ಯ ತತ್, ತತ್; ಭುವನಾನಾಂ ನಿಯಾಮಕಃ ತಸ್ಮಿನ್, ಭುವನಾನಾಂ ಗುರುಃ ತಸ್ಯ, ಕೃತಾನಾಂ ಅನುವಾದಃ.

ಭೂಲೋಕದಲ್ಲಿ ಆಚಾರ್ಯರ ಶಿಷ್ಯರು ಮಾತ್ರವೇ ಅಲ್ಲ, ದೇವಲೋಕದಲ್ಲಿ ದೇವಗಂಧರ್ವಾದಿಗಳೂ ಆಚಾರ್ಯರ ಚರಿತ್ರೆಯನ್ನು ಹಾಡಿ ಹೊಗಳಿದರು —

ಇತ್ಯೂಚೇ ಧರಣಿಸುರೇಣ ಕೇವಲಂ ನೋ
ಮಾಧ್ವೀಯಂ ವಿವಿಧಕಥಾ ಕಥಾಸು ಮಾನ್ಯಾ ।
ಸಾಕ್ಷಾದಪ್ಯಮರವರ್ಯೈರುದೀರ್ಯಮಾಣಾ
ಗಂಧರ್ವೈರ್ದ್ಯುಸದಸಿ ತನ್ಮುದೇ ಜಗೇऽಸೌ ॥ ೪೯ ॥

ಕಥಾಸು ಮಾನ್ಯಾ ಮಾಧ್ವೀ ಇಯಂ ವಿವಿಧಕಥಾ ಕೇವಲಂ ಧರಣಿಸುರೇಣ ಊಚೇ ಇತಿ ನೋ. ಅಮರವರ್ಯೈಃ ಅಪಿ ಸಾಕ್ಷಾತ್ ಉದೀರ್ಯಮಾಣಾ ಅಸೌ ದ್ಯುಸದಸಿ ತನ್ಮುದೇ ಗಂಧರ್ವೈಃ ಜಗೇ.

ಕಥಾಸು ಮಾನ್ಯಾ = ಶ್ರೇಷ್ಠವಾದ ಚರಿತ್ರೆಗಳಲ್ಲಿ ಪೂಜ್ಯವಾದ, ಮಾಧ್ವೀ ಇಯಂ ವಿವಿಧಕಥಾ = ಮಧ್ವಾಚಾರ್ಯರ ಸಂಬಂಧಿಯಾದ ಈ ನಾನಾವಿಧಕಥೆಯು, ಕೇವಲಂ ಧರಣಿಸುರೇಣ = ಆಚಾರ್ಯರ ಶಿಷ್ಯನಾದ ಬ್ರಾಹ್ಮಣನಿಂದ ಮಾತ್ರ, ಊಚೇ ಇತಿ ನೋ = ಹೇಳಲ್ಪಟ್ಟಿತೆಂದು ಅಲ್ಲ. ಅಮರವರ್ಯೈಃ ಅಪಿ = ದೇವಶ್ರೇಷ್ಠರಿಂದಲೂ, ಸಾಕ್ಷಾತ್ ಉದೀರ್ಯಮಾಣಾ ಅಸೌ = ತಮ್ಮ ಮುಖದಿಂದಲೇ ವರ್ಣಿಸಲ್ಪಡುತ್ತಿರುವ ಈ ಕಥೆಯು, ದ್ಯುಸದಸಿ = ದೇವಲೋಕದ ಸಭೆಯಲ್ಲಿ, ತನ್ಮುದೇ = ಆ ದೇವತೆಗಳ ಸಂತೋಷಕ್ಕಾಗಿ, ಗಂಧರ್ವೈಃ ಜಗೇ = ದೇವಗಾಯಕರಿಂದ ಹಾಡಲ್ಪಟ್ಟಿತು.

ಮಹಾತ್ಮರ ಕಥೆಗಳಲ್ಲಿ ಶ್ರೀಮಧ್ವಾಚಾರ್ಯರ ಈ ಕಥೆಗಳು ವಿಶಿಷ್ಟವಾದ ಸ್ಥಾನವನ್ನು ಪಡೆದಿವೆ. ಈ ನಾನಾವಿಧವಾದ ಚರಿತ್ರೆಗಳನ್ನು ವಿಶೇಷಜ್ಞ

Rarest Archiver

ನಾದ ಈ ಆಚಾರ್ಯರ ಶಿಷ್ಯನೊಬ್ಬನು ಮಾತ್ರವೇ ಪಂಡಿತರ ಸಭೆಯಲ್ಲಿ ವರ್ಣಿಸಿದನೆಂದಲ್ಲ, ದೇವಶ್ರೇಷ್ಠರೂ ಕೂಡ ತಮ್ಮ ಮುಖದಿಂದಲೇ ಆಚಾರ್ಯರ ಚರಿತ್ರೆಗಳನ್ನು ಪದ್ಯಗಳನ್ನು ರಚಿಸಿ ವರ್ಣಿಸಿದರು. ಆಗ ದೇವತೆಗಳ ಸಂತೋಷಕ್ಕಾಗಿ ಗಂಧರ್ವರು ಸಂಗೀತಶಾಸ್ತ್ರಕ್ಕನುಸಾರವಾಗಿ ಆ ಪದ್ಯಗಳ ಗಾನ ಮಾಡಿದರು.

ಧರಣೇಃ ಸುರಃ ತೇನ, ಮಧ್ವಸ್ಯ ಇಯಂ ಮಾಧ್ವೀ, ವಿವಿಧಾ ಚ ಸಾ ಕಥಾ ಚ, ಅಮರಾಃ ಇತಿ ವರಾಃ ತೈಃ. ದಿವಃ ಸದಃ ದ್ಯುಸದಃ ತಸ್ಮಿನ್ 'ದಿವ ಉತ್' (6-1-131). ತೇಷಾಂ ಮುತ್ ತಸ್ಯೈ. ಧರಣಿಸುರೇಣ ಇಯಂ ವಿವಿಧಕಥಾ ಊಚೇ ಇತಿ ನೋ. ಕರ್ಮಣಿ. ಧರಣಿಸುರಃ ಇಮಾಂ ವಿವಿಧಕಥಾಂ ಉವಾಚ ಇತಿ ನೋ. ಕರ್ತರಿ.

ಜಗೇ ಜಗಾತೇ ಜಗಿರೇ ಗೈ-ಶಬ್ದೇ ಕರ್ಮಣಿ ಲಿಟ್. ಅಸೌ ಗಂಧರ್ವೈಃ ಜಗೇ. ಕರ್ಮಣಿ. ಉದೀರ್ಯಮಾಣಾಂ ಅಮೂಂ ಗಂಧರ್ವಾಃ ಜಗುಃ, ಕರ್ತರಿ.

ಆ ಗಂಧರ್ವರು ಹೇಗೆ ಹಾಡಿದರು ?—

ತಾಂ ಪದ್ಯಪ್ರಣಿಗದಿತಾಂ ತು ಮೂರ್ಛಯಿತ್ವಾ
ತಾನಾನಾಮುಚಿತತಯಾತ್ತಪಂಚಮಾದ್ಯಾಃ ।
ಗಾಂಧಾರಂ ದ್ಯುವಿಷಯಮುಜ್ಜ್ವಲಂ ಸೃಜಂತೋ
ಗ್ರಾಮಂ ತೇ ಪ್ರಜಗುರಕಾಕಿಕಮ್ರಕಂಠಾಃ ॥ ೫೦ ॥

ಅಕಾಕಿಕಮ್ರಕಂಠಾಃ ತಾನಾನಾಂ ಉಚಿತತಯಾ ಆತ್ತಪಂಚಮಾದ್ಯಾಃ ದ್ಯುವಿಷಯಂ ಉಜ್ಜ್ವಲಂ ಗಾಂಧಾರಂ ಗ್ರಾಮಂ ಸೃಜಂತಃ ತೇ ಪದ್ಯಪ್ರಣಿಗದಿತಾಂ ತಾಂ ತು ಮೂರ್ಛಯಿತ್ವಾ ಪ್ರಜಗುಃ.

ಅಕಾಕಿಕಮ್ರಕಂಠಾಃ=ಕಾಕಿ ಎಂಬ ಕಂಠದೋಷವಿಲ್ಲದ್ದರಿಂದ ಇಂಪಾದ ಧ್ವನಿಯುಳ್ಳ ಕಂಠದಿಂದ ಕೂಡಿದ, ತಾನಾನಾಂ=ಒಂದುಗಾನದಿಂದ ಮತ್ತೊಂದು ಗಾನವನ್ನು ಸೇರುವಿಕೆಗೆ, ಉಚಿತತಯಾ=ಮಿಶ್ರಮಾಡದೆ ಯೋಗ್ಯರೀತಿಯಿಂದ, ಆತ್ತಪಂಚಮಾದ್ಯಾಃ=ಸ್ವೀಕರಿಸಲ್ಪಟ್ಟ ಪಂಚಮ ಮೊದಲಾದ

Rarest Archiver

ಸ್ವರವುಳ್ಳ, ದ್ಯುವಿಷಯಂ= ದೇವಲೋಕದಲ್ಲಿ ಹಾಡಲು ಯೋಗ್ಯವಾದ, ಉಜ್ಜ್ವಲಂ ಗಾಂಧಾರಂ ಗ್ರಾಮಂ = ಪ್ರಕಾಶಮಾನವಾದ ಎರಡು ಶ್ರುತಿವುಳ್ಳ ಗಾಂಧಾರಧ್ವನಿಯನ್ನು, ಸೃಜಂತಃ= ಉಂಟುಮಾಡುತ್ತಿರುವ, ತೇ= ಆ ಗಂಧರ್ವರು, ಪದ್ಯಪ್ರಣೀಗದಿತಾಂ ತಾಂ ತು= ಶ್ಲೋಕರೂಪದಿಂದ ಹೇಳಲ್ಪಟ್ಟ ಆಚಾರ್ಯರ ಚರಿತ್ರೆಯನ್ನಾದರೋ, ಮೂರ್ಛಯಿತ್ವಾ= ಆಯಾ ಸ್ವರವಿಕಾಸಗಳ ಆದಿಯನ್ನು ತಿಳಿಸಿ, ಪ್ರಜಗುಃ= ಹಾಡಿದರು.

ಆ ಗಂಧರ್ವರು ದೇವತೆಗಳು ರಚಿಸಿದ ಆಚಾರ್ಯರ ಚರಿತ್ರೆಯ ಪದ್ಯಗಳನ್ನು, ದೇವಸಭೆಯಲ್ಲಿ ರಾಗಾಲಾಪನೆಯೊಡನೆ ಸುಶ್ರಾವ್ಯವಾಗಿ ಹಾಡಿದರು. ಅವರ ಕಂಠದಲ್ಲಿ ಕಾಕಿ ಎಂಬ ಕಂಠದೋಷವಿಲ್ಲದ್ದರಿಂದ ಧ್ವನಿಯು ಇಂಪಾಗಿ ಸುಶ್ರಾವ್ಯವಾಗಿತ್ತು. ಅವರು ಒಂದು ಗೀತವನ್ನು ಹಾಡಿ ಮತ್ತೊಂದು ಗೀತವನ್ನು ಹಾಡುವಾಗ ಪಂಚಮಾದಿಸ್ವರಗಳನ್ನು ಮಿಶ್ರವಾಗದಂತೆ ಯೋಗ್ಯರೀತಿಯಿಂದ ಬದಲಾಯಿಸಿ ಹಾಡುತ್ತಿದ್ದರು. ದೇವಲೋಕದಲ್ಲಿ ಹಾಡಲು ಯೋಗ್ಯವಾದ ಎರಡು ಶ್ರುತಿಯುಳ್ಳ ಗಾಂಧಾರರಾಗವನ್ನು ಅತ್ಯಂತಸ್ಪಷ್ಟವಾಗಿ ಪ್ರಕಟಿಸುತ್ತಿದ್ದರು.

ಕಾಕಿ ತುಂಬುರು ಎಂದು ಎರಡು ಕಂಠದೋಷಗಳು. ಸಪ್ತಸ್ವರ= ನಿಷಾದ, ಋಷಭ, ಗಾಂಧಾರ, ಷಡ್ಜ, ಮಧ್ಯಮ, ಧೈವತ, ಪಂಚಮ ಎಂದು ಏಳು ಸ್ವರಗಳು. ನಿರಿಗಸಮಧಪ (ಸರಿಗಮಪದನಿ) ಎಂದು ಅವುಗಳ ಸಂಕೇತಗಳು, ತ್ರಯಃ ಗ್ರಾಮಾಃ = ಷಡ್ಜಗ್ರಾಮ, ಮಧ್ಯಮಗ್ರಾಮ, ಗಾಂಧಾರಗ್ರಾಮ, ಎಂದು ಗ್ರಾಮಗಳು (ಶ್ರುತಿಸಮೂಹಗಳು) ಮೂರು. ತ್ರಯೋವಿಂಶತಿ ಮೂರ್ಛನಾಃ= ೨೧ ಮೂರ್ಛನೆಗಳೆಂಬ ಆಲಾಪವಿಶೇಷಗಳು. ತಾನಾನಿ ಏಕೋನಪಂಚಾಶತ್ ಏತದ್ಗಾನಸ್ಯ ಲಕ್ಷಣಂ = ನಲ್ವತ್ತೊಂಭತ್ತು ತಾನಗಳು, ಇದು ಗಾನದ ಲಕ್ಷಣವು. ಮೂರುಗ್ರಾಮಗಳಲ್ಲಿ ಗಾಂಧಾರಗ್ರಾಮವನ್ನು ದೇವಲೋಕದಲ್ಲಿ ದೇವತೆಗಳು ಮಾತ್ರ ಹಾಡುತ್ತಾರೆ. ಮೂರ್ಛನೆ= ಸ್ವರವಿಕಾಸಗಳ ಪ್ರಥಮಾವಸ್ಥೆ (ಸ್ವರವನ್ನು ಆರಂಭಿಸುವುದು) ತಾನ = ಒಂದು ಗಾನದಿಂದ ಮತ್ತೊಂದು ಗಾನಕ್ಕೆ ಆರಂಭ. ಸಪ್ತಸ್ವರಗಳಲ್ಲಿ ನಿಷಾದ ಗಾಂಧಾರಸ್ವರಗಳಿಗೆ ಎರಡೆರಡು ಶ್ರುತಿ

Rarest Archiver

ಗಳು, ಧೈವತ ಋಷಭಗಳಿಗೆ ಮೂರು ಮೂರು ಶ್ರುತಿಗಳು. ಷಡ್ಜ, ಪಂಚಮ ಮಧ್ಯಮಗಳಿಗೆ ನಾಲ್ಕು ನಾಲ್ಕು ಶ್ರುತಿಗಳು.

ಷಡ್ಯೇಷು ಪ್ರಣಿಗದಿತಾ ತಾಂ, ಪಂಚಮಃ ಆದ್ಯಃ ಯೇಷಾಂ ತೇ, ಆತ್ತಾಃ ಪಂಚಮಾದ್ಯಾಃ ಯೈಃ ತೇ, ದಿವಃ ವಿಷಯಃ ದ್ಯುವಿಷಯಃ ತಂ, ನ ವಿದ್ಯತೇ ಕಾಕಿಃ ಯಸ್ಯ ಸಃ, ಅಕಾಕಿಃ ಕಮ್ರಃ ಕಂಠಃ ಯೇಷಾಂ ತೇ;

ಪ್ರ+ಜಗುಃ, ಜಗೌ ಜಗತುಃ ಜಗುಃ, ಗೈ ಶಬ್ದೇ ಪರ. ಲಿಟ್.

ಗಂಧರ್ವರ ಗಾನವನ್ನು ದೇವಶ್ರೇಷ್ಠರು ತುಂಬಾ ಶ್ರದ್ಧೆಯಿಂದ ಕೇಳಿದರು—

ಆನಮ್ರೈಃ ಸುಮುಕುಟಮೌಲಿಭಿಃ ಕರಾಗ್ರೈ-
ರಾತಾಮ್ರೈಃ ಪ್ರತಿಕಲಿತೈಃ ಸ್ಮಿತೈರ್ಮುಖಾಬ್ಜೈಃ ।
ಆಶ್ರಾವಿ ಸ್ಥಿರತರಭಕ್ತಿಭಿಃ ಸುರೇಂದ್ರೈ
ಸ್ತದ್ಗೀತಾ ದಶಧಿಷಣಾರ್ಯವರ್ಯಚರ್ಯಾ ॥ ೫೧ ॥

ಸ್ಥಿರತರಭಕ್ತಿಭಿಃ ಆನಮ್ರೈಃ ಸುಮ(ಮು)ಕುಟಮೌಲಿಭಿಃ ಪ್ರತಿಕಲಿತೈಃ ಆತಾಮ್ರೈಃ ಕರಾಗ್ರೈಃ ಸ್ಮಿತೈಃ ಮುಖಾಬ್ಜೈಃ ಸುರೇಂದ್ರೈಃ ತದ್ಗೀತಾ ದಶ-ಧಿಷಣಾರ್ಯವರ್ಯಚರ್ಯಾ ಆಶ್ರಾವಿ.

ಸ್ಥಿರತರಭಕ್ತಿಭಿಃ = ಹೆಚ್ಚು ದೃಢವಾದ ಭಕ್ತಿಯುಳ್ಳ, ಆನಮ್ರೈಃ = ಬಾಗಿರುವ ಸುಮ(ಮು)ಕುಟಮೌಲಿಭಿಃ = ಒಳ್ಳೆಯ ಕಿರೀಟವುಳ್ಳ ಶಿರಸ್ಸುಳ್ಳ, ಪ್ರತಿಕಲಿತೈಃ ಕರಾಗ್ರೈಃ (ಉಪಲಕ್ಷಿತೈಃ) = (ತಲೆಯಮೇಲೆ) ಜೋಡಿಸಲ್ಪಟ್ಟ ಕೈಗಳ ಅಗ್ರಭಾಗದಿಂದ ಕೂಡಿದ, ಸ್ಮಿತೈಃ = ಮುಖಾಬ್ಜೈಃ (ಉಪಲಕ್ಷಿತೈಃ) = ಮಂದಹಾಸದಿಂದ ಕೂಡಿದ ಮುಖಕಮಲಗಳುಳ್ಳ, ಸುರೇಂದ್ರೈಃ = ದೇವೋತ್ತಮರಿಂದ, ತದ್ಗೀತಾ = ಆ ಗಂಧರ್ವರು ಹಾಡಿದ, ದಶಧಿಷಣಾರ್ಯವರ್ಯಚರ್ಯಾ = ಶ್ರೀಪೂರ್ಣಪ್ರಜ್ಞರೆಂಬ ಆಚಾರ್ಯಶ್ರೇಷ್ಠರ-ಚರಿತ್ರೆಯು, ಆಶ್ರಾವಿ = ಕೇಳಲ್ಪಟ್ಟಿತು.

ಜ್ಞಾನಿವರೇಣ್ಯರಾದ ದೇವಶ್ರೇಷ್ಠರು ಆಚಾರ್ಯರಲ್ಲಿ ಹೆಚ್ಚಾದ ಭಕ್ತಿಯಿಂದ ಕೂಡಿದ್ದರು. ಅವರು ಉತ್ತಮವಾದ ಕಿರೀಟವನ್ನು ಧರಿಸಿದ

Rarest Archiver

ಶಿರಸ್ಸುಗಳ ಮೇಲೆ ಕೆಂಪಾದ ಕೈಗಳನ್ನು ಜೋಡಿಸಿ, ಮುಖಗಳಲ್ಲಿ ಮಂದ ಹಾಸವನ್ನು ಸೂಸುತ್ತಿದ್ದರು. ಸ್ವಲ್ಪಬಾಗಿದ ಅವರು ಗಂಧರ್ವರು ಹಾಡಿದ ಆಚಾರ್ಯರ ಚರಿತ್ರೆಯನ್ನು ಕೇಳಿದರು. ಹೀಗೆ ಇಂದ್ರಾದಿದೇವತೆಗಳು ಕೈಮುಗಿದು ಕಿರೀಟಧರಿಸಿದ ತಲೆಯನ್ನು ತಗ್ಗಿಸಿ ಸಂತೋಷದಿಂದ ಮುಖ್ಯ ಪ್ರಾಣಾವತಾರರಾದ ಈ ಗುರುಗಳ ಚರಿತ್ರೆಯನ್ನು ಕೇಳಿದರು, ಕೇಳುತ್ತಾರೆ. ಹೀಗಿರುವಾಗ ಮಾನವರು ತಮಗೆ ಉಚಿತವಾದ ಭಕ್ತಿಯಿಂದ ಆಚಾರ್ಯರ ಚರಿತ್ರೆಯನ್ನು ಕೇಳತಕ್ಕದ್ದೆಂದು ಹೇಳಬೇಕಾಗಿಯೇ ಇಲ್ಲ.

ಶೋಭನಂ ಮುಕುಟಂ ಯೇಷಾಂ ತೇ, ಸುಮುಕುಟಾಃ, ಮೌಲಯಃ ಯೇಷಾಂ ತೇ, ಮಕುಟ ಎಂಬ ರೂಪವೂ ಇದೆ. ಅಥ ಮುಕುಟಂ ಕಿರೀಟಂ ಪುನ್ನಪುಂಸಕಂ –ಅಮರ. (ಅಥವಾ) ಸುಮುಕುಟಾಶ್ಚ ತೇ ಮೌಲಯಶ್ಚ ತೈಃ (ಉಪಲಕ್ಷಿತೈಃ) ಕರಾಣಾಂ ಅಗ್ರಾಣಿ ತೈಃ, ಮುಖಾನಿ ಅಬ್ಜಾನೀವ ತೈಃ (ಅಥವಾ ಮುಖಾನ್ಯೇವ ಅಬ್ಜಾನಿ ತೈಃ) ಅತಿಶಯೇನ ಸ್ಥಿರಾ, ಸ್ಥಿತತರಾ ಭಕ್ತಿಃ ಯೇಷಾಂ ತೇ ತೈಃ, ಸುರಾಣಾಂ ಇಂದ್ರಾಃ ತೈಃ, ದಶ (ಪೂರ್ಣಾಃ) ಧಿಷಣಾಃ (ಜ್ಞಾನಾನಿ) ಯಸ್ಯ ಸಃ, ಆರ್ಯೇಷು ವರ್ಯ್ಯಃ. ದಶಧಿಷಣ ಇತಿ ಆರ್ಯವರ್ಯಃ, ದಶಧಿಷಣಾರ್ಯವರ್ಯಸ್ಯ ಚರ್ಯಾ.

ಅಶ್ರಾವಿ ಅಶ್ರಾವಿಷಾತಾಂ ಅಶ್ರಾವಿಷತ, ಶ್ರು ಶ್ರವಣೇ ಕರ್ಮಣಿ ಲುಙ್. ಸುರೇಂದ್ರೈಃ ದಶಧಿಷಣಾರ್ಯವರ್ಯಚರ್ಯಾ ಅಶ್ರಾವಿ (ಕರ್ಮಣಿ) ಸುರೇಂದ್ರಾಃ ದಶಧಿಷಣಾರ್ಯವರ್ಯಚರ್ಯಾಂ ಅಶ್ರೌಷುಃ; (ಕರ್ತರಿ)

ಹೀಗೆ ಅಚಾರ್ಯರ ಅದ್ಭುತಚರಿತ್ರೆಗಳನ್ನು ಕೇಳಿ ಗುರುಗಳ ಸಾಕ್ಷಾತ್ ದರ್ಶನಕ್ಕೆ ದೇವತೆಗಳು ಬಂದರು—

ಗೀರ್ವಾಣೈರ್ವಿಜಯಮಹೋತ್ಸವಸ್ಯ ಪೂಜಾಂ
ಕುರ್ವಾಣೈರವಿರಲಸಂವಿದಸ್ತದಾನೀಂ ।
ವಿಸ್ಮೇರೈರ್ಮುನಿನಿಕರೋಪದೇವಯುಕ್ತೈಃ
ಸುಸ್ಮೇರೈರಥ ತಮವೇಕ್ಷಿತುಂ ಪ್ರಜಗ್ಮೇ ॥ ೫೨ ॥

Rarest Archiver

ಅಥ ತದಾನೀಂ ಅವಿರಲಸಂವಿದಃ ವಿಜಯಮಹೋತ್ಸವಸ್ಯ ಪೂಜಾಂ ಕುರ್ವಾಣೈಃ ಸುಸ್ಮೇರೈಃ ವಿಸ್ಮೇರೈಃ ಮುನಿನಿಕರೋಪದೇವಯುಕ್ತೈಃ, ಗೀರ್ವಾಣೈಃ ತಂ ಅವೇಕ್ಷಿತುಂ ಪ್ರಜಗ್ಮೇ.

ಅಥ ತದಾನೀಂ=ಗಾನವನ್ನು ಕೇಳಿದ ನಂತರ ಆಗ, ಅವಿರಲಸಂವಿದಃ ವಿಜಯಮಹೋತ್ಸವಸ್ಯ ಪೂಜಾಂ ಕುರ್ವಾಣೈಃ = ಶ್ರೀಪೂರ್ಣಪ್ರಜ್ಞಾಚಾರ್ಯರ ದುರ್ವಾದಿವಿಜಯಮಹೋತ್ಸವದ ಸಂಮಾನವನ್ನು ಮಾಡುತ್ತಿರುವ, ಸುಸ್ಮೇರೈಃ=ಮಂದಹಾಸದಿಂದ ಕೂಡಿದ, ವಿಸ್ಮೇರೈಃ= ಆಶ್ಚರ್ಯಪೂರ್ಣರಾದ, ಮುನಿನಿಕರ- ಉಪದೇವ-ಯುಕ್ತೈಃ=ಮುನಿಗಳ ಸಮೂಹ ಮತ್ತು ಗಂಧರ್ವಾದಿಗಳಿಂದ ಕೂಡಿದ, ಗೀರ್ವಾಣೈಃ=ದೇವತೆಗಳಿಂದ, ತಂ ಅವೇಕ್ಷಿತುಂ ಪ್ರಜಗ್ಮೇ = ಆ ಶ್ರೀಮಧ್ವಾಚಾರ್ಯರನ್ನು ನೋಡುವುದಕ್ಕೆ ಹೋಗೋಣವಾಯಿತು.

ಗಂಧರ್ವರು ಹಾಡಿದ ಹಾಡನ್ನು ದೇವತೆಗಳು ಕೇಳಿದರು. ಶ್ರೀಪೂರ್ಣಪ್ರಜ್ಞರ ವಿಜಯಮಹೋತ್ಸವವನ್ನು ಆಚರಿಸಿದರು. ಅವರನ್ನು ಗೌರವಿಸಿ ಸಂಮಾನಿಸಿದರು. ಅನಂತರ ಮಂದಹಾಸವನ್ನು ಸೂಸುತ್ತಾ ಆಶ್ಚರ್ಯವನ್ನು ಪ್ರಕಟಿಸುತ್ತಾ ಋಷಿಗಳು ಮತ್ತು ಗಂಧರ್ವರೊಡನೆ ಆನಂದತೀರ್ಥರನ್ನು ನೋಡಲು ಬಂದರು.

ವಿಜಯಸ್ಯ ಮಹೋತ್ಸವಃ ತಸ್ಯ, ನ ವಿರಲಾ, ಅವಿರಲಾ ಸಂವಿತ್ ಯಸ್ಯ ಸಃ ತಸ್ಯ, ಮುನೀನಾಂ ನಿಕರಾಃ, ಮುನಿನಿಕರಾಶ್ಚ ಉಪದೇವಾಶ್ಚ, ಮುನಿನಿಕರೋಪದೇವೈಃ ಯುಕ್ತಾಃ ತೈಃ;

ಪ್ರ+ಜಗ್ಮೇ- ಗಮ್ಲೃ ಗತೌ ಭಾವೇ ಲಿಟ್. ಎಲ್ಲಾ ಪುರುಷವಚನಗಳಲ್ಲಿಯೂ ಸಮಾನರೂಪ. ಗೀರ್ವಾಣಾಃ ತಂ ಅವೇಕ್ಷಿತುಂ ಪ್ರಜಗ್ಮುಃ (ಕರ್ತರಿ).

ದೇವತೆಗಳು ಪೂರ್ಣಪ್ರಜ್ಞರನ್ನು ನೋಡಲು ಬಂದಿರುವ ಕ್ರಮವು ಹೀಗಿದೆ—

Rarest Archiver

ಆದರ್ಶಂ ಗುಣಗಣದರ್ಶನೇ ಮುರಾರೇಃ
ಸಚ್ಛಾಸ್ತ್ರಂ ರಚಿತಮನೇನ ವರ್ಣಯಂತಃ ।
ಪ್ರದ್ಯೋತ್ಯೈರುಡುಪದವೀಂ ಪ್ರಕಾಶಯಂತಃ
ಪ್ರೈಕ್ಷಂತ ಪ್ರಚುರಮನೋವಿಲಾಸಮೇತೇ ॥ ೫೩ ॥

ಮುರಾರೇಃ ಗುಣಗಣದರ್ಶನೇ ಆದರ್ಶಂ ಅನೇನ ರಚಿತಂ ಸಚ್ಛಾಸ್ತ್ರಂ ವರ್ಣಯಂತಃ ಪ್ರದ್ಯೋತ್ಯೈಃ ಉಡುಪದವೀಂ ಪ್ರಕಾಶಯಂತಃ ಏತೇ ಪ್ರಚುರ-ಮನೋವಿಲಾಸಂ ಪ್ರೈಕ್ಷಂತ.

ಮುರಾರೇಃ ಗುಣಗಣದರ್ಶನೇ ಆದರ್ಶಂ = ಮುರರಿಪುವಾದ ಶ್ರೀಹರಿಯ ಗುಣಸಮೂಹದ ತಿಳುವಳಿಕೆಯನ್ನುಂಟುಮಾಡುವ ವಿಷಯದಲ್ಲಿ ಕನ್ನಡಿಯಾದ, ಅನೇನ ರಚಿತಂ = ಈ ಮಧ್ವಗುರುಗಳಿಂದ ರಚಿತವಾದ, ಸಚ್ಛಾಸ್ತ್ರಂ ವರ್ಣಯಂತಃ = ನಿರ್ದೋಷವಾದ ಶಾಸ್ತ್ರವನ್ನು ವರ್ಣಿಸುತ್ತಿರುವ, ಪ್ರದ್ಯೋತ್ಯೈಃ ಉಡುಪದವೀಂ ಪ್ರಕಾಶಯಂತಃ = ತಮ್ಮ ಪ್ರಕಾಶಗಳಿಂದ ನಕ್ಷತ್ರಸ್ಥಾನವಾದ ಆಕಾಶವನ್ನು ಬೆಳಗಿಸುತ್ತಿರುವ, ಏತೇ = ಈ ದೇವತೆಗಳು, ಪ್ರಚುರಮನೋವಿಲಾಸಂ = ಶ್ರೀಪೂರ್ಣಪ್ರಜ್ಞರನ್ನು, ಪ್ರೈಕ್ಷಂತ = ನೋಡಿದರು.

ಶ್ರೀಪೂರ್ಣಪ್ರಜ್ಞಾಚಾರ್ಯರು ರಚಿಸಿದ ಶಾಸ್ತ್ರವು ಶ್ರೀಹರಿಯ ಸರ್ವೋತ್ತಮತ್ವ- ಮುಂತಾದ ಅನಂತಕಲ್ಯಾಣಗುಣಗಣಗಳನ್ನು ತಿಳಿಯಲು ಕನ್ನಡಿಯಂತಿದೆ. ಇಂತಹ ಸಚ್ಛಾಸ್ತ್ರವನ್ನು ಹೊಗಳುತ್ತಾ, ತಮ್ಮ ದೇಹದ ಕಾಂತಿಗಳಿಂದ ಆಕಾಶಮಾರ್ಗವನ್ನು ಬೆಳಗುತ್ತಾ ದೇವತೆಗಳು ಭೂಮಿಯ ಹತ್ತಿರ ಬಂದು ಆಚಾರ್ಯರನ್ನು ನೋಡಿದರು.

ಗುಣಾನಾಂ ಗಣಾಃ, ಗುಣಗಣಾನಾಂ ದರ್ಶನಂ ತಸ್ಮಿನ್, ಸತ್ ಚ ತತ್ ಶಾಸ್ತ್ರಂ ಚ, ತತ್; ಉಡೂನಾಂ ಪದವೀ ತಾಂ; ಪ್ರಚುರಃ ಮನೋ-ವಿಲಾಸಃ ಯಸ್ಯ ಸಃ ತಂ;

ಪ್ರ + ಐಕ್ಷತ ಐಕ್ಷೇತಾಂ ಐಕ್ಷಂತ. ಈಕ್ಷ ದರ್ಶನೇ ಲಙ್.

ಹೀಗೆ ಬಂದ ದೇವತೆಗಳು ಆನಂದತೀರ್ಥರನ್ನು ವಂದಿಸಿದರು —

Rarest Archiver

ನಾಕೀಂದ್ರಾಸ್ತಮವನಿಭಾಗಮಾವಸಂತಂ
ಸುಶ್ಲೋಕೈರಪಿ ಭುವನಾನಿ ಭೂಷಯಂತಂ ।
ನೇಮುಃ ಖಾದುಪನಿಷದಂ ತದೈತರೇಯೀಂ
ವ್ಯಾಖ್ಯಾಂತಂ ವಿವಿಧವಿಶಿಷ್ಟಶಿಷ್ಯಮಧ್ಯೇ ॥ ೫೪ ॥

ಅವನಿಭಾಗಂ ಆವಸಂತಂ, ಸುಶ್ಲೋಕೈರಪಿ ಭುವನಾನಿ ಭೂಷಯಂತಂ, ತದಾ ವಿವಿಧವಿಶಿಷ್ಟಶಿಷ್ಯಮಧ್ಯೇ ಐತ (ತದೈತ)ರೇಯೀಂ ಉಪನಿಷದಂ ವ್ಯಾಖ್ಯಾಂತಂ ತಂ ನಾಕೀಂದ್ರಾಃ ಖಾತ್ ನೇಮುಃ.

ಅವನಿಭಾಗಂ ಆವಸಂತಂ = ಭೂಮಿಯ ಒಂದು ಭಾಗದಲ್ಲಿ ವಾಸ ಮಾಡುತ್ತಿರುವ, ಸುಶ್ಲೋಕೈರಪಿ = ಒಳ್ಳೆಯಕೀರ್ತಿಗಳಿಂದಲೂ, ಭುವನಾನಿ ಭೂಷಯಂತಂ=ಎಲ್ಲಾ ಲೋಕಗಳನ್ನೂ ಅಲಂಕರಿಸುತ್ತಿರುವ, ತದಾ=ಆಗ, ವಿವಿಧವಿಶಿಷ್ಟಶಿಷ್ಯಮಧ್ಯೇ=ಬ್ರಹ್ಮಚಾರಿ ಗೃಹಸ್ಥ ಮೊದಲಾದ ಜ್ಞಾನಭಕ್ತ್ಯಾದಿ ಗಳಿಂದ ಉತ್ತಮರಾದ ಶಿಷ್ಯರ ಮಧ್ಯದಲ್ಲಿ ಐತ-(ತದೈ)ರೇಯೀಂ ಉಪನಿಷದಂ = ಆ ಪ್ರಸಿದ್ಧವಾದ ಐತರೇಯಉಪನಿಷತ್ತನ್ನು, ವ್ಯಾಖ್ಯಾಂತಂ ತಂ = ಪ್ರವಚನಮಾಡುತ್ತಿರುವ ಆ ಆಚಾರ್ಯರನ್ನು, ನಾಕೀಂದ್ರಾಃ=ದೇವಶ್ರೇಷ್ಠರು, ಖಾತ್ = ಆಕಾಶದಲ್ಲಿ ನಿಂತು, ನೇಮುಃ = ನಮಸ್ಕರಿಸಿದರು.

ತ್ರಿಭುವನಾಧಿಪತಿಗಳಾದ ವಾಯುದೇವರು ಆಗ ಮಧ್ವರೂಪದಿಂದ ಭೂಮಿಯ ಒಂದು ಭಾಗದಲ್ಲಿ (ರಜತಪೀಠಪುರದಲ್ಲಿ) ವಾಸಿಸಿದ್ದರು. ಅವರು ತನ್ನ ಉತ್ತಮವಾದ ಕೀರ್ತಿಗಳಿಂದಲೂ ಸಚ್ಛಾಸ್ತ್ರಗಳಿಂದಲೂ ಸಮಸ್ತ ಲೋಕಗಳನ್ನು ಅಲಂಕರಿಸಿದ್ದರು. ದೇವತೆಗಳು ನೋಡಲು ಬರುವ ಸಂದರ್ಭ ದಲ್ಲಿ ಆಚಾರ್ಯರು ಬ್ರಹ್ಮಚಾರಿ ಗೃಹಸ್ಥಸಂನ್ಯಾಸಿಗಳೆಂಬ ಜ್ಞಾನಭಕ್ತಿ ವೈರಾಗ್ಯಭರಿತರಾದ ಉತ್ತಮ ಶಿಷ್ಯರ ಮಧ್ಯದಲ್ಲಿ ಕುಳಿತು ಐತರೇಯೋಪ- ನಿಷತ್ತಿನ ಪ್ರವಚನಮಾಡುತ್ತಿದ್ದರು. ಇಂತಹ ಆಚಾರ್ಯರನ್ನು, ದೇವತೆಗಳು ಆಕಾಶದಲ್ಲಿ ನಿಂತು ನಮಿಸಿದರು.

ನಾಕಃ ಏಷಾಂ ಅಸ್ತೀತಿ ನಾಕಿನಃ ನಾಕಿನಾಂ ಇಂದ್ರಾಃ, ಅವನೇಃ ಭಾಗಃ ತಂ, ಅವನಿಭಾಗಂ ಆವಸಂತಂ ಎಂಬಲ್ಲಿ 'ಉಪಾನ್ವಧ್ಯಾಙ್ ವಸಃ' (1–4–48) ಎಂಬ ಸೂತ್ರದಿಂದ ಆಧಾರಕ್ಕೆ ಕರ್ಮಸಂಜ್ಞೆ, ದ್ವಿತೀಯಾ.

Rarest Archiver

ಶೋಭನಾಶ್ಚ ತೇ ಶ್ಲೋಕಾಶ್ಚ ಸುಶ್ಲೋಕಾಃ ತೈಃ, ಖೇ ಸ್ಥಿತ್ವಾ ಖಾತ್-ಲ್ಯಬ್‌ಲೋಪೇ ಕರ್ಮಣ್ಯಧಿಕರಣೇ ಚ (ವಾ) ಅಧಿಕರಣಕ್ಕೆ ಪಂಚಮಿ ಪದ್ಯೇ ಯಶಸಿ ಚ ಶ್ಲೋಕ : — ಅಮರ. ವಿವಿಧಾಶ್ಚ ತೇ ವಿಶಿಷ್ಟಾಶ್ಚ ತೇ ಶಿಷ್ಯಾಶ್ಚ, ವಿವಿಧವಿಶಿಷ್ಟಶಿಷ್ಯಾಣಾಂ ಮಧ್ಯಂ ತಸ್ಮಿನ್.

ಆಚಾರ್ಯರನ್ನು ದೇವತೆಗಳು ಆಕಾಶದಲ್ಲಿ ನಿಂತು ಪೂಜಿಸಿದರು—

ಶ್ರೀಮಂತಂ ಶಶಿವದನಂ ಕುಶೇಶಯಾಕ್ಷಂ
ಗಂಭೀರಸ್ವನ(ರ)ಮತಿದಿವ್ಯಲಕ್ಷಣಾಢ್ಯಂ ।
ಪಶ್ಯಂತಃ ಸ್ವಗುರುಮಥಾರ್ಚಿಚನ್ (ರ್ಚಯನ್) ಕೃತಾರ್ಥಾಃ
ವಾಣ್ಯಾ ತಂ ಹರಿರತಿಪೂರ್ಣಕಾಮಮೇತೇ ॥ ೫೫ ॥

ಶ್ರೀಮಂತಂ ಶಶಿವದನಂ ಕುಶೇಶಯಾಕ್ಷಂ ಗಂಭೀರಸ್ವನಂ (ರಂ) ಅತಿದಿವ್ಯಲಕ್ಷಣಾಢ್ಯಂ ಸ್ವಗುರುಂ ಪಶ್ಯಂತಃ ಕೃತಾರ್ಥಾಃ ಏತೇ ಅಥ ಹರಿರತಿ-ಪೂರ್ಣಕಾಮಂ ತಂ ವಾಣ್ಯಾ ಅರ್ಚಿಚನ್ (ಅರ್ಚಯನ್).

ಶ್ರೀಮಂತಂ = ಕಾಂತಿಪೂರ್ಣರಾದ (ಆನಂದಭಾಗ್ಯಪೂರ್ಣರಾದ), ಶಶಿ-ವದನಂ = ಚಂದ್ರನಂತೆ ಮುಖವುಳ್ಳ ಕುಶೇಶಯಾಕ್ಷಂ-ತಾವರೆಹೂವಿನಂತಹ ಕಣ್ಣುಗಳುಳ್ಳ, ಗಂಭೀರಸ್ವನಂ(ರಂ) = ಗಂಭೀರವಾದ ಧ್ವನಿಯುಳ್ಳ, ಅತಿದಿವ್ಯಲಕ್ಷಣಾಢ್ಯಂ = ದೇವತೆಗಳನ್ನೂ ಮೀರಿಸಿದ (ಅಲೌಕಿಕವಾದ) ದೇಹ ಲಕ್ಷಣಗಳುಳ್ಳ, ಸ್ವಗುರುಂ ಪಶ್ಯಂತಃ = ತಮ್ಮ ಗುರುಗಳಾದ ಶ್ರೀಮಧ್ವಾಚಾರ್ಯರನ್ನು, ನೋಡುತ್ತಿರುವ, ಕೃತಾರ್ಥಾಃ ಏತೇ = ಧನ್ಯರಾದ ಈ ದೇವ ಶ್ರೇಷ್ಠರು, ಅಥ = ಅನಂತರ, ಹರಿರತಿಪೂರ್ಣಕಾಮಂ = ಶ್ರೀಮನ್ನಾರಾಯಣನ-ನಿತ್ಯಾಪರೋಕ್ಷದಿಂದ ಉಂಟಾದ ಆನಂದದಿಂದ, (ಆಸಕ್ತಿಯಿಂದ) ಪೂರ್ಣವಾದ ಇಷ್ಟಾರ್ಥವುಳ್ಳ ಆ ಶ್ರೀಮಧ್ವಾಚಾರ್ಯರನ್ನು. ವಾಣ್ಯಾ ಅರ್ಚಿಚನ್ = ಮಾತಿನಿಂದ ಪೂಜಿಸಿದರು (ಸ್ತುತಿಸಿದರು).

ಶ್ರೀಮಧ್ವಾಚಾರ್ಯರು ಕಾಂತಿಸಂಪನ್ನರು, ಆನಂದೈಶ್ವರ್ಯ ಪೂರ್ಣರು, ಚಂದ್ರನಂತಹ ಸುಂದರಮುಖ, ತಾವರೆಯ ದಳದಂತಹ ವಿಶಾಲವಾದ ಕಣ್ಣುಗಳು, ಗಂಭೀರವಾದ ಕಂಠಧ್ವನಿ, ದೇವತೆಗಳಲ್ಲಿಯೂ ಇಲ್ಲದಿರುವ ಮಹಾಪುರುಷರ ೩೨ ಸಲ್ಲಕ್ಷಣಗಳಿಂದ ಭರಿತವಾದ ಅಂಗೋ

Rarest Archiver

ಪಾಂಗಗಳು, ಇವುಗಳಿಂದ ಕೂಡಿದವರು. ಶ್ರೀಹರಿಯ ನಿತ್ಯದರ್ಶನ, ನಿರಂತರಾಸಕ್ತಿಗಳಿಂದ ಪೂರ್ಣಕಾಮರು. ಇಂತಹ ಮಹಾಚಾರ್ಯರನ್ನು ದೇವಶ್ರೇಷ್ಠರು ನೋಡಿದರು. ಹೀಗೆ ಸ್ತುತಿಸಿದರು.

ಶ್ರೀರಸ್ಯಾಸ್ತೀತಿ ಶ್ರೀಮಾನ್ ತಂ, ಕುಶೇಶಯೇ ಇವ ಅಕ್ಷಿಣೀ ಯಸ್ಯ ಸಃ ತಂ, ಗಂಭೀರಃ ಸ್ವನಃ ಯಸ್ಯ ಸಃ ತಂ,ಅತಿದಿವ್ಯಾನಿ ಚ ತಾನಿ ಲಕ್ಷಣಾನಿ ಚ, ಅತಿದಿವ್ಯಲಕ್ಷಣೈಃ ಆಢ್ಯಂ, ಸ್ವೇಷಾಂ ಗುರುಃ ತಂ, ಕೃತಃ ಅರ್ಥಃ ಯೇಷಾಂ ತೇ, ಹರೌ ರತಿಃ, ಹರಿರತ್ಯಾ ಪೂರ್ಣಃ ಕಾಮಃ ಯಸ್ಯ ಸಃ ತಂ.

ಆರ್ಚಿಚತ್ ಆರ್ಚಿಚತಾಂ ಆರ್ಚಿಚನ್. (ಆರ್ಚಯತ್ ಆರ್ಚಯತಾಂ ಆರ್ಚಯನ್) ಅರ್ಚ ಪೂಜಾಯಾಂ ಣಿಜಂತೆ ಉಭಯಪದೀ ಲುಙ್ (ಲಙ್).

ದೇವತೆಗಳು ಹೇಳಿದ ಸ್ತೋತ್ರರೂಪವಾದ ವಚನವಿದು—

ಅಹರೋ ದುರಾಗಮತಮಃ ಸ್ವಗೋಗಣೈ-
ರಕರೋರ್ಮುಕುಂದಗುಣವೃಂದದರ್ಶನಂ ।
ಅಜಯಶ್ಚತುರ್ದಶ ಜಗಂತಿ ಸದ್ಗುಣೈಃ
ಶರಣಂ ಗುರೋ ಕರುಣಯಾಪಿ ನೋ ಭವೇಃ ॥ ೫೭ ॥

ಹೇಗುರೋ ! ಸ್ವಗೋಗಣೈಃ ದುರಾಗಮತಮಃ ಅಹರಃ; ಮುಕುಂದ-ಗುಣವೃಂದದರ್ಶನಂ ಅಕರೋಃ ; ಸದ್ಗುಣೈಃ ಚತುರ್ದಶ ಜಗಂತಿ ಅಜಯಃ ; ಕರುಣಯಾ ಅಪಿ ನಃ ಶರಣಂ ಭವೇಃ.

ಹೇಗುರೋ ! = ಸ್ವಾಮಿಾ ಗುರುಗಳಾದ ಪೂರ್ಣಪ್ರಜ್ಞಾಚಾರ್ಯರೇ ! (ನೀವು) ಸ್ವಗೋಗಣೈಃ = ನಿಮ್ಮ ಮಾತುಗಳೆಂಬ ಕಿರಣಸಮೂಹಗಳಿಂದ, ದುರಾಗಮತಮಃ = ದುಷ್ಟಶಾಸ್ತ್ರವೆಂಬ ಕತ್ತಲೆಯನ್ನು, ಅಹರಃ = ಪರಿಹರಿಸಿದ್ದೀರಿ, ಮುಕುಂದಗುಣವೃಂದದರ್ಶನಂ = ಮುಕ್ತಿಪ್ರದಾನನಾದ ಶ್ರೀಮನ್ನಾರಾಯಣನ ಜ್ಞಾನಾನಂದಾದಿಗುಣಸಮೂಹದ ನೋಡುವಿಕೆಯನ್ನು (ತೋರಿಸುವಿಕೆಯನ್ನು, ಪ್ರತಿಪಾದನೆಯನ್ನು) ಮಾಡಿದಿರಿ, ಸದ್ಗುಣೈಃ = ನಿರ್ದೋಷವಾದ ನಿಮ್ಮ ಗುಣಗಳಿಂದ, ಚತುರ್ದಶ ಜಗಂತಿ

Rarest Archiver

ಅಜಯಃ = ಹದಿನಾಲ್ಕು ಲೋಕಗಳನ್ನು (೧೪ ಲೋಕದ ಜನರನ್ನೂ) ಮೀರಿಸಿದಿರಿ, ಕರುಣಯಾ ಅಪಿ = ಕೇವಲ ನಮ್ಮ ಮೇಲಿನ ಕರುಣೆಯಿಂದ ಲಾದರೂ, ನಃ = ನಮಗೆ, ಶರಣಂ ಭವೇಃ = ರಕ್ಷಕರಾಗಿರಿ.

ಗುರುಗಳಾದ ಶ್ರೀಮಧ್ವಾಚಾರ್ಯರೇ ! ಸೂರ್ಯನು ಕಿರಣಗಳಿಂದ ಕತ್ತಲೆಯನ್ನು ಪರಿಹರಿಸುವಂತೆ ನೀವು ನಿಮ್ಮ ಮಾತುಗಳಿಂದ (ಸಚ್ಛಾಸ್ತ್ರ-ದಿಂದ) ದುಷ್ಟಶಾಸ್ತ್ರಗಳೆಂಬ (ಮಾಯಾವಾದವೆಂಬ) ಕತ್ತಲೆಯನ್ನು ಪರಿಹರಿಸಿದಿರಿ. ಶ್ರೀಮನ್ನಾರಾಯಣನ ಗುಣಸಮೂಹವನ್ನು ತಿಳಿಯುವಂತೆ ಮಾಡಿದಿರಿ, ಸದ್ದರ್ಶನವನ್ನು ನಿರ್ಮಾಣಮಾಡಿದಿರಿ. ಹದಿನಾಲ್ಕು ಲೋಕದ ಚೇತನರನ್ನು ನಿಮ್ಮ ಉತ್ಕೃಷ್ಟ ಗುಣಗಳಿಂದ ಮೀರಿಸಿದಿರಿ. ನಮ್ಮಲ್ಲಿ ಕೇವಲ ಕೃಪಾಪರವಶರಾಗಿ ನೀವು ನಮ್ಮನ್ನು ರಕ್ಷಿಸಬೇಕು.

ದುರಾಗಮ ಏವ ತಮಃ ತತ್ ; ಸ್ವಸ್ಯ ಗವಾಂ ಗಣಾಃ ತೈಃ, ಮುಕುಂದಸ್ಯ ಗುಣಾನಾಂ ವೃಂದಂ, ಮುಕುಂದಗುಣವೃಂದಸ್ಯ ದರ್ಶನಂ ತತ್, ಸಂತಶ್ಚ ತೇ ಗುಣಾಶ್ಚ ತೈಃ ;

ಅಹರತ್ ಅಹರತಾಂ ಅಹರನ್ ಅಹರಃ ಅಹರತಂ ಅಹರತ-ಹೃಞ್ ಹರಣೇ ಲಙ್, ಅಕರೋತ್ ಅಕುರುತಾಂ ಅಕುರ್ವನ್, ಅಕರೋಃ ಅಕುರುತಂ ಅಕುರುತ-ಡುಕೃಞ್ ಕರಣೇ ಲಙ್. ಅಜಯತ್ ಅಜಯತಾಂ ಅಜಯನ್, ಅಜಯಃ ಅಜಯತಂ ಅಜಯತ-ಜಿ ಜಯೇ ಲಙ್ ಭವೇಃ-ಭವೇತಂ ಭವೇತ-ಪ್ರಾರ್ಥನಾಯಾಂ ವಿಧಿ ಲಿಙ್.

ಸಜಸಾಜಗೌ ಚ ಯದಿ ಮಂಜುಭಾಷಿಣೀ ಎಂಬ ಲಕ್ಷಣದಂತೆ ಮಂಜುಭಾಷಿಣೀವೃತ್ತ.

ಹನುಮಭೀಮಮಧ್ವಾವತಾರಗಳಲ್ಲಿ ಭಕ್ತರ ಇಷ್ಟಗಳನ್ನು ಪೂರೈಸಿದ ಮುಖ್ಯಪ್ರಾಣರೇ ! ನಿಮಗೆ ನಮೋ ನಮಃ—

ನಮಸ್ತೇ ಪ್ರಾಣೇಶ ಪ್ರಣತವಿಭವಾಯಾವನಿಮಗಾಃ
ನಮಃ ಸ್ವಾಮಿನ್ ರಾಮಪ್ರಿಯತಮ ಹನೂಮನ್ ! ಗುರುಗುಣ ।
ನಮಸ್ತುಭ್ಯಂ ಭೀಮ ! ಪ್ರಬಲತಮ ಕೃಷ್ಣೇಷ್ಟ ಭಗವನ್ ;
ನಮಃ ಶ್ರೀಮನ್ಮಧ್ವ ಪ್ರದಿಶ ಸುದೃಶಂ ನೋ ಜಯ ಜಯ ॥ ೫೭ ॥

Rarest Archiver

ಪ್ರಾಣೇಶ ! ಪ್ರಣತವಿಭವಾಯ ಅವನಿಂ ಅಗಾಃ, ತೇ ನಮಃ ; ಸ್ವಾಮಿನ್ ರಾಮಪ್ರಿಯತಮ ಗುರುಗುಣ ಹನೂಮನ್ ! (ತೇ)ನಮಃ ! ಪ್ರಬಲತಮ ಕೃಷ್ಣೇಷ್ಟ ಭೀಮ ತುಭ್ಯಂ ನಮಃ । (ಕೃಷ್ಣೇಷ್ಟ) ಭಗವನ್ ಶ್ರೀಮನ್ಮಧ್ವ! (ತುಭ್ಯಂ) ನಮಃ । ನಃ ಸುದೃಶಂ ಪ್ರದಿಶ ; ಜಯ ಜಯ.

ಪ್ರಾಣೇಶ ! = ಸಮಸ್ತಜೀವರಿಗೆ (ಇಂದ್ರಿಯಗಳಿಗೆ) ನಿಯಾಮಕರಾದ ವಾಯುದೇವರೆ ! (ನೀವು), ಪ್ರಣತವಿಭವಾಯ = ಬಾಗಿ ನಮಿಸಿದ ಸಜ್ಜನರ ಜ್ಞಾನಾದಿಐಶ್ವರ್ಯಕ್ಕೋಸ್ಕರ, ಅವನಿಂ ಅಗಾಃ = ಭೂಮಿಯನ್ನು ಸೇರಿದಿರಿ, ತೇ ನಮಃ = ನಿಮಗೆ ನಮಸ್ಕಾರ. ಸ್ವಾಮಿನ್ ರಾಮಪ್ರಿಯತಮ = ಒಡೆಯನಾದ ಶ್ರೀರಾಮನಿಗೆ ಅತ್ಯಂತಪ್ರಿಯರಾದ, ಗುರುಗುಣ ಹನೂಮನ್ = ಉತ್ಕೃಷ್ಟವಾದ ಗುಣಗಳುಳ್ಳ ಹನುಮಂತದೇವರೇ !, (ತೇ) ನಮಃ = ನಿಮಗೆ ನಮಸ್ಕಾರವು, ಪ್ರಬಲತಮ = ಅತ್ಯಂತಬಲಶಾಲಿಗಳಾದ, ಕೃಷ್ಣೇಷ್ಟ = ಶ್ರೀಕೃಷ್ಣನಿಗೆ ಪ್ರಿಯರಾದ, ಭೀಮ = ಎಲೈ ಭೀಮಸೇನದೇವರೇ ! ತುಭ್ಯಂ ನಮಃ = ನಿಮಗೆ ನಮಸ್ಕಾರ, (ಕೃಷ್ಣೇಷ್ಟ = ವೇದವ್ಯಾಸರಿಗೆ ಪ್ರಿಯರಾದ), ಭಗವನ್ = ಷಡ್ಗುಣೈಶ್ವರ್ಯಸಂಪನ್ನರಾದ, ಶ್ರೀಮನ್ಮಧ್ವ = ಕಾಂತಿಪೂರ್ಣರಾದ ಶ್ರೀಮಧ್ವಾಚಾರ್ಯರೇ ! ತೇ ನಮಃ = ನಿಮಗೆ ನಮಸ್ಕಾರ ! ನಃ ಸುದೃಶಂ ಪ್ರದಿಶ = ನಮಗೆ ಒಳ್ಳೆಯ ಜ್ಞಾನಲೋಚನವನ್ನು (ಸುದರ್ಶನವನ್ನು) ಕೊಡಿರಿ. ಜಯ ಜಯ = ನೀವು ಜಯಶಾಲಿಗಳಾಗಿರಿ, ಸರ್ವೋತ್ಕೃಷ್ಟರಾಗಿರಿ, ದುರ್ದರ್ಶನ(ಜನ)ರನ್ನೂ, ದುರ್ದರ್ಶನಗಳನ್ನೂ ಸೋಲಿಸಿರಿ.

ಸಮಸ್ತಚೇತನರಿಗೂ ಇಂದ್ರಿಯಗಳಿಗೂ ನಿಯಾಮಕರಾದ ಮುಖ್ಯ-ಪ್ರಾಣದೇವರೇ ! ನೀವು ಪ್ರಾರ್ಥಿಸಿ ಬಾಗಿ ನಮಿಸಿದ ಸಜ್ಜನರ ತತ್ವ-ಜ್ಞಾನಾಭ್ಯುದಯಕ್ಕಾಗಿ ಭೂಮಿಗೆ ಬಂದಿರಿ, ನಿಮಗೆ ನಮಸ್ಕಾರ. ಸ್ವಾಮಿಯೇ ! ಶ್ರೀರಾಮನಿಗೆ ಅತ್ಯಂತಪ್ರಿಯರಾದ ಶ್ರೇಷ್ಠಗುಣಗಳಿಂದ ಭೂಷಿತರಾದ ಹನುಮಂತದೇವರೇ ! ನಿಮಗೆ ನಮಸ್ಕಾರ. ಮಹಾಬಲಶಾಲಿಗಳಾದ ಶ್ರೀಕೃಷ್ಣನಿಗೆ ಪ್ರಿಯರಾದ ಭೀಮಸೇನದೇವರೇ ! ನಿಮಗೆ ನಮಸ್ಕಾರ. ಷಡ್ಗುಣೈಶ್ವರ್ಯಪರಿಪೂರ್ಣರಾದ ಶ್ರೀವೇದವ್ಯಾಸದೇವರಿಗೆ

Rarest Archiver

ಇಷ್ಟರಾದ ಕಾಂತಿಪೂರ್ಣರಾದ ಶ್ರೀಮಧ್ವಾಚಾರ್ಯರೇ ನಿಮಗೆ ನಮಸ್ಕಾರ. ನಮಗೆ ಜ್ಞಾನಲೋಚನವನ್ನು ಕೊಡಿರಿ, ಸುದರ್ಶನವನ್ನು ಅನುಗ್ರಹಿಸಿರಿ, ನೀವು ದುರ್ದರ್ಶನವನ್ನು ಜಯಿಸಿರಿ, ಉತ್ಕೃಷ್ಟರಾಗಿರಿ.

ಪ್ರಾಣಾನಾಂ ಈಶಃ ತಸ್ಯ ಸಂಬುದ್ಧಿಃ, ಪ್ರಣತಾನಾಂ ವಿಭವಃ ತಸ್ಮೈ. ಅತಿಶಯೇನ ಪ್ರಿಯಃ ಪ್ರಿಯತಮಃ ತಸ್ಯ ಸಂಬುದ್ಧಿಃ, ಗುರವಃ ಗುಣಾಃ, ಯಸ್ಯ ಸಃ ತಸ್ಯ ಸಂಬುದ್ಧಿಃ, ಪ್ರಕೃಷ್ಟಂ ಬಲಂ ಯಸ್ಯ ಸಃ ಪ್ರಬಲಃ, ಅತಿಶಯೇನ ಪ್ರಬಲಃ ಪ್ರಬಲತಮಃ ತಸ್ಯ ಸಂಬುದ್ಧಿಃ, ಕೃಷ್ಣಸ್ಯ (ಯಾದವ ಕೃಷ್ಣಸ್ಯ-ವೇದವ್ಯಾಸಸ್ಯ ಚ) ಇಷ್ಟಃ ತಸ್ಯ ಸಂಬುದ್ಧಿಃ, ಶೋಭನಾ ಚ ಸಾ ದೃಕ್ ಚ ಸುದೃಕ್ ತಾಂ,

ರಸೈರುದ್ರೈಃ ಛಿನ್ನಾ ಯಮನಸಭಲಾ ಗಃ ಶಿಖರಿಣೀ–ಈ ಲಕ್ಷಣದಂತೆ ಇಲ್ಲಿ ಶಿಖರಿಣೀವೃತ್ತ.

'ಈ ರೀತಿ ಸ್ತುತಿಸಿ ದೇವತೆಗಳು ಆಚಾರ್ಯರ ಮೇಲೆ ಪುಷ್ಪವೃಷ್ಟಿಯನ್ನು ಮಾಡಿದರು' ಎಂದು ಹೇಳುತ್ತಾ ನಾರಾಯಣಪಂಡಿತಾಚಾರ್ಯರು "ಇತಿ" ಎಂಬ ಪದದಿಂದ ಮಹಾಕಾವ್ಯವನ್ನು ಸಮಾಪ್ತಿಗೊಳಿಸುತ್ತಾರೆ—

ಇತಿ ನಿಗದಿತವಂತಸ್ತತ್ರವೃಂದಾರಕೇಂದ್ರಾ
ಗುರುವಿಜಯಮಹಂ ತಂ ಲಾಲಯಂತೋ ಮಹಾಂತಂ ।
ವವೃಷುರಖಿಲದೃಶ್ಯಂ ಪುಷ್ಪವಾರಂ ಸುಗಂಧಂ
ಹರಿದಯಿತವರಿಷ್ಠೇ ಶ್ರೀಮದಾನಂದತೀರ್ಥೇ ॥ ೫೮ ॥

ಇತಿ ಶ್ರೀಮತ್ಕವಿಕುಲತಿಲಕತ್ರಿವಿಕ್ರಮಪಂಡಿತಾಚಾರ್ಯಸುತ-
ನಾರಾಯಣಪಂಡಿತಾಚಾರ್ಯವಿರಚಿತೇ
ಶ್ರೀಮತ್ಸುಮಧ್ವವಿಜಯೇ ಮಹಾಕಾವ್ಯೇ ಆನಂದಾಂಕೇ
ಷೋಡಶಃಸರ್ಗಃ॥

ಇತಿ ನಿಗದಿತವಂತಃ ಮಹಾಂತಂ ತಂ ಗುರುವಿಜಯಮಹಂ ಲಾಲಯಂತಃ ವೃಂದಾರಕೇಂದ್ರಾಃ ಹರಿದಯಿತವರಿಷ್ಠೇ ತತ್ರ ಶ್ರೀಮದಾನಂದತೀರ್ಥೇ ಅಖಿಲದೃಶ್ಯಂ ಸುಗಂಧಂ ಪುಷ್ಪವಾರಂ ವವೃಷುಃ.

Rarest Archiver

ಇತಿ ನಿಗದಿತವಂತಃ = ಹಿಂದೆ ಹೇಳಿದಂತೆ ಸ್ತೋತ್ರಮಾಡಿದ, ಮಹಾಂತಂ ತಂ ಗುರುವಿಜಯಮಹಂ=ಶ್ರೇಷ್ಠವಾದ ಆ ಗುರುಗಳ ವಿಜಯ ಮಹೋತ್ಸವವನ್ನು, ಲಾಲಯಂತಃ=ಸಂಮಾನಿಸುತ್ತಿರುವ, ವೃಂದಾರ-ಕೇಂದ್ರಾಃ=ದೇವಶ್ರೇಷ್ಠರು, ಹರಿದಯಿತವರಿಷ್ಠೇ=ಶ್ರೀಮನ್ನಾರಾಯಣನ ಭಕ್ತರಲ್ಲಿ ಶ್ರೇಷ್ಠರಾದ, ತತ್ರ ಶ್ರೀಮದಾನಂದತೀರ್ಥೇ=ಆ ಶ್ರೀಮಧ್ವಾ ಚಾರ್ಯರ ಮೇಲೆ, (ತತ್ರ=ಆಕಾಶದಲ್ಲಿ), ಅಖಿಲದೃಶ್ಯಂ=ಎಲ್ಲರಿಗೂ ನೋಡಲು ಯೋಗ್ಯನಾದ, ಸುಗಂಧಂ=ಸುವಾಸನೆಯುಳ್ಳ, ಪುಷ್ಪವಾರಂ =ಪುಷ್ಪಸಮೂಹವನ್ನು, ವವೃಷುಃ=ಸುರಿಸಿದರು.

ಆಚಾರ್ಯರು ಐತರೇಯೋಪನಿಷತ್ತಿನ ಪ್ರವಚನನಡೆಸುತ್ತಿರುವಾಗ ಆಕಾಶದಲ್ಲಿ ದೇವತೆಗಳು 'ಅಹರೋ ದುರಾಗಮತಮಃ' ಇತ್ಯಾದಿರೀತಿ ಯಿಂದ ಪ್ರಾರ್ಥಿಸಿದರು. ಶ್ರೀಮಧ್ವಾಚಾರ್ಯರ ವಿಜಯಮಹೋತ್ಸವವನ್ನು ಹೊಗಳಿದರು. ಶ್ರೀಹರಿಯ ಭಕ್ತರಲ್ಲಿ ಶ್ರೇಷ್ಠರಾದ ಶ್ರೀಮತ್ ಆನಂದ ತೀರ್ಥಾಚಾರ್ಯರ ಮೇಲೆ ಪರಿಮಳಭರಿತವಾದ ದೇವಲೋಕದ ಪುಷ್ಪಸಮೂಹ ವನ್ನು ಎಲ್ಲರೂ ನೋಡುವಂತೆ ವರ್ಷಿಸಿದರು.

ಮುಖ್ಯಪ್ರಾಣದೇವರು ಪರಮಾತ್ಮನ ಅಪ್ಪಣೆಯಂತೆ ಶ್ರೀಮಧ್ವಾ ಚಾರ್ಯರಾಗಿ ಅವತರಿಸಿ, ತತ್ತ್ವವಾದವನ್ನು ಸ್ಥಾಪಿಸಿ, ಸಜ್ಜನರನ್ನು ಉದ್ಧರಿಸಿ ದುರ್ವಾದಿಗಳನ್ನು ಜಯಿಸಿದರು ಒಂದಾನೊಂದು ದಿನ ಉಡುಪಿ ಯಲ್ಲಿ ಅನಂತೇಶ್ವರದೇವರ ಸನ್ನಿಧಿಯಲ್ಲಿ ಶಿಷ್ಯರಿಗೆ ಐತರೇಯೋಪನಿಷತ್ತನ್ನು ಉಪದೇಶಿಸುತ್ತಿದ್ದರು. ಆಗ ಈ ರೀತಿ ದೇವತೆಗಳು ಬಂದು ಸ್ತುತಿಸಿ ಪುಷ್ಪವೃಷ್ಟಿಯನ್ನು ಮಾಡಿ ಪೂಜಿಸಿದರು. ಈ ತುಲಸೀಪುಷ್ಪರಾಶಿಯನ್ನೂ ಅದರ ಮಧ್ಯದಲ್ಲಿದ್ದ ಆಚಾರ್ಯರನ್ನೂ ಎಲ್ಲರೂ ನೋಡಿದರು.

ಅನಂತರ ಆಚಾರ್ಯರು ಶಿಷ್ಯರಿಗೆ ಸತ್ಸಂಪ್ರದಾಯವನ್ನುಪದೇಶಿಸಿ, ಪದ್ಮನಾಭತೀರ್ಥರಿಗೂ ಉಪದೇಶವನ್ನು ಮಾಡಿ ಅವರನ್ನು ಇಲ್ಲೇ ಇರುವಂತೆ ಹೇಳಿ ತಾನು ಬದರಿಗೆ ಹೊರಟರು. ಅಷ್ಟಮಠಗಳ ಮೂಲಯತಿಗಳು ಕೆಲವರು ಅವರಜತೆಗೆ ಗಂಗೆಯವರೆಗೆ ಹೋದರು. ಅನಂತರ ಆಚಾರ್ಯರು ಹಿಮಾಲಯದ ಆಚೆಯ ತಪ್ಪಲಲ್ಲಿರುವ ದೊಡ್ಡಬದರಿಯಲ್ಲಿರುವ ತಮ್ಮ

Rarest Archiver

ಗುರುಗಳಾದ ಶ್ರೀವೇದವ್ಯಾಸರ ಸನ್ನಿಧಿಯನ್ನು ಸೇರಿ ಮನುಷ್ಯಮಾನದಿಂದ ೩೬,೦೦೦ ವರ್ಷಗಳವರೆಗೆ ಅಲ್ಲಿಯೇ ಇರುತ್ತಾರೆ.

ಶ್ರೀಮತ್ ಆನಂದತೀರ್ಥಭಗವತ್ಪಾದಾಚಾರ್ಯಾಃ

ವಿಜಯಂತೇ ತಮಾಂ॥

ವೃಂದಾರಕಾಣಾಂ ಇಂದ್ರಾಃ, ಗುರೋಃ ವಿಜಯಃ ಗುರುವಿಜಯಸ್ಯ ಮಹಃ ತಂ, ಅಖಿಲೈಃ ದ್ರಷ್ಟುಂ ಯೋಗ್ಯಃ ಅಖಿಲದೃಶ್ಯಃ, ತಂ; ಪುಷ್ಪಾಣಾಂ ವಾರಃ ತಂ, ಶೋಭನಃ ಗಂಧಃ ಯಸ್ಯ ಸಃ ಸುಗಂಧಃ ತಂ; ಅತಿಶಯೇನ ಉರುಃ ವರಿಷ್ಠಃ ಹರೇಃ ದಯಿತೇಷು ವರಿಷ್ಠಃ ತಸ್ಮಿನ್.

ವವರ್ಷ ವವೃಷತುಃ ವವೃಷುಃ, ವವರ್ಷಿಥ ವವೃಷಥುಃ ವವೃಷ, ವವರ್ಷ ವವೃಷಿವ ವವೃಷಿಮ. ವೃಷು ಸೇಚನೇ– ಸಕ. ಸೇಟ್ ಪರ. ಲಿಟ್.

ಹೀಗೆ ಶ್ರೀಮನ್ನಾರಾಯಣಪಂಡಿತಾಚಾರ್ಯರು ಕಾವ್ಯದ ಕೊನೆಯಲ್ಲಿ ಪುಷ್ಪವೃಷ್ಟಿಯಿಂದ ದೇವತೆಗಳು ಪೂಜಿಸಿದ್ದನ್ನು ಮಂಗಳರೂಪವಾಗಿ ವರ್ಣಿಸಿ ಗ್ರಂಥವನ್ನು ಪೂರ್ತಿಗೊಳಿಸಿರುತ್ತಾರೆ.

'ನನಮಯಯಯುತೇಯಂ ಮಾಲಿನೀ ಭೋಗಿಲೋಕೈಃ' ಎಂಬ ಲಕ್ಷಣದಂತೆ ಇಲ್ಲಿ ಮಾಲಿನೀವೃತ್ತ.

ಇಲ್ಲಿಗೆ ಶ್ರೀಸುಮಧ್ವವಿಜಯಮಹಾಕಾವ್ಯದಲ್ಲಿ ಆಚಾರ್ಯರ ಅದ್ಭುತಮಹಿಮವರ್ಣನವೆಂಬ ೧೬ನೆಯ ಸರ್ಗದ ಆಚಾರ್ಯ ಸಾಣೂರು ಭೀಮಭಟ್ಟನಿಂದ ವಿರಚಿತವಾದ ಕರ್ಣಾಟಭಾಷಾನುವಾದವು ಸಮಾಪ್ತವಾಯಿತು.

ಶ್ರೀಮತ್ ಸುಮಧ್ವ ವಿಜಯಗ್ರಂಥವೂ

ಸ ಮಾ ಪ್ತ ವಾ ಯಿ ತು.

Rarest Archiver